ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಶಾಸನಗಳು ಮತ್ತು ದೇವಾಲಯಗಳು

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಶಾಮಲಾ ಧುರೇಂದ್ರ

ಮಾರ್ಗದರ್ಶಕರು

ಡಾ. ಅಮರೇಶ ಯತಗಲ್

ಸಹ ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೨೦

ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಶಾಸನಗಳು ಮತ್ತು ದೇವಾಲಯಗಳು

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಶಾಮಲಾ ಧುರೇಂದ್ರ

ಮಾರ್ಗದರ್ಶಕರು
ಡಾ. ಅಮರೇಶ ಯತಗಲ್
ಸಹ ಪ್ರಾಧ್ಯಾಪಕರು
ಶಾಸನಶಾಸ್ತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩. ೨೭೬

೨೦೨೦

ಮಾರ್ಗದರ್ಶಕರ ದೃಢೀಕರಣ ಪತ್ರ

ಶಾಮಲಾ ಧುರೇಂದ್ರ ಅವರು **'ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಶಾಸನಗಳು ಮತ್ತು ದೇವಾಲಯಗಳು'** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ **ಪಿಎಚ್.ಡಿ. ಪದವಿಗಾಗಿ** ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

[signature]

(ಡಾ. ಅಮರೇಶ ಯತಗಲ್)
ಸಹ ಪ್ರಾಧ್ಯಾಪಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬.

ದಿನಾಂಕ : 28.09.2020
ಸ್ಥಳ : ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

'ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಶಾಸನಗಳು ಮತ್ತು ದೇವಾಲಯಗಳು' ಎಂಬ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರಾದ **ಡಾ. ಅಮರೇಶ ಯತಗಲ್** ಅವರ ಮಾರ್ಗದರ್ಶನ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : 28/09/2020.
ಸ್ಥಳ : ವಿದ್ಯಾರಣ್ಯ

(ಶಾಮಲಾ ಧುರೇಂದ್ರ)
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿನಿ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬.

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

೧.೧. ಪ್ರಸ್ತಾವನೆ
೧.೨. ಅಧ್ಯಯನದ ಉದ್ದೇಶ
೧.೩. ಅಧ್ಯಯನದ ಮಹತ್ವ
೧.೪. ಅಧ್ಯಯನದ ವ್ಯಾಪ್ತಿ
೧.೫. ಪೂರ್ವಾಧ್ಯಯನಗಳ ಸಮೀಕ್ಷೆ
೧.೬. ಅಧ್ಯಯನದ ಸ್ವರೂಪ
೧.೭. ಅಧ್ಯಯನದ ವಿಧಾನ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

೧.೧. ಪ್ರಸ್ತಾವನೆ

ಆರಂಭದಲ್ಲಿ ಇತಿಹಾಸವನ್ನು ವ್ಯಕ್ತಿಗಳಿಂದ ವ್ಯಕ್ತಿಗಳಿಗೆ ಜನಪದ ಹಾಡುಗಳ ಮೂಲಕ ಮತ್ತು ಕಥಾ ರೂಪದ ಮೂಲಕ ಮೌಖಿಕವಾಗಿ ಮುಂದುವರಿಸಲಾಗುತ್ತಿತ್ತು. ಅಲ್ಲದೆ ಪುರಾಣಗಳು, ಕಾವ್ಯಗಳು, ವೇದೋಪನಿಷತ್ತುಗಳು, ಅರಣ್ಯಕಗಳು, ಬ್ರಾಹ್ಮಣಕಗಳೂ ಸಹ ಮೌಖಿಕವಾಗಿ ಸಾಗಿಬಂದವು. ನಂತರದ ದಿನಗಳಲ್ಲಿ ಇವುಗಳನ್ನು ಬರವಣಿಗೆಯಲ್ಲಿ ಹಿಡಿದಿಡಲಾಯಿತು. ಮುಂದೆ ಅರಸರು ತಮ್ಮ ಮತ್ತು ತಮ್ಮ ಪೂರ್ವಜರ ಇತಿಹಾಸವನ್ನು ಬರೆಸುವ ಆಸಕ್ತಿಯನ್ನು ತೋರಿಸಿದರು. ತಮ್ಮ ಆಸ್ಥಾನಗಳಿಗೆ ವಿದ್ವಾಂಸರನ್ನು, ಕವಿಗಳನ್ನು ಆಹ್ವಾನಿಸುವುದರ ಮೂಲಕ ಗ್ರಂಥ, ನಾಟಕ, ಕಾವ್ಯಗಳನ್ನು ಬರೆಯಲು ಪ್ರೇರೇಪಿಸಿದರು. ಅನೇಕ ಅರಸರು ತಮ್ಮ ತಮ್ಮ ಕಾಲದಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ, ಕಾಶ್ಮೀರ ಕವಿ ಕಲ್ಹಣನ ರಾಜತರಂಗಿಣಿ, ಬಿಲ್ಹಣನ ವಿಕ್ರಮಾಂಕ ದೇವಚರಿತೆ, ಕಾಳಿದಾಸನ ಅಭಿಜ್ಞಾನ ಶಾಕುಂತಲಾ, ವಿಕ್ರಮೋರ್ವಶಿ ನಾಟಕ, ಮನುಸ್ಮೃತಿ, ಯಾಜ್ಞವಲ್ಕ್ಯನ ಸ್ಮೃತಿ, ಧರ್ಮಶಾಸ್ತ್ರ, ನೀತಿಶಾಸ್ತ್ರ, ತಂತ್ರಜ್ಞಾನ, ಗಣಿತ, ಜ್ಯೋತಿಷ್ಯಶಾಸ್ತ್ರಗಳಂತಹ ಕೃತಿಗಳನ್ನು ಬರೆಯಿಸಿದರು. ಹೀಗೆ ಇತಿಹಾಸದ ಆಸಕ್ತಿ ಅರಸರಲ್ಲಿದ್ದು, ಅವರುಗಳು ಎಲ್ಲ ಕ್ಷೇತ್ರಗಳ ಬೆಳವಣಿಗೆಗೆ ಕಾರಣರಾದರು. ಶೈಕ್ಷಣಿಕ, ರಾಜಕೀಯ, ಸಾಂಸ್ಕೃತಿಕ, ಕಲೆ, ಸಾಹಿತ್ಯದ ಬೆಳವಣಿಗೆಗೆ ಇತಿಹಾಸ ಸಹಕಾರಿಯಾಯಿತು. ಆರಂಭದ ಕೃತಿಗಳಲ್ಲಿರುವ ಇತಿಹಾಸವು ಕೇವಲ ರಾಜರ ಪ್ರಭಾವಕ್ಕೊಳಗಾಗಿರುವ ಕಥೆಗಳೆಂಬಂತಾಯಿತು. ಹೀಗಿರುವಾಗ ಕಲ್ಲಿನ ಮೇಲೆ ಬರೆಸಿರುವ, ಕೊರೆದಿರುವ ಶಾಸನ ಮತ್ತು ಶಾಸನ ಶಿಲ್ಪಗಳು, ಸ್ಮಾರಕಗಳಿತ್ಯಾದಿ ಇತಿಹಾಸ ಅಧ್ಯಯನಕ್ಕೆ ಪೂರಕವಾದವು. ಇವುಗಳು ಸತ್ಯಾಸತ್ಯತೆಯ ಪರಿಶೋಧನೆಗೆ, ತೌಲನಿಕವಾಗಿ, ವಿಮರ್ಶಾತ್ಮಕವಾಗಿ, ವೈಜ್ಞಾನಿಕವಾಗಿ ಅಭ್ಯಸಿಸಲು ಪ್ರಾಚೀನ ಮತ್ತು ಮಧ್ಯ ಯುಗದ ಇತಿಹಾಸವನ್ನು ನಿಶ್ಚಿತವಾಗಿ ದಾಖಲಿಸಲು ಸಹಾಯಕವಾದವು.

ಭಾರತದ ಇತಿಹಾಸವನ್ನು ವೈಜ್ಞಾನಿಕವಾಗಿ ಸಂಶೋಧಿಸಿ ಬರೆದವರು ಜೆ.ಎಫ್. ಫ್ಲೀಟ್, ಡಾ. ಲಿಯೋನೆಲ್, ಹಿ. ಬಾರ್ನೆಟ್, ಸರ್.ವಾಲ್ಟರ್ ಇಲಿಯಟ್, ಕಾಲಿನ್ ಮೆಕೆಂಝಿ ಮುಂತಾದವರು. ದಕ್ಷಿಣ ಭಾರತದಲ್ಲಿ ಶಾಸನಗಳ ಅಧ್ಯಯನ ಮಾಡಿದವರು ಪಿ.ಬಿ. ದೇಸಾಯಿ,

ವಿ. ಶಿವಾನಂದ, ಸೀತಾರಾಮ್ ಜಾಗೀರ್ದಾರ್‌ರವರಲ್ಲದೆ ಇನ್ನಿತರರು ಅಧ್ಯಯನ ಮಾಡಿದ್ದಾರೆ. ಕರ್ನಾಟಕ ಮತ್ತು ಉತ್ತರ ಕರ್ನಾಟಕದಲ್ಲಿ ವಿ.ಶಿವಾನಂದ, ಆರ್. ಶೇಷಶಾಸ್ತ್ರಿ, ಡಾ. ದೇವರ ಕೊಂಡಾರೆಡ್ಡಿ, ಡಾ. ರು. ಷಡಕ್ಷರಯ್ಯ, ಡಾ. ಡಿ.ವಿ. ಪರಮಶಿವಮೂರ್ತಿ, ಡಾ.ಬಿ.ಆರ್.ಹಿರೇಮಠ, ಶ್ರೀಮತಿ ಹನುಮಾಕ್ಷಿ ಗೋಗಿ – ಹೀಗೆ ಹಲವು ಇತಿಹಾಸತಜ್ಞರು ವೈಜ್ಞಾನಿಕವಾಗಿ ಅಧ್ಯಯನ ಮಾಡಿದ್ದಾರೆ. ಖಚಿತ ಆಧಾರಗಳ ಮೂಲಕ ಸಂಶೋಧನಾ ವಿಧಾನವನ್ನು ಅಳವಡಿಸಿಕೊಂಡು ಇತಿಹಾಸವನ್ನು ಕಟ್ಟಲು ತಳಹದಿ ಹಾಕಿದರು. ಹೀಗೆ ಸಂಶೋಧಕರಿಗೆ ಸಂಶೋಧನಾ ಅಧ್ಯಯನಗಳಿಗೆ ಹೊಸದಾಗಿ ದಾರಿ ಮಾಡಿಕೊಟ್ಟರು.

ಶಾಸನಶಾಸ್ತ್ರದಲ್ಲಿ ಶಾಸನ ಎಂದರೆ 'ರಾಜಾಜ್ಞೆ' ಎಂದರ್ಥ. ಕಲ್ಲಿನಲ್ಲಿ ಕೊರೆಸುವ ಶಾಸನಗಳು ಅಶೋಕನಿಂದ ಆರಂಭವಾಗಿ ಇಂದಿಗೂ ಜಾರಿಯಲ್ಲಿರುವುದು ಅತ್ಯಂತ ಮಹತ್ವದ್ದಾಗಿದೆ. ದೀರ್ಘಕಾಲ ಬಾಳಿಕೆ ಬರುವ ಹೆಚ್ಚಿನ ಶಾಸನಗಳು ಕೂಟ ಅಥವಾ ಸುಳ್ಳಾಗಿರುವುದಿಲ್ಲ. ಏಕೆಂದರೆ ಕಲ್ಲಿನಲ್ಲಿ ಕೊರೆಯಿಸಿದ ಶಾಸನಗಳು ಸಾರ್ವಜನಿಕರಿಗೆ ತಿಳಿಯುವ ಭಾಷೆಯಲ್ಲಿ, ಸಾರ್ವಜನಿಕರು ನಡೆದಾಡುವ ಸ್ಥಳಗಳಲ್ಲಿ ಬರೆಸಿಡಲಾಗುತಿತ್ತು. ಶಾಸನಗಳು ಪಾಚೀನ ಕಾಲದಲ್ಲಿ ಆಜ್ಞೆಗಳಿಂದ ಆರಂಭವಾಗಿ, ಅರಸರ ಆಳ್ವಿಕೆ, ಯುದ್ಧದ ಗೆಲುವು, ಪ್ರಶಸ್ತಿ, ದಾನ, ದತ್ತಿ, ವೀರರ ಶಾಸನಗಳಾಗಿ ಮತ್ತು ಶಾಸನ ಶಿಲ್ಪಗಳಾಗಿ ಬೆಳೆದವು. ಅಷ್ಟೇ ಅಲ್ಲದೆ ಅವು ಅರಸರ ವಂಶಾವಳಿ, ಕಾಲ, ಬಿರುದುಗಳು, ಸಾಮಂತರು ಮತ್ತು ಆಡಳಿತ ವರ್ಗದ ವಿವರಣೆ ನೀಡುತ್ತವೆ. ಶಾಸನಗಳು ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಹಿತ್ಯಿಕ, ಭಾಷೆ ಮತ್ತು ಲಿಪಿ ಬೆಳವಣಿಗೆ ಹೀಗೆ ಆಧಾರಗಳನ್ನು ತಿಳಿಸುವ ಮೂಲ ದಾಖಲೆಗಳಾಗಿವೆ.

ದೇವಾಲಯಗಳು ಧಾರ್ಮಿಕತೆಯ ಹೆಸರಿನ ಅಡಿಯಲ್ಲಿ ರಚಿಸಲ್ಪಟ್ಟರೂ ಸಹ ಅವು ಧರ್ಮ, ಆಚರಣೆ, ನೀತಿ ಹೇಳಿಕೊಡುವ ಪಾಠಶಾಲೆಗಳಾದವು. ಮುಂದಿನ ದಿನಗಳಲ್ಲಿ ಅವುಗಳ ಪ್ರಭಾವ ಹೆಚ್ಚಾಗಿ ರಾಜರ ಆಳ್ವಿಕೆಯ ಮೇಲೂ ಕಾಣತೊಡಗಿತು. ಮುಂದೆ ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸಾಂಸ್ಕೃತಿಕ ವ್ಯವಸ್ಥೆಯ ಮೇಲೆ ಪ್ರಭಾವ ಬೀರಿದವು. ದೇವಾಲಯಗಳಿಗೆ ಹೆಚ್ಚಿನ ದಾನ, ದತ್ತಿ ಸಿಗಲಾರಂಭಿಸಿತು. ಆರ್ಥಿಕ ಪ್ರಾಬಲ್ಯದ ದೇವಾಲಯಗಳು ಈ ಮೇಲಿನ ಕ್ಷೇತ್ರಗಳ ಮೇಲೆ ಪ್ರಭಾವ ಬೀರಿದವು. ಕನ್ನಡ ನಾಡಿನಲ್ಲಿ ನಾಗರಶೈಲಿ, ದ್ರಾವಿಡ ಮತ್ತು ವೇಸರಶೈಲಿಯಲ್ಲಿ ದೇವಾಲಯಗಳಿವೆ. ಕಲಬುರಗಿ ಜಿಲ್ಲೆಯ ಭಾಗದಲ್ಲಿ ನಾಗರಶೈಲಿ ದೇವಾಲಯ ಮೋಘಾದಲ್ಲಿದೆ. ಕದಂಬ ನಾಗರಶೈಲಿ ದೇವಾಲಯಗಳು ಮಿರ್ಯಾಣದಲ್ಲಿವೆ. ಶಾಲಾ ಮಾದರಿಯ ಶಿಖರವುಳ್ಳ ದೇವಾಲಯ ನೀಡಗುಂದದಲ್ಲಿದೆ.

ಇತಿಹಾಸವು ಹಿಂದೆ ನಡೆದ ಘಟನಾವಳಿಗಳನ್ನು ತಿಳಿಸುತ್ತದೆ. ಜನರ ಜೀವನದಿಂದ ಸಮುದಾಯದ ನಡವಳಿಕೆ, ಆಚರಣೆ, ಭಾಷೆ, ಸಂಸ್ಕೃತಿ, ರಾಜರ ಆಳ್ವಿಕೆ, ಸಾಧನೆ, ಆಡಳಿತಗಳ ಮಾಹಿತಿಗಳಿಂದ ಆಯಾ ಕಾಲದ ಘಟನೆಗಳನ್ನು ಕಟ್ಟುವುದರ ಮೂಲಕ ಇತಿಹಾಸ ರಚಿಸಲಾಯಿತು.

ಕರ್ನಾಟಕದ ಕಲಬುರಗಿ ಜಿಲ್ಲೆಗೆ ಸಂಬಂಧಿಸಿದಂತೆ ಪ್ರಾಚೀನ ಪುರಾತತ್ವ ನೆಲೆಗಳಾದ ಆಳಂದ, ಇಕ್ಕಳಿ, ಖಾನಾಪುರ, ಶಾಖಾಪುರ, ಕಪೆನೂರು, ಕಲಬೆನ್ನೂರು, ಕೊಲ್ಲೂರು, ಬಲ್ವಾಡು, ಬೋಳಿವಾಡ, ಮಹಾಗಾಂವ್, ಶ್ರೀನಿವಾಸ ಸರಡಗಿ, ಹಾಗರಗುಂಡಗಿ, ಹಾಗರಗಿ, ಭೋಮಸಪುರ, ಮಂಬಾಪುರ, ಮುಕ್ತಾ, ಮೋರನಹಾಳ್, ಗೋಟ್ಟಂಗೊಟ್ಟಿ, ಸುಲೇಪೇಟೆ ಪ್ರದೇಶಗಳು ಪ್ರಾಚೀನ ಶಿಲಾಯುಗ, ತಾಮ್ರಯುಗದ ಕುರುಹುಗಳನ್ನು ಒಳಗೊಂಡಿವೆ.

ಕರ್ನಾಟಕದಲ್ಲಿ ಮೌರ್ಯರ ಇತಿಹಾಸ ಸನ್ನತಿ, ಉದಯಗೋಳಂ, ಪಾಲ್ಕಿಗೋಡಂ, ಸಿದ್ದಾಪುರ, ಗವಿಮಠಗಳಲ್ಲಿ ದೊರೆತ ಶಾಸನಗಳಿಂದ ತಿಳಿದುಬರುತ್ತದೆ. ನಂತರ ಶಾತವಾಹನರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ಸೇವುಣರು, ಕಲಚೂರಿಗಳು, ವಿಜಯನಗರ ಸಾಮ್ರಾಜ್ಯ ಮತ್ತು ಮೈಸೂರು ಸಂಸ್ಥಾನದವರೆಗಿನ ಇತಿಹಾಸ ತಿಳಿಸುವಲ್ಲಿ ಶಾಸನಗಳದ್ದೇ ಮಹತ್ವದ ಪಾತ್ರವಿದೆ. ಚರಿತ್ರೆಗೆ ಒಂದು ವಾಸ್ತವಿಕತೆಯ ಮೌಲ್ಯ ನೀಡುವಲ್ಲಿ ಶಾಸನಗಳು, ದೇವಾಲಯಗಳು ಮಹತ್ತರ ಪಾತ್ರವಹಿಸುತ್ತವೆ.

೧.೨. ಅಧ್ಯಯನದ ಉದ್ದೇಶ

ಒಂದು ರಾಷ್ಟ್ರದ ಇತಿಹಾಸ ಕಟ್ಟಲು ಆ ಗ್ರಾಮ, ನಗರ, ಜಿಲ್ಲೆ, ರಾಜ್ಯಗಳ ಇತಿಹಾಸ ತಿಳಿಯುವುದು ಅತ್ಯವಶ್ಯಕ. ಆಯಾ ಕಾಲಘಟ್ಟದಲ್ಲಿ ಯಾವ ಅರಸುಮನೆತನಗಳು ಆಳ್ವಿಕೆ ಮಾಡಿದ್ದವೆಂಬುದನ್ನು ಕೂಲಂಕಷವಾಗಿ ಅಧ್ಯಯನ ಮಾಡಿದಾಗ ಅಲ್ಲಿಯ ಇತಿಹಾಸ ಕಟ್ಟಲು ಸಾಧ್ಯ. ರಾಜ ಮನೆತನದ ಆಳ್ವಿಕೆ ಬಗ್ಗೆ ತಿಳಿಯಲು ಬಹು ಮುಖ್ಯವಾದ ಆಧಾರಗಳೆಂದರೆ ಶಾಸನಗಳು ಮತ್ತು ಪ್ರಾಚ್ಯವಸ್ತುಗಳು. ಅಲ್ಲಿ ಜನರು ಬದುಕಿದ ರೀತಿ, ನೀತಿ, ಹಬ್ಬ, ಆಚರಣೆ, ಧರ್ಮ, ಕಟ್ಟಡ, ದೇವಾಲಯಗಳು, ಕಲೆ–ವಾಸ್ತುಶಿಲ್ಪ ಜೀವನದ ಶೈಲಿ, ಸಂಸ್ಕೃತಿ, ವೇಷಭೂಷಣಗಳ ಕುರಿತು ಬೆಳಕು ಚೆಲ್ಲುತ್ತವೆ. ಪ್ರಸ್ತುತ ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಶಾಸನಗಳು ಮತ್ತು ದೇವಾಲಯಗಳ ಕುರಿತು ಈವರೆಗೆ ವ್ಯವಸ್ಥಿತವಾದ ಹೆಚ್ಚಿನ ಅಧ್ಯಯನವಾಗಿಲ್ಲದಿರುವುದರಿಂದ ಈ ಭಾಗವನ್ನು ಸೀಮಿತಗೊಳಿಸಿ ಮಾಡಿದ ಅಧ್ಯಯನ ಇದಾಗಿದೆ.

ಶಾಸನಗಳು ಮತ್ತು ದೇವಾಲಯಗಳನ್ನು ಸರ್ವತೋಮುಖ ದೃಷ್ಟಿಕೋನದಿಂದ ನೋಡಿದಲ್ಲಿ ವಾಸ್ತವ ಸಂಗತಿ ಬೆಳಕಿಗೆ ಬರುತ್ತವೆ. ಇಲ್ಲಿ ಶಾಸನಗಳಿಂದ ತಿಳಿಯದೆ ಇರುವ ಅಂಶಗಳು ಶಾಸನಶಿಲ್ಪಗಳಿಂದ, ದೇವಾಲಯಗಳಿಂದ ತಿಳಿಯಬಹುದು. ದೇವಾಲಯಗಳ ಮೂಲಕ ಎತ್ತಿದ ಪ್ರಶ್ನೆಗಳಿಗೆ ಮೂರ್ತಿಶಿಲ್ಪಗಳು ಉತ್ತರಿಸುತ್ತವೆ. ಅದೇ ರೀತಿ ದೇವಾಲಯ, ಮೂರ್ತಿಶಿಲ್ಪಗಳಿಂದ ತಿಳಿಯದ ವಿಷಯಗಳನ್ನು ಶಾಸನ ಶಿಲ್ಪಗಳಿಂದ ತಿಳಿದುಕೊಳ್ಳಬಹುದು. ಹೀಗೆ ಒಂದಕ್ಕೊಂದು ಪೂರಕವಾಗಿರುವ ವಿಷಯಗಳನ್ನು ವಿಮರ್ಶಾತ್ಮಕ ಮತ್ತು ಸೂಕ್ಷ್ಮ ಅಧ್ಯಯನಕ್ಕೊಳಪಡಿಸಿದೆ. ಇವುಗಳಿಂದ ದೊರೆತ ಮಾಹಿತಿಯ ಮೂಲಕ ಇತಿಹಾಸದ ಮೇಲೆ, ಸಾಂಸ್ಕೃತಿಕ ವಿಷಯದ

ಮೇಲೆ ಬೆಳಕು ಚೆಲ್ಲುವ ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಶಾಸನಗಳು ಮತ್ತು ದೇವಾಲಯಗಳನ್ನು ಅಧ್ಯಯನಕ್ಕೊಳಪಡಿಸುವ ಉದ್ದೇಶ ಈ ಅಧ್ಯಯನದ್ದಾಗಿದೆ.

೧.೩. ಅಧ್ಯಯನದ ಮಹತ್ವ

ಶಾಸನಗಳಲ್ಲಿ ಐತಿಹಾಸಿಕ ಮತ್ತು ಸಾಹಿತಿಕ ಪರಿಭಾಷಾ ಪದಗಳು ಹೊಸದಾಗಿ ತಿಳಿಯಲು ಸಾಧ್ಯವಾಗುತ್ತದೆ. ಇಲ್ಲಿನ ಕಲೆ-ವಾಸ್ತುಶಿಲ್ಪ, ಉನ್ನತವರ್ಗದ ಜೀವನ, ಸಾಮಾನ್ಯರ ಜೀವನ ಶೈಲಿ, ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆ ನಮಗೆ ವ್ಯವಸ್ಥಿತವಾಗಿ ಕಟ್ಟಿಕೊಡುವಲ್ಲಿ ಮಹತ್ವದ್ದಾಗಿದೆ. ಆ ಕಾಲದಲ್ಲಿ ಗುಲಬರ್ಗಾದ ಉತ್ತರ ಭಾಗದ ಪ್ರಾಚೀನ ಸ್ತ್ರೀಯರ ಸ್ಥಾನಮಾನ, ಸ್ಥಿತಿಗತಿ, ವ್ಯಾಪಾರ, ಕೃಷಿ, ನಾಣ್ಯಪದ್ಧತಿ, ಆಚರಣೆಗಳು, ಮಠ, ದೇವಾಲಯಗಳ ಕೊಡುಗೆ, ಸಾಮಾಜಿಕ ಸ್ತರಗಳ ಬಗ್ಗೆ ಮತ್ತು ಜಾತಿ ವ್ಯವಸ್ಥೆ ತಿಳಿಯಲು ಇಲ್ಲಿಯ ಶಾಸನಗಳು, ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು ಸುವ್ಯವಸ್ಥಿತ ಆಕರಗಳಾಗಿವೆ.

೧.೪. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಈ ಮಹಾಪ್ರಬಂಧದ ಅಧ್ಯಯನ ವ್ಯಾಪ್ತಿ ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ನಾಲ್ಕು ತಾಲೂಕುಗಳಾದ ಅಳಂದ, ಅಫ್ಜಲ್‌ಪೂರ, ಗುಲಬರ್ಗಾ ಮತ್ತು ಚಿಂಚೋಳಿವರೆಗೆ ಸೀಮಿತವಾಗಿದೆ. ಇಲ್ಲಿಯ ಶಾಸನಗಳ, ದೇವಾಲಯಗಳ ಮತ್ತು ಮೂರ್ತಿಶಿಲ್ಪಗಳ ಅಧ್ಯಯನಕ್ಕೆ ಸೀಮಿತಗೊಳಿಸಲಾಗಿದೆ.

ಅಧ್ಯಯನದ ವ್ಯಾಪ್ತಿಯಲ್ಲಿ ಕ್ಷೇತ್ರಕಾರ್ಯದಿಂದ ಕಂಡುಬಂದ ಪ್ರತಿಯೊಂದು ಶಾಸನಗಳ, ಶಾಸನ ಶಿಲ್ಪಗಳ, ದೇವಾಲಯ ಮತ್ತು ಮೂರ್ತಿಶಿಲ್ಪಗಳ ಬಗ್ಗೆ ಕೂಲಂಕುಷವಾಗಿ ಅಧ್ಯಯನ ಮಾಡುವುದರ ಮೂಲಕ ಅವುಗಳಲ್ಲಿರುವ ಅಂಶಗಳನ್ನು ಉಪಯುಕ್ತತೆಗನುಗುಣವಾಗಿ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

೧.೫. ಪೂರ್ವಾಧ್ಯಯಗಳ ಸಮೀಕ್ಷೆ

ಸಾಹಿತಿಕಾಧಾರಗಳು

ಆಕರ ಗ್ರಂಥಗಳು:- ಹೈದ್ರಾಬಾದ್ ಕರ್ನಾಟಕದ ಶಾಸನಗಳು-ವಿ.ಶಿವಾನಂದ, ಈ ಕೃತಿಯಲ್ಲಿ ಗುಲಬರ್ಗಾ ಜಿಲ್ಲೆಯ ಶಾಸನ ಪಾಠ ಮತ್ತು ವಿಶೇಷ ಉಲ್ಲೇಖ ವಿವರಣೆಯನ್ನೊಳಗೊಂಡಿದೆ. ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನದ ಬಗ್ಗೆ ವಿವರಿಸಿದೆ. ಕಲಬುರ್ಗಿ ಜಿಲ್ಲೆಯ ಶಾಸನಗಳು-ಹನುಮಾಕ್ಷಿ ಗೋಗಿ(೧೯೯೬), ಈ ಕೃತಿಯಲ್ಲಿ ಗುಲಬರ್ಗಾ ಜಿಲ್ಲೆಯ ವಿವಿಧ ರಾಜಮನೆತನಗಳ ಶಾಸನ ಪಾಠಗಳನ್ನೊಳಗೊಂಡಿದೆ. ಶಾಸನಗಳಲ್ಲಿಯ ರಾಜಕೀಯ ಇತಿಹಾಸದ ಸಂಕ್ಷಿಪ್ತ ವಿವರಣೆಯಿದೆ. ಕರ್ನಾಟಕದ ಪುರಾತತ್ವ ನೆಲೆಗಳು- ಡಾ.

ಕೆ.ಬಿ. ಶಿವತಾರಕ್, ಇದು ಗುಲಬರ್ಗಾ ಜಿಲ್ಲೆಯ ಪುರಾತನ ನೆಲೆಗಳ ಉಲ್ಲೇಖಗಳನ್ನೊಳಗೊಂಡಿದೆ. ಗುಲ್ಬರ್ಗಾ ಜಿಲ್ಲೆಯ ದರ್ಶನ-ಎ.ಕೆ.ರಾಮೇಶ್ವರ(೧೯೮೬), ಇದು ಭೌಗೋಳಿಕ, ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಧಾರ್ಮಿಕ ವಿವರಗಳನ್ನೊಳಗೊಂಡಿದೆ. ಕರ್ನಾಟಕದ ವೀರಗಲ್ಲುಗಳು-ಡಾ.ಆರ್.ಶೇಷಶಾಸ್ತ್ರಿ, ಈ ಕೃತಿಯಲ್ಲಿ ವೀರಗಲ್ಲುಗಳ ಕುರಿತು ಮತ್ತು ಅವುಗಳ ವೈವಿಧ್ಯತೆಯ ಬಗ್ಗೆ ಕೂಲಂಕಷವಾಗಿ ತಿಳಿಸುತ್ತದೆ. ಕಲಬುರ್ಗಿ ಜಿಲ್ಲೆಯ ಶಿಲಾಶಾಸನಗಳು-ವಿ.ಶಿವಾನಂದ(೧೯೭೮), ಇದು ಕಲಬುರ್ಗಿಯ ಶಿಲಾಶಾಸನಗಳ ಶಾಸನ ಪಾಠಗಳಲ್ಲಿನ ಧಾರ್ಮಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ವಿವರಗಳನ್ನೊಳಗೊಂಡಿವೆ. ಅನುಶಾಸನಗಳು-ಹನುಮಾಕ್ಷಿಗೋಗಿ, ಸಂಪುಟ-೧(೨೦೦೨), ಕಲಬುರ್ಗಿ ಜಿಲ್ಲೆಯ ಶಾಸನಗಳು ವಿವರಗಳಿವೆ. ಸಾವಿರದ ಅಳಂದ-ಸಾಂಸ್ಕೃತಿಕ ಸಮೀಕ್ಷೆ-ಎಸ್.ಎಮ್.ಹಿರೇಮಠ(೨೦೦೩), ಇದು ಅಳಂದದ ಶಾಸನಗಳ ಸಾಂಸ್ಕೃತಿಕ ಅಧ್ಯಯನ ವನ್ನೊಳಗೊಂಡಿದೆ. ಗುಲಬರ್ಗಾ ಜಿಲ್ಲೆಯ ಜೈನ ಪರಂಪರೆ-ಡಿ.ಎನ್.ಅಕ್ಕಿ ಗೋಗಿ(೨೦೧೦), ಈ ಕೃತಿಯಲ್ಲಿ ಜೈನ ಧರ್ಮದ ಬೆಳವಣಿಗೆ ಮತ್ತು ಜೈನ ಶಿಲ್ಪ ಮತ್ತು ವಾಸ್ತು ಶಿಲ್ಪಗಳ ವಿವರಣೆಯಿದೆ.

ಸಂಪಾದಿತ ಕೃತಿಗಳು:- ಕರ್ನಾಟಕ ಸರ್ಕಾರ ರಾಜ್ಯ ಗೆಜೆಟಿಯರ್ (ಕಲಬುರ್ಗಿಜಿಲ್ಲೆ) ಪ್ರ.ಸಂ.ಎಮ್.ಬಿ.ಪಾಟೀಲ್.(೧೯೯೭), ಇದರಲ್ಲಿ ಗುಲ್ಬರ್ಗಾ ಜಲ್ಲೆಯಲ್ಲಿಯ ಭೌಗೋಳಿಕ ವ್ಯವಸ್ಥೆ, ಶಾಸನ ಮತ್ತು ದೇವಾಲಯಗಳ ವಿವರಣೆಯಿದೆ. ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ-(ಸಂ) ಆರ್.ಗೋಪಾಲ್(೨೦೦೭), ಇದರಿಂದ ಗುಲಬರ್ಗಾ ಜಿಲ್ಲೆಯ ದೇವಾಲಯ, ಕಲೆ, ವಾಸ್ತುಶಿಲ್ಪದ ಬಗ್ಗೆ ಮಾಹಿತಿ ದೊರೆಯುತ್ತದೆ. ಕರ್ನಾಟಕ ದೇವಾಲಯ ಕೋಶ ಕಲಬುರಗಿ ಜಿಲ್ಲೆ-ಸಂ.ಡಾ.ಸಿ.ಮಹದೇವ (೨೦೧೬). ಇದರಲ್ಲಿ ಕಲಬುರಗಿ ಜಿಲ್ಲೆಯ ಏಳು ತಾಲೂಕುಗಳ ಹಲವು ಪ್ರಾಚೀನ ಮತ್ತು ಆಧುನಿಕ ದೇವಾಲಯಗಳ ವಿವರಣೆಗಳಿವೆ.

ಲೇಖನಗಳು:-ಸಾಧನೆ ಸಂ.-೨ ಸಂಚಿಕೆ.೧.-ಎಸ್.ನಾಗರಾಜ್.(೧೯೭೩). ಗುಲಬರ್ಗಾ ಜಿಲ್ಲೆಯ ಅಪ್ರಕಟಿತ ಶಾಸನಗಳ ವಿವರಗಳಿವೆ.

ಸಂಶೋಧನಾ ಪ್ರಬಂಧಗಳು:-ಚಿಂಚೋಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು-ಶಾಮಲಾ (ಸಂಪ್ರಬಂಧ), ಅಪ್ರಕಟಿತ ಸಂಪ್ರಬಂಧವೂ ಚಿಂಚೋಳಿ ತಾಲೂಕಿನ ಶಾಸನ, ದೇವಾಲಯಗಳ ಮತ್ತು ಮೂರ್ತಿ ಶಿಲ್ಪಗಳ ಮಾಹಿತಿ ತಿಳಿಸುತ್ತದೆ. ಹೈದ್ರಾಬಾದ್ ಕರ್ನಾಟಕದ ಜೈನ ಕೇಂದ್ರಗಳು-ಬಿ.ಪ್ರಹ್ಲಾದರೆಡ್ಡಿ(೧೯೯೯), ಈ ಅಪ್ರಕಟಿತ ಪ್ರಬಂಧದಲ್ಲಿ ಗುಲಬರ್ಗಾ ಜಿಲ್ಲೆಯ ಜೈನರ ಬಸದಿಗಳ ಬಗ್ಗೆ ವಿವರ ನೀಡಿದ್ದಾರೆ. ಅಳಂದ ತಾಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ-ಶರಣಪ್ಪ ಸಿದ್ರಾಮಪ್ಪ ಚಕ್ರವರ್ತಿ(೨೦೦೯), ಈ ಅಪ್ರಕಟಿತ ಪ್ರಬಂಧದಲ್ಲಿ ಅಳಂದ ಶಾಸನಗಳ ವಿವರಣೆ ದೊರಕುತ್ತದೆ.

ಮೂಲಾಧಾರಗಳು:- ಶಾಸನಗಳು, ದೇವಾಲಯಗಳು, ವೀರಗಲ್ಲುಗಳು ಮತ್ತು ಮೂರ್ತಿಶಿಲ್ಪಗಳು ಆ ಕಾಲದ ನೇರ ಸಾಕ್ಷಿಗಳಾಗಿ ಇತಿಹಾಸ ಕಟ್ಟಲು ಸಹಾಯಕವಾಗಿವೆ. ಇವು ರಾಜಕೀಯ, ಸಾಮಾಜಿಕ, ಆರ್ಥಿಕ, ಆಡಳಿತ ಮತ್ತು ಧಾರ್ಮಿಕ, ಸಾಂಸ್ಕೃತಿಕ ವ್ಯವಸ್ಥೆಯ ಬಗ್ಗೆ ತಿಳಿಸಲು ಸಹಾಯಕವಾಗಿವೆ.

ಶಾಸನಗಳು:- ಭಾಷೆ ಮತ್ತು ಲಿಪಿ ಬೆಳವಣಿಗೆ, ಯಾವ ಸಾಮ್ರಾಜ್ಯಗಳ ಆಳ್ವಿಕೆ ಕಾಲದಲ್ಲಿ ಯಾವ ರೀತಿ ಲಿಪಿ ಮತ್ತು ಭಾಷೆ ಬೆಳೆದು ಬಂದಿತು ಎಂಬುದು ತಿಳಿಸುತ್ತವೆ. ಆಳಂದ, ಅಫ್ಜಲ್‌ಪುರ, ಮಣ್ಣೂರು, ಮಾಶಾಳ, ಸುಲೇಪೇಟೆ, ಗುಲಬರ್ಗಾ ಮುಂತಾದ ಶಾಸನಗಳು ದಾನ-ದತ್ತಿ, ರಾಜರ ವಿಜಯ, ಆಳ್ವಿಕೆ ಮಾಡಿದ ರಾಜರ ಕುರಿತು ತಿಳಿಸುತ್ತವೆ. ರಾಜರ ವಂಶಾವಳಿ, ಕಾಲದ ಬಗ್ಗೆ ನಿಖರ ಮಾಹಿತಿ ನೀಡುತ್ತವೆ. ಆಡಳಿತದಲ್ಲಿ ಯಾವ ಅಧಿಕಾರಿಗಳು ಬಂದರು? ಅವರ ಪ್ರಭಾವ ಹೇಗಿತ್ತೆಂಬುದು ತಿಳಿಯಲು ಸಹಾಯಕವಾಗಿವೆ. ಆಡಳಿತವರ್ಗ, ಆಡಳಿತ ವ್ಯವಸ್ಥೆ ಕುರಿತು ತಿಳಿಸುತ್ತವೆ. ರಾಜಕೀಯ ವ್ಯವಸ್ಥೆಯಲ್ಲಿ ರಾಜ, ಯುವರಾಜ, ಮಹಾರಾಣಿ, ರಾಣಿಯರು ಪ್ರಧಾನ ಮಂತ್ರಿ ಮತ್ತು ಮಂತ್ರಿ ವರ್ಗಗಳ ಕುರಿತು ಸೂಕ್ಷ್ಮವಾಗಿ ಮಾಹಿತಿ ನೀಡುತ್ತವೆ. ಯಾವ ಕಾಲದಲ್ಲಿ ಯಾವ ರಾಜ ಎಷ್ಟು ಭೂಮಿ ದೇವಾಲಯಗಳಿಗೆ ದಾನ ಮತ್ತು ದತ್ತಿ ನೀಡಿದ ಎಂಬುದು ತಿಳಿಸುತ್ತವೆ. ರಾಣಿಯರು ಮಂತ್ರಿಗಳು ಮತ್ತು ಇತರೆ ಜನ ಸಾಮಾನ್ಯರು ಅಲ್ಲದೆ ವೈಣಿಕರು ದಾನ ನೀಡಿದ್ದು, ಸಮಾಜದಲ್ಲಿ ಅವರ ಸ್ಥರ ಹೇಗಿತ್ತು? ಎಂಬುದನ್ನು ತಿಳಿಯಲು ಸಹಾಯಕವಾಗಿದೆ. ಇವು ವೈಣಿಕರು ಮತ್ತು ಶಿಕ್ಷಣ ಕಲಿಸುವ ಉಪಾಧ್ಯಾಯರ ಪ್ರಭಾವ ತಿಳಿಸುತ್ತವೆ. ವರ್ಣವ್ಯವಸ್ಥೆ, ಜಾತಿ ವ್ಯವಸ್ಥೆಯ ಬಗ್ಗೆ ಸೂಕ್ಷ್ಮವಾಗಿ ತಿಳಿಸುತ್ತವೆ. ಭೌಗೋಳಿಕತೆ, ಸ್ಥಳನಾಮಗಳು, ಸ್ಥಳಗಳ ಪ್ರಾಚೀನತೆ, ಐತಿಹಾಸಿಕತೆ ತಿಳಿಸುತ್ತವೆ. ಶಿಕ್ಷಣ ವ್ಯವಸ್ಥೆ, ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಅಧ್ಯಯನಕ್ಕೆ ಇವುಗಳ ಅಧ್ಯಯನ ಅತ್ಯವಶ್ಯಕವಾಗಿದೆ. ಪ್ರಸ್ತುತ ಕ್ಷೇತ್ರ ಕಾರ್ಯಗಳ ಮೂಲಕ ಮತ್ತು ಸಾಹಿತಿಕ ಆಧಾರಗಳಿಂದ ಇತಿಹಾಸ ಕಟ್ಟುವ ಪ್ರಯತ್ನ ಮಾಡಲಾಗಿದೆ.

ಸ್ಮಾರಕಗಳು

ವೀರಗಲ್ಲುಗಳು-ಬೇಳಗುಂಪಾ, ಮಿರ್‍ಯಾಣ, ಕಲಬುರ್ಗಿ ಹೀಗೆ ಹಲವು ಕಡೆ ದೊರೆತ ವೀರಗಲ್ಲುಗಳು ಆ ಕಾಲದ ಯುದ್ದಕ್ಕೆ ಕಾರಣ, ಯುದ್ಧಾಯುಧಗಳು, ಸೈನಿಕರ ವೇಷ-ಭೂಷಣಗಳ ಬಗ್ಗೆ ತಿಳಿಸುತ್ತವೆ. ತುರುಗೋಳ್ ವೀರಗಲ್ಲುಗಳು, ಆಕಳು ಕದ್ದ ಕಾರಣ ಹೋರಾಟವಾಗಿದ್ದನ್ನು ತಿಳಿಸುತ್ತದೆ. ಹಂದಿ, ಸಿಂಹ, ಹುಲಿ ಬೇಟೆ ಊರಿನ ರಕ್ಷಣೆಗಾಗಿ ಶೌರ್ಯದಿಂದ ಹೋರಾಡಿ ಮಡಿದ ಬಗ್ಗೆ ತಿಳಿಸುತ್ತವೆ. ಯುದ್ಧದಲ್ಲಿ ಹೋರಾಡಿ ಮಡಿದ ವೀರರ ಸ್ಮಾರಕಗಳು ರಾಜ್ಯ ವ್ಯವಸ್ಥೆಯಲ್ಲಿ ಸೈನಿಕರ ಪಾತ್ರ ಎಂತಹದೆಂದು ತಿಳಿಸುತ್ತವೆ. ಭರ್ಚಿ, ಈಟಿ, ಭಲ್ಲೆ, ಬಿಲ್ಲು, ಬಾಣ ಮತ್ತು ಖಡ್ಗಗಳು ಉಪಯೋಗಿಸುತ್ತಿರುವ ಸ್ಪಷ್ಟ ಮಾಹಿತಿ ತಿಳಿಸುತ್ತವೆ. ವೀರಗತಿ ಹೊಂದಿರುವ ಸೈನಿಕ ಸ್ವರ್ಗದ ಅಪ್ಸರೆಯರು ಕರೆದೊಯ್ಯುತ್ತಿರುವುದು ಇಲ್ಲಿ

ಸ್ವರ್ಗ-ನರಕದ ಪರಿಕಲ್ಪನೆಯಿತ್ತು ಎಂಬುದು ತಿಳಿಯಲು ಸಹಾಯಕವಾಗಿವೆ. ಲಿಂಗೈಕ್ಯವಾಗಿರುವ ಕೆತ್ತನೆಗಳು ಧಾರ್ಮಿಕತೆ ಮತ್ತು ಮೋಕ್ಷ ಪರಿಕಲ್ಪನೆಯ ಬಗ್ಗೆ ತಿಳಿಸುತ್ತವೆ. ಮಾಸ್ತಿಗಲ್ಲುಗಳು ಸ್ತ್ರೀಯರು ಯಾವ ರೀತಿ ಧಾರ್ಮಿಕ ಕಟ್ಟಳೆಗೆ ಕಟ್ಟು ಬಿದ್ದಿದ್ದರು ಎಂಬುದು ತಿಳಿಸುತ್ತವೆ. ಪತಿ ಭಕ್ತಿಯ ಬಗ್ಗೆ ಸಮಾಜದಲ್ಲಿ ಯಾವ ರೀತಿ ಪ್ರಭಾವಿತವಾಗಿತ್ತು ಎಂಬುದು ತಿಳಿಸುತ್ತವೆ.

ದೇವಾಲಯಗಳು ಇತಿಹಾಸ ಮತ್ತು ಸಂಸ್ಕೃತಿಯನ್ನು ತಿಳಿಸುವ ಪ್ರಮುಖ ಮೂಲಾಧಾರವಾಗಿವೆ. ಗುಲಬರ್ಗಾದ ಉತ್ತರ ಭಾಗದ ಇತಿಹಾಸ ಕಟ್ಟಲು, ಧಾರ್ಮಿಕ ವ್ಯವಸ್ಥೆಯಲ್ಲಿ ಶೈವ, ವೈಷ್ಣವ, ಶಾಕ್ತ ದೇವಾಲಯಗಳು ಹೇಗೆ ಬೆಳೆದು ಬಂದವು ಎಂಬುದು ತಿಳಿಸುತ್ತವೆ. ಶೈವ ಧರ್ಮ ವೈಷ್ಣವದ ಮೇಲೆ, ವೈಷ್ಣವ ಧರ್ಮ ಶೈವ ಧರ್ಮದ ಮೇಲೆ, ಜೈನ ಧರ್ಮ ಶೈವ ಮತ್ತು ವೈಷ್ಣವ ಧರ್ಮದ ಮೇಲೆ ಪರಸ್ಪರ ಹೇಗೆ ಪ್ರಭಾವ ಬೀರಿದವು ಎಂಬುದು ಅವುಗಳ ಅಧ್ಯಯನದಿಂದ ತಿಳಿಯುತ್ತದೆ.

ಲೇವಾದೇವಿಗಳ ಕೇಂದ್ರವಾಗಿರುವ ದೇವಾಲಯಗಳು ಆರ್ಥಿಕ ವ್ಯವಸ್ಥೆಯ ಬಗ್ಗೆ ಸಹ ತಿಳಿಸುತ್ತವೆ. ಆರಂಭದಲ್ಲಿ ದೇವಾಲಯಗಳೇ ಮೊದಲಿಗೆ ಲೇವಾದೇವಿ ಕೇಂದ್ರಗಳಾಗಿದ್ದವು. ದಾನ-ದತ್ತಿಗಳಿಂದ ನಮಗೆ ಆರ್ಥಿಕವಾಗಿ ದೇವಾಲಯಗಳು ಎಷ್ಟು ಸದೃಢವಾಗಿ, ಪ್ರಬಲವಾಗಿ ರಾಜಕೀಯದ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಆಡಳಿತದ ಮೇಲೆ ಹೇಗೆ ಪ್ರಬಲ ಪ್ರಭಾವ ಬೀರಿದ್ದವೆಂಬುದು ಇವುಗಳ ಅಧ್ಯಯನದಿಂದ ತಿಳಿದುಬರುತ್ತದೆ.

ಶೈಕ್ಷಣಿಕ ವ್ಯವಸ್ಥೆಯ ಮೇಲೆ ಇವುಗಳ ಪ್ರಭಾವ ಅಪಾರವಾಗಿದೆ. ಏಕೆಂದರೆ ಆರಂಭದಲ್ಲಿ ಶೈಕ್ಷಣಿಕ ಕೇಂದ್ರಗಳಾಗಿರುವ ದೇವಾಲಯಗಳು ನಂತರ ಅಗ್ರಹಾರಗಳು, ಘಟಿಕ ಸ್ಥಾನಗಳು ಮುಂದೆ ಶಾಲೆಗಳು, ವಿಶ್ವವಿದ್ಯಾಲಯಗಳಾಗಿ ಶಿಕ್ಷಣ ವ್ಯವಸ್ಥೆ ಬೆಳೆಯಿತು. ಆದ್ದರಿಂದ ಶಿಕ್ಷಣ ವ್ಯವಸ್ಥೆ ಹುಟ್ಟಿದ್ದೆ ದೇವಾಲಯಗಳಲ್ಲಿ ಎಂದರೆ ತಪ್ಪಾಗಲಾರದು.

ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀ-ಪುರುಷರ ಉಡುಗೆ-ತೊಡುಗೆ, ಆಭರಣ, ಕೂದಲಿನ ವಿನ್ಯಾಸ, ಜನರ ಬದುಕಿನ ಬಗ್ಗೆ ನಮಗೆ ಸೂಕ್ಷ್ಮವಾಗಿ ತಿಳಿಸುತ್ತವೆ. ಪ್ರಾಣಿ-ಪಕ್ಷಿಗಳನ್ನು ಯಾವ ರೀತಿ ಉಪಯೋಗಿಸಿ ಕೊಂಡಿದ್ದರೆಂಬುದು ತಿಳಿಯುತ್ತದೆ. ದೇವಾಲಯದ ಅಧಿಷ್ಠಾನ, ಭಿತ್ತಿ ಭಾಗ ಮತ್ತು ಶಿಖರ ಭಾಗಗಳಲ್ಲಿ ದೃಷ್ಟಿ ಬೊಂಬೆಗಳಾಗಿ ಕೆತ್ತಲ್ಪಟ್ಟ ಅನೇಕ ಶಿಲ್ಪಗಳು ಪತಿ-ಪತ್ನಿಯರು ಹೇಗಿರಬೇಕು ಎಂಬುವ ಶಿಕ್ಷಣ ನೀಡುತ್ತವೆ.

ರಾಜಕೀಯ ಮತ್ತು ಆಡಳಿತ ವ್ಯವಸ್ಥೆಯ ಮೇಲೆಯೂ ದೇವಾಲಯಗಳು ಪ್ರಭಾವ ಬೀರಿದ್ದವು. ಸೈನ್ಯ ವ್ಯವಸ್ಥೆಯಲ್ಲಿ ಪದಾತಿ, ಅಶ್ವದಳ, ಗಜದಳ, ರಥದಳ ಅಧ್ಯಯನಕ್ಕೆ ಸಹಾಯಕವಾಗಿವೆ. ದೇವಾಲಯಗಳ ಅಧಿಷ್ಠಾನದ ಪಟ್ಟಿಕೆಗಳ ಮೇಲೆ ಮತ್ತಿತರೆ ಭಾಗದಲ್ಲಿ ಕೆತ್ತಲ್ಪಟ್ಟ ಶಿಲ್ಪಗಳಿಂದ ಸೈನಿಕರು ಉಪಯೋಗಿಸುವ ಆಯುಧಗಳನ್ನು ಅಭ್ಯಸಿಸಲು ಸಹಾಯಕವಾಗಿವೆ. ಯುದ್ಧಗಳಲ್ಲಿ ಗೆದ್ದ ರಾಜರು ಮೊದಲಿಗೆ ವಿಜಯ ಸ್ತಂಭ ಮತ್ತು ದೇವಾಲಯಗಳಿಗೆ ದಾನ-ದತ್ತಿ ಕೊಡುವುದು ಇವುಗಳ ಪ್ರಭಾವ ಎಷ್ಟಿತ್ತೆಂದು ತಿಳಿಯಲು ಸಹಾಯಕವಾಗಿದೆ.

ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಶಿಕ್ಷಣ, ಕಲೆ ಸಂಗೀತ, ನೃತ್ಯ ಮತ್ತಿತರ ತಿಳಿಯಲು ದೇವಾಲಯಗಳ ಬಾಗಿಲವಾಡಗಳಲ್ಲಿ, ಭಿತ್ತಿಗಳಲ್ಲಿ, ಆಧಿಷ್ಠಾನದಲ್ಲಿನ ಶಿಲ್ಪಗಳ ಅಧ್ಯಯನದಿಂದ ತಿಳಿಯ ಬಹುದಾಗಿದೆ. ಅಂಗ ಭೋಗ, ರಂಗ ಭೋಗಗಳು ದೇವಾಲಯದಲ್ಲಿರುವುದು ಸಾಂಸ್ಕೃತಿಕತೆಯ ಪ್ರಭಾವವನ್ನು ತಿಳಿಸುತ್ತದೆ.

ಮೂರ್ತಿಶಿಲ್ಪಗಳು– ಧಾರ್ಮಿಕ ವ್ಯವಸ್ಥೆ ಶೈವ, ಜೈನ, ವೈಷ್ಣವ, ಬೌದ್ಧ ಮತ್ತು ಶಾಕ್ತ್ಯ ಶಿಲ್ಪಗಳು ಧಾರ್ಮಿಕ ವ್ಯವಸ್ಥೆಯ ಅಧ್ಯಯನಕ್ಕೆ ಸಹಾಯಕವಾಗಿವೆ. ಸಾಮಾಜಿಕ ವ್ಯವಸ್ಥೆಯಲ್ಲಿ ವೇಷ–ಭೂಷಣ, ಆಭರಣಗಳು, ಕೂದಲಿನ ವಿನ್ಯಾಸ ಆ ಕಾಲದ ಜನರ ಜೀವನ, ಸ್ತ್ರೀ–ಪುರುಷರ ವಿವರಣೆ, ಪ್ರಾಣಿ–ಪಕ್ಷಿಗಳ ಕುರಿತು ಮತ್ತು ಸಂಸ್ಕೃತಿಯನ್ನು ತಿಳಿಸುತ್ತವೆ. ಕಲೆ, ಸಂಗೀತ, ನೃತ್ಯದ ಕುರಿತು ಅಧ್ಯಯನಕ್ಕೆ ಸಹಾಯಕವಾಗಿವೆ.

೧.೬. ಅಧ್ಯಯನದ ಸ್ವರೂಪ

'ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಶಾಸನಗಳು ಮತ್ತು ದೇವಾಲಯಗಳು' ಎಂಬ ಶೀರ್ಷಿಕೆಯ ಅಧ್ಯಯನವು ಲಭ್ಯ ಪ್ರಕಟಿತ ಮತ್ತು ಅಪ್ರಕಟಿತ ಶಾಸನಗಳನ್ನು, ದೇವಾಲಯಗಳ ಕ್ಷೇತ್ರಕಾರ್ಯ ಸಮೀಕ್ಷೆ ಮಾಡಿ ಇತರೆ ಆಕರಗಳಿಂದ ಸಂಗ್ರಹಿತ ಮಾಹಿತಿಗಳನ್ನು ಅಭ್ಯಸಿಸಿ ಪರಿಶೀಲಿಸುವುದರ ಮೂಲಕ ನಿರ್ದಿಷ್ಟಪಡಿಸಿಕೊಂಡು ವಿಶ್ಲೇಷಣೆಗೆ ಒಳಪಡಿಸುವ ಸ್ವರೂಪದ್ದಾಗಿದೆ.

ರಾಜರು, ಸಾಮಂತರು ಮತ್ತು ಅವರ ಪ್ರಾಂತ್ಯಾಧಿಕಾರಿಗಳು, ಆಡಳಿತಗಾರರು ಆಳ್ವಿಕೆ ಮಾಡಿ ಈ ಜಿಲ್ಲೆಯ ಐತಿಹಾಸಿಕ ಮತ್ತು ಧಾರ್ಮಿಕ ಪ್ರಗತಿಗೆ ಕಾರಣೀಭೂತರಾಗಿದ್ದಾರೆ. ಐತಿಹಾಸಿಕ ಮಹತ್ವ, ಶಿಲ್ಪಕಲೆ, ವೇಷಭೂಷಣ, ಆಭರಣಗಳ ಅಲಂಕಾರದ ಬಗ್ಗೆ ಮತ್ತು ಜನಜೀವನದ ಮೇಲೆ ಸೂಕ್ಷ್ಮವಾಗಿ ಬೆಳಕು ಚೆಲ್ಲುವ ದೇವಾಲಯಗಳ, ಮೂರ್ತಿಶಿಲ್ಪಗಳ, ವೀರಗಲ್ಲುಗಳ ಸಾಂಸ್ಕೃತಿಕ ಅಧ್ಯಯನ ಪ್ರತಿಬಿಂಬಿಸುವ ಸ್ವರೂಪವನ್ನೊಳಗೊಂಡಿದೆ. ಶಾಸನಗಳ ಮೂಲಕ ರಾಜರ ಕಾಲ, ಆಡಳಿತ, ಸಾಧನೆ ಮತ್ತು ಬಿರುದಾವಳಿಗಳಲ್ಲದೆ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ವಿವರಿಸುವ ಸ್ವರೂಪವನ್ನೊಳಗೊಂಡಿದೆ.

ಅಧ್ಯಾಯ–೧ರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ಪೂರ್ವಾಧ್ಯಯನಗಳ ಸಮೀಕ್ಷೆ ಮತ್ತು ವಿಧಾನವನ್ನು ವಿವರಿಸಲಾಗಿದೆ. ಅಧ್ಯಯನಕ್ಕೆ ಸೀಮಿತಗೋಳಿಸಿರುವ ಗುಲ್ಬರ್ಗಾದ ಉತ್ತರ ಭಾಗದ ಮಹತ್ವ, ಆಳಿದ ದೊರೆಗಳ ವಿವರಣೆ ಪೀಠಿಕೆಯಲ್ಲಿದೆ. ಪ್ರಾಚ್ಯ ಅವಶೇಷಗಳು, ಪ್ರಕಟಗೊಂಡ ಕೃತಿ, ಸಂಪಾದಿತ ಕೃತಿಗಳು, ಪ್ರಬಂಧಗಳು, ಮಹಾಪ್ರಬಂಧಗಳು ಮತ್ತು ಲೇಖನಗಳ ಬಗ್ಗೆ ಪೂರ್ವಾಧ್ಯಯನಗಳ ಸಮೀಕ್ಷೆಯಲ್ಲಿ ವಿವರಿಸಲಾಗಿದೆ. ಕ್ಷೇತ್ರಕಾರ್ಯ ಮತ್ತು ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಈ ಭಾಗದ ಇತಿಹಾಸ ಕಟ್ಟುವುದನ್ನು ಅಧ್ಯಯನದ ವಿಧಾನದಲ್ಲಿ ವಿವರಿಸಲಾಗಿದೆ.

ಅಧ್ಯಾಯ-೨ರಲ್ಲಿ ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಭೌಗೋಳಿಕ ಪ್ರಭಾವ, ಆಕರಗಳು ಮತ್ತು ಐತಿಹಾಸಿಕ ಹಿನ್ನೆಲೆಯಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸ್ಥಿತಿಗತಿಯನ್ನು ತಿಳಿಸಲಾಗಿದೆ. ಅಳಂದ, ಅಫ್ಜಲ್‌ಪುರ, ಚಿಂಚೋಳಿ ಮತ್ತು ಗುಲಬರ್ಗಾ ತಾಲೂಕುಗಳ ಭೌಗೋಳಿಕ ಅಧ್ಯಯನವನ್ನು ವಿವರಿಸಿದೆ. ರಾಜಕೀಯ ವಿವರಣೆಯಲ್ಲಿ ಈ ಪ್ರದೇಶಗಳಲ್ಲಿ ಯಾವ ಯಾವ ದೊರೆಗಳು ಆಳಿದ್ದರೆಂಬುದನ್ನು ತಿಳಿಸಲಾಗಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ವೇಷಭೂಷಣ, ಆಭರಣ, ಆಹಾರ-ಪಾನೀಯ, ಮನೋರಂಜನೆ, ಕುಟುಂಬ ವ್ಯವಸ್ಥೆ, ಸ್ತ್ರೀ-ಪುರುಷರ ಜೀವನ ವ್ಯವಸ್ಥೆ, ಶಿಕ್ಷಣ ವ್ಯವಸ್ಥೆ, ವರ್ಣವ್ಯವಸ್ಥೆಗಳನ್ನು ವಿಶ್ಲೇಷಿಸಲಾಗಿದೆ. ಆರ್ಥಿಕ- ವ್ಯವಸ್ಥೆಯಲ್ಲಿ ಕೃಷಿ, ವ್ಯಾಪಾರ, ತೆರಿಗೆ ಪದ್ಧತಿ, ನೀರಾವರಿ ವ್ಯವಸ್ಥೆ, ನಾಣ್ಯ ಪದ್ಧತಿ ವಿವರಿಸಿದೆ. ಧಾರ್ಮಿಕ ವ್ಯವಸ್ಥೆಯಲ್ಲಿ ಧರ್ಮದ ಬೆಳವಣಿಗೆ, ಧರ್ಮಗಳ ಪ್ರಭಾವ, ದಾನಗಳ ಬಗ್ಗೆ ವಿವರಿಸಿದೆ.

ಅಧ್ಯಾಯ-೩ರಲ್ಲಿ ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಶಾಸನಗಳ ವೈವಿಧ್ಯತೆ ಮತ್ತು ಸಾರಾಂಶ ಕುರಿತು ಮಾಹಿತಿ ನೀಡಲಾಗಿದೆ. ಅಧ್ಯಾಯದಲ್ಲಿ ಶಾಸನಗಳು ಮತ್ತು ವೀರಗಲ್ಲುಗಳು ಎಂಬ ಉಪವಿಭಾಗಗಳನ್ನು ಮಾಡಲಾಗಿದೆ. ದೊರೆತ ಶಾಸನಗಳಿಗನುಗುಣವಾಗಿ ದಾನ ಶಾಸನಗಳು ಧಾರ್ಮಿಕ ನೆಲೆಯ ಶಾಸನಗಳು-ಶೈವ, ವೈಷ್ಣವ, ಜೈನ ಎಂದು ವಿಂಗಡಿಸಲಾಗಿದೆ. ದತ್ತಿ ಶಾಸನಗಳು, ವೀರಗಲ್ಲು ಶಾಸನಗಳು ಅಧ್ಯಯನದ ಅನುಕೂಲಕ್ಕೆ ತಕ್ಕಂತೆ ವಿಂಗಡಿಸಲಾಗಿದೆ. ಶಾಸನಗಳನ್ನು ಆಧರಿಸಿ ಗುಲಬರ್ಗಾ ಜಿಲ್ಲೆಯ ಭೌಗೋಳಿಕ ಹಿನ್ನೆಲೆಯನ್ನು ಅಧ್ಯಯನ ಮಾಡಲಾಗಿದೆ. ಗುಲಬರ್ಗಾ ಪ್ರಾಚೀನ ಕಾಲದಲ್ಲಿ ಕಲಂಬುರ್ಗಿ, ಕಲಬುರ್ಗಿ ಎಂದು ಉಲ್ಲೇಖಿತವಾಗಿದೆ. ಕಲ್ಲುಗಳ ಪ್ರದೇಶವಾಗಿರುವ ಕಲ್ಬುರ್ಗಿಯಲ್ಲಿನ ವಿವಿಧ ಬೆಳೆಗಳು, ಮಣ್ಣಿನ ಪ್ರಕಾರ, ವಾಣಿಜ್ಯ ಬೆಳೆಗಳು, ವ್ಯಾಪಾರ, ಕಸುಬು, ಉದ್ಯೋಗ, ಖನಿಜ, ಲವಣಗಳು ಹೀಗೆ ಹಲವು ಆರ್ಥಿಕ ವ್ಯವಸ್ಥೆ ಕುರಿತು ಚರ್ಚಿಸಲಾಗಿದೆ.

ಪ್ರಾಚೀನ ಕಾಲದ ರಾಜಕೀಯ ವ್ಯವಸ್ಥೆಯಲ್ಲಿ ಮೌರ್ಯರು, ಶಾತವಾಹನರು, ಕದಂಬರು, ರಾಷ್ಟ್ರಕೂಟರು, ಗಂಗರು, ಬಾಣರು, ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಸಾಮಂತ ಅರಸರ ಬಗ್ಗೆ ವಿಶ್ಲೇಷಿಸಲಾಗಿದೆ. ರಾಜಕೀಯ ವಿಭಾಗಗಳ ಕುರಿತು ಶಾಸನಗಳನ್ನು ವಿವರಿಸಿವೆ. ರಾಣಿಯರ ಆಳ್ವಿಕೆ ಕುರಿತು ವಿವರಿಸಲಾಗಿದೆ. ಅಲ್ಲದೆ ಶಾಸನಗಳು ಸಾಮಂತರ, ಯುವ ರಾಜರು, ರಾಣಿಯರ, ಮಂಡಲಾಧಿಕಾರಿಗಳ ಆಳ್ವಿಕೆಯ ಬಗ್ಗೆ ವಿವರಿಸಲಾಗಿದೆ.

ಶಾಸನಗಳಲ್ಲಿ ಸೈನ್ಯಾಡಳಿತ, ಆಡಳಿತ, ಪ್ರಾಂತ್ಯಾಡಳಿತ, ಕಂದಾಯ ಆಡಳಿತ, ತೆರಿಗೆ, ನಾಣ್ಯಗಳ ಕುರಿತು ಚರ್ಚಿಸಲಾಗಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ವರ್ಣ ವ್ಯವಸ್ಥೆ, ಜಾತಿ ವ್ಯವಸ್ಥೆ, ವರ್ಗಗಳು ಮತ್ತು ಅವರ ಜೀವನ ವ್ಯವಸ್ಥೆಯ ಬಗ್ಗೆ ತಿಳಿಸಲಾಗಿದೆ. ಉಡುಗೆ-ತೊಡುಗೆ,

ಆಹಾರ-ಪಾನೀಯ, ಸಂಸ್ಕೃತಿ, ಕಲೆ, ವಾಸ್ತುಶಿಲ್ಪದ ಕುರಿತು ಪಿವರಣೆ ನೀಡಲಾಗಿದೆ. ಸಮಾಜದ ಪಿಪಿಧ ಪದ್ಧತಿ ಆಚರಣೆ, ಶೈಕ್ಷಣಿಕ ವ್ಯವಸ್ಥೆ ಶಿಕ್ಷಣಕ್ಕಾಗಿ ನೀಡಿದ ದಾನ ಮತ್ತು ದತ್ತಿಗಳು, ಉಪಾಧ್ಯಾಯರಿಗೆ, ಶಿಷ್ಯರಿಗೆ ನೀಡಿದ ದಾನದತ್ತಿಗಳು, ಅಗ್ರಹಾರಗಳಿಗೆ ಶಿಕ್ಷಣಕ್ಕೆ ಬೇಕಾದ ಸೌಲಭ್ಯಗಳ ಕುರಿತು ಪಿಶ್ಲೇಷಿಸಲಾಗಿದೆ. ಧಾರ್ಮಿಕ ವ್ಯವಸ್ಥೆ-ಧರ್ಮಗಳು ಈ ಪ್ರದೇಶದಲ್ಲಿ ಯಾವ ಧರ್ಮಕ್ಕೆ ಯಾವ ಕಾಲದಲ್ಲಿ ಅರಸರ ಹೆಚ್ಚಿನ ಪ್ರಾಧ್ಯಾನ್ಯತೆ ನೀಡಲಾಗಿದೆ ಮತ್ತು ಇತರೆ ಧರ್ಮಗಳ ಬೆಳವಣಿಗೆ ಹೇಗಾಯಿತು? ಎಂಬುದು ಚರ್ಚಿಸಲಾಗಿದೆ.

ಅಧ್ಯಾಯ-೪ರಲ್ಲಿ ಈ ಭಾಗದ ದೇವಾಲಯಗಳ ವೈವಿಧ್ಯತೆ ಮತ್ತು ಕಲೆ-ವಾಸ್ತುಶಿಲ್ಪದ ಬಗ್ಗೆ ತಿಳಿಸಲಾಗಿದೆ. ಶೈವ, ವೈಷ್ಣವ, ಶಾಕ್ತ ಮತ್ತು ಇತರೆ ಎಂದು ದೇವಾಲಯಗಳನ್ನು ವಿಂಗಡಿಸಿ ಅಧ್ಯಯನ ಮಾಡಲಾಗಿದೆ. ದೇವಾಲಯಗಳ ಮೇಲೆ ವಿವಿಧ ಧರ್ಮಗಳು ಹೇಗೆ ಪ್ರಭಾವ ಬೀರಿವೆ, ದೇವಾಲಯಗಳ ಶೈಲಿ, ವಾಸ್ತು, ಕಟ್ಟಡ ರಚನೆಯ ಬಗ್ಗೆ ತಿಳಿಸಲಾಗಿದೆ. ಇತರೆ ದೇವಾಲಯಗಳಲ್ಲಿ ಹರಿಹರ, ಶಂಕರನಾರಾಯಣ ದೇವಾಲಯಗಳ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ-೫ ಗುಲಬರ್ಗಾ ಜಿಲ್ಲೆಯ ಮೂರ್ತಿಶಿಲ್ಪಗಳ ವೈವಿಧ್ಯತೆ ಮತ್ತು ಅದರ ಬೆಳವಣಿಗೆ ಬಗ್ಗೆ ಮಾಹಿತಿಯನ್ನೊಳಗೊಂಡಿರುತ್ತದೆ. ಶೈವ ಧರ್ಮದ ಮೂರ್ತಿಗಳಲ್ಲಿ ಶಿವಲಿಂಗ, ಗಣಪತಿ, ನಂದಿ ಶಿಲ್ಪಗಳ ವಿವರಣೆಯಿದೆ. ವೈಷ್ಣವದಲ್ಲಿ ವಿಷ್ಣುವಿನ ಅವತಾರಗಳ ಶಿಲ್ಪಗಳು, ವೈಷ್ಣವ ಬಾಗಿಲವಾಡಗಳ ಬಗ್ಗೆ ತಿಳಿಸಲಾಗಿದೆ. ಶಾಕ್ತ ಶಿಲ್ಪಗಳ ಮಹಿಷಾಸುರ ಮರ್ದಿನಿ, ಕಾಳಿ, ವೈಷ್ಣವಿ, ಭೈರವಿ ಶಿಲ್ಪಗಳ ಬಗ್ಗೆ ವಿವರಿಸಿದೆ. ಇತರೆಯಲ್ಲಿ ಮದನಿಕೆಯರ ಶಿಲ್ಪಗಳು, ಕಂಬದ ಶಿಲ್ಪಗಳ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ-೬ರಲ್ಲಿ ರಾಜಕೀಯ ಮತ್ತು ಆಡಳಿತಾತ್ಮಕ ವಿವರಣೆಗಳಿವೆ. ರಾಜರು, ರಾಣಿಯರು, ಯುವರಾಜರು, ಸಾಮಂತರು, ಪ್ರಾಂತ್ಯಾಧಿಕಾರಿಗಳು ಮತ್ತು ಇತರೆ ಅಧಿಕಾರಿಗಳ ಬಗ್ಗೆ ಶಾಸನ, ದೇವಾಲಯಗಳನ್ನನುಲಕ್ಷಿಸಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ-೭ರಲ್ಲಿ ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಯ ಕುರಿತು ವಿವರಿಸಲಾಗಿದೆ. ಶಾಸನಗಳಲ್ಲಿನ ವಿವರಣೆ ಮತ್ತು ದೇವಾಲಯ, ಮೂರ್ತಿ ಶಿಲ್ಪಗಳ ಅಧ್ಯಯನದ ಮೂಲಕ ವಿವರಿಸಿದೆ. ಈ ಭಾಗದ ಆರ್ಥಿಕ ಸ್ಥಿತಿಗತಿ ಕುರಿತು ವಿವರಿಸಲಾಗಿದೆ. ನೀರಾವರಿ, ನಾಣ್ಯ, ಕೃಷಿ, ವ್ಯಾಪಾರ, ವ್ಯಾಪಾರಿ ಸಂಘಟನೆಗಳ ವಿವರಣೆ ನೀಡಲಾಗಿದೆ.

ಅಧ್ಯಾಯ-೮ರಲ್ಲಿ ಸಮಾರೋಪವಿದ್ದು, ಅದು ಒಟ್ಟಾರೆ ಅಧ್ಯಯನದ ಫಲಿತಗಳನ್ನು ಒಳಗೊಂಡಿದೆ. ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಶಾಸನ ಮತ್ತು ದೇವಾಲಯಗಳ ಆಧಾರದ ಮೇಲೆ ಇತಿಹಾಸ ಕಟ್ಟುವ ಪ್ರಯತ್ನ ಮಾಡಲಾಗಿದೆ.

ಅನುಬಂಧದಲ್ಲಿ ಸಂಕ್ಷಿಪ್ತತೆಗಳ ಸೂಚಿ, ಆಕರ ಗ್ರಂಥಗಳು, ವಿವಿಧ ರಾಜಮನೆತನ ಕಾಲದ ಶಾಸನಗಳ ಸೂಚಿ, ದ್ವಿಕೂಟ, ತ್ರಿಕೂಟ ದೇವಾಲಯಗಳ ಸೂಚಿ, ಅಪ್ರಕಟಿತ ಶಾಸನಗಳ ಸೂಚಿ, ಎರಡು ಅಪ್ರಕಟಿತ ಶಾಸನಗಳ ಪಠ್ಯ ವಿವರಿಸಲಾಗಿದೆ. ಅಧ್ಯಯನಕ್ಕೆ ಪೂರಕವಾದ ಛಾಯಾಚಿತ್ರ, ನಕಾಶೆ ಮತ್ತು ದೇವಾಲಯಗಳ ರೇಖಾಚಿತ್ರಗಳನ್ನು ನೀಡಲಾಗಿದೆ.

೧.೭. ಅಧ್ಯಯನದ ವಿಧಾನ

"ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಶಾಸನಗಳು ಮತ್ತು ದೇವಾಲಯಗಳು" ಎಂಬ ಸಂಶೋಧನಾ ಮಹಾಪ್ರಬಂಧವನ್ನು ರಚಿಸಲು ಕ್ಷೇತ್ರಕಾರ್ಯ ಜೊತೆಗೆ ಪ್ರಾಸಂಗಿಕ ಮತ್ತು ಆನುಷಂಗಿಕ ಆಕರಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಈ ಭಾಗದ ಶಾಸನಗಳು, ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳನ್ನು ಸಂಗ್ರಹಿಸಿ ಸಮೀಕ್ಷೆ ಮತ್ತು ಕ್ಷೇತ್ರಕಾರ್ಯದ ವಿಧಾನದ ಮೂಲಕ ತಿಳಿಸುವ ಪ್ರಯತ್ನ ಮಾಡಲಾಗಿದೆ.

ಕ್ಷೇತ್ರಕಾರ್ಯದ ಮೂಲಕ ಹೊಸ ಶಾಸನಗಳ ಅನ್ವೇಷಣೆ ಮಾಡಲಾಗಿದೆ. ಅಲ್ಲದೆ ಪ್ರಕಟಿತ ಶಾಸನಗಳ ಪ್ರತಿಗಳ ಅಧ್ಯಯನಕ್ಕೊಳಪಡಿಸುವ ಪ್ರಯತ್ನ ಮಾಡಲಾಗಿದೆ. ದೇವಾಲಯಗಳ ಛಾಯಾಚಿತ್ರಗಳನ್ನು ತೆಗೆದುಕೊಂಡು ಅವುಗಳ ಶೈಲಿ, ಕಾಲ, ಐತಿಹಾಸಿಕ ನಿಗದಿತ ಟಿಪ್ಪಣಿಯೊಂದಿಗೆ ಅಧ್ಯಯನ ಮಾಡುವ ಪ್ರಯತ್ನ ಮಾಡಲಾಗಿದೆ. ವೀರಗಲ್ಲುಗಳು, ಬೇಟೆ ಮತ್ತು ಮಾಸ್ತಿಗಲ್ಲು, ಮೂರ್ತಿಶಿಲ್ಪ ಇತ್ಯಾದಿ ಸ್ಮಾರಕಗಳ ಛಾಯಾಚಿತ್ರ ಸೆರೆಹಿಡಿದು ಮತ್ತು ಟಿಪ್ಪಣಿ ಮಾಡಿಕೊಳ್ಳುವ ಮೂಲಕ ಅಧ್ಯಯನ ಮಾಡಲಾಗಿದೆ. ಸಾಹಿತ್ಯಿಕ ಆಕರಗಳಲ್ಲಿ ಗುಲಬರ್ಗಾ ಜಿಲ್ಲೆಗೆ ಸಂಬಂಧಿತ ಹಲವು ಆಕರ ಗ್ರಂಥ, ಲೇಖನ, ಸಂಪಾದಿತ ಕೃತಿ, ಅಪ್ರಕಟಿತ ಸಂಪ್ರಬಂಧ ಮತ್ತು ಮಹಾಪ್ರಬಂಧಗಳನ್ನು ಅಭ್ಯಸಿಸುವ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

ಕ್ಷೇತ್ರಕಾರ್ಯದ ಮೂಲಕ ಅಧ್ಯಯನಗಳು ಸ್ವಲ್ಪಮಟ್ಟಿಗೆ ನಡೆದರೂ ಸಹ ಅವುಗಳ ಮೂಲಕ ಇತಿಹಾಸ ಕಟ್ಟುವ ಪ್ರಯತ್ನವಾಗಿಲ್ಲ. ಆದ್ದರಿಂದ ಕ್ಷೇತ್ರಕಾರ್ಯ ಮತ್ತು ಸಾಹಿತ್ಯಿಕ ಆಧಾರಗಳ ಮೂಲಕ ಮಾಹಿತಿ ಸಂಗ್ರಹಿಸಿ ಫಲಿತಗಳಲ್ಲಿ ಈ ಭಾಗದ ಇತಿಹಾಸ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

♦♦♦

ಅಧ್ಯಾಯ : ಎರಡು

ಭೌಗೋಳಿಕತೆ ಮತ್ತು ಐತಿಹಾಸಿಕ ಹಿನ್ನೆಲೆ

ಅಧ್ಯಾಯ : ಎರಡು

ಭೌಗೋಳಿಕತೆ ಮತ್ತು ಐತಿಹಾಸಿಕ ಹಿನ್ನೆಲೆ

ಒಂದು ಪ್ರದೇಶದ ಬೆಳವಣಿಗೆಯಲ್ಲಿ ಭೌಗೋಳಿಕತೆ ಮತ್ತು ಅದರ ಹಿಂದಿನ ಇತಿಹಾಸ ಮುಖ್ಯವಾಗುತ್ತದೆ. ಒಂದು ಪ್ರದೇಶ ಭೌಗೋಳಿಕವಾಗಿ ಅತ್ಯುತ್ತಮವಾಗಿದ್ದರೆ ಸಹಜವಾಗಿಯೇ ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ. ಹಾಗೆಯೇ ಸುಭದ್ರ ಅಡಿಪಾಯವಿದ್ದರೆ, ಸದೃಢವಾದ ಐತಿಹಾಸಿಕ ಹಿನ್ನೆಲೆಯಿರುವ ಪ್ರದೇಶ–ನಾಡು ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವುದನ್ನು ನಾವು ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಒಂದು ಅಧ್ಯಯನಕ್ಕೆ ಅಡಿಪಾಯದಂತಿರುವ ಭೌಗೋಳಿಕ ಪರಿಸರ ಮತ್ತು ಚಾರಿತ್ರಿಕ ದಾಖಲೆಗಳು ಅಧ್ಯಯನದ ಅಡಿಪಾಯದಂತಿರುವುದನ್ನು ಕಾಣುತ್ತೇವೆ. ಈ ಸಂಬಂಧ ಕಲಬುರ್ಗಿ ಜಿಲ್ಲೆಯ ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆಯನ್ನು ವಿಶ್ಲೇಷಿಸಲಾಗಿದೆ.

೨.೧. ಭೌಗೋಳಿಕತೆ

ಭಾರತ ಸ್ವಾತಂತ್ರ್ಯ ಹೊಂದಿದ್ದರೂ, ಹೈದ್ರಾಬಾದ್–ಕರ್ನಾಟಕ ಪ್ರದೇಶ ಹೈದ್ರಾಬಾದ್ ನಿಜಾಮ ಮತ್ತು ರಜಾಕಾರರ ಹಾವಳಿಯಿಂದ ಕೂಡಿತ್ತು. ಸೆಪ್ಟೆಂಬರ್ ೧೭/೧೯೪೮ರಲ್ಲಿ ಸ್ವತಂತ್ರ ಭಾರತದಲ್ಲಿ ಸರ್ದಾರ್ ವಲ್ಲಭಾಯ್ ಪಟೇಲರ ನಾಯಕತ್ವದಲ್ಲಿ ಭಾರತ ದೇಶದಲ್ಲಿ ವಿಲೀನಗೊಂಡಿತು. ಕಲಬುರಗಿ ಎಂದು ಶಾಸನೋಕ್ತ ಹೆಸರಿರುವ ಪ್ರಾಚೀನ ಕಲಂಬುರ್ಗೆಯೂ ಬಹುಮನಿ ಕಾಲದಲ್ಲಿ ಗುಲಬರ್ಗಾ ಎಂದು ಹೆಸರು ಪಡೆಯಿತು.

೨.೧.೧. ಸಂಕ್ಷಿಪ್ತ ಭೌಗೋಳಿಕ ಪರಿಚಯ

ದಕ್ಷಿಣ ಪ್ರಸ್ಥಭೂಮಿಯಲ್ಲಿರುವ ಈ ಜಿಲ್ಲೆಯಲ್ಲಿ ಕೃಷ್ಣ, ಭೀಮಾ, ಬೋರಿ, ಬೆಣ್ಣೆತೊರೆ, ಮುಲ್ಲಾಮರಿ ನದಿ ಹರಿಯುತ್ತವೆ. ಚಿನ್ನ, ಬೆಳ್ಳಿ, ಕಾರ್ಟ್ಸ್, ಅಗೇಟ, ಜೀಪ್ಸಂ, ಮ್ಯಾಂಗನೀಸ್, ಸುಣ್ಣದ ಕಲ್ಲು, ಸಾಬೂನಿನಕಲ್ಲು, ಸವುಳು ಮಣ್ಣು ಈ ನಾಡಿನಲ್ಲಿ ಯಥೇಚ್ಚವಾಗಿ ದೊರೆಯುತ್ತವೆ. ಹುಣಸಿ ಹಡಗಲಿಯ ಶಾಸನದಲ್ಲಿ ಗುಲಬರ್ಗಾ ಜಿಲ್ಲೆಯನ್ನು ಕರಿಯ ನೆಲ ಎಂದು ವರ್ಣಿಸಿದ್ದಾರೆ. ೧೦೯೪ರ ಹುಣಸಿ ಹಡಗಲಿ ಶಾಸನದಲ್ಲಿ 'ಕಲುಂಬರಗೆ' ಎಂದು, ೧೨–೧೩ನೆಯ ಶತಮಾನದ ಚಿನಮಳ್ಳಿ ಶಿಲಾಶಾಸನದಲ್ಲಿ 'ಕಲುಂಬರಿಗೆ' ಎಂದು ಉಲ್ಲೇಖಿಸಿದೆ. ಕಲ್ಲುಂ+ಪರಿಗೆ=ಕಲ್ಲುಗಳ

ಪರಿಗೆ ಎಂದರೆ ಕಲ್ಪಡೆನಾಡು, ಕಲ್ಮನೆಗಳಿಂದ ಆಚ್ಛಾದಿತವಾದುದ್ದಾಗಿದೆ ಎಂಬ ಅರ್ಥವುಳ್ಳ ವಿಗ್ರಹರೂಪವಾಗಿದೆ.[೧]

"ವಾಯುವ್ಯದ ಪೊಲದಲ್ಕಲುಂಬರಗೆಯಲ್ನಡಿದಂತೆ ಗಂಣ್ಡನ ಗಡಿಂಬ ಕಲು ಬಿಟ್ಟ ಕರಿಯ ನೆಲ ಮತ್ತರು ಹನ್ನೆರಡು ಕಾಲಡಿ."[೨] ಹೀಗೆ ೧೪೯೭ರ ಬೇಲೂರು, ೧೫೩೭ರ ಶಿರವಾಳದ ಶಿಲಾಶಾಸನಗಳಲ್ಲಿ ಕಲುಬರಗೆ ಮತ್ತು ಕಲಬುರ್ಗ್ ಎಂದು ಕ್ರಮವಾಗಿ ಉಲ್ಲೇಖಿಸಿದೆ. ಇಲ್ಲಿನ ವಾಯುಗುಣ ಶುಷ್ಕವಾಗಿದೆ. ಅಧಿಕ ಬಿಸಿಲು, ಉಷ್ಣತೆ ಹೆಚ್ಚಾಗಿ ಬೇಸಿಗೆಯಲ್ಲಿ ಕಾಣಿಸುತ್ತದೆ. ಹೆಚ್ಚಿನ ಮಳೆಯಿಲ್ಲ ಮತ್ತು ನೀರಿನ ಅಭಾವ ಹೆಚ್ಚಾಗಿದೆ. ಭೌಗೋಳಿಕ ಅಂದದ ಬಗ್ಗೆ ಅಳಂದ ಶಾಸನ, ಹರಸೂರು ಶಾಸನ ವಿವರಿಸುತ್ತವೆ. ಉಷ್ಣಾಂಶ ಗುಲ್ಬರ್ಗಾ ಜಿಲ್ಲೆಯಲ್ಲಿ ಹೆಚ್ಚಾಗಿದ್ದು ಬೇಸಿಗೆಯಲ್ಲಿ ೪೫೦-೪೮೦ಯವರೆಗೆ ಇರುತ್ತದೆ. ಭೀಮಾ, ಮುಲ್ಲಾಮರಿ, ಬೆಣ್ಣೆತೊರೆ, ಕಾಗಿಣೆ, ಬೋರಿ, ಕೃಷ್ಣಾ ನದಿಗಳು ಹರಿಯುತ್ತವೆ. ಚಿನ್ನ, ತಾಮ್ರ, ಕಾರ್ಟ್ಜ್, ಅಗೇಟ, ಜಿಪ್ಸ, ಮ್ಯಾಂಗನೀಜ್, ಅದಿರುಗಳು, ಸುಣ್ಣದಕಲ್ಲು, ಸಾಬೂನುಕಲ್ಲು (ಸವಳುಮಣ್ಣು) ಉಪ್ಪಿನ ಅಂಶದ ಮಣ್ಣಿವೆ.[೩] ಎರೆ ಮಣ್ಣು ಈ ಭಾಗದಲ್ಲಿದ್ದು ಫಲವತ್ತಾಗಿದೆ ಮತ್ತು ಕೃಷಿಗೆ ಯೋಗ್ಯವಾಗಿದೆ. ಕೆಲವೊಂದು ಕಡೆ ಸವಳು ಮಣ್ಣಿದೆ. ಬಾಲ್‌ಘಾಟನಲ್ಲಿ ವಿವಿಧ ರೀತಿಯ ಗಿಡ ಮರಗಳಿವೆ. ತೇಗ, ಶ್ರೀಗಂಧ, ಬೇವಿನ ಮರ, ಆಲದ ಮರ, ಅರಳಿಮರ, ಔಷಧಿ ಗಿಡಮೂಲಿಕೆಗಳು ಅಲ್ಲದೆ ಅಂಟಿನ ಮರ ಇಲ್ಲಿ ದೊರಕುತ್ತವೆ. ಅರಣ್ಯವು ವಿವಿಧ ಜಾತಿಯ ಪಕ್ಷಿ ಸಂಕುಲ ಮತ್ತು ಪ್ರಾಣಿಗಳಿಗೆ ಆಶ್ರಯ ತಾಣವಾಗಿದೆ. ಎರೆಮಣ್ಣಿನ ಭೂಮಿಯಲ್ಲಿ ಜೋಳ, ತೊಗರಿ, ಹೆಸರು, ಉದ್ದು, ಎಳ್ಳು, ಕಬ್ಬು, ಹತ್ತಿ, ತೆಂಗು, ಅಡಿಕೆ, ವೀಳ್ಯದೆಲೆ, ಸೂರ್ಯಕಾಂತಿ, ಕುಸುಬಿ ಬೆಳೆಗಳನ್ನು ಬೆಳೆಯಲಾಗುತ್ತದೆ.

ಪ್ರಸ್ತುತ ಗುಲಬರ್ಗಾ ಎಂದು ಪ್ರಸಿದ್ಧಿ ಹೊಂದಿರುವ ಜಿಲ್ಲೆ ಬಹುಮನಿ ಸಾಮ್ರಾಜ್ಯದ ಕಾಲದಲ್ಲಿ ಈ ಹೆಸರಿನಿಂದ ಕರೆಯಲ್ಪಟ್ಟಿತು. ಪ್ರಾಚೀನ ಕಾಲದಲ್ಲಿ ಇದನ್ನು ಕಲಬುರಗಿ ಎಂದು ಅನೇಕ ಶಾಸನಗಳಲ್ಲಿ ಉದಾಹರಿಸಲಾಗಿದೆ. ಆಳಂದ ಶಾಸನ, ಹುಣಸಿ ಹಡಗಲಿ ಶಾಸನ-೧೯೭೨ಗಳನ್ನು ಉದಾಹರಿಸಬಹುದಾಗಿದೆ. ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಪ್ರಾದೇಶಿಕ ವಿಸ್ತಾರದಲ್ಲಿ ಎರಡನೆಯ ಮತ್ತು ಜನಸಂಖ್ಯೆಯ ದೃಷ್ಟಿಯಿಂದ ೭ನೆಯ ಸ್ಥಾನ ಪಡೆದಿದೆ.[೪]

೨.೧.೨. ಭೌಗೋಳಿಕ ಮೇರೆಗಳು

ಉತ್ತರಕ್ಕೆ ಬೀದರ ಜಿಲ್ಲೆ ಮತ್ತು ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆ, ದಕ್ಷಿಣಕ್ಕೆ ರಾಯಚೂರು ಮತ್ತು ಯಾದಗಿರಿ ಜಿಲ್ಲೆ, ಪೂರ್ವಕ್ಕೆ ಆಂಧ್ರದ ಮೇಡಕ್ ಮತ್ತು ಮೆಹಬೂಬ್ ನಗರ ಜಿಲ್ಲೆಗಳು, ಪಶ್ಚಿಮಕ್ಕೆ ವಿಜಯಪುರ ಮತ್ತು ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಗಳು ಇದಕ್ಕೆ ಮೇರೆಗಳಾಗಿವೆ.[೫]

೨.೧.೩. ಭೌಗೋಳಿಕ ಪ್ರಭಾವ

ಗುಲಬರ್ಗಾ ಜಿಲ್ಲೆಯ ಉತ್ತರದಿಂದ ದಕ್ಷಿಣಕ್ಕೆ ಇಳಿಜಾರಾಗಿದೆ.[೬] ಭೌಗೋಳಿಕವಾಗಿ ಎತ್ತರವಾದ ದಖ್ಖನ್ ಪ್ರಸ್ಥಭೂಮಿಯ ಭಾಗವಾಗಿರುವ ಈ ಪ್ರದೇಶ ಫಲವತ್ತಾದ ಎರೆಮಣ್ಣನ್ನು ಹೊಂದಿದೆ.[೭]

ಗುಲಬರ್ಗಾ ಜಿಲ್ಲೆ ಕರ್ನಾಟಕದ ಉತ್ತರ ಭಾಗದಲ್ಲಿದೆ. ಇದರ ಸುತ್ತ-ಮುತ್ತಲಿನ ನೆರೆಯ ಜಿಲ್ಲೆ ಮತ್ತು ರಾಜ್ಯಗಳೆಂದರೆ, ಬೀದರ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಯಾದಗಿರಿ, ರಾಯಚೂರು ಮತ್ತು ವಿಜಯಪುರ. ಈ ಭಾಗ ಸಮುದ್ರ ಮಟ್ಟದಿಂದ ೩೦೦–೬೦೦ ಮೀಟರ್ ಎತ್ತರದಲ್ಲಿದೆ.[೮]

ಗುಲಬರ್ಗಾ ೭೬೦.೦೪" ಮತ್ತು ೭೭೦.೪೨" ಪೂರ್ವ ರೇಖಾಂಶದಿಂದ ೧೬೦–೧೨" ಮತ್ತು ೧೭೦–೪೬" ಉತ್ತರ ರೇಖಾಂಶದವರೆಗೆ ಹಬ್ಬಿದೆ. ದಕ್ಷಿಣ ಭಾರತದಲ್ಲಿ ೧೬.೨೨೪, ಚ.ಕಿ.ಮೀ. ವಿಸ್ತಾರ ಹೊಂದಿರುವ ಜಿಲ್ಲೆಯಾಗಿದೆ.[೯] ಪ್ರಸ್ತುತ ಏಳು ತಾಲೂಕುಗಳಿದ್ದು ಇದರಲ್ಲಿ ಯಾದಗಿರಿ ಜಿಲ್ಲೆಯಾಗಿ ವಿಭಜಿಸಲಾಗಿದೆ. ಚಿಂಚೋಳಿ, ಆಳಂದ, ಅಫಜಲ್‌ಪುರ, ಚಿತ್ತಾಪುರ, ಗುಲಬರ್ಗಾ, ಜೇವರ್ಗಿ ಮತ್ತು ಸೇಡಂ ತಾಲೂಕುಗಳು ಕಲಬುರ್ಗಿಯಲ್ಲಿವೆ. ಪ್ರಸ್ತುತ ಕಾಳಗಿಯನ್ನು ಒಂದು ತಾಲೂಕು ಮಾಡಲಾಗಿದೆ. ಅಧ್ಯಯನದ ಅನುಕೂಲಕ್ಕಾಗಿ ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಚಿಂಚೋಳಿ, ಅಫಜಲ್‌ಪುರ, ಆಳಂದ ಮತ್ತು ಗುಲ್ಬರ್ಗಾ ನಾಲ್ಕು ತಾಲೂಕುಗಳಿಗೆ ನನ್ನ ಅಧ್ಯಯನ ಸೀಮಿತಗೊಳಿಸಿದ್ದೇನೆ.

೨.೧.೪. ಭೌಗೋಳಿಕ ಲಕ್ಷಣಗಳು

ತಾಲೂಕುವಾರು ಸಾಮಾನ್ಯ ವಿವರ ೧೯೯೧

ಕ್ರ.ಸಂ.	ತಾಲೂಕು	ವಿಸ್ತೀರ್ಣ	ಉತ್ತರ ಅಕ್ಷಾಂಶ ಡಿಗ್ರಿ ಮತ್ತು ನಿಮಿಷಗಳಲ್ಲಿ	ಪೂರ್ವ ರೇ, ಡಿ ಮತ್ತು ನಿ	ಸಮುದ್ರ ಮಟ್ಟದ ಎತ್ತರ
೧.	ಅಫ್ಜಲ್‌ಪುರ ಜನಸಂಖ್ಯೆ – ೧,೫೦,೮೫೬, (೫.೮೪%) ಪ್ರತಿ ಚ.ಕಿ.ಮೀ. ೧೧೬	೧,೩೦೫ ಚದರ ಕಿ.ಮೀ., ಜಿಲ್ಲೆಯ ವಿಸ್ತೀರ್ಣದ ಶೇಕಡಾ ೮,೦೪	೭೬.೦೫/ ೭೬.೪೪	೧೭.೦೪/ ೧೮೨೩	೩೦೦– ೪೫೦ ಭೀಮಾ
೨.	ಆಳಂದ ೨,೬೦,೮೩೪ (೧೦,೧೦%) ೧೫೦ ಪ್ರ.ಚ.ಮೀ.	೧,೭೩೫ ಚ.ಕಿ.ಮೀ. ಜಿ.ವಿ.ಶೆ– ೧೦.೬೯	೭೬.೨೧/ ೭೬.೫೭	೧೭,೨೦/ ೧೭,೪೬	೪೫೦– ೫೦೦ ೩೦೦– ೪೫೦ –
೩.	ಚಿಂಚೋಳಿ ೧,೮೯,೧೬೧ (೭,೩೩%)	೧,೫೬೯ ಚ.ಕಿ.ಮೀ. ಜಿ.ವಿ.ಶೆ.	೭೭.೦೪/ ೭೭.೪೩	೧೭,೧೨/ ೧೭,೩೮	೩೦೦– ೪೫೦ ೪೫೦–

	೧೨೧ ಪ್ರ.ಚ.ಕಿ.ಮೀ.	೯,೬೭			೮೦೦ ಮುಲ್ಲಾಮರಿ ನದಿ
೪.	ಕಲಬುರ್ಗಿ ೫,೨೩,೯೪೪ (೨೦,೨೯%) ೩೦೩, ಪ್ರ.ಚ.ಕಿ.ಮೀ.	೧,೭೩೦ ಚ.ಕಿ.ಮೀ. ೧೦,೬೬, ಜಿ.ಪಿ.ಶೆ.	೭೬,೩೮/ ೭೭,೧೦	೧೭,೦೩/ ೧೭,೪೦	೩೦೦– ೪೫೦ ಭೀಮಾ, ಮುಲ್ಲಾಮರಿ ಬೆಣ್ಣೆತೊರೆ

	ತಾಲೂಕು	ಒಟ್ಟು ಗ್ರಾಮಗಳು ಜನವರ್ತಿ/ ಇಲ್ಲದ	ಜನಸಾಂದ್ರತೆ, ಪ್ರತಿ ಚ.ಕಿ.ಮೀ.ಗೆ	ನಗರ&ಪುರ ಸಭೆಗಳು	ಅಭಿಸೂಕರ ಪ್ರದೇಶಗಳು
೧.	ಅಫಜಲ್‌ಪುರ	೮೭/೩	೧೧೬	೦	೦
೨.	ಆಳಂದ	೧೨೮/೧೦	೧೫೦	೦೧	೦೧
೩.	ಚಿಂಚೋಳಿ	೧೩೧/೧೪	೧೨೧	೦	೦
೪.	ಗುಲ್ಬರ್ಗಾ	೧೩೫/೮೦	೩೦೩	೦೧	೦೧

(ಕ.ಸ.ಗೆ.ಕ.ಜಿ.ಪು.ಸ–೧೨).

೨.೧.೫. ಭೌಗೋಳಿಕ ವೈಶಿಷ್ಟ್ಯತೆ

ಮಟ್ಟಸ ಶಿಖರದ ಬೃಹತ್ ಗುಡ್ಡಗಳ ತಳಭಾಗವನ್ನು ಪ್ರತಿನಿಧಿಸುವ ಟ್ರ್ಯಾಪುಗಳ ದಕ್ಷಿಣದ ಅಂಚನ್ನು ಈ ಜಿಲ್ಲೆಗಳಲ್ಲಿ ಕಾಣಬಹುದು. ಜಿಲ್ಲೆಯ ಉತ್ತರ ಭಾಗದ ಆಳಂದ, ಅಫ್ಜಲ್‌ಪುರ ಮತ್ತು ಚಿಂಚೋಳಿ ತಾಲೂಕಿನ ಕೆಲವು ಪ್ರದೇಶಗಳಲ್ಲಿ ಸುಮಾರು ೩,೮೦೦ ಚ.ಕೀ.ಮೀ. ಪ್ರದೇಶದಲ್ಲಿ ಡೆಕ್ಕನ್ ಟ್ರ್ಯಾಪ್ ಹರಡಿದೆ. ಎರಡು ಶಿಲಾರಸ ಪ್ರವಾಹಗಳ ಮಧ್ಯದಲ್ಲಿ ಸರೋವರ ಅಥವಾ ನದಿಗಳ ತಳದ ಮಡ್ಡಿಯ ತೆಳು ಪದರ ಎರಡು ಲಾವಾ ರಾಶಿಗಳ ನಡುವೆ ಕೆಳಸ್ತರದಲ್ಲಿ ಕಂಡುಬರುವುದು ಇಲ್ಲಿನ ಮುಖ್ಯ ಲಕ್ಷಣವಾಗಿದೆ. ಹೆಚ್ಚು ಕ್ಷೋಭೆಗೊಳಗಾಗದ ಮತ್ತು ಮಟ್ಟಸವಾಗಿ ಹರಡಿರುವ ಪದರ ಶಿಲೆಗಳ ಒಂದು ಗುಂಪು ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನಲ್ಲಿ ಹರಡಿದೆ. ಇವುಗಳಿಗೆ ಜಲಜ ಶಿಲೆ ಎಂದು ಕರೆಯುವರು. ಭೀಮಾ ನದಿಯ ಇಕ್ಕೆಲಗಳಲ್ಲಿ ಹೆಚ್ಚಾಗಿ ಕಂಡು ಬರುವುದರಿಂದ ಇದಕ್ಕೆ ಭೀಮಾವರ್ಗವೆಂದು ಕರೆಯುವರು.[೧೦] ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ನೆಲ ಏರು–ತಗ್ಗುಗಳಿಂದ ಕೂಡಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಎತ್ತರವಾದ ಬೆಟ್ಟಗಳಿಲ್ಲ. ವಾಯುವ್ಯದಲ್ಲಿ ಬಾಲಘಾಟ್ ಪರ್ವತ ಚಿಂಚೋಳಿ ತಾಲೂಕಿನಲ್ಲಿ ಕಂಡುಬರುತ್ತವೆ.

ಶಿಲೆಗಳು : ಆರ್ಕಿಯನ್ ಯುಗದ ಗ್ರಾನೈಟ್ ಮತ್ತು ಪದರ ಶಿಲೆಗಳಿಂದ ಆರಂಭಿಸಿ ಕ್ರಿಡೇಶಿಯನ್ ಯುಗಕ್ಕೆ ಸೇರಿದ ಡೆಕ್ಕನ್ ಟ್ರಾಪ್ ಮತ್ತು ಅಂತರ ಟ್ರಾಪ್ ಜಲಜ ಶಿಲೆಗಳವರೆಗೆ ಶಿಲಾವರ್ಗ ಹಬ್ಬುತ್ತದೆ.[೧೧] ಗುರುಮಿಟಕಲ್ ಪ್ರದೇಶ ಮೂರು ಭೂ ವೈಜ್ಞಾನಿಕ ಕಲ್ಪಗಳಿಗೆ ಸೇರಿದ ಶಿಲೆಗಳಿಂದ ಕೂಡಿದ್ದು ಭೂ ವಿಜ್ಞಾನಿಗಳ ಗಮನ ಸೆಳೆದಿದೆ.[೨]

೨.೨. ಐತಿಹಾಸಿಕತೆ

ಬೈಚಬಾಳಕೊಳ್ಳ, ಇಸಾಂಪುರದಲ್ಲಿ ಹಳೆಯ ದೈತ್ಯ ಗಾತ್ರದ ಪ್ರಾಣಿಗಳ ಅಸ್ಥಿ ಪಂಜರಗಳು ದೊರೆತಿವೆ. ಈ ಭಾಗದ ಜೀವ ವಸತಿಯು ೧೧ ಲಕ್ಷ ವರ್ಷಗಳಿಗೂ ಹಿಂದೆ ಸರಿಯುತ್ತದೆಂದು ಕೆ.ಪದ್ದಯ್ಯನವರು ಹೇಳಿದ್ದಾರೆ. ಕೃಷ್ಣವೇಣಿ–ಭೀಮರಥಿಯರ ದಡದ ಇಕ್ಕೆಲಗಳಲ್ಲಿ ಇಂದಿಗೂ ಪ್ರಾಗೈತಿಹಾಸಿಕ ಕುರುಹುಗಳು ನೋಡಲು ದೊರೆಯುತ್ತವೆ. ಕ್ರೊಮ್‌ಲೆಕ್ಸ್(ಬುಡ್ಡರ ಮನೆಗಳು/ಮೋರೆರ ಮನೆಗಳು) ರಾಜನಕೋಳೂರಿನಲ್ಲಿ ದೊರೆತಿವೆ. ಕಿಸ್ಟಾವೇನ್ಸ್ ಎಂದು ಕರೆಸಿಕೊಳ್ಳುವ ಅಂತ್ಯಸಂಸ್ಕಾರ ನಡೆಸಿ ಬೂದಿ–ಎಲುಬು–ಇದ್ದಿಲುಗಳನ್ನು ಮಡಿಕೆಗಳಲ್ಲಿ ತುಂಬಿ ಹುಗಿದಿಟ್ಟು ಮೇಲೆ ವೃತ್ತಾಕಾರದ ಬಂಡೆಗಲ್ಲು ಹೊದಿಸಿದ ರಾಜನಕೋಳೂರು, ಹಗರಿಟಗೆ, ಕಲ್ಹಂಗರಗಾಗಳಲ್ಲಿ ಗುರುತಿಸಲಾಗಿದೆ. ಕೈರ್ನ್ಸ್ ಅಥವಾ ಬಾರೋಸ್ ಎಂದು ಕರೆಸಿಕೊಳ್ಳುವ ದೊಡ್ಡ ದೊಡ್ಡ ಬಂಡೆಗಳನ್ನು ವೃತ್ತಾಕಾರವಾಗಿಟ್ಟು ಅವುಗಳ ಕೆಳಗೆ ಗೋರಿಗಳನ್ನು, ಕಲ್ಲಿನ ಮನೆಗಳನ್ನು ಕಟ್ಟಿ ಅವುಗಳಲ್ಲಿ ದೇಹಗಳನ್ನು ಮತ್ತು ಅಂತ್ಯಸಂಸ್ಕಾರದ ಸಾಮಾನುಗಳನ್ನು (ಮಡಿಕೆ–ಕುಡಿಕೆಗಳಲ್ಲಿ) ಹುಗಿದಿಡುತ್ತಿದ್ದರು. ಇಂಥ ಕುರುಹು ಜೇವರ್ಗಿ, ಅಂದೋಲಾ, ಕೊಡೇಕಲ್, ಹುಣಸಗಿ, ಮಾಲಗತ್ತಿ, ರಸ್ತಾಪುರ, ಮದ್ದರತಿ, ಚಿಕನಳ್ಳಿ, ನೆಲೋಗಿ, ವಿಭೂತಿ ಹಳ್ಳಿಗಳಲ್ಲಿ ದೊರೆಯುತ್ತವೆ. ಇದರ ಇತಿಹಾಸ ೨೦ ಸಾವಿರ ವರ್ಷಗಳಷ್ಟು ಹಿಂದೆ ಸರಿಯುತ್ತದೆ. ಮೆಗಾಲಿಥಿಕ್ ಯುಗದ ಬೂದಿ ದಿಬ್ಬಗಳು ಬೂದಿಹಾಳ, ಹಗರಿಟಗೆ, ಬೀರನೂರು, ಹರಣಗೇರಿ, ಬೈಚಬಾಳ, ಕನ್ನೆಕೋಳೂರುಗಳಲ್ಲಿ ದೊರೆಯುತ್ತವೆ.

೨.೨.೧. ಪ್ರಾಗೈತಿಹಾಸ

ಗುಲಬರ್ಗಾದ ಉತ್ತರ ಭಾಗವು ಶಿಲಾಯುಗ, ತಾಮ್ರಯುಗದ ಪುರಾತತ್ವ ನೆಲೆಗಳನ್ನೊಳಗೊಂಡಿದೆ. ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಬಾಣರು, ಬಹುಮನಿ ಆದಿಲ್‌ಶಾಹಿ ಮತ್ತು ನಿಜಾಮರು ಆಳಿದ್ದಕ್ಕೆ ಹಲವು ಐತಿಹಾಸಿಕ ಕುರುಹುಗಳು ಸಾಕ್ಷಿಗಳಾಗಿವೆ. ಶಾಸನಗಳು ಮತ್ತು ಸ್ಮಾರಕಗಳು ಮಹತ್ವದ ದಾಖಲೆಗಳಾಗಿವೆ.

'ಕಲ್ಲು+ಪರಿಗೆ' ಎಂಬುದು ಇದರ ವಿಗ್ರಹ ರೂಪ ಕಲ್ಲುಗಳ ಪರಿಗೆ ಎಂದರೆ ಕಲ್ಪಡೆಯ ನಾಡು ಕಲ್ಮನೆಗಳಿಂದ ಅಚ್ಚಾದಿತವಾದುದು, ಇಲ್ಲವೆ ಕಲ್ಲುಗಳ ರಾಶಿಯುಳ್ಳ ನೆಲ ಎಂಬುದು 'ಕಲಬುರ್ಗಿ ಪದಕ್ಕೆ ಕನ್ನಡದಲ್ಲಿ ನಿಷ್ಪನ್ನಗಳಾಗುವ ಅರ್ಥಗಳಾಗುತ್ತವೆ. ಗುಲಬರ್ಗಾ ಎಂಬುದು

ಕಲಬುರಗಿಯ ಫಾರಸೀಕರಣ ಫಾರಸಿ ಶಬ್ದಕೋಶದಲ್ಲಿ 'ಗುಲ್' ಎಂದರೆ ಹೂವು; 'ಬರ್ಗ' ಎಂದರೆ ಎಲೆ. ಮಹ್ಮದಿಯರಿಗೆ ಕಲಬುರ್ಗಿ ಎನ್ನುವುದು ಮುಂದೆ ಗುಲಬರ್ಗಾ ಎಂದಾಯಿತು. ಅಫ್ಜಲ್‌ಪುರ ತಾಲೂಕು ಪ್ರಾಚೀನ ಕಾಲದಲ್ಲಿ ಅತ್ತಿನೂರು ಎಂಬತ್ತರ ಭಾಗವಾಗಿತ್ತು. ಭವಾನಿ ಆನಂದಿದೇವಿ ಆಳಂದದವಳಾಗಿದ್ದಳು. ಅದರಿಂದಾಗಿ ಊರಿಗೆ ಆಲಂದಪುರ ಎಂದು ಹೆಸರು ಬಂದಿವೆ ಎಂಬ ಅಭಿಪ್ರಾಯವಿದೆ. ಚಿಂಚಪಲ್ಲಿ–ಚಿಂಚಹಳ್ಳಿ–ಚಿಂಚವಳ್ಳಿ–ಚಿಂಚೋಳಿಯಾಯಿತು.

ಮೌರ್ಯ ಅಶೋಕನ ಶಾಸನಗಳು (ಸನ್ನತಿ), ಶಾತವಾಹನರ ಕಾಲದ ಲಿಪಿಯುಳ್ಳ ಮುದ್ರೆಗಳು, ಗುಲಬರ್ಗಾ ಜಿಲ್ಲೆಯ ಇತಿಹಾಸ ಬಹು ಪ್ರಾಚೀನತೆಯಿಂದ ಕೂಡಿದೆ ಎಂಬುವುದನ್ನು ಉದಾಹರಿಸುತ್ತವೆ. ನಂತರ ಬಂದ ಬಾದಾಮಿ ಚಾಲುಕ್ಯರ ಕಾಲದ ಯಾವುದೇ ಶಾಸನಗಳು ದೊರಕದಿದ್ದರೂ ಬಾದಾಮಿ ಚಾಲುಕ್ಯರ ಕಾಲದ ಅವಶೇಷಗಳು ಸುಲೇಪೇಟೆ, ಗಡಿಕೇಶ್ವಾರ, ಆಳಂದ, ಅಫ್ಜಲ್‌ಪುರದ ಭಾಗಗಳಲ್ಲಿ ದೊರೆತಿವೆ. ಬಾದಾಮಿ ಚಾಲುಕ್ಯರ ದೊರೆ ಎರಡನೆಯ ಕೀರ್ತಿವರ್ಮನನ್ನು ಸೋಲಿಸಿ ರಾಷ್ಟ್ರಕೂಟರ ದಂತಿದುರ್ಗ ಆಳ್ವಿಕೆಗೆ ಬಂದನು. ಅಮೋಘವರ್ಷ ನೃಪತುಂಗನ ಕಾಲದಿಂದ ರಾಷ್ಟ್ರಕೂಟರು ಗುಲಬರ್ಗಾ ಜಿಲ್ಲೆಯ ಸೇಡಂ ತಾಲೂಕಿನ ಮಳಖೇಡವನ್ನು ತಮ್ಮ ರಾಜಧಾನಿಯಾಗಿಟ್ಟುಕೊಂಡು ಆಳ್ವಿಕೆ ಮಾಡಿದರು. ಅವರಿಗೆ ಸಂಬಂಧಿಸಿದ ಅವಶೇಷಗಳು ಮಿರ್‍ಯಾಣ, ನಿಡಗುಂದದಲ್ಲಿ ದೊರೆತಿವೆ. ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಆಳಂದದ ಶಾಸನಗಳು, ಮಣ್ಣೂರು, ಮಾಶಾಳ ಶಾಸನಗಳು ಸಾಕ್ಷಿಯಾಗಿವೆ. ಕಲಚೂರಿಗಳು, ಬಾಣರು ಈ ಪ್ರದೇಶವನ್ನು ಆಳಿದ್ದಕ್ಕೆ ಇಲ್ಲಿ ದೊರೆತ ಕುರುಹುಗಳು ಸಾಕ್ಷಿಯಾಗಿವೆ.

ಬಹುಮನಿ ಸುಲ್ತಾನರು ೧೪ನೆಯ ಶತಮಾನದಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಆರಂಭದಲ್ಲಿ ಗುಲಬರ್ಗಾವನ್ನೇ ರಾಜಧಾನಿಯಾಗಿಟ್ಟುಕೊಂಡು ತಮ್ಮ ಆಡಳಿತ ಆರಂಭಿಸಿ, ಬೀದರ, ಬಿಜಾಪುರದವರೆಗೆ ಆಳ್ವಿಕೆ ವಿಸ್ತರಿಸಿ ಬೀದರನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ನಂತರ ಬಹುಮನಿ ಸಾಮ್ರಾಜ್ಯ ಛಿದ್ರವಾಗಿ, ಶಾಹಿಗಳ ಮನೆತನಗಳು ಉದಯವಾದವು. ಗುಲಬರ್ಗಾ ಆದಿಲ್‌ಶಾಹಿ ಮನೆತನದ ಆಳ್ವಿಕೆಗೆ ಒಳಪಟ್ಟಿತ್ತು. ಈ ರೀತಿ ಪ್ರಾಚೀನ ಮತ್ತು ಮಧ್ಯಕಾಲೀನ ಇತಿಹಾಸ ತಿಳಿಸುವ ಶಾಸನಗಳು ಮತ್ತು ಐತಿಹಾಸಿಕ ಕುರುಹುಗಳು ಈ ಇತಿಹಾಸದ ವಿಶ್ಲೇಷಣೆಗೆ ಸಾಕ್ಷಿಗಳಾಗಿವೆ. ನಂತರ ಹೈದರಾಬಾದ್‌ನ ನಿಜಾಮ ೧೮ನೆಯ ಶತಮಾನದಲ್ಲಿ ಆಳ್ವಿಕೆ ಮಾಡಿದ್ದಕ್ಕೆ ನಿಜಾಮರು ಹೊರಡಿಸಿದ ಉರ್ದು ಶಾಸನಗಳು, ನಾಣ್ಯಗಳು ಮತ್ತು ಇತರೆ ಐತಿಹಾಸಿಕ ಕುರುಹುಗಳು ಸಹಾಯಕವಾಗಿವೆ.

ಕೈರ್ನ್ಸ್ ಅಥವಾ ಬಾರೋಸ್ ಎಂದು ಕರೆಸಿಕೊಳ್ಳುವ ದೊಡ್ಡ ಬಂಡೆಗಳನ್ನು ವೃತ್ತಾಕಾರವಾಗಿಟ್ಟು ಸಮಾಧಿಗಳನ್ನು ಕಲ್ಲಿನ ಮನೆಗಳಂತೆ ಕಟ್ಟಿ ಅವುಗಳಲ್ಲಿ ದೇಹಗಳನ್ನು ಮತ್ತು ಮಡಿಕೆ–ಕುಡಿಕೆಗಳಲ್ಲಿಯೂ ದೇಹಗಳನ್ನು ಇಟ್ಟು ಅಂತ್ಯಸಂಸ್ಕಾರದ ಸಾಮಾನುಗಳನ್ನು ಅದರೊಳಗೆ ಹಾಕಿ ಹೂತು ಹಾಕುತ್ತಿದ್ದರು. ಹುಣಸಗಿ, ಜೇವರ್ಗಿಗಳಲ್ಲಿ ಆಧಾರ ದೊರಕಿವೆ.

ಚಿಂಚೋಳಿ ತಾಲೂಕಿನ ಗೊಟ್ಟಂಗೊಟ್ಟಿ (ವಿರಾಟನಗರ) ಇಲ್ಲಿ ಇತಿಹಾಸದ ಆರಂಭ ಯುಗದ ಕೆಂಪು, ಕಪ್ಪು-ಕೆಂಪು, ಕೆಂಪು ಲೇಪನದಡಿ ಬಿಳಿವರ್ಣದ ಚಿತ್ರಿತ ಮಡಕೆ ಭಾಗ ದೊರಕಿದೆ. ನಾಗಾಯಿದಲಾಯಿಯಲ್ಲಿ ಬೂದಿದಿಬ್ಬಗಳು ದೊರಕಿವೆ. ಬೂದಿದಿಬ್ಬಗಳ ನಿರ್ದಿಷ್ಟ ಕಾಲಮಾನ ತಿಳಿಯದು. ಭೋಮಸಪುರವು ಶಿಲಾ ಮತ್ತು ತಾಮ್ರ ಯುಗದ ಸಂಸ್ಕೃತಿಯ ನೆಲೆ ಹೊಂದಿದೆ. ಮಂಚಾಪುರದಲ್ಲಿ ಬೃಹತ್ ಶಿಲಾಯುಗದ ಗೋರಿ ನೆಲೆ ಮತ್ತು ಶಿಲಾ ವೃತ್ತಗಳು ಕಂಡುಬಂದಿವೆ. ಮುಕ್ತಾ ಗ್ರಾಮವು ಇತಿಹಾಸ ಆರಂಭ ಯುಗದ ನೆಲೆಯಾಗಿದೆ. ಇಲ್ಲಿ ಕೆಂಪು, ಕಪ್ಪು-ಕೆಂಪು, ಕೆಂಪು ಲೇಪನದಡಿ ಬಿಳಿವರ್ಣದ ಚಿತ್ರಿತ ಮಡಕೆ ಭಾಗಗಳು ದೊರೆತಿವೆ. ಮೋರನಹಾಳವು ಬೃಹತ್ ಶಿಲಾಯುಗದ ನೆಲೆಯಾಗಿದೆ. ಸುಲೇಪೇಟೆ ಸಹ ಪ್ರಾಗೈತಿಹಾಸಿಕತೆ ಹೊಂದಿದೆ ಎಂದು ತಿಳಿದು ಬರುತ್ತದೆ.[೧೩]

೨.೨.೨. ಇತಿಹಾಸ

ರಾಷ್ಟ್ರಕೂಟ ವಂಶದ ಅಮೋಘವರ್ಷ ನೃಪತುಂಗ ಆಳ್ವಿಕೆ ವಿಷಯ ಕ್ರಿ.ಶ. ೧೧-೧೨ನೆಯ ಶತಮಾನದ ತಡಕಲ್ ಶಾಸನ ತಿಳಿಸುತ್ತದೆ. ಮೂರನೆಯ ಕೃಷ್ಣ ಆಳ್ವಿಕೆ ಮಾಡಿದ್ದನ್ನು ಕ್ರಿ.ಶ. ೯೫೪ರ ನೀಡಗುಂದ ಶಾಸನ ತಿಳಿಸುತ್ತದೆ. ಶಾಸನವು ಕ್ರಿ.ಶ. ೧೧೫೪ರ ಶಾಸನವು ನೂರ್ಮಡಿ ತೈಲಪ ಆಳಿದ ಬಗ್ಗೆ ವಿವರಿಸುತ್ತದೆ. ಕ್ರಿ.ಶ. ೧೦೩೯ರ ತಿಳಿಗೋಳ ಶಾಸನ ಜಯಸಿಂಗ ದೇವರು(೨ನೆಯ ಜಗದೇಕಮಲ್ಲ) ಜಯಸಿಂಗ ದೇವರು ಆಳುತ್ತಿದ್ದರೆಂದು ತಿಳಿಸುತ್ತದೆ. ಶಿರೋಳ್ಳಿ ಶಾಸನ ಕ್ರಿ.ಶ.೧೧೫೪ ಮತ್ತು ನಿಂಬರ್ಗಾ ಶಾಸನ ಕ್ರಿ.ಶ. ೧೦೪೬ ಅಹವಮಲ್ಲನ ಆಳ್ವಿಕೆ ಕಾಲದ ಬಗ್ಗೆ ತಿಳಿಸುತ್ತವೆ. ತ್ರಿಭುವನಮಲ್ಲ ದೇವ ಕೌಂಟಿ ಕ್ರಿ.ಶ. ೧೦೮೨ರ ಶಾಸನದಲ್ಲಿ ಈತನ ಆಳ್ವಿಕೆ ಮತ್ತು ಬಿರುದಾವಳಿಗಳನ್ನು ತಿಳಿಸುತ್ತವೆ. ವೀರಪೇರ್ಮಾಡಿದೇವ ಆಳ್ವಿಕೆ ಮಾಡಿದನೆಂದು ಬಂದರವಾಡ ಕ್ರಿ.ಶ. ೧೧೧೮ರ ಶಾಸನದಲ್ಲಿ ಉಲ್ಲೇಖಿಸಿದೆ.

ಜಗದೇಕಮಲ್ಲನ ಆಳ್ವಿಕೆಯನ್ನು ಗೊಬ್ಬೂರು ಕ್ರಿ.ಶ.೧೧೪೦ರ ಶಾಸನವು ಉಲ್ಲೇಖಿಸಿದೆ. ತ್ರಿಭುವನಮಲ್ಲ ವೀರಸೋಮೇಶ್ವರ ದೇವನ ಆಳ್ವಿಕೆಯ ವಿವರಣೆ ಕ್ರಿ.ಶ. ೧೧೮೧ರ ಹೊಡಲ ಶಾಸನದಲ್ಲಿ ಉಲ್ಲೇಖಿತವಾಗಿದೆ. ತ್ರಿಭುವನಮಲ್ಲ ಸೋಮೇಶ್ವರ ದೇವ ಆಳ್ವಿಕೆಯನ್ನು ಕ್ರಿ.ಶ. ೧೧೮೪ರ ಮಡಿಹಾಳ ಶಾಸನ ತಿಳಿಸುತ್ತದೆ. ಕಲ್ಯಾಣ ಚಾಲುಕ್ಯ ಅರಸ ೬ನೆಯ ವಿಕ್ರಮಾದಿತ್ಯನ ಬಗ್ಗೆ ಸುಲೇಪೇಟೆಯ ಕ್ರಿ.ಶ. ೧೧-೧೨ನೆಯ ಶತಮಾನದ ಶಾಸನ ತಿಳಿಸುತ್ತದೆ. ಸುಲೇಪೇಟೆಯ ಕ್ರಿ.ಶ. ೧೧-೧೨ನೆಯ ಶತಮಾನದ ಶಾಸನ ಒಂದನೆಯ ಸೋಮೇಶ್ವರನ ಆಳ್ವಿಕೆಯ ಬಗ್ಗೆ ತಿಳಿಸುತ್ತದೆ. ಹೊಡಲ ಕ್ರಿ.ಶ. ೧೧೮೧ರ ಶಾಸನದಲ್ಲಿ ಶ್ರೀಮತ್ರಿ ಭುವನಮಲ್ಲ ಸೋಮೇಶ್ವರ ರಾಜ್ಯವಾಳಿದ ಉಲ್ಲೇಖವಿದೆ. ನಿಂಬರ್ಗ ಶಾಸನವು ಎರಡನೆಯ ಸೋಮೇಶ್ವರನ ಆಳ್ವಿಕೆಯ ಬಗ್ಗೆ ತಿಳಿಸುತ್ತದೆ.

ಬಿಜ್ಜಳ ದೇವನು ಗೆದ್ದ ಪ್ರದೇಶಗಳ ವಿವರಣೆ ಮತ್ತು ಅವನ ಹೆಸರು ಬಿಜ್ಜಲದೇವಲ ಎಂದು ಉಲ್ಲೇಖಿಸಿದೆ (ಮೋಘಾ ಶಾಸನ ಕ್ರಿ.ಶ. ೧೧೭೦). ರಾಯಮುರಾರಿ ಸೋವಿದೇವನ

ಬಿರುದುಗಳ ಉಲ್ಲೇಖವಿದೆ (ಗೊಬ್ಬೂರು ಶಾಸನ ಕ್ರಿ.ಶ. ೧೧೭೦). ಚಿನಮಳ್ಳಿ ಶಾಸನ ಕ್ರಿ.ಶ. ೧೧೭೫–ಪ್ರತಾಪ ಲಂಕೇಶ್ವರ, ಪರನಾರಿ ಸಹೋದರ, ದುರ್ಗ್ಗಮಲ್ಲ, ಚಲದಂಕರಾಮಂ, ವೈರಿಭ ಕಂಠೀರವ, ನಿಸ್ಸಂಕಮಲ್ಲಂ, ಸನಿವಾರ ಸಿದ್ದಿ, ಭುಜಬಲ ಚಕ್ರವರ್ತಿ ಎಂಬ ಪ್ರಶಸ್ತಿ ವಿವರಿಸುತ್ತದೆ. ಹೊಡಲ ಕ್ರಿ.ಶ. ೧೧೮೧ರ ಶಾಸನದಲ್ಲಿ ಸಂಕಮ ದೇವ ಆಳಿದ ಉಲ್ಲೇಖವಿದೆ. ಅಹವಮಲ್ಲ ದೇವನ–ಶ್ರೀಮತ್ಕಳಚೂರಿಯ ಚಕ್ರವರ್ತಿ ಆಹವಮಲ್ಲ ದೇವ ಎಂದು ಹೊಡಲ ಕ್ರಿ.ಶ. ೧೧೮೧ರ ಶಾಸನ ಉಲ್ಲೇಖಿಸುತ್ತದೆ.

ಯಾದವ ನಾರಾಯಣ ಪ್ರತಾಪ ಚಕ್ರವರ್ತಿ ಸಿಂಗಣದೇವ ಆಳ್ವಿಕೆ ಮಾಡಿದ್ದನು (ಹೊಡಲ ಶಾಸನ ಕ್ರಿ.ಶ. ೧೨೬೭). ಯಾದವ ನಾರಾಯಣ ಪ್ರತಾಪ ಚಕ್ರವರ್ತಿ ಶ್ರೀ ಕಂನರದೇವ ಆಳ್ವಿಕೆ ಬಗ್ಗೆ ತಿಳಿಸುತ್ತದೆ (ಹಿರೇಝುಳಕಿ ಶಾಸನ ಕ್ರಿ.ಶ. ೧೨೩೪). ಪ್ರತಾಪ ಚಕ್ರವರ್ತಿ ಸಿಂಗಣ ದೇವನು ಕ್ರಿ.ಶ. ೧೧೮೧ರ ಹೊಡಲ ಶಾಸನದಲ್ಲಿ ಆಳಿದ ವಿವರಣೆ ನೀಡುತ್ತದೆ.

ಶಾಸನಗಳು ಗುಲಬರ್ಗಾದ ಉತ್ತರ ಭಾಗದ ಐತಿಹಾಸಿಕ ದಾಖಲೆಗಳನ್ನು ನೀಡುತ್ತವೆ. ಸಾಂಸ್ಕೃತಿಕವಾಗಿ ಸಂಗೀತ, ಕಲೆ, ವಾಸ್ತುಶಿಲ್ಪವನ್ನು ದೇವಾಲಯಗಳಿಂದ, ಮೂರ್ತಿಶಿಲ್ಪಗಳಿಂದ ಅಧ್ಯಯನ ಮಾಡಬಹುದಾಗಿದೆ. ಕೊಳಲು, ವೀಣೆ, ತಬಲ, ಷಹನಾಯಿಗಳು ದೇವಾಲಯಗಳಲ್ಲಿ ನುಡಿಸುವಂತೆ ಕೆತ್ತಲಾಗಿದೆ. ನೃತ್ಯ ಭಂಗಿಯಲ್ಲಿರುವ ಮದನಿಕೆಯರ ಶಿಲ್ಪಗಳು ಭಿತ್ತಿ ಭಾಗಗಳಲ್ಲಿ ಕೆತ್ತಲಾಗಿವೆ. ಅವರು ಧರಿಸಿರುವ ವಸ್ತ್ರ, ಆಭರಣಗಳು, ಕೂದಲುಗಳ ವಿನ್ಯಾಸ ಮತ್ತು ಸ್ತ್ರೀ ಪುರುಷರ ಜೀವನಶೈಲಿ, ವಸ್ತ್ರವಿನ್ಯಾಸ, ಸ್ತ್ರೀಯರ ಮಹತ್ವ, ಸತಿ ಸಹಗಮನ ಪದ್ಧತಿಗಳಿಗೆ ದೇವಾಲಯ ಮತ್ತು ಮೂರ್ತಿಶಿಲ್ಪಗಳು ಸಾಕ್ಷಿಯಾಗಿವೆ. ದೇವಾಲಯಗಳು ದ್ರಾವಿಡ ಶೈಲಿ, ವೇಸರ ಶೈಲಿ, ನಾಗರ ಶೈಲಿಗಳಲ್ಲಿ ಬೆಳೆದು ಬಂದಿವೆ. ನಂತರದ ದಿನಗಳಲ್ಲಿ ಇಸ್ಲಾಮಿಕ್ ಶೈಲಿ ಪ್ರಭಾವಿತಗೊಂಡು ಇಂಡೋ–ಇಸ್ಲಾಮಿಕ್ ಶೈಲಿಗಳಾಗಿ ಬೆಳೆದಿವೆ.

ಪ್ರಸ್ತುತ ಗುಲಬರ್ಗಾ ಜಿಲ್ಲೆಯ ಒಟ್ಟು ತಾಲೂಕುಗಳು ಎಂಟು. ಅವುಗಳೆಂದರೆ ಗುಲಬರ್ಗಾ, ಚಿಂಚೋಳಿ, ಸೇಡಂ, ಚಿತ್ತಾಪುರ, ಕಾಳಗಿ, ಆಳಂದ, ಅಫ್ಜಲ್‌ಪುರ, ಜೇವರ್ಗಿ. ಸಂಶೋಧನಾ ಅಧ್ಯಯನಕ್ಕೆ ಒಳಪಟ್ಟ ತಾಲೂಕುಗಳೆಂದರೆ ಗುಲಬರ್ಗಾ, ಆಳಂದ, ಅಫ್ಜಲ್‌ಪುರ, ಚಿಂಚೋಳಿ.

೨.೨.೩. ಪ್ರಾದೇಶಿಕ ಇತಿಹಾಸ

ಗುಲಬರ್ಗಾ

ಕ್ರಿ.ಶ. ೧೦೯೮ ಹುಣಸಿ ಹಡಗಲಿ ಶಾಸನದಲ್ಲಿ 'ಕಲಬುರಗೆ' ಎಂದು ಉಲ್ಲೇಖವಾಗಿದೆ. 'ಕಲ್ಲು+ಪರಿಗೆ' ಎಂಬುದು ಇದರ ವಿಗ್ರಹ ರೂಪ ಕಲ್ಲುಗಳ ಪರಿಗೆ. ಇದರರ್ಥ ಕಲ್ಪಡೆಯ ನಾಡು, ಕಲ್ಮನೆಗಳಿಂದ ಅಚ್ಛಾದಿತವಾದುದು ಇಲ್ಲವೆ ಕಲ್ಲುಗಳ ರಾಶಿಯುಳ್ಳ ನೆಲ ಎಂಬುದು ಕಲಬುರ್ಗಿ ಪದಕ್ಕೆ ಕನ್ನಡದಲ್ಲಿ ನಿಷ್ಪನ್ನಗಳಾಗುವ ಅರ್ಥಗಳಾಗುತ್ತದೆ.[೧೪]

ಗುಲಬರ್ಗಾ ಎಂಬುದು ಕಲಬುರಗಿಯ ಫಾರಸೀಕರಣ; ಫಾರಸಿ ಶಬ್ದಕೋಶದಲ್ಲಿ 'ಗುಲ್' ಎಂದರೆ ಹೂವು 'ಬರ್ಗ' ಎಂದರೆ ಎಲೆ. ಮಹ್ಮದಿಯರಿಗೆ ಕಲಬುರ್ಗಿ ಎನ್ನುವುದು ಮುಂದೆ ಗುಲಬರ್ಗಾ ಎಂದಾಯಿತು.[೧೫] ಅಬ್ದುಲ್ ರಜಾಕ್ ವಿಜಯನಗರದ ಮೇರೆಗಳನ್ನು ಹೇಳುವಾಗ 'ಕಲಬುರಗಿ' ಎಂದೇ ಉಲ್ಲೇಖಿಸಿದ್ದಾನೆ. ಅಲ್ಲಸಾನಿ ಪೆದ್ದನ್ನನು ಮನುಚರಿತೆಯಲ್ಲಿ ಕೃಷ್ಣದೇವರಾಯನ ಬಿರುದು ವರ್ಣಿಸುತ್ತಾ "ಕಲಬುರ್ಗಿ ಕಟಕ ಕ್ಷಿತಿಪಾಲ" ಎಂದಿದ್ದಾನೆ.[೧೬]

ಕ್ರಿ.ಶ. ೧೪೫೯ರ ಶಿರವಾಳದ ಒಂದು ಶಿಲಾಶಾಸನದಲ್ಲಿ 'ಶ್ರೀಯುತ ಕಲಬುರಗಿಯ ನಾಡೊಳಗೆ' ಎಂಬ ನಿದರ್ಶನವಿದೆ. ಕ್ರಿ.ಶ. ೧೫೮೦ರಲ್ಲಿ ವಿರುಪಾಕ್ಷ ಪಂಡಿತ ಕವಿ ಚನ್ನಬಸವ ಪುರಾಣದ ಕಾಲಜ್ಞಾನ ಸಂಧಿಯಲ್ಲಿ (ಸಂ.೬೮)ಕಲಬುರಗೆ ಎಂದೇ ಕರೆದಿದ್ದಾನೆ. ಕಲಬುರಗಿ ಎಂಬ ಹೆಸರು ಕ್ರಿ.ಶ. ೧೬ನೆಯ ಶತಮಾನದವರೆಗೂ ರೂಢಿಯಲ್ಲಿತ್ತು.[೧೭]

"ವಾಯುವ್ಯದ ಪೊಲದಲ್ಕಲುಂಬರಗೆಯಲ್ನಡಿದಂತೆ ಗಂಡ್ಣನಗಡಿಂಬ ಕಲು ಬಿಟ್ಟ ಕರಿಯ ನೆಲ ಮತ್ತರು ಹನ್ನೆರಡು ಕಾಲಡಿ"[೧೮] (ಹುಣಸಿ ಹಡಗಲಿ ಪಾರ್ಶ್ವನಾಥ ಬಸದಿಯ ಶಾಸನ-ಸಾಲು ೫೧-ಕ.ಜಿ.ಶಾ.-ಹನುಮಾಕ್ಷಿ ಗೋಗಿ, ೧೯೯೬). ಹೀಗೆ ೧೪೫೭ರ ಬೇಲೂರು ೧೫೩೭ರ ಶಿರವಾಳದ ಶಿಲಾಶಾಸನಗಳಲ್ಲಿ ಕಲುಬರಗೆ ಮತ್ತು ಕಲಬುರ್ಗ್ ಎಂದು ಕ್ರಮವಾಗಿ ಉಲ್ಲೇಖಿತವಾಗಿವೆ.

ಚಿಂಚೋಳಿ

ಸು. ೧೦-೧೧ನೆಯ ಶತಮಾನದಲ್ಲಿ ಮನ್ನೆದಡಿ ಸಾಸಿರನಾಡು (ಮುನ್ನೆದಡಿ-೧೦೦೦) ಎಂದು ಆಳಲ್ಪಡುತ್ತಿದ್ದ ಈ ತಾಲೂಕು ಕಾಳಗಿಯನ್ನು ರಾಜಧಾನಿಯಾಗಿ ಹೊಂದಿತ್ತು. ದಟ್ಟವಾದ ಅರಣ್ಯದಿಂದ ಕೂಡಿದ ಪ್ರದೇಶದಲ್ಲಿ ಅಲೆಮಾರಿಗಳಾದ ಚಂಚರು ಗಡ್ಡೆ-ಗೆಣಸು ಅಗೆದು ಆಯ್ದು ಮಾರುತ್ತಿದ್ದರು. ಚಂಚರು ಗಡ್ಡೆಯರೆಂದೇ ಇವರು ಹೆಸರಾಗಿದ್ದರು. ಚಂಚರಗಡ್ಡೆ ಹಳ್ಳಿ ಎನ್ನುವುದು ಗಡ್ಡೆ ಲೋಪವಾಗಿ ಚಂಚರ ಹಳ್ಳಿ ಮುಂದೆ ಚಂಚವಳ್ಳಿಯಾಯಿತು. ಚೆಂಚಪಲ್ಲಿ-ಚೆಂಚವಳ್ಳಿ-ಚಿಂಚವಳ್ಳಿ-ಚಿಂಚೋಳಿಯಾಯಿತೆನ್ನಬಹುದು.[೧೮]

ಕ್ರಿ.ಶ. ೨-೧೩ನೇ ಶತಮಾನದ ಅಂತ್ಯದವರೆಗೆ ಹಲವು ರಾಜಮನೆತನಗಳು ಮತ್ತು ಅವರ ಮಾಂಡಳೀಕರು ಆಳಿದ್ದಾರೆ. ಇವರೆಲ್ಲ ಬಹುತೇಕವಾಗಿ ಒಂದೇ ರೀತಿಯ ಆಳ್ವಿಕೆ ರೂಢಿಸಿಕೊಂಡಿದ್ದರು. ರಾಜ್ಯದ ಅಗ್ರ ಅಧಿಕಾರಿ ರಾಜನೇ ಆಗಿದ್ದನು. ಅವನ ತರುವಾಯ ಯುವರಾಜ, ಇವರನ್ನು ಬಿಟ್ಟರೆ ಮಹಾಪ್ರಧಾನ, ಬಲಾಧಿಕೃತ, ದಂಡನಾಯಕ, ಮಹಾಪ್ರಚಂಡ ದಂಡನಾಯಕ, ಭಂಡಗಾರಿಕ, ಮನೆವೆರ್ಗಡೆ, ಮಹಾಸಂಧಿವಿಗ್ರಹಿಕ, ಧರ್ಮಾಧಿಕಾರಿ, ತಂತ್ರಪಾಲ ಇವರೆಲ್ಲರ ಉಲ್ಲೇಖ ಗುಲ್ಬರ್ಗಾ ಜಿಲ್ಲೆಯ ಶಾಸನಗಳಲ್ಲಿವೆ.[೧೯]

ರಾಜಕೀಯ ವಿಭಾಗಕ್ಕೆ ಸಂಬಂಧಪಟ್ಟಂತೆ ೧೦೦೦ ಹಳ್ಳಿಗಳಿಂದ ೧೨ ಹಳ್ಳಿಯವರೆಗೆ, ಆಡಳಿತಕ್ಕಾಗಿ, ವಿಭಾಗಗಳನ್ನು ಮಾಡಿರುವುದಕ್ಕೆ ಶಾಸನಗಳಲ್ಲಿ ಆಧಾರಗಳಿವೆ. ಅಂತಹವುಗಳಲ್ಲಿ

ಮನ್ನೆದಡಿನಾಡು-೧೦೦೦. ಇದರ ರಾಜಧಾನಿ ಕಾಳುಗೆ (ಕಾಳಗಿ)ಯಾಗಿತ್ತು. ಇದರಲ್ಲಿ ತೆಂಗುಳಿ-೭೦, ಮನ್ನೆ-೩೦ರಂತೆ ಇತರ ಕಂಪಣಗಳಿದ್ದವು (ಆಧಾರ ಕಾಳಗಿ ಮತ್ತು ತೆಂಗಳಿ ಶಾಸನಗಳು). ಬೆರಣಿ-೫೦೦ ಎನ್ನುವ ಕಂಪಣವಿದ್ದ ವಿವರ ಶಿರೋಳ್ಳಿ ಶಾಸನದಿಂದ ತಿಳಿದುಬರುತ್ತದೆ.

ಈ ವಿಭಾಗಗಳನ್ನು ಹೆಚ್ಚಾಗಿ ರಾಜ ಪರಿವಾರದವರು, ಸಾಮಂತರು, ಮಹಾಮಂಡಳೇಶ್ವರರು ಇಲ್ಲವೆ ಭಟ್ಟಾರಿಕರು ಅಥವಾ ಮಹಾಭಟ್ಟಾರಿಕರು ಆಳುತ್ತಿದ್ದರು.[೨೦] ಅಗ್ರಹಾರಗಳ ಆಳ್ವಿಕೆ ಮಹಾಜನರಿಂದ ನಡೆಯುತ್ತಿತ್ತು. ಹಳ್ಳಿಗಳ ಆಡಳಿತವನ್ನು ನೋಡಿಕೊಳ್ಳಲು ಗಾವುಂಡ ಇಲ್ಲವೆ ಪೆರ್ಗ್ಗಡೆಯರಿರುತ್ತಿದ್ದರು. ಇವರಿಗೆ ಪ್ರಭುಗಳೆಂದು ಶಾಸನಗಳಲ್ಲಿ ಕರೆಯಲಾಗಿದೆ. ೩೦೦ ಹಳ್ಳಿಗಳ ಗುಂಪನ್ನು ನಾಳ್ಗಾವುಂಡರು ಆಳಿದರೆ, ೬೦೦ರ ಗುಂಪಿನಲ್ಲಿ ಧರ್ಮಮಹಾರಾಜರು ಆಳ್ವಿಕೆ ಮಾಡಿದ್ದರು.

೨.೨.೪. ಪ್ರಮುಖ ರಾಜಮನೆತನಗಳು

ಗುಲಬರ್ಗಾ ಜಿಲ್ಲೆಯ ಇತಿಹಾಸ ನೋಡಿದರೆ ಪ್ರಾಚೀನ ಕಾಲದಿಂದ ಆರಂಭವಾಗುತ್ತದೆ. ರಾಜಕೀಯವಾಗಿ ಬೆಳವಣಿಗೆ ಹೊಂದಿದ ಮೌರ್ಯರ ಆಳ್ವಿಕೆ ಶಾತವಾಹನರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲಚೂರಿಗಳು, ಯಾದವರು ಅಲ್ಲದೆ ಸಾಮಂತ ಮನೆತನಗಳಾದ ಶಿಲಾಹಾರರು, ಬಾಣರು ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದ್ದರು.

ಮೌರ್ಯರು

ಚಂದ್ರಗುಪ್ತ ಮೌರ್ಯ ಮಗಧ ದೊರೆ ದನನಂದನನ್ನು ಸೋಲಿಸಿ ಮೌರ್ಯ ಸಾಮ್ರಾಜ್ಯ ಸ್ಥಾಪಿಸಿದನು. ಗ್ರೀಕ್‌ರನ್ನು ಸೋಲಿಸಿ ತನ್ನ ಪ್ರಭುತ್ವ ಗಟ್ಟಿಗೊಳಿಸಿದನು. ಸೆಲ್ಯುಕಸ್ ಮಗಳನ್ನು ಬಿಂದುಸಾರನಿಗೆ ಕೊಟ್ಟು ಮದುವೆ ಮಾಡಿದರು. ಈತನಿಗೆ ಅಮಿತ್ರ ಘಾತ ಅಥವಾ ಅಮಿತ್ರ ಖಾಡ ಅಥವಾ ಶತ್ರು ನಾಶಕ ಎಂದು ಕರೆಯುತ್ತಿದ್ದರು.[೨೧] ಅಶೋಕನು ಬಿಂದುಸಾರನ ನಂತರ ಬಂದ ದೊರೆಯಾಗಿದ್ದನು. ಜೆಮ್ಸ್ ಪ್ರಿನ್ಸೆಪ್ ಕ್ರಿ.ಶ. ೧೮೩೭ರಲ್ಲಿ ಅಶೋಕನ ಶಿಲಾಶಾಸನದಲ್ಲಿ 'ದೇವನಾಂ ಪಿಯ ಪಿಯದಸಿ' ಎಂದು ಗುರುತಿಸಿದರು.[೨೨] ಬಿಂದುಸಾರನ ಆಡಳಿತದ ಅವಧಿಯಲ್ಲಿ ತಕ್ಷಶಿಲಾ ಮತ್ತು ಉಜ್ಜೈನಿಯ ರಾಜ್ಯಪಾಲನಾಗಿ ಆಳ್ವಿಕೆ ಮಾಡುತ್ತಿದ್ದನು. ಅಶೋಕನು ಚಂಡಾಶೋಕನಿದ್ದು ಬೌದ್ಧ ಧರ್ಮಕ್ಕೆ ಬಂದ ಮೇಲೆ ಧರ್ಮಾಶೋಕನಾದನೆಂದು ಬೌದ್ಧ ಧರ್ಮ ತಿಳಿಸುತ್ತದೆ. ಆದರೆ ಅಶೋಕನು ತನ್ನ ಆಳ್ವಿಕೆಯ ೧೪ನೆಯ ವರ್ಷ ಹೊರಡಿಸಿದ ಐದನೆಯ ಶಿಲಾಶಾಸನದಲ್ಲಿ ಸೋದರರ ಅಂತಃಪುರದ ಜವಾಬ್ದಾರಿ ತನ್ನ ಮೇಲಿರುವುದು ತಿಳಿಸಿರುವನು. ರಾಜತರಂಗಿಣಿಯ ಪ್ರಕಾರ ಶಿವನಾರಾಧಕನಾಗಿದ್ದ, ಈತನು ಕಳಿಂಗ ಯುದ್ಧದ (ಕ್ರಿ.ಪೂ. ೨೬೧) ನಂತರ ಶಾಂತಿ ಅಹಿಂಸೆಯ ತತ್ವಗಳಿಗೆ ಪ್ರಭಾವಿತನಾಗಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡನೆಂದು ತಿಳಿಸುತ್ತದೆ. ಅಶೋಕನ ನಂತರ ದಶರಥ, ಸಂಪ್ರತಿ, ಶಾಲಿಶೋಕ ಆಳಿದರು. ಮೌರ್ಯರು ಕೊನೆಯ ದೊರೆ ಬೃಹದ್ರಥನನ್ನು ಈತನ ದಂಡನಾಯಕ ಪುಷ್ಯಮಿತ್ರ ಕೊಂದನು. ಗಿರ್ನಾರ್, ಷಹಬಾಜ್‌ಘರಿ, ಯರ್‌ಗುಡಿ, ಜೌಗಡ್, ಕಾಲ್ವಿ ಶಿಲಾಶಾಸನಗಳು

ಮೌರ್ಯರ ಆಳ್ವಿಕೆ ಬಗ್ಗೆ ತಿಳಿಸುತ್ತವೆ. ಸನ್ನತಿಯಲ್ಲಿ ದೊರೆತ ಶಾಸನಗಳು ಮತ್ತು ಶಿಲ್ಪಗಳು ಮೌರ್ಯರ ಆಳ್ವಿಕೆಗೆ ಆಧಾರಗಳಾಗಿವೆ. ಗುಲ್ಬರ್ಗಾ ಮ್ಯೂಜಿಯಂನಲ್ಲಿ ದೊರೆತಿರುವ ಮೂರ್ತಿ ಶಿಲ್ಪಗಳು ಮತ್ತು ಶಾಸನ ಶಿಲ್ಪಗಳು ಇಲ್ಲಿ ಮೌರ್ಯರ ಆಳ್ವಿಕೆ ಕುರಿತು ತಿಳಿಸುವ ಆಧಾರಗಳಾಗಿವೆ.

ಶಾತವಾಹನರು

ಆರಂಭದಲ್ಲಿ ಮೌರ್ಯರ ಸಾಮಂತರಾಗಿ ಆಳ್ವಿಕೆ ಮಾಡಿದರು. ಅನಾಮಿಕ ಬರೆದ ಪೆರಿಪ್ಲಸ್ ಆಫ್ ದಿ ಎರಿತ್ರಿಯನ್ ಸಿ ಮತ್ತು ಗುಣಾಢ್ಯನ ಬೃಹತ್ಕಥಾ ಕೃತಿಗಳು, ಶಾಸನಗಳಾದ ಹಾಥಿಗುಂಪಾ, ಗಿರ್ನಾರ್ ಮತ್ತು ತಾಳೆಗುಂದ ಶಾಸನಗಳು ಶಾತವಾಹನರ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ. ಹಿರೇಹಡಗಲಿ ಶಾಸನದಲ್ಲಿ ಶತಾಹನಿ ರಟ್ಟ ಎಂದು ಕರೆದಿದೆ. ಆದರೆ ಈಗಿನ ಬಳ್ಳಾರಿ ಮೂಲದವರೆಂದು? ತಿಳಿದು ಬರುತ್ತದೆ. ಸಿಮುಕನು ಕಣ್ವಾಯನ ವಂಶದ ದೊರೆ ಸುಶರ್ಮನಿಗೆ ಸೋಲಿಸಿ ಕ್ರಿ.ಪೂ. ೩೦ರಲ್ಲಿ ಆಳ್ವಿಕೆಗೆ ಬಂದನು. ಕನ್ಹನು ಈತನ ನಂತರ ಆಳ್ವಿಕೆ ಮಾಡಿದನು. ನಾಸಿಕ ಬೌದ್ಧ ಗುಹಾಲಯ ಸ್ಥಾಪಿಸಿದರು. ಈತನ ಮಗ ಎರಡನೆಯ ಶಾತಕರ್ಣಿ ನಂತರ ಗೌತಮಿಪುತ್ರ ಶಾತಕರ್ಣಿ ಅಧಿಕಾರಕ್ಕೆ ಬಂದನು. ಗೌತಮಿಪುತ್ರ ಶಾತಕರ್ಣಿ ಶಕ, ಯವನ, ಪ್ರಹ್ಲವರ ನಿರ್ಮೂಲನೆ ಮಾಡಿದ್ದನ್ನು ನಾಸಿಕ್ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಎರಡನೆಯ ಪುಲಮಾಯಿ, ವಶಿಷ್ಠಪುತ್ರ ಶಾತಕರ್ಣಿ, ವಶಿಷ್ಟಪುತ್ರ ಪುಲಮಾಯಿ, ಯಜ್ಞ ಶಾತಕರ್ಣಿಗಳಾಳಿದರು. ಇಕ್ಷ್ವಾಂಕು ವಂಶದ ನಾಗಾರ್ಜುನಕೊಂಡದ ಒಂದನೆಯ ಶಾಂತಮೂಲ ಪೂರ್ವ ದಖನ್ ವಶಪಡಿಸಿಕೊಂಡನು.[೨೩]

ಚಿಂಚೋಳಿ ತಾಲೂಕಿನ ಗೊಟ್ಟಂಗೊಟ್ಟಿಯಲ್ಲಿ ದೊರೆತ ಇಟ್ಟಂಗಿಯ ಅವಶೇಷಗಳನ್ನಾಧರಿಸಿ ಇಲ್ಲಿ ಶಾತವಾಹನರು ಆಳ್ವಿಕೆ ಮಾಡುತ್ತಿದ್ದರು ಎಂದು ಉಲ್ಲೇಖಿಸಬಹುದು. ಶಾತವಾಹನರ ಕಾಲದ ಆಧಾರಗಳು ಸನ್ನತಿ, ಶಿರವಾಳ ಮತ್ತು ಜೇವರ್ಗಿ ಕಡೆಗಳಲ್ಲಿ ದೊರಕಿವೆ.[೨೪] ವಜ್ಜಲ, ಅಣಬಿ, ಹುರಸಗುಂಡಿ, ಅವರಾದ, ಹಿಪ್ಪರಗಿ, ಹಾಗರಗುಂಡಗಿ, ಕಲ್ಹಂಗರಗಿಯಲ್ಲಿ ಲಿಪಿ ಸಹಿತ ಮತ್ತು ಲಿಪಿ ರಹಿತ ಶಾತವಾಹನ ಸ್ಮಾರಕ ಶಿಲಾ ಫಲಕಗಳು ದೊರಕಿವೆ.[೨೫]

ಬಾದಾಮಿ ಚಾಲುಕ್ಯರು

ಜಯಸಿಂಹ, ರಣರಾಗ, ಒಂದನೆಯ ಪುಲಕೇಶಿ, ಒಂದನೆಯ ಕೀರ್ತಿವರ್ಮ, ಮಂಗಳೇಶ, ಎರಡನೆಯ ಪುಲಕೇಶಿ ಆಳಿದರು. ಎರಡನೆಯ ಪುಲಕೇಶಿಯನ್ನು ಪಲ್ಲವ ದೊರೆ ಒಂದನೆಯ ನರಸಿಂಹವರ್ಮನು ಪೆರಿಯಾಲ, ಮಣಿಮಂಗಲ ಮತ್ತು ಸರಮಾರ ಯುದ್ಧಗಳಲ್ಲಿ ಸೋಲಿಸಿ ಕ್ರಿ.ಶ. ೬೪೨ರಲ್ಲಿ ಈ ಭಾಗ ವಶಪಡಿಸಿಕೊಂಡನು. ಬಾದಾಮಿ ಗುಹಾ ಶಾಸನಗಳು, ಐಹೊಳೆ, ಮೇಗುತಿ ಶಾಸನಗಳು ಇವರ ಆಳ್ವಿಕೆಗೆ ಸಾಕ್ಷ್ಯಗಳಾಗಿವೆ. ಕಲಚೂರಿಗಳಿಗೆ ಸೋಲಿಸಿದ ನೆನಪಿಗಾಗಿ ಮಂಗಳೇಶ ಮಹಾಕೂಟ ದೇವಾಲಯದಲ್ಲಿ ಜಯಸ್ತಂಭ ನೆಟ್ಟನು. ಜಯಸ್ತಂಭ ನಿಲ್ಲಿಸಿದ ದಿನಾಂಕ ಮತ್ತು ಒಂದನೆಯ ಕೀರ್ತಿವರ್ಮನ ಗೆಲುವಿನ ವಿವರಣೆ ಶಾಸನದಲ್ಲಿ ಉಲ್ಲೇಖಿತವಾಗಿದೆ.[೨೬]

ರಾಷ್ಟ್ರಕೂಟರು

ದಂತಿದುರ್ಗ ಕ್ರಿ.ಶ. ೭೫೭ರಲ್ಲಿ ಬಾದಾಮಿಯ ಕೊನೆಯ ಅರಸ ಎರಡನೆಯ ಕೀರ್ತಿವರ್ಮನನ್ನು ಸೋಲಿಸಿ ರಾಷ್ಟ್ರಕೂಟರ ಸಾಮ್ರಾಜ್ಯ ಸ್ಥಾಪಿಸಿದರು. ಈತನಿಗೆ ಮಕ್ಕಳಿಲ್ಲದ ಕಾರಣ ಇತನ ಚಿಕ್ಕಪ್ಪ ಒಂದನೆಯ ಕೃಷ್ಣ ಅಧಿಕಾರಕ್ಕೆ ಬಂದನು. ಎರಡನೆಯ ಕೀರ್ತಿವರ್ಮನ ಮೇಲೆ ಮತ್ತೆ ದಂಡೆತ್ತಿ ಹೋಗಿ ಸೋಲಿಸಿದನು. ವೆಂಗಿ ಚಾಲುಕ್ಯ ದೊರೆ ನಾಲ್ಕನೆಯ ವಿಷ್ಣುವರ್ಧನ ಸೋತು ತನ್ನ ಮಗಳಾದ ಶೀಲ ಭಟ್ಟಾರಿಕೆಯನ್ನು ರಾಷ್ಟ್ರಕೂಟ ರಾಜಕುಮಾರ ಧ್ರುವನಿಗೆ ಕೊಟ್ಟು ಮದುವೆ ಮಾಡಿದನು.[೨೨] ಎಲ್ಲೋರಾದಲ್ಲಿ ಏಕಶಿಲಾ ಗುಹಾಂತರ ದೇವಾಲಯವಾದ, 'ಕೈಲಾಸ ದೇವಾಲಯ' ಕಟ್ಟಿಸಿದನು. ಧ್ರುವನು ಕ್ರಿ.ಶ. ೭೮೦-೭೯೩ರ ವರೆಗೆ ಆಳ್ವಿಕೆ ಮಾಡಿದನು. ಗಂಗರ ಶ್ರೀಪುರುಷ ಮತ್ತು ಈತನ ಮಗ ಶಿವಮಾರನಿಗೆ ಸೋಲಿಸಿ ಕಂಬನಿಗೆ ಗಂಗವಾಡಿ ರಾಜ್ಯಪಾಲನಾಗಿ ಮಾಡಿದನು. ಪಲ್ಲವ ದೊರೆ ದಂತಿವರ್ಮನಿಗೆ ಸೋಲಿಸಿದನು. ಧ್ರುವನು ತನ್ನ ಮೂರನೆಯ ಮಗನಾದ ಮೂರನೆಯ ಗೋವಿಂದನಿಗೆ ಕ್ರಿ.ಶ. ೭೯೩ರಲ್ಲಿ ಅಧಿಕಾರಕ್ಕೆ ತಂದನು. ಕನ್ಯಾಕುಮಾರಿಯಿಂದ ಹಿಮಾಲಯ ಮತ್ತು ಸೌರಾಷ್ಟ್ರದಿಂದ ಬಂಗಾಳದವರೆಗೆ ತನ್ನ ಸಾಮ್ರಾಜ್ಯ ವಿಸ್ತರಿಸಿದನು. ಕ್ರಿ.ಶ ೮೧೪ರಲ್ಲಿ ನಿಧನನಾದನು. ಕ್ರಿ.ಶ. ೮೧೮ ರಿಂದ ಕ್ರಿ.ಶ. ೮೭೮ರವರೆಗೆ ಅಮೋಘವರ್ಷ ಆಳ್ವಿಕೆ ಮಾಡಿದನು. ಮೂರನೆಯ ಇಂದ್ರ, ಎರಡನೆಯ ಅಮೋಘವರ್ಷ, ನಾಲ್ಕನೆಯ ಗೋವಿಂದ, ಮುಮ್ಮಡಿ ಅಮೋಘವರ್ಷ, ಮೂರನೆಯ ಕೃಷ್ಣ ಆಳ್ವಿಕೆ ಮಾಡಿದರು. ರಾಷ್ಟ್ರಕೂಟರ ಕೊನೆಯ ದೊರೆ ಇಮ್ಮಡಿ ಕರ್ಕನನ್ನು ಸೋಲಿಸಿ ಕ್ರಿ.ಶ. ೯೭೩ರಲ್ಲಿ ಚಾಲುಕ್ಯ ದೊರೆ ಎರಡನೆಯ ತೈಲಪ ಅಧಿಕಾರಕ್ಕೆ ಬಂದನು. ರಾಷ್ಟ್ರಕೂಟರ ಸಾಮ್ರಾಜ್ಯದ ಹುಟ್ಟು ಬೆಳವಣಿಗೆ ಗುಲಬರ್ಗಾ ಜಿಲ್ಲೆಯಿಂದಲೇ ಆಗಿದೆ. ಇವರ ರಾಜಧಾನಿ ಈಗಿನ ಸೇಡಂ ತಾಲೂಕಿನ ಮಳಖೇಡ/ಮಾನ್ಯಖೇಟ ಆಗಿತ್ತು. ರಾಷ್ಟ್ರಕೂಟ ಸಾಮ್ರಾಜ್ಯ ದಂತಿದುರ್ಗನಿಂದ ಸ್ಥಾಪಿತವಾಯಿತು. ರಾಷ್ಟ್ರಕೂಟ ಸಾಮ್ರಾಜ್ಯದ ಪ್ರಸಿದ್ಧ ದೊರೆ ಅಮೋಘವರ್ಷ ನೃಪತುಂಗ(ಕ್ರಿ.ಶ.೮೧೭-ಕ್ರಿ.ಶ.೮೭೮). ಶಿರವಾಳದಲ್ಲಿ ರಾಷ್ಟ್ರಕೂಟ 'ಅಕಾಲವರ್ಷ' ಬಿರುದಾಂಕಿತ ಮೂರನೆಯ ಕೃಷ್ಣನ ಉಲ್ಲೇಖವಿರುವ ಶಾಸನ ದೊರಕಿದೆ.[೨೩]

ಕಲ್ಯಾಣದ ಚಾಲುಕ್ಯರು

ಎರಡನೆಯ ತೈಲಪ ಕ್ರಿ.ಶ.೯೭೩-೯೯೭ರವರೆಗೆ ಆಳಿದನು. ನಾಲ್ಕನೆಯ ವಿಕ್ರಮಾದಿತ್ಯ ಮತ್ತು ಜೋತಾದೇವಿಯ ಮಗನಾಗಿದ್ದನು. ಆರಂಭದಲ್ಲಿ ರಾಷ್ಟ್ರಕೂಟರ ಮೂಮ್ಮಡಿ ಕೃಷ್ಣನ ಸಾಮಂತನಾಗಿ ತರ್ದವಾಡಿ-೧೦೦೦ವನ್ನಾಳುತ್ತಿದ್ದನು. ಇಮ್ಮಡಿ ಕರ್ಕನ ದುರ್ಬಲತೆ ನೋಡಿ ಮಾನ್ಯಖೇಡವನ್ನು ಆಕ್ರಮಿಸಿದನು. ಮಾನ್ಯಖೇಡವನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ಮಾಡಿದನು. ಇರಿವಬೇಡಂಗ ಸತ್ಯಾಶ್ರಯನು ರಾಷ್ಟ್ರಕೂಟರ ರಾಣಿ ಜಾಕಬ್ಬೆ ಮತ್ತು ಇಮ್ಮಡಿ ತೈಲಪನ ಮಗನಾಗಿದ್ದನು. ರನ್ನ ಈತನ ಆಸ್ಥಾನ ಕವಿಯಾಗಿದ್ದನು. ಸೋಮೇಶ್ವರ, ಐದನೆಯ ವಿಕ್ರಮಾದಿತ್ಯ, ಎರಡನೆಯ ಜಯಸಿಂಹ ಮತ್ತು ಒಂದನೆಯ ಸೋಮೇಶ್ವರರು

ಸತ್ಯಾಶ್ರಯನ ನಂತರ ಆಳಿದರು. ಒಂದನೆಯ ಸೋಮೇಶ್ವರ ಮಾನ್ಯಖೇಡದಿಂದ ರಾಜಧಾನಿಯನ್ನು ಕಲ್ಯಾಣಕ್ಕೆ ವರ್ಗಾಯಿಸಿ ಆಳ್ವಿಕೆ ಮಾಡಿದನು. ನಂತರ ಆರನೆಯ ವಿಕ್ರಮಾದಿತ್ಯನು ಕ್ರಿ.ಶ. ೧೦೭೬-೧೧೨೦ರವರೆಗೆ ಆಳಿದನು. ಸಿಂಹಾಸನವೇರಿದ ಸವಿನೆನಪಿಗಾಗಿ ಕ್ರಿ.ಶ. ೧೦೭೬ರಲ್ಲಿ ಚಾಲುಕ್ಯ ವಿಕ್ರಮ ಶಕೆ ಆರಂಭಿಸಿದನು.[೯] ನಂತರ ಮೂರನೆಯ ಸೋಮೇಶ್ವರ, ಎರಡನೆಯ ಜಗದೇಕಮಲ್ಲ, ಮೂರನೆಯ ತೈಲ ಆಳಿದರು. ಕಲ್ಯಾಣ ಚಾಲುಕ್ಯರ ಕೊನೆಯ ದೊರೆ ಮೂರನೆಯ ತೈಲನನ್ನು ಕಾಕತೀಯ ಪೋಲನು ಸೆರೆಹಿಡಿದನು. ಅಂತಹ ಸಮಯದಲ್ಲಿ ಕಲಚೂರಿಯ ಎರಡನೆಯ ಬಿಜ್ಜಳನು ಕಲ್ಯಾಣವನ್ನು ಆಕ್ರಮಿಸಿ ಕಲಚೂರಿ ವಂಶ ಸ್ಥಾಪಿಸಿದನು. ಹೀಗೆ ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯ ಅವನತಿ ಹೊಂದಿತು. ಕಲ್ಯಾಣದ ಚಾಲುಕ್ಯರು ಬೀದರ ಜಿಲ್ಲೆಯ ಬಸವ ಕಲ್ಯಾಣವನ್ನು ರಾಜಧಾನಿಯಾಗಿಟ್ಟುಕೊಂಡು ಆಳ್ವಿಕೆ ಮಾಡಿದ್ದರು. ಕಲ್ಯಾಣ ಚಾಲುಕ್ಯರ ಕಾಲದ ಶಾಸನಗಳು ಗುಲಬರ್ಗಾ ಜಿಲ್ಲೆಯಲ್ಲಿ ಯಥೇಚ್ಛವಾಗಿ ದೊರಕಿವೆ. ಹಂದರಕಿ ಶಾಸನದಲ್ಲಿ ಇವರ ಮೂಲದ ಬಗ್ಗೆ ಪೌರಾಣಿಕವಾಗಿ 'ಎಕ ವಾಕ್ಯರು' ಎಂದು ತಿಳಿಸಿದೆ. ತೈಲಪನು ರಾಷ್ಟ್ರಕೂಟರನ್ನು ಗೆದ್ದು ತಮ್ಮ ಪೂರ್ವಜರು ಬಾದಾಮಿಯಲ್ಲಿ ಕಳೆದುಕೊಂಡಿದ್ದ ಚಾಲುಕ್ಯ ರಾಜ್ಯವನ್ನು ಕಲ್ಯಾಣದಲ್ಲಿ ಸ್ಥಾಪಿಸಿದನು. ಈ ಮನೆತನದ ಪ್ರಖ್ಯಾತ ದೊರೆ ಆರನೆಯ ವಿಕ್ರಮಾದಿತ್ಯ, ಮೂರನೆಯ ಸೋಮೇಶ್ವರನ ಕಾಲದವರೆಗೆ ಆಳಿದ ಎಲ್ಲಾ ಅರಸರ ನಾಮ ನಿರ್ದೇಶನ ಹಂದರಗಿ ಶಾಸನದಲ್ಲಿ ಬಂದಿವೆ.[೧೦]

ಆರನೆಯ ವಿಕ್ರಮಾದಿತ್ಯನ ಶಾಸನಗಳು-ಅಲಂದೆ (ಕ್ರಿ.ಶ. ೧೦೮೨) ಮಲ್ಲಿಕಾರ್ಜುನ ದೇವರಿಗೆ ದತ್ತಿ ನೀಡಿದ ವಿವರಣೆಯಿದೆ. ಮರ್ತೂರ (ಕ್ರಿ.ಶ. ೧೦೨೩) ಬೀಜೇಶ್ವರ ದೇವರಿಗೆ ದತ್ತಿ ನೀಡಿದ ವಿಷಯ ತಿಳಿಸುತ್ತದೆ. ಹಂದರಕಿ (ಕ್ರಿ.ಶ. ೧೧೧೮) ಲೋಕೇಶ್ವರ ದೇವರಿಗೆ ದತ್ತಿ ನೀಡಲಾಗಿತ್ತು. ಮಣೂರ (ಕ್ರಿ.ಶ. ೧೧೨೬) ಗಂಗರಾಸೀಜೀಯರ ಆತ್ಮ ಬಲಿದಾನಕ್ಕೆ ನೀಡಿದ ಮಾನ್ಯ ವಿಕ್ರಮಾದಿತ್ಯನ ಕಾಲದ್ದಾಗಿದೆ.

ಮೂರನೆಯ ಸೋಮೇಶ್ವರನ ಶಾಸನಗಳು-ನಿಂಬರಗಿ (ಕ್ರಿ.ಶ. ೧೧೩೪) ಸಿವರಾಜನ ಹಳ್ಳಿಯನ್ನು ಅಭಿನವ ಕಲದೇಶ್ವರ ದೇವಾಲಯಕ್ಕೆ ಉಂಬಳಿ ಕೊಡಲಾಗಿತ್ತು. ನಿಂಬರಗಿ (ಕ್ರಿ.ಶ. ೧೧೫೭) ಶಾಸನದಲ್ಲಿ ರಾಣಿ ಬರ್ಮಲದೇವಿ ದತ್ತಿ ಕೊಟ್ಟ ವಿವರವಿದೆ.[೧೧]

ಕಲಚೂರಿ ಅರಸರು-ಎರಡನೆಯ ಬಿಜ್ಜಳನು ಕಲ್ಯಾಣ ಚಾಲುಕ್ಯರ ಕೊನೆಯ ದೊರೆ ಮೂರನೆಯ ತೈಲನು ಕಾಕತೀಯ ಅರಸ ಪೋಲನ ಸೆರೆಯಲ್ಲಿದ್ದಾಗ ಕಲ್ಯಾಣವನ್ನು ಆಕ್ರಮಿಸಿದನು. ಕಲಚೂರಿಗಳ ವಂಶದ ಆಳ್ವಿಕೆ ಕಲ್ಯಾಣದಲ್ಲಿ ಸ್ಥಾಪಿಸಿದನು.

ಕಲಚೂರಿಗಳ ಮೂಲ ಪುರುಷ ಉಚಿತ(೯೨೫), ಅಸಗ(೯೫೦), ಕನ್ನಮ(೯೭೫), ಎರಡನೆಯ ಅಸಗ(೧೦೦೦), ರಾಜ(೧೦೨೫) ಮತ್ತು ಬಿಜ್ಜಳ(೧೮೯೭) ಆರಂಭದಲ್ಲಿ ಆಳಿದ್ದರು. ಬಿಜ್ಜಳನು ಮಹಾಮಂಡಳೇಶ್ವರನಾಗಿದ್ದು ಮಂಗಲವೆಡ್ಡ ಪ್ರಾಂತ್ಯ ಆಳುತ್ತಿದ್ದನು. ಈತನ ಮಗ

ಎರಡನೆಯ ಕೃಷ್ಣ ಅಥವಾ ಕನ್ನಮ ಈತನ ನಂತರ ಆಳ್ವಿಕೆ ಮಾಡಿದನು. ನಂತರ ಜೋಗಮನಾಳಿದನು. ಪೆರ್ಮಾಡಿಯ ನಂತರ ಎರಡನೆಯ ಬಿಜ್ಜಳ ಅಧಿಕಾರಕ್ಕೆ ಬಂದನು. ಕ್ರಿ.ಶ. ೧೧೮೪ರ ಶಾಸನದ ಪ್ರಕಾರ, ಕಲಚೂರಿಯ ಕೊನೆಯ ದೊರೆ ಸಂಕಮನನ್ನು ಚಾಲುಕ್ಯ ದೊರೆ ಸೋಮೇಶ್ವರನು ಕೊಂದು ಚಾಲುಕ್ಯ ರಾಜ್ಯ ಪುನಃ ಸ್ಥಾಪಿಸಿದನು.[೨೨] ಕ್ರಿ.ಶ. ೧೧೭೨ರ ಹರಸೂರಿನ ಶಾಸನದಲ್ಲಿ ಕಲಚೂರಿ ವಂಶದ ಮೂಲ ಪುರುಷ ಉಚಿತನ ಉಲ್ಲೇಖವಿದೆ. ಇದು ಕಲಚೂರಿ ವಂಶದ ಮೂಲ ಪುರುಷನ ನಾಮೋಲ್ಲೇಖವನ್ನು ಮಾಡುವ ಪ್ರಪ್ರಥಮ ಶಾಸನವಾಗಿದೆ. ಉಚಿತ, ಅಸಗ, ಕನ್ನಮ, ಇವನ ಇಬ್ಬರು ಮೊಮ್ಮಕ್ಕಳು ರಾಜ ಮತ್ತು ಬಿಜ್ಜಳರು, ಕರ್ಣ, ಜೋಗಮ, ಪೆರ್ಮಾಡಿಗಳು ಆಳಿದರು. ಪೆರ್ಮಾಡಿಯ ಮಗ ಬಿಜ್ಜಳ ಈ ವಂಶದ ಪ್ರಸಿದ್ಧ ಅರಸ ಮತ್ತು ಈತನ ಮಗ ರಾಯಮುರಾರಿ ಸೋವಿದೇವನ ಆಳ್ವಿಕೆಯ ಬಗ್ಗೆ ಹರಸೂರು ಶಾಸನ ತಿಳಿಸುತ್ತದೆ. ಸೊವಿದೇವನ ಉಪರಾಜಧಾನಿ ಅಥವಾ ನೆಲೆವೀಡು ಮೊದೆಗನೂರು ಆಗಿತ್ತೆಂದು ಉಲ್ಲೇಖಿಸಿದೆ.[೨೩]

ಯಾದವರು

ಕಳಚೂರಿಗಳ ನಂತರ ಬಂದ ಯಾದವರು ಗುಲಬರ್ಗಾ ಜಿಲ್ಲೆಯ ಪ್ರದೇಶದಲ್ಲಿ ಆಳಿದ ಬಗ್ಗೆ ಮಾಹಿತಿ ದೊರಕುತ್ತದೆ. ಚಿನಮಳ್ಳಿ ಶಾಸನದಲ್ಲಿ ರಾಮಚಂದ್ರನ ಆಳ್ವಿಕೆ ಕಾಲದಲಿದ್ದೀತನ ಸಾಮಂತರಲ್ಲಿ ಒಬ್ಬನಾಗಿದ್ದನು. ಶಿಲಾಹಾರ ಮನೆತನದ ವಿಜಯಪುರದ ಮಹಾಮಂಡಲೇಶ್ವರ ಮಾಯರಾಣಿ ಅಲ್ಲಿನ ಮಲ್ಲಿಕಾರ್ಜುನ ದೇವರಿಗೆ ದತ್ತಿ ಬಿಟ್ಟ ಉಲ್ಲೇಖವಿದೆ. ಈ ಶಾಸನದಲ್ಲಿ ಯಾದವ ಚಕ್ರವರ್ತಿಗಳು ಕಳಚೂರಿ ರಾಯರ ಬಿರುದು, ಬಾವಲಿಗಳನ್ನು ಧರಿಸಿರುವುದು ಪ್ರಮುಖ ಅಂಶವಾಗಿದೆ.[೨೪]

೨.೨.೫. ಸಾಮಂತ ರಾಜಮನೆತನಗಳು

ಶಿಲಾಹಾರರು

ಗುಲಬರ್ಗಾ ಜಿಲ್ಲೆಯ ಚಿನಮಳ್ಳಿ ಶಾಸನದಲ್ಲಿ ಧನಸಂಗ್ರಹರಸನೆಂಬ ಶಿಲಾಹಾರ ಶ್ರೀಮಂತನೊಬ್ಬ ಅತ್ತಿನೂರು-೮೦, ಕಂಪಣವಾಡವನ್ನಾಳುತ್ತಿದ್ದ ಬಗ್ಗೆ ಉಲ್ಲೇಖಿಸಲಾಗಿದೆ. ಕೋಪಣ ಪುರವರಾಧೀಶ್ವರವೆಂಬ ಅಭಿದಾನ ಇಲ್ಲಿನ ಮಹಾಮಂಡಲೇಶ್ವರ ಧನ ಸಂಗ್ರಹರಸನಿಗಿರುವುದು. ಚಿನಮಳ್ಳಿಯ ಮಲ್ಲಿಕಾರ್ಜುನ ದೇವಾಲಯದ ಸ್ಥಾನಾಚಾರ್ಯನಾದ ಶಿವ ದೇವಯ್ಯನಿಗೆ ಕೆಲವು ದತ್ತಿಗಳನ್ನು ಬಿಟ್ಟಿದ್ದನು. ಈತನು ಶೀವೋಪಾಸಕನಾಗಿದ್ದನೆಂದು ಊಹಿಸಬಹುದು. ಚಿನಮಳ್ಳಿಯ ಮತ್ತೊಂದು ಶಾಸನದಲ್ಲಿ 'ಮಾಯಿದೇವರಾಣಿ' ಎಂಬವನೂ ಸಹ ವಿಜಾಪುರ ಶಾಖೆಯ ಶಿಲಾಹಾರ ಮನೆತನದ ಸಾಮಂತನಾಗಿದ್ದನೆಂದು ತಿಳಿದುಬರುತ್ತದೆ. ಬೊಪ್ಪದೇವ ಎಂಬ ಮತ್ತೊಬ್ಬ ಶಿಲಾಹಾರ ಸಾಮಂತನ ಉಲ್ಲೇಖವಿದೆ.[೨೫]

ಹೈಹಯರು

ಕ್ರಿ.ಶ. ೧೧೧೮ರ ಚಾಲುಕ್ಯ ಆರನೆಯ ವಿಕ್ರಮಾದಿತ್ಯ ಮತ್ತು ಮೂರನೆಯ ಸೋಮೇಶ್ವರರ ಆಳ್ವಿಕೆಯ ಕಾಲದ ಹಂದರಕಿ ಶಾಸನದಲ್ಲಿ ಇವರ ಉಲ್ಲೇಖವಿದೆ.[೩೬] ಹಂದರಕಿಯ ಲೋಕೇಶ್ವರ ದೇವಾಲಯ ನಿರ್ಮಿಸಿದವರು ಹೈಹಯ ವಂಶದವರಾಗಿದ್ದಾರೆ.[೩೭]

ಬಾಣರು

ಅಲಂದೆ ಸಾಸಿರದ ಗೋಂಕನಾಡು ನೂರಿಪ್ಪತ್ತರ ಅಧಿಕಾರಿಯಾಗಿದ್ದ ವೀರ ಗೊಂಕರಸನು ನೂರ್ಮಡಿ ತೈಲನ ಸಾಮಂತನಾಗಿದ್ದನು. 'ಕ್ರಿ.ಶ. ೧೧೬೨ರಲ್ಲಿ ಖಾಂಡವ ಮಂಡಲ'ಕ್ಕೆ ಒಡೆಯನಾಗಿದ್ದನು. ವೀರ ಗೊಂಕನ ರಾಜನೀತಿ ಮತ್ತು ವೀರ ಪರಾಕ್ರಮಗಳ ವರ್ಣನೆ ಗುಲಬರ್ಗಾ ಜಿಲ್ಲೆಯ ಮರ್ತೂರು, ಹುಣಸಿ ಹಡಗಲಿ, ಹೊಡಲು, ಹರಸೂರು ಶಾಸನಗಳಲ್ಲಿ ಬರುತ್ತದೆ. ಇವನು ಬಿಬ್ಬೇಶ್ವರ ದೇವಸ್ಥಾನ ನಿರ್ಮಿಸಿದ ಬಗ್ಗೆ ತೆಂಗಳಿ ಶಾಸನ ಉಲ್ಲೇಖಿಸುತ್ತದೆ. ಇವನು ಶಿವನ ಆರಾಧಕನಾಗಿದ್ದನು. 'ಕೋಪಣ ಪುರವರಾಧೀಶ್ವರ'ವೆಂಬುದು ಅವರ ಅಭಿದಾನಗಳಲ್ಲೊಂದಾಗಿತ್ತು.[೩೮]

೨.೩. ಆಡಳಿತ ವ್ಯವಸ್ಥೆ

ಈ ಪ್ರದೇಶದ ಒಟ್ಟಾರೆ ಆಡಳಿತವನ್ನು ಎರಡು ವಿಭಾಗದಲ್ಲಿ ವಿವರಿಸಲಾಗಿದೆ.

* ಪ್ರಾಚೀನ ಕಾಲದ ಆಡಳಿತ (ಹಿಂದೂಗಳ ಆಡಳಿತ)

  (ಕ್ರಿ.ಶ. ೨–೧೩ನೇ ಶತಮಾನ ಅಂತ್ಯದವರೆಗೆ)

* ಮಧ್ಯಕಾಲೀನ ಆಡಳಿತ (ಮುಸಲ್ಮಾನರ ಆಡಳಿತ)

  (ಕ್ರಿ.ಶ. ೧೪–೧೮ನೇ ಶತಮಾನ)

ರಾಜಕೀಯ ಸ್ಥಿತಿಗತಿ ತಿಳಿಸುವ ಇತ್ತೀಚಿನ ಕ್ರಿ.ಶ. ೯–೧೦ನೇ ಶತಮಾನದಿಂದೀಚೆಗೆ ಸಿಗುವ ಶಾಸನಗಳ ಆಧಾರವಾಗಿಟ್ಟುಕೊಂಡು ಆಗ ಪ್ರಚಲಿತದಲ್ಲಿದ್ದ ಆಡಳಿತ ಘಟಕಗಳ ಸ್ಥೂಲ ವಿವರಣೆ ನೀಡುವ ಪ್ರಯತ್ನ ಮಾಡಲಾಗಿದೆ. ಯಾವ ಒಬ್ಬ ರಾಜನು ತನ್ನ ಸಂಪೂರ್ಣ ರಾಜ್ಯವನ್ನು ತಾನೇ ಸ್ವತಃ ಆಳ್ವಿಕೆ ಮಾಡಲಾರನು ಮತ್ತು ಶಾಂತಿಯುತ ಕಲ್ಯಾಣರಾಜ್ಯ ಸ್ಥಾಪಿಸಲು ರಾಜನೊಬ್ಬನಿಂದಲೇ ಸಾಧ್ಯವಿಲ್ಲ. ಇದನ್ನರಿತ ರಾಜರು ತಮ್ಮ ರಾಜ್ಯವನ್ನು ಅವರ ನಿಯಂತ್ರಣದಲ್ಲಿ ಆಡಳಿತ ಘಟಕಗಳನ್ನಾಗಿ ವಿಭಾಗಿಸಿದರು. ವಿಭಾಗ, ಉಪವಿಭಾಗಗಳನ್ನಾಗಿ ವಿಂಗಡಿಸಿ ಅವುಗಳಿಗೆ ರಾಜನು ಅಧಿಕಾರಿಗಳನ್ನು ನೇಮಿಸುತ್ತಿದ್ದನು.[೩೯]

ಹೀಗೆ ಪ್ರಾಚೀನ ಕಾಲದಲ್ಲಿ ಇಂಥ ವಿಭಾಗಗಳನ್ನು ಆಹಾರ, ಮಂಡಲ, ಭುಕ್ತಿ, ವಿಷಯ, ದೇಶ ಎಂದು ಮುಂತಾಗಿ ಕರೆಯಲಾಗುತ್ತಿತ್ತು. ಉತ್ತರ ಕರ್ನಾಟಕದಲ್ಲಿ ಆಳಿದ ಮೌರ್ಯರು, ಶಾತವಾಹನರು, ಪಲ್ಲವ, ಚಾಲುಕ್ಯ, ರಾಷ್ಟ್ರಕೂಟ ಹಾಗೂ ಕಲ್ಯಾಣ ಚಾಲುಕ್ಯರ ಶಿಲಾಶಾಸನಗಳಲ್ಲಿ

ಆಹಾರ, ಮಂಡಲ, ಭುಕ್ತಿ, ವಿಷಯ, ದೇಶಗಳೊಂದಿಗೆ ನಾಡು, ಕಂಪಣ ಎಂಬ ಘಟಕ ಸೂಚಕ ಹೆಸರುಗಳು ಕಂಡುಬರುತ್ತವೆ.[೪೦]

೨.೩.೧. ಆಡಳಿತ ಘಟಕಗಳು

೧. ವಿಭಾಗ – ಮನ್ನೆದಡಿ ನಾಡು–೧೦೦೦

೨. ಉಪವಿಭಾಗ – ನೂರುಂಬಾಡು

೩. ರಾಜಧಾನಿ – ಕಾಳುಗೆ

೪. ಕಂಪಣಗಳು – ತೆಂಗುಳಿ–೭೦, ಮನ್ನೆ–೩೦, ಬೆರಣಿ–೫೦೦

೫. ಗ್ರಾಮಗಳು ಮತ್ತು ಅಗ್ರಹಾರಗಳು

ಹೀಗೆ ಆಡಳಿತ ಘಟಕಗಳಾಗಿ ಮನ್ನೆದಡಿ ನಾಡು–೧೦೦೦ವನ್ನು ಈ ರೀತಿ ಆಳ್ವಿಕೆ ಮಾಡಲಾಗುತ್ತಿತ್ತು. ಸು. ೨–೩ನೆಯ ಶತಮಾನದಲ್ಲಿ ಶಾತವಾಹನರು ಈ ಭಾಗದಲ್ಲಿ ಆಳ್ವಿಕೆ ಮಾಡಿದರು. ಅನಂತರ ಅವರ ಮಹಾರಥಿ ಅಂದರೆ ಮಾಂಡಲೀಕರು ಆಳಿದರು(ಉದಾ. ಗೊಟ್ಟಂಗೊಟ್ಟಿಯ ಇಟ್ಟಿಗೆ ಕಟ್ಟಡ ಕುರುಹು).

ಕ್ರಿ.ಶ.೪–೫ನೆಯ ಶತಮಾನದಲ್ಲಿ ಈ ಭಾಗದಲ್ಲಿ ಆಳಿದ ವಿವರ ಮಾಹಿತಿಗೆ ನಾವು ಇನ್ನೂ ಹೆಚ್ಚಿನ ಅಧ್ಯಯನ ಕೈಗೊಳ್ಳಬೇಕಾಗಿದೆ. ಕ್ರಿ.ಶ.೬–೭ನೆಯ ಶತಮಾನದ ಅಂತ್ಯದಲ್ಲಿ ಬಾದಾಮಿ ಚಾಲುಕ್ಯರು ಕರ್ನಾಟಕವನ್ನು ಏಕೈಕ ಆಡಳಿತಕ್ಕೆ ಒಳಪಡಿಸಿದ್ದರು.[೪೧] ಕೇಶಾವರ್‌ದಲ್ಲಿ ಇವರ ಕಾಲದ ಪುರಾತತ್ವ ಕುರುಹುಗಳು ಸಾಕ್ಷಿಯಾಗಿವೆ.

ಈ ಪ್ರದೇಶವು ಚಾಲುಕ್ಯರಿಗೆ, ಗಂಗ, ಸೇಂದ್ರಕ, ಆಳುಪ, ಗುಜರಾತಿನ ಲಾಟ, ಆಂಧ್ರದ ಭೋಜ ಮತ್ತು ವೆಂಗಿಯ ಚಾಲುಕ್ಯರು, ಬಾಣರಸರು, ಭೋಜ ಹೀಗೆ ಅನೇಕ ಮಾಂಡಲೀಕ ಅರಸರ ಅಧೀನರಾಗಿದ್ದರು.[೪೨] ಮಹಾರಾಷ್ಟ್ರ, ರಾಷ್ಟ್ರ, ಮಂಡಲ, ವಿಷಯ, ಭೋಗ, ಗ್ರಾಮ ಮುಂತಾದ ಆಡಳಿತ ಘಟಕಗಳ ಪ್ರಸ್ತಾಪ ಚಾಲುಕ್ಯರ ಶಾಸನಗಳಲ್ಲಿ ಕಂಡುಬರುತ್ತವೆ.

ನಂತರ ಬಂದ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಮತ್ತು ಕಲಚೂರಿಗಳು ವಿಭಾಗ, ಉಪವಿಭಾಗ, ಕಂಪಣ, ನಾಳ್ಗಾವುಂಡ, ಗ್ರಾಮ, ಅಗ್ರಹಾರಗಳೆಂದು ವಿಭಾಗಿಸಿ ಆಳ್ವಿಕೆ ಮಾಡಿದರು. ಮನ್ನೆದಡಿ ಸಾಸಿರದಲ್ಲಿ ಚಿಂಚೋಳಿ ತಾಲೂಕಿನ ಭಾಗಗಳು, ಗುಲ್ಬರ್ಗಾ ಮತ್ತು ಚಿತ್ತಾಪುರ ತಾಲೂಕಿನ ಹಲವು ಪ್ರದೇಶಗಳು ಅಂತರ್ಗತವಾಗಿದ್ದವು. ಈ ವಿಸ್ತಾರವಾದ ಆಡಳಿತ ಘಟಕದಲ್ಲಿ ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲೂಕಿನ ಅನೇಕ ಗ್ರಾಮಗಳು ಹಾಗೂ ಇಂದಿನ ಆಂಧ್ರಪ್ರದೇಶದ ಮೆಹಬೂಬ್‌ನಗರ ಜಿಲ್ಲೆಯ ಕೆಲ ಗ್ರಾಮಗಳು ಸೇರ್ಪಡೆಯಾಗಿದ್ದವು. ನೂರುಂಬಾಡ ಎನ್ನುವ ಒಂದು ಉಪವಿಭಾಗ ಇದರಲ್ಲಿ ಅಂತರ್ಗತವಾಗಿದ್ದ ವಿವರ 'ಹಿಲಾಲಪುರ' ಶಾಸನದಿಂದ ತಿಳಿಯುತ್ತದೆ.[೪೩] ಅಲ್ಲದೆ ಘಟ್ಟ–೨೪ ಎಂಬುದು ನೂರುಂಬಾಡದ ಒಂದು ಒಳ ವಿಭಾಗವಾಗಿದ್ದ

ಸಂಗತಿ ಶಾಸನವೊಂದರಿಂದ ತಿಳಿದುಬರುತ್ತದೆ. ಮನ್ನೆದಡಿ ಸವಕಟ್ಟನುಜ್ಜಳಜೆ-೩೦ರ ಬಳಿಯ ಬಾಡ ಜವಳಿಗೆ ಎಂಬ ಉಲ್ಲೇಖ ರುದ್ರವಾಡಿ ಶಾಸನದಲ್ಲಿ ಬಂದಿದೆ.[೪೪] ಮನ್ನೆದಡಿ ಸಾಸಿರದ ರಾಜಧಾನಿ ಕಾಳುಗೆ ಎಂಬುದು ಕಾಳಗಿ (ಚಿತಾಪುರ ತಾಲೂಕು) ಶಾಸನದಿಂದ ತಿಳಿದುಬರುತ್ತದೆ. ತೆಂಗಳಿ-೭೦ ಎಂಬುದು ಮನ್ನೆದಡಿ ಸಾಸಿರದ ಭಾಗವೆಂದು ತೆಂಗುಳಿ ಶಾಸನದಿಂದ ತಿಳಿದುಬರುತ್ತದೆ.

ಬೆರಣಿ-೬೦೦

ಈ ವಿಭಾಗದಲ್ಲಿ ಚಿಂಚೋಳಿ ತಾಲೂಕಿನ ಹಲವು ಪ್ರದೇಶಗಳು ಇದ್ದವು. ಆಧಾರ ಶಿರೋಳ್ಳಿ ಶಾಸನ. ಇದರಲ್ಲಿ ಬೆರಣಿ-೫೦೦ರ ಸಿರವೊಳಿ ಅಗ್ರಹಾರ ಎಂಬುದಾಗಿದೆ. 'ಬೆರಣಿಯಯ್ನೂರರ ಬೈಲಬಾಡಂ ಸಿರಿವಳ್ಳಿಯ' ಎಂದು ಉಲ್ಲೇಖಿಸಿದೆ.

ಮನ್ನೆದಡಿ-೩೦೦

ರಾಣಿ ಮೈಳಲದೇವಿ ಆಳಿದ ಬಗ್ಗೆ ತೇಂಗಳಿ ಶಾಸನ ಉಲ್ಲೇಖಿಸುತ್ತದೆ.

ಅಧಿಕಾರಿಗಳ ಹೆಸರು

ಮಹಾಮಂಡಳೇಶ ಸೋವರಸ (ಶಿರೋಳ್ಳಿ ಶಾಸನ)

ವರಸೇನಾಧಿಪಟ್ಟಂ ಶ್ರೀ ಸೋಮೇಶ್ವರದೇವ

'ಮನ್ನೆದಡಿಯೊಡೆಯಂ ಗೊಂಕಲದೇವಮರು'

ಮನ್ನೆದಡಿ ಮಹಾಮಂಡಳೇಶ ಗೊಂಕದೇವಂ (ಮೋಘಾ ಶಾಸನ)

ವೆಸವಯ್ಯ-ದಂಡಾಧೀಶ *ವೆಸಪಯ್ಯ ದಂಡನಾಯಕ (ಮೋಘಾ ಶಾಸನ)

ಮಹಾದಂಡನಾಯಕ-ಬಮ್ಮನಾಯಕ (ದೇಗಲ್ಮಡಿ ಶಾಸನ).[೪೫]

೨.೩.೨. ಆಳಂದ ತಾಲೂಕಿನ ಶಾಸನೋಕ್ತ ಆಡಳಿತ ಘಟಕಗಳು

ಆಳಂದೆ ಸಾಸಿರ ಎಂದೇ ಹೆಸರಾಗಿರುವ ಆಳಂದ ಮತ್ತು ಸುತ್ತಲಿನ ಭೌಗೋಳಿಕ ಪ್ರದೇಶ ಕುಂತಲ ದೇಶ ಎಂಬ ಹೆಸರಿನಿಂದ ಕರೆಯುತ್ತಿದ್ದರು. ಆಳಂದೆ ಸಾಸಿರ ಎಂದು ತಿಳಿಸುವ ಶಾಸನಗಳೆಂದರೆ ಕ್ರಿ.ಶ. ೧೦೮೨ ಆಳಂದ ಶಾಸನ, ಕ್ರಿ.ಶ. ೧೧೩೪ರ ನಿಂಬರ್ಗಾ ಶಾಸನ, ಕ್ರಿ.ಶ. ೧೧೪೩ರ ಭೋದನ ಶಾಸನಗಳು.

ಆಳಂದ

ಪ್ರಾಚೀನ ಶಾಸನಗಳಲ್ಲಿ ಅಲನ್ದಾಪುರ, ಅಲಂದೆ ಎಂದು ಉಲ್ಲೇಖಿತವಾಗಿದೆ. ಹಿಂದೆ ಸಾವಿರ ಹಳ್ಳಿಗಳ ಆಡಳಿತ ಕೇಂದ್ರವಾಗಿದ್ದು ಪ್ರಮುಖ ವ್ಯಾಪಾರಿ ಕೇಂದ್ರವೂ ಆಗಿತ್ತು.[೪೬]

ಕಡಗಂಚಿ

ಪ್ರಾಚೀನ ಶಾಸನಗಳಲ್ಲಿ ಕಡಗಂಚಿ ಎಂದು ಉಲ್ಲೇಖಿತವಾಗಿದೆ. ೧೨ನೆಯ ಶತಮಾನದ ಒಂದು ಶಾಸನ ವರದಿಯಾಗಿದೆ. ಇದು ಅಂಕುಲಗೆ ಕೋಟೆಯ ಭಾಸ್ಕರ ಭಟ್ಟರು ದೇವಾಲಯವೊಂದಕ್ಕೆ ಭೂದಾನ ಕೊಟ್ಟ ಅಂಶ ಅಸ್ಪಷ್ಟವಾಗಿ ಕಡಗಂಚಿ ಶಾಸನ ತಿಳಿಸುತ್ತದೆ.

ಗುಲ್ಬರ್ಗಾದ ೧೧೧೭ರ ಶಾಸನವು ಕಡಗಂಚಿಯಲ್ಲಿ ಗೋವಿಂದಜೀಯರು ನಿರ್ಮಿಸಿದ ಮಲ್ಲಿಕಾರ್ಜುನ ದೇವಾಲಯದ ಪೂಜಾ ವಿಧಿಗೆಂದು ಮಹಾಮಂಡಳೇಶ್ವರ ಹೆಮ್ಮಾಡಿಯರಸ, ಕಡಗಂಚಿಯ ಪ್ರಭು ಕೇಶಿಮರಸ ದಾನ ನೀಡಿದ ಉಲ್ಲೇಖವಿದೆ.[೪೭]

ತಡಕಲ್ಲು

ಪ್ರಾಚೀನ ಶಾಸನಗಳಲ್ಲಿ ಪಿರಿಯ ತಡಕಲ್ ಎಂದು ಉಲ್ಲೇಖಿತಗೊಂಡಿದೆ. ನಾಲ್ಕು ಶಾಸನಗಳು ವರದಿಯಾಗಿವೆ. ಬಡಿಗೇರ ಓಣಿಯಲ್ಲಿರುವ ಸು. ೧೨ನೆಯ ಶತಮಾನದಲ್ಲಿ ಪಿರಿಯ ತಡಕಲ್‌ನಲ್ಲಿರುವ ಶಾಸನವು ಅಮೋಘವರ್ಷ ನೃಪತುಂಗ ಹಾಗೂ ರಾಜಧಾನಿ ಮಾನ್ಯಖೇಡಪುರದ ಉಲ್ಲೇಖ ನೀಡುತ್ತದೆ. ಇಲ್ಲಿಯ ಬಳ್ಳೇಶ್ವರ ದೇವರ್ಗೆ, ಪೂಜಾರಿಗೆ ಹಾಗೂ ಗುಡಿಯಲ್ಲಿ ಹಾಡುವವರಿಗೆ ಮತ್ತು ನೃತ್ಯ ಸೇವೆಗೆಂದು ದಾನ ಕೊಟ್ಟ ವಿಷಯ ತಿಳಿಸುತ್ತದೆ.[೪೮]

ಧುತ್ತರಗಾಂವ್

ಪ್ರಾಚೀನ ಶಾಸನಗಳಲ್ಲಿ ಧುತ್ತರಗಾಂವ್ ಎಂದು ಉಲ್ಲೇಖಿತವಾಗಿದ್ದು, ಇದೊಂದು ಅಗ್ರಹಾರವಾಗಿತ್ತು. ಊರಲ್ಲಿರುವ ಭೋಗಲಿಂಗೇಶ್ವರ ಗುಡಿ ಮುಂದೆ ಒಂದು ಶಾಸನ ಕಲ್ಯಾಣ ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿದೆ. ೧೧೦೯ರಲ್ಲಿ ಆತನ ಹಿರಿಯರಾಣಿಯರಾದ ಅಚಲದೇವಿಯ ಸರ್ವನಮಸ್ಯದಗ್ರಹಾರ ದುತ್ತಿರಗಾವೆಯಲ್ಲಿ ಭೋಗಲಿಂಗೇಶ್ವರ ಗುಡಿ ನಿರ್ಮಿಸಿದೆ ಎಂಬ ಉಲ್ಲೇಖ ಶಾಸನದಲ್ಲಿದೆ.[೪೯]

ನರೋಣ

ಪ್ರಾಚೀನ ಶಾಸನಗಳಲ್ಲಿ ನರವಣಿ ಎಂದು ಉಲ್ಲೇಖಿತಗೊಂಡಿರುವ ಇದು ಹಿಂದೆ ೧೨ ಹಳ್ಳಿಗಳ ಆಡಳಿತ ಕೇಂದ್ರವಾಗಿತ್ತು. ಅಲಂದೆ ಸಾಸಿರಕ್ಕೆ ಸೇರಿದ ಗೋಂಕ-೧೨೦ಕ್ಕೆ ಒಳಪಟ್ಟ ಕಂಪಣವಾಗಿತ್ತೆಂಬ ಅಂಶ ಬೋಧನದಲ್ಲಿರುವ ೧೧೪೨ರ ಶಿಲಾಶಾಸನದಿಂದ ಗೊತ್ತಾಗುತ್ತದೆ.[೫೦]

ಪಡಸಾವಳಗಿ- ಪ್ರಾಚೀನ ಶಾಸನಗಳಲ್ಲಿ ಪಟ್ಟಸಾವಳಿಗೆ ಎಂದು ಉಲ್ಲೇಖಿತವಾಗಿದೆ. ಕಲ್ಲೇಶ್ವರ ಗುಡಿಯ ಮುಂದಿದೆ. ಪಡಸಾವಳಗಿಯ ಶಾಸನವು ೧೧೧೦ರಲ್ಲಿ ವಿವಿಧ ಅಧಿಕಾರಿಗಳು ಪಟ್ಟಸಾವಳಿಗೆಯ ಕಲಿದೇವೇಶ್ವರ, ಸಿಂಗೇಶ್ವರ ಹಾಗೂ ಸೋಮೇಶ್ವರ ದೇವರುಗಳಿಗೆ ದಾನ ಬಿಟ್ಟ ವಿಷಯವನ್ನು ದಾಖಲಿಸಿವೆ.[೫೧]

ಬೋಧನ

ಪ್ರಾಚೀನ ಶಾಸನಗಳಲ್ಲಿ ಪಿರಿಯ ಬೋಧನ ಎಂದೇ ಉಲ್ಲೇಖಿತವಾಗಿರುವ ಇದು ಕಲ್ಯಾಣ ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ರಾಣಿ ಮಲೆಯಮತಿ ದೇವಿಯ ಕಾಲದಲ್ಲಿ ಸರಸ್ವತಿಪುರವಾಗಿತ್ತು. ಹಿಂದೆ ಅಲಂದೆ ಸಾಸಿರಕ್ಕೆ ಸೇರಿದ ಗೊಂಕ-೧೨೦ರ ಕಂಪಣ ನರವಣಿ-೧೨ರೊಳಗಿತ್ತು. ಒಂದು ಶಿಲಾಶಾಸನ ದೊರಕಿದೆ.[೫೨]

ಅಫ್ಜಲ್‌ಪುರ

ಅತ್ತನೂರು-೮೦ರ ಪ್ರದೇಶ ತರ್ದವಾಡಿ ಸೀಮೆಗೆ ಸಮೀಪವಿತ್ತು. ಆದರೂ ಅಲಂದೆ ಸಾಸಿರದ ಪ್ರಭುತ್ವಕ್ಕೆ ಒಳಪಟ್ಟಿತ್ತು. ಅತ್ತನೂರು ಪ್ರಸ್ತುತ ಅಫಜಲ್‌ಪುರ ತಾಲೂಕಿನಲ್ಲಿದೆ. ಶಾಸನಗಳಲ್ಲಿ ಇದಕ್ಕೆ ಹಸ್ತಿನಾಪೂರ ಎಂದು ವರ್ಣಿಸಿದೆ. ಅತ್ತನೂರು ೮೦ರ ಪ್ರದೇಶದಲ್ಲಿ ಶಿಲಾಹಾರ ಶಾಖೆಯ ಕೆಲವು ಮಂಡಲಾಧಿಕಾರಿಗಳು ರಾಜ್ಯಭಾರ ಮಾಡಿದ್ದರು. ಚಿನಮಳ್ಳಿ, ಮಣೂರು-೧೨ ಅಗ್ರಹಾರವೂ ಇದರಲ್ಲಿ ವಿಲೀನವಾಗಿತ್ತು.[೫೩]

೨.೩.೩. ಅಫಜಲ್ಪುರ ತಾಲೂಕಿನ ಶಾಸನೋಕ್ತ ಆಡಳಿತ ಘಟಕಗಳು

ಅತ್ತಿನೂರು ಎಂಬತ್ತಕ್ಕೆ ಸೇರಿದ ಪ್ರದೇಶಗಳು-ಬಂದರವಾಡ ಬೊನ್ದರವಾಡ, ಸರ್ವನಮಸ್ಯದ ಅಗ್ರಹಾರ ಬೊಂದರವಾಡ ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.[೫೪] ಹಸಿರುಗುಂಡಿಗೆ[೫೫], ದೇವರ ಗಾಣಗಾಪುರ-ಬಂದರವಾಡ ೧೧೭೪ರ ಶಾಸನದಲ್ಲಿ ಗಾಣಗಾಪುರ ಎಂದಿದೆ.[೫೬] ಆತನೂರು-ಅಲಂದೆ-೧೦೦೦ಕ್ಕೆ ಸೇರಿದ ಕಂಪಣವಾಗಿದೆ. ಎಂಭತ್ತು ಹಳ್ಳಿಗಳ ಆಡಳಿತ ಕೇಂದ್ರವಾಗಿತ್ತು.[೫೭] ಚಿಣಮಗೇರಿ-ಚಿಣಮಗೇರಿ ಎಂದು ಬಂದರವಾಡ ಕ್ರಿ.ಶ. ೧೧೭೪ರ ಶಾಸನದಲ್ಲಿ ಉಲ್ಲೇಖವಾಗಿದೆ. ಅಲಂದೆ ಸಾಸಿರದ ಆತನೂರು ಎಂಬತ್ತಕ್ಕೆ ಸೇರಿತ್ತು.[೫೮] ಚಿನಮಳ್ಳಿ-ಪ್ರಾಚೀನ ಶಾಸನಗಳಲ್ಲಿ ಚಿಲ್ಲಮಳೆ, ಚಿಲ್ಲಮೇಳೆ ಎಂದೆ ಉಲ್ಲೇಖಗೊಂಡಿದೆ. 'ಅತ್ತಿನೂರು ಎಂಬತ್ತ'ಕ್ಕೆ ಸೇರಿತ್ತು.[೫೯]

ಮಣಿಯೂರು-೧೨ ಅಳಂದೆ ಸಾಸಿರಕ್ಕೆ ಸೇರಿದ ಅಣಂದೂರ-೩೦೦ರ ಕಂಪಣವಾಗಿತ್ತು. ೧೨ ಹಳ್ಳಿಗಳ ಆಡಳಿತ ಕೇಂದ್ರವಾಗಿ ಪ್ರಾಮುಖ್ಯತೆ ಪಡೆದಿತ್ತು.[೬೦] ಮಾಶಾಳ- ಮಾಸಿವಾಳ ಎಂದು ಉಲ್ಲೇಖಿತ ಊರು ಅಲಂದೆ ಸಾಸಿರಕ್ಕೆ ಒಳಪಟ್ಟಿತ್ತು. ಅಣಂದೂರು-ಮುನ್ನೂರಕ್ಕೆ ಸೇರಿದ ಮಾಶಾಳ ಅಗ್ರಹಾರವಾಗಿತ್ತು.[೬೧] ಕರ್ಜಗಿ-'ಸಾಯಬ್ಬೆಯ ಕರಂಜಿಗೆ' ಎಂದು ಉಲ್ಲೇಖಿತವಾಗಿದೆ. ಅಲಂದೆ ಸಾಸಿರದ ಮಹಾಮಣಿಯೂರು-೧೨ ಕಂಪಣಕ್ಕೆ ಸೇರಿದೆ.[೬೨] ಗೊಬ್ಬೂರು(ಬಿ)-ಶಾಸನಗಳಲ್ಲಿ ಸಂತೆಯ ಗೊಬ್ಬೂರು ಎಂದು ಉಲ್ಲೇಖಿಸಿದೆ. ಅಲಂದೆ ಸಾಸಿರದ ಗೊಂಕ ನಾಡೊಳಗಿತ್ತು.[೬೩]

೨.೪. ಪ್ರಾಚೀನ ಆಡಳಿತ ವ್ಯವಸ್ಥೆ

ತರ್ದವಾಡಿ ೧೦೦೦ದಲ್ಲಿ ಗುಲಬರ್ಗಾ ಜಿಲ್ಲೆಯು ಆಳ್ವಿಕೆಗೆ ಒಳಪಟ್ಟಿತ್ತು. ಚಿನಮಳ್ಳಿ ಶಾಸನದಲ್ಲಿ 'ಧರಣಿ ಕಾಂತೆಯ ಕುಂತಳಮಿದೆನಿಸಿ ಕುಂತಳ ದೇಸಂ ರಂಜಿಸುದ್ದಾಗಿ' ಹೇಳಿದೆ. ಹರಸೂರಿನ ಸಂಸ್ಕೃತ ಶಾಸನದಲ್ಲಿ ಕಳಚೂರಿಯ ಬಿಜ್ಜಳನನ್ನು 'ಕುಂತಲ ಚಕ್ರವರ್ತಿ' ಎಂದು ವಿಶ್ಲೇಷಿಸಿದೆ. ಕುಂತಳ ದೇಶದಲ್ಲಿ ವಿಖ್ಯಾತವಾದ ಕಲಬುರಗಿ ಜಿಲ್ಲೆಯ ಅಂದಿನ ಪ್ರಮುಖ ನಾಡುಗಳೆಂದರೆ ಅಲಂದೆ ಸಾಸಿರ ನಾಡು, ಅರಲು ಮುನ್ನೂರರ ಪ್ರದೇಶ, ಸಗರ ಐನೂರು, ಮನ್ನೆಯದಡಿ ನಾಡು, ಹಗರಟಗೆ ೩೦೦ ನಾಡು.[೬೪]

ಅಲಂದೆ ಸಾಸಿರದ ಕಂಪಣಗಳು- ಮಣಿಯೂರು-೧೨, ಅರಲು-೩೦ರ ರಾಜಧಾನಿ ಅರುಲೂರು (ಖಾಂಡವ ಮಂಡಲ). ಇದು ಹೆಚ್ಚಾಗಿ ಚಿತ್ತಾಪುರದ ಬಹುಭಾಗ ಮತ್ತು ಸೇಡಂ ಕೆಲಭಾಗ ಒಳಗೊಂಡಿತ್ತು. ಮನ್ನೆಯದಡಿ ನಾಡು ೧೦೦೦ದ ರಾಜಧಾನಿ ಕಾಳಗಿಯಾಗಿತ್ತು. ತೆಂಗಳಿ ೭೦, ಮನ್ನೆ ೩೦ರಂತೆ ಕಂಪಣಗಳಿದ್ದವು.[೬೫]

ರಾಜಪರಿವಾರದವರು, ಸಾಮಂತರು, ಮಹಾಮಂಡಳೇಶ್ವರರು ಆಳುತ್ತಿದ್ದರು. ಪಿರಿಯರಸಿ, ರಾಣಿಯರು ಮತ್ತು ರಾಜಕುಮಾರರ ಆಳ್ವಿಕೆ ಮಾಡುತ್ತಿದ್ದರು. ಆಳಂದ ಸಾಸಿರವನ್ನು ವಿಕ್ರಮಾದಿತ್ಯನ ರಾಣಿ ಚಂದಲದೇವಿ ಆಳುತ್ತಿದ್ದಳು. ಸಾಮಂತರ ಆಳ್ವಿಕೆ ವಂಶ ಪಾರಂಪರ್ಯವಾಗಿತ್ತು. ಗೊಂಕನಾಡು ಬಾಣ ವಂಶದವರು, ಸಾಗರ ನಾಡನ್ನು ಹೈಹಯ ವಂಶದವರು ಆಳುತ್ತಿದ್ದರು. ಹೆಚ್ಚಾಗಿ ಅಗ್ರಹಾರದ ಆಳ್ವಿಕೆ ಮಹಾಜನರಿಂದ ನಡೆಯುತ್ತಿತ್ತು. ಕೆಲವೊಮ್ಮೆ ರಾಜ ಪರಿವಾರದವರು ಆಳಿದ ಉದಾಹರಣೆಗಳಿವೆ. ಇಂಗುಣಿಗೆ ಅಗ್ರಹಾರವನ್ನು ವಿಕ್ರಮಾದಿತ್ಯನ ರಾಣಿ ಜಾಕಲದೇವಿ, ದಿಗ್ಗಾವಿ ಅಗ್ರಹಾರವನ್ನು ಆರನೆಯ ವಿಕ್ರಮಾದಿತ್ಯನ ಮಹಾಮಂಡಲೇಶ್ವರ ಲೋಕರಸನ ಪಿರಿಯರಸಿ ಮಲಯವತಿ ಆಳಿದರು. ಹಳ್ಳಿಗಳ ಆಡಳಿತ ಗಾವುಂಡ ಪೆರ್ಗ್ಗಡೆಯರು ನೋಡಿಕೊಳ್ಳುತ್ತಿದ್ದರು. ಇವರಿಗೆ ಶಾಸನಗಳಲ್ಲಿ ಪ್ರಭುಗಳೆಂದು ಕರೆಯಲಾಗಿದೆ. ನಾಡ ಗಾವುಂಡರು-೩೦೦ಹಳ್ಳಿ ಮತ್ತು ೬೦೦ರ ಗುಂಪು ಧರ್ಮ ಮಹಾರಾಜರು ಆಳುತ್ತಿದ್ದರು.[೬೬]

ಪ್ರಾಚೀನ ಆಡಳಿತ ಘಟಕಗಳು

ಅಲಂದೆ ಸಾಸಿರದ ನಾಡು- ಕಲಬುರ್ಗಿ ಜಿಲ್ಲೆಯ ಅತಿ ದೊಡ್ಡ ವಿಭಾಗವಾಗಿದ್ದು, ಒಂದು ಸಾವಿರ ಹಳ್ಳಿಗಳ ಪ್ರಭುತ್ವವು ಪಡೆದಿತ್ತು. ನಿಂಬರಗಿ ಶಾಸನ ಇದನ್ನು 'ನಾಡುಗಳರಸ' ಎಂದು ವಿಶ್ಲೇಷಿಸಿದೆ. ಅಲಂದೆ ಸಾಸಿರ ನಾಡಿನಲ್ಲಿ 'ಗೊಂಕನಾಡು ನೂರಿಪ್ಪತ್ತು ಮತ್ತು ಅತ್ತನೂರು ಎಂಬತ್ತು' ಎಂಬ ಮತ್ತೆರಡು ಉಪ ವಿಭಾಗಗಳಿದ್ದವು.[೬೭]

ಗೊಂಕನಾಡು

ಚಿತ್ತಾಪುರ ತಾಲೂಕಿನ ಮರ್ತೂರು, ತೆಂಗಳಿ, ಕಿರಣಗಿ ಹಳ್ಳಿಗಳನ್ನು ಒಳಗೊಂಡಿತ್ತು. ಖಾಂಡವ ಮಂಡಲವೆಂದು ಪುರಾಣ ಕಾಲದಿಂದ ಪ್ರಸಿದ್ಧವಾಗಿತ್ತು. ಇದು ಕಲಬುರ್ಗಿಯ ಪಶ್ಚಿಮದಲ್ಲಿ ಹುಣಸಿ ಹಡಗಲಿಯವರೆಗೆ ವ್ಯಾಪಿಸಿತ್ತು. ಉತ್ತರಕ್ಕೆ ಆಳಂದ ತಾಲೂಕಿನ ಹೊಡಲು ಇದರ ಮೇರೆಯಾಗಿತ್ತು. ಚಿಂಚೋಳಿ ತಾಲೂಕಿನ ಹರಸೂರು ಸಹ ಇದರಲ್ಲಿತ್ತು. ತೆಂಗಳಿ ಶಾಸನ ಪ್ರಕಾರ ಬಾಣ ವಂಶಜರ ಆಳ್ವಿಕೆಯಿತ್ತು. ಕ್ರಿ.ಶ. ೧೧೭೨ರಲ್ಲಿ ದೊರೆತ ಹರಸೂರ ಶಾಸನದಲ್ಲಿ ಮಾಧವ ಮಂತ್ರಿಯೆಂಬುವನು ಗೊಂಕನೂರಿಪ್ಪತ್ತರ ಪ್ರದೇಶವನ್ನು ಆಳುತ್ತಿದ್ದನು. ಅಲಂದೆಯ ಒಂದು ಶಾಸನದ ಪ್ರಕಾರ ಯುವರಾಜ ಮಲ್ಲಿಕಾರ್ಜುನನನ್ನು ಅಲಂದೆ ಸಾಸಿರದ ಮೊರಂಬ-೮೪ರ ಭಾಗವನ್ನು ಕುಮಾರ ವೃತ್ತಿಯಿಂದ ಆಳುತ್ತಿದ್ದ ಉಲ್ಲೇಖವಿದೆ.[೬೮]

ಅತ್ತನೂರು ೮೦ರ ಪ್ರದೇಶ ತರ್ದವಾಡಿ ನಾಡಿನ ಸೀಮೆಗೆ ಸಮೀಪವಿದ್ದು, ಇದು ಅಲಂದೆ ಸಾಸಿರದ ಪ್ರಭುತ್ವಕ್ಕೆ ಒಳಪಟ್ಟಿತ್ತು. ಶಿಲಾಹಾರ ಶಾಖೆಯ ಮಂಡಲಾಧಿಕಾರಿಗಳಿಂದ

ಆಳಲ್ಪಡುತ್ತಿತ್ತು. ಮಣಿಯೂರು–ಮಣೂರು೧೨ರ ಅಗ್ರಹಾರ ಇದರಲ್ಲಿತ್ತು ಎಂಬುದು ತ್ರಿಭುವನ ಮಲ್ಲ ಆರನೆಯ ವಿಕ್ರಮಾದಿತ್ಯನ ಕಾಲದ ಒಂದು ಶಾಸನದಿಂದ ತಿಳಿದುಬರುತ್ತದೆ. ಇದರಲ್ಲಿ ಗುಲಬರ್ಗಾ, ಅಫಜಲ್‌ಪುರ, ಆಳಂದ ಮತ್ತು ಚಿತ್ತಾಪುರದ ಕೆಲಭಾಗ, ಚಿಂಚೋಳಿಯ ಪಶ್ಚಿಮದ ಮೇರೆ ಒಳಗೊಂಡಿತ್ತು.[೧೯]

ಅರಲು ಮುನ್ನೂರು

ಅರಲೂರು >ಅರಲು–ಅರಲು ಎಂದು ಮಾರ್ಪಾಡಾಗಿದೆ. 'ಪಂದರ್ಕೆ' ಅಥವಾ ಹಂದರಕಿ ಶಾಸನದಲ್ಲಿ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ (ಕ್ರಿ.ಶ.೧೧೧೮), ಮಹಾಮಂಡಳೇಶ್ವರ ಲೋಕರಸನು ಅರಲು ಮುನ್ನೂರು ಆಳುತ್ತಿದ್ದ ಉಲ್ಲೇಖವಿದೆ.[೨೦]

ಮನ್ನೆಯದಡಿ ಸಾಸಿರನಾಡು

ಬಾಣ ವಂಶದ ವೀರಗೊಂಕನು ಕ್ರಿ.ಶ.೧೨೦೦ರಲ್ಲಿ ಆಳುತ್ತಿದ್ದ ಬಗ್ಗೆ ಕಾಳಗಿ ಶಾಸನ ಉಲ್ಲೇಖಿಸಿದೆ.[೨೧] ಮನ್ನೆಯದಡಿ ನಾಡು ೧೦೦೦–ವಿಭಾಗದ ಉಪವಿಭಾಗ ನೂರುಂಬಾಡು ಇದರ ರಾಜಧಾನಿ–ಕಾಳುಗೆ, ಕಂಪಣಗಳು–ತೆಂಗುಳಿ–೭೦, ಮನ್ನೆ–೩೦, ಬೆರಣಿ–೫೦೦, ಶಿರೋಳ್ಳಿ ಶಾಸನದಲ್ಲಿ 'ಬೆರಣಿಯಯ್ನೂರರ ಬೈಲಬಾಡಂ ಸಿರವಳ್ಳಿಯ' ಎಂದು ಉಲ್ಲೇಖವಿದೆ.

ಶಿರೋಳ್ಳಿ ಶಾಸನ– 'ಮಹಾಮಂಡಳೇಶ ಸೋವರಸ ವರಸೇನಾಧಿಪಟ್ಟಂ ಶ್ರೀಸೋಮೇಶ್ವರದೇವ ಮನ್ನೆದಡಿಯೊಡೆಯಂ ಗೊಂಕಲದೇವಮರು' ಎಂದು, ಮನ್ನೆದಡಿ ಮಹಾಮಂಡಳೇಶ ಗೊಂಕದೇವಂ ಎಂದು ಶಾಸನ ಉಲ್ಲೇಖಿಸಿದೆ. ವೆಸವಯ್ಯ–ದಂಡಾಧೀಶ, ವೆಸಪಯ್ಯ ದಂಡನಾಯಕ ಮತ್ತು ಮಹಾದಂಡನಾಯಕ–ಬಮ್ಮನಾಯಕ[೨೨] ಎಂದು ಮೋಘಾ ಶಾಸನದಲ್ಲಿ ಉಲ್ಲೇಖಿಸಿದೆ.

೨.೪.೧. ರಾಣಿಯರ ರಾಜ್ಯಾಡಳಿತ

'ಶ್ರೀಮತ್ರಿಭುವನ ಮಲ್ಲದೇವರ ರಾಣಿಯರಪ್ಪ ಶ್ರೀ ಮನ್ಮಾಳಲದೇವಿ ತಂಮಾಳ್ಕೆಯ ಕುಣಿಲಂಗೇರಿ' (ಕುಳಗೇರಿ ಕ್ರಿ.ಶ. ೧೧೦೫) (ಚಂದ್ರಿಕಾದೇವಿ) ಚಂದಲದೇವಿ ಆರನೆಯ ವಿಕ್ರಮಾದಿತ್ಯನ ಪತ್ನಿ ಆಳುತ್ತಿದ್ದ ಬಗ್ಗೆ (ಅಲಂದೆ ಕ್ರಿ.ಶ.೧೦೮೨) ಉಲ್ಲೇಖಿಸಿದೆ. ಹಿರಿಯ ರಾಣಿ ಅಚಲದೇವಿ ಆಳ್ವಿಕೆ ಬಗ್ಗೆ ಕ್ರಿ.ಶ. ೧೧೦೯ರ ಧುತ್ತರ್‌ಗಾಂವ್ ಶಾಸನ ತಿಳಿಸುತ್ತದೆ.

ಚಾಲುಕ್ಯ ದೊರೆಗಳ ಅನ್ಯ ರಾಣಿಯರಲ್ಲಿ ಪೆರ್ಮ್ಮಾಡಿ ಜಗದೇಕ ಮಲ್ಲನ ರಾಣಿ 'ಅಭಿನವ ಸರಸ್ವತಿ ಮಲಯವತಿದೇವಿ' (ಬೋಧನ ಕ್ರಿ.ಶ. ೧೧೪೩), ಬರ್ಮಲ ದೇವಿ (ನಿಂಬರಗಿ ಕ್ರಿ.ಶ. ೧೧೩೪) ಇತ್ಯಾದಿ ರಾಣಿಯರು ಆಳುವ ಕುರಿತು ಉಲ್ಲೇಖಿಸಿದೆ.[೨೩] ಸ್ಥಳೀಯ ಆಡಳಿತಗಾರರಾದ ಸಾಮಂತರ ರಾಣಿಯರೂ ಸಹ ರಾಜ್ಯಾಡಳಿತದಲ್ಲಿ ನಿಷ್ಣಾತರಾಗಿದ್ದರು.

೨.೪.೨. ಕೇಂದ್ರಾಡಳಿತ

ಕೇಂದ್ರದ ಮಂತ್ರಿ ಪರಿಷತ್ತಿನ ವಿವಿಧ ಇಲಾಖೆಗಳನ್ನು 'ಬಾಹತ್ತರ ನಿಯೋಗ'ವೆಂದಿದೆ. ಹಿರಿಯ ದಂಡನಾಯಕ ಮಾಧವಯ್ಯ (ಹರಸೂರು ಕ್ರಿ.ಶ. ೧೧೭೨) ರಾಜ್ಯದ ರಾಯಭಾರಿಗಳನ್ನು

ಹೇರಿಲಾಳ ಸಂಧಿ ವಿಗ್ರಹಿಗಳೆಂದು ಕರೆದಿರುವ ವಾಡಿಕೆಯಿದೆ. ಪಟ್ಟಣದ ಹೆಗ್ಗಡೆ (ಅಲಂದೆ ಕ್ರಿ.ಶ. ೧೦೮೨), ಸುಂಕವೆರ್ಗಡೆ (ಹೊಡಲು ಕ್ರಿ.ಶ. ೧೧೮೧) ಮುಖ್ಯಸ್ಥರು, ದುರ್ಗದಾಳೊಡೆಯ ನಾಯಕ, ತಳಾರ ಸಂತೆಯ ನಾಯಕ (ಬೋಧನ ಕ್ರಿ.ಶ. ೧೧೪೩) ಎಂಬಲ್ಲಿ ನಾಯಕ ಪದಸವ ಅಧಿಕಾರ ವಾಚಕವಾಗಿದೆ. ರಾಜಕೀಯ ನಿರೂಪ ಆಜ್ಞೆಗಳ ಬರಹಗಾರರನ್ನು ಶ್ರೀಕರಣಂಗಳು ಎಂದಿದೆ. ರಾಜಕೀಯ ಆಡಳಿತ ಪರಿಭಾಷೆಗಳಾದ 'ಶ್ರೀಮನ್ಮಹಾಪಸಾಯಿತು' 'ಮೇಲಾಳಿಕೆ' ಕೇಂದ್ರಾಡಳಿತದ ಬಗ್ಗೆ ಪರಿಚಯಿಸುತ್ತದೆ.[೮೪]

೨.೪.೩. ಗ್ರಾಮಾಡಳಿತ

ಬಳಿಯಬಾಡ, ಗ್ರಾಮಕೂಟ ಹಾಗೂ ಗ್ರಾಮ ಈ ಮೂರು ಗ್ರಾಮಾಡಳಿತದ ಮುಖ್ಯ ಘಟಕಗಳಾಗಿ ಪರಿಗಣಿತವಾಗುತ್ತವೆ. ಊರೊಡೆಯ ಹಾಗೂ ನಾಡೊಡೆಯ ಪದಗಳು ಪರ್ಯಾಯ ರೂಪಗಳಂತೆ ತೋರುತ್ತವೆ. ಆದರೂ ಗ್ರಾಮಾಧಿಕಾರಿಯನ್ನು 'ಗಾವುಂಡ' ಗಾವುಂಡ ಪ್ರಭು, ಗೌಂಡ, ಸ್ವಾಮಿಗಳೆಂದು ವಿಶ್ಲೇಷಿಸಲಾಗಿದೆ. ಊರಿನ ಪ್ರಾತಿನಿಧಿಕ ಜನರನ್ನು ಮಹಾಜನ ಆಶೇಷ ಮಹಾಜನ ಎಂದಿದೆ. ಹೋಡಲ ಶಾಸನ ಭಲ್ಲುಂಕಿ, ದಂಡ ಹಸ್ತರು ಎಂದು ಉಲ್ಲೇಖಿಸಿದೆ. ಮಹಾಜನರಲ್ಲದೆ ಗ್ರಾಮಾಡಳಿತದಲ್ಲಿ ಮೂಲಿಗರೆನ್ನಿಸಿದ ವರ್ತಕ ವರ್ಗ, ಸೆಟ್ಟಿ, ಸೆಟ್ಟಿಗುತ್ತ, ನಕರ, ಮುಮ್ಮುರಿದಂಡ, ತಳದೊಕ್ಕಲು, ಹದಿನೆಂಟು ಜಾತಿ, ವೃತ್ತಿ ಸಮುದಾಯದ ಎಂಟುಹಿಟ್ಟು, ತೇಲಿಗ, ಎಲಿಗಾರ, ಬೆಲ್ಲನೂರ್ವರು ಎಂದು ಉಲ್ಲೇಖಿಸಿದೆ. ಶ್ರಮಿಕ ಸಂಘಗಳು ಊರಿನಲ್ಲಿರುವ ದೇವಸ್ಥಾನ, ಪಂಚ ಮಠಗಳಿಂದ ಗ್ರಾಮಾಡಳಿತಕ್ಕೆ ಮಹತ್ವದ ಸ್ಥಾನವಿತ್ತು. ಗ್ರಾಮ, ಸೀಮೆ ನಿರ್ಣಯಿಸುವುದು, ದತ್ತಿಯ ಸದ್ವಿನಿಯೋಗ, ಉಸ್ತುವಾರಿ ಸುಂಕಗಳ ಸಂಗ್ರಹಣೆ, ಗ್ರಾಮಾಧಿಕಾರಿಗಳ ಮುಖ್ಯ ಕಾರ್ಯಗಳಾಗಿದ್ದವು.[೮೫]

೨.೪.೪. ಮಹಾಜನ

ಅಗ್ರಹಾರಗಳಲ್ಲಿನ ಬಾಹ್ಮಣರಿಗೆ ಮಹಾಜನ ಎಂದು ಭಾವಿಸಲಾಗಿದೆ. ಆದರೆ ಮಹಾ ಜನರೆಲ್ಲರೂ ಬ್ರಾಹ್ಮಣರೇ ಆಗಿರಬೇಕೆಂಬ ನಿಯಮವಿರಲಿಲ್ಲ. ಊರಿನ ಪ್ರಮುಖ ಜನಗಳು ಮಹಾಜನರಾಗಿದ್ದರು. ಮಣಿಯೂರ ಮೂವತ್ತಿರ್ವರು ಮಹಾಜನರು ಎಂದು ಕ್ರಿ.ಶ.೧೧೨೦ ಮಣೂರು ಶಾಸನ ನಿರ್ದಿಷ್ಟ ಸಂಖ್ಯೆಯಲ್ಲಿ ಮಹಾಜನರನ್ನು ಸೂಚಿಸುತ್ತದೆ.

ಗಾವುಂಡಗಳು, ಮಹಾಜನ, ನಗರ ಪಂಚಮರ ಸಮಸ್ತ ಪ್ರಜೆಗಳು ಎಂದು ಕ್ರಿ.ಶ. ೧೦೫೦ ಅಂದೇಲಿ ಶಾಸನ, ಪ್ರಭು ಗೌವುಂಡ, ಸೆಟ್ಟಿ, ಮುಖ್ಯ ನಕರ, ಮುಮ್ಮುರಿ ದಂಡ, ಹದಿನೆಂಟು ಸಂತತಿ ಕ್ರಿ.ಶ. ೧೨೯೨ರ ಚಿನ್ಮಳ್ಳಿ ಶಾಸನ, ಸಿರಿವೋಳಲ ನಕರ ಕ್ರಿ.ಶ. ೧೩೩೮ರ ಅಂದೇಲಿ ಶಾಸನದಲ್ಲಿ ಅನಿರ್ದಿಷ್ಟ ಸಂಖ್ಯೆಯಲ್ಲಿ ಸೂಚಿಸುತ್ತವೆ.[೮೭]

೨.೪.೫. ಮಧ್ಯಕಾಲೀನ ಆಡಳಿತ

ಬಹುಮನಿ ಅರಸರ ಕಾಲದಲ್ಲಿ ನಾಲ್ಕು ಭಾಗಗಳಾಗಿ ರಾಜ್ಯವನ್ನು ತರಫ್–ತರಪ್‌ದಾರ್‌ರು, ಸರಕಾರ್, ಪರಗಣಗಳು ಮತ್ತು ಹಳ್ಳಿಗಳು ಎಂದು ವಿಂಗಡಿಸಲಾಗಿತ್ತು.[೮೮]

ಕೊನೆ ಟಿಪ್ಪಣಿಗಳು

೧. ಶಿವಾನಂದ.ವಿ–ಕ.ಜಿ.ಶಿ.ಶಾ.೧೯೭೮ ಪು. ೧.

೨. ಹನುಮಾಕ್ಷಿ ಗೋಗಿ–ಕ.ಜಿ.ಶಾ–೧೯೯೬ ಪು. ೨೩೩.

೩. ಪೂರ್ವೋಕ್ತ ಪು. ೧೬–೧೭.

೪. ಶಿವಾನಂದ.ವಿ–ಕ.ಜಿ.ಶಿ.ಶಾ–೧೯೭೮, ಪು. ೯.

೫. ಪೂರ್ವೋಕ್ತ, ಪು. ೯.

೬. ಪಾಟೀಲ್.ಎಂ.ಬಿ.(ಸಂ)ಕ.ಸ.ಗೆ.ಕ.ಜಿ–೧೯೯೭, ಪು. ೧೨.

೭. ಪೂರ್ವೋಕ್ತ, ಪು. ೬೯೪.

೮. ಪೂರ್ವೋಕ್ತ, ಪು. ೧೨.

೯. ಪೂರ್ವೋಕ್ತ, ಪು. ೧೨.

೧೦. ಪೂರ್ವೋಕ್ತ, ಪು. ೧೨.

೧೧. ಪೂರ್ವೋಕ್ತ, ಪು. ೧೪.

೧೨. ಪಾಟೀಲ್.ಎಂ.ಬಿ.(ಸಂ), ಕ.ಸ.ಜಿ.ಶಾ., ೧೯೯೬, ಪು. ೧೭.

೧೩. ಕ.ಜಿ.ಶಿ.ಶಾ.೧೯೭೮ ಪು. ೦೨.

೧೪. ಪೂರ್ವೋಕ್ತ, ಪು. ೦೨.

೧೫. ಪೂರ್ವೋಕ್ತ, ಪು. ೦೨.

೧೬. ಪೂರ್ವೋಕ್ತ, ಪು. ೦೨.

೧೭. ಶಾಮಲಾ, ಚಿ.ತಾ.ಶಾ ಮತ್ತು ದೇ.–೨೦೧೨, ಪು. ೦೮

೧೮. ಪಾಟೀಲ್.ಎಂ.ಬಿ.(ಸಂ).ಕ.ಸ.ಗೆ.ಕ.ಜಿ., ೧೯೯೭, ಪು. ೬೮೨–೬೮೩.

೧೯. ಹನುಮಾಕ್ಷಿ ಗೋಗಿ. ಕ.ಜಿ.ಶಾ.,೧೯೯೬, ಪು. ೨೫.

೨೦. ಪೂರ್ವೋಕ್ತ.

೨೧. ಕೆ.ಎನ್.ಎ., ಸಮಗ್ರ ಭಾರತದ ಇತಿಹಾಸ, ೨೦೦೪, ಪು. ೧೭೨.

೨೨. ಪೂರ್ವೋಕ್ತ, ಪು. ೧೭೩.

೨೩. ಪೂರ್ವೋಕ್ತ, ಪು. ೨೧೦.

೨೪. ಪೂರ್ವೋಕ್ತ, ಪು. ೨೧೨.

೨೫. ಹನುಮಾಕ್ಷಿ ಗೋಗಿ, ಕ.ಜಿ.ಶಾ, ೧೧೯೬, ಪು. ೧೮.

೨೬. ಶಿವಾನಂದ.ವಿ., ಕ.ಜಿ.ಶಿ.ಶಾ, ೧೯೭೮, ಪು. ೬.

೨೭. ಕೆ.ಎನ್.ಎ., ಸಮಗ್ರ ಭಾರತದ ಇತಿಹಾಸ, ೨೦೦೪, ಪು. ೩೪೦-೩೪೧.

೨೮. ಪೂರ್ವೋಕ್ತ, ಪು. ೩೫೬.

೨೯. ಶಿವಾನಂದ., ವಿ.ಕ.ಜಿ.ಶಿ.ಶಾ., ೧೯೭೮, ಪು. ೬.

೩೦. ಭಾರತದ ಇತಿಹಾಸ ಕ್ರಿ.ಶ. ೨೦೧೪, ಪು. ೨೩೩.

೩೧. ಶಿವಾನಂದ.ವಿ., ಕ.ಜಿ.ಶಿ.ಶಾ., ೧೯೭೮, ಪು. ೦೯, ೧೦-೧೧.

೩೨. ಪೂರ್ವೋಕ್ತ, ಪು.ಸಂ-೧೨

೩೩. ಶಿವಾನಂದ.ವಿ., ಕ.ಜಿ.ಶಿ.ಶಾ, ೧೯೭೮, ಪು. ೧೩-೧೪.

೩೪. ಪೂರ್ವೋಕ್ತ, ಪು. ೧೯೧೫.

೩೫. Jainism in south india & some jaina epigraphies, ಪು. ೨೧೪-೧೫.

೩೬. ಶಿವಾನಂದ.ವಿ., ಕ.ಜಿ.ಶಿ.ಶಾ., ೧೯೭೮, ಪು. ೧೫-೧೬.

೩೭. ಪೂರ್ವೋಕ್ತ, ಪು. ೧-೧೭.

೩೮. ಪೂರ್ವೋಕ್ತ, ಪು. ೧೭-೧೮.

೩೯. ಗೋಪಾಲ್‌ರಾವ್.ಗು.ಜಿ.ಇ.ಮತ್ತು ಪು., ೨೦೦೭, ಪು. ೮೪.

೪೦. ಪೂರ್ವೋಕ್ತ, ಪು. ೮೪.

೪೧. ಪೂರ್ವೋಕ್ತ, ಪು. ೮೫.

೪೨. ಪೂರ್ವೋಕ್ತ, ಪು. ೮೫.

೪೩. ಪೂರ್ವೋಕ್ತ, ಪು. ೮೮.

೪೪. ಪೂರ್ವೋಕ್ತ, ಪು. ೮೮.

೪೫. ಹನುಮಾಕ್ಷಿ ಗೋಗಿ, ಕ.ಜಿ.ಶಾ.೧೯೯೬, ಪು. ೨೫೧-೨೫೨.

೪೬. ಪಾಟೀಲ್.ಎಂ.ಬಿ.(ಸಂ).ಕ.ಸ.ಗೆ.ಕ.ಜಿ. ೧೯೯೭, ಪು. ೬೮೨-೬೮೩.

೪೭. ಪೂರ್ವೋಕ್ತ, ಪು. ೭೨೪.

೪೮. ಪೂರ್ವೋಕ್ತ, ಪು. ೭೩೩.

೪೯. ಪೂರ್ವೋಕ್ತ, ಪು. ೭೩೪.

೫೦. ಪೂರ್ವೋಕ್ತ, ಪು. ೭೪೧.

೫೧. ಪೂರ್ವೋಕ್ತ, ಪು. ೭೪೫-೭೪೬

೫೨. ಶಿವಾನಂದ.ವಿ. ಕ.ಜಿ.ಶಿ.ಶಾ.೧೯೭೮, ಪು. ೨೦-೨೧.

೫೩. ಪಾಟೀಲ್.ಎಂ.ಬಿ.(ಸಂ).ಕ.ಸ.ಗೆ.ಕ.ಜಿ ೧೯೯೭, ಪು. ೭೪೮.

೫೪. ಪೂರ್ವೋಕ್ತ, ಪು. ೭೫೫.

೫೫. ಪೂರ್ವೋಕ್ತ, ಪು. ೭೮೦.

೫೬. ಪೂರ್ವೋಕ್ತ, ಪು. ೬೭೮-೬೭೯.

೫೭. ಪೂರ್ವೋಕ್ತ, ೧೯೯೭, ಪು. ೬೯೩.

೫೮. ಪೂರ್ವೋಕ್ತ, ಪು. ೭೨೧-೭೨೨.

೫೯. ಶಿವಾನಂದ.ವಿ., ಕ.ಜಿ.ಶಿ.ಶಾ., ೧೯೭೮, ಪು. ೦೪.

೬೦. ಪಾಟೀಲ್.ಎಂ.ಬಿ.ಕ.ಸ.ಗೆ.ಕ.ಜಿ.೧೯೯೭, ಪು. ೭೪೩.

೬೧. ಪೂರ್ವೋಕ್ತ, ಪು. ೭೯೮.

೬೨. ಪೂರ್ವೋಕ್ತ, ಪು. ೭೧೫.

೬೩. ಪೂರ್ವೋಕ್ತ ಪು. ೭೨೦-೭೨೧.

೬೪. ಹನುಮಾಕ್ಷಿ ಗೋಗಿ, ಕ.ಜಿ.ಶಾ., ೧೯೯೬, ಪು. ೨೫.

೬೫. ಪೂರ್ವೋಕ್ತ, ಪು. ೨೫-೨೬

೬೬. ಶಿವಾನಂದ, ವಿ.ಕ.ಜಿ.ಶಿ.ಶಾ., ೧೯೭೮, ಪು. ೧೯.

೬೭. ಪೂರ್ವೋಕ್ತ, ಪು. ೧೯-೨೦.

೬೮. ಪೂರ್ವೋಕ್ತ, ಪು. ೨೦-೨೧.

೬೯. ಪೂರ್ವೋಕ್ತ, ಪು. ೨೧.

೭೦. ಪೂರ್ವೋಕ್ತ, ಪು. ೨೫

೭೧. ಚಿ.ತಾ.ಶಾ&ದೇ., ೨೦೧೨, ಪು. ೧೪.

೭೨. ಹೈ.ಕ.ಭಾ.ಕ.ಶಿ.ಶಾ., ೧೯೯೨, ಪು. ೧೦.

೭೩. ಪೂರ್ವೋಕ್ತ, ಪು. ೧೬

೭೪. ಪೂರ್ವೋಕ್ತ, ಪು. ೧೬-೧೭

೭೫. ಪೂರ್ವೋಕ್ತ, ಪು. ೧೭-೧೮.

೭೬. ಕ.ಜಿ.ಶಾ., ೧೯೯೬, ಪು. ೨೬

೭೭. ಪೂರ್ವೋಕ್ತ, ಪು. ೨೩.

♦♦♦

ಅಧ್ಯಾಯ : ಮೂರು

ಶಾಸನಗಳ ಅಧ್ಯಯನ ಮತ್ತು ವೈವಿಧ್ಯತೆ

ಅಧ್ಯಾಯ : ಮೂರು

ಶಾಸನಗಳ ಅಧ್ಯಯನ ಮತ್ತು ವೈವಿಧ್ಯತೆ

೩.೧. ಶಾಸನಗಳ ಅರ್ಥ, ಸ್ವರೂಪ ಮತ್ತು ಮಹತ್ವ

ಶಾಸನದ ಅರ್ಥ ರಾಜಾಜ್ಞೆ, ಆದೇಶ ಎಂದಾಗುತ್ತದೆ. 'ಶಾಸ್' ಎಂಬ ಸಂಸ್ಕೃತ ಧಾತುವಿನಿಂದ ಹುಟ್ಟಿದ ಶಾಸನ ಪದದ ಅರ್ಥ ಆಜ್ಞೆಮಾಡು ಅಪ್ಪಣೆಮಾಡು, ಘೋಷಣೆ ಹೊರಡಿಸು ಎಂದರ್ಥ. ಇಂಗ್ಲೀಷ್‌ನ ಇನ್‌ಸ್ಕ್ರಿಪ್ಷನ್ ಎಂಬ ಪದ 'ಇನ್ ಸ್ಕ್ರೈಬ್' ಪದದ ನಿಷ್ಪತ್ತಿ. ಇದರ ಅರ್ಥ 'ಕೆತ್ತು, ಕಂಡರಿಸು'.

ಶಾಸನಗಳನ್ನು ಭಾರತದಲ್ಲಿ ಅಶೋಕನ ಕಾಲದಿಂದ ಕಲ್ಲಿನಲ್ಲಿ ಕೆತ್ತಲಾರಂಭಿಸಿದರು. ಆರಂಭದಲ್ಲಿ ಇವು ಕೇವಲ ರಾಜಾಜ್ಞೆಗಳಿಂದ ಕೂಡಿದ್ದವು. ಕ್ರಮೇಣ ವಿಸ್ತೃತಗೊಂಡು ರಾಜರ ಪ್ರಶಸ್ತಿ, ಸಾಧನೆ, ವಂಶಾವಳಿಗಳ ವಿವರಣೆಗಳನ್ನು ಕೊರೆಯಲಾಯಿತು. ಶಾಸನಗಳು ದಾನವನ್ನು, ವೀರರು ಹೋರಾಡಿರುವ ಮತ್ತು ಮಹಾಸತಿಯಾಗಿರುವುದರ ಕುರಿತು ವಿವರಿಸುವ ವಿಸ್ತೃತ ರೂಪ ಪಡೆದವು. ಹೀಗೆ ಮುಂದೆ ಗಡಿಗಳ, ಪ್ರಶಸ್ತಿ, ಶಾಸನ ಶಿಲ್ಪಗಳ ವಿವರಣೆಗೆ ವಿಸ್ತೃತಗೊಂಡವು. ಅಲ್ಲದೆ ಶಾಸನಗಳು ಜನಪ್ರಿಯವಾಗಿ, ಹೇರಳವಾಗಿ, ಕೊರೆಯಲ್ಪಡಲು 'ದಾನದ ಧರ್ಮ' ಶಾಸನಗಳಲ್ಲಿ ಮೂಡಿಬಂದಿರುವುದು ಪ್ರಮುಖ ಕಾರಣವಾಗಿದೆ.

ಶಾಸನಗಳು ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಬದುಕಿನ ಮೇಲೆ ಬೆಳಕು ಚೆಲ್ಲುತ್ತವೆ. ಸಾಹಿತ್ಯ, ಭಾಷೆ, ಸಂಸ್ಕೃತಿ, ಉಡುಗೆ-ತೊಡುಗೆ, ಊರಿನ ಪರಿಸರ, ಗಿಡ-ಮರ, ಬೆಳೆ, ಆಡಳಿತದ ಬಗ್ಗೆ ತಿಳಿಸುತ್ತವೆ. ರಾಜರ, ಆಡಳಿತಗಾರರ ಮತ್ತು ಸಾರ್ವಜನಿಕರ ಕರ್ತವ್ಯಗಳನ್ನು ಸಹ ವಿವರಿಸುತ್ತವೆ. ಈ ಹಿನ್ನೆಲೆಯಲ್ಲಿ ಶಾಸನಗಳ ಅಧ್ಯಯನ ನಂಬಿಕಾರ್ಹವಾಗಿವೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಮೌರ್ಯರ ಅಶೋಕನ ಕಾಲದಿಂದ ನಿಜಾಮರ ಕಾಲದವರೆಗಿನ ಶಾಸನಗಳು ದೊರಕುತ್ತವೆ. ಪ್ರಸ್ತುತ ಗುಲ್ಬರ್ಗಾ ಜಿಲ್ಲೆಯ ಉತ್ತರ ಭಾಗದ ಗುಲ್ಬರ್ಗಾ, ಆಳಂದ, ಅಫ್ಜಲ್‌ಪುರ ಮತ್ತು ಚಿಂಚೋಳಿಗೆ ಸಿಮಿತಗೊಳಿಸಿ ಅಧ್ಯಯನ ಕೈಗೊಳ್ಳಲಾಗಿದೆ. ವಿವಿಧ ಶಾಸನಗಳ ಅಧ್ಯಯನದ ಮೂಲಕ ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಕಟ್ಟುವ ಪ್ರಯತ್ನವಿದಾಗಿದೆ.

೩.೨. ಶಾಸನಗಳ ವೈವಿಧ್ಯತೆ

ಭಾಷೆ, ಕಾಲ, ಉಪಯೋಗಿಸಿದ ವಸ್ತು ಮತ್ತು ಶಾಸನಗಳ ವಿಷಯದ ಮೂಲಕ ಶಾಸನಗಳನ್ನು ವಿಂಗಡಿಸಬಹುದಾಗಿದೆ. ಕಲ್ಲು ಮತ್ತು ಲೋಹಗಳಾದ ತಾಮ್ರ, ಕಬ್ಬಿಣ, ಉಕ್ಕು, ಚಿನ್ನ ಇತ್ಯಾದಿ ಮೇಲೆ ಕಂಡರಿಸಿರುವ ಶಾಸನಗಳನ್ನು ಶಿಲಾ ಮತ್ತು ಲೋಹ ಶಾಸನಗಳೆಂದು ತಿಳಿಯಲಾಗುತ್ತದೆ. ವಿಷಯವನ್ನಾಧರಿಸಿ ಶಾಸನಗಳನ್ನು ಈ ರೀತಿ ವಿಭಜಿಸಲಾಗುತ್ತದೆ. ದಾನ ಶಾಸನಗಳು, ಪ್ರಶಸ್ತಿ ಶಾಸನಗಳು, ವೀರಗಲ್ಲು ಶಾಸನಗಳು, ನಿಷಿಧಿಗಲ್ಲುಗಳು, ಶಿಲ್ಪಗಳು, ಮಹಾಸತಿಗಲ್ಲುಗಳು, ಗಡಿರೇಖೆಯ ಶಾಸನಗಳೆಂದು ವಿಂಗಡಿಸಬಹುದಾಗಿದೆ.

ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದಲ್ಲಿ ದೊರೆತ ಶಾಸನಳನ್ನು, ಶಾಸನಗಳ ವಿಷಯದ ಮೂಲಕ ವಿಂಗಡಿಸಿ ವಿವರಿಸಲಾಗಿದೆ.

೧. ಲಿಖಿತ ಶಾಸನಗಳು

ದಾನ-ದತ್ತಿ ಶಾಸನಗಳು, ಸ್ಮಾರಕ ಶಾಸನಗಳು, ಪ್ರಶಸ್ತಿ ಶಾಸನಗಳು, ನಾಮ ಸೂಚನಾವಳಿ ಶಾಸನಗಳು

೨. ಲಿಖಿತವಲ್ಲದ ಶಿಲ್ಪಗಳು

ವೀರಗಲ್ಲುಗಳು, ಮಹಾಸತಿಗಲ್ಲುಗಳು, ನಿಷಿಧಿಗಲ್ಲುಗಳು

೩. ಶಾಸನ ಶಿಲ್ಪಗಳು

ಗಡಿರೇಖೆಗಳು, ವೀರಗಲ್ಲುಗಳು, ಇತ್ಯಾದಿ ಎಂದಾಗಿ ಅಧ್ಯಯನದಲ್ಲಿ ವಿಂಗಡಿಸಲಾಗಿದೆ.

ಶಾಸನಗಳಲ್ಲಿ ಭೌಗೋಳಿಕ ವಿವರಣೆ

ಸರದಿ ಸರೋವರದ ನಡುವೆ ಕರ್ಣಿಕೆಯ ಮಂದರ ಗಿರಿಯಿದೆ. ಮಂದರ ಗಿರಿಯ ದಕ್ಷಿಣಕ್ಕೆ ಭರತ ಕ್ಷೇತ್ರವಿದೆ. ಅದರಲ್ಲಿ ಸುಂದರ ಗಂಧಗಾಳಿ ಸೂಸುವ, ಜಲಪ್ರವಾಹದಿಂದ, ಕನಕ ರತ್ನಗಳಿಂದಿರುವ ಕುಂತಲವೆಂಬ ಪುಣ್ಯಕ್ಷೇತ್ರವಿದೆ. ಅಂತಹ ಕ್ಷೇತ್ರದಲ್ಲಿ ಆಳಂದ ದೇಶವಿದೆ. ಅದರಲ್ಲಿ ತಿಳಿಗೋಳವಿದ್ದು, ಅದು ತಾವರೆ, ಎಳೆ ಮಾವಿನ ಗಿಡಗಳು, ಗಂಧ ಗಾಳಿಯಿಂದ, ವಿವಿಧ ಕುಜಾವಳಿಯಿಂದ, ಗಿಳಿ-ಅಳಿಲುಗಳಿಂದ ಕೂಡಿದ ನಾಡಾಗಿದೆ. ಅದೇ ನಾಡುಗಳ ಅರಸ ಆಳಂದವಾಗಿದೆ ಎಂದು ಕ್ರಿ.ಶ. ೧೧೩೪ರ ನಿಂಬರ್ಗ ಶಾಸನ ತಿಳಿಸುತ್ತದೆ. 'ಧರೆಯೆಂಬುಜವಿಪ್ಪುದು ಸರದಿ ಸರೋವರದ ನಡುವೆ ಕರ್ಣಿಕೆವೊಲ್ ಮಂದರವಿಪ್ಪುದಿಪ್ಪುದಾ ಮಂದರ ಗಿರೆಯಂ ತೆಂಕಲೆಸೆವ ಭರತ ಕ್ಷೇತ್ರಂ॥ ಭರತ ವಸುಂಧರಾ ತಳದೊಳಿಪ್ಪುದು ಪೂರ್ಣ ಜಲಪ್ರವಾಹದಿಂ ಪರಿಮಳ ಗಂಧ ಬಂಧುರ ಸುಪ್ಪರ್ವಿ ವನಾಳಿಯೆನತ್ಯುದಾತ್ರ ಭಾಸುರಗಿರಿ ರಾಜಿಯಿಂ ಕನಕರತ್ನ ಸಮನ್ವಿತ ಸಂಸ್ಥಳಂಗಳಿಂ ಪರಿಮಳ ಗಂಧ ಶಾಲಿಮಯ ಭೂತಳಮೂರ್ಜಿತ ಪುಣ್ಯ ಕುಂತಳಾ॥ ಆ ವಿಷಯದೋಳಲಂದೆಯ ದೇಶವೆಂತೆನೆ ತಿಳಿಗೊಳದಿಂ ತಾವರೆ ಯಿಂದೆಳಮಾವಿಂ

ಗಂಧಶಾಲಿಯಿಂ ವಿವಿಧ ಕುಜಾವಳಿಯಿಂ ಗಿಳಿಯಿಂದಳಿಯಿಂದಿಳಿ ಸೇವ್ಯವಲಂದೆ ನಾಡುನಾಸುಗಳರಸಾ॥' ಎಂದು ವಿಶೇಷವಾಗಿ ಭೌಗೋಳಿಕ ವಿವರಣೆ ಶಾಸನಗಳಲ್ಲಿ ವಿವರಿಸಿರುವುದು ಈ ಭಾಗದಲ್ಲಿ ಕಂಡು ಬರುತ್ತದೆ.

ಪ್ರಾಚೀನ ಕಾಲದ ಭೌಗೋಳಿಕ ಮೇರೆಗಳನ್ನು ತಿಳಿಯಲು ಇವುಗಳಿಂದ ಸಾಧ್ಯವಾಗಿದೆ. ಬೆಳೆಯುವ ಬೆಳೆ, ಭೌಗೋಳಿಕ ಸ್ಥಿತಿಗತಿ ಹೇಗಿತ್ತೆಂಬುದು ಶಾಸನಗಳು ಸ್ಪಷ್ಟಪಡಿಸುತ್ತವೆ. ಭೀಮಾ ನದಿ ಪಶ್ಚಿಮಾಭಿಮುಖವಾಗಿ ಹರಿಯುತ್ತದೆ. ಹಿಮಾಚಲದಿಂದ ಗಂಗಾ ಜಲದವರೆಗೂ ವಿಕ್ರಮಾದಿತ್ಯನ ಕೀರ್ತಿ ಹಬ್ಬಿತ್ತು ಎಂದು ತಿಳಿಸುತ್ತದೆ (ಮೋಘಾ ಕ್ರಿ.ಶ. ೧೧೭೦). ಪ್ರಾಚೀನ ಕಾಲದಲ್ಲಿ ವರಜಂಬೂ ದ್ವೀಪದಲ್ಲಿ ಭಾರತವರ್ಷವಿದೆ. ಅದರಲ್ಲಿ ಕುಂತಲ ದೇಶವಿದೆ. ಇದರೊಳಗೆ ಜನಪದವಿದೆ. ಜನಪದದಲ್ಲಿ ಸಾವಿರದ ಅಳಂದೆಯಿದೆ. ಅಳಂದದಲ್ಲಿ ಗೊಂಕ ನಾಡಿದೆ. "ವರ ಜಂಬೂದ್ವೀಪದೊಳಗೆ ಭಾರತಾವನಿಯಲ್ಲಿ ಕುಂತಳ ಜನಪದದೊಳಗೆ ಅಲಂದೆ ಸಾಸಿರದ ಹಿರಿದಾದ ಗೊಂಕನಾಡು" ಎಂದು ಕ್ರಿ.ಶ. ೧೧೯೭ರ ಹರಸೂರು ಶಾಸನ ತಿಳಿಸುತ್ತದೆ.

ಸೀಮಾ ಪದ್ಧತಿ

ಒಂದು ಪ್ರಾಂತ್ಯ, ಹಳ್ಳಿಗಳ, ಊರುಗಳ ಸೀಮೆಯ ಮೇರೆಯನ್ನು ಗುರ್ತಿಸುತ್ತಿದ್ದರು ಎಂಬುದು ಸೀಮಾ ಪದ್ಧತಿಯಿಂದ ತಿಳಿದು ಬರುತ್ತದೆ. ಹೆಚ್ಚಾಗಿ ನೈಸರ್ಗಿಕ ಮೇರೆಗಳನ್ನು ಗುರ್ತಿಸುತ್ತಿದ್ದರು. ಹಳ್ಳಗಳು, ನದಿಗಳು, ಮರಗಳು, ಬೆಟ್ಟಗಳ ಮೂಲಕ ಮೇರೆ ಗುರ್ತಿಸಲಾಗುತ್ತಿತ್ತು. ಹಿರಿಯ ಸ್ಥಳದ ಸೀಮಾ ಪದ್ಧತಿ ಕುಡಿಕಿಗೆಯ ಸೀಮೆಯಿಂದ ಪಡುವಲು, ಭಾಸ್ಕರನ ಬೆಟ್ಟದ ತೆಂಕಣೆಯಿಂದ ವೈಜಯ ಗಟ್ಟಿಯಿಂ, ಸಿರಿಊರ ಕಲ್ಲಹಳ್ಳದಿಂದ ಬಡಗಲು, ವೆಳಸಂಗವಿಯ ಮೂಲಿಗಗೆಯ್ಯ ಹೊಲವೇರೆಯಿಂದ ಮೂಡಲು, ಹುಲ್ಲೆಯ ಬೆಟ್ಟದ ತೆಂಕಣದಿಂದ ಪೆರಡಾಲದ ಮರಡಿಕಲು ಪುಂಜಳಿಯಿಂದ ತೆಂಕಲು ಆ ಸ್ಥಳದ ಸೀಮಾ ಪದ್ಧತಿಯಿಂಬುವರ್ ಎಂದಿದೆ (ನಿಂಬರ್ಗಿ ಕ್ರಿ.ಶ. ೧೧೯೮). ಬೇಡಕ್‌ಪಲ್ಲಿಯ ಮತ್ತು ಖಣದಾಳ್‌ದ ಗಡಿ ಶಾಸನಶಿಲ್ಪವು ಸೀಮಾ ವ್ಯವಸ್ಥೆ ಬಗ್ಗೆ ಉಲ್ಲೇಖಿಸುತ್ತದೆ. ಆ ಗ್ರಾಮ ಶೀಮೆಯೆಂತೆಂದಡೆ ಮೂಡಲ್ಬೆಣ್ಣೆತೊರೆ ಮೆರೆ। ತೆಂಕಲ ಹಳ್ಳಿಯ ಹಳ್ಳಂ ಮೇರೆ। ಆ ಹಳ್ಳದಿಂ ಪಡುವ ಮುಖ(ದ ಬರ)ಲಲ್ಲಿ ನಟ್ಟಕಲ್ಲು ಮೇಲಿ। ಅಲ್ಲಿಂ ಬಡಗ ಮೊಗದಿ ಶ್ರೀ ಪುರುಷ(ಕ್ಷಿತಿ?) ಬರಲವರ ವಾಡಿಯ ಸೀಮೆಯ್‌ನಳ್ಳ ಮರ ಮೇರೆ। ಅಲ್ಲಿಂ ಪಡುವ ಮುಖದೆ ಬರೆ ನೈಋತ್ಯದ ಕೋಣಿನಲ್ಲಿ ಅಮರವಾಡಿಯ ಕಗ್ಗಲ್ಲ ಮೊರಡಿಯಂಕುಲಗೆಯ ಮುಗ್ಗುಡ್ಡೆಯ ನಟ್ಟ ಕವಿಲೆಯ ಕಲ್ಲು ಮೇರೆ। ಯಿಶಾನ್ಯದೊಲಂ ಯಾ ಹಳ್ಳದ ಬೆಂಣೆಯ ತೊರೆಯ ಕೂಡಲಲ್ಲಿ ನೆಟ್ಟಕಲ್ಲು ಮೇರೆ(ಹರಸೂರು ಕ್ರಿ.ಶ. ೧೧೭೨).

ಮರಗಳ, ಬೆಟ್ಟಗಳ, ನದಿಗಳ, ಪ್ರಾಣಿ ಮತ್ತು ಪಕ್ಷಿಗಳ ಉಲ್ಲೇಖ

ಆಲದಮರ, ಬೇವಿನಮರ(ನಿಂಬರ್ಗಿ ಕ್ರಿ.ಶ.೧೧೯೮). ಮಾವು(ನಿಂಬರ್ಗಾ ಕ್ರಿ.ಶ. ೧೦೪೬). ಹುಲ್ಲೆಯ ಬೆಟ್ಟ, ಭಾಸ್ಕರ ಬೆಟ್ಟ(ನಿಂಬರ್ಗಿ ಕ್ರಿ.ಶ.೧೧೯೮). ಚಂಪಕವನ, ಗಂಧಶಾಲಿ (ನಿಂಬರ್ಗಾ

ಕ್ರಿ.ಶ.೧೦೫೫). ನರ್ಮದಾ ನದಿ(ನಿಂಬರ್ಗಿ ಕ್ರಿ.ಶ.೧೧೯೮). ಪಶ್ಚಿಮಾಭಿಮುಖವಾಗಿ ಹರಿಯುವ ಭೀಮಾರಥಿ (ಚಿನಮಳ್ಳಿ ಕ್ರಿ.ಶ ೧೧೭೫). ಬೆಣ್ಣೆತೋರೆ ನದಿಯ ಉಲ್ಲೇಖ (ಹರಸೂರು ಕ್ರಿ.ಶ. ೧೧೭೨). ಕತ್ತೆ, ಕೋಣ (ಚಿನಮಳ್ಳಿ ಕ್ರಿ.ಶ.?). ಕೋಣ, ಎತ್ತು (ಹೊಡಲ ಕ್ರಿ.ಶ. ೧೧೮೧). ಶಾಪಾಶಯಗಳಲ್ಲಿ ಆಕಳು, ಕರು, ಕಪಿಲೆಯ ಉಲ್ಲೇಖಗಳಿವೆ. ಮಯೂರ, ಹಂಸ, ಮಕರ (ನಿಂಬರ್ಗಾ ಕ್ರಿ.ಶ.೧೦೫೫). ಹುಂಜದ ಉಲ್ಲೇಖ (ಪಡಸಾವಳಿಗೆ ಕ್ರಿ.ಶ. ೧೧೧೦).

೩.೨.೧. ದಾನ ಶಾಸನಗಳು

ದೇವಾಲಯಗಳಿಗೆ, ಶಿಕ್ಷಣಕ್ಕೆ, ಅಗ್ರಹಾರ, ಛತ್ರ, ಕೆರೆ, ವಿದ್ಯಾರ್ಥಿಗಳಿಗೆ, ಉಪನ್ಯಾಸಕರ ಛತ್ರ-ಆಹಾರಕ್ಕೆ ನೀಡಿರುವ ದಾನಗಳ ಬಗ್ಗೆ ತಿಳಿಸುವ ಶಾಸನಗಳು ದಾನ ಶಾಸನಗಳಾಗಿವೆ. ರಾಜ, ಮಾಂಡಳಿಕ, ಅಧಿಕಾರಿವರ್ಗ, ರಾಜಮನೆತನ ಮತ್ತು ಖಾಸಗಿ ವ್ಯಕ್ತಿಗಳು ವಿವಿಧ ಉದ್ದೇಶಗಳಿಗಾಗಿ ದಾನವನ್ನು ನೀಡುತ್ತಿದ್ದರು.

೩.೨.೨. ಭೂದಾನ ಶಾಸನಗಳು

ದಾನ ಶಾಸನಗಳ ಮೂಲ ಉದ್ದೇಶ ಮತ್ತು ಪ್ರಮುಖ ವಿಷಯ ವಸ್ತು ದಾನ ಕುರಿತಾಗಿದೆ. ಹಾಗೆಂದ ಮಾತ್ರಕ್ಕೆ ದಾನ ಶಾಸನಗಳು ಕೇವಲ ದಾನದ ಬಗ್ಗೆ ತಿಳಿಸುವುದಿಲ್ಲ. ಇವು ವಿವಿಧ ಕ್ಷೇತ್ರಗಳು, ಕಾಲ, ಅಧಿಕಾರ, ಅಧಿಕಾರಿಗಳು ಮತ್ತು ಸಾರ್ವಜನಿಕರ ಬಗ್ಗೆಯೂ ಸಹ ತಿಳಿಸುತ್ತವೆ.

ಸ್ಮಾರಕ ಶಾಸನಗಳು

ಊರಿನ ಗಣ್ಯರು, ಅಧಿಕಾರಿ, ರಾಜನು ಇಲ್ಲವೇ ವ್ಯಕ್ತಿಯ ಮರಣ ಹೊಂದಿದ ವಿಷಯವನ್ನು ದಾಖಲಿಸುವ ಶಾಸನವೇ ಸ್ಮಾರಕ ಶಾಸನ ಎಂದು ಕರೆಯುತ್ತಾರೆ. ಉದಾ:- ಗಡಿ ಕೇಶಾವರನ ಜೀರಾಬಾವಿಯ ಬಳಿ ದೊರೆತ ಶಾಸನವೊಂದು ಪ್ರಸಿದ್ಧ ವ್ಯಾಪಾರಿಯಾದ ಬಮ್ಮಸೆಟ್ಟಿಯು ಮರಣ ಹೊಂದಿದ ವಿಷಯವನ್ನು ದಾಖಲಿಸಿದೆ.[೧]

೩.೨.೩. ಧಾರ್ಮಿಕ ದಾನ ಶಾಸನಗಳು

ದಾನ-ದತ್ತಿ ಸೂಚಿಸುವ ಅಂದರೆ, ದೇವರ ಮತ್ತು ಧರ್ಮದ ಹೆಸರಲ್ಲಿ ಅನೇಕ ದಾನ-ದತ್ತಿ ನೀಡಿದ ಶಾಸನಗಳು ಧಾರ್ಮಿಕ ದಾನಶಾಸನಗಳಾಗಿವೆ. ಅದೇ ರೀತಿ ಧಾರ್ಮಿಕ ಉದ್ದೇಶಗಳಿಗಾಗಿ, ಶೈಕ್ಷಣಿಕ ಉದ್ದೇಶಗಳಿಗಾಗಿ ಹೊಸದಾಗಿ ಕಟ್ಟಿಸಿದ ಅಗ್ರಹಾರ ಇಲ್ಲವೆ ಅಗ್ರಹಾರಗಳಿಗೆ ನೀಡಿದ ದಾನದ ವಿವರ ಸೂಚಿಸುವ ಶಾಸನಗಳಾಗಿವೆ. ಒಟ್ಟಿನಲ್ಲಿ ಧಾರ್ಮಿಕ ಉದ್ದೇಶಗಳಿಗಾಗಿ ನೀಡಿದ ದಾನವನ್ನು ಸೂಚಿಸುವ ಶಾಸನಗಳಿಗೆ ಧಾರ್ಮಿಕ ದಾನ ಶಾಸನಗಳು ಎಂದು ಕರೆಯುತ್ತಾರೆ. ಮಣಿಯೂರು ಕ್ರಿ.ಶ.೧೧೨೧ರ ಶಾಸನ 'ಮಣಿಯೂರು ಹನ್ನೆರಡು ಕಂಪಣವೆರ್ಗಡೆ'ಯ ಅಧಿಕಾರಿಯಿಂದ ಆದಿತ್ಯನಾಯಕ, ಮನ್ನೆಯ ಚಿಕ್ಕ ಗೋವಣರಸ ಶಿವಾಲಯ ನಾಶವಾದುದ್ದಕ್ಕೆ ಧರ್ಮ ನಿಮಿತ್ಯವಾಗಿ ಗಂಗರಾಸಿಜೀಯರು ಅಧಿಕಾರಿಯ ಮೇಲಿರಿದು ಕೊಂದು ಸತ್ತನೆಂದು

ತಿಳಿಸುತ್ತದೆ. ೧೨ನೆಯ ಶತಮಾನದ ಮಡಿಹಾಳ ಶಾಸನವು ದೇವಾಲಯದ ಕಾರ್ಯಗಳಿಗಾಗಿ ಭೂದಾನ ಮಾಡಿದ ಬಗ್ಗೆ ಉಲ್ಲೇಖಿಸುತ್ತದೆ. ತಂನಿಂದಂ ಶಿವಧರ್ಮ್ಮವದುನ್ನತವಾಯ್ತೆನಿಸಿ ಕೋಟಿಶಂಕರ ದೇವಾಸಂನ್ನಮೆನೆ ಬಾವಿ ಜಲ ಸಂಪಂನ ತಡಾಗವೆನನೂವೆನೆ ನಿರ್ಮ್ಮಿಸಿದಂ॥

೩.೨.೪. ದಾನ-ದತ್ತಿ ಶಾಸನಗಳು

ದಾನದ ಉದ್ದೇಶ ಕೇವಲ ಧಾರ್ಮಿಕವಾಗಿರಬಹುದು. ಸಾರ್ವಜನಿಕ ಕಲ್ಯಾಣಕಾರಕ ಉದ್ದೇಶವಿತ್ತು. ದೇವಾಲಯಕ್ಕೆ ನೀಡಿದ ದಾನಗಳಿವೆ. ಕೆರೆ, ಛತ್ರ, ಅಗ್ರಹಾರ ಕಟ್ಟಿಸಲು ನೀಡಿದ ದಾನಗಳಿವೆ. ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ಆಹಾರ ವ್ಯವಸ್ಥೆಗೆ ಇಲ್ಲವೆ ಶೈಕ್ಷಣಿಕ ಉದ್ದೇಶಕ್ಕಾಗಿ ನೀಡಿದ ದಾನವಾಗಿರಬಹುದು. ಜೀರ್ಣೋದ್ಧಾರ ವಿಷಯ ಕುರಿತು ನೀಡಿದ ದಾನವಾಗಿರಬಹುದು. ದೇವಾಲಯದ ಬ್ರಾಹ್ಮಣರಿಗೆ ಧೂಪಕ್ಕೆ, ಸಿಗರಿಗೆ, ಬಾರಿಸುವವರಿಗೆ ಪೂಜಾರಿಗಳಿಗೆ, ಅಲ್ಲಿನ ಪೂಜೆ ಸೇವೆಗಳಿಗಾಗಿ ಹಲವು ಜನರಿಗೆ ನೀಡಿದ ದಾನಗಳನ್ನು ಸೂಚಿಸುತ್ತವೆ.

ದಾನ ಶಾಸನಗಳು ಖಾಸಗಿ ವ್ಯಕ್ತಿಗಳು ನೀಡಿದ ದಾನವನ್ನು ಇಲ್ಲವೆ ರಾಜನು, ಮಾಂಡಳಿಕರು ಅಧಿಕಾರ ವರ್ಗದವರು ನೀಡಿದ ದಾನದ ವಿಷಯ ಒಳಗೊಂಡಿರುತ್ತಿದ್ದವು. ದಾನ ಶಾಸನಗಳು ಹಣದ ರೂಪದಲ್ಲಿ ಇಲ್ಲವೆ ಭೂಮಿಯ ರೂಪದಲ್ಲಿ ನೀಡಲಾಗುತ್ತಿತ್ತು. ಸುಲೇಪೇಟೆಯ ಈಶ್ವರ ದೇವಾಲಯದ ಶಾಸನವು ಸಾರಂಗದೇವ ಹಾಗೂ ಮತ್ತೊಂದು ದೇವರಿಗೆ ಭೂದಾನ ನೀಡಿದ ವಿಷಯ ದಾಖಲಿಸಿದೆ.[೨]

ಮರ್ತೂರು ಕ್ರಿ.ಶ. ೧೨ನೆಯ ಶತಮಾನದ ಶಾಸನವು ಭೂದಾನದ ಬಗ್ಗೆ ವಿವರಿಸುತ್ತದೆ. ದೇಗಲ್ಮಡಿಯ ಸಂಗಮೇಶ್ವರ ಗುಡಿಯ ಬಳಿಯಲ್ಲಿರುವ ಶಾಸನ ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿದೆ. ಇದು ಮಹಾದಂಡನಾಯಕನಾದ ಬಮ್ಮನಾಯಕ ದೇವಾಲಯ ನಿರ್ಮಿಸಿ, ದೇವರಿಗೆ ಮತ್ತು ತಪೋಧನರಿಗೆ ಭೂದಾನ ಮಾಡಿದ ಎಂದು ತಿಳಿಸುತ್ತದೆ.[೩] ಶಿರೋಳ್ಳಿಯ ನಾಗಲಿಂಗೇಶ್ವರ ಗುಡಿಯ ಶಾಸನದಲ್ಲಿ ದಂಡನಾಯಕ ವಿಮಲಾದಿತ್ಯ ಮತ್ತು ಅವನ ಸೋದರ ಚಂದ್ರ ಸಿರಿವೋಳಲಲ್ಲಿ ಮೂರು ದೇವಾಲಯ ಮತ್ತು ಒಂದು ಕೆರೆ ಕಟ್ಟಿಸಿದ ಮತ್ತು ದಾನ ನೀಡಿದ ವಿಷಯವನ್ನು ತಿಳಿಸುತ್ತದೆ.[೪] ಶಿರೋಳ್ಳಿಯಲ್ಲಿನ ಹೂಡ್ಯಾದ ಮೇಲಿನ ಶಾಸನ ನಾರಾಯಣ ಶೆಟ್ಟಿಯು ಸತ್ರವನ್ನು ನಿರ್ಮಿಸಿ ೪೦ ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ.[೫] ಮೋಘಾದ ಪಂಚಾಯತ್ ಕಟ್ಟೆಯ ಬಳಿ ದೊರೆತ ಶಾಸನ ಆದಿತ್ಯ ದೇವರನ್ನು ಪ್ರತಿಷ್ಠಾಪಿಸಿ, ಅದರ ಪೂಜಾ ವಿಧಿಗೆಂದು ಬಾಲಚಂದ್ರ ಭಟಾರರಿಗೆ ೩೦೦ ಮತ್ತರು ಭೂಮಿ ದಾನ ಬಿಟ್ಟ ವಿಷಯ ತಿಳಿಸುತ್ತದೆ.[೬] ಮೋಘಾದ ರಾಮಲಿಂಗೇಶ್ವರ ದೇವಾಲಯದ ಕಳಚೂರಿ ಕಾಲದ ಶಾಸನ ರಾಮನಾಥ ದೇವಾಲಯ ಹಾಗೂ ರಾಮತೀರ್ಥವನ್ನು ವಾಸಪ್ಪಯ್ಯ ದಂಡನಾಯಕನು ಮಾಡಿಸಿದಾಗ ಮಹಾಮಂಡಲೇಶ್ವರ ವೀರಗೊಂಕರಸ, ರಾಣಿ ಮೈಳಲದೇವಿ ಹಾಗೂ ಕುಮಾರ ಮಲ್ಲದೇವರಸರು ಮೋಘಾದ ದೇಗುಲಕ್ಕೆ ದಾನ ಕೊಟ್ಟ ವಿಷಯ ತಿಳಿಸುತ್ತದೆ.[೭]

೩.೨.೫. ಸಾಮಾಜಿಕ ದಾನ ಶಾಸನಗಳು

(ಅಗ್ರಹಾರ, ದೇವಾಲಯ ನಿರ್ಮಾಣ ಮತ್ತು ಕೆರೆ, ಕೋಟೆ, ದರ್ಗಾ ನಿರ್ಮಾಣ ತಿಳಿಸುವ ಶಾಸನಗಳು)

ಪಸ್ತಾಪುರ ಗುಡ್ಡದ ಮೇಲಿನ ಶಾಸನವು ತೋನಿಪಲ್ಲಿ ಅಗ್ರಹಾರ ಕಟ್ಟಿಸಿದ ವಿಷಯ ತಿಳಿಸುತ್ತದೆ.[೮] ನಾಗಲಿಂಗೇಶ್ವರ ಗುಡಿಯ ಶಾಸನವು ಹರಿಹರನ ತ್ರಿಕೂಟ ದೇವಾಲಯ ಮತ್ತು ಕೆರೆ ಕಟ್ಟಿಸಿದ ವಿಷಯ ತಿಳಿಸುತ್ತದೆ. ಕೇಶಾವರ್ ಜೈನ ಬಸದಿಯ ಮುಖಮಂಟಪದ ಶಾಸನ ಪಾರ್ಶ್ವನಾಥ ಚೈತ್ಯಾಲಯವನ್ನು ನಿರ್ಮಿಸಿದ ವಿಷಯ ತಿಳಿಸುತ್ತದೆ.[೯] ಚಿಂಚೋಳಿಯ ಒಂದು ಪರ್ಶಿಯನ್ ಶಾಸನ ಅಮಿರ್‌ಖಾನ್ ಕೋಟೆ ನಿರ್ಮಿಸಿದ ಎಂದು ತಿಳಿಸುತ್ತದೆ.[೧೦] ಚಿಂಚೋಳಿಯ ಎರಡು ಪರ್ಶಿಯನ್ ಶಾಸನಗಳಲ್ಲಿ ಒಂದು ಸಿದ್ದಿ ಬಷೀರ್ ದರ್ಗಾದ ಬಾಗಿಲು ನಿರ್ಮಿಸಿದ ಅಂಶ ತಿಳಿಸುತ್ತದೆ. ಇನ್ನೊಂದು ದಲೀಲ್‌ಖಾನ್‌ನು ದರ್ಗಾಕ್ಕೆ ಕಮಾನುಳ್ಳ ಬಾಗಿಲವಾಡ ನಿರ್ಮಿಸಿದ ವಿಷಯವನ್ನು ತಿಳಿಸುತ್ತದೆ.[೧೧]

ಸ್ಮಾರಕ ಶಾಸನಗಳು

ಊರಿನ ಗಣ್ಯ ಅಧಿಕಾರಿ, ರಾಜ ಇಲ್ಲವೆ ವ್ಯಕ್ತಿಯ ಮರಣ ಹೊಂದಿದ ವಿಷಯವನ್ನು ದಾಖಲಿಸುವ ಶಾಸನವೆ ಸ್ಮಾರಕ ಶಾಸನ ಎಂದು ಕರೆಯುತ್ತಾರೆ. ಉದಾ:- ಚಿಂಚೋಳಿಯ ಗಡಿ ಕೇಶಾವರ್‌ನ ಜೀರಾಬಾವಿಯ ಬಳಿ ದೊರೆತ ಶಾಸನವೊಂದು ಪ್ರಸಿದ್ಧ ವ್ಯಾಪಾರಿಯಾದ ಬಮ್ಮಸೆಟ್ಟಿಯು ಮರಣ ಹೊಂದಿದ ವಿಷಯವನ್ನು ದಾಖಲಿಸಿದೆ.[೧೨]

ನಾಮಸೂಚಾವಳಿ ಶಾಸನಗಳು

೧೨ನೆಯ ಶತಮಾನದ ಜವಳಿ ಶಾಸನ ವಾಮರಸ ದಂಡನ್ನೆ(ನಾ)ಯಕರವ್ರಿತ್ತಿ ಎಂದಿದೆ. ರಟಕಲ್‌ನ ಬಂಕನಾಥ ದೇವಾಲಯದ ನವರಂಗದ ಕಂಬವೊಂದರ ಪೀಠದ ಮೇಲಿರುವ ಶಾಸನವು ಇಲ್ಲಿಯ ದೇವರನ್ನು ಬಂಕೇಶ್ವರನೆಂದು ಕರೆದಿದೆ.[೧೩] ನವಕೋಟಿ ನಾರಾಯಣ ಗುಡಿಯ ನವರಂಗದ ಕಂಬದ ಮೇಲಿನ ಶಾಸನವು ರಾಷ್ಟ್ರಕೂಟ ಅರಸ ಅಕಾಲವರ್ಷ ಮತ್ತು ಅವನ ಬಿರುದು ಹಾಗೂ ವರ್ಷ ಕ್ರಿ.ಶ. ೯೩೫ ಎನ್ನುವ ಕಾಲವನ್ನು ಸೂಚಿಸುತ್ತದೆ.[೧೪] ಸುಲೇಪೇಟೆಯ ಈಶ್ವರ ದೇವಾಲಯದ ಶಾಸನವೊಂದು ಒಂದನೇ ಸೋಮೇಶ್ವರನ ಕಾಲದ್ದಾಗಿದೆ. ಕ್ರಿ.ಶ. ೧೦೬೦ರ ಶಾಸನದಲ್ಲಿ ಸುಲ್ಲಿಗ್ರಾಮ ಎಂಬ ಉಲ್ಲೇಖವಿದೆ.[೧೫]

ಪ್ರಶಸ್ತಿ ಶಾಸನಗಳು

ಅಫಜಲ್‌ಪುರದ ಕ್ರಿ.ಶ. ೧೧೦೭, ಗೊಬ್ಬೂರು ಕ್ರಿ.ಶ. ೧೧೪೦ರ ಶಾಸನ ಪ್ರಶಸ್ತಿ ಶಾಸನವಾಗಿದೆ. ಮೋಘಾದ ರಾಮಲಿಂಗೇಶ್ವರ ದೇವಾಲಯದ ಶಾಸನವು ದಾನ ಶಾಸನ ಹೊರತಾಗಿ ಪ್ರಶಸ್ತಿ ಶಾಸನವೂ ಆಗಿದೆ. ಇದು ಕಲ್ಯಾಣ ಚಾಲುಕ್ಯರ ೬ನೆಯ ವಿಕ್ರಮಾದಿತ್ಯನ ಮತ್ತು ಕಳಚೂರಿಯ ಬಿಜ್ಜಳ ದೇವನ ಸಾಧನೆಗಳನ್ನು ಮತ್ತು ಬಿರುದುಗಳನ್ನು ವಿವರಿಸುತ್ತದೆ. ಅಲ್ಲದೆ ಮಹಾಮಂಡಳೇಶ್ವರನಾದ ವೀರಗೊಂಕ ದೇವನ ಬಗ್ಗೆ ಸ್ತುತಿಸುವ ಶಾಸನ ಇದಾಗಿದೆ. ಶಿರೋಳ್ಳಿಯ ನಾಗಲಿಂಗೇಶ್ವರ ಗುಡಿಯ ಶಾಸನವು ದಾನದ ವಿಷಯ ತಿಳಿಸುವುದರೊಂದಿಗೆ ೬ನೆಯ ವಿಕ್ರಮಾದಿತ್ಯನ

ಸಾಧನೆಗಳನ್ನು ಮತ್ತು ಕಲ್ಯಾಣ ಚಾಲುಕ್ಯರ ಮೂಲ ವಂಶಸ್ಥಾಪಕರ ಕುರಿತು ವಿವರಣೆ ನೀಡುತ್ತದೆ. ಕಲ್ಯಾಣ ಚಾಲುಕ್ಯ ವಂಶದ ರಾಜರ ಗುಣಗಾನ ಇದರಲ್ಲಿ ವ್ಯಕ್ತವಾಗಿದೆ. ವಿಮಳಾದಿತ್ಯ ದಂಡನಾಯಕ ಮತ್ತು ಚಂದ್ರಾದಿತ್ಯರನ್ನು ಹೊಗಳುವ ಹೊಗಳಿಕೆ ಇದರಲ್ಲಿದೆ. ದೇಗಲ್ಮಡಿಯ ಸಂಗಮೇಶ್ವರ ದೇವಾಲಯದ ಶಾಸನವು ೬ನೆಯ ವಿಕ್ರಮಾದಿತ್ಯನ ಬಿರುದುಗಳ ವಿವರ ಮತ್ತು ಹೊಗಳಿಕೆಯನ್ನು ಹೊಂದಿರುವ ಶಾಸನವಾಗಿದೆ.[೨]

ದತ್ತಿ ಶಾಸನಗಳು

ಮಡಿಹಾಳದ ಕ್ರಿ.ಶ. ೧೩ನೆಯ ಶತಮಾನದ ಶಾಸನವು ದತ್ತಿ ಶಾಸನವಾಗಿದೆ. ಕೇಶಾವರದ ಪಾಳು ಸಿದ್ದಪ್ಪನ ಗುಡಿಯ ಶಾಸನ ಬ್ರಹ್ಮಚಾರಿಗಳಿಗೆ ದತ್ತಿಕೊಟ್ಟ ಅಂಶ ತಿಳಿಸುತ್ತದೆ.[೭] ನಿಡಗುಂದದ ಕಾಳಮ್ಮನ ಗುಡಿಯ ನವರಂಗದ ಶಾಸನ ವಿಷ್ಣುವರ್ಧನ ವೀರಪೆರ್ಮಾಡಿ ದೇವನ ಕಾಲದ ದತ್ತಿ ಶಾಸನವಾಗಿದೆ.[೮] ಮಡಿಹಾಳದ ಶಾಸನವು ಶ್ರೀ ಶಂಕರ ದೇವರಿಗೆ ನಾಯಕ ನಾರಾಯನ ಲಕ್ಷ್ಮಿ(ದೇವ)ನ ರಾಯಬಡಿ(ಕಾ)ರವಾಯಿದೇವನ ಬಿನಪದಿಂ ಪರಮೇಶ್ವರ ದತ್ತಿ.[೯] ಬೆಳಂಬಿಗೆಯ ಕ್ರಿ.ಶ.೧೧೯೩ರ ಶಾಸನದಲ್ಲಿ ಎಂಗಲ ದೇವಿಯರು ತ್ರೈಪುರುಷ ದೇವಾಲಯವನ್ನು ಮಾಡಿಸಿ ಅದಕ್ಕೆ ದತ್ತಿ ಬಿಟ್ಟ ವಿವರಣೆಯಿದೆ. ತಿಳಿಗೋಳ ಕ್ರಿ.ಶ.೧೦೩೯ ಮತ್ತು ಚಂಚನಸೂರು ಕ್ರಿ.ಶ. ೧೩೦೨ರ ಶಾಸನಗಳು ದತ್ತಿಶಾಸನಗಳಾಗಿವೆ.

ಜೀರ್ಣೋದ್ಧಾರ ಅಂಶ ಒಳಗೊಂಡ ಶಾಸನಗಳು

ಕೇಶಾವರ್ (ಗಡಿ)ಯ ಒಂದು ಶಾಸನ ಕ್ರಿ.ಶ. ೧೩೮೫ರಲ್ಲಿ ಜೈನ ಬಸದಿಯನ್ನು ಜೀರ್ಣೋದ್ಧಾರ ಮಾಡಿದ ವಿಷಯವನ್ನು ತಿಳಿಸುತ್ತದೆ.

ವೀರಗಲ್ಲುಗಳು

ವೀರರು, ಸತಿಹೋದವರು, ಗಡಿಕಾಯುವವರ ಬಗ್ಗೆ ಶಿಲ್ಪ ಮತ್ತು ಲಿಖಿತ ದಾಖಲೆಗಳನ್ನು ತಿಳಿಸುವವುಗಳಾಗಿವೆ. ವೀರಗಲ್ಲು, ಮಾಸ್ತಿಗಲ್ಲು ಮತ್ತಿತರೆ ಸ್ಮಾರಕವುಳ್ಳ ಶಾಸನಗಳು ಈ ಭಾಗದಲ್ಲಿ ದೊರಕಿವೆ. ಶ್ರೀನಿವಾಸ ಸರಡಗಿಯ ವೀರಗಲ್ಲು ಶಾಸನ, ಖಣದಾಳ್ ಮತ್ತು ಬೇಡಕ್ ಪಲ್ಲಿಯ ಗಡಿರೇಖೆಯ ಸ್ಮಾರಕ ಶಾಸನಗಳನ್ನು ಉದಾಹರಿಸಬಹುದಾಗಿದೆ.

೩.೩. ಶಾಸನಗಳ ಸಮೀಕ್ಷೆ

ಶಾಸನಗಳ ಸಮೀಕ್ಷೆ

ಸ್ಥಳ : ಅಫ್ಜಲ್‌ಪುರ	**ಆಳಿದ ದೊರೆ:** ಕಲ್ಯಾಣ ಚಾಲುಕ್ಯರ ತ್ರಿಭುವನಮಲ್ಲ
ಕಾಲ : ಕ್ರಿ.ಶ.೧೧೦೭	**ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬–
ಭಾಷೆ: ಕನ್ನಡ	**(ಪು.ಸಂ:** ೦೪–೦೬)

ವಿವರಣೆ – ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವಿವಲ್ಲಭ ಮಹಾ ರಾಜಾಧಿರಾಜ ಪರಮೇಶ್ವರ ಪರಮ ಭಟ್ಟಾರಕಂ, ಸತ್ಯಾಶ್ರಯ ಕುಲತಿಲಕ ಚಾಲುಕ್ಯಾಭರಣನಾದ ಶ್ರೀ ತ್ರಿಭುವನಮಲ್ಲ

ದೇವರ ವಿಜಯ ರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನ. ಆ ಚಂದ್ರರ್ಕ ತಾರಾಂಬರ. ರಾಜಧಾನಿ ಕಲ್ಯಾಣದ ನೆಲದಲ್ಲಿ ಸುಖದಿಂದ ರಾಜ್ಯವಾಳುತ್ತಿದ್ದರು. ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರ ತಗರ ಪುರವರಾಧೀಶ್ವರ, ಸುವರ್ಣ ಗರುಡ ಧ್ವಜ ಜೀಮೂತ ವಾಹನಾನ್ವಯ, ಪ್ರಸೂತ ಶೌರ್ಯ ರಘುಜಾತನು, ಶಿಳಾರಕುಳಮಳ ಮಾರ್ತ್ತಂಡ, ಕದನ ಪ್ರಚಂಡ ಎಂಬ ಬಿರುದು ಪಡೆದ ಶ್ರೀ ಮನ್ನೆಯ ಮಹಾಮಂಡಳೇಶ್ವರ ಡಾಂಕರಸ ಎಂದು ಉಲ್ಲೇಖಿಸಿದೆ.

ದೇವ ಅಬ್ಬರಸಿಯರು ಸಮಧಿಗತ ಪಂಚಮಹಾಶಬ್ದ ಮಹಾಸಾಮಂತಾಧಿಪತಿ, ಮಹಾಪ್ರಚಂಡ ದಂಡನಾಯಕ, ಯುವರಾಜನಾದ ಮಲ್ಲಿಕಾರ್ಜುನ ದೇವರ ಮಹಾಪ್ರಧಾನ ನಾಚಿಮರಸರೊಂದಿಗಿದ್ದು, ಚಾಲುಕ್ಯ ವಿಕ್ರಮ ವರ್ಷ೩೨ನೆಯ ಸರ್ವಜಿತ್ಸಂವತ್ಸರದ ಆಷಾಢದ ಪೂರ್ಣಮಾಸ್ಯೆ, ಬ್ರಹಸ್ಪತಿವಾರ ಸೋಮಗ್ರಹಣದ******ಕಾಲದಲ್ಲಿ ಭಾಸ್ಕರ ಪಾದಗಳಲ್ಲಿ ಯುಗಭ್ರಮರನೆನಿಸಿದ************ನಾದರ ದಿನತೆ ಬಿಬ್ಬೆಯಾಗಿರೆ ಸುರ*******ಬ್***ಕೃತ ಪೊರ್ತ್ತಮಂ ಮಾಡಿಸಿದಂ*******,****ರ ಮಾಡಿಸಿ ಶಾಸನದೊಳು ಬರೆದ ಪುಣ್ಯ***ಕರ್ತವದಿಂದಂ ನಾಸುರ******,**** ಪಾನಶಮನೆನಿಪ ಜಸಮಧಿ***** ಸಮಸ್ತಗುಣ ಸಂಪನ್ನ ಸುಜನ ಪ್ರಸನ್ನ ಧರ್ಮ ವಾಸನೋತ್ಪನ್ನ ನುಡಿದು ಮತ್ತೆನ್ನ ದ್ವಿಜಧೀಶಗುರು***** ಎಂದು ಉಲ್ಲೇಖಿತವಾಗಿದೆ. ಇದರಲ್ಲಿ ಯುವ ರಾಜನಾಗಿರುವ ಮಲ್ಲಿಕಾರ್ಜುನನು ಮಹಾ ಪ್ರಧಾನನಾಗಿರುವ ನಾಚಿಮರಸರೊಂದಿಗೆ ದಾನ ನೀಡಿದ ಉಲ್ಲೇಖವಿದೆ. ಬಹಳಷ್ಟು ಅಕ್ಷರಗಳು ಸ್ಪಷ್ಟವಾಗಿಲ್ಲ.

ವಿಜಯೋತ್ತುಂಗ ಶಿಷ್ಟಪ್ರತಿಪಾಲ ದುಷ್ಟರ ಮನೋಭಂಗ****** ಚರಿತ್ರ ವಾದಿರಾಜನ ಪುತ್ರ******** ತಿಲಕ*******,*****ಹ ಶಕ್ತಿತ್ರಯ ಸಂಪನ್ನ ಜಯಲಕ್ಷ್ಮಿ ವಾಸನ್ನ ನಾಮಾದಿ ಸಮಸ್ತ ಪ್ರಶಸ್ತಿ****,***** ದತ್ತಿನಾಪುರದ ಪ್ರಭು ರೇವಣಯ್ಯ ನಾಯಕರು ತ್ರೈಕೂಟದ*******ಯದ ರೇವಣೇಶ್ವರ ದೇವರಿಗೆ ಮೂಡ ನಗರೇಶ್ವರ ಕೋಲಲು ಬಿಟ್ಟ ನೂರು ಮತ್ತರು ಭೂಮಿ, ಅಂಕ********** ಮಗುಂ ಆ ಭೂಮಿಯೊಳಗೆ ಸತ್ರಕೆ ಮತ್ತರು ೨೦,***೧೨ ಮೇಲಾದ ಭೂಮಿ ದೇವ ರಂಗಭೋಗಕ್ಕೆ, ನೈವಿದ್ಯೆಕ್ಕೆ, ಬಸದಿಯ ತೋಟದಿಂದ ಮ***** ಗ್ರಾಮವನ ತೋಟದಿಂದ ತೆಂಕಲು ಕೋಲಲು ತೋಟ ಮತ್ತರು ೧ಗಾಣ, ಮ*****ನ್ನೆಯಲು ಸಿರಿವಟ್ಟಿಗೆ ತತ್ಸಂಬಂಧ ಬ್ರಹ್ಮಪುರಿಯಾಗಿ ಬೀಚನಳ್ಳಿಯ********ದರಲು ಹೆರದ ಕೆರೆಯಿಂ ಪಡುವಲು ದೇವಣಭಟ್ಟರ್ಗ್ಗೆ ಮತ್ತರು೨೫॥ ಬಟ್ಟೆಯಿಂ ತೆಂಕಲು ಕಲುಕಣಿಯಿಂ ಮೂಡಲು ಶ್ರೀಧರ ಘೈಸಂಸರ್ಗ್ಗೆ ಮತ್ತರು****** ಬಿಟ್ಟ ವೃತ್ತಿಗೆ ಮತ್ತರು ೨೫. ಆ ಪ್ರಮಾನದಿಂದೊಂದ ನೂರದಾರಿ ಬಡ ****೨೫ ಅಂತು ಮತ್ತರು ೫೦ ಇನ್ತಿ॥ ಶಾಪಾಶಯ ವಿವರಣೆಯಿದೆ. ಮೇಲಿನ ಎರಡನೆಯ ಸಾಲಿನಲ್ಲಿರುವ ಪ್ರಶಸ್ತಿ ಸಹಿತ ಶಾಸನದಲ್ಲಿ ದತ್ತಿನಾಪುರ ಎನ್ನುವುದು ಹಸ್ತಿನಾಪುರ ಎಂದಿರಬಹುದಾಗಿದೆ? ಏಕೆಂದರೆ ಇದಕ್ಕೆ ಪ್ರಾಚೀನ ಕಾಲದಲ್ಲಿ ಹಸ್ತಿನಾಪುರ ಎಂದು ಕರೆಯುತ್ತಿದ್ದರು. ತ್ರೈಕೂಟದ ಎನ್ನುವಲ್ಲಿ ತ್ರೈಕೂಟ ದೇವಾಲಯ ಎಂದಿರಬಹುದು. ಈ ಸಾಲುಗಳಲ್ಲಿ ಗಾಣ, ಸಿರಿವಟ್ಟಿಗೆ, ಬ್ರಹ್ಮಪುರಿ ಬೀಚನಳ್ಳಿ, ಹೆರದ ಕೆರೆ, ಕಲ್ಲಿನ ಖಣಿಯ ಉಲ್ಲೇಖಗಳಿವೆ. ತ್ರಿಕೂಟ

ರೇವಣೇಶ್ವರ? ದೇವಾಲಯಕ್ಕೆ ಅಂಗಭೋಗ, ರಂಗಭೋಗ, ನೈವಿದ್ಯಕ್ಕೆ, ಛತ್ರಕ್ಕೆ ಪ್ರಭು ರೇವಣ ನಾಯಕರು ದಾನ ಬಿಟ್ಟ ಉಲ್ಲೇಖವಿದೆ.

ಸ್ಥಳ: ಆತನೂರು | **ಆಳಿದದೊರೆ:** ಕಲಚೂರಿಗಳು?
ಕಾಲ: ಸು.೧೨ನೆಯ ಶತಮಾನ | **ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ ೧೯೯೬-
ಭಾಷೆ: ಕನ್ನಡ | (ಪು.ಸಂ: ೦೩)

ವಿವರಣೆ- ಪರಾಭವ ಸಂವತ್ಸರದ ಸಂಕ್ರಮಣದಂದು ಆವಂಚಿಗೆಯ ನಾಮರಸನ ತಮ್ಮ ಬಾಚರಸ ತಮ್ಮನ್ನ ಪುಲ್ಲಿವಿಗೆಯ ಸಿದ್ದಾಯ ಒಳಗೆ **ಹಣ ಐದು ಸೋಡರೆಣ್ಣೆಗೆ** ಬಿಟ್ಟ ಬಗ್ಗೆ ತಿಳಿಸುತ್ತದೆ.

ಸ್ಥಳ: ಆಳಂದ | **ಆಳಿದ ದೊರೆ:** ಚಾಲುಕ್ಯ ತ್ರಿಭುವನಮಲ್ಲ ವಿಕ್ರಮಾದಿತ್ಯ
ಕಾಲ: ೧೦೮೨ | **ಪ್ರಕಟಣೆ:** ಹೈ..ಕ.ಭಾ.ಕ.ಶಿ.ಶಾ–ವ್ಹಿ.ಶಿವಾನಂದ ೧೯೯೨.
ಭಾಷೆ: ಕನ್ನಡ | (**ಪುಸಂ:** ೨೬–೩೦)

ಆದಿತ್ಯವಾರದ ಅಲಂದೆ ಸಾಸಿರದ ಮೊದಲ ಬಾಡವಲಂದಾಪುರದಲ್ಲಿ ಸೋಮೇಶ್ವರ ದೇವ ರಂಗಭೋಗಕ್ಕೆ ಶ್ರೀ ಬಲ್ಲವರಸರ್ ಚಂದಲದೇವಿ (ಶ್ರೀನೃತ್ಯ ವಿದ್ಯಾಧರಿ ಎಂಬ ಬಿರುದು ಇರುವ ಬಗ್ಗೆ ತಿಳಿಸುತ್ತದೆ) **ಪೇರುವೆತ್ತಿಂಗೆ ಪೆರ್ಜುಂಕ ಬಿಲ್ಕೊಡೆ** ವಡ್ಡರಾವುಳವೊಳಗಾಗಿ ಸುಂಕವೆಲ್ಲ ಪರಿಹಾರಂ ಮಾಡಿಬಿಟ್ಟ ಮತ್ತಂ ಶ್ರೀ ಬಲ್ಲವರಸರಿಗೆ ಯುವರಾಜ ಮಲ್ಲಿಕಾರ್ಜುನ ಬಿನಪಗೆಯ್ದಲನ್ದೆಯ ಸ್ವಯಂಭು ಸೋಮೇಶ್ವರ ದೇವರ್ಗ್ಗಾಳ್ವ ೧೨ರ ಡೂರ್ಗ್ಗಾಳ ಜಲ್ಲಂ ಕಳವಳಿಕೆ ಸಾವಂ ಬಣಿಗೆಯನೆ ಪರಿಹಾರ ಮಾಡಿಬಿಟ್ಟ ಮತ್ತಂ ಪಟ್ಟಣದ ಹೆಗ್ಗಡೆ ಗೊಮ್ಮಲಯ ನಾಯಕನ ಬಿನ್ನಪದಿಂ ಕುಮಾರ ಸೋಮೇಶ್ವರ ದೇವರ ನಂದಾದೇವಿಗೆ ಗಲಂದೆಯ **ಮುದ್ರಾವಣದ** ಸುಂಕದೊಳಗೆ ತಿಂಗಳ್ದಿಂಗಳ್ಗೆ ಹತ್ತು ಹತ್ತು **ದ್ರಮ್ಮಮಂ** ಬಿಟ್ಟಂ ಗೋಮಲ್ಲಯ್ಯನ ಭಾವ ಸಿಲಪಯ್ಯ ತಪೋಧನರ್ಗಂ, ಚಾತ್ರರ್ಗಂ, ವಿದ್ಯಾರ್ತ್ಥಿ, ಮಾಣಿಯರ್ಗಂ, ಹರ್ಣ್ನ ಬಟ್ಟಿಯಂ ಪಡುವಣ ಬಲದೇವನಾರವೇಯಲು ನಾಲ್ಕು ಮಾವಿನ ಮರವ ಬಿಟ್ಟನಲನ್ದೆಯನಗರಂ ದೇವರಿಗೆ ಮಾರಿದ ಪೇರುಂಗಯ್ವತ್ತೆಲೆಯಂ ಬಿಟ್ಟರಿನ್ತಿನಿತುಮಂ ನಗರ ಮಹಾಜನ ಪಂಟಮಠ ಸ್ಥಾನಮಾಚಂದ್ರಾರ್ತ ಸ್ವಾಮಿಯವರು ನಡೆಯಿಸುವರು॥ ನಾಚರಸ ತಾಂಪರಾರ್ತ್ಥ ವಿದ್ಯಾಧರೇಂದ್ರ ಪೆಸರಂ ಪಡೆದಂ ಆ ನಾಚಿ ದಂಡಾಧಿಪತಿ ಎನ್ನುವ ಉಲ್ಲೇಖಗಳಿವೆ. ಉಳಿದದ್ದು ಶಾಪಾಶಯವಿದೆ. ಯುವರಾಜ ಮಲ್ಲಿಕಾರ್ಜುನ ಅಲಂದೆ ಸಾಸಿರ ನಾಡಿನ ಅಧಿಪತಿಯಾಗಿದ್ದನು. ಅವನ ಕೈಕೆಳಗಿನ ಪೆರ್ಗಡೆ ದಂಡನಾಯಕ ನಾಚರಸ ಮತ್ತು ಸಾಮಂತ ಕಾಳಿದಾಸರು ಸ್ವಯಂಭೂ ಸೋಮೇಶ್ವರ ದೇವರಿಗೆ ಅಲ್ಲಿನ ಸ್ಥಾನಪತಿಗಳಾದ ಸೂರೇಶ್ವರ ಪಂಡಿತರಿಗೆ ಭೂಮಿ, ಮಾವಿನ ಅರವೆ ಹಾಗೂ ಮತ್ತಿತರ ಮಾರಾಟದ ಹಾಗೂ ಸುಂಕದ ವಸ್ತುಗಳನ್ನು ಬಾಧಾ ಪರಿಹಾರವಾಗಿ ಧಾರೆಯೆರೆದರು ಈ ದತ್ತಿ ಯುವರಾಜನ ರಾಣಿ ಚಂದಲದೇವಿಯರ ಭಿನ್ನಪದ ಮೇರೆಗೆ ನೀಡಿದ ಸಂಗತಿ ತಿಳಿಸುತ್ತದೆ.

ಸ್ಥಳ: ಏನಗುಂಟಿ ಆಳಿದ ದೊರೆ: ಚಾಲುಕ್ಯ ವಿಕ್ರಮಾದಿತ್ಯ-೬

ಕಾಲ: ೧೧೨೨ ಪ್ರಕಟಣೆ: ಹೈ.ಕ.ಭಾ.ಕ.ಶಿ.ಶಾ., ೧೯೯೨

ಭಾಷೆ: ಕನ್ನಡ ಪು. ೧೨೦-೧೨೧

ಏನಗುಂಟಿಯ ಮಹಾ ಜನರು ಅರಸು ಸಮಸ್ತ ಪ್ರಜೆಗಳು ಊರ ಮಧ್ಯೆದ ಭೋಗೇಶ್ವರ ದೇವರ್ಗೆ ಹಾಗೂ ಅರಸು ದೇವರ ಶ್ರೀಖಣ್ಡಿಯ ನೈವೇದ್ಯಕ್ಕೆ ಭುಮಿ ಅಂಗಡಿಗಳನ್ನಲ್ಲದೆ ಮಾರಾಟದ ವಸ್ತುಗಳ ಮೇಲಿನ ಧಾನ್ಯವನ್ನು ದತ್ತಿಯಾಗಿರಿಸುವುದು. **ಶ್ರೀಮದಗ್ರಹಾರಂ ಏೆಯನಗುಂಟಿ**ಯ ಶೇಷ: ಮಹಾಜನನೂರ ಈರ್ಪ್ಪದಿರ್ಬರು ಅರಸು ಸಮಸ್ತ ಪ್ರಾಚಾಗರಿವಿರ್ದು ಊರ ನಡುವಿನ ಶ್ರೀ ಭೋಗೇಶ್ವರ ದೇವರ್ಗೆ ಕಾಲ ಮತ್ತರು ೨, ದೇವರ ಮುನ್ದಣ ಅಂಗಡಿ ೨ ಮಾನ್ಯ ಭತ್ತವನು ಅಳದಲಿ ಕೊಂಡಲ್ಲಿ ಮಾನ ೨ ಕೊಟ್ಟಲ್ಲಿ ಮಾನ ೨ ಇನ್ತಿನಿತು ಅರಲುದೇವರ ಶ್ರೀ ಖನ್ಡಯವ ನೈವೇದ್ಯವಂ ನಡೆಸುವರು.

ಸ್ಥಳ: ಕಲಬುರ್ಗಿ ಆಳಿದ ದೊರೆ: ?

ಕಾಲ: ೧೬೦೦ ಪ್ರಕಟಣೆ: ಹೈ.ಕ.ಭಾ.ಕ.ಶಿ.ಶಾ. ವ್ಹಿ.ಶಿವಾನಂದ, ೧೯೯೨

ಭಾಷೆ: ಕನ್ನಡ ಪು. ೨೬೨.

ಕೆಳಭಾಗದಲ್ಲಿ ಕತ್ತೆ ಹಾಗೂ ನಿಂತ ಸ್ತ್ರೀ ಗೊಂಬೆಯ ಕೆತ್ತನೆ ಶಾಸನದಲ್ಲಿದೆ ಎಂದು ಉಲ್ಲೇಖಿಸಲಾಗಿದೆ. ಸಂತೆಯಲ್ಲಿ ಅಂದು ಮಾರಾಟಮಾಗುತ್ತಿದ್ದ ನಿತ್ಯ ವ್ಯವಹಾರದ ಹಣ್ಣು ಕಾಯಿಗಳ ಬೆಲೆಗಳನ್ನು ದಮ್ಮ, ದಮ್ಮಾಣಿ ರೂಪದಲ್ಲಿ ತಿಳಿಸಿರುವುದು. ದಮ್ಮವು ನಾಲ್ಕು ಕಾಸಿಗೆ ಸಮವಾಗಿದ್ದು ಈ ನಾಣ್ಯದ ಬಳಕೆ, ಮಾರಾಟದ ವಿಶೇಷವಾಗಿ ಮಸಾಲೆ ಜೀನಸು ಹಾಗೂ ಹಣ್ಣು ತರಕಾರಿಗಳ ಕೊಡು-ಕೊಳೆಯಲ್ಲಿ ಪ್ರಚಲಿತವಿತ್ತೆಂಬುದಕ್ಕೆ ಶಾಸನಗಳಲ್ಲಿ ಆಧಾರಗಳಿವೆ.

ವಿವರಣೆ- ಅಲ್ಲಕೆ ೩ ದಮ್ಮ ನಿಂಬೆಯ ಕಾಹಿಗೆ ೩ ದಮ್ಮ ಬಾಳೆಯ ಹಣ್ಣಿಗೆ ೩ ದಮ್ಮ ಮಾವಿನ ಹಣ್ಣಿಗೆ ೩ ದಮ್ಮ ನೆಲ್ಲಿಯ ಕಾಇಗೆ ೧ ದಮ್ಮ ಮಾವಿನ ಕಾಇಗೆ ೧ ದಮ್ಮ ಹುಣಿಸೆಯ ಹಣ್ಣಿಗೆ ೧ ದಮ್ಮ ಹಾಣಿ ಬಳಕೆ ಮಾರುವರು ಎಂದು ವಿವರಿಸಲಾಗಿದೆ.

ಸ್ಥಳ: ಕಡಗಂಚಿ ಆಳಿದ ದೊರೆ: ಶ್ರೀ ತ್ರೀಭುವನಮಲ್ಲ ದೇವರು

ಕಾಲ: ಕ್ರಿ.ಶ.೧೧೧೮ ಪ್ರಕಟಿತ: ಕ.ಜಿ.ಶಾ. ಹನುಮಾಕ್ಷಿ ಗೋಗಿ ೧೯೯೬

ಭಾಷೆ: ಕನ್ನಡ ಪು. ೪೦

ಶ್ರೀ ತ್ರೀಭುವನಮಲ್ಲ ದೇವರು ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನ ಮಾಚಂದ್ರಾರ್ಕ್ಕ ತಾರಂ ಸಲುತ್ತಂ ಜಯಂತಿಪುರ ನೆಲೆವೀಡಿನಲ್ಲಿ ಸುಖದಿಂದ ರಾಜ್ಯವಾಳುತ್ತಿದ್ದರು (ಪು.ಸಂ.೪೦. ೪-೭ನೆಯ ಸಾಲು).

ಶ್ರೀಮನ್ ಮಹಾಮಂಡಳೇಶ್ವರ ಹೆರ್ಮಾಡಿಯರಸರು ನಿಜಕೀರ್ತಿ ಮಂದಾಕಿನಿ, ಪವಿತ್ರೀಕೃತ ದಿಗಂಗಣಮುಖ, ಚತುರ್ವಿಧ ಬಲಸಮರ ಷಣ್ಮುಖ, ದೀನಾನಥಶ್ರಿತಂ, ಶಿಷ್ಟೇಷ್ಟಜನ, ಕನಕವೇಷ ಸುಜನಜನಚಿತ್ತ, *** ವಳರಿ ಮದನಿವಾರಣ, ನಕಭರ ವಾರಣಂ, ನಿಜಕುಲಮಾರ್ತಂಡ, ಮಂಡಳೇಶ್ವರ ಗಂಡ, 'ತ್ರಿಭುವನಮಲ್ಲ ದೇವಪಾದಾರಾಧಕಂ' ಪರಬಲಸಾಧಕ ಎಂಬ ಪ್ರಶಸ್ತಿ ಹೊಂದಿರುವುದನ್ನು ಉಲ್ಲೇಖಿಸಲಾಗಿದೆ (ಪು.ಸಂ.೪೦. ೮–೧೪ನೆಯ ಸಾಲು).

ಶ್ರೀಮನ್ ಮಹಾಮಂಡಳೇಶ್ವರ ಹೇರ್ಮಾಡಿಯರಸರು ತಮ್ಮ ಆಳ್ವಿಕೆಯ ಕಡಗಂಚಿಯ ಗೋವಿಂದಜೀಯರ ಶ್ರೀ ಮಲ್ಲಿಕಾರ್ಜುನ ದೇವರ ಪೂಜೆ, ನೈವಿದ್ಯಕ್ಕೆ ಸೋಮವಾರದಂದು ಕಡಗಂಚಿಯ ಪ್ರಭು ಕೇಶಿಮರಸ, ಮಲ್ಲರಸ, ಪದ್ಮರಸ, ಸಾವನಾಥೆಯನ ಮಗ ಚಿಂಚರಸ ಎನ್ನುವ ನಾಲ್ವರು*** ಕಡಗಂಚಿಯ ಮೂಡಣ ಆನೆಗನೂರು ಬಿಟ್ಟರು ತೆಂಕಣ ದಾನ ಬಿಟ್ಟ ಉಲ್ಲೇಖವಿದೆ (ತ್ರುಟಿತ) (ಪು.ಸಂ.೪೦. ೧೪–೨೦ನೆಯ ಸಾಲು).

ಸ್ಥಳ: ಕಡಗಂಚಿ　　**ಆಳಿದ ದೊರೆ:** ತ್ರೀಭುವನಮಲ್ಲ ದೇವರು
ಕಾಲ: ಕ್ರಿ.ಶ.೧೨ನೆಯ ಶತಮಾನ　　**ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ ೧೯೯೬
ಭಾಷೆ: ಕನ್ನಡ　　**ಪು.** ೪೨

ಧಾರಣ ಮೌನಾನುಷ್ಠಾನ ಜಪಸಮಾಧೀಶೀಲ ಗುದಾವ ಪಾವಕನಿವಾರಣಂ, ದುರಿತಗಜದಭಿಕ್ಷರಿ ತ್ಯಾದಿ ನಾಮಾವಳಿ ವಿರಜಮಾನರಪ್ಪ, ನೈಷ್ಠಿಕ ಸ್ಥಾನಂ ಆಗಿ ಬಿಟ್ಟ ಕೆಯಿ, ತಮ್ಮ ಆಳ್ವಿಕೆಯ ಕಾಲದಲ್ಲಿ ಹಡುವಲ್ ಕಣಿಯ ಬೆಟ್ಟದಿಂದ, ತೆಂಕಲ ಬಿಂ. ಚಂಡೇಶ್ವರ ದೇವರ ಕೆಯ್ಯಿ, ತೆಂಕಲ್ ಹಳ್ಳದಿಂತ್ತಮ್ಮೂನೂರು ಅಂಕದೊಳಂ ಕಾಲಡಿಯ ಮನೆರಡು ೨ ದೆವರಿಂ ತೆಂಕಣ ಕೇರಿಯೊಂದು ೧(ಪು.ಸಂ೪೨. ೧–೮ನೆಯ ಸಾಲು) ಶ್ರೀಮದಂಕುಲಗೆಯ ಕೋಟೆಯ ಭಾಸ್ಕರ ಭಟ್ಟರು. (ಪು.ಸಂ.೪೨, ೧೪ನೆಯ ಸಾಲು).

ಸ್ಥಳ: ಕಿರಣಗಿ　　**ಆಳಿದ ದೊರೆ:** ಚಾಲುಕ್ಯ ತ್ರೈಲೋಕ್ಯಮಲ್ಲ (ನೂರ್ಮಡಿ ತೈಲಪ)
ಕಾಲ: ಕ್ರಿ.ಶ. ೧೧೫೮　　**ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ ೧೯೯೨
ಭಾಷೆ: ಕನ್ನಡ　　**ಪು.:** ೧೭೭–೧೭೮

ವಿವರಣೆ – ಸ್ವಸ್ತಿ ಶ್ರೀಮತು ಚಾಳುಕ್ಯ........., ...ಯಶ್ಯ ತ್ರೈಲೋಕ್ಯ ವರಿಸ........ ನೆಯ ಆನಂದ ಸಂವತ್ಸರದ ಪುಷ್ಯ ಶು॥ ಮಂಗಳವಾರ ಉತ್ತರಾಯಣ ಸಂಕ್ರಾಂತಿ ನಿಮಿತ್ತಮಾಗಿ ಬಿಟ್ಟರು. ಅಲಂದೆ ಸಾಸಿರದ ಸುಂಕವೆರ್ಗ್ಗಡೆಗಳು ಕಿ(ವ್ವ) ರಾಣಿಗೆಯ ಬಸವಯ್ಯ ದೇವರಿಗೆ .... ಬಿಟ್ಟರು. ಈ ಧರ್ಮವನು ಪ್ರತಿ ಪಾಲಿಸಿದವರಿಗೆ ಗಂಗೆಯಲು ಸಹಸ್ರ ಕವಿಲೆಯಂ......ಕೊಟ್ಟ ಎಂಬ ಶಾಪಾಶಯವಿದೆ. ಅಲಂದೆ ಸಾಸಿರದ ಸುಂಕನೆಗ್ಗಡೆಯಲು ಕಿರಣಗಿಯ ಬಸವಯ್ಯ ದೇವರಿಗೆ ಬಿಟ್ಟ ದತ್ತಿ ಕಿರಣಗಿ ಭಾಗವು ಆಗ ಅಲಂದೆ ಸಾಸಿರ ನಾಡಿಗೆ ಸೇರಿತ್ತೆಂಬ ಅಂಶ ತಿಳಿದು ಬರುತ್ತದೆ ಮತ್ತು ಮಂಗಳವಾರ ದಾನಬಿಟ್ಟರು ಎಂಬ ಉಲ್ಲೇಖವಿದೆ.

ಸ್ಥಳ: ಕೆಲ್ಲೂರು **ಆಳಿದ ದೊರೆ:** ಚಾಲುಕ್ಯ ಭೂಲೋಕಮಲ್ಲ, ೩ನೆಯ ಸೋಮೇಶ್ವರ

ಕಾಲ: ೧೧೨೬-೧೧೩೮ **ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ.-ವ್ಹಿ.ಶಿವಾನಂದ ೧೯೯೨

ಭಾಷೆ: ಕನ್ನಡ **ಪು.** ೧೬೫-೧೬೭

ಸ್ವಸ್ತಿ ಸಮಸ್ತ ಭುಮನಾಶ್ರಯ ಶ್ರೀ ಪೃಥುವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕಂ, ಚಾಳುಕ್ಯಾಭರಣಂ ಶ್ರೀಮದ್ಭೂಲೋಕಮಲ್ಲ ದೇವರ ವಿಜಯರಾಜ್ಯ ಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಮಾಚಂದ್ರಾರ್ಕ್ಕ ತಾರಂಬರಂ ಸಲುತ್ತಮಿರೆ....... ಶ್ರೀಮದ್ಭೂಲೋಕಮಲ್ಲದೇವರ.......ವಿಜ....... ಸಂಕರ ಕೆರಿಯೂರ ನೆಲೆವೀಡಿನೊಳು ಸುಖಸಂಕಥಾವಿನೋದದಿಂ ರಾಜ್ಯಂಗೆಯುತ್ತಮಿರೆ...... ಸಗರದನಾಧೀಶ್ವರಂ ನಿಂಬರಸ, ನಿಂಬರಸನ ಮಗನಲ್ಲಪುಲಿ, ಅಲ್ಲಪುಲಿಯ ಮಗ ಚಂದಿಮರಸ, ಚಂದಿಮರಸನ ಮಗ ನಿಂಬರಸ, ನಿಂಬರಸನ ತಮ್ಮ ರೇವರಸ, ರೇವರಸನ ತಂಮ್ಮ ಮಂಜರಸ, ಮಂಜರಸನ ಮಗ ತತ್ಪಾದ ಪದ್ಮೋಪಜೀವಿ ಸಮಧಿಗತ........ಮಹಾಮಂಡಳೇಶ್ವರಂ.......ನೆನಿತನಿಸೆ ಅಯ್ಯಣ್ಮರ್ಧನ ರಿಪುಜಯಾಪಾರ್ಜಿತವಿರಲ್ಕೆ ನಿವಾಸ ದಕ್ಷಿಣದೋರ್ದ್ದಣ್ಡ ಕಾಯ್ವರಗಂಡನಹಿಹಯ............. ನಾಮಾದಿ ಪ್ರಶಸ್ತಿ ಸಹಿತಂ ಶ್ರೀಮದಲ್ಲಪುರಿಯರಸರ ನರಿಯಂಬೊಳೆ ಯೆಳ್ಪತ್ತರ ಮನುಭಯಸ್ವಾಮ್ಯದಿಂ, ದುಷ್ಟನಿಗ್ರಹ ಶಿಷ್ಟಪ್ರತಿಪಾಳಿನಾಳುತ್ತಮಿರ್ದು ಸಕವರ್ಷ.......ನೆಯ ಸಂವತ್ಸರದ ಮಾರ್ಗಶಿರದ ಶುದ್ಧ ಭಟ್ಟಿಯಾದಿತ್ಯವಾರದಂದು ವ್ಯಕ್ಷಿತ ಸಂಕ್ರಮಣ ವೆತೀಪಾತಮಾಗೆ ತಮ್ಮ ತತ್ಪುರದ ಭೀಮ ರಥಿಯ ತಡಿಯೊಳೆ ಬ್ರಾಹ್ಮಣಗಳಾ ಸಾಕ್ಷಿಯೊಳೆ ಕೆಲವೂರರೆಯ್ಯಸೆಟ್ಟಿಯಗಳಿಸಿದ ಬಾವಿಯ ಧರ್ಮ್ಮ ನಡಿಯಿಸುವದಕ್ಕೆ ಧಾರಾಪೂರ್ವ್ವಕ ಸರ್ವೆನಮಶ್ಯಮಾಗೆಯಲ್ಲಿಯ ಬಿರುದುಗಟ್ಟೆಯ ದೋಟ ಬಡಗಣದೆಸೆಯೊಳೆ ಇಪ್ಪತ್ತೊಂದಗೇಣ ಕೋಲದೊಳು ಬಿಟ್ಟ ಮತ್ತರು೧೨ ಅಯ್ಯಸೆಟ್ಟಿಯಿಪ್ಪ ಮಾಳಿಗೆ ಮನೆ೧, ಇ ಧರ್ಮ್ಮಮಂ ಪ್ರತಿಪಾಳಿಸಿದವರ್ಗ್ಗೆ ಅಕ್ಷಯ ಪುಂಣ್ಯಮಕ್ಕು ಶಾಪಾಶಯವಿದೆ.

ಸ್ಥಳ: ಕೆಲ್ಲೂರು **ಆಳಿದ ದೊರೆ:** ಸೋಮೇಶ್ವರ

ಕಾಲ: ೧೧೮೨ **ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ.-ವ್ಹಿ.ಶಿವಾನಂದ ೧೯೯೨

ಭಾಷೆ: ಕನ್ನಡ **ಪು.** ೨೧೮.

ಅವರಾದಿಯ ಅಗ್ರಹಾರದ ನಾಲ್ವತ್ತಿರ್ವ್ವರ ಶೇಷ ಮಹಾಜನಂಗಳ ಸಮಕ್ಷಮದಲ್ಲಿ ಮಹಾ ಮಂಡಲೇಶ್ವರ ಅಲ್ಲ ಹುಲಿದೇವರಸರು ಹಾಗೂ ಸಮಸ್ತರು ಮಾಹೇಶ್ವರ ದೇವರಿಗೆ ಧಾರಾಪೂರ್ವಕವಾಗಿ ಬಿಟ್ಟ ದತ್ತಿಮಾನ್ಯ ಎಂದು ಉಲ್ಲೇಖಿಸಿದೆ.

ವಿವರಣೆ- ಕವಿಳಾಸದಾ ತಾಳ್ವದ್ಧಿಯಾ ಜೇಗೇ ಪುರಮೀ ಸಗರನಾಡ ಕಂಪಣದೊಳು ನರಿಯುಂಬೊಳೆ ಯೆಳಿಪ್ಪತ್ತರ ಬಳಿಯ ಕೆಲವೂರ ನೆಲಸಿದಂ ಶ್ರೀ ಮಾದೇಶನುಮಾದೇವಗಣಂ......... ಮಹಿಮೆಯ ನಾರದ ಮೊಗ...... ನತಿಯನಾರಂ..... ರಾಮಣೀಯಂ. ಸ್ವಸ್ತಿ ಸಮಸ್ತ ಭುವನಾಶ್ರಯಂ ಪೃಥ್ಮೀವಲ್ಲಭಂ ಚಾಳುಕ್ಯ ವಂಶೋದ್ಭವ.....ಶ್ರೀ ಪ್ರತಾಪ ಚಕ್ರವರ್ತಿ ಸೋಮೇಶ್ವರ ದೇವರ

ವಿಜಯ ರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಮಾಚಂದ್ರಾರ್ಕ ತಾರಂಬರಂ ಸಲುತ್ತಮಿರೆ। ವಿಜಯ ಕಲ್ಯಾಣಪುರದ ನೆಲವೀಡಿನೊಳುಂ ಸುಖಸಂಕಥಾ ವಿನೋದದಿಂ ರಾಜ್ಯಂ ಗೆಯುತ್ತಮಿರೆ...... ನಾಲ್ವತ್ತು ಬಾಡದ ತುಪ್ಪದಲಿರ್ದ್ದಲ್ಲಿ ತತುಪಾದ ಪದ್ಮೋಪಜೀವಿ ಶ್ರೀಮನ್ಮಹಾಪ್ರಧಾನ ಸೇನಾಧಿಪತಿ ಅರಿರಿಪು ಮಂಡಳಿಕಗಾರಂ ಚಂನಮಂನ್ನೆಯ ದುಷ್ಟ ಸಂಹರ ಶಿಷ್ಟ ಪ್ರತಿಪಾಳಕ ಗಜ ಹಯಾರೂಢ ವಾಂದ್ರತೆಲ್ಲ.......... ಪರರಾಷ್ಟ್ರದಲ್ಲಳತುಂ (ಗರಿಪುಳಂತಿದ)....... ಶರಣಾಗತ ವಜ್ರ ಪಂಜರ ನಿಜಭುಜ...... ಮಹೀಪ್ರಚಂಡಂ ದಂಡನಾಯಕ ಕುಮಾರ ಬಂಮಿದೇವರಸರು ಸಗರನಾಡಮುಭಯ ಸಾಮ್ಯದಿಂನಾಳುತ್ತಿದ್ದಲ್ಲು. ಸ್ವಸ್ತಿ...... ಭಂಗುರ ತರಂಗ ಸಂಘಾತ......... ಲವಣಾಬ್ದಿವಳಯ ವಿಳಯಿತ ಪ್ರಳಾವನ ಗಂಗಾತೀರ..... ಮಾಹಿಸ್ಮತೀ ಪುರವರಾಧೀಶ್ವರರುಂ ಸುವರ್ಣ ಗರುಡಧ್ವಜರುಂ ಅಹಿಹಯ ವಂಶೋದ್ಭವರುಂ ಅತ್ಯುಗ್ರ ನರಸಿಂಹ ದರ್ಪ್ಪದರ್ಪಣಧ್ವಜ ಪ್ರತಾಪ ಕಾರ್ತಿಕೇಯ ಕುಲಾನ್ವಯ.. ಸಂಪೂಣ್ನರುಂ ಉಭಯಾಮರೇಂದ್ರ ಮಾಂಧಾತ ಸತ್ಯವಿಧಿಷ್ಠರ....... ಪವಿತ್ರಂ ತ್ರಿನೇತ್ರಂ. ಗಂಡ ಭೇರುಂಡ ನುಡಿದಂತೆ ಗಂಡ...... ಸಮಸ್ತ ನಿಜ...... ಮೌಳಿಶಾಸ್ತ್ರ ಶಸ್ತ್ರ....... ಸಹಿತ ನಾಮಾದಿ ಪ್ರಶಸ್ತಿ ಸಹಿತಂ ಶ್ರೀಮನುಮಹಾಮಂಡಳೇಶ್ವರ ಅಲ್ಲಹುಲಿದೇವರ ಸರುಂ। ಸ್ವಸ್ತಿ ಯಮನಿಯಮ.....ವೇದಾಂತ ಸಿದ್ದಾಂತ...... ಪ್ರತ್ಯಾಭಿಲಮುಂ...... ಪ್ರಚಣ್ಡರುಂ ಬ್ರಹ್ಮಜ್ಞಾನ ಬ್ರಹ್ಮ ವಂಶಜರುಮಪ್ಪ ಬ್ರಾಹ್ಮಣ ಕ್ಷತ್ರಿಯ ವೈಸ್ಯ ಸೂದ್ರದಿಯಾಗಿ ಯಮದಂಡ...... ರುರುತರ ಮಂತ್ರರು ಸಮಸ್ತ ಗುಣಮಣಿ ಭೂಷಣಮಪ್ಪ...... ನೂರನಾಲ್ವತೀರ್ವರಾಭರಣಂ. ಸರ್ವ್ವೇನಮಸ್ಯದಗ್ರಹಾರಂ ಅವರವಾದಿಯಶೇಷ ಮಹಾಜನಗಳುಂ ತಂಮ ಪ್ರತಿಷ್ಠೆಯ ಕೆಲವೂರ ಪ್ರಭು ಮೂಲಿಗರುಂ ಉಭಯ ಪೆರ್ಗ್ಗಡರಸುಗಳು ಶ್ರೀಮತು ಸಕವರಿಷ೧೧೦೬ನೆಯ ಶುಭ ಕೃತು ಸಂ। ದ ಭಾದ್ರಪದ ಸು। ಪಂಚಮಿ ಸೋಮವಾರ ವ್ಯತೀಪಾತ ಸಂಕ್ರಮಣ ನಿಮಿತ್ತಮಾಗಿ ಪುಂಣ್ಯ ದಿನದಲ್ಲು ಶ್ರೀ ಸ್ವಯಂಭು ಮಾಹೇಶ್ವರ ದೇವರ ದೇವತಾರ್ಚ್ಚನೆ...... ನಡೆವಂತಾಗಿ..... ವಿಧಾನಕಂ ಶ್ರೀಮತು ಸಮಸ್ತ ಗುಣ ಸಂಪನ್ನರಪ್ಪ ಮಾದಿ ಗಾವುಂಡನ ಮಗ ಸಕಲಗುಣ ವಾಸಂಣಯಗಳ ಕಾಲಂ ಕರ್ಚ್ಚಿ ಧಾರಾಪೂರ್ವ್ವಕಂ ಮಾಡಿಬಿಟ್ಟ...... ಈ ಬ್ರಹ್ಮೇಶ್ವರ ದೇವರ ತೆಂಕಲು ಮತ್ತರು ೨೨. ಆಗ್ನೆಯಕೆ ಕೆಯಿಮಾಗಿ ದೇವರು ಸಹಿತಂ ತೇಜ ಮಾಂನ್ಯದಲು.......ಇಶಿ ಕೆಯಿಂ.....ಯಿಂತೀ ಧಮ್ಮಮಂ ಪ್ರತಿಪಾಳಿಸಿದವರ್ಗ್ಗೆ ಗಂಗೆ ವಾರಣಾಸಿಯಲು...

ಸ್ಥಳ: ಕೌಂಟಿ ಆಳಿದ ದೊರೆ: ತ್ರಿಭುವನಮಲ್ಲ ದೇವರು

ಕಾಲ: ಕ್ರಿ.ಶ.೧೧೮೭ ಪ್ರಕಟಿತ: ಕ.ಜಿ.ಶಾ. ಹನುಮಾಕ್ಷಿ ಗೋಗಿ ೧೯೯೬

ಭಾಷೆ: ಕನ್ನಡ ಪು. ೮

ಶ್ರೀ ತ್ರಿಭುವನ ಮಲ್ಲದೇವರು ವಿಜಯರಾಜ್ಯದುತ್ತರೊತ್ತರಾಭಿವೃದ್ಧಿಯ ಕಾಲದಲ್ಲಿ ಕಲ್ಯಾಣಪುರದಲ್ಲಿ ಆಳ್ವಿಕೆ ಮಾಡುತ್ತಿದ್ದರು(ಪು.ಸಂ. ೮೯. ೩-೬ನೆಯ ಸಾಲುಗಳು).

ಮಹಾಮಂಡಳೇಶ್ವರ ವಿಜಯಲಕ್ಷ್ಮಿಕಾಂತನ ಆನೆವೆಡಂಗ, ಸತ್ಯರಾಧೇಯ, ಸೌಚಾಂಜನೇಯ, ನೀತಿಚಾಣುಕ್ಯ, ಪರೋಪಕಾರಂ ಆಚಾರ ಪಾರಾಯಣಂ, ಚತುಸ್ಸಮಯ ಸಮುದ್ದರಣ,

ಶ್ರೀಮತ್ರಿಭುವನಮಲ್ಲ ದೇವ ಪಾದಾಂಭೋಜ ಬ್ರಿಂಗ, ಸಾಹಸೊತ್ತುಂಗ ಎನ್ನುವ ಪ್ರಶಸ್ತಿ ಸಹಿತ 'ಮಹಾಮಂಡಳೇಶ್ವರ ಬಿಬ್ಬರಸರು' ಮಹಾನದಿ ಭೀಮರಥಿ ದಡದಲ್ಲಿ ಕವಿಟಗೆಯ ಅಜ್ಜೇಶ್ವರ ದೇವರಿಗೆ ನೈಷ್ಠಿಕಸ್ತಾನವಾಗಿ ಸರ್ವನಮಸ್ಯದಿಂದ ಧಾರಾಪೂರ್ವಕವಾಗಿ ಹಿಮತ್ತರು ಬಿಟ್ಟರು. ಮಾದೇವರಯ ೨ಮನೆಯ ೧೮ನಿವೇಶನದಗಲ ೨೧ಕೈನೀಳ ಮತ್ತು ಮತ್ತ ೧ತೋಂಟ ದಾನವಾಗಿ ಬಿಟ್ಟರು(ಪು.ಸಂ.೮೯. ೯-೧೮ನೆಯ ಸಾಲು). ೨೮ನೆಯ ಸಾಲುಗಳವರೆಗೆ ಶಾಪಾಶಯವಿದೆ.

ಸ್ಥಳ: ಖಜೂರಿ **ಆಳಿದ ದೊರೆ:** ಶ್ರೀ ತ್ರಿಭುವನಮಲ್ಲ ದೇವರು

ಕಾಲ: ಕ್ರಿ.ಶ.೧೧೨೭-೨೮ **ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ ೧೯೯೬

ಭಾಷೆ: ಕನ್ನಡ **ಪು.** ೪

ತ್ತರೊತ್ತರಾಭಿವೃದ್ಧಿ ಪ್ರವರ್ದ್ಧಮಾನ*** ಕಲ್ಯಾಣದ ನೆಲವಿಡಿನೊಳ ಶ್ರೀಮಚ್ಚಾಳುಕ್ಯ ಸತ್ಯಾಶ್ರಯ ಚಕ್ರವರ್ತಿ ಭೂಲೋಕಮಲ್ಲ ದೇವರ ೨ನೆಯ ಪ್ಲವಂಗ ಸಂವತ್ಸರದ(ಪು.ಸಂ೪೩, ೧-೩ನೆಯ ಸಾಲು). ತ್ರುಟಿತ.

ಸ್ಥಳ: ಖಜೂರಿ **ಆಳಿದ ದೊರೆ:** ಭೂಲೋಕ ಮಲ್ಲ

ಕಾಲ: ಸು.೧೨ನೆಯ **ಶತಮಾನ ಪ್ರಕಟಿತ:** ಸಾಧನೆ.ಸಂ-೨,ಸಂಚಿಕೆ-೧-ಕ್ರಿ.ಶ.೧೯೭೩

ಭಾಷೆ: ಕನ್ನಡ **ಪ್ರಸಂ.:** ಡಾ.ಜಿ.ಎಸ್.ಶಿವರುದ್ರಪ್ಪ, **ಪು.ಸಂ.:** ೫೫-೫೬

ಶಾಸನದ ಕೆಳಭಾಗ ಸವೆದಿದ್ದು ಖಜೂರಿ ಗ್ರಾಮದಲ್ಲಿ ಕಿಶನ್‌ರಾವ್ ದೇಶಪಾಂಡೆಯವರ ಮನೆಯ ಮುಂದೆ ಮೆಟ್ಟಲಿಗೆ ಸೇರಿಸಿ ಕಟ್ಟಿರುವ ಕಲ್ಲು-ಕ್ರಿ.ಶ.೧೧೨೭-೨೮.

ವಿವರಣೆ:- ತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನ............................ ಕಲ್ಯಾಣದ ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯಂ ಗೆಯ್ಯುತ್ತಮಿರೆ ಶಿಮಚ್ಚಾಳುಕ್ಯ ಸತ್ಯಾಶ್ರಯ ಚಕ್ರವರ್ತಿ ಭೂಲೋಕಮಲ್ಲ ದೇವರ ಎರಡನೆಯ ಪ್ಲವಂಗ ಸಂವತ್ಸರದ......

ಸ್ಥಳ: ಗೊಬ್ಬೂರು **ಆಳಿದ ದೊರೆ:** ತ್ರಿಭುವನಮಲ್ಲ ದೇವರು,

ಕಾಲ: ಸು.೧೨ನೆಯ ಶತಮಾನ **ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ **ಪು.** ೦೭-೦೮

ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ತ್ರೈಲೋಕ್ಯ ನಗರಾರಂಭಯ ಮೂಲಸ್ತಂಭಾಯ ಶಂಭವೇ॥ ಸಾಗರ ಪರಮೇಷ್ಟಿತ ವಸುಧಾ ಭಾಗದೋಳತಿ ಸೇವ್ಯಮಪ್ಪ **ಕುಂತಲದೇಶ ಕಾಗಾರವಲಂದೆ** ನಾಡಿನಲ್ಲಿ ಭೋಗಾವತಿಯಂತೆ, ಗೋಬ್ಬುರತಿ ಪೆಸರುಮೆಸೆಗುಲಂದೆ ತಾನಿರದು ಇದು ಕುಮದಿನಿ ಚಯ ಕೂಡಿ ********** ಚೆಲ್ವಂತಾಗಿರ್ದ ಉದ್ಯಾನದ ನಡುವೆ ಮನೋರಂಗದಿಂದ ಚರಿತನಾಥರನಿಂ ಮಿಳ್ದಂ ಭಕ್ತ ಚಿಂತಾಮಣಿಹಾರ ಮದೆನಾತ್ತ ಸಂಹಾರನಿಂನ್ತಿ ಕಲಿದೇವರ ನಾಸಕಳ ಭುವನ ರಕ್ಷಯ ದಕ್ಷ ಶ್ರೀಯಕ್ಷ ಬಲದಿಂದ ವೈರನಂ ಯಮ ಭುಜಗನದೇಯ

********,******* ಲೋಕದ ಬಿರದು ಕಂಡಂ ಬಲು ಚಲಗಿರಿದ ಅಂಬುಳಂ ಆತಂಶಿರವಿನಿಕುತದಿ ಸರ್ಧರರ್ಚ್ಚಾನತರಂ, ಪಲರಂ ಕಾದಂದ ಮೆಂಬಿನೆಭವಂ ಪೊಡೆಯೊಳಂ ನಿಂದುದೀ ಗೋಬ್ಬೂರೊಳು ಶ್ರೀ ಕಲಿದೇವ ಸಕಳ ಭುವನ ರಕ್ಷಯ ರಕ್ಷಕ ಶ್ರೀಯಕ್ಷ॥ ಆರಂಭದಲ್ಲಿ ಪ್ರಾರ್ಥನೆ ಗೀತೆಯಿದೆ. ಕುಂತಲ ದೇಶದ ಸಾಗರದ? ಅಲಂದೆ ನಾಡಿನಲ್ಲಿ ಭೋಗಾವತಿಯ ಹಾಗೆ ಗೊಬ್ಬುರ ನಾಡು ಸುಂದರವಾಗಿತ್ತು ಎಂದು ತಿಳಿಸುತ್ತದೆ.

ಸ್ವಸ್ತೀ ಶ್ರೀಮತು ತ್ರಿಭುವನ ಮಲ್ಲದೇವ ೨೯ನೆಯ ವರ್ಷದ ವಿಭವ ಸಂವತ್ಸರದ ಪುಷ್ಯದ ಅಮವಾಸೆ ಸೋಮವಾರವಾಗಿತ್ತು. ಉತ್ತರಾಯಣ ಸಂಕ್ರಾಂತಿ ಸೂರ್ಯಗ್ರಹಣದಂದು ಅಳಂದೆ ನಾಡ ಬಳಿಯ **ಬಾಡ ಸಂತೆಯ** ಗೊಬ್ಬೂರದ ಮೇಲಾಳ್ಕೆ ಮನ್ನೆಯ ಪ್ರಭು ಮಲ್ಲಿಗರು ಏಂಟು ಬಾಡ ಸಮಸ್ತ ಪ್ರಜೆ **ನಕರಗಳು** ದಾನ ನೀಡಿದರು. ಮುಖ್ಯವಾಗಿ ಪಂಚಲಿಂಗ ಶ್ರೀ ಕಲ್ಲಿದೇವರ ಧೂಪ, ದೀಪ, ನೈವೇದ್ಯ, ಚೈತ್ರ ಪವಿತ್ರಕ್ಕೆ ಊರು ಮೂಡಲು ಹೂದೋಟ ಕಾಲಡಿಯ ಮತ್ತರು ೨ ಆ ದೇವರಾಚಾರ್ಯ ಕಲ್ಯಾಣ ಶಕ್ತಿಗಂ ದೇವರ ನಂದಾದೀವಿಗೆಯ ಗಾಣ ೨ಕ್ಕಂ ಸೂರೆಕಾರಗಂ ದೇವರೀಂ ಬಡಗಣದಲು***** ರ್ಗ್ಗಯಂ ಇಂತಿ ಧರ್ಮಮಂ ಪ್ರತಿಪಾಳಿಸುತ್ತಿರಲು ಶ್ರೀಮತ್ ಕಲಚೂರಿ ಭುಜಬಲ ಚಕ್ರವರ್ತಿ ತ್ರಿಭುವನ ಮಲ್ಲದೇವ ವರ್ಷದ ೧೦ನೆಯ ಪಾರ್ತ್ಥಿವ ಸಂವತ್ಸರದ ಅಸ್ಸಿನ ಸುಶಿ॥ ಎಂದಿದೆ. 141622

ಶುಕ್ರವಾರ ವ್ಯತಿ ಪಾತದಲು ಶ್ರೀಮತ್ ಮಹಾ ಮಂಡಲೇಶ್ವರ ರಾಯ ದೇವರಸರು ************ ಹೆಗ್ಗಡೆ ರೇವಣಯ್ಯ ನಾಯಕರು *************** ವಿಗರು **********.

ಸಮಸ್ತ ಪ್ರಜೆಗಳು ಊರಿನ ಬಡಗಲು ಊರ ದಾರಿಯಿಂದ ಪಡುವಲು ಬಿಟ್ಟ ಕೋಲಮತ್ತರು ೫, ಅನ್ತು ಕೋಲಮತ್ತರು ೧೦ ಅಂತು ಸರ್ವ್ವ ನಮಸ್ಯವಾಗಿ ಬಿಟ್ಟರಂ ದಿವಸಂ ಶ್ರೀಮತು ರೇವಣಯ್ಯ ನಾಯಕರು********. ಸ್ವಾಮಿಗಳು ಮುಮ್ಮರಿದಂಡಂಗಳು ದಾನಿ********** ನಾನಾದೇಸಿಗಳು ಮಳಿಗೆಯ ******** ರೆನೆ ********** ಬಾಣರಸಿಯ *********. ಇದರಲ್ಲಿ ವೈಣಿಕರಾದ ನಾನಾದೇಸಿಗಳು, ಮುಮ್ಮರಿ ದಂಡಗಳು, ಸ್ವಾಮಿಗಳು ನೀಡಿದ ದಾನದ ಬಗ್ಗೆ ವಿವರಿಸುತ್ತದೆ.

ಸ್ಥಳ: ಗೊಬ್ಬೂರು **ಆಳಿದ ದೊರೆ:** ಜಗದೇಕ ಮಲ್ಲದೇವರು
ಕಾಲ: ಕ್ರಿ.ಶ.೧೧೪೦ **ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ ೧೯೯೬
ಭಾಷೆ: ಕನ್ನಡ **ಪು.** ೦೯-೧೦.

ವಿವರಣೆ: ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯ ನಗರಾರಂಭಾಯ ಮೂಲಸ್ತಂಭಾಯ ಶಂಭವೇ॥ ಎಂಬ ಪ್ರಾರ್ಥನೆಯೊಂದಿಗೆ ಶಾಸನ ಆರಂಭವಾಗಿದೆ.

ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವಿವಲ್ಲಭ ಮಹಾರಾಜಾಧಿರಾಜ ಶ್ರೀ ಪರಮೇಶ್ವರ, ಪರಮಭಟ್ಟಾರಕಂ, ಸತ್ಯಾಶ್ರಯಕುಳತಿಳಕ, ಚಾಳುಕ್ಯಾಭರಣ, ಶ್ರೀಮತು ಪ್ರತಾಪ ಚಕ್ರವರ್ತಿ ಜಗದೇಕಮಲ್ಲ

ದೇವರ ಪಿಜಯ ನಗರೊತ್ತರದಲ್ಲಿ ಅಭಿವೃದ್ಧಿ ಮತ್ತು ಪ್ರವರ್ಧಮಾನ ಆ ಚಂದ್ರಾರ್ಕ ತಾರಾಂಬರಂ ಸಲುತ್ತಮಿರೆ ರಾಜಧಾನಿ ಕಲ್ಯಾಣಪುರದ ನೆಲೆವೀಡಿನೊಳು ಸುಖದಿಂದ ರಾಜ್ಯವಾಳುತ್ತಿದ್ದರು.

ಜೀಪಿ ಪಿನಯಾಂಬೋನಿಧಿ ಸತ್ಯ ಸೋಚನಿಳಯಃ ಹೇಳ್ವ ಕಲ್ಪವೃಕ್ಷಂ ಮಾರ್ಗವಿತಾ ***** ಪಿರಿಯ ದಂಡಾಧೀಶರು ********** ರಾಜಶ್ರೀ **** ಶ್ರೀ ಗ******** ಜಗದ್ದೇವ *********** ತ್ತರಾ ತಿಳ ************* ಪದಸ ******** ಶ್ರೀ ಬ್ರಹ್ಮದಂಡಾದೀಪ ಆ ಪರಮ ********* ಸಕಳಾ **** *****ಗ್ತಳ ***** ಸಕಳಾ ******** ಮಾನ್ಯ ***** ಭಾತಳ ****** ದಲಿನಪ್ಪ ಕಾಸಪ್ಯಗೋತ್ರದ ಪಾ****** ವರ ದೇವರಿಗೆ ಪೇಮರ ******.

ಸ್ಥಳ: ಗೊಬ್ಬೂರು **ಆಳಿದ ದೊರೆ:** ರಾಯಮುರಾರಿ ಸೋವಿದೇವ, ಕಲಚೂರ್ಯರು.
ಕಾಲ: ಕ್ರಿ.ಶ.೧೧೭೦ **ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
ಭಾಷೆ: ಸಂಸ್ಕೃತ **ಪು.** ೧೪-೧೫

ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವಿವಲ್ಲಭ, ಮಹಾರಾಜಾಧಿರಾಜ, ಕಾಳಂಜರ, ಪುರವರಾಧೀಶ್ವರಂ ಸುವರ್ಣ ವೃಷಭ ಧ್ವಜ, ಡಮರುಗ ತೂರ್ಯನಿರ್ಘೋಷಣ, ಕಳಚೂರಿಯ ಕುಲಕಮಲ ಮಾರ್ತಂಡ, ಕದನಪ್ರಚಂಡ, ಮಾನಕನಕಾಚಳ, ಸುಭಟರಾದಿತ್ಯ, ಕಲಿಗಳ, ಕುಶಂ, ಗಜಸಾಮಂತ, ಶರಣಾಗತ ವಜ್ರಪಂಜರ ಎನ್ನುವ ಬಿರುದುಗಳು ಹೊಂದಿರುವ ಶ್ರಿಮತ್ ರಾಯಮುರಾರಿ ಸೋವಿದೇವ ಭಿಲ್ಲಮ ವಿಜಯಯಾತ್ರೆಯಿಂದ 'ಮೊದಗನೂರು ಕುಪ್ಪ'ದಲ್ಲಿ ರಾಜ್ಯವಾಳುತ್ತಿದ್ದರು. ಶ್ರೀಮನ್ ಮಹಾಪ್ರಧಾನ ಬಾಹತ್ತರ ನಿಯೋಗಾಧಿಪತಿ ಶ್ರೀಕರಣ, ಹಿರಿಯ ಕನ್ನಡ ಸಂಧಿವಿಗ್ರಹಿ ಮಹಾಪ್ರಚಂಡ 'ದಂಡ ನಾಯಕ ಕಾಳಿಮಯ್ಯ ನಾಯಕರು.' ಮಹಾಮಂಡಳೇಶ್ವರ ಕೋಪಣ ಪುರವರಾಧೀಶ್ವರ ನಾಭಿರಾಜಾನ್ವಯ ಪ್ರಸೂತಂ ***** ಅಲಂದೆಯ ಸೋಮೇಶ್ವರ ಲಬ್ದವರ ಪ್ರಸಾದಂ, ಶ್ರೀಮನ್ ಮಹಾಮಂಡಳೇಶ್ವರ ಮಲ್ಲಿದೇವನಂಕಕಾರ ಕಲಿಕಾಮ(೪೭-೫೦ನೆಯ ಸಾಲು).

ಧಿಭೇಂದ್ರಂಗ 'ತ್ರಿಕೂಟದ ಕಲಿದೇವರ' ರಂಗಭೋಗಕ್ಕೆ, ಭೋಗಪರಿಸೂತ್ರಕ್ಕೆ ಗೊಬ್ಬೂರ ಶ್ರೀ ರೇವಣರಸರು ದಾನ ನೀಡಿದರು. ಮೂಡಲು ಮಣತಿಯ, ಬಡಗಲು ಮೆಳಕುಂದೆಯ, ತೆಂಕಲು ಕಲಂಬರಿಗೆಯ ಬಟ್ಟೆ ಸೀಮೆ***** ಪಣ ಕೋಲಲು ಗೊಬ್ಬೂರದ ಭೂಮಿಯ ಮೂಡಣ ಕರಿಯ ಹತ್ತು ಮತ್ತರು ಮತ್ತೆ ಪಡುವಲು ತಳಾಯಗೈಯ್ವ ಮೂಡಲು ಬಿಟ್ಟ, ಸೀಮೆಯ ಬಡಗ ಪಂದರಕೆಯ, ಮೇಳಕುಂದೆಯ ದಾರಿಗ ತ್ರಿಪುರಷ ನಟ್ಟ ಕಲ್ಲು******* ಮೆಳಕುಂದೆಯ ಸೀಮೆಮೇರೆಃ ದಾನ ನೀಡಿದ ಉಲ್ಲೇಖ(ಪು.ಸಂ.೧೫, ೫೧-೫೭ ಸಾಲು).

ಸ್ಥಳ: ಚಿನಮಳ್ಳಿ **ಆಳಿದ ದೊರೆ:** ?
ಕಾಲ: ? **ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ.-ಎ.ಶಿವಾನಂದ ೧೯೯೨
ಭಾಷೆ: ಕನ್ನಡ **ಪು.** ೧೮೮

ವಿವರಣೆ- ಸ್ವಸ್ತಿ ಸಮಸ್ತ ಪ್ರಭುವಿಖ್ಯಾತ ಪಂಚಾಸ್ಯತ ವೀರಶಾಸನಲಬ್ದಾನೇಕ ಗುಣಗಣಾಳಂಕೃತ ಸತ್ಯ ಶಿವಾಚಾರ ಚಾರಿತ್ರ್ಯ ನಯವಿನಯ ವಿಖ್ಯಾತ **ವೀರ.........ಧರ್ಮ(ವೀರಶೈವ?) ಪ್ರತಿಪಾಳಕರಪ್ಪ**

ಶ್ರೀಮದಯಿನೂಲ(ನೂರು) ಸ್ವಾಮಿಗಳುಂ ಮೂವತ್ತಾರು ಬೀಡು. ಮುಮ್ಮರಿದಂಡಗಳು....... ಕವಿಲಿಗೆಯ ಸೆಟ್ಟಿ ಕಲಂಬರಿಗೆಯ ನೃಪ ಚಿಲ್ಲಿಸೆಟ್ಟಿ(ಹಗವಡಹಾಳ) ಜಕ್ಕಿಸೆಟ್ಟಿ...... ಮಲ್ಲಿಕಾರ್ಜುನ ದೇವರ್ಗ್ಗೆ....... ಹೇರು ಅರುವತ್ತು ಕತ್ತೆ ಕೋಣನ ಭತ್ತದ ಹೇರಿಂಗೆ ಮಾನ್ಯ ಎಲೆಯ ಹೇರಿಂಗೆ ಕೊತ್ತಳಿಕೆ ಅಡಕೆ ಹೇರಿಂಗೆ ೧೦ ಅಲ್ಲದರಸಿನ ಹೇರಿಂಗೆ...........(ಅಪೂರ್ಣ). ಐನೂರು(ಲಿ)? ಸ್ವಾಮಿಗಳು, ಮುಮಮುರಿದಂಡ ಹಾಗೂ ಕವಲಿಗೆಯ ಸೆಟ್ಟಿ ಕಲಂಬರಿಗೆಯ ನೃಪ ಚಿಲ್ಲಿಸೆಟ್ಟಿ, ಜಕ್ಕಿಸೆಟ್ಟಿ ಮುಂತಾದವರು ಮಲ್ಲಿಕಾರ್ಜುನ ದೇವರಿಗೆ ಅಲ್ಲಿನ ಹೇರಿಕೆಯ ಉಪಕರಣಗಳ ಮೇಲಿಂದ ಬರುವ ಆದಾಯವನ್ನು ಮಾನ್ಯವಾಗಿ ಸಲ್ಲಿಸಿದ್ದು ಎಂಬ ಉಲ್ಲೇಖ ಶಾಸನದಲ್ಲಿದೆ. ಐನೂರು ಸ್ವಾಮಿಗಳನ್ನು ಇಲ್ಲಿ ಸತ್ಯ ಶಿವಾಚಾರ ಚಾರಿತ್ರ್ಯ ಎಂಬ ವೀರಶೈವ ಪರಿಭಾಷೆಯಲ್ಲಿ ವಿಶೇಷಿಸಲಾಗಿದೆ. ಇವರು ಅಲ್ಲಿನ ಮಹಾಜನರಾಗಿದ್ದುದೇ ಆದಲ್ಲಿ ಅಗ್ರಹಾರ ಹಾಗೂ ಇನ್ನಿತರ ಧಾರ್ಮಿಕ ಸ್ಥಳಗಳಲ್ಲಿರುತ್ತಿದ್ದ ಪ್ರಮುಖರು ಕೇವಲ ಬ್ರಾಹ್ಮಣರಾಗಿರದೆ ಅನ್ಯಮತದವರೂ ಸಹ ಆಗಿರುತ್ತಿದ್ದ ಸಂಗತಿ ಗೊತ್ತಾಗುತ್ತದೆ. ಆಯ್ಯಾವಳಿಯ ಐನೂರ್ವರನ್ನಿಲ್ಲಿ ಉದಾಹರಿಸಬಹುದು.

ಸ್ಥಳ: ಚಿನಮಳ್ಳಿ **ಆಳಿದ ದೊರೆ:** ಕಳಚೂರಿ ರಾಯಮುರಾರಿ ಸೋವಿದೇವ

ಕಾಲ: ೧೧೬೭ **ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ.–ವ್ಹಿ.ಶಿವಾನಂದ ೧೯೯೨

ಭಾಷೆ: ಕನ್ನಡ ಪು. ೧೮೬–೧೮೭

ವಿವರಣೆ–ಶ್ರೀಮತುಭುಜಬ ಚಕ್ರವರ್ತಿ ರಾಯಮುರಾರಿ ಸೋವಿದೇವರಸರು ರಾಜಧಾನಿ ಕಲ್ಯಾಣಪುರದ ನೆಲೆವೀಡಿನಲ್ಲಿ ಸುಖದಿಂದ ರಾಜ್ಯವಾಳುತ್ತಿದ್ದರು. ತತ್ಪಾದ ಪದ್ಮೋಪಜೀವಿಗಳಪ್ಪ ಶ್ರೀಮನುಮಹಾಪ್ರಧಾನಂ ಗಣಾಧಿಪತಿ ಅತ್ತಿನೂರೆಂಬತ್ತರ ಅಧಿಕಾರಿ ಕುಲಗೌವುಂಡ ಸೋವಣನಾಯಕರುಂಭವರೊಡಮಡ್ಡಿಯ ದಂಡ ನಾಯಕರುಂ ಕರಣಂಗಳು॥ ಶ್ರೀಸಮಧಿಗತ ಪಂಚ ಮಹಾಶಬ್ದ ಮಹಾ ಮಂಡಳೇಶ್ವರ ಪುರವರಾಧೀಶ್ವರ ಸುವರ್ಣ ಗರುಡಧ್ವಜಂ......... ಕೀರ್ತಿಧ್ವಜಂ .... ಮಾರ್ತಾಂಡ ಜಿಮೂತವಾಹನಾನ್ವಯ ಪ್ರಸೂತ.......ಕಾರಂ........ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಮಹಾ ಮಂಡಳೇಶ್ವರ ಮನ್ನೆಯ ಆಹವಮಲ್ಲರಸರುಂ ಹದಿನೆಂಟು ಸಂತತಿಗಳುಂ ಪೆರ್ಗ್ಗಡೆ ಬರ್ಮಯ್ಯನುಂ ಅತ್ತಿ ನೂರೊಡೆಯೆ ಪ್ರಭು ಅಂಮ ಗಾವುಂಡ ರಾಮರಸ. ಅಂಕುಲಗೆಯ ಶೋಭರಸನುಂ ಸಿಂಧನೂರು ಕಲ್ಲರಸರುಂ ಮುಖ್ಯವಾಗಿ...... ಪಶ್ಚಿಮಾಬಿಮುಖವಾಗಿ ಹರಿದ ದಿಬ್ಯತೀರ್ಥದ ಭೀಮರಥಿದೇವಿಯ ತಡಿಯಲು ಚಿಲ್ಲಮಳೆಯಲು ನೆಲಸಿದ ಸ್ವಯಂಭೂ ಮಲ್ಲಿಕಾರ್ಜುನ ದೇವರ್ಗ್ಗೆ ಅಂಗಭೋಗ ರಂಗಭೋಗ ಚೈತ್ರ ಪವಿತ್ರ ನೈವೇದ್ಯಕ್ಕಂ ಶ್ರೀ ಮಲ್ಲಿಕಾರ್ಜುನ ದೇವರ ಪಾದಪಂಕಜ ಶ್ರೀಪಾದಾರಾಧ್ಯನಪ್ಪ ಶ್ರೀವೀರಕೇದಾರದೇವರ ಪುತ್ರ ಅಲ್ಲಿಯ ಆಚಾರ್ಯರು ಕೇತಿದೇವಯ್ಯಂ ಗಳಿಗೆ ಅತ್ತಿನೂರೆಂಬತ್ತರ ಬಳಿಯ ಬಾಡ ವೀರಜವಾಡಮಂ .... ಸಲ್ಲುಗೆಯ(ಸುದ್ದಿ).......ಯಧಿ ಕಾಣಿಕೆ ಯೊಳಗಾಗಿ(ರುಚಿಯ) ಸೋಮಯ್ಯನುಂ ಮನ್ನೆಯ ಮನ್ಮಥನುಂ..........ಆಬಡನುಂ ಸೋಮವಾರ ದಕ್ಷಿಣಾಯಣ

ಸಂಕ್ರಾಂಸ್ತಿಯಲು ಧಾರಾಪೂರ್ವಕಮಾಗಿ ಬಿಟ್ಟರು ಯಿಂತೀಧರ್ಮ್ಮಂ ತಪ್ಪದೆ ಪ್ರತಿಪಾಳಿಸುವರು ವಾರಣಾಸಿಯೊಳು ಹತ್ತು ಸಾವಿರ ಕವಿಲೆಯಂ ಎಂಬ ಶಾಪಾಶಯವನ್ನೊಳಗೊಂಡಿದೆ. ಅತ್ತನೂರಿನ ಕುಲಗೌವುಂಡ ರಾಮರಸ, ಅಂಕುಲಿಗೆಯ ಶೋಭರಸ, ಸಿಂಧನೂರಿನ ಕಲ್ಲರಸು ಮಹಾಮಂಡಳೇಶ್ವರ ಮನ್ನೆಯ ಆಹವಮಲ್ಲರ ಸಮಕ್ಷಮದಲ್ಲಿ ಚಿಲ್ಲಮೆಳೆ ಕ್ಷೇತ್ರದ ಸ್ವಯಂಭೂ ಮಲ್ಲಿಕಾರ್ಜುನದೇವರಂಗಭೋಗಕ್ಕಾಗಿ ಅಲ್ಲಿಯ ಸ್ಥಾನಪತಿಗಳಾದ ವೀರ ಕೇದಾರ ದೇವರ ಪುತ್ರ ಕೇತಿ ದೇವಯ್ಯರಿಗೆ ಬೀರಜವಾಡವನ್ನು ದತ್ತಿಯಾಗಿ ಸಲ್ಲಿಸಿದರು ಎಂಬುವ ಉಲ್ಲೇಖವಿದೆ.

ಸ್ಥಳ: ಚಿನಮಳ್ಳಿ	**ಆಳಿದ ದೊರೆ:** ರಾಯಮುರಾರಿ ಸೋವಿದೇವ
ಕಾಲ: ಕ್ರಿ.ಶ.೧೧೭೫	**ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ ೧೯೯೬
ಭಾಷೆ: ಕನ್ನಡ	**ಪು.** ೧೬-೩೭

ಚಿನಮಳ್ಳಿ ಶಾಸನದ ಆರಂಭದ ಸಾಲುಗಳು ಶಿವನ ಪ್ರಾರ್ಥನೆಯನ್ನು ಉಲ್ಲೇಖಿಸುತ್ತದೆ. ಮಹಾರಾಜಾಧಿರಾಜ ಕಾಳಂಜಕ, ಪುರವರಾಧೀಶ್ವರ, ಸುವರ್ಣವೃಷಭಧ್ವಜ, ಡವರುಗ ತೂರ್ಯ್ಯ ನಸ್ವಣಂ, ಕಲಚೂರ್ಯ ಕಾಲಕಮಲ ಮಾರ್ತಂಡ, ಕದನ ಪ್ರಚಂಡ, ಮಾನಕನಕಾಚಳಂ, ಕಲಿಗಳಂಕುಶಂ, ಗಜಸಾಮಂತ, ಶರಣಾಗತ, ವಜ್ರ ಪಂಜರ, ಪ್ರತಾಪಲಂಕೇಶ್ವರ, ಪರನಾರಿಸಹೋದರ, ಗಿರಿದುರ್ಗ್ಗಮಲ್ಲ, ಚಲದಂಕರಾಮಂ, ವೈರಿಭಕಂಠೀರವ, ನಿಸ್ಸಂಕಮಲ್ಲಂ, ಸನಿವಾರಸಿದ್ಧಿ ಎಂಬ ಪ್ರಶಸ್ತಿ ರಾಯಮುರಾರಿ ಸೋವಿದೇವರಿಗಿದ್ದವು. ಅಲ್ಲದೆ ಭುಜಬಲಚಕ್ರವರ್ತಿ ಬಿರುದಾಕಿಂತ ಇವರು ಕಲ್ಯಾಣಪುರದಲ್ಲಿ ರಾಜ್ಯವಾಳುತ್ತಿದ್ದರು(ಪು.ಸಂ.೧೬. ೨-೮ನೆಯ ಸಾಲುಗಳು).

ಶ್ರೀಮನ್ ಮಹಾಪ್ರಧಾನ ದಂಡಾಧಿಪತಿ ಅತ್ತಿ ನೂರೆಂಭತ್ತರ ಅಧಿಕಾರಿ ಕಲ್ಯಾಣ ದಂಡನಾಯಕರು ಮತ್ತು ಅವರ ಜೊತೆಗಿರುವ ಶಿವಪ್ಪ ದಂಡನಾಯಕರು, ಶರಣಂಗಳು.(ಪು.ಸಂ.೧೬. ೯-೧೧ನೆಯ ಸಾಲು). ಮಹಾಮಂಡಳೇಶ್ವರ, ಕಾಳಂಜರಪುರವರಾಧೀಶ್ವರಂ, ಸುವರ್ಣ ಗರುಡಧ್ವಜ, ವಿಮಳ ಕೀರ್ತಿಧ್ವಜಂ, ಶಿಳಾರ(ಶೀಲಾಹಾರ?) ಕುಳಕಮಲ ಮಾರ್ತಂಡ, ಜೀಮೂತವಾಹನಾನ್ವಯ ಪ್ರಸೂತಂ, ಸಾಯ್ವರ, ಪುಂಜಗತ, ಬೊಂಕಮಕಾರಗೆರೆಯದ ಗಂಡ ಎಂಬ ಪ್ರಶಸ್ತಿ ಮಹಾಮಂಡಳೇಶ್ವರ ಮನ್ನೆಯ ಆಹವಮಲ್ಲರಸರಿಗಿದ್ದವು. ಹದಿನೆಂಟು ಸಂತತಿಯರು, ಹೆಗ್ಗಡೆ ಬಮ್ಮಣ್ಣಯ್ಯನು, ಅತ್ತಿನೂರುರ ಒಡೆಯ ಪ್ರಭು ಅಮ್ಮಣ್ಣಾಯಕ, ರಾಮರಸ, ಅಂಕುಲಿಗೆಯ ನಾಚರಸ, ಸಿಂಧನೂರ ಕಲ್ಲರಸ, ಅತ್ತಿನೂರೆಂಭತ್ತರ ಪ್ರಭುಗಾವುಂಡ******** ಪಶ್ಚಿಮಾಭಿಮುಖಿಯಾಗಿ ಹರಿದ 'ಭೀಮರಥಿ ದೇವಿಯ' ದಡದಲು ಚಿಲಮಳೆಯಲ್ಲಿ ನೆಲೆಸಿದ ವೀರಗಂಧಾರ ದೇವರನಪ್ಪ ಅತ್ತಿನೂರೆಂಭತ್ತರ ಬಳಿಯ ಬಾಡ ಬಿರಜವಾಡ ಕಾಣಿಕೆ ನೀಡಿದರು(ಪು.ಸಂ.೧೬-೧೭. ೧೧-೨೨ನೆಯ ಸಾಲುಗಳು).

ಸ್ವಸ್ತಿ ಸಮಸ್ತ ಭುವನ ವಿಖ್ಯಾತ ಪಂಚಸತವಿದ ಸಾಸನವಚಾಗುಣಗುಣ ನಾಮಾಂಕಿತ ಸತ್ಯ ಶುಭ ಚಾರು ಚಾರಿತ್ರ್ಯ ನಯವಿನಯ ವಿಜ್ಞಾನ ವೀರ ಬಣಂಜ ಧರ್ಮ ಪ್ರತಿಪಾಲಿಸುವ ಮದಯಿನೂರು ಸ್ವಾಮಿಗಳು, ಮೂವತ್ತಾರು ಬೀಡು ಮುಮ್ಮರಿ ದಂಡಗಳು, ಅಲಂದೆ ಸಾಸಿರದ

ಸೆಟ್ಟಿಗುತ್ತ, ನಿಂಬರಗೆ ಸ್ಥಳದ******** ಮಲ್ಲದಿ ಮಾಹೂರದ ಸ್ಥಳದ 'ಬರಿಯ ಸೆಟ್ಟಿ' ನೆಲಿವಿಗೆಯ ಸ್ಥಳದ ಕಾಳಿಕಬ್ಬೆಯಿಂದಿಗ್ಗೆ****** (ಪು.ಸಂ.೧೮. ೩೧-೩೪ನೆಯ ಸಾಲುಗಳು).

ಚಿಲಮಳೆಯ ಮಲ್ಲಿಕಾರ್ಜುನ ದೇವರಿಗೆ ಮೆಣಸಿನ ಹೇರಿಂಗೆ೨, ಅಡಕೆಯ ಹೊರುವ ಎತ್ತು, ಕತ್ತೆ, ಕೋಣ, ಭತ್ತದ ಹೇರಿಂಗೆ ಮಾನಡಿ, ಎಲೆಯ ಹೇರಿಂಗೆ, ಹೊತ್ತವಿರ್ಕೆ ಅಡಕೆಯ ಹೇರಿಂಗೆ೧೦, ಅಲ್ಲ, ಅರಸಿನ ಹೇರಿಂಗೆ ಗೊಪ್ಪವಂ ಎಂದು ದಾನದ ಉಲ್ಲೇಖ ನೀಡಿದೆ (ಪು.ಸಂ. ೧೮.೩೫-೩೭ನೆಯ ಸಾಲು).

ಸ್ಥಳ: ಚಿನಮಳ್ಳಿ **ಆಳಿದ ದೊರೆ:** ಮಹಾಮಂಡಳೇಶ್ವರ ತರ್ದ್ದವಾಡಿಯ ಧನಸಂಗ್ರಹರಸ
ಕಾಲ: ೧೨೬೦ **ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ.-ಫ್ಹಿ.ಶಿವಾನಂದ ೧೯೯೨
ಭಾಷೆ: ಕನ್ನಡ **ಪು.** ೨೪೨-೨೪೪

ಶಾಸನ ಚಿಹ್ನೆಗಳು-ಲಿಂಗ, ರಜಚಿಹ್ನೆ, ಗಂಟೆ, ಧೂಪಾರತಿ, ಬೆಳಗುವ ಕನ್ಯೆ-ಪಕ್ಕದಲ್ಲಿ ತಾಳ-ಮದ್ದಳೆ ಬಾರಿಸುವವರು, ಒಬ್ಬಳು ನಾಟ್ಯ ಸೇವೆಯಲ್ಲಿರುವುದು.

ವಿವರಣೆ-ಸ್ವಸ್ತಿ ಸಮಧಿಗತ ಪಂಚಮಹಾಸಬ್ಧ ಮಹಾಮಂಡಳೇಸ್ವರಂ ಕೊಪಣ ಪುರವರಾಧೀಸ್ವರಂ ಜೀಮೂತ ವಾಹನಾನ್ವಯ ಪ್ರಸೂತಂ ಸೌರ್ಯ ರಘುಜಾತ, ಸುವರ್ಣ ಗರುಡಧ್ವಜಂ ವಇಮಳ ಕೀರ್ತಿಧ್ವಜ ಸ್ತ್ರೀಸ(ಸಿ)ಳಾಹಾರ ನರೇಂದ್ರ ವಿಭವಾಮರೇಂದ್ರ ಮನ್ನೀಯ ವಲ್ಲಭಂ ಭಯಲೋಭವರ್ಜಿತಂ ಕಾಲಂಜರ ಪರಿಯಾಂತ ದೇಸಾಧೀಸ್ವರಂ ನಾಮಾದಿ ಪ್ರಶಸ್ತಿ ಸಹಿತಂ ಶ್ರೀಮನು ಮಹಾಮಂಡಳೇಸ್ವರಂ ತರ್ದ್ದವಾಡಿಯ ಧನಸಂಗ್ರಹರಸರುಂ ಸುಖಸಂಕಥಾ ವಿನೋದದಿಂ ಆಳುತ್ತಿದ್ದರು.

ಅತ್ತಿನೂರ ಕೋಂಟೆಯಲು ರಾಜ್ಯಂಗೆಯುತಮಿರ್ದ್ದು ಪಶ್ಚಿಮಾಭಿಮುಖವಾಗಿ ಪರಿದಂತರ್ಪ್ಪ ಶ್ರೀ ಭೀಮರಥೀ ದೇವಿಯ ತೀರ್ಥದ ಚಿಲ್ಲಮೆಳೆಯ ಶ್ರೀ ಮಲ್ಲಿಕಾರ್ಜುನ ದೇವರು ಕಂಡು ಧನ ಸಗ್ರಹರಸರುಂ ಅತ್ತಿ ನೂರೆಂಭತ್ತರ ಪ್ರಭುಗಾವುಂಡಗಳುಂ ಹೆಗ್ಗಡೆ ಬಮ್ಮಯ್ಯನುಂ ಕೂಡಿ ಸರ್ವಧಾರೀ ಸಂವತ್ಸರದ ಚೈತ್ರಸುಧ ಪಂಚಮಿ ಸೋಮವಾರ ಎಂದು ವ್ಯತೀಪಾತ ನಿಮಿತ್ತವಾಗಿ ಶ್ರೀ ಮಲ್ಲಿಕಾರ್ಜುನ ದೇವರಂಗಭೋಗ ನಿವೇದ್ಯಕ್ಕಂ ಅಲ್ಲಿಯ ಆಚಾರ್ಯ ಸಿವದೇವಯ್ಯಂಗಳಿಗೆ ಧಾರಾಪೂರ್ವಕವಾಗಿ ಅರಿಸನಿಗೆಯ ಹೊಲದಲು ಕೆಕ್ಕರ ಸಾವಳಿಗೆಯ ಸೀಮೆಯಿಂ ತೆಂಕಣದರಲು........ ಕಾಲಡಿಯಲು ಬಿಟ್ಟ ಕೆಇ ಮ೨೦ಮಪುವುಮಂ ಸರ್ವಬಾಧ ಪರಿಹಾರವಾಗಿ ಬಿಟ್ಟರು. ಪುರದಲು ಆನೆ ಮಾಣಿಕ ಮಾರಿದಡಂ ದೆವರ್ಗ್ಗೆ ಅರಸರ್ಗ್ಗೆ ಪುಣ್ಯಾರ್ಥವಾಗಿ ಅಲ್ಲಿಯಲ್ಲಿಯ ಪ್ರಭುಡಾಂಕಗಾವುಂಡನುಂ ಅರಸನಿಗೆಯಲು ಬಿಟ್ಟ ಕೆಇ ಕೆಕ್ಕರ ಸಾವಳಿಗೆಯ ಸೀಮೆಯಲು ಸಾತೇಸ್ವರ ದೇವರಿಗೆ ಕಾಲಡಿಯ ಮತ್ತರು ೧೨ ಅಯನಮಗ ಗಾಣಗ ಊರಂ ಬಿರಜವಾಡದ ಹೊಲದಲು ಪುರದ ಹೊರೆಯಲು ಕಾಲಡಿಯಲು ಬಿಟ್ಟ ಮತ್ತರು ೧೮ ಮಣಿಯಹಾಳ ಅಂತ ಗುಡ ಕಾಲಡಿಯಲು ಬಿಟ್ಟ ಮಇ ಕೆಕ್ಕರ ಸಾವಳಿಗೆಯಲು ಅಲ್ಲಿಯ ನಾಯಕಂ ಬಿಟ್ಟ ಈಇ ಕಾಲಡಿಯಲು ಮತ್ತರು ೬ ಎಂಬ ಉಲ್ಲೇಖವಿದೆ.

ಸ್ವಸ್ತಿ ಸಮಸ್ತ ಪ್ರಸಸ್ತಿ ಸಹಿತಂ ಶ್ರೀಮನ್ಮಹಾಮಂಡಳೇಶ್ವರಂ ತರ್ದೆವಾಡೀನಾಡ ಧನಸಂಗ್ರಹರಸರಂ ಕುಲಿಗ ನಾಡ ಮನ್ನಯರ್ಗ್ಗೆ ತಮ್ಮ ನಾಡೊಳಗಣ ಬಿರಜವಾಡದ ಹೊಲದೊಳಗೆ ಕುಡಲಾನ್ವಾಯದಿಂ ತಂಮುಂಬ ಭೂಮಿಯಂ......ಮುಖ್ಯವಾಗಿ ತವಗಂ ಆ ನಾಡ ಮಂನೆಯರ್ಗಂ ಪುಣ್ಯಾರ್ಥವಾಗಿ ವಿರೊಧಿ ಸಂವತ್ಸರದ ವೈಶಾಖ ಸುಶಿ ಸೋಮವಾರದಲು...... ಉತ್ತರಾಯಣ ಸಂಕ್ರಮಣ ವ್ಯತೀಪಾತದಂದು ಚಿಲ್ಲಮೆಳೆಯ ಶ್ರೀ ಮಲ್ಲಿಕಾರ್ಜುನ ದೇವರಂಗಭೋಗ ನಿವೇದ್ಯಕ್ಕಂ ಅಲ್ಲಿಯಾಚಾರ್ಯಂ ಸಿವದೇವಯ್ಯಂಗಳ್ಗೆ ಧಾರಾಪೂರ್ವಕಂ ಮಾಡಿ ಊರಿಂ ಮೂಡತೊರೆದಡಿಯ ಮೊಗೆಯ ಕೊಪ್ಪದಲು ಬಿಟ್ಟ ಕೆಯಿ ಕಾಲಡಿಯ ಮತ್ತರು॥ ೩೫ ಆ ಸ್ಥಳದಿಂ ಬಡಗಲು ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ಶ್ರಿಮನುಮಹಾ ಮಂಡಳೇಶ್ವರಂ ಡಾಕರಸರ ಮಗನಾಹಮಲ್ಲ ದೇವರಸರು ಬಿಟ್ಟ ಕೆಯಿ ಕಾಲಡಿಯ ಮತ್ತರು ೧೨। ಇಂತೀ ಧರ್ಮಮಂ ಪ್ರತಿಪಾಳಿಸಿದವರ್ಗ್ಗೆ ಶ್ರೀಪರ್ವತದಲು ಶತಸಹಸ್ರ ಲಿಂಗಮಂ(ಪೂಜಿಸಿದ ಪುಣ್ಯವಕ್ಕು). ಶಾಪಾಶಯವಿದೆ. ತರ್ದವಾಡಿಯ ಮಹಾಮಂಡಲೇಶ್ವರ ಧನ ಸಂಗ್ರಹರಸರು ಅತ್ತಿನೂರುಕೋಂಟೆ ನೆಲೆವೀಡಿನಲ್ಲಿದ್ದಾಗ ಸಮಸ್ತ ಪ್ರಭುಗವುಂಡರು ಸರ್ಬ ನಮಶ್ಯವಾಗಿ ಪಶ್ಚಿಮಾಭಿಮುಖವಾಗಿ ಹರಿಯುವ ಅಭಿನವ ಕೈಲಾಸವೆಂದು ಖ್ಯಾತಿವೆತ್ತ ಚಿಲ್ಲಮಳೆ ಮಲ್ಲಿಕಾರ್ಜುನ ದೇವರಿಗೆ ಬಿಟ್ಟ ದತ್ತಿ. ಅತ್ತನೂರೆಂಭತ್ತು, ಅಲಂದೆ ಸಾಸಿರನಾಡು, ಕಂಪಣವಾಡ, ಪಾಶುಪತ ಶೈವ ಸ್ಥಾನಾಚಾರ್ಯ ಶಿವದೇವಯ್ಯ ಎಂಬ ಉಲ್ಲೇಖವಿದೆ.

ಸ್ಥಳ: ಚಿನಮಳ್ಳಿ **ಆಳಿದ ದೊರೆ:** ಮಹಾಮಂಡಳೇಶ್ವರ ವಿಜಯಪುರದ ಮಾಯಿದೇವ ರಾಣೆ
ಕಾಲ: ೧೨೯೨ **ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ.–ವ್ಹಿ.ಶಿವಾನಂದ ೧೯೯೨
ಭಾಷೆ: ಕನ್ನಡ **ಪು.** ೨೪೨–೨೪೪

ಸ್ವಸ್ತಿ ಸಮಧಿಗತ ಪಂಚ ಮಹಾಸಬ್ದ ಮಹಾರಾಜಾಧಿರಾಜ ಕಾಳಂಜರ ಪುರವರಾಧೀಶ್ವರ. ಸುವರ್ಣ ವ್ರಿಷಭಧ್ವಜ, ಡಮರುಗ ತೂರ್ಯ ನಿರ್ಘೋಷಣಂ, ಕಳಚೂರ್ಯ ಕುಳಕಮಳ ಮಾರ್ತಂಡ, ಕದನ ಪ್ರಚಂಡ, ಮಾನ ಕನಕಾಚಳಂ, ಸುಭಟರಾದಿತ್ಯ, ಕಲಿಗಳಂದುಸ, ಗಜಸಾಮಂತಂ, ಸರಣಾಗತ ವಜ್ರಪಂಜರ, ಪ್ರತಾಪ ಲಂಕೇಶ್ವರ, ಪರನಾರೀ ಸೋದರ, ಗಿರಿದುರ್ಗ್ಗಮಲ್ಲ ಚಲದಂಕರಾಮ, ವೈರೀಭ ಕಂಠೀರವಂ ನಾಮಾದಿ ಪ್ರಶಸ್ತಿ ಸಹಿತಂ ಎಂದಿದೆ.

ಸ್ವಸ್ತಿ ಶ್ರೀ ಸಕ ವರುಷ ೧೨೧೪ನೆಯ ಖರಸಂವತ್ಸರದ ಪುಷ್ಯ ಬಹುಳ ೩೦ ಆ ಆರ್ದ್ಧೋದಯ ಸೂರ್ಯ ಗ್ರಹಣ ಸೋಮವಾರದಂದು, ಸ್ವಸ್ತಿ ಶ್ರೀಮತ್ ಯಾದವ ನಾರಾಯಣ ಭುಜಬಲ ಪ್ರೌಢಪ್ರತಾಪ ಚಕ್ರವರ್ತಿ ಶ್ರೀ ರಾಮಚಂದ್ರ ದೇವೋ ವಿಜಯೀ। ತತ್ಪಾದ ಪದ್ಮೋಪಜೀವಿ ರಾವುತ್ತರಾಯ ಸರಣಾಗತ ವಜ್ರಪಂಜರ ಮಹಾಮಂಡಳೇಶ್ವರ ಮಹಾರಾಜಪುತ್ರ ಶ್ರೀ ವಿಜಯಪುರದ ಶ್ರೀ ಮಾಇದೇವ ರಾಣೆಯರು ಅತ್ತಿನೂರು ಎಂಭತ್ತರ ಬಳಿಯ ಬಾಡ ಪಶ್ಚಿಮಾಭಿಮುಖನಾಗಿ ಹರಿವ ದಿಬ್ಯ ತೀರ್ತ್ಥ ಶ್ರೀ ಭೀಮರಥಿದೇವಿಯ ತಟಾಕದಲ್ಲಿ ರಾಯರಾಜಗುರು ವೀರ ಕೇದಾರ ದೇವನ ತಪೋ ಪ್ರಭಾವಕ್ಕೆ ಪ್ರಸಂನ್ನನಾಗಿ, **ಚಿಲ್ಲಮಳೆ ಅಭಿನವ ಕೈಳಾಸವೆಂದು ಶ್ರೀಸೈಳ** ಮಲ್ಲಿಕಾರ್ಜುನ ಒಂದು ವುತ್ತರಾಭಿಮುಖವಾಗಿ ನೆಲಿಸಿದ ಆ ತೀರ್ತ್ಥಕ್ಕೆ ಅರ್ದ್ಧೋದಯ ಸೂರ್ಯ ಗ್ರಹಣಕ್ಕೆ ದಾನಶೂರ ಮಾಇದೇವ ರಾಣೆಯರು ತಂನ ರಾಣೀವಾಸ, ತಳವರ್ತಿ ಅಧಿಕಾರಿಗಳು, ಶ್ರೀಕರಣಿಗಳು

ಪ್ರಧಾನರು ಸಹಿತ ಬಂದು ದೇವಪೂಜೆಯಂ ಮಾಡಿ ದೇವಂಗೆ ಪಟ್ಟೆ ೯೬೦ ಹರಿವಾಣ ೫ ಕಪಿಲೆ ೮ ತದನಂತರಂ ಶತಹರಿವಾಣದಲಿ ಘೃತಪಾಯಸಂಗಳಿಂ ಸದಕ್ಷಿಣೆ ಸಹಿತ ದ್ವಿಜ ಶ್ರೇಷ್ಠರಿಗೆ ಆರ್ದ್ರೋದಯ ಬಾಣನವ ಕೊಟ್ಟ ಸೂರ್ಯಗ್ರಹಣದ ದತ್ತಿಕೊಟ್ಟೀ ಹೋಮವ ಮಾಡಿ ಸಹಸ್ರ ಗೋವುಗಳ ಅಲಂಕರಿಸಿ ಸದಕ್ಷಿಣೆ ಸಹಿತ ಚರ್ತುವೇದಿ ಬ್ರಾಹ್ಮರಿಗೆ ಶ್ರೀ ಮಲ್ಲಿಕಾರ್ಜುನ ದೇವರ ಸಂನ್ನಿದಾನದಲ್ಲಿ ಕೊಟ್ಟ ಲಿಂಗಾಪುರ ಅತ್ತಿನೂರೆಂಭತ್ತರ ಪ್ರಭುಗೌಂಡುಗಳು 'ಸೆಟ್ಟಿ' ಮುಖ್ಯ ನಖರ, ಮುಂಮ್ಮುರಿದಂಡಂಗಳು ಮಹಾಮಂಡಳೇಶ್ವರ ಕೋಪಣ ಪುರವರಾಧೀಶ್ವರ ನೂರ್ಮಡಿ ಗಂಡ ಬೆಟ್ಟದ ಮನ್ನೆಯ ಬೊಪ್ಪದೇವ ಲಿಂಗರ್ಸನ ಡಾಕರ್ಸ ಮುಖ್ಯ ಹದಿನೆಂಟು ಸಂತತಿಗಳು ಅಲಂದೆ ಸಸಿರದ ಸೇಗುತ್ತೆ ಸೋಮದೇವ ನೆಲವಿಗೆ ನಾಡ ಪ್ರಭು ಗೌಂಡಗಳು ಮುಮ್ಮುರಿದಂಡಂಗಳು ಇಂನ್ತಿ ಸಚಿವ ಮುಂದೆ ಮಾಇದೇವ ರಾಣೆಯರು ತನ್ನಲಿ ಹುಟ್ಟಿದಂಥಾ ಶ್ರೋತ್ರಿಯವ ನಿಶ್ರೋತ್ರ ಮಾಡಿಬಿಟ್ಟು ಜೀರ್ಣೋದ್ಧಾರವ ಮಾಡಿ ಶ್ರೀ ಮಲ್ಲಿಕಾರ್ಜುನ ದೇವಂಗೆ ಧಾರೆಯಬೆರೆದರು(ಈ) ಧರ್ಮಂ ಪಾಲಿಸಿದವರ ಕುಲಕೋಟಿಗೆ ಭಕ್ತಿ। ಭುಕ್ತಿ। ಮುಕ್ತಿ। ಸಾಯುಜ್ಯವ ಕುಡುವ ಶ್ರೀ ಮಲ್ಲಿಕಾರ್ಜುನ। ಇ ಧಂಮ್ಮಕ್ಕೆ ಕಂಟಕರಾದವರು ಸಹಸ್ರ ಕಪಿಲೆಯಂ ವಾರಣಾಸಿಯಲಿ ವಧಿಸಿದಪರು॥ ಶಾಪಾಶಯವಿದೆ. ಶ್ರೀ ಮಲ್ಲಿಕಾರ್ಜುನಂಗೆ ಮಂಗಳ ಮಹಾ ಶ್ರೀ॥ ರಾಮಚಂದ್ರದೇವನ ಮಹಾ ಮಂಡಲೇಶ್ವರ ವಿಜಯಪುರದ ಮಾಯಿದೇವರಾಣೆ ಅತ್ತಿನೂರೆಂಬತ್ತರ ಪ್ರಭುಗವುಂಡರು ನೆಲ್ಲಿಗೆ ನಾಡಪ್ರಭುಗಳು ಚಿಲ್ಲಮಳೆಯ ದಿಬ್ಯತೀರ್ಥದಲ್ಲಿ ಪೂಜೆ ಉತ್ಸವ ಹೋಮವನ್ನಾಚರಿಸಿ ಹೊನ್ನ ಹರಿವಾಣ. ಸಹಸ್ರ ಗೋದಾನಗೈದದು. ಅಲ್ಲಿನ ಸ್ಥಾನಾಚಾರ್ಯರಾದ ವೀರಕೇದಾರ ದೇವರ ತಪೋ ಪ್ರಭಾವದಿಂದ ಚಿಲ್ಲಮೆಳೆಯು 'ಅಭಿನವ ಶ್ರೀಶೈಲ'ವೆಂದು ಖ್ಯಾತಿವೆತ್ತ ಸಂಗತಿಯನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಸ್ಥಳ: ಚಿಂಚನಸೂರು   **ಆಳಿದ ದೊರೆ:** ನಾಡ ಪ್ರಜೆಗಳು?
ಕಾಲ: ೧೩೯೦   **ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ.-ಘ್ಹಿ.ಶಿವಾನಂದ ೧೯೯೨
ಭಾಷೆ: ಕನ್ನಡ   **ಪು.** ೨೫೮

ವಿವರಣೆ-ಶಕ ವರುಷ ೧೫೧೨ರ ಉಗ್ರ ಸಂವತ್ಸರ ಕಾರ್ತಿಕ ಬಹುಳ...... ಬುಧವಾರದಲು ಶ್ರೀಮತು ಕೊಳಲುರ ಚಿಂನರಯಿರ **ಸಂಗಪನ** ಮಗ ಮಾಯಂಣನು ಶ್ರೀ **ಮಾಹೇಶ್ವರ ದೇವರಿಗೆ** ದಂಡವತ್ತವನು ಮಾಡಿದ **ಮಾಂನ್ಯಂ ಸ್ವದತ್ತಂ ಪರದತ್ತಂ, ಓಂ ಖಡ್ಗ ಧಾರಿಣೇ ದೇವಹಿ ಬಲಿಏತ್ಯಂ ತಿಸ್ಮರಯ್ಯೇ ವಿಶ್ವಂ** ಶ್ರೀ ಶ್ರೀ ಶ್ರೀ. ಶಾಸನವು ಬಲಿ ಕೊಟ್ಟ ಬಗ್ಗೆ ವಿವರಿಸುತ್ತದೆ.

ಸ್ಥಳ: ಚಿಂಚನಸೂರು   **ಆಳಿದ ದೊರೆ:** ?
ಕಾಲ: ಕ್ರಿ.ಶ:೧೩೦೨   **ಪ್ರಕಟಿತ:** ಗು.ಜಿ.ಇ ಮತ್ತು ಪು-ಸಂ. ಡಾ.ಆರ್. ಗೋಪಾಲ್
ಭಾಷೆ: ಕನ್ನಡ   ಹನುಮಾಕ್ಷಿ ಗೋಗಿ

ಬ್ರಹ್ಮೇಶ್ವರ ದೇಗುಲದ ಗರ್ಭಗೃಹದ ಎಡ ಭಾಗದ ಕಂಬ-

ಶಕವರ್ಷ ೧೫೦೨ರ **ಉದ್ರಿ** ಸಂವತ್ಸರ ಕಾರ್ತಿಕ ಬಹುಳ **ಏಕಾದಸಿ** ಬುಧುವಾರದಲು ಶ್ರೀಮತ್ಕೊರಲೂರ ಚಿಂನಗಯಿಕ **ಗಂಗಪನ** ಮಗ ಮಾಯಂಣನು ಬ್ರಹ್ಮೇಶ್ವರದೇವರಿಗೆ ದಂಡವತ್ತವನು

ಮಾಡಿದ ಮಾಐದುನೂರು ಮಾತಾದತ್ತಂ ಪಿತಾದತ್ತಂ ರಾಜಾಖಡ್ಗಧಾರಿಗೋ ದೇವತಾ ಬಲಿಮಿತ್ಯಾಂತಿ ಸ್ಮರಂಕಂನೇನಶೇಷಯಃ ಮಂಗಳ ಮಹಾ ಶ್ರೀ ಶ್ರೀ ಶ್ರೀ

ದತ್ತಿ ಶಾಸನದಲ್ಲಿ ಕೊರವಾರ ಚೆನ್ನಗಯಿಕ ಗಂಗಪ್ಪನ ಮಗಮಾಯಣ್ಣನು ಬ್ರಹ್ಮೇಶ್ವರ ದೇವರಿಗೆ ದಂಡವತ್ತ ಐನೂರು ಮಾಡಿದನೆಂದು ತಿಳಿಸುತ್ತದೆ. ಇಲ್ಲಿರುವ ಕೊರಲೂರು ಇಂದಿನ ಚಿತ್ತಾಪೂರ ತಾಲೂಕಿನ ಕೊಲ್ಲೂರು ಆಗಿರಬಹುದು. ಶಕವರ್ಷ ೧೫೦೨ರ ಉದ್ರಿ ಸಂವತ್ಸರ ಕಾರ್ತಿಕ ಬಹುಳ ಏಕಾದಶಿ ಬುಧವಾರ ಎನ್ನುವ ಮಿತಿಯು ೨೪/೧೦/೧೫೮೦ಕ್ಕೆ ಸಮಾನವಾಗಿದೆ.[೨೩]

ಬ್ರಹ್ಮೇಶ್ವರ ದೇಗುಲದ ಗರ್ಭಗೃಹದ ದ್ವಾರ ಬಂಧ–

ಗಂಗಪನ ಮಗ ಮಯಪನು ಬರದ+ದಂಡವತ್ತ ಉಮೂನ್ನೂರು

ಬಹುಶಃ ಗಂಗಪನ ಮಗಮಾಯಿಪನು ಬರೆದನೆಂದು ಮುನ್ನೂರು ದಂಡವತ್ತ ದೇವರಿಗೆ ಬಿಟ್ಟನೆಂದು ದಾಖಲಿಸುತ್ತದೆ. ಮೇಲಿನ ಶಾಸನದಲ್ಲಿ ಬರುವ ಕೊರಲೂರು ಗಂಗಪ್ಪ ಮತ್ತು ಆತನ ಮಗಮಾಯಣ್ಣರೇ ಎಂದು ಗುರ್ತಿಸಬಹುದು.[೨೪] ಬ್ರಹ್ಮೇಶ್ವರ ದೇಗುಲದ ಗರ್ಭಗೃಹದ ಬಲಭಾಗದ ಕಂಬ–

ಪದದಂನಂ ಪಾರ್ವತೇಷ ನಿಯಮಿಸಿದನು ವೇದಾರ್ಥ ಶಾಸ್ತ್ರಾರ್ತ್ಥ–ವಂದ್ಯಾಂ ಮುದದಿಂ ಪ್ರಾರಂಭಕುದ್ಯೋಗಿಸಿ ನಿಯಮಿಸಿದನು ಮಹಾಕಾವ್ಯ ಬಂಧಪ್ರಬಂಧಂ ವಿದಿತಾರ್ಥ್ಯಂ ಮಾಯಣಾಯಾರ್ಂ ತನೂಜ ವಿಜಯ ಗಂಗಾಧರಂ ಪೆದ್ದಜಿಹ್ವಾಗ್ರದೊಳ್ನಿಂತುಂ ನತಿಮತಿ ಪರು ಮೌನ ಸತತಂ ವಾಣಿಯಂ ಜಾಣೆಯರ್।[೨೫]

ವಿವರಣೆ–ವೇದಾರ್ತ್ಥ ಶಾಸ್ತ್ರಗಳಲ್ಲಿ ಪ್ರವೀಣನೂ ಮಹಾಕಾವ್ಯ ಪ್ರಬಂಧಬಂಧಗಳಲ್ಲಿ ನಿಷ್ಣಾತನು ಆದವನೂ ಮಾಯಣಾರ್ಯ ತನೂಜನಾದ ವಿಜಯ ಗಂಗಾಧರ ಎಂದು ಜಾಣೆಯರು ಹೊಗಳುವರೆಂದು ಶಾಸನ ತಿಳಿಸುತ್ತದೆ. ಮೇಲಿನ ಶಾಸನ ತಂದೆ ಮಾಯಪ್ಪ ಬರೆದರೆ ಈ ಶಾಸನವನ್ನು ಆತನ ಮಗ ವಿಜಯ ಗಂಗಾಧರ ಬರೆದ?[೨೬]

ಸ್ಥಳ: ಜವಳಿ	**ಆಳಿದ ದೊರೆ:** ಶ್ರೀ ತ್ರೀಭುವನಮಲ್ಲ ದೇವರು?
ಕಾಲ: ಕ್ರಿ.ಶ.೧೨–೧೫ನೆಯ ಶತಮಾನ	**ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
	ಪು.: ೪೪
ಭಾಷೆ: ಕನ್ನಡ	

ವಾಮರಸ ದಂಡನ್ನೆ(ನಾ)ಯ ಕರವ್ರಿತ್ತಿ (ಮ.ಸಂ.೪೪, ೧–೫ನೆಯ ಸಾಲು)

ಸ್ಥಳ: ಜವಳಿ
ಆಳಿದ ದೊರೆ: ?

ಕಾಲ: ಸು.೧೨ನೆಯ ಶತಮಾನ
ಪ್ರಕಟಿತ: ಸಾಧನೆ.ಸಂ-೨,ಸಂಚಿಕೆ-೧-ಕ್ರಿ.ಶ.೧೯೭೩

ಭಾಷೆ: ಕನ್ನಡ
ಪ್ರಸಂ.: ಡಾ. ಜಿ.ಎಸ್. ಶಿವರುದ್ರಪ್ಪ
ಪು.: ೫೫

ಜವಳಿ ಗ್ರಾಮದಿಂದ ಒಂದೂವರೆ ಮೈಲಿ ದಕ್ಷಿಣದಲ್ಲಿ ಹಾಳ್ಪೆ ಲಕ್ಷ್ಮಿ ದೇವಾಲಯದಲ್ಲಿರುವ ಕಲ್ಲು-ಕ್ರಿ.ಶ.೧೨-೧೩ನೆಯ ಶತಮಾನ.

ವಿವರಣೆ- ವಾಮರಸ ದಂಡನ್ನೆ(ನಾ)ಯಕರವ್ರಿತ್ತಿ ಎಂದಿದೆ.

ಸ್ಥಳ: ತಡಕಲ್
ಆಳಿದ ದೊರೆ: ರಾಷ್ಟ್ರಕೂಟ ದೊರೆ

ಕಾಲ: ಕ್ರಿ.ಶ.೧೧-೧೨ನೆಯಶತಮಾನ
ಅಮೋಘವರ್ಷ ನೃಪತುಂಗ
ಪ್ರಕಟಿತ: ಸಾಧನೆ. ಸಂ-೨,ಸಂಚಿಕೆ-೧-ಕ್ರಿ.ಶ. ೧೯೭೩
ಪ್ರಸಂ.: ಡಾ. ಜಿ.ಎಸ್. ಶಿವರುದ್ರಪ್ಪ.
ಪು.: ೫೮-೫೯
ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ
ಪು.: ೪೫-೪೬

ನಮಸ್ತುಂಗ ಶಿರ ಶ್ಚುಂಬಿ ಚಂದ್ರಚಾಮರ ಚಾರವೇ। ತ್ರೈಲೋಕ್ಯ ನಗರಾರಂಭ ಮೂಳಸ್ತಂಭಾಯ ಶಂಭವೇ ಜಯತ್ಯಾವಿಷ್ಕೃತಂ, ವಿಷ್ಣೋರ್ವ್ವಾರಾಹಂ, ಕ್ಷೋವಿತಾರ್ಣ್ಣವಂ, ದಕ್ಷಿಣೋಂನತ ದಂಷ್ಟ್ರಾಗ್ರ, ವಿಶ್ರಾನ್ತ ಭುವನಂ ವಪುಃ ಶ್ರೀ ಪಹರತಾದ್ದಃ, ಶ್ರೀಪತಿ ಕ್ರೋಡರೂಪೋ ವಿಕಟ ವಿಶದ ದಂಷ್ಟ್ರಾಪ್ರೊಂತ ವಿಶ್ರಾಂತ ಭಾಜಂ ಅವಹದಷ್ಟಾಕ್ರಿಷ್ಟ ವಿಸ್ಪಷ್ಟ ಕಾಣ್ಡ ಪ್ರತನುಬಿಸ ಜಟಾಗ್ರಗ್ರನ್ಥಿಮಭೋಧರತ್ರಂ॥

ರಾಷ್ಟ್ರಕೂಟ ವಂಶ ಶ್ರೀರಮಣೀ ರಮಣನಾಗಲೇಂ, ಧರೆಗೆಸೆದ, ಶ್ರೀರಮಣನೆನಿಪ ಕೃಷ್ಣ ಮಹೀ ರಮಣ ಬೆರಸಮೋಘವರ್ಷಂ ನ್ರಿಪಂ ಎಂದು ಉಲ್ಲೇಖಿತವಾಗಿದೆ (ಪು.ಸಂ.೪೫. ೧-೫ನೆಯ ಸಾಲು).

ಸ್ವಸ್ತಿ ಸಮಸ್ತ ಜಗನ್ಮಂಡೊಡಳಾನುಷ್ಠಾಣ ಪರಾಯಣ ವೀರ ನಾರಾಯಣನನುಕ್ರಿತಾಂಬರೀಶ ನ್ರಿಪನ ಹಿತಬಳ ಜಳಧಿ ಬಡವಾನಳ। ನಿಜಭುಜ ವಜ್ರಪಂಜರಾನ್ತಃಕ್ರಿತ ಸರಣಾಗತಾರಾತಿಲೋಕ। ಅಭಯಾವಲೋಕ ನಹಿತ ಹೃದಯ ನಿಶಾತ ಜೀವಿತರಾಜ್ಯ ಚಿನ್ತಾನುಬಣ್ನರೋಷ। ನವನ್ದ್ಯ ಕೋಪಾನಿಬೋದಯ ಪ್ರಕಾಸಿತ ಯದುಕುಳನರಪಾಳ ಕಮಳಷಣ್ಡ। ರಟ್ಟಮಾರ್ತಂಡ, ಮಹಾವರಾಹನಪ್ಪನುಪಮ 'ಶ್ರಿ ಅಮೋಘವರ್ಷ ದೇವರು ಮಾನ್ಯಖೇಡಮರದಲ್ಲಿ ಸುಖದಿಂದ ರಾಜ್ಯವಾಳುತ್ತಿದ್ದರು'.

ಹಿರಿಯ ತಡಕಲ್ಲು ಬಳ್ಳೇಶ್ವರದೇವರಿಗೆ ದೇವರಂಗ ಭೋಗಕ್ಕೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ, ಗೀತವಾದ್ಯನ್ರಿತ್ಯಕ್ಕಂ, ಪೂಜಾರಿಗೆ, ಸ್ಥಾನಾಚಾರ್ಯರಿಗೆ, ಸರ್ವನಮಸ್ಯವಾಗಿ ಊರಿನ ಬಡಗಣ ಸೀಮೆಯಲ್ಲಿ** ತ್ರುಟಿತ (ಪು.ಸಂ.೪೫-೪೬. ೬-೧೪ನೆಯ ಸಾಲು).

ಸ್ಥಳ: ತಡಕಲ್ **ಆಳಿದ ದೊರೆ:** ?

ಕಾಲ: ಕ್ರಿ.ಶ.೧೬-೧೭ನೆಯ ಶತಮಾನ **ಪ್ರಕಟಿತ:** ಸಾಧನೆ.ಸಂ-೨,ಸಂಚಿಕೆ-೧-ಕ್ರಿ.ಶ.೧೯೭೩

ಪ್ರಸಂ.: ಡಾ. ಜಿ.ಎಸ್. ಶಿವರುದ್ರಪ್ಪ.

ಪು.: ೫೯

ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ **ಪು.:** ೪೭

ಅದೇ ಗ್ರಾಮದ ಶಾಂತಿನಾಥ ಬಸದಿಯಲ್ಲಿರುವ ಇನ್ನೊಂದು ಚಿಕ್ಕ ಕಂಚಿನ ಜಿನಬಿಂದ ಪೀಠದ ಮೇಲಿದೆ.

ಶಾಸನದ ಮುಂಭಾಗ-ಬದಾವೆಯ ಮನಿಕಸೆಟ್ಟಿಯ ಮಗ ಮಲ್ಲಿಸೆ (ಪು.ಸಂ.೪೭. ೧-೨ನೆಯ ಸಾಲು). ಪಕ್ಕದಲ್ಲಿ-ಟ್ಟ ಮಡಿಸಿದ ಬಿಂಬ ಪ್ರಬವಲಿ(ಪು.ಸಂ.೪೭,೩-೪ನೆಯ ಸಾಲು).

ಸ್ಥಳ: ತಡಕಲ್ **ಆಳಿದ ದೊರೆ:** ?

ಕಾಲ: ಕ್ರಿ.ಶ.೧೬೦೧ **ಪ್ರಕಟಿತ:** ಸಾಧನೆ.ಸಂ-೨,ಸಂಚಿಕೆ-೧-ಕ್ರಿ.ಶ.೧೯೭೩

ಪ್ರಸಂ.: ಡಾ. ಜಿ.ಎಸ್. ಶಿವರುದ್ರಪ್ಪ.

ಪು.: ೫೯

ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ **ಪು.:** ೪೮

ಅದೇ ಬಸದಿಯಲ್ಲಿರುವ ಇನ್ನೊಂದು ಚಿಕ್ಕ ಅಮೃತ ಶಿಲೆಯ ಪಾರ್ಶ್ವನಾಥ ವಿಗ್ರಹ ಪೀಠದಲ್ಲಿದೆ.

ಸಾಲಿವಾಹನ ಸಖೆ ೧೫೨೩ನೆ ಪ್ಲವನಾಮ ಸಂವತ್ಸರದ ಚೈತ್ರ ಸುದ್ಧ ಷಷ್ಟಿ ಬುಧುವಾರ ಭಟ್ಟಾರಕ ಶ್ರೀ ವಾದಿ ವಿದ್ಯಾ ************** (ಶಿಷ್ಯ) ಚಂದ್ರಕೀರ್ತಿ ********* (ನಾಭಿರಾ) (ಪು.ಸಂ.೪೮. ೧-೩ನೆಯ ಸಾಲು).

ಸ್ಥಳ: ತಡಕಲ್ **ಆಳಿದ ದೊರೆ:** ?

ಕಾಲ: ಕ್ರಿ.ಶ.೧೬೨೭ **ಪ್ರಕಟಿತ:** ಸಾಧನೆ.ಸಂ-೨,ಸಂಚಿಕೆ-೧-ಕ್ರಿ.ಶ.೧೯೭೩

ಪ್ರಸಂ.: ಡಾ. ಜಿ.ಎಸ್. ಶಿವರುದ್ರಪ್ಪ.

ಪು.: ೫೯

ಕ.ಜಿ.ಶಾ. ಹನುಮಾಕ್ಷಿ ಗೋಗಿ ೧೯೯೬

ಭಾಷೆ: ಕನ್ನಡ **ಪು.:** ೪೯

ಅದೇ ಬಸದಿಯಲ್ಲಿರುವ ಇನ್ನೊಂದು ಚಿಕ್ಕ ಅಮೃತ ಶಿಲೆಯ ಜಿನಬಿಂದ ಪೀಠದ ಮೇಲಿದೆ. ನಾಗರಿ ಬರಹದಲ್ಲಿದೆ ಎಂದು ಎಸ್. ನಾಗರಾಜುರವರು ಸಾಧನೆಯಲ್ಲಿ ಪ್ರಕಟಿಸಿದ್ದಾರೆ.

ಸಂವತ್ ೧೫೪೯ ವರ್ಷ ವೈಸಾಖ* ಸುಹಿ ಶ್ರೀ ಮೂಲ ಸಂಘ ಮ *** ನಾ * ಭಾನುಚಂದ್ರ ದೇವ(ಪು.ಸಂ.೪೯. ೧-೩ನೆಯ ಸಾಲು).

ಸ್ಥಳ: ದುತ್ತರಗಾಂವ | **ಆಳಿದ ದೊರೆ:** ಆರನೆಯ ವಿಕ್ರಮಾದಿತ್ಯ
ಕಾಲ: ಕ್ರಿ.ಶ.೧೧೦೭ | **ಪ್ರಕಟಿತ:** ಅನುಶಾಸನ. ಹನುಮಾಕ್ಷಿ ಗೋಗಿ
ಭಾಷೆ: ಕನ್ನಡ | **ಪು.:** ೨೧೬

ದುತ್ತರಗಾಂವೆಯ ಊರ ಮಧ್ಯದಲ್ಲಿರುವ ಭೋಗೇಶ್ವರ ದೇವಾಲಯದ ಗುಡಿಯ ಪಕ್ಕ ಕಟ್ಟೆಯ ಮೇಲೆ ಈ ಶಾಸನವಿದೆ. ಕಲ್ಯಾಣ ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲ ಬಿರುದಾಂಕಿತನಾದ ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿದೆ. ಚಾಳುಕ್ಯ ವಿಕ್ರಮ ವರ್ಷದ ೩೩ನೆಯ ಸರ್ವಧಾರಿ ಸಂವತ್ಸರದ ಜೇಷ್ಠದಮವಾಸೆ ಬೃಹಸ್ಪತಿವಾರ ಸೂರ್ಯಗ್ರಹಣದ ದಿನ ತ್ರಿಭುವನಮಲ್ಲನಿಂದ ವಿಶೇಷ ಗೌರವಗಳನ್ನು ಪಡೆದ ಮಹಾರುದ್ರಭಟ್ಟೋಪಾಧ್ಯಾಯ ಸೋಮಾಜಿಯರು ಪಿರಿಯರಸಿ ದುತ್ತರಗಾವೆಯಲ್ಲಿ ಮಾಡಿಸಿದ ಕೇಶವ ದೇವರಿಗೆ ಬಿಟ್ಟ ಭೂದತ್ತಿಯನ್ನು ವಿವರಿಸುತ್ತದೆ. ತನ್ನ ತಂದೆಯಾದ ರವಿನಾಗ ಭಟ್ಟೋಪಧ್ಯಾಯ ಸೋಮಾಜಿಯರು ತನಗೆ ಕೊಟ್ಟ ೫೦ ಮತ್ತರು ಭೂಮಿಯನ್ನು ದತ್ತಿಯಾಗಿ ನೀಡಿದಂತೆ ಉಲ್ಲೇಖಿಸಿದೆ. ದೇವರ ಧೂಪ, ನೈವೇದ್ಯ, ಅಂಗಭೋಗಗಳಿಗಾಗಿ ೩೦ ಮತ್ತರು ಭೂಮಿ ಪೂಜಾರಿ ಮತ್ತು ಮಾಲಗಾರರಿಗರೆ ತಲಾ ೧೦ ಮತ್ತರು ಭೂಮಿಯನ್ನು ೧ ಮತ್ತರು ಹೂವಿನ ತೋಟ ಬಿಟ್ಟಿದ್ದನ್ನು ಹೇಳುತ್ತದೆ.

ಸ್ಥಳ: ತಿಳಗುಳ | **ಆಳಿದ ದೊರೆ:** ಚಾಲುಕ್ಯ ತ್ರಿಭುವನ ಮಲ್ಲ ವಿಕ್ರಮಾದಿತ್ಯ
ಕಾಲ: ಕ್ರಿ.ಶ.೧೦೮೧ | **ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ, ೧೯೯೨
ಭಾಷೆ: ಕನ್ನಡ | **ಪು.:** ೨೬

ರಾಜಲಾಂಛನ, ಸೂರ್ಯ, ಚಂದ್ರ ನಡುವೆ ಲಿಂಗ, ಕತ್ತೆಯ ಕೆತ್ತನೆಯಿವೆ. ನಿಂಬದೇವಯ್ಯಗಳು ತ್ರೈಪುರುಷ ದೇವಾಲಯಕ್ಕೆ ೫೦ ಕಮ್ಮ ಭೂಮಿಯನ್ನು ದತ್ತಿಯಾಗಿ ಕೊಟ್ಟ ಉಲ್ಲೇಖವಿದೆ (೭ & ೮ ನೆಯ ಸಾಲು). **ಸ್ವಸ್ತಿ ಸಕವರುಷ ೫ನೆಯ ಪ್ರಭವ ಸಂವತ್ಸರದೊಳಂ ಚಾಳುಕ್ಯ ಕುಳತಿಳಕಂ ಶ್ರೀ ವಿಕ್ರಮಾದಿತ್ಯ ದೇವರ ರಾಜ್ಯಗೈವುತ್ತ............. ಸ್ವಾಧ್ಯಾಯ ಸಂಪನ್ನ ಶ್ರೀ ಮತ್ತಿಳಕೊಡೆಯ ನಿಂಬದೇವಯ್ಯಗಳು ತ್ರೈಯಿಪುರೆಸ್ವರ ದೇಗುಲಕ್ಕಂ ಬಿಟ್ಟ ಕಮ್ಮರಯ್ವತ್ತು ಅದರೋಳಗೆ ಪ......... ಉಳಿದ ಅಕ್ಷರಗಳು ತ್ರುಟಿತವಾಗಿವೆ.**

ಸ್ಥಳ: ತಿಳಿಗೋಳ | **ಆಳಿದ ದೊರೆ:** ಮೂರನೆಯ ಜಗದೇಕಮಲ್ಲ ದೇವ
ಕಾಲ: ಕ್ರಿ.ಶ.೧೦೩೯ | **ಪ್ರಕಟಿತ:** ಗು.ಜಿ.ಇ
ಪ್ರಸಂ.: ಡಾ.ಆರ್. ಗೋಪಾಲ್, ಹನುಮಾಕ್ಷಿ ಗೋಗಿ

ತಿಳಿಗೋಳದ ಶಾಸನಗಳು-ಮಾರುತಿ ದೇವಾಲಯದ ಕಂಬದ ೧೫" *೧೫" ಭಾಗದಲ್ಲಿ ಶಾಸನಗಳಿವೆ. ಅವುಗಳ ಮಧ್ಯಭಾಗದಲ್ಲಿ, **ಸೂರ್ಯ ಲಿಂಗ, ಚಂದ್ರ, ಖಡ್ಗ, ಆಕಳು-ಕರುಗಳ**

ಉಬ್ಬು ಶಿಲ್ಪಗಳಿವೆ. ಕಂಬದ ಮೇಲ್ಭಾಗದ ನಾಲ್ಕು ಮುಖಗಳಲ್ಲಿ ಒಂದೇ ಶಾಸನವಿದೆ. 'ಕಲ್ಯಾಣ ಚಾಲುಕ್ಯರ ಚಕ್ರವರ್ತಿ ವಿಕ್ರಮಾದಿತ್ಯ ದೇವರನ್ನು ಹೆಸರಿಸುವ ಶಾಸನವಿದೆ. ಕ್ರಿ.ಶ.೧೦೩೯, ವಿಕ್ರಮಾದಿತ್ಯ ದೇವ ಜಯಸಿಂಹನ ಬಿರುದಾಗಿರಬಹುದು. ಊರೋಡೆಯ ನಿಂಬದೇವಯ್ಯಗಳು ತ್ರೈಪುರುಷ ದೇಗುಲಕ್ಕೆ ಬಿಟ್ಟ ಭೂದತ್ತಿ ತಿಳಿಸುತ್ತದೆ.

ಕಂಬದ ಮೇಲ್ಬಾಗದ ನಾಲ್ಕು ಮುಖಗಳಲ್ಲಿ-ಮೊದಲನೆಯ ಭಾಗದಲ್ಲಿ-

ಸ್ವಸ್ತಿ ಶಕವರ್ಷ ೯೫೯ನೆಯ ಪ್ರಮಾಧಿ ಸಂವತ್ಸರದೊಳೆ ಚಾಲುಕ್ಯ ಕುಲ ತಿಲಕ ಶ್ರೀ ವಿಕ್ರಮಾದಿತ್ಯ ದೇವರ ರಾಜ್ಯವನ್ನು ಆಳುತ್ತಿದ್ದರು. ದೇವದ್ವಿಜ ಎಂದು ಉಲ್ಲೇಖವಿದೆ.

ಎರಡನೆಯ ಭಾಗದಲ್ಲಿ-

ಗುರು ಭಕ್ತ ಸ್ವಾಧಾಯ ಸಂಪನ್ನ ಶ್ರೀಮತ್ ಉರೊಡೆಯ ನಿಂಬದೇವಯ್ಯರು ತ್ರೈಪುರುಷರ ದೇಗುಲಕ್ಕೆ ೫೦ ಕಮ್ಮ ಬಿಟ್ಟ ಅದರೊಳಗೆ ಪದ ಎಂದಿದೆ.

ಮೂರನೆಯ ಭಾಗದಲ್ಲಿ-

ನೂರುಪುಣು ಸಮಗೆ ಮತ್ತ ಪನ್ನೆರಡರಳವರ್ಗ್ಗೆ ಮತ್ತರು ಹನ್ನೆರಡು ಊರಪಡುವಣ ಊರೊಡೆಯ ತೋಂಟದೇವರ್ಗ್ಗೆ ಸರಿಗಂಗೆ ಮತ್ತರು ನಲ್ವತ್ತು ಭೂಮಿ ಮತ್ತ ಎಂಬ ಉಲ್ಲೇಖವಿದೆ.

ನಾಲ್ಕನೆಯ ಭಾಗದಲ್ಲಿ-

*****ನ್ವಯ ಮಹಾ ಶ್ರೀ ಪರಾಳೆಗರದಾಚಾರ್ಯ್ಯ ರಸಯಸ್ಥಾನಪುರುಷ ಸನ್ನತಿ ದಕ್ಷಿಣದಿಸಾಭಾಗ ನಿವೇಶನದೊಳೆ। ಮಂಗಳ೨೧. ಕಂಬದ ಕೆಳ ಭಾಗದ ಮೂರು ಮುಖಗಳಲ್ಲಿ ಮೂರು ಪ್ರತ್ಯೇಕ ಶಾಸನಗಳಿವೆ. ಅವುಗಳು ಹೀಗಿವೆ.

ಮುಖ ಒಂದರ ಶಾಸನದಲ್ಲಿ-

ಕಲ್ಯಾಣ ಚಾಲುಕ್ಯ ಅರಸು (ಮೂರನೆಯ ಜಗದೇಕಮಲ್ಲ) ಜಯಸಿಂಗ ದೇವರು ಆಳುತ್ತಿದ್ದರು. ಭೂದಾನದ ಬಗ್ಗೆ ತಿಳಿಸುತ್ತದೆ.

ಸ್ವಸ್ತಿ ಸಕವರ್ಷ ೯೪೩ನೆಯ ರೌದ್ರಸಂವತ್ಸರದೊಳೆ ಚಾಲುಕ್ಯ ಕುಲತಿಲಕ ಜಯಸಿಂಗದೇವರ ರಾಜ್ಯದೊಳೆ ನಮಗಾಮುಣ್ಡ(ನಾಡಗಾವುಂಡ?) ಬಿಟ್ಟ ಭೂಮಿ ಮತ್ತರು ಮೂವತ್ತಾರು ಊರೊಡೆಯ ನಾಗವರ್ಮಯ್ಯ ಬಿಟ್ಟ ಭೂಮಿ ಮತ್ತರು ಹನ್ನೆರಡು ಎಂದು ಉಲ್ಲೇಖಿಸಿದೆ.

ಮುಖ ಎರಡರಲ್ಲಿಯ ಶಾಸನ-

ಕಲ್ಯಾಣ ಚಾಲುಕ್ಯ ಜಯ ಸಿಂಗದೇವರು ಕ್ರಿ.ಶ.೧೦೨೧. ಭೂದಾನ ನೀಡಿದ ಬಗ್ಗೆ ತಿಳಿಸುತ್ತದೆ.

ಸ್ವಸ್ತಿ ಶಕವರ್ಷ ೯೪೩ನೆಯ ರೌದ್ರಸಂವತ್ಸರದಲ್ಲಿ ಶ್ರೀ ಜಯಸಿಂಘದೇವರ ರಾಜ್ಯ ಆಳುತ್ತಿದ್ದರು. ದೇವ ದ್ವಿಜಗುರುಭಕ್ತ ಶ್ರಿಮತ್ತ ನಾಮಗಾವುಂಡ ತ್ರೈಪುರುಷರ ದೇಗುಲದ ಪ್ರಸಾದಕ್ಕೆ ಊರ ಮೂಡಣ ಭಾಗಾನ್ತರದಲು ಕಾಸಿಗರ ದಂಡಜಗೆಬಿಟ್ಟ ಕೆಯಿ ಮತ್ತರು ಮೂವತ್ತು ಎಂದು ಉಲ್ಲೇಖಿತವಾಗಿದೆ.

ಮುಖ ಮೂರರಲ್ಲಿಯ ಶಾಸನ– ಭೂದತ್ತಿ, ಚೋಳ ಅರಸು ರಾಜಾದಿತ್ಯ? ಆಳಿದ ಬಗ್ಗೆ ಮಾಹಿತಿಯಿದೆ.

ಸ್ವಸ್ತಿ ಶ್ರೀ ಮತ್ರಾಜಾದಿತ್ಯರು ***** ಸ್ಥಾನ ದೇಗುಲಕ್ಕೆ ಅಂರುವಂಗ ಭೋಗದೇಗುಲದ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಬಿಟ್ಟ ಕೆಯಿ ಮತ್ತರು ಹನ್ನೆರಡು ಸೊಡರಿಂಗಂ ನೈವಿದ್ಯಕ್ಕೆ ಬಿಟ್ಟ ಕೆಯಿ ಮತ್ತರು ಕರಿಯಲು ಅರವತು****೨೨ ಎಂಬ ಉಲ್ಲೇಖವಿದೆ.

ಎರಡು ಒಂದೇ ಶಾಸನವಾದರೂ ಪಾಠದ ವಿವರಣೆ, ಕಾಲ ಮತ್ತು ಆಳಿದ ದೊರೆಗಳ ಉಲ್ಲೇಖ ಬೇರೆ ಬೇರೆ ನೀಡಿರುವುದು ಇಲ್ಲಿ ಗಮನಾರ್ಹವಾಗಿದೆ.

ಸ್ಥಳ: ದೇವಂತಿ
ಕಾಲ: ಸು.೧೨ನೆಯ ಶತಮಾನ
ಭಾಷೆ: ಕನ್ನಡ

ಆಳಿದ ದೊರೆ: ?
ಪ್ರಕಟಿತ: ಸಾಧನೆ.ಸಂ–೨,ಸಂಚಿಕೆ–೧–ಕ್ರಿ.ಶ.೧೯೭೩
ಪ್ರಸಂ.: ಡಾ.ಜಿ.ಎಸ್.ಶಿವರುದ್ರಪ್ಪ
ಪು.: ೫೫

ತೃಟಿತ ಶಾಸನ ದೇವಂತಿ ಗ್ರಾಮದಲ್ಲಿ ಮಡಿವಾಳಯ್ಯನ ಮಠದ ಎಡಗಡೆ ನಿಲ್ಲಿಸಿರುವ ಕಲ್ಲು–ಕ್ರಿ.ಶ.೧೧–೧೨ನೆಯ ಶತಮಾನ.

ವಿವರಣೆ:– ಮಾಡಿಫಳದ ಶಂಕರದೇವರಿಗೆ ಗುಡಿಯ ದೇವಯ ಮೇಲಾಳಿಕೆ(ಮ) ಎಂದು ಉಲ್ಲೇಖವಾಗಿದೆ.

ಸ್ಥಳ: ದೇವಂತಿ
ಕಾಲ: ಕ್ರಿ.ಶ.೧೧–೧೨ನೆಯ ಶತಮಾನ
ಭಾಷೆ: ಕನ್ನಡ

ಆಳಿದ ದೊರೆ: ?
ಪ್ರಕಟಿತ: ಕ.ಜಿ.ಶಾ. ಹನುಮಾಕ್ಷಿ ಗೋಗಿ ೧೯೯೬
ಪು.: ೫೦

ಮಾಡಿಫಳದ ಶಂಕರದೇವರಿಗೆ ಗುಡಿಯ ದೇವಯ ಮೇಲಾಳಿಕೆ(ಮ) (ಪು.ಸಂ.೫೦, ೧–೩ನೆಯ ಸಾಲು).

ಸ್ಥಳ: ನಿಂಬರ್ಗಿ
ಕಾಲ: ಕ್ರಿ.ಶ.೧೧೯೮
ಭಾಷೆ: ಕನ್ನಡ

ಆಳಿದ ದೊರೆ: ಪೆರ್ಮಾಡಿದೇವ.
ಪ್ರಕಟಿತ: ಸಾಧನೆ.ಸಂ–೨, ಸಂಚಿಕೆ–೧–ಕ್ರಿ.ಶ.೧೯೭೩
ಪ್ರಸಂ.: ಡಾ. ಜಿ.ಎಸ್. ಶಿವರುದ್ರಪ್ಪ.
ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
ಪು.: ೫೨–೫೫
ಪು.: ೫೫

ಬೃಹಸ್ಪತಿವಾರದಲ್ಲಿ ತುಳಾಪುರುಷವಿರ್ದ್ದರಸನ ಬಿನ್ನಪದಿಂದ ಶ್ರೀ ಮಹಾದವಮಲ್ಲದೇವರು ಮಾಡಿಫಳದ ಶ್ರಿಸ್ವಯಂಭು ಕೋಟಿ ಶಂಕರ ದೇವರ ಅಂಗಭೋಗಕ್ಕೆ, ರಂಗಭೋಗಕ್ಕೆ,

ಜೀರ್ಣೋದ್ಧಾರಕ್ಕೆ ಅಲಂದೆ ಸಾಸಿರದ ಗೊಂಕನಾಡೊಳಗೆ ಧಾರಾಪೂರ್ವಕವಾಗಿ ಮಾಡಿಕೊಟ್ಟ ಉಲ್ಲೇಖವಿದೆ (ಮ.ಸಂ. ೫೪. ೦೭–೧೦ನೆಯ ಸಾಲು).

ಮಹಾಮಂಡಳೇಶ್ವ 'ಪಾದ ಪದ್ಮೋಪಜಿವಿ' ಬಿಬ್ಬರಸರುಂ ತಮ್ಮ ಮನ್ನೆಯಮುಮಂ ಶ್ರೀ ಮದಾಹವಮಲ್ಲ ದೇವರ್ಗ್ಗೆ 'ದ್ರೋಹರಾಗಲವಂದಿರಂ' ***ರಮುಮಂ 'ಆಯದಾಯ' ಪರಿಹಾರವಾಗಿ ಧಾರಾಪೂರ್ವಕವಾಗಿ ಮಾಡಿಕೊಟ್ಟರು (ಮ.ಸಂ.೫೪. ೧೦–೧೨ನೆಯ ಸಾಲು).

ಇಂತು ತ್ರಿಭೋಗಾಭ್ಯಂತರವಾಗಿ ಸೀಮಾ ಪದ್ದತಿ ಕವಿಲಗೆಯ ಸೀಮೆಯ ಸರೆಯ ಬಮ್ಮದೇವನಿಂದಿಳಿದ ಹಳ್ಳದಿಂದ ಜಕ್ಕಿಯರ ಮಡುವಿಂದ ಆಲದ ಮರಡಿವಾ ಮತ್ತಂ ಆ ಊರ ಬೆವಿನ ಹಾಡದ ಹಳ್ಳದಿಂದ ಮರಂಜೆ ಸಂಗಮದಿಂದ ಪಡುವಲು ಮತ್ತವಾ ಮರಂಜೆ *** ವಳ್ಳಿಯ***ಪ್ಪ(ಗದೆ)ಗೆ ಹೋದ ದಾರಿಯಿಂ ಬಲದ ಕಲ್ಲೊಟ್ಟಲ ಕಾರೆಯ ಗುತ್ತಿಯಂ ಕಲುವೆಟ್ಟದಿಂದೆಂದ ಕೆರೆಯಂ ಕಯರೆ ಕಮರಿ ****ಕ*ಯ ಬಡಗಲು ಮತ್ತಂ ಮುಗ್ಗುಡ್ಡೆಯೊಳಗೆರೆಯಿಂ ಕಲುಪುಂಜಳಿಯಿಂ ಅಂಕುಲೆಯ ಬಾಗಿಂ ಜಳಕಿ* ಬಮ್ಮದೇವನಿಂ ಮೂಡಲು॥ ಕದನದೊಳಂತರಿರಾಯರನದಟಿಂದಂ ಗೆಲ್ದು ಸಕಳ ಭೂಮಂಡಲವನ್ನು ಮದುವಿಲ್ಲ(ದಾ)*ದೆ ತಾ ಪೆರ್ಮ್ಮಾಡಿ ದೇವನೆಸೆದ ಧರೆಯೊಳ್॥ (ಮ.ಸಂ.೫೪–೫೫. ೧೨–೧೮ನೆಯ ಸಾಲು).

ಪೆರ್ಮ್ಮಾಡಿದೇವ ಪಾದಪದ್ಮೋಪಜೀವಿ ನರಲೋಕ ಜಗದಳ, ಬಿರುದರ ಗಂಡರೆದೆಯ ಗೂಂಟಂ ತೊಡವ***ರು* ರಿಕಳ್ಳಕುಜಾತಂ, ವರ ವಂದಿಗೆ ದೇವನಾಗನಾಹವಮಲ್ಲ ಎಂದು ಉಲ್ಲೇಖಿತವಾಗಿದೆ. (ಮ.ಸಂ.೫೫. ೧೮–೧೯ನೆಯ ಸಾಲು).

ಬೃಹಸ್ಪತಿವಾರ ಸೂರ್ಯಗ್ರಹಣವಿದ್ದಾಗ ನರ್ಮದಾನದಿ ತೀರದಲ್ಲಿ ತುಳಾಪುರುಷ ವಿರ್ದ್ದಸ(ಮ) *** ಮಂಡಳೀಕ ದೇವ ನಾಗರಸನ ಮಗ ನಾಹವಮಲ್ಲನ ಬಿನ್ನಪದಿಂದ ಮಾಡಿಫಳದ ಕೋಟಿ ಶಂಕರ ದೇವರ ಮಠದಾ ಪರಿಚಾರಕರ, ಅಶನಾಭಾದನಕ್ಕೆ ಆ ಊರ ತೆಂಕಣ ಹೊಲದಲು ಬೊಂ***ದ ಕಾಲ(ಡಿಯ) ಮತ್ತರು ಇನ್ನೂರು ಧಾರಾಪೂರ್ವಕ ಮಾಡಿಕೊಟ್ಟರು. ಒಂದು ಆ ಊರ ಕೋಟೆಯಿಂದ ಪ*** ಮತ್ತರೊಂದು. ಆ ಮರಕ್ಕಾಯ ದಾಯ ದಂಡ ದೊಶವಿಲ್ಲವೆಂದು ದಾನ ನೀಡಿದ ಉಲ್ಲೇಖವಿದೆ. (ಮ.ಸಂ.೫೫.೨೦–೨೪ನೆಯ ಸಾಲು).

ಮಾರೆಯನ ತೋಟದಿಂದ, ತೆಂಕಲು ಮಾನ್ಯ ಬೇಲದಿಂದ ಬಡಗಲು, ಅಡ್ಡದಾರಿಯಿಂದ ಪಡುವಲು, ಹೂದೊಟಂ, ಎರಡು, ಕಟ್ಟೆಯ ಹಳ್ಳದಿಂದ ಮೂಡಲು*** ಮತ್ತರು ಎರಡು ಧಾರಾಪೂರ್ವಕವಾಗಿ ಮಾಡಿಕೊಟ್ಟರು. ಈ ಸಮಯದಲ್ಲಿ "ಮಹಾಮಂಡಳೇಶ್ವರ". 'ಮಂನೆಯಸಿಂಗ ಬಿಬ್ಬನಂಕಕಾರ 'ಗೊಂಕರಸರು' ಧಾರಾಪೂರ್ವಕವಾಗಿ ಮಾಡಿಕೊಟ್ಟರು. ಆ ಹಿರಿಯ ಸ್ಥಳದ "ಸೀಮಾ ಪದ್ದತಿ ಕುಡಿಕಿಗೆಯ ಸೀಮೆಯಿಂದ ಪಡವುಲು ಭಾಸ್ಕರನ ಬೆಟ್ಟದ ತೆಂಕಣಣೆಯಿಂದ ಪೆರಡಾಲದ ಮರಡಿಕಲು ಮುಂಜಳಿಯಿಂದ ತೆಂಕಲು ಆ ಸ್ಥಳದ ಸೀಮಾ ಪದ್ದತಿಯೆಂಬುವರ್, ಎಂದು ಉಲ್ಲೇಖಿತವಾಗಿದೆ(ಮ.ಸಂ.೫೫. ೨೫–೩೦ನೆಯ ಸಾಲು).

ಸ್ಥಳ: ನಿಂಬರ್ಗಿ | ಆಳಿದ ದೊರೆ: ಆಹವಮಲ್ಲ ದೇವ.
ಕಾಲ: ಕ್ರಿ.ಶ.೧೦೫೫ | ಪ್ರಕಟಿತ: ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
ಭಾಷೆ: ಕನ್ನಡ | (ಪು.: ೫೭-೫೯

******ಪರದವಾರಿ ರೂಪೋದರದೊಳಗೆದ ಸಾಳಿವನವದ್ಯ ಕಳಾವಾರಿ***************ವ ಪ್ರಭುಭವಂ ಸ್ವಾಯಂಭು ಸೈಜ್ಞಾನ್ವಿತಂ ಮನು ತತ್‌ಸೂನು ಜಗಜ್ಜನಾಸೀತ *********** ನಾರಗೆ **************** ಪರಿತಾತ್ಮಜ ವಿನೂತಂ ಪಂಚಶಿಖಂನ್ಮಿತೋಜ್ವಳಮುಖಂ ಹಾರೀತೀ ಲೋಕೋತ್ತಮಂ॥ವ॥ ಅಂತಾಃ ಹಾರೀತಿಗೆ ಚಾಳುಕ್ಯರು ಹುಟ್ಟಿ *********************ರದಳಚಾರದ ಸಂಕುಲವನ್ನು ಪದಾತಿ ದುರ್ದ್ದರಬಲಮಂ ವಿಗುರ್ವ್ವಿಪ ಶರಾಸನಮ ಶರಜಾಲಮಂ *****ಮಾ*** ಕರವ ************* ತ ಪತ್ರಮಂ ಸ್ವರಂಪುವಿತ್ತನೆಂದಡೆ ಚಳುಕ್ಯರ ಪೆರ್ಮ್ಮೆಯ ನಾರು ವರ್ಣ್ಣಿಪರ್ ಅನಲು, ವೆಸೆಪಾತಕೆಯಂ ಸುರುದಿರ ಪ್ರೋ *************** ರಿಕಿ ಕೇಕಿ ಪಿಂಛರ ಬೀತೋದ್ಯತ್ಮುಂತಮಂ ಷಣ್ಮುಖದನುಜಾರತಿ ವರಹಾಲಾಂಛನವನಾ ಚಕ್ರೇಶಂಗೆ ಕೂರ್ತ್ತಿತ್ತು ಪಾರ *********** ಕುಳ ಪುಜ್ಯಂ ವೀರ ಸತ್ಯಾಶ್ರಯ। ಅಂತಾಃ ಚಾಲುಕ್ಯರು ರಾಷ್ಟ್ರಕೂಟರನ್ನು ಸೋಲಿಸಿ? ಭೂವಲಯವನ್ನು ಕೈಕೊಂಡಿ *********ಲ ನೃಪಂ ಮದವದ್ದ್ವಿಪು ಸಮಿತಿ ಬೆದರಿ ಬೆಂಗೊಡ್ವೊಡಲ್ಕದನ ಪ್ರಭುಲನುದ್ಧತ ಮದಗಜ ಮೃಗರಾಜ *************** ಜನತಾ ಸಂಸ್ತುತನಾದ ತೈಲನ ಮಗ ಸತ್ಯಾಶ್ರಯತಂ ನೃಪಾಳನ ಪುತ ವಿಭುವಿಕ್ರಮಾತನುಜಂ *********** ವ್ವಿಂಶನಾತನ ತಮ್ಮಂ ಜಯಸಿಂಹನಾತನ ಮಗ ತ್ರೈಲೊಕ್ಯಮಲ್ಲ ಕ್ಷಿತೀಶ ನೆನಿಪ್ಪಾಹವಮಲ್ಲ ಭೂಪನೆನಿಪ ********** ಶ್ವರಂ॥ (ಪು.ಸಂ.೫೭. ೧-೧೧ನೆಯ ಸಾಲು).

ಚೋಳಕುಲಕುಧರ ಕುಳೀಶಂ, ಲಾಳಮಹಿಪಾಲದಾವದರ್ಪ್ಪದಾಳನಂ, ನೇಪಾಳವಿಳಯಾಂತಕ, ಪಾಂಚಾಳಾಂಬು ************* ನಾಹಮಲ್ಲಂನ ಹಿರಿಯರಸಿ ಧರೆಯ ದಿಗ್ಭಿತಿಯ ನಂಬರಮಂತೆಸೆವ ಬೆತ್ತಿನಿಂಬೇವನಜ ******** ನೆನೆ ಭಾಸುರ ಕೀರ್ತ್ತಿಯನಾನ್ತಳುಕ್ಕೆಯ ಮತಿಸತಿರತ್ನ. ಆ ಚಕ್ರವರ್ತಿ ಆಳುವ ಕುಂತಲ ದೇಶದ ಅಳಂದೆ ********** ನ ಚಂಪಕವನದಿಂದೆಳಲಮಾವಿಂ, ಗಂಧಶಾಲಿಯಿಂದಿಳಿತ ಕುಜಾವಳಿಯಿಂ ಪೂರ್ಣತಡಾಗದಿಂ ನೆಳೆ ಗೆಲ್ಲಂ *********** ದೇಶಂ (ಪು.ಸಂ.೫೭-೫೮. ೧೨-೧೫ನೆಯ ಸಾಲು).

ಮಂಡಲಪತಿ ಅಹವಮಲ್ಲದೇವ ಪಾದ ಪದ್ಮೋಪಜೀವಿ ಅವನೀಸಂಸ್ತುತನಾಗಿ ************ ******* ಸಂಗಂ ನೃಪಪ್ರವರಂ 'ಮನ್ನೆಯ ಸಿಂಗನೀಶ್ವರ' ಪದಾಂಬೋಜ ಭೃಂಗಂ ಸುಧಾರ್ಣ್ಣವ ಸಂಕಾಶಯ ಶೋವಿಭಾಸಿತ ********* ಅಲಂದೆವೆಡಂಗಂ ವಿಜಯಾಂಗ ಪ್ರಿಯ ಭುಜಂಗಂ ಆದ ಬಿಬ್ಬ ಭೂಪಾಳಕಂ. ಆ ಮನ್ನೆಯ ಮು********** ಪಾದನಿದನಿಳಾಪರಾಗದಿಂ ಸತ್ಕವಿ ಕರಂಬದಿಂ 'ಗಣಿಕೆ'ಯರಿವರದಿಂ ವಿದ್ಯಾನಿಕರಿಂ ಸಚ್ಚಾರಿತ ಗುಣಾನ್ವಿತರಿನೊಪ್ಪು ************ ಯೊಳ್ಮಾಡಿಫಳಂ ಕಣ್ಣೊಳಿಕ್ಕುಂ ಗಂಧ ಶಾಲಿಯನ್ನ **** ಕುಜಾವಳಿಯನ ***************

ಳ ಯದಿಂ ಶ್ರೀಯುಂ ನಿರ್ಮಳ ಕೀರ್ತಿಶ್ರೀಯಂ**** ದ ಭುಜದಂಡ ಮಂಡಿತ ವೀರಶ್ರೀಯಂ ಸಲೆ ******* ಗಿರೆ ******* ಪಳದ ಶೇಷ **** ಪ್ರಭುಗಳ, ಆ ನಾಡ ಪಾದ ಮೇಲಾಳ್ಕೆ ಜಗದೇಕ ವೀರನಭಿನವಭೃಗು ವಿಕ್ರಮ ***** ಚಕ್ರವರ್ತಿ ಬಿರುದು ***** ಕ್ರಮಂ ಸಲೆ ನೆಗಳ್ದಂ ಮಂಡಳೀಕ ದೇವನಾಗಂ ಧರೆಯೊಳ್ (ಪು.ಸಂ.೫೭-೫೮,೧೫-೨೨ನೆಯ ಸಾಲು)

ತ್ರೈಲೋಕ್ಯಮಲ್ಲ ಬೆಸಸೆ ಕದನದೋಳ್ಕಿಂದ ವಿದ್ವಿಷ ***** ಸೋ *****ದಂದು ** ವಾರ್ಜಿತಾತ ದಿಪ್ರಕಾ**********ಗಳ ಲಕ್ಷಣ ಲಕ್ಷ್ಮಿ ಮತ್ತುಂಗ ಸ್ತನಯುಗೆಯೆನಿಪ ಚಂದಲದೇವಿಯರುಂ *********** ತುಳುದೊಳ್. ಇಂತು ನೆಗಳ್ದೆವಡೆದ 'ಮಂಡಳಿಕದೇವ ನಾಗರಸರು' ಮಾಡಿಫಳದ ಶ್ರೀ ******** ಮಾಡಿಸಿದನದನ್ತೆನೆ। ಉದಯಂ ಗೆಯದಡಾ ಚಂದ್ರಮಂಡಳವೊದ ***** ಪೊಲ್ತು ****** ತನ್ನುರದಂದಿ ************* ಮಯೂರ ಹಂಸ ಮಕುರ ಪ್ರೋತ್ತುಂಗ ಕೀರ್ತಿಗೆ ಕ ***ಪ್ಪಿತ್ತು ಸುವರ್ಣ ಕರ್ಣಕಮಳ ****************ಸಮ ಮಂಕಳೆ****ದಳ ದರ್ಮರತ್ನದ್ಯುತಿಯ(ತ್ರುಟಿತ) (ಪು.ಸಂ.೫೮-೫೯. ೨೩-೨೯ನೆಯ ಸಾಲು).

ಸ್ಥಳ: ನಿಂಬರ್ಗಿ	**ಆಳಿದ ದೊರೆ:** ಆಹವಮಲ್ಲ ದೇವ
ಕಾಲ: ಕ್ರಿ.ಶ.೧೦೪೬	**ಪ್ರಕಟಿತ:** ಸಾಧನೆ.ಸಂ-೨,ಸಂಚಿಕೆ-೧-ಕ್ರಿ.ಶ.೧೯೭೩
	ಪ್ರಸಂ.: ಡಾ. ಜಿ.ಎಸ್. ಶಿವರುದ್ರಪ್ಪ
	ಪು.: ೫೦-೫೨
	ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
ಭಾಷೆ: ಕನ್ನಡ	**ಪು.:** ೫೧-೫೩

ವಿಶುದ್ಧ ಜ್ಞಾನದೇಹಾಯ ತ್ರಿವೇದೀ ದಿವ್ಯಚಕ್ಷುಷೇ ಶ್ರೇಯಃ ಪ್ರಾಪ್ತಿ ನಿಮಿತ್ತಾಯ ನಮಃ। ನುದರದ ವಾರೀರು ಹೋದರರದೊಳೆಗೆದನಾದ್ಯ(ನ) ನವದ್ಯ ಕಳಾಧರ ಕೃತ ಸೃಷ್ಟಿ ವ್ಯಾಪಾರ ಧೀರ ಹಿರಣ್ಯಗವ ಪ್ರಭು ಭವಂ ಸ್ವಾಯಂಭು ಸುಜನಿತನು ತತ್ಸೂನು ಜಗಜ್ಜನಾನತಪದಂ ಮಾನವ್ಯನಾತಂಗೆ ನಂದನ ಹರೀತಾತ್ಮಜ, ವಿನುತ, ವಿ***ಚಶಿಖಿಂ* ರೋಜ್ಜಳ ಮುನಿ(ಹಾ) ರೀತಿಲೋ(ಕೋತ್ರ)ಮಂ ಎಂದು ಉಲ್ಲೇಖವಾಗಿದೆ (ಪು.ಸಂ.೫೧. ೧-೪ನೆಯ ಸಾಲು).

ಅಂಥಾ ಹಾರತಿಗೆ ಚಾಲುಕ್ಯರು ಹುಟ್ಟಿ ಗದಳಮಂ (ಗಜದಳ?), ರಥಸಂಕುಳಮಂ, ಪದಾತಿದುರ್ದ್ಧರಬಲ, ಶರ ಜಳಮಂ, ಭಯಂಕರ ವಿರ ಖಡ್ಗದ ತಪತ್ರಮಂ, ಸ್ಮರರಿಪು ವಿತ್ತನೆಂದಡೆ ಚಾಲುಕ್ಯರ ಪೆರ್ಮ್ಮೆಯನಾರೋ ವರ್ಣಿಪರ್। ಅನಲಂ ಕೊಟ್ಟಾ ಪತಾಕೆಯ ಸುರುಚಿರಪ್ರೋತ್ತಶಿಕಿ ಕೇತಿಪಿಂಛರಚಿಕಾದ್ಯ ತ್ಕುಂತಯಂ, ಷಣ್ಮುಖ, ದನುಜಾರಾತಿ ವರಹಾಲಾಂಛನ ಮನುಚಕ್ರೇಶಂಗೆ ಕೂರ್ತಿಯೆ ಪಾ(ದ) ಕುಳಪೂಜ್ಯಂ ವೀರ ಸತ್ಯಾಶ್ರಯಂ (ಪು.ಸಂ.೫೧, ೫-೮ನೆಯ ಸಾಲು)

ಅಂಥಾ ಚಾಳುಕ್ಯರಿಂದ ಬಳಿಕ್ಕೆ ರಾಷ್ಟ್ರಕೂಟರ್ಪ್ಪ ಬಳಿಸಿ ಭೂವಳಯಿಮಂ ಕೈಕೊಂಡೆರೆ ತೈಲನೃಪಂ ಮದವದ್ರಿಪುಸಮಿತಿ ಬೆದರಿ, 'ಬೆಂಗೋಟ್ಟೋಡಲ್ಕದನ' ಪ್ರಚಂಡನುದ್ಧತ ಮದಗಜ ಮೃಗರಜನು*** ಜನತಾ ಸಂಸ್ತುತನಾದ ತೈಲನ ಮಗ ಸತ್ಯಾಶ್ರಯ(ಪು.ಸಂ.೫೧. ೮-೧೦ನೆಯ ಸಾಲು).

ಜಯಸಿಂಹನಾತನ ಮಗ ತ್ರೈಲೋಕ್ಯಮಲ್ಲ ಕ್ಷಿತೀಶನೆ ನಿಪ್ಪಾಹವಮಲ್ಲ ಭೂಪವನೆನಿಪ *** ಚೋಳ ಕುಳಕುಠಾರ, ಕುಳೀಶಂ ಲಾಳ ಮಹೀಪಾಲ, ದಾವದವದಹನಂ, ನೇಪಾಳ ವಿಲಯಾನ್ತಕ ಪಾಂಚಾಳಾಂಬ*** ನಾಹವಮಲ್ಲ. ಚಕ್ರವರ್ತ್ತಿಯ ಪಿರಿಯರಸಿ ಧರೆಯನ್ನು ದಿಗ್ಭಿತ್ತಿಯಂಬರಮಂ ಪೊಸಮುತ್ತಿನಿಂದೆ ವನಜ ಭವಂಭಾಸುರ ಕೀರ್ತಿಯನಾನ್ತಳುದಯಮತಿ ಸತಿರತ್ನಂ। ಆ ಚಕ್ರವರ್ತಿಯಾಳ್ವ ಕುಂತಳ ದೇಶದೋಳಲಂದೆ (ಪು.ಸಂ.೫೧. ೧೧-೧೪ನೆಯ ಸಾಲು).

ಕವನದಿಂದೆಳೆ ಮಾವಿಂ, ಗಂಧಶಾಲಿ, ಪೂತಕುಜಾವಳಿಯಿಂ, ಪೂರ್ಣ್ನ ತಡಾಗ******** ದೇಶಂ। ಆ ಮಂಡಳಪತಿ ಆಹವಮಲ್ಲದೇವ ಪಾದ ಪದ್ಮೋಪಜೀವಿ ಅವನಿ ಸಂಸ್ತುತ ********ಗಂ ನೃಪ ಪ್ರವರಂ ಮನ್ನೆಯ ಸಿಂಗನೀಶ್ವರ ಪಾದಾಂಭೋಜಾತ ಭೃಂಗಂ ಸುಧಾರ್ಣವ ಸಂಕಾಶಯ ಶೋವಿಭಾಸಿ*** ಅಲಂದೆ ವೆಡಂಗಂ, ವಿಜಯಾಂಗನಾಪ್ರಿಯ, ಭುಜಂಗಂ, ಬಿಬ್ಬ ಭೂಪಾಳಕಂಃ ಆ ಮನ್ನೆಯ** ತಪೋಧನರಿ ನಿಳಾಮರರಿಂ ಸತ್ಕವಿ ಕದಂಬದಿಂ, ಗಣಿಕೆಯರಿಂ, ವರ ವಿದ್ಯಾವಿದರಿಂ, ಸಚ್ಚರಿತ ಗುಣಾನ್ವಿ ತರಿನೊಪ್ಪು ಯೊಳ್ಮಾಡಿಫಳಂ, ಕಣ್ಣೋಳಿಸಿಕ್ಕುಂ, ಗಂಧಶಾಳಿಯಿಂ, ಪೂತಕುಜಾವಳಿಯ ನರಗಿಳಿಯನುದ್ಯತ್ತಿ ವಾಳಯ. ದಿಂ॥ ಶ್ರೀಯಂ ನಿರ್ಮಲ ಕಿರ್ತಿಶ್ರೀಯಂ, ಚಂಡ ಭುಜದಂಡ ಮಂಡಿತ ವೀರ ಶ್ರೀಯುಂ ಸಲೆ*** ಮಾಡಿಫಳದ ಶೇಷ ಪ್ರಭುಗಳ್, ಆ ನಾಡ ಮೇಲಾಳ್ಕೆ ಜಗದೇಕ ವೀರನಭಿನವ ಭೃಗುವಿಕ್ರಮ ಚಕ್ರವರ್ತಿ ಬಿರುದು ಕ್ರಮಂ ಸಲೆ ನೆಗಳ್ದ ಮಂಡಳೀಕ ದೇವನಾಗಂ ಧರೆಯೋಳ್(ಪು.ಸಂ.೫೨. ೧೫-೨೩ನೆಯ ಸಾಲು). ದೆಸೆಯಾಂತ, ತಾಪಿನಂ, ಧಾತ್ರಿಯೊಳಮಯಂ, ನರ್ತಿಸಿದಂ, ತ್ರೈಲೋಕ್ಯಮಲ್ಲ ಬೆಸಸೆ ಕದನದೊಳ್ನಿಂದ ವಿದ್ವಿಷ್ಪರ ಸೊಲಿಸಿದಂ ಧರ್ಮಾರ್ಜ್ಜಿತಾರ್ತ್ಥ*** ನಿರ್ಮಿಸಿದ ಸಾಮಾನ್ಯ *** ಂಚಿತರಣ ***ಭೂ(ಚಾ)ಪಮಂ ದೇವನಾಗ *********** ಯೆನಿಪ ಚಂದಲದೆವಿಯರುಂ*** ಸಮಿ*** ನೆಗಳ್ತೆವಡೆದ ಮಂಡಳೀಕ ದೇವನಾಗರಸರು ಮಾಡಿಫಳದ ಶ್ರೀತ್ವ ಮಾಡಿಸಿದ *********ಯ್ದುದಾ ಚಂದ್ರ ಮಂಡಳಮೆ ದಿವಾಗಾರಮಂ ಪೋಲ್ತು ತನ್ನುದದಿಂದ ಬ್ಜಭವ***ಗಿ ಮುಂಚೂರ ಹಂಸ ಮಕರ ಪ್ರೋತ್ತುಂಗ ಕೀರ್ತ್ಯಾರತ್ನ ದ್ಯುತಿಯುಂ ಬೆಳಗಿ ನಿಲಿಸಿಟ್ಟಳೆಂಬಗಳಿಕೆಯ****(ಪು.ಸಂ.೫೨-೫೩. ೨೪-೩೦ನೆಯ ಸಾಲು).

ನೈಷ್ಠಿಕಾಚಾರ್ಯಾನ್ವಯಂ। ನಯ(ಶಾಳಿ) ಗಳಾದಂ ಮನ್ನೆಯವ**********(ದ)ಮ್ಮಾಡಿಫಳದ ಮಠದಾಚಾರ್ಯರ್। ಅ*ಕ***** ಭಾವಂ. ಕುಸುಮಾ(ಸ್ತ್ರಾ)ವಳಿಯ*****ಆ*ವಿನಿರ****ನ*** ತೃಟಿತ (ಪು.ಸಂ.೫೩. ೩೧-೩೫ನೆಯ ಸಾಲು).

ಸ್ಥಳ: ನಿಂಬರ್ಗಿ **ಆಳಿದ ದೊರೆ:** ?

ಕಾಲ: ಕ್ರಿ.ಶ.೧೨ನೆಯ ಶತಮಾನ **ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ **ಪು.:** ೪

ಶ್ರೀಮತ್ಸರ್ವೇಶ್ವರ ದೇವರು ಕೊಂಡಜೀಯನಿಂ ಪ್ರಭು ಮುಖ್ಯವಾಗಿ ಪೊಂಗೊಟ್ಟು ಕೊಂಡ ವೆಳಸಂಗ ವಿಯ ದಾರಿಯಿಂ ತೆಂಕಲು ಕಾಲಮತ್ತರು ೩೦ರೊಳಗೆ ಹಿಟ್ಟರ್ದ್ದವಂ, ಕಳೆದುಳಿದ ಮೂಡಣ ಮತ್ತರು ೧೫ವಂ ದೇವಿಗೆರೆಯ ಜರಿದೇರಿಯಂ ಕಟ್ಟಲು ಹೊಕ್ಕ ಮಣ್ಣಂ ಕಳೆಯಲು ಕೊಟ್ಟರು. ಪರಮ ಶ್ರೀವರನಾ ಸುರೇಶ್ವರ ಮುನೀಂದ್ರಂ, ಮಂಡಳೀಕ ಗುಣೋತ್ಕರನಪ್ಪಾಹವಮಲ್ಲ, ಮಾಡಿಫಳದಾಚಾರ್ಯಂ ಧ್ರುವೇಶ ಬ್ರತೀಶ್ವರಗ್ಗಿತ್ತರ್ದ್ದರಣೀತಳಂ, ನಿಲುವಿನಂ, ದಾರೇಶ್ವರಂ, ದೇವಣೇಶ್ವರವನಾನಕರೇಶ್ವರಂ, ಪದಪಿನಿಂ ಭೋಗೇ ಶ್ವರ ಸ್ಥಾನವಂ, ವೇಳುಗ್ರಾಮೆಯ ಭೂಷಣೇಶ್ವರದ ಸ್ಥಾನವೀ ಸಮ್ಮದಿ (ಪು.ಸಂ.೬೪. ೧–೧೧ನೆಯ ಸಾಲು).

ಸ್ಥಳ: ನಿಂಬರಿಗೆ **ಆಳಿದ ದೊರೆ:** ಚಾಳುಕ್ಯ ಭೂಲೋಕಮಲ್ಲ, ೩ನೆಯ ಸೋಮೇಶ್ವರ

ಕಾಲ: ೧೧೩೪ **ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ–ವ್ಹಿ.ಶಿವಾನಂದ, ೧೯೯೨

ಪು.: ೧೪೬–೧೫೬

ಭಾಷೆ: ಕನ್ನಡ

ಶಾಸನದಲ್ಲಿ ಬಸಪ್ಪ, ನಿಂತಮೂರ್ತಿ, ಈಶ್ವರ, ಚೂರಿ, ಆಕಳು, ಕರುವಿನ ಚಿಹ್ನೆಗಳಿವೆ. ಭೂಲೋಕ ಮಲ್ಲನ ಮಹಾಪ್ರಧಾನರಾದ ಕೆಲವರಂ ಮಾಡಿಹಾಳದ ಕೋಟಿ ಶಂಕರ ದೇವಸ್ಥಾನಕ್ಕೆ ಬಿಟ್ಟ ದತ್ತಿ ಹಾಗೂ ಇತರರು ಸಹಿತ ನೀಡಿದ ಕೊಡುಗೆಗಳು. ಚಾಳುಕ್ಯಾನ್ವಯ ವಿವರ, ನಿಂಬರಗಿ ಅಗ್ರಹಾರ, ಅಲ್ಲಿನ ವಿಪ್ರ ಸಂತತಿ ಹಾಗೂ ಮಾಡಿಹಾಳದ ಕೋಟಿಶಂಕರ ದೇವಸ್ಥಾನಕ್ಕೆ ನೀಡಲಾದ ದತ್ತಿ ವಿವರಗಳು. (ಕೋಟಿಶಂಕರ ದೇವಾಲಯದ ಉಲ್ಲೇಖ ನಿಂಬರಗಿ ೧ನೆಯ ನಂಬರಿನ ಶಾಸನದಲ್ಲೂ ಇದೆ.)

ವಿವರಣೆ–ಆ ಮಂಡಲಪತಿ ಭೂಲೋಕಮಲ್ಲದೇವ ಪಾದಪದ್ಮೋಪ ಜೀವಿಯೆಂತೆನೆ. ಪ್ರವಿರಾಜತ್ಕೀರ್ತಿಯಲಂದೆವೆಡಂಗಂ ಬಿರುದ ರಿಪುಭಯಂಕರನತ್ಯಂತ ವಿಲಾಸ ಮೂರ್ತಿಯೆನಿಸಿದ ನವನೀಪತಿ ಮಲ್ಲಿದೇವನಧಟರ ದೇವಂ॥ ಅಲ್ಲಿ **ನಿಂಬರಗೆಯೆಂತೆಂದಡೆ– ಕುಂತಳಮುತ್ತ ಮಾಂಗದವೊಲಿರ್ಪುದು ಭಾವಿಸಿನೋಳಪಡೀ ಮಹೀಕಾಂತೆಗಲಂದೆ ದೇಶವದರೊಳ್ವಿರಾಜಿಸುತ್ತಿರ್ಪುದ್ಧೆದೆ ಸತ್ಕಾಂತಿಯ ಹೊಂನ ಹುವ್ವೆನೆಸಿ ಸುಸ್ಥಿರ ವೃತ್ತಿಯನಾಂತು ಕೀರ್ತಿ ಭಾಸಂತತಿಯಲ್ಲಿ ನಿಂಬರಗೆ ಮಧ್ಯದ ಮಾಣಿಕದಂತಿರೊಪ್ಪುಗುಂ॥** ಜಿರಗೆ ಖರ್ಬು ಸಂಪಿಗೆ ತಳಿರ್ತ್ತೆಳೆವಳ್ಳಿ ಕವುಂಗು ತೆಂಗು ಪಂಕೇರುಹವುಳ್ಳರಲ್ದ ಪೊಸಮಲ್ಲಿಗೆ ಪಾದರಿ ಬಾಳೆಯೀಳೆ(ವುಳ್ಳಿ) ಖರ್ಜೂರವಳಂಬು ವಲ್ಲ ರಸಿನಂಗಳ ತೋಂಟದಿನೊಳ್ಪ ವಿಸ್ತಾರದಿ ನಿಂತು ನಿಂಬರಗೆ ದೇವಮುಕ್ಕೆಣೆಯಾಗಿ ತೋರುಗುಂ॥ ಭೂಕಾಂತಾನನಮಣಿಮುಕುರಾಕೃತಿ ನಿಜವಿಮಲ ಕೀರ್ತಿವಲ್ಲೀವೃತ ಭೂಲೋಕಂ ಜಿತಾ

ಮುರಾಧಿಪಲೋಕಂ ನಿಂಬರಿಗೆ ಧರೆಗೆ ಸೊಗಯಿಸಿ ತೋರ್ಕುಂ॥ ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪೃಥಿವೀವಲ್ಲಭಂ ಮಹಾರಾಜಾಧಿ ರಾಜ ಪರಮೇಶ್ವರಂ ಪರಮ ಭಟ್ಟಾರಕಂ ಸತ್ಯಾಶ್ರಯ ಕುಲತಿಲಕಂ ಚಾಳುಕ್ಯಾಭರಣಂ ಶ್ರೀಮದ್ಭೂಲೋಕ ಮಲ್ಲದೇವರ ವಿಜಯರಾಜ್ಯ ಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಮಾಚಂದ್ರಾರ್ಕ ತಾರಂಬರಂ ಸಲ್ಲುತ್ತಮಿರೆ ಕಲ್ಯಾಣದ ನೆಲೆವೀಡಿನೊಳು ಸುಖಸಂಕಥಾ ವಿಇನೋದದಿಂ ರಾಜ್ಯಂಗೈವುತ್ತಮಿರೆ ಶಕ ವರುಷದ ಸಾಸಿರ ದೈವತಾರನೆಯ ೧೦೫೬. ಸ್ವಸ್ತಿ ಶ್ರೀಮಚ್ಚಾಳುಕ್ಯ ಸರ್ವಜ್ಞ ಭೂಲೋಕಮಲ್ಲ ವರುಷದ ೯ ವಂಭತ್ತನೆಯ ಆನಂದ ಸಂವತ್ಸರದಾಷಾಡದಮಾವಾಸ್ಯೆ ಸೋಮವಾರ ಪುಷ್ಯ ನಕ್ಷತ್ರ ವ್ಯತೀಪಾತ ಚೂಡಾಮಣಿ ಸೂರ್ಯಗ್ರಹಣದಂದು ಮಾಡಿಹಾಳದ ಕೋಟಿ ಶಂಕರದೇವರ ಆಚಾರ್ಯರು॥ ಪರಮತಪಃ ಶ್ರೀವನಿತೆಗೆ ಚರಿತಂ ಭಾರತಿಗೆ ವಪ್ಪ ದಿಶಾ ಜಾಲಕೆ ಸುಂದರಿಯರ್ಗ್ಗೆ ಕೀರ್ತಿಯಾದುದು ಸುರಚಿರ ಮುಕರಂ ಧ್ರುವೇಶ್ವರಂ ಯತಿ ಪತಿಯಾ॥ ಯಿಂತೆನಿಸಿದ ಧ್ರುವೇಶ್ವರ ಪಂಡಿತ ದೇವರ ಪಾದ ಪ್ರಕ್ಷಾಲನಂ ಮಾಡಿ ಕಲಿಯರಸಂ ತಂನ ಪ್ರಭುತ್ವದ ಶಿವರಾಜನ ಹಳ್ಳಿಯ ಉಂಬಳಿಯೊಳಗಾಗಿ ಅಷ್ಟಭೋಗ ತೇಜ ಸಾಂಮ್ಯ ಜಲಪಾಷಾಣ ವೃಕ್ಷ ಫಲಸಹಿತ ನಿರ್ಮಾಣ(ಪೂಟ) ವಳಗಾಗಿ ಧಾರಾಪೂರ್ವಕದಿಂ ಕೊಟ್ಟರು॥ ಶ್ರೀಮನ್ಮಹಾ ಪ್ರಧಾನಂ ಹಿರಿಯ ದಂಡನಾಕಂ ಕಾಳಿಮರಸ ಬಿಂನಲಪದಿಂ ಶ್ರೀಮದ್ಭೂಲೋಕಮಲ್ಲ ದೇವರುಂ ಲಪಟ್ಟಮಹಾದೇವಿಯರುಂ ಪರಮೇಶ್ವರ ದತ್ತಿಯಾಗಿ ಸರ್ಬನಮಶ್ಯ ಮಾಡಿಹಾಳ ಮೇಲಾಳ್ಕೆಯಂ ದೇವರ್ಗ್ಗೆ ಧಾರಾಪೂರ್ವಕಂ ಮಾಡಿ ಬಿಟ್ಟರು॥ ಶ್ರೀಮನ್ಮಹಾಮಂಡಲೇಶ್ವರಂ ಮಲ್ಲಿದೇವರಸರು ತಂಮ್ಮ ಮಂನ್ನೆಯದೊಳಗಾಗಿ ಅಂತು ತ್ರಿಭೋಗಾಭ್ಯಂತರಂ ದೇವರ್ಗ್ಗೇ ಧಾರಪೂರ್ವಕಂ ಮಾಡಿ ಬಿಟ್ಟರು॥ ಶ್ರೀಮನ್ಮಹಾಮಂಡಲೇಶ್ವರಂ ಮಲ್ಲಿದೇವರಸರು ತಂಮ್ಮ ಮಂನ್ನೆಯದೊಳಗಾಗಿ ಅಂತು ತ್ರಿಭೋಗಾಭ್ಯಂತರು ದೇವರ್ಗ್ಗೆ ಧಾರಾ ಪೂರ್ವಕದಿಂ ಬಿಟ್ಟರು। ಮತ್ತಂ ಮುರವಡಿಗೆ ಮಂನ್ನೆಯ ಗೇಯಿ ಕಾಲಡಿ ಮತ್ತರೆ ವಂಭತ್ತುಮಂ ವಟ್ಟಿಲವಂದುಮಂ ದೇವರ್ಗ್ಗೆ ಧಾರಾಪೂರ್ವಕದಿಂ ಬಿಟ್ಟರು ಕಲ್ಲರಸನುಂ ಕಾಚರಸನುಂ ನಿಂಬರಿಗೆಯ ತಂಮ ಕೇರಿಯ ಹೊಲದೊಳಗೆ ಬಂಡೆಯಗೇಯಿಂ ಬಡಗ ಹಳ್ಳದಿಂ ಮೂಡ ಕಾಲಡಿಯ ಮತ್ತರಯಿವತ್ತುಮಂ ಬಿಟ್ಟರು॥

ಹುಣಿಸೆಗೊಳ್ಳದಲಿ ಹೂವಿನ ತೋಂಟ ಮತ್ತರೆರಡು ದೇವರಿಂ ಪಡುವ ಅಂಗಡಿಯೊಂದು। ಕಲ್ಲರಸಂ ತಂನ್ನನುಚ್ಚಾಯದ ಶಿವಟಮಂ(?) ಗಾಣದಾಯ ಸಾಮ್ಯವಂ ಬಿಟ್ಟರು॥ ದೇವರಿಂ ತೆಂಕಲು ಭೋಜನ ಶಾಲೆಯ ಪಡುವಲು ಬೀದಿಯಿಂ ತೆಂಕಲೂರ್ಗೋಂಟೆ ಮೇರೆಯಾಗಿ ಮೂಡಣ ಕೇರಿಯ ಪ್ರಜೆಗಳು ತಾವು ತೆರುವ ಶಿದ್ಧಾಯದ ಪೊಂಗೆಣಿ ಹೊಂಜಿರಂ ಹೊಂಗೊಕ್ಕುಳದ ಲೆಖ್ಖದಿಂ ಜೋಳಮುಮಂ ಧಾಂನ್ಯದಲಿಬ್ಬಳ ಭತ್ತಮುಮಂ ಬಿಟ್ಟರು॥ ಹಿರಿಯ ಕೇರಿಯ ಪ್ರಭುಗಳು ತಂಮ ದಶವಂದೊಳಗೆ ಬಂನಿಯ ಬಾವಿಯಿಂ ಪಡುವಲು ಬಿಟ್ಟ ತೋಂಟ ಕಾಲಡಿಯ ಮತ್ತಗೊಂದು॥ ಹರಪದ ಭಕ್ತರಪ್ಪ ನಕರಂ ಕಲಿ ದೇವರಿಗಿತ್ತರೊಲ್ದು ಸುಸ್ಥಿರ ತರವಾಗಲಂಗಡಿ ಯಲೊಂಮ್ಮನ ಧಾಂನ್ಯಮದಾವುದಾದಡಂ ಸುರಚಿರಮಾಗೆ ದಿವಿಗೆಗೆ ಸೊಡರಿಪ ಧರ್ಮಮನೆಂಣಿಯುಂ

ಮನೋ ಹರಮೆನೆ ವೀಳೆಯಕ್ಕಡಗೆಯೊಂದೆಲೆಯಂತೆರಡಂ ನಿರಂತರಂ॥ ಮತ್ತಂ ಮರವಡಿಗೆಯ ಪ್ರಜೆಗಳು ತಾವು ರೆರುವ ಶಿದ್ಧಾಯದ ಪೊಂಗೆ ೫ ಹೊಂಜಿರಂ ಹೊಂಗೊಕ್ಕುಳದ ಲೆಖ್ಖದಿಂ ಜೋಳಮುಮಂ ಧಾಂನ್ಯದಲಿರ್ಬಳ ಭತ್ತಮುಮಂ ವಂದುಗದ್ಯಾಣ ಪೊಂನೆ ಕಾಣಿಕೆಯಮಂ ದೇವರ್ಗ್ಗೆ ಬಿಟ್ಟರು॥ ಯಿಂತೀ ವ್ರಿತ್ತಿಯೊಳಗಂ ಜೀಯಂ ಗೀತ ವಾದ್ಯ ನ್ರುತ್ಯಕ್ಕಂ ಬಂಡೆಯ ಗೇಯ ಸ್ಥಳದೊಳಗಾಗಿಯೆಲವದ ಮರೆದಿಂ ಮೂಡಲು ಕಾಲಡಿಯ ಮತ್ತರು ೧೫೦ ಯಿರ್ಪ್ಪತ್ತು ಮನುಶ್ಯ ಬ್ರಾಂಹ್ಮಣರ ಸತ್ರಕ್ಕಂ ದೀಕ್ಷಿತ ಗೇಯಿ ಕಾಲಡಿಮತ್ತರು ೫೦ ಹಳ್ಳದಿಂ ಮೂಡಲು ಕಾಲಡಿಯ ಮತ್ತರು ೧೨ ಖಂಡಿತ ಪುರಾಣಕ್ಕಂ ಮಸಳಿಯ ಮಡುವಿನ ಹಳ್ಳದಿಂ ತೆಂಕ ಕಾಲಡಿಯ ಮತ್ತರು ೩೦ ಅಲ್ಲಿಂ ಪಡುವಲು ಕೇಶವ ದೇವರಂ ಪೂಜಿಸುವ ವುಪಾದ್ಯಯರ್ಗೆ ಕಾಲಡಿಯ ಮತ್ತರು೧೨ ಅಲ್ಲಿಂ ಪಡುವಲು ಶೀತಳ ಗಡುಗೆಯ*** ಕಾಲಡಿ ಮತ್ತರು ೧೬ ಅರವಟ್ಟಗೆಯ ನೀರನೆರೆವ ಬ್ರಾಂಹ್ಮಣಂಗೆ ಮತ್ತರು ೪ ಸಂಖೆಯಂಗೆ ಮತ್ತರು ೩ ಬ್ರಂಹ್ಮಪುರಿಯ ಬ್ರಾಂಹ್ಮಣರ್ಗೆ ಕಾಲಡಿ ಮತ್ತರು ೩ ಯಿಂತಿನಿತೆಲ್ಲಂ ದೇವರಂಗಭೋಗ ನೈವೇದ್ಯ ಚೈತ್ರ ಪವಿತ್ರಂಗಳಿಗೆ ತಪೋದನರ ಗ್ರಾಸಕ್ಕಂ ಖಂಡಾಸ್ವಾದಿತ ಜೀರ್ಣೋದ್ದಾರಕ್ಕಂ ಯಿಂತೀ ಧರ್ಮಮಂ ಆ ಚಂದ್ರಾರ್ಕ ತಾರಂ ಸ್ಥಾಯಿಯಾಗಿ ಶ್ರೀಮದ್ಭೂಲೋಕಮಲ್ಲ ದೇವರು ಸ್ವಧರ್ಮದಿಂ ಪ್ರತಿ ಪಾಲಿಸುವರು. ಯೀ ಸ್ಥಾನಕ್ಕೆ ನಿರೂಪಿಸಿದಡವರು ನಿಯಾಮಂದಪ್ಪಿ ನಡಿಯಲವರ್ಗೆ ದುಷ್ಟನಿಗ್ರಹ ಶಿಷ್ಟ ಪ್ರತಿಪಾಲನ ಮಾರ್ಪುದೂ ॥ ಮಾಡದುಪೇಕ್ಷಿದವರು ತಂಮಿಪ್ಪತ್ತು ಜಂನ್ಮದ ಮಾತಾಪಿತ್ರುಗಳು ರವುರವಕ್ಕೆ ಗಳಗಳನಿಳಿವರು॥ ಶಾಪಾಶಯವಿದೆ.

ಆ ಹಳ್ಳಿಯ ಪ್ರತಿ ಬದ್ದದ ಕೇಯಿಳಾವಾವೆಂದೆಡೆ॥ ನಿಂಬರಗೆಯ ಮೂಡಣ ನಾಗರಭಾವಿಯಿಂ ಮೂಡಲು ತೋಂಟ ಮತ್ತಂ ೪ ಅ ವೂರಿಂ ಪಡುವಣ ಮರಂಜಿಯಂ ಹತ್ತಿದ ಮೂಡಲು ದೀಕ್ಷಿತ ಗೇಯಿ ಕಾಲ ಮತ್ತರು ೪ ಆ ವೂರಿಂ ಪಡುವಣ ಮರಂಜಿಯಂ ಹತ್ತಿದ ಮೂಡಲು ದೀಕ್ಷಿತ ಗೇಯಿ ಕಾಲ ಮತ್ತರು ೫೦ ಆ ಮರಂಜಿಯಿಂ ಪಡುವಲು ಶಿರಿವೂರ ಸೀಮಿಯಿಂ ತೆಂಕಲ ಸೊಂನಗಂಬಿಯ ಸೀಮಿಯಿಂ ಮೂಡಲು ಕಂಚುಗಾರನ ಗೊಂಡಾರದಿಂ ಬಡಗಲು ಹಳೆದೊರೆ ಸಹೀತವಾಗಿ ಶೆಳ್ಳಗೊಂಡಾರಂ ಮತ್ತರೆಂಭತ್ತು। ಆ ಮರಂಜಿಯಿಂ ಮೂಡಲು ಸಿರಿವೂರ ಗೊಂಡಾರದಿಂ ಬಡಗಲು ಅಗಸ ಗೊಂಡಾರಂ ಮತ್ತರು ೧೨ ಆ ಮರಂಜಿಯಿಂ ಮೂಡಲು ಸ್ಥಳವ್ರಿತ್ತಿಯೈವತ್ತರಿಂ ತೆಂಕಲು ಬಂಡೆಯಗೇಯಿ ಮತ್ತರೆಪ್ಪತ್ತು॥ ಯೀ ಸ್ಥಾನದಾಚಾರ್ಯರು ಪೂರ್ವಾಶ್ರಯ ಬ್ರಾಂಹ್ಮಣರಾಗಿ ಮಾಡಿಪಡೆದಂ ಶಂಕರದೇವರ ಮಠದಾಚಾರ್ಯ ಧ್ರುವೇಶ್ವರ ದೇವರ ಶಿಷ್ಯ ಸಂತಾನಮಾಗಲವೆರ್ಕುಂ। ಧ್ರುವೇಶ್ವರ ದೇವರ ಸವುದರೆ ಕಲ್ಲರಸನ ದೇಮಲದೇವಿಯ ತದ್ದಿನ ಮಹಳಂಗಳಂ ವೈದಿಕ ಕ್ರಿಯೆಯಿಂ ಮಾಡುವದು॥ ಯೀ ಸ್ಥಾನದಾಚಾರ್ಯರಕ್ಕು ಪ್ರಭುವಕ್ಕಾರಾದಡೆ ಯೀ ವ್ರಿತ್ತಿಯನೊತ್ತೆಯಿಡಲಂ ಮಾರಲುಂ ದಾನಂ ಗೈಯಲು ಸಲ್ಲದು॥ ಮಾರಿದವಂ ಮಹಾಂದರು। ವತ್ತೆಯ ಹಿಡಿದವರು ಮದಾಂಧರು॥

ಸ್ಥಳ: ಪಡಸಾವಳಿ | ಆಳಿದ ದೊರೆ: ಶ್ರೀ ತ್ರಿಭುವನಮಲ್ಲ ದೇವರು
ಕಾಲ: ಕ್ರಿ.ಶ.೧೧೧೦ | ಪ್ರಕಟಿತ: ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
ಭಾಷೆ: ಕನ್ನಡ | ಪು.: ೬೦-೬೧

ಸ್ವಸ್ತಿ ಶ್ರೀ ಪೃಥ್ವಿವಲ್ಲಭ ಮಹಾರಾಜಾಧಿರಾಜ ಪರಮೇಶ್ವರಂ ಪರಮಭಟಾರಕಂ, ಸತ್ಯಾಶ್ರಯ ಕುಲತಿಲಕ, ಚಾಲುಕ್ಯಾಭರಣ, ಶ್ರೀಮತ್ ತ್ರಿಭುವನಮಲ್ಲದೇವರು *** ಯ ನೆಲದಲ್ಲಿ ಸುಖ ಸಂಕಥಾ ವಿನೋದಿಂ ವಿಜಯ ರಾಜ್ಯಾಭಿವೃದ್ಧಿ ಪ್ರವರ್ದ್ಧಮಾನ ಚಂದ್ರರ್ಕ್ಕ ತಾರಂಬರಂ ಸಲುತ್ತಮಿರೆ ಶ್ರೀಮತ್ ಚಾಲುಕ್ಯ ವಿಕ್ರಮ ವರ್ಷದ

ಸ್ಥಳ: ಪಡಸಾವಳಿಗೆ | ಆಳಿದ ದೊರೆ: ತ್ರಿಭುವನಮಲ್ಲ ದೇವರು.
ಕಾಲ: ಕ್ರಿ.ಶ.೧೧೧೦ | ಪ್ರಕಟಿತ: ಸಾಧನೆ. ಸಂ-೨, ಸಂಚಿಕೆ-೧-ಕ್ರಿ.ಶ. ೧೯೭೩
ಪ್ರಸಂ.: ಡಾ. ಜಿ.ಎಸ್. ಶಿವರುದ್ರಪ್ಪ.
ಪು.: ೫೬-೫೭
ಭಾಷೆ: ಕನ್ನಡ | ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
ಪು.: ೬೦-೬೧, ೪-೨೩ನೆಯ ಸಾಲು

ತ್ರಿಭುವನಮಲ್ಲ ದೇವರು ವಿಜಯರಾಜ್ಯಾಭಿವೃದ್ಧಿ ಕಾಲದಲ್ಲಿ ಆಳ್ವಿಕೆ ಮಾಡುತ್ತಿದ್ದರು. ಶುಕ್ರವಾರದಂದು 'ಶ್ರೀಮತ್ ಪಟ್ಟಸಾವಳಿಗೆಯ ಪ್ರಭು ಬಾಣಸ ವೆರ್ಗ್ಗಡೆ ನಾರಣದೇವರು' ಪಟ್ಟಸಾವಳಿಗೆಯ ಕಲಿದೇವೇಸ್ವ***ಮಿಗೆ ಮತ್ತರು(೯೦)ದಸ*** ಮತ್ತರುಮಂ ಭಧಾ ಪರಿಹಾರವಾಗಿ ಇಲ್ಲಿಯ ಮೂಲಿಗ(ದುಂ) ಮರಸನು, ಗೋಪಿತನಾಯಕ, ಇಸ್ವಾರದೇವ, ಆಯಿತ್ರಮಾಯ ಸೆಟ್ಟಿ, ಬಾಪರಸನು, ಚಿಕ್ಕರಸನು, ಮೊರಂಬಿ ಎಂಬತ್ತರ ಮನ್ನೆಯ ಮಾಗರಸನು ಬಿಟ್ಟರು. ಮತ್ತಂ ಸಿಂಗೇಸ್ವರ ದೇವರಿಗೆ 'ಸಿಂಗಣ' ಬಿಟ್ಟ ಮತ್ತರು೧೨, ಮತ್ತಂ ರಾವಸೆಟ್ಟಿಯು, ಬಲ್ಲೆಯಣನು, ಸೋಮೇಶ್ವರ ದೇವರಿಗೆ ಬಿಟ್ಟ ಮತ್ತರು ೦೧, ಏಳು ಕೆಯ್ಯನೆ ಸ*** ಇಂತಿ ೧೦೪ ಮತ್ತರಿಂಗೆ ****** ಟ್ಟಿಯುಂ ಮಲ್ಲಿಯಣನು ಒಡೆಯರು. ದಂಡನಾಯಕ ನಾರದೇವ ಹೆಗ್ಗಡೆ, ಕೇಸಿರಾಜನು, ಸೌದರೆಗಳು, ಅರುವತ್ತೊಕ್ಕಲುಂ ಕಲಿಸೆಟ್ಟಿ ಹೇರಿ (ಹುಂಜ)ಮಂ ಬಿಟ್ಟನು (ಪು.ಸಂ.೬೦-೬೧, ೪-೨೩ನೆಯ ಸಾಲು).

ಸ್ಥಳ: ಫಿರೋಜಾಬಾದ್ | ಆಳಿದ ದೊರೆ: ?
ಕಾಲ: ಕ್ರಿ.ಶ.೧೨ನೆಯ ಶತಮಾನ | ಪ್ರಕಟಿತ: ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
ಭಾಷೆ: ಕನ್ನಡ | ಪು.: ೯೧

ಶಿವನ, ಗಣೇಶನ ಪ್ರಾರ್ಥನೆ (ಪು.ಸಂ.೯೧. ೧-೪ನೆಯ ಸಾಲುಗಳು) ಶತಪತ್ರ ಪ್ರಭವಂಗಾದಿತ್ಯ ಮುನಿ ಸಂದೋಹಂಗಳಾದಂ ಜಗನು ತಾರೋನಿರೋಬ್ಯವರ್ತಿ ನೆಗಳ್ದ ಸಂದ ತ್ರಿನೇತ್ರತ್ರಿಗೆಯ್ದ ತನೂಜಂ ವಿಭುಸೋವನಾ ವಿಭುವಿನಿಂ ಸೋಮಂ, ಚಾಳುಕ್ಯಾಗ್ರ ಪರಂದಾದ ಜಗಪ್ರಸ್ತುತರು॥

ಅವನಿಪಾಳರ*ಯಂ ಚಾಳುಕ್ಯ ಚಕ್ರ ಬರುತ್ತವದಹಿತಂ, ಪಲಕಾಲರಾಂತವರ್ಗ್ಗಳಂ ಯಿಕ್ಕಿ***ವಿಭ** ಅವರ ಜಗ್ಗದಳಂ (ಪು.ಸಂ.೯೧. ೪–೭ನೆಯ ಸಾಲು). ಉಳಿದ ಭಾಗ ತ್ರುಟಿತವಾಗಿದೆ.

ಗ್ರಾಮ: ಬಸವಪಟ್ಟಣ **ಆಳಿದ ದೊರೆ:** ?

ಕಾಲ: ಸು.೧೧ನೆಯ ಶತಮಾನ **ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ, ೧೯೯೨

ಶ್ರೀ ಕೌಂಟಗಿ ಮರಿಯಮ್ಮ ದೇವಾಲಯ ಗುಡಿಯ ಹೊರ ಎಡಭಾಗದಲ್ಲಿ ಒಂದು ಶಾಸನವಿದೆ. ಪ್ರಕಟಿತ ಷ್ಹಿ.ಕೆ.ಶಿವಾನಂದರ ಹೈದ್ರಾಬಾದ್ ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು. ಶಾಸನದ ಲಲಾಟದ ಮೇಲೆ ಸೂರ್ಯ, ಚಂದ್ರ, ಲಿಂಗ, ನಂದಿ, ಖಡ್ಗ–ಆಕಳು ಮತ್ತು ಕರುವಿನ ಕೆತ್ತನೆಯಿದೆ.

ಸ್ಥಳ: ಬಸವಪಟ್ಟಣ **ಆಳಿದ ದೊರೆ:** ಚಾಲುಕ್ಯ ವಿಕ್ರಮ

ಕಾಲ: ಕ್ರಿ.ಶ. ೧೦೮೮ **ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ, ೧೯೯೨

ಭಾಷೆ: ಕನ್ನಡ **ಪು.:** ೪೧

ವೃಷಭ, ಲಿಂಗ, ಕತ್ತಿ, ಆಕಳು, ಕರುವಿನ ಚಿಹ್ನೆಗಳು ಶಾಸನದ ಲಲಾಟದ ಮೇಲಿವೆ. ಮಹಾಮಂಡಳೇಶ್ವರ ಬಿಬ್ಬರಸರು ಭೀಮಾತೀರದ ಕವಿಟಿಗೆ ಅಜ್ಜೇಶ್ವರ ದೇವರಿಗೆ ಬಿಟ್ಟ ಭೂಮಿ ಮತ್ತು ಮನೆ ಶಾಸನದ ಬಗ್ಗೆ ಉಲ್ಲೇಖಿಸಿದೆ. ತ್ರಿಭುವನಮಲ್ಲ ದೇವರ ಪ್ರಶಸ್ತಿ / ಬಿರುದುಗಳ ಉಲ್ಲೇಖ, ನೈಷ್ಠಿಕ ಸ್ಥಾನಮವಾಗಿ ಸರ್ವೆ ನಮಸ್ಯದಿಂ ಧಾರಾಂಪೂರ್ವಕಂ ಮಾಡಿ ಬಿಟ್ಟಕೆಯ ಮತ್ತರು ೩೪, ಮೊಳವಂ ಕೋಲ್ಮ, ೨ ಮನಿಯ ನಿವೇಶನದಗಲ ೧೮ ಕೈನಿಳ ೭೭, ತೋಟ ಮತ್ತ ೧ ಎಂದು ಉಲ್ಲೇಖ ಶಾಪಾಶಯವನ್ನು ಹೇಳುವಾಗ ಸ್ಥಳಿಕ ನದಿ ಹರಿಯುವ ಪರಿಯಂತ ಎಂದಿರುವುದು ಸ್ಥಳ ಮಹಾತ್ಮೆ ತಿಳಿಸುತ್ತದೆ.

ತ್ರಿಭುವನ ಮಲ್ಲದೇವ ಪ್ರಶಸ್ತಿಯಿದೆ. ಸ್ವಸ್ತಿ ಸಮಧಿಗತ ಪಂಚ ಮಹಾಶಬ್ದ ಮಹಾ ಮಂಡಳೇಶ್ವರ ವಿಜಯಲಕ್ಷ್ಮೀಕಾಂತ ನಲಂದೆವೆಡಂಗಂ ಸತ್ಯರಾಧೇಯಂ, ಶೋಭಾಂಜನೇಯಂ, ಪರೋಪಕಾರ ವ್ಯಾಪಾರ ಪರಾಯಣಂ, ಚತುಃ ಸಮಯ ಸಮುದ್ಧರಣಂ ಶ್ರೀಮತ್ರಿಭುವನಮಲ್ಲದೇವ ಪಾದಾಂಬೋಜ ಭೃಂಗಂ ಸಾಹಸೋತ್ತುಂಗ ನಾಮಾದಿ ಪ್ರಶಸ್ತಿ ಸಹಿತಂ, ಶ್ರೀಮನ್ಮಹಾ ಮಂಡಳೇಶ್ವರ ಬಿಬ್ಬರಸರು ಮಹಾನದಿ ಭೀಮರಥಿಯ ತಡಿಯ ಕವಿಟಿಗೆಯ ಅಜ್ಜೇಶ್ವರ ದೇವರ್ಗ್ಗೆ...... ನೈಷ್ಠಿಕ ಸ್ಥಾನಮಾಗಿ ಸರ್ವ್ವೇ ಸಮಸ್ಯದಿಂ। ಧಾರಾಪೂರ್ವ್ವಕಂ ಮಾಡಿಬಿಟ್ಟ ಕೆಯ ಮತ್ತರು ೩೪ ಮೊಳವಂ ಕೋಲ್ಮ೨ ಮನಿಯ ನಿವೇಶನದಗಲ ೧೮ಕ್ಕೆ ನಿಳ ೭೭ ತೋಟ ಮತ್ತ ೧, ಉಳಿದದ್ದು ಶಾಪಾಶಯವಿದೆ.

ಸ್ಥಳ: ಬೋದನ **ಆಳಿದ ದೊರೆ:** ಎರಡನೆಯ ಜಗದೇಕಮಲ್ಲ

ಕಾಲ: ೧೨೯೨ **ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ.–ಷ್ಹಿ.ಶಿವಾನಂದ, ೧೯೯೨

ಭಾಷೆ: ಕನ್ನಡ **ಪು.:** ೧೬೫–೧೭೨

ಆಕಳು, ಕರು, ಕಠಾರಿ, ಸೂರ್ಯ, ಚಂದ್ರ, ಶಾಸನ ಚಿಹ್ನೆಗಳಿವೆ. ನಾರಾಯಣ ದಂಡನಾಥನು ಮನೆವೆರ್ಗ್ಗಡೆ ಬೊಮ್ಮಣಯ್ಯ, ಮನ್ನೆಯ ಕಾಚರಸ ಸರಸ್ವತೀಪುರದ ತಳಾರ ಸಾಂತಯ ನಾಯಕರೇ

ಮೊದಲಾದವರ ಅನುಮತದಲ್ಲಿ ತಾನು ನಿರ್ಮಿಸಿದ ಸ್ವಯಂಭು ಮಲ್ಲಿಕಾರ್ಜುನ ದೇವ ಹಾಗೂ ಮಾಧವ ದೇವರಿಗೆ ಅಂಗ-ರಂಗ ಭೋಗಕ್ಕೆಂದು ವಿವಿಧ ದತ್ತಿಗಳನ್ನು ಸರ್ಬನಮಶ್ಯಮಾಗಿತ್ತುದು. ಆರಂಭದ ಪದ್ಯಗಳು ವರ್ಣನಾತ್ಮಕ ಶೈಲಿಯಲ್ಲಿವೆ. ಅಲಂದೆ ಸಾಸಿರ ಗೊಂಕ೧೨೦, ಕಂಪಣ ನವರಣಿ ೧೨ರ ಉಲ್ಲೇಖವಿದೆ.

ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪೃಥ್ವಿವಲ್ಲಭ ಮಹಾರಾಜಾಧಿರಾಜ ಪರಮೇಶ್ವರಂ ಪರಮಭಟ್ಟಾರಕಂ, ಸತ್ಯಾಶ್ರಯ ಕುಲತಿಲಕಂ, ಚಾಳುಕ್ಯಾಭರಣಂ, ಶ್ರೀ ಮತ್ಪ್ರತಾಪ ಚಕ್ರವರ್ತಿ ಜಗದೇಕಮಲ್ಲ ದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಮಾಚಂದ್ರಾರ್ಕ ತಾರಂಬರಂ ಶ್ರೀಮದ್ರಾಜಧಾನಿ ಕಲ್ಯಾಣದ ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯಂ ಗೈವುತ್ತಮಿರೆ॥ ತತ್ಪಾದ ಪದ್ಮೋಪಜೀವಿ॥ ಮಹಾಪ್ರಧಾನಂ ಕಂನ್ನಡ ಹರಿಸಂಧಿ ವಿಗ್ರಹಿ ಕರಿತುರಗ ಸೋಹಣಿವೆಗ್ಗಡೆ ಬಂಮಣಯ್ಯ ದಂಡನಾಯಕಂ ಸರಸ್ವತೀ ನಿಲಯಂ ಶ್ರೀವಂದಭಿನವ ಸರಸ್ವತಿ ಮಲಯವತಿ ದೇವಿಯರು ಮಾಡಿಸಿದ ಸರಸ್ವತೀಪುರದ ಧರ್ಮಮನಾಳೆವುತ್ತಿರ್ಪ್ಪಲ್ಲಿ ಆ ಸರಸ್ವತೀಪುರದ ತಳಾರಂ ಸಾಂತೇಯ ನಾಯಕನ ಜೀವಿ ತಕ್ಕಾಳುತಿದ್ದಲಂದೆಯ ಸಾಸಿರದೊಳಗಣ ಗೊಂಕ ನೂರಿಪ್ಪತ್ತರ ಬಳಿಯ ** ಕಂಪಣಂ॥ ನರವಣಿ ೧೨ರೊಳಗೆ॥

ಬೋದನಮೆಸದದು ನಿಖಿಳ ಧರಾ ದೇವಿಮುಖ ಸುಕರಲೀಲಮೆನೆ ಸಕಳಂ ಜನಾಧಾರಕರ ಸದನಪುರವೇ ದೊರೆತನೆನಿಸಿಕೊಂಡ ವಿಶೋಭಾ ನಿಲಯಂ॥ ಅಲ್ಲಿಯ ಪ್ರಭು, ನಾರಣ ದೇವಂ ಸೇವಕ(ಃ) ಕರಣವಪು ವಿಮುಳ ಕೀರ್ತಿ ಮನನಿಜಭದ್ರಾಕಾರಂ ಸಮಸ್ತ ಧರ್ಮೋದ್ಧಾರಂ ಮಾಡಿಸಿದ ಧರ್ಮಮೆಂತೆನೆ ಪೇಳ್ವೆಂ॥ ಬೋದನವಾಡಲ್ಸಂದಿಹರಾದಿಯ ನರೆಯಲ್ಕರೆದೆಂಬಿನವರ ಸಾಮರ್ಥೋದಯದಿಂತು ಕರಮುದಿತೋದಿತಮೆನಿಸಿದುದು ನೆಗರ್ದ ಮೂಲಸ್ಥಾನಂ॥ ಆ ದೇವರ ದೇಗುಲಮಂ ಸಾದರದಿಂ ಮಾಡಿಸಲ್ಕೆ ನೆಲೆಗಟ್ಟಲು ಪುಣ್ಯೋದಯದಿನಲ್ಲಿ ಸಂನಿಭವಾದರು ಮನವೆಸದುಮಲ್ಲಿಕಾರ್ಜುನ ದೇವರು॥ ಆ ದೇವರು ಬಿಜಯಂಗೈದಾದಿನದೊಳು ದಂಡನಾಥ ನಾರಣದೇವಂ। ಶ್ರೀದಯಿತಂ ಭಕ್ತಿಯನಚ್ಚೋದರ ದೇವರಮೆನಕ್ಕರಿಂ ಮಾಡಿಸಿದಂ॥ ಅಂತು ಶ್ರೀ ಮಲ್ಲಿಕಾರ್ಜುನ ದೇವರುಮಂ ಶ್ರೀ ಕೇಶವ ದೇವರುಮನಾ ಮೂಲಸ್ಥಾನ ದಿಕ್ಕೆಲದೊಳುಂ ಪ್ರತಿಷ್ಠೆಯ ಮಾಡಿದನದೆಂತೆನೆ॥ ಮೂಲಸ್ಥಾನಂ ಧರ್ಮದ ಮೂಲಸ್ಥಾನವೆನಿಸಿತು ಪೂರ್ವಾಭಿಮುಖಂ ಶ್ರೀಲಲನೇಶ್ವ(ರ) ಗೃಹಂ ಮಹಿಮಾಲಂಬಂ ದಕ್ಷಿಣಾಭಿಮುಖಮೆನಲೆಸಗುಂ॥

ಭಾವಿಪಡೆ ಮಲ್ಲಿಕಾರ್ಜುನ ದೇವಾಲಯಮೆಸಗುಮುತ್ತರಾಭಿಮುಖಂ ಶೋಭಾವಹ ಸದಮಾಶ್ರಿತ ಕೂಟ ವಿಳಾವಿಖ್ಯಾತಂ ತ್ರಿಕೂಟನಗದವೊಲೆಸಗುಂ॥ ಜನಕಂ ಶ್ರೀ ಮಲ್ಲಿದೇವಂ ನಿಜಜನವಿ ಮಹಾದೇವಿ ಮುತ್ತಯ್ಯ ನೂರ್ವೀಶನಂ ದಂಡಾಧೀಶ್ವರಂ ವಿಶ್ರುತ ವಿಶದ ಯಶೋರಾಸಿ ನಾರಾಯಣಂ ತಂಮನುದಾತ್ತಂ ವಾಸುದೇವಂ ಶಶಿಧರನಧಿದೈವಂ ಜಗಂನ್ನಾಥನೆಂದಂದು ನರರ್ದಂಡಾಧಿಪಂ ನಾರಣನೊಳೆಣೆಯೆ ಭೂಭಾಗದೊಳು ಇರ್ಪಂಡೆಂತುಂ॥ ಗುಣದೊಳ್ಸಂತಾನ

ದೊಳ್ಪಾನದೊಳಖಿಳ ಕಳಾಪ್ರೌಢಿಯೊಳ್ರೂಢಿಯೊಳ್ ಲಕ್ಷಣ ದೊಳ್ಚಾತುರ್ಯ ದೊಳ್ದೈರ್ಯದೊಳುಂ ಸಮ್ಮಂ ದೊಳ್ಸಕ್ಯ ದೊಳ್ವಿ ಪ್ರಸಂತರ್ಪಣ ದೊಳ್ವಿಕ್ರಾಂತ ದೊಳ್ತಂನೊರೆಗೆ ವರ್ಪಂನರಾರ್ಪೇಳೆನಲ್ನಾರಣಾ ದಂಡಾಧೀಶಸಿರ್ದಂ ನಿಜಕುಲ ವಿಮುಳಂಬೊಧಿ ಸಂಪೂರ್ಣ ಚಂದ್ರಂ॥ ವಿತ್ತ ಪರಿತ್ತಪರೆನಲಾನೆತ್ತರೆವಂ ದಂಡನಾಥ ನಾರಾಯಣನಂ ನಿತ್ತಪರೆ ಬುಧರ ಪೊರೆಯಂ ಪೊತ್ತಪರೆ ಧರಿತ್ರಿಯೊಳ್ಜಸಂ ಬೆತ್ತಪರೇ॥

ಸ್ವಸ್ತಿ ಶ್ರೀ ಚಾಳುಕ್ಯ ಪ್ರತಾಪ ಚಕ್ರವರ್ತಿ ಜಗದೇಕಮಲ್ಲರಸರ ೫ನೆಯ ದುಂದುಂಭಿ ಸಂವತ್ಸರದ ಪುಷ್ಯ ಶುದ್ಧ ಸ್ರಷ್ಟಿ ಸುಕ್ರವಾರದಂದುತ್ತರಾಯಣ ಸಂಕ್ರಮಣದೊಳೆ ತಂಮ ಮುಂನ ಮಾಡಿಸಿದ ಮೂಲಸ್ಥಾನ ದೇವರಿಗೆ ಯಿಕ್ಕೆಲದೋಳು ಮಾಡಿಸಿದ ಶ್ರೀ ಮಲ್ಲಿಕಾರ್ಜುನ ದೇವರ್ಗಂ ಮಾಧವ ದೇವರ್ಗಂ ಅಂಗಭೋಗಕ್ಕಂ ನೈವೇದ್ಯಕ್ಕಂ ಚೈತ್ರ ಪವಿತ್ರಕ್ಕೆಂದು ಮಹಾಪ್ರಧಾನಂ ಮನೆವೆಗ್ಗಡೆ। ಬೊಂಮಣ್ಣೈಯ ದಂಡನಾಯಕರನುಮತದೊಳಂ ಮಂನೆಯ ಕಾಚರಸನ ಪೇಳ್ಕೆಯೊಳಂ ಸರಸ್ವತೀ ಪುರದ ತಳಾರಂ ಸಾಂತೇಯ ನಾಯಕನ ಸಾಮತದೊಳಂ ಮೇಲಾಳ್ಕೆಯ ಮಂನೆಯಕ್ಕಾಚಂದ್ರಾರ್ಕ ತಾರಂ ಪಡುವಣಂ ಸಸಿಯೆಂಬುದಿಲ್ಲದಂತಾಗಿ ಸರ್ವ್ವನಮಸ್ಯಂ ಮಾಡಿ ಮೂಲಸ್ಥಾಬ ದೇವರ ಪಶ್ಚಿಮದಲ್ಲಿ ಬಿಟ್ಟ ಕಾಲಡಿಯ ಮತ್ತರು ೧೦ ಆ ಕೇಯ ಹತ್ತಿರ ದಾರಿಯಿಂ ಬಡಗಲ ಮತ್ತರು ೨ ಆ ಕೇಯದಾಗ್ನೇಯದ ಗೋಂದಿನಲಂಕೋಲೆಯ ಮೆಳೆಯ ಹೊರೆಯಲು ದೇವರ್ಗ್ಗೆ ತೋಟಂ ಕಾಲಡಿಯ ಮತ್ತರು ಅರ್ಧ ಪೂರ್ವದ ದೇವಭೂಮಿಯಂ ಹತ್ತಿರೆ ಬಡಗಲು ಕಾಲಡಿಯ ಮತ್ತರು೩ ತಂಮನುಚ್ಚಾಯದ ಗರ್ದೆಯ ನಡುವೆ ಬಿಟ್ಟ ಗದ್ದೆ ಕಂಮ೫೦ ಅಂತು ದೇವರ್ಗ್ಗೆ ಕೇಯಿ ಕಾಲಡಿಯ ಮತ್ತರು ೧೫ ಪೂವಿನತೋಂಟವರದಕ್ಕೆ *** ಗರ್ದೆ ಹತ್ತಡಿ. ಪ್ರಭುತ್ವದ ಗರ್ದೆಯನಾರೋರ್ವಂ ಮಾಡುವರದಕ್ಕೆ ದೇವರ ಗರ್ದೆಯಪ್ಪುದಾಗಿ ಮಾಡಿ ಭಾಗವೆನ್ನದೆ ಬೆಳೆದ ಫಲವೆನಿತನಿತುಮನೊಪ್ಪಸುವರು ದೇಗುಲದಾ ತೆಂಕಣ ದೆಸೆಯಲು ಯಿಪ್ಪತ್ತು ಕೆಯ್ಯ ನಿವೇಶನಮಂ ಬಿಟ್ಟರು॥ ಮತ್ತ ಮೂಡಲು ಮುಂದಲು ತಮ್ಮನುಚ್ಛಾಯ ದಾವಟಮುಮಂ ಗಾಣವಾಲೆಯಮುಂ ಮುದ್ರಾಪಣಮಂ ಬಿಟ್ಟರು॥ ಯೀ ಧರ್ಮಕ್ಕಾವನೋರ್ವ ಸ್ಥಾನಪತಿಯೆಂಬುದಲ್ಲದೇಕ ಕಾರ್ಯಮನಾರೋರ್ವರುಯೆಲ್ಲ ಸಾಗುಮಾಡುವವರನೇ ನಡಿಯಿಸುವರು। ಹೊಲ್ಲಾಗಿ ನಡದರಂ ಯಜಮಾನಿಕೆ ಕಿತ್ತುಕಳೆದು ಮತ್ತೋರ್ವ ಶುಭೆಯಪ್ಪನಂ ನಿಲಿಸುವರು। ಯಿಲ್ಲಿ ಬ್ರಾಹ್ಮಣನಲ್ಲದೆ ಸೂದ್ರಂ ಪೂಜಿಸಲಾಗದು॥ ಯಿಲ್ಲಿ ನಡವಂಗೆ ಗುಣಶಾಸನ ವಲ್ಲದಿಂತಪ್ಪಂ ಗಾವನೊಡೆಯ ನೇನೆಂನಂನ್ಯಾಕೆ ತಳದ ಪೀಠೆನಲು ಬಾರದು॥

ವನುಜಭವಂ ಸಮೆದನೋ ವಿಶ್ವಕರ್ಮ ನಿರ್ಮಿತಮೋ ಮಯನ ಮಾಟಮಾ ಪೇಳೆಂ॥ ಜಿನೆಗಂ ತ್ರಿಕೂಟದೊಪ್ಪುಗುಮನಿ ತಕ್ಕಮದೊಂದೆ ಮಂಟಪಂ ಸೊಗಯಿಸುಗುಂ॥ ವಿಲಸ(ದು)ಮಾ ಮಹೇಶ್ವರರ ಮುರಾರಿ ಕುಮಾರಿಗಳಿಂದೆ ಭೈರವಂ ಸುಲಲಿತಂ ದಂಡಿಭಾನು ಫಣಿ ಪದ್ಮಭವಂ ಗಣನಾಥನೆಂಬವ। ನೊರ್ಲಸಿರೆ ಮಾತೃಕಾಗಣಯುತಂ ಬಲದಿಂದೆಣಿಸಲ್ಕೆ ತನ್ನ ದೇಗುಲದೊಳಗಲ್ತೆ ನೆಗಳ್ತೆವಡೆದಂ ಪ್ರಭುನಾರಣ ದಂಡನಾಯಕಂ॥ (**) ಗೋಪ್ಪುರ ಗದ್ದುಗೆ ವಾವಿಯನಗುಳಿಸಿದನಲ್ಲಿ

ಶಶಿಪಿಶಯದ ಯಶಂ ಶ್ರೀವಲ್ಲಭನಾ ವಂದಿತಂ ಭೂವಲಯಂ ದಂಡನಾಥ ನಾರಣದೇವಂ॥ ಆ ಮಹಾನುಭಾವನ ವಂಶಾವತಾರ ಮಂತೆಂದಡೆ ಕಮಲಭವ ವಂಶಜರೊಳುತ್ತಮ ಕಾಸಿಕಗೋತ್ರಜಾತರೊಳು(ಕಂವೆ) ಗಳೊಳ್॥ ವಿಮಳಪತಿ ನೃಪಚಮೂಪೋತ್ತಮನೆಸೆದಂ ನಾರಣಯ್ಯ ದಂಡಾಧೀಶಂ॥ ಕರಿಘಟೆ ಕೂಡೆ ನೂಂಕಿದಮವಾಜಿಗಳಿಂ ನಡತಂದ(ಗ)ಡಣಿಂ ಕರಕರದಿಂದ ವಡ್ಡಿ ನಡೆಗೊಟ್ಟವೊಲೆತ್ತಿ ಬರುತ್ತಲಿರ್ದ ವಾಸುರವೆನೆ ಬಪ್ಪ ಚಲ್ಲಣಿಗೆ ಚಿಲ್ಲಣಿಗೊಡ್ಡಿಪನಾವನೆಂಬೀ ಸಂಗರದೊಳಿದಿರ್ಚಿ ಗೆಲ್ದ ಸುಭಟಾಗ್ರಣಿ ಚಿದ್ದಣ ದಂಡನಾಯಕಂ॥ ಅಧಟಿಂ ಮಾರಾಂಪ ಗಾಂಪಂ ಬಿಸುಟು ಸಕವಿದಿಂಪೆಟ್ಟು ಪೋಯಿದಕ್ಕಟಾ ಸ್ಸಾಯದರಿಂ ವೀರಾರಿ ಸಾಮಂತರಿರ ಕದನದೊಳ್ ಚಿದ್ದಿ ದಂಡಾಧಿನಾಥ। ಗಿದಿರಾಗಲು ಮಾರಿಯೊಳ್ಮಾರ್ಮಲಿಯಲುರವಿದಿರ್ಚಲು ಮದೇಭೇಂದ್ರದೊಳ್ಬರ್ಪುದೆ ಕಾದಲ್ಕಾಲ್ದು ಕಾಲಾಂತಕನೊಳೆಲೆಲೆ ಚಾಮುಂಡಿಯೊಳ್ಚಿಲ್ಲ ವಾಡಲ್॥ ಭೂವಲಯಳ್ಕೆವಾಸಿಯ ಭುಜಾಸಿಯನಗ್ಗಿ ದಡೆಂನರೆಂನ್ನರೆಂದಾವ ತಗುಳ್ದು ಬಂದಡ ಪಲವಪ್ಪರಿದು ವಧೂಕ ದಂಬದೇ। ಕಾವಳಿಯಿಂದ ಪೊಂದದ ಕೊರಳ್ಮಣಿ ನೂಪುರವಿಲ್ಲದಂಘ್ರಿ ತಾಂ ಜೀವಿಗತಂ ನಿತಂಬರವಸಂ(ಸ)ಹರಿಬ್ರತ ಕರ್ಣ ಮಂಡಲಂ। ಪರಿದ ಕುರುಳ್ಸರಿಲ್ದ ತಲೆಜೊಲ್ದ ಕಳೇವರವಾಡುವಟ್ಟೆ ಕಾಲ್ಪುರವನೆ ಬಪ್ಪನೀ ತೆರ ಕಡಲ್ನಲಿದಾಡುವ ಭೂತಕೋಟಿ ಝೇಂ। ಕರಿಸುವ ಯೊ* ನೀವಿ****** ವಾದಡೇನ್ನಳಚ್ಚರಿಯೆನೆ ರುಂದ್ರ(ನಾಯಿತಂ) ಗೆಲ್ದಂ ರಣಂ ಕಲಿ ವಾಸುದೇವನುಂ॥ ಗುಣಗಣನಿಧಿಯೆನಿಸಿದ ನಾರಣ ದಂಡಾಧೀಶನರಸಿದ ಪರಿಜರಕ್ಷಾ।

ಮಣಿಯಿ(ದೇಂ) ಬುಧಚಿಂತಾ ಮಣಿ ಜಕ್ಕಣೋ(ದಿತ) ಕಮಲಮುಖಿ ಸೊಗಯಿಸಿದಳ್॥ ಅವಗೆ ಸಮುದ್ಭವಿಸಿದನು ತ್ಸವದಿಂ ವಿಭುಮಲ್ಲಿದೇವ ದಂಡಾಧೀಶ್ವರನಾ। ಭುವನನುತಂಗೆ ಮಹಾದೇವಿ ವಧೂತ್ತಮ ನೆಗಳ್ದ ಪುಣ್ಯವತಿ ಸತಿಯಾದಳ್॥ ಅವರ್ಗ್ಗೆ ತನೂಭವನಾದಂ ಭುವನಸ್ತುತ ಕೀರ್ತಿ ಪುಣ್ಯಮೂರ್ತಿ ಜಯಶ್ರೀ। ಭವನಖಿಳಗೋತ್ರ ಬುಧ ಬಾಂಧವ ಪರಿಜನ ಕಾಮಧೇನು ನಾರಣದೇವಂ॥ ಹರಿಗೆ ಸಿರಿ ಕಮಲಯೋನಿಗೆ ಸರಸ್ವತಿ ಪಶುಪತಿಗೆ ಗೌರಿ ಸತಿಯಪ್ಪುವೊಲಾ॥ ಪುರುಷಂಗೆ ಚಾರು ಬಿಂಬಾಧರ ನಾಗಲದೇವಿ ಚಿತ್ತವಲ್ಲಭೆಯಾದಳ್॥ ವರಗುಣನಿಧಿ ನಾರಣ ದೇವರಸಂಗೆ ತನೂಜರಾದರಮಳ ಯಶರ್ಮ। ಲ್ಲರಸಂ ತ್ರಿಪುರಂತಕರೆಂಬಿಬ್ಬರು ಮಿನಿಯಿಂದ್ರ ಚಾರು ಚರಿತ್ರರೊಗೆದರು॥

ನಾರಣದೇವನ ತಂಮ್ಮನು ದಾರ ಗುಣಂ ವಾಸುದೇವ ದಂಡಾಧಿಪನಾ ಚರದೊಳಗ್ಗಳ ಮನು ಗಂಭೀರದೊಳಾಶೂದ್ರಿಕಂಗೆ ಯೆಣೆಯನೆ ನೆಗರ್ದ್ದಂ॥ ಪದನರೆದಾಸೆದಪ್ಪಿಸದೆ ಬೇಳ್ಪರ ಬೇಳ್ಪುದನಿತ್ತು ಸದ್ಗುಣಾಪ್ಪದನೆನಿಸಲ್ಕೆ ತಂನ್ನ ಪೆಸರಂಗಳ ನಾರಣ ದಂಡನಾಥನೆಂ। ಬುದು ಶುಚಿಯೆಂಬುದೆ ಖಚರ ನಾಯಕನೆಂಬುದೆ ಚಾರುದಾ(*)ನೆಂಬುದೆ ಬಲಿಯಂಬುದೆ ರವಿತನೂಭಿವ ನೆಂಬುದೆ ಮಹತ್ವನೆಂಬುದೇ॥ ಪೊಗಳುತ್ತಿರ್ದ್ದರ್ಪ್ಪೆ ನಾರಾಯಣನಿರೆ ಪರರಂ ದಂಡನಾಥರ್ಕ್ಕಳಂ ವಾವಿಗಳಂ ವಾರಾಸಿಯಿರ್ದಂತರ ತರುಗಳಂ ಕಲ್ಪಭೂಜಾತವಿರ್ದಂ। ತಗಮಾಶ್ರಾಬ್ರಾತಮಂ ಮಂದರ

ಮಹೀಗತವಿರ್ದ್ದಂತೆ ಭಾಗ್ಯಕ್ಕೆ ಪಾರಂನ್ಯ ಗಜಾನೀಕಂಗಳ್ವಾಸರ ಮದಗಜಮಿರ್ದ್ದಂತಿರ್ದ ಮೂಢತ್ವದಿಂದಂ। ಯಿಂತೆನಿಸಿ ನೆಗರ್ದ್ದ ನಾರಾಯಣದೇವಂ ಎಂಬ ಉಲ್ಲೇಖವಿದೆ.

ಸ್ಥಳ: ಬಂದರವಾಡ — **ಆಳಿದ ದೊರೆ:** ತ್ರಿಭುವನಮಲ್ಲ ದೇವರು

ಕಾಲ: ಕ್ರಿ.ಶ.೧೧೧೮ — ಪ್ರಕಟಿತ: ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಸಂಸ್ಕೃತ — ಪು.: ೧೯

ಶಿವನ ಪ್ರಾರ್ಥನೆ, ಶ್ರೀಮತ್ ಚಾಲುಕ್ಯ ಕುಲಚೂಡಾಮಣಿ ಶರಣಾಗತ ವನಿಪಾಲಕ, ರಕ್ಷಾಮಣಿ, ಯಾಚಕಜನ ಚಿಂತಾಮಣಿ ನೃಪಚಕ್ರವರ್ತಿ ತೈಲಪದೇವ, ಮುನಿಸಿ ರಟ್ಟರ ಪಾಲಕರನ್ನ ಹುಡುಕಿ ಕೊಂದು ಸಿಂಹಾಸನ ತನ್ನ ಬಾಹುಬಲದಿಂದೆಳೆದುಕೊಂಡು ಮಹಾವೀರ ಭೂಪಾಲನ ಪುತ್ರ ಸತ್ಯಸತ್ಯಬ್ರತನೆನಿಸಿದ ಸತ್ಯಾಶ್ರಯೋರ್ವ್ವೀಶ್ವರನ ಮಗ ಶ್ರಿವಿಕ್ರಮಾಂಕ ತದನುಜುನತುಳೋತ್ಸಾಹಿ ಸಂದಯ್ಯಣಯ್ಯನ ಮಗ ಜಯಸಿಂಹನ ಮಗ ಜಯಕೆನಲ್ಲನಾಹವಮಲ್ಲನ ಮಗ ಸೋಮೇಶ್ವರ ತದನುಜಾತನ ಭೀತಂ॥ ತೃಕಳಿಂಗಾಧೀಶ ಧಾರಾಧರಲಯ ಪರ್ವ್ವಂಬೋಜ ಬೋಜ ಭೃತ್ತ ಮಸ್ತ್ರಿಕರ ರಾಜಾಧಿರಾಜ ದ್ರವಿಳಪತಿ ಪತಂಗ ಸ್ಫುರದೀಪನದ್ರೇಶ ಕುರುಂಗೇಶಾದಿ ಕಾಂಚೀದನುಜಮರ ಪುರದ್ವಂಶ ಕಂಭೋಜಾ****** ಕಾರಾಗಾರನಾಮಾಳವ ವಿಳಯಕರ ವೀರಪೇರ್ಮ್ಮಾಡಿದೇವ॥

ಜಯಕರ್ಣ ಕುಮಾರಣ್ಣ, ಪ್ರಿಯ ಸಚಿವಂ ಹಡಪವಳಂ, ನಯಮಾಗಿಂ, ನೀಲಕಂಠನೆದು ಧರೆಯೋಳ್॥ ಪ್ರಿಯವಾಕ್ಯ ಚಂದಿಮಯ್ಯಂ, ಜನಕನನುಪಮಾಜಾತಾಯ ಬಯಕ್ಕಂ, ಜಯಕರ್ಣ್ನ, ಸ್ವಾಮಿ ಮಹೇಶ್ವರೇ ಕೆಳಯರಾತಪ್ರದ್ಯೆವಂ (ಪು.ಸಂ.೧೯ ೧೪ನೆಯ ಸಾಲುಗಳವರೆಗೆ).

ಪಕಬ್ಬೆ ತನ್ನ ಮಗನಾದ ನೀಲಕಂಠಗೆ ಮುಕ್ತಿ ನಿಮಿತ್ತ ವೆರಗಿನ್ತು ಮಾಡಿಸುಗುವೆ ಸೋಮೇಶ್ವರ ವಾಸಮ॥ ಆ ಸೋಮೇಶ್ವರ ದೇವರ್ಗ್ಗೆ ಬೊಂದರವಾಡದಲು ಪೂರ್ವದಲಿ, ಬಿಟ್ಟ ನೆಲಂ ಕಾಲಡಿಯ ಮತ್ತರ್ಪ್ಪನ್ನೆರಡು, ಹೂದೋಟ ಒಂದು ಮತ್ತರು, ಗಾಣ ಒಂದು, ದಾನ ನೀಡಿದ ಉಲ್ಲೇಖವಿದೆ (ಪು.ಸಂ.೨೦. ೧೪–೧೭ನೆಯ ಸಾಲು).

ಶ್ರಿಮತ್ ತ್ರಿಭುವನಮಲ್ಲ ದೇವರು ಜಯಂತಿಪುರದಲ್ಲಿ ರಾಜ್ಯವಾಳುತ್ತಿದ್ದರು. ಇವರಿಗೆ ಶ್ರೀ ಪೃಥ್ವೀವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಪರಮಭಟ್ಟಾರಕ, ಸತ್ಯಾಶ್ರಯ ಕುಳತಿಳಕ, ಚಾಳುಕ್ಯಾಭರಣ ಎಂದು ಉಲ್ಲೇಖಿಸಲಾಗಿದೆ (ಪು.ಸಂ.೨೦. ೧೭–೧೮ನೆಯ ಸಾಲು).

ಯುವರಾಜನಾದ ಮಲ್ಲಿಕಾರ್ಜುನರ ಬಿರುದು/ಪ್ರಶಸ್ತಿಗಳಾದ ಭುವನವಿಖ್ಯಾತಂ, ಚಾಳುಕ್ಯಾನ್ವಯ ಪ್ರಸೂತಂ, ಭೂಪಮಾನ್ವಿತಂ, ರಿಪುರಾಯಕುವರ, ಬಂಗಾರ ಬೊಪ್ಪನಂಕಕಾರ, ರಾಮನೇಕ ಕಲಿ ಮಂನೆಯನಾಭಿರಾಮ, ಕಾಮಿತವಿಭುಜನನಯ್ಯನಸಿಂಗ, ಶರಣಾಗತ ವಜ್ರಪಂಜರಂ, ವೈರಿದಿಕ್ಕುಂಜರಂ, ಪದ್ಮನಾಳಗಿರಿ ವಜ್ರದಂಡಂ, ವಿಷಣರಾಯಕುವರ, ಜವದಂಡ, ಶ್ರೀಮತ್ರಿಭುವನಮಲ್ಲ ಪಟ್ಟ ಮಹಾದೇವಿರಣುಗಂ ಎಂದು ಉಲ್ಲೇಖಿಸಲಾಗಿದೆ(ಪು.ಸಂ.೨೦.೨೧–೨೪ನೆಯ ಸಾಲು).

ಮಹಾಸಾಮಂತಾಧಿಪತಿ, ಮಹಾಪ್ರಚಂಡ ದಂಡನಾಯಕ, ವಿಭುದವರದಾಯಕಂ, ಗೋತ್ರ ಪವಿತ್ರಂ, ಸುಜನೈಕ ಮಿತ್ರ, ವಿಪ್ರಾನ್ವಯ ಪ್ರಸೂತಂ, ಪರಿಜನ ಪಾರಿಜಾತಂ, ಶ್ರೀಮದ್‌ಯುವರಾಜ ಮಲ್ಲಿಕಾರ್ಜುನ ದೇವ ಪಾದಾರಾಧಕಂ, ಪರಬಲ ಸಾಧಕಂ ಎಂಬ ನಾಮಾದಿ ಹೊಂದಿರುವ ಶ್ರಿಮತ್ ದಂಡನಾಯಕ ಲಕ್ಷರಸ, ಬಿನ್ನಪದಿಂದ ಚಾಳುಕ್ಯ ವಿಕ್ರಮಕಾಲ ೩೦ನೆಯ ಸರ್ವಜೀತ ಸಂವತ್ಸರದ ಚೈತ್ರದಮಾಸೆ ಆದಿವಾರ ಸೂರ್ಯಗ್ರಹಣ ಕಾಲದಲ್ಲಿ ಬೊಂದರವಾಡ ಅಗ್ರಹಾರದ ಶ್ರಿ ಸೋಮೇಶ್ವರ ದೇವರ್ಗ್ಗೆ ದಾನ ಮಾಡಿದ ಉಲ್ಲೇಖ(ಪು.ಸಂ.೨೦. ೨೪-೨೮ನೆಯ ಸಾಲು).

ಅಲಂದೆ ಸಾಸಿರದ ಕಂಪಣವೆತ್ತಿ, ಗೌಣಪುರದ ಬಳಿಯ ಬಾಡಂ, ಹಸಿರುಗುಂಡಿಗೆಯ ತೆಂಕವಲದೋಳ, ಕೆಕ್ಕರಸಾವಳಿಗೆಯ ಮೊರದ ಸೀಮೆಯ ಪೂರ್ವದ ಬೆಟ್ಟದ ಮೂಡಲು ಬಟ್ಟೆಯ ನೆಲ ಕಾಲಡಿಯ ಐವತ್ತು ಮತ್ತರು ದಾನ ನೀಡಿದ ಉಲ್ಲೇಖ (ಪು.ಸಂ೨೧. ೨೯-೩೦ನೆಯ ಸಾಲು). ಸಿರರ ಕುಳಕುಮುದಿನಿ, ನರ್ಮಳ ಗುಣಸಾಹಸಗುಣ, ಬಳದಿವರ್ತಿಭೇವ, ಮನ್ನೆಯ ಬಳಿಹರಣ, ವೀರವೈರಿ ಮತ್ಸರ ಛೇದನ, ಮಹಾಮಂಡಳೇಶ್ವರ, ತಗರಪುರವರಾಧೀಶ್ವರ, ಸುವರ್ಣ ಗರುಡ ಧ್ವಜ, ವಿಮಳ ಕೀರ್ತಿಧ್ವಜ, ಮನ್ನೆಯ ಪ್ರಭು ಭಯಲೋಭ ದೂರ, ಕಾತ್ಯಾಯನಿಲಬ್ದವರ ಪ್ರಸಾದ, ದಾನವಿನೋದ ಬಿರುದುಗಳಿರುವ ಶ್ರಿಮನ್ ಮಹಾಮಂಡಳೇಶ್ವರ ಮನ್ನೆಯ ಗೊಂಕರಸರು ದೇವ ಭೂಮಿಯ ತಮ್ಮ ಮನ್ನೆಯ ಪ್ರತಿಬದ್ಧ ಧರ್ಮ ಮಾಡಿ ಮಹಾಗ್ರಹಣ ಕಾಲದಲ್ಲಿ ಸೋಮೇಶ್ವರ ದೇವರಿಗೆ ಧಾರಾಪೂರ್ವಕವಾಗಿ ಮಾಡಿಬಿಟ್ಟ ಉಲ್ಲೇಖವಿದೆ (ಪು.ಸಂ.೨೧. ೩೦-೩೫ನೆಯ ಸಾಲುಗಳು).

ಸ್ಥಾನ ಬ್ರಾಹ್ಮಣರ, ದೇವರ ಪೂಜಿಸುವರ್ಗೆ, ದೇವರ ಚೈತ್ರ ಪವಿತ್ರ, ದೇವರಂಗ ಭೋಗ, ಪೂಜೆ, ನೈವಿದ್ಯ, ಬಳ್ವರಂ, ಮಪ್ಪಬಲಮಂ, ಬಿಸಂಗೈದ ಬಿನ್ನಾಣಿ ಮಲ್ಲೋಜಂಗೆ ದೇವರ ಭೂಮಿಯೊಳು ೬ ಮತ್ತರು ಬಿಟ್ಟರು (ಪು.ಸಂ೨೧. ೩೮-೪೦ನೆಯ ಸಾಲುಗಳು).

ಶ್ರೀಮತ್ರಿಭುವನಮಲ್ಲ ದೇವರ ನಿತ್ಯ ಭೂಮಿ ದಾನವಗ್ರಹಾರ ಬಂದರವಾಡದ ಅಶೇಷ ಮಹಾ ಜನರು, ಸೋಮೇಶ್ವರ ದೇವರಿಗೆ ೧೨ಮತ್ತರು, ದಾನಬಿಟ್ಟರು (ಪು.ಸಂ.೨೧, ೪೨-೪೩ನೆಯ ಸಾಲು). ಮಹಾ ಪ್ರಧಾನ ದಂಡನಾಯಕ, ವಡ್ಡೆರಾವುಳ ಸುಂಕವೆರ್ಗ್ಗಡೆ, ತ್ರಿಪುರಾಂತ ಕೈಯಗಳ, ಬೆಸದಿಂದ ಅಲಂದೆ ಸಾಸಿರದ ಸುಂಕವೆರ್ಗಡೆ ಅಳಿಯ ವೈಜರಸರು, ಸೋಮೇಶ್ವರ ದೇವರಿಗೆ ಇಪ್ಪತ್ತು ಎತ್ತಿನ ವಡ್ಡರಾವುಳದ ಸುಂಕ ಬಿಟ್ಟರು(ಪು.ಸಂ೨೨. ೪೫-೪೬ನೆಯ ಸಾಲುಗಳು).

ಅಲಂದೆ ಸಾಸಿರದ ವೆರ್ಗಡೆ ಲಕ್ಷ್ಮರಸರಿಂದ ಕಂಚೆಯ ನಾಯಕರು ಪೆರ್ಜುಂಕದ ದೆಸೆಯಿ ಬಿಟ್ಟ ಎತ್ತು ಇರ್ಪ್ಪತ್ತೈದು॥ (ಪು.ಸಂ.೨೨. ೪೫-೪೬). ಶ್ರಿಮನ್‌ಮಹಾಮಂಡಳೇಶ್ವರ ಕೋವಣಸರ ಬೆಸದಿಂದ ಹಡವಳ ಗೋಪನಯ್ಯರು ಇಪ್ಪತ್ತೈದೆತ್ತಿನವಿಲು ಕೊಡೆಯ ಸುಂಕವ ಬಿಟ್ಟರು (ಪು.ಸಂ.೨೨. ೪೭-೪೮ನೆಯ ಸಾಲುಗಳು).

ಬೃಹಸ್ಪತಿವಾರದಂದು ಶ್ರೀಮತ್ರಿಭುವನಮಲ್ಲ ದೇವರ ಆಳ್ವಿಕೆಯ ಕಾಲದಲ್ಲಿ ಅಗ್ರಹಾರ ಬೊಂದರವಾಡದ ಮಹಾಜನಗಳು, ದ್ವಿಜ ಪ್ರಭುಗಳು ಸೋಮೇಶ್ವರ ದೇವರ ಚೈತ್ರ ಪವಿತ್ರಕ್ಕೆ ******* ಪರಿಸೂತ್ರದ ಮೂಡ ಬಿದ್ದನೂರ ಬಟ್ಟೆಯ ತೆಂಕಲು, ಗೋಬ್ಬೂರ ಬಟ್ಟೆಯ ಹಳ್ಳದಿಂದ ಬಡಗ ಗೋದುಲೆವಾಡ ೨ಮತ್ತರು, ಆ ಹಳ್ಳದಿಂ ಬಡಗ ೨, ೧ಮತ್ತರು ಹೂದೋಟ ಒಟ್ಟು ಹದಿನೈದು ಮತ್ತರು ಸೋಮನಾಥ ದೇವರಿಗೆ ದಾನ ಬಿಟ್ಟ ಉಲ್ಲೇಖವಿದೆ(ಪು.ಸಂ.೨೨. ೪೯-೫೫ನೆಯ ಸಾಲುಗಳು).

ಸ್ಥಳ: ಬಂದರವಾಡ
ಆಳಿದ ದೊರೆ: ರಾಯಮುರಾರಿ ಸೋವಿದೇವ
ಕಾಲ: ಕ್ರಿ.ಶ.೧೧೭೪
ಪ್ರಕಟಿತ: ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
ಭಾಷೆ: ಕನ್ನಡ
ಪು.: ೨೫

ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀವಲ್ಲಭ, ಕಾಳಾಂಜರ ಪುರವರಾಧೀಶ್ವರ, ಸುವರ್ಣ ಗರುಡಧ್ವಜ, ಡಮರುಗ ತೂರ್ಯ್ಯ ನಿರ್ಘೋಷಣ, ಕಳಚೂರ್ಯ ಭುಜಬಲ ಪ್ರತಾಪ ಚಕ್ರವರ್ತಿ ರಾಯಮುರಾರಿ ಸೋವಿದೇವರಸರು ಕೋಪಣಪುರದಲ್ಲಿ ರಾಜ್ಯವಾಳುತ್ತಿದ್ದರು.

ಮಹಾಮಂಡಳೇಶ್ವರ ವೀರ ಆಹವಮಲ್ಲ ದೇವರ *****ವತ್ತಿ ನೂರೆಂಭತ್ತರ ಪೆರ್ಗ್ಗಡೆ ದಂಡನಾಯಕ ಗೋವಿಂದ ದೇವರಸರು ಎಂದು ಉಲ್ಲೇಖಿತವಾಗಿದೆ (ಪು.ಸಂ.೨೫.೫-೭ನೆಯ ಸಾಲು). ಚಿಣಬಗೇರೆಯ ತೆಂಕವಲವತ್ತಿನೂರ ಕೋಟೆಯ ದ್ವಾರ, ಗಾಣಗಾಪುರ ಸೋಮನಾಥ ದೇವರ ರಂಗಭೋಗ, ಪೂಜೆ, ನೈವಿದ್ಯಕ್ಕೆ ೬೦ ಮತ್ತರು ಬಿಟ್ಟರು(ಪು.ಸಂ.೨೫. ೮-೧೦ನೆಯ ಸಾಲು).

ಸ್ಥಳ: ಬಿಂಗೋಳಿ
ಆಳಿದ ದೊರೆ: ತ್ರಿಭುವನಮಲ್ಲ ದೇವರು
ಕಾಲ: ಕ್ರಿ.ಶ.೧೦೭೮
ಪ್ರಕಟಿತ: ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
ಭಾಷೆ: ಕನ್ನಡ
ಪು.: ೨೪-೨೫

೧ನೆಯ ಮುಖ-ಸಮಸ್ತ ಭುವನಾಶ್ರಯ, ಶ್ರೀ ಪೃಥ್ವಿವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಚಾಳುಕ್ಯಾಭರಣ ಶ್ರೀಮತ್ ತ್ರಿಭುವನ ಮಲ್ಲದೇವರು ಜಯಂತಿಪುರದಲ್ಲಿ ಆಳ್ವಿಕೆ ಮಾಡುತ್ತಿರುವ ಉಲ್ಲೇಖವಿದೆ(ಪು.ಸಂ.೨೪. ೧-೯ನೆಯ ಸಾಲುಗಳು).

೨ನೆಯ ಮುಖ-ಕುರುಬರ ಬಕ್ಕಯ್ಯ, ಸೋವಿಮಯ್ಯ, ಮುದ್ದಯ್ಯ, ಈ ನಾಲ್ವರು ನೀಲಕಂಠೇಶ್ವರ ಪ್ರತಿಷ್ಠೆ ಮಾಡಿ ೩೨ಮತ್ತರು ಬಿಟ್ಟರು. ತೋಟದ ನಾಗರಬಾವಿ ಬಡಗಣ ತಡೆಯದೆ, ಗುಲವೊಳಗಾಗಿ ಒಂದು ಮತ್ತರು, ಮೂವತ್ತು ದೇಶಂ ಪುತ್ತರು ಕೈಯ ೮ ಮತ್ತರು, ತ್ರುಟಿತ.(ಪು.ಸಂ.೨೪.೧೦-೨೪ನೆಯ ಸಾಲು). ೨ ದ್ರಮ್ಮ, ೪ ಕೆಯಿ ಎಂದು ಉಲ್ಲೇಖಿತವಾಗಿದೆ(ಪು.ಸಂ.೨೫. ೩೬ನೆಯ ಸಾಲು) ಉಳಿದ ಭಾಗ ತ್ರುಟಿತ.

ಸ್ಥಳ: ಬೆಳಂಬಿಗೆ | ಆಳಿದ ದೊರೆ: ಚಾಳುಕ್ಯ ವಿಕ್ರಮ
ಕಾಲ: ಕ್ರಿ.ಶ. ೧೧೯೩ | ಪ್ರಕಟಣೆ: ಹೈ.ಕ.ಭಾ.ಕ.ಶಿ.ಶಾ, ೧೯೯೨
ಭಾಷೆ: ಕನ್ನಡ | ಪು.: ೧೨೦-೧೨೧

ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪೃಥವಿ ವಲ್ಲಭಂ, ಮಹಾರಾಜಾಧಿರಾಜ ಪರಮೇಶ್ವರಂ, ಪರಮಭಟ್ಟಾರಕಂ, ಸತ್ಯಾಶ್ರಯ ಕುಲ ತಿಲಕಂ, ಚಾಳುಕ್ಯಂಭರಣಂ ಶ್ರೀಮತ್ರಿಭುವನಮಲ್ಲ ದೇವರು। ಎಂಬ ಪ್ರಶಸ್ತಿ ವಿವರಣೆಯಿದೆ. ಶ್ರೀಮಚ್ಚಾಳುಕ್ಯ ವಂಶ ಶಿಖಾಮಣಿ ವಿಪ್ರ ಚಿಂತಾಮಣಿ ಸೋಮರಸಂ ಆಲಂದೆ ಪುಟಜಂ ಪಾಲಿಸಿ ತತ್ರಮಾರಾಜಧಾನಿಗೆ ನೆಗಳ್ದಂಗಲ ದೇವಿ ರಾಮನಸತಿಗಂ ನೆಗರ್ತೆಯಿಂ ಮಹಾ ಮಹಿಮೆಯಿಂ ನಳನ ವಧುಗಂ ಮಾ ದ್ರೌಪದಿಗಂ ಪಾಸಟಿಯೆನಿಸಿ ನೆಗಳ್ದಂಗಲ ದೇವಿಯರ ತ್ರೈಪುರಷ ದೇವರ್ಗ್ಗೆ ದೇವಾಲಯಂ ಮಾಡಿಸಿಯಾ ದೇವರ ಖಂಡಸ್ಫಾದಿತ ಜೀರ್ಣೋದ್ದಾರಕಂ ಪೂಜಾರಿಗಂ ಸರ್ವನಮಶ್ಯವಾಗಿ ಶ್ರೀಮಚ್ಚಾಳುಕ್ಯ ವಿಕ್ರಮ ವರುಷದ ೧೭ ಯಾಂಗೀರಸ ಸಂವತ್ಸರದ ವುತ್ತರಾಯಣ ಸಂಕ್ರಾಂತಿಯಂದು ಶ್ರೀಮದೆಂಗಲದೇವಿಯರು ಬೆಳ್ಳಂಬಿಗೆಯ ಪ್ರಭು ವಡೆಯರ ಸಂಮತದಿಂ ತಂಮ ಕೇಯ ಸಾಂಮ್ಯದೊಳಗೆ ಧಾರಾಪೂರ್ವಕವಾಗಿ ಮಾಡಿ ಯಿ ದೇವರ್ಗ್ಗೆ ಕೊಟ್ಟ ಕಾಲ ಮತ್ತರು ಪಂನೆರಡು। ನೈವಿದ್ಯಕ್ಕಂಯುಂಬ ತೊಂಟ ಮತ್ತರೊಂದು। ನಾಯ್ಯರಸರ ಸಾಂಮ್ಯದೊಳಗಾಗಿ ಧಾರಾಪೂರ್ವಕಂ ಮಾಡಿಯಾ ದೇವರ್ಗ್ಗೆ ಕೊಟ್ಟ ಕಾಲ ಮತ್ತರು ಅಯಿದು। ಅಂತು ಮತ್ತರು ಪದಿನೆಂಟರೊಳಗೆ ನಂದಾದೀವಿಗೆಗೆ ಮತ್ತರು ೫ ದೇವರ ನೈವೇದ್ಯಕ್ಕೆ ಮತ್ತರು ೩ ಪೂಜಾರಿಗೆ ಮತ್ತರು ೧೦ ಯಿಂತಿನಿತುಂ ಸರ್ವಬಾಧಾ ಪರಿಹಾರಮಾಗೆ ವಾರಾಣಾಸಿ ಕುರುಕ್ಷೇತ್ರದೊಳಗೆ ಬ್ರಾಹ್ಮಣರುಮಂ ಸಹಸ್ರ ಕಪಿಲೆಯುಮಂ ರಕ್ಷಿಸಿದ ಫಲಂ। ಯಿದ ಕೆಡಿಸಿದವರ್ಗ್ಗೆ ಅನಿತುಮಂ ಕೊಂದ ದೋಷಂ॥ ಶಾಪಾಶಯವಿದೆ. ಎಂಗಲದೇವಿ, ಬೆಳ್ಳಂಬಿಗೆಯ ಪ್ರಭು ದಾನ ನೀಡಿದ ಉಲ್ಲೇಖವಿದೆ.

ಸ್ಥಳ: ಮಡಿಹಾಳ್ | ಆಳಿದ ದೊರೆ: ಚಾಲುಕ್ಯ ದೊರೆ ತ್ರಿಭುವನಮಲ್ಲ?
ಕಾಲ: ಸು.೧೨ನೆಯ ಶತಮಾನ | ಪ್ರಕಟಿತ: ಸಾಧನೆ.ಸಂ-೨,ಸಂಚಿಕೆ-೧-ಕ್ರಿ.ಶ.೧೯೭೩
ಭಾಷೆ: ಕನ್ನಡ | ಪ್ರ.ಸಂ.: ಡಾ. ಜಿ.ಎಸ್. ಶಿವರುದ್ರಪ್ಪ
ಪು.: ೪೬-೪೭

ಮಡಿಹಾಳ ಗ್ರಾಮದ ಶಂಕರಲಿಂಗ ದೇವಾಲಯದ ಮುಖಮಂಟಪದ ಒಂದನೆಯ ಕಂಬದ ಮೇಲೆ ಕ್ರಿ.ಶ.೧೧೮೪ರ ಶಾಸನ ಹೀಗಿದೆ-ಸ್ವಸ್ತಿ ಶ್ರೀಮತ್ ಚಾಳುಕ್ಯ ಚಕ್ರವರ್ತಿ ತ್ರಿಭುವನಮಲ್ಲ ಸೋಮೇಶ್ವರ ದೇವ ವರ್ಷದ ಮೂರನೆಯ ಕ್ರೋಧಿ ಸಂವತ್ಸರದ ಆಶ್ವಯುಜ ಸುಧ ೧೪ ಸೋಮವಾರ ಬ್ಯತೀಪಾತದಂದು ಶ್ರೀಮನು ಮಹಾಪ್ರಧಾನಂ ರಾಯದಂಡನಾಥ ಗಂಡಪೆಂಡಾರ ಚಾಳುಕ್ಯ ರಾಜ್ಯ ಸಮುದ್ಧರಣ ಶ್ರೀಮತು ಚಾವಣಯ್ಯ ದಂಡನಾಯಕರುಂ ಚಂದಲ ದೇವಿಯುಂ ಕುಮಾರ ಪದ್ಮರಸ ದಂಡನಾಯಕರುಂ ಮನ್ನೆಯ ಮಲ್ಲಿದೇವರಸರು ಪ್ರಭುಗಳುಂ ಶ್ರೀಮತು

ಮಾಡಿಫಳದ ಶ್ರೀ ಸ್ವಯಂಭು ಕೋಟ ಶಂಖರ ದೇವರ್ಗ್ಗೆ ಸೂಳೆಗೇರಿಯ ಭೂಮಿಯುಂ ಆ ದೇವರ ಪುರದಲು ದಂಡದೋಷ ಮಡಿವಳ ಬಡಗಿ ಸಿಪ್ಪಿಗ ಕಂಮ್ಮರ ಇನಿತುಮಂ ಸರ್ವ್ವಬಾಧಾಪರಿಹಾರವಾಗಿ ಧಾರಾಪೂರ್ವ್ವಕಂ ಮಾಡಿಕೊಟ್ಟರು.

ಅದೇ ಕಂಬದ ಇನ್ನೊಂದು ಮುಖದ ಮೇಲೆ-ಕ್ರಿ.ಶ.೧೨೪೧

ವಿವರಣೆ- ಶ್ರೀಮತು ಚಿಕ್ಕಯನ ಕಲ್ಲಯ ಕ್ರೋಧಿ ಸಂವತ್ಸರದ ಜೇಷ್ಟ ಶುಧ ಸೋಮವಾರ ಅಮವಾಸೆಯಲು ಶ್ರೀ ಸ್ವಯಂಭು ಮಾಡಿಫಳದ ಕೋಟಿ ಸಂಖರ ದೇವರಿಗೆ ಹ(ಪ್ರ)ಭು ಮುಖವಾಗಿ ಮೇಲಾಳಿಕೆಯ ಕೆಯಲು ಹೊಂಗ್ಗೊಟ್ಟು ಹೂದೋಂಟವಂ ಕೊಂಡು ಸಂಖರ ದೇವರಿಗೆ ಚಿಕ್ಕಯ್ಯನ ಕಲ್ಲಯ ದೇವರಿಗೆ ಕೊಟ್ಟ॥ ಮಂಗಳ ಮಾಹಾ ಶ್ರೀ ಶ್ರೀ

ಅದೇ ದೇವಸ್ಥಾನದ ಮುಖಮಂಟಪದ ಎರಡನೆಯ ಕಂಬದ ಮೇಲೆ- ಕಾಲ:-೧೨ನೆಯ ಶತಮಾನ.

ವಿವರಣೆ:-ಶ್ರೀಮತ್ಸರ್ವ್ವೇಶ್ವರ ದೇವರು ಕೊಂಡಜೀಯನಿಂ ಪ್ರಭುಂ ಮುಖ್ಯವಾಗಿ ಪೊಂಗೊಟ್ಟು ಕೊಂಡ ವೆಳಸಂಗವಿಯ ದಾರಿಯಂ ತೆಂಕಲು ಕಾಲಮತ್ತರು ೩೦ರೋಳಗೆ ಹಿಟ್ಟರ್ದ್ಧವಂ ಕಳೆದುಳಿದ ಮೂಡಣ ಮತ್ತರು ೧೫ ವಂ ದೇವಿಗೆರೆಯ ಜರಿದೇರಿಯಂ ಕಟ್ಟಲು ಹೊಕ್ಕ ಮಣ್ಣಂ ಕಳೆಯಲು ಕೊಟ್ಟರು.। ಪರಮ ಶ್ರೀವರನಾಸುರೇಶ್ವರ ಮುನೀಂದ್ರಂ ಮಂಡಳೀಕಂ ಗುಣೋತ್ಕರನಪ್ಪಾಹವಮಲ್ಲ ಮಾಡಿಫಳದಾಚಾರ್ಯಂ ಧ್ರುವೇಶ ಬ್ರತೀಶ್ವರ ಗ್ಗಿ(ಗಿ)ತ್ರರ್ದ್ದರಣೀ ತಳಂ ನಿಲುವಿನಂ ದಾರೇಶ್ವರಂ ದೇವಣೇಶ್ವರವನಾನಕರೇಶ್ವರಂ ಪದಪಿನಿಂ ಭೋಗೇಶ್ವರ ಸ್ಥಾನವಂ॥ ವೇಳುಗ್ರಾಮೆಯ ಭೂಷಣೇಶ್ವರದ ಸ್ಥಾನವೀ ಸಮ್ಮದಿ.

ಸ್ಥಳ: ಮಡಿಹಾಳ್ **ಆಳಿದ ದೊರೆ:** ?
ಕಾಲ: ಸು.೧೨ನೆಯ ಶತಮಾನ **ಪ್ರಕಟಿತ:** ಸಾಧನೆ.ಸಂ-೨,ಸಂಚಿಕೆ-೧-ಕ್ರಿ.ಶ.೧೯೭೩
ಭಾಷೆ: ಕನ್ನಡ **ಪ್ರಸಂ.:** ಡಾ. ಜಿ.ಎಸ್. ಶಿವರುದ್ರಪ್ಪ
ಪು.: ೪೮-೫೦

ವಿವರಣೆ:-ಶಿವಧರ್ಮ್ಮಾಂಭೋಧಿ ವಾದೀಶ್ವರ ಮುನಿಪತಿ ಶಿಷ್ಯಂ ಗುಣಾಂಭೋಧಿ ಚಂದ್ರಂ ಶಿವಪಾದಾಂಭೋಜಭಾವಂ ವಿಬುಧವಿನುತ ಸರ್ವ್ವೇಶ್ವರಂ ತತ್ಸುತಂ ಭೂಭುವನಸ್ತುತ್ಯಂ ಧ್ರುವೇಶಂ ನೆಗಳ್ದ ಮುನಿಪ ಶಿಷ್ಯಂ ವಿವೇಕಾಸ್ಪದಂ ಜ್ಞಾನ ವಿಳಾಸಂ ಸರ್ವ್ವ ಶಾಸ್ತ್ರಾಗಮ ಜಳನಿಧಿ ಸರ್ವ್ವೇಶ್ವರಾಚಾರ್ಯ್ಯ ದೇವಂ॥ ತಂನಿಂದಂ ಶಿವಧರ್ಮ್ಮವದುನ್ನತವಾಯ್ತೆನಿಸಿ ಕೋಟಿಶಂಕರ ದೇವಾಸಂನ್ನಮೆನೆ ಬಾವಿ ಜಲ ಸಂಪಂನ ತಡಾಗವೆನನೂವೆನೆ ನಿರ್ಮ್ಮಿಸಿದಂ॥ ಪಿರಿಯ ನೆಗಳ್ದ ಸರ್ವ್ವೇಶ್ವರನ ಗುಣಂಗಳನ ಕೇಳ್ದು ತಲೆದೂಗದೆ ಪೆರ್ವ್ವರಲಿಂ ಮಿಡಿಯದ ಪುಳಕಾಂಕುರವೊಗೆಯದ ವಿಬುಧರೊಳರೆ ಸಕಳಾವನಿಯೊಳು॥ ದೇವರ ಕೇರಿಯ ವೊಕ್ಕಲ ಆವಟಮಂತರಿಕೆ ತಿಪ್ಪೆ ಸುಂ(ಕ) ನಂದಾದೀವಿಗೆಗೆ ಗಾಣವಾಯಿಲೆಮಂ ಮತ್ತರಿಂಗೆ............

ಅದೇ ಮುಖಮಂಟಪದ ನಾಲ್ಕನೆಯ ಕಂಬದ ಮೇಲೆ– ಕ್ರಿ.ಶ.೧೨ನೆಯ ಶತಮಾನ.

ವಿವರಣೆ:–ಶ್ರೀ ಶಂಕರ ದೇವರ ಹೊಲಕೇರಿಯಲ್ಲಿ ಹುರಿಕಾದ ಆವಟ ಮಂತರಿಕೆ ಗಾಣಾಯಿಲೆ ತಿಪ್ಪೆಸುಂಕ ಸರ್ವ್ವನಮಸ್ಯ ಒಂದು ಹೇರುವ ಒಕ್ಕಲುಂ ಎಂದಿದೆ.

ಅದೇ ಕಂಬದ ಇನ್ನೊಂದು ಮುಖದ ಮೇಲೆ– ಕ್ರಿ.ಶ೧೩ನೆಯ ಶತಮಾನ.(ಈ ಶಾಸನದ ಬಲ ಪಾರ್ಶ್ವ ಒಡೆದು ಹೋಗಿದೆ) ಕೇಸಿಮರಸನ ತೋಟದಿ(ಬಡ)ಗಲು ಕಾಲಡಿಯ ಮತ್ತ, (ಪ್ರ)ಭುಗಳುಂ, ಮಲ್ಲಯ ಸಾ(ಹ)ಣಿಯುಂ ಸರ್ವ್ವನಮಸ್ಯ(ವಾ)ಗಿ ಬಿಟ್ಟರು.

ಅದೇ ಗ್ರಾಮದ ಲಕ್ಷ್ಮೀದೇವಿ ದೇವಸ್ಥಾನದ ಮುಂದೆ ಇರುವ ಒಂದು ಕಲ್ಲು– ಕ್ರಿ.ಶ.೧೩ನೆಯ ಶತಮಾನ.

ವಿವರಣೆ:–ಮಠದ ಪರಿಸೂತ್ರದಿಂ ಮೂಡ ನೀಳಕ್ಕೆ ೨೦. ಅಗಲ೧೫ ಸತ್ರದ ಮನೆಯದರ ಕೆಯಿ ಸಿರಿಊರ ತೆಂಕನುಣಿಗೆಯ ಹಾಡ ಗೋಣುಂ ೩೨ರ ಕಾಲಮತ್ತ ೪೦ ಮತ್ತಾ ಸತ್ರಕ್ಕೆ ತಿಪ್ಪೆ ಸುಂಕ...... ಮಾರ ಹೇರಂಮ್ಮನ ೧(೬) ಅಡಕೆ ೫ ಯೆಲೆ ೨೫ ಮಡಕೆ ೧ ಎಳೆಯಾರವೆಯ ಹಳ ದೊಳಗೆ ಮಾಊ ೩ ಆರ್ವ್ವೆಲ್ಲದಸೆ(ಳ್ಳ) (೧)ರೊ(ಳಗೆ) ಸೆ(ಳ್ಳು)೧೨

ದತ್ತಿ ಶಾಸನ–

ಅದೇ ಗ್ರಾಮದಲ್ಲಿ ಮಾಲಿ ಪಾಟೀಲ್ ಮಲಕಪ್ಪನವರ ಮನೆಯ ಮುಂದಿರುವ ಕಲ್ಲು– ಕ್ರಿ.ಶ.೧೩ನೆಯ ಶತಮಾನ.

ವಿವರಣೆ:– ಶ್ರೀಶಂಕರ ದೇವರಿಗೆ ನಾಯಕ ನಾರಾಯನ ಲಕ್ಷ್ಮಿ(ದೇವ)ನ ರಾಯಬಡಿ (ಕಾ)ರವಾಯಿದೇವನ ಬಿನಪದಿಂ ಪರಮೇಶ್ವರ ದತ್ತಿ.

ಸ್ಥಳ: ಮಡಿಹಾಳ **ಆಳಿದ ದೊರೆ:** ತ್ರಿಭುವನಮಲ್ಲ ಸೋಮೇಶ್ವರದೇವ
ಕಾಲ: ಕ್ರಿ.ಶ.೧೧೮೪ **ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
ಭಾಷೆ: ಕನ್ನಡ **ಪು.:** ೬೨

ತ್ರಿಭುವನಮಲ್ಲ ಸೋಮೇಶ್ವರ ದೇವ ಆಳ್ವಿಕೆ ಕಾಲದಲ್ಲಿ ಸೋಮವಾರ ಮಹಾಪ್ರಧಾನ ರಾಯದಂಡನಾಥ ಗಂಡಪೆಂಡಾರ ಚಾಳುಕ್ಯ, ರಾಜ್ಯಸಮುದ್ದರಣ ಶ್ರಿಮತ್ ಚಾವಣಯ್ಯ ದಂಡನಾಯಕರು, ಚಂದಲದೇವಿಯು, ಕುಮಾರ ಪದ್ಮರಸ ದಂಡನಾಯಕರು, ಮನ್ನೆಯ ಮಲ್ಲಿದೇವರಸರು, ಪ್ರಭುಗಳು, ಮಾಡಿಫಳದ ಸ್ವಯಂಭು ಕೋಟಿಶಂಕರ ದೇವರ್ಗ್ಗೆ ಸೂಳೆಗೇರಿಯ ಭೂಮಿಯು ಆ ದೇವರ ಪುರದಲು ದಂಡದೋಷ ಮಡಿವಳ, ಬಡಗಿ, ಸಿಪ್ಪಿಗ, ಕಮ್ಮಾರ, ಇನಿತುಮಂ ಸರ್ವ್ವಭಾಧಾಪರಿಹಾರವಾಗಿ ಧಾರಾಪೂರ್ವಕವಾಗಿ ಮಾಡಿಕೊಟ್ಟರು(ಪು.ಸಂ.೬೨, ೧–೧೩ನೆಯ ಸಾಲು).

ಸ್ಥಳ: ಮಡಿಹಾಳ ಆಳಿದ ದೊರೆ: ?

ಕಾಲ: ಕ್ರಿ.ಶ.೧೨೪೧ ಪ್ರಕಟಿತ: ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ ಪು.: ೬೩

ಶ್ರೀಮತ್ ಚಿಕ್ಕಯನ ಕಲ್ಲಯ ಕ್ರೋಧಿ ಸಂವತ್ಸರದ ಜೇಷ್ಠ ಶುಭ ಸೋಮವಾರ ಸ್ವಯಂಭು ಮಾಡಿಫಳದ ಕೋಟ ಶಂಕರದೇವರಿಗೆ ಹ(ಪ್ರ)ಭು ಮುಖ್ಯವಾಗಿ ಮೇಲಾಳಿಕೆಯ ಕೆಯಲು ಹೊಂಗೊಟ್ಟು, ಹೂದೋಟ ಕೊಂಡು ಸಂಖರ ದೇವರಿಗೆ ಚಿಕ್ಕಯ್ಯನ ಕಲ್ಲಿಯ ದೇವರಿಗೆ ಕೊಟ್ಟ(ಪು.ಸಂ.೬೩.೧–೮ನೆಯ ಸಾಲು).

ಸ್ಥಳ: ಮಡಿಹಾಳ ಆಳಿದ ದೊರೆ: ?

ಕಾಲ: ಕ್ರಿ.ಶ.೧೨ನೆಯ ಶತಮಾನ **ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ ಪು.: ೬೫

ಶಿವಧರ್ಮ್ಮಾಂಭೋಧಿ ವಾದೀಶ್ವರ ಮುನಿಪತಿ ಶಿಷ್ಯಂ, ಗುಣಾಂಭೋಧಿ, ಚಂದ್ರ, ಶಿವಪಾದಾಂಭೋಜ ಭಾವ, ವಿಭುಧ ವಿನುತ ಸರ್ವೇಶ್ವರಂ, ತತ್ಸುತಂ ಭೂಭುವನ ಸ್ತುತ್ಯಂ, ಧ್ರುವೇಶಂ ನೆಗಳ್ದ, ಮುನಿಪ ಶಿಷ್ಯ, ವಿವೇಕಾಸ್ಪದ, ಜ್ಞಾನ, ವಿಳಾಸಂ, ಸರ್ವ ಶಾಸ್ತ್ರಾಗಮ ಜಳನಿಧಿ ಸರ್ವ್ವೇಶ್ವರಾಚಾರ್ಯದೇವಂ.–ತನ್ನಿಂದ ಶಿವ ಧರ್ಮದುನ್ನತಿ ಆಯಿತೆನಿಸಿ ಕೋಟಿಶಂಕರ ದೇವಸಂನ್ನ ಮೆನೆ ಬಾವಿಜಲ ಸಂಪನ, 'ತಡಾಗವೆನನೂವೆನೆ' ನಿರ್ಮಿಸಿದ.

ಹಿರಿಯ ನೆನೆನೆಗಳ್ದ ಸರ್ವೇಶ್ವರನ ಗುಣಂಗಳನೆ ಕೇಳ್ದು ತಲೆದೂಗದೆ ಪೆರ್ವ್ವರಲಿಂ ಮಿಡಿಯದ ಪುಳಕಾಂಕುರವೊಗೆಯದ ವಿಭುಧರೊಳಗೆ ಸಕಳಾವನಿಯೊಳು, ಗಾಣವಾಯಿಲೆಯಂ. ಮತ್ತರಿಂಗೆ** ತ್ರುಟಿತ(ಪು.ಸಂ.೬೫. ೧–೧೫ನೆಯ ಸಾಲು).

ಸ್ಥಳ: ಮಡಿಹಾಳ ಆಳಿದ ದೊರೆ: ಕಲ್ಯಾಣ ಚಾಲುಕ್ಯರು?

ಕಾಲ: ಕ್ರಿ.ಶ.೧೨ನೆಯ ಶತಮಾನ **ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ ಪು.: ೬೬

ಶ್ರೀ ಶಂಕರ ದೇವರ ಹೊಲಕೇರಿಯಲ್ಲಿ ಹುರಿಕಾಯ, ಆವಟ ಮಂತರಿಕೆ, ಗುಣಾಯಿಲೆ, ತಿಪ್ಪೆಸುಂಕ, ಸರ್ವನಮಸ್ಯ ಒಂದು ಹೇರುವ ಒಕ್ಕಲುಂ (ಪು.ಸಂ.೬೬. ೧–೫ನೆಯ ಸಾಲು).

ಸ್ಥಳ: ಮಡಿಹಾಳ ಆಳಿದ ದೊರೆ: ಕಲಚೂರಿಗಳು?

ಕಾಲ: ಕ್ರಿ.ಶ.೧೩ನೆಯ ಶತಮಾನ **ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ ಪು.: ೬೭

ಕೇಸಿಮರಸನ ತೋಟದ ಬಡಗಲು ಕಾಲಡಿಯ ಮತ್ತ ಪ್ರಭುಗಳು, ಮಲ್ಲಯ್ಯ ಸಾಹಣಿಯು ಸರ್ವನಮಸ್ಯವಾಗಿ ಬಿಟ್ಟರು(ಪು.ಸಂ.೬೭. ೧–೫ನೆಯ ಸಾಲು).

ಸ್ಥಳ: ಮಡಿಹಾಳ **ಆಳಿದ ದೊರೆ:** ಕಲಚೂರಿಗಳು?

ಕಾಲ: ಕ್ರಿ.ಶ.೧೩ನೆಯ ಶತಮಾನ **ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ **ಪು.:** ೬೮

ಮಠದ ಪರಿಸೂತ್ರದಿಂದ ಮೂಡ ನೀಳಕ್ಕೆ ೨೦ಅಗಲ, ೧೫ಸತ್ರದ ಮನೆಯದರ ಕೆಯಿ ಸಿರಿಊರ ತೆಂಕನುಣಿಗೆಯ ಹಾಡ ಗೋಣಂ ೩೨ರ ಕಾಲಮತ್ತ ೪೦ ಮತ್ತ ಸತ್ರಕ್ಕೆ ತಿಪ್ಪೆಸುಂಕ*** ಮಾರಿ ಹೇರೆಂಮ್ಮನ೧(೬). ಅಡಕೆ ೫, ಎಲೆ೨೫, ಮಡಕೆ೦೧ ಎಳೆಯಾರವೆಯ ಹಳದೊಳಗೆ ಮಾಉ೦೩, ಆರ್ವಲ್ಲದಸೆ(ಳ)(೧) ರೋ(ಳಗೆ) ಸೆ(ಳ್ಳು)೧೨ (ಪು.ಸಂ.೬೮. ೧-೧೨ನೆಯ ಸಾಲು).

ದತ್ತಿ ಶಾಸನ

ಸ್ಥಳ: ಮಡಿಹಾಳ **ಆಳಿದ ದೊರೆ:** ಕಲಚೂರಿಗಳು?

ಕಾಲ: ಕ್ರಿ.ಶ.೧೩ನೆಯ ಶತಮಾನ **ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ **ಪು.:** ೬೯

ಶ್ರೀ ಶಂಕರ ದೇವರಿಗೆ ನಾಯಕ ನಾರಾಯಣ ಲಕ್ಷ್ಮಿ(ದೇವ)ರಾಯಬಡಿ(ಕಾ)ರ ವಾಯಿದೇವನ ಬಿಂನಪದಿಂ ಪರಮೇಶ್ವರ ದತ್ತಿ(ಪು.ಸಂ.೬೯.೧-೭ನೆಯ ಸಾಲು).

ಸ್ಥಳ: ಮಣ್ಣೂರು **ಆಳಿದ ದೊರೆ:** ?

ಕಾಲ: ಕ್ರಿ.ಶ.೧೧೨೧ **ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ **ಪು.:** ೨೪-೨೫

ಮಹಾಪ್ರಧಾನ ಕಾಳಿದಾಸಯ್ಯ ದಂಡನಾಯಕರು, ಅಲಂದೆ ಸಾಸಿರದ ಪೆರ್ಗಡೆ ಒಡೆತನದಲ್ಲಿರುವಾಗ, 'ಮಣಿಯೂರು ಹನ್ನೆರಡು ಕಂಪಣವೆರ್ಗಡೆ'ಯ ಅಧಿಕಾರಿಯಿಂದ ಆದಿತ್ಯನಾಯಕ, ಮನ್ನೆಯ ಚಿಕ್ಕಗೋವಣರಸ ಶಿವಾಲಯ ನಾಶವಾದುದ್ದಕ್ಕೆ ಧರ್ಮ ನಿಮಿತ್ಯವಾಗಿ ಗಂಗರಾಸಿಜೀಯರು ಅಧಿಕಾರಿಯ ಮೇಲಿರಿದು ಕೊಂದು ಸತ್ತಾಗ, ಮಂಗಳವಾರದಂದು ವೆರ್ಗಡೆ ಆದಿತ್ಯನಾಯಕನು, ಮಹಾಮಂಡಲೇಶ್ವರ ಆಹವಮಲ್ಲರಸರು ಮಣಿಯೂರ ಮೂವತ್ತಿ***** ಮಹಾಜನರು ನೆರೆದು ಗಂಗರಾಸಿಜೀಯರು ****** ಜೀಯರ ಮಗನಾದ ಸಿಂಗರಾಸಿ ಅತ್ತಿಮಬ್ಬೆ ಚಂದ್ರಿಯಕ್ಕನು ಕ್ಷಮೆ ನೀಡಲು ಸಿಂಗರಾಸಿಗೆ ದಾಯಿಗ ಸುದ್ದವಾಗಿ ಮಾನ್ಯಗೋಲ ಮೂವತ್ತೆರಡು ಮತ್ತರು ಕೈಯ ರಕ್ಷಾನಿಮಿತ್ಯವಾಗಿ ಸರ್ವಭಾಧಾ ಪರಿಹಾರವಾಗಿ ಕೊಟ್ಟರು(ಪು.ಸಂ.೨೬.೫-೧೮ನೆಯ ಸಾಲು).

ಮಣ್ಣೂರು ಶಾಸನದಲ್ಲಿ ಅರಸು: ಚಾಳುಕ್ಯ ತ್ರಿಭುವನಮಲ್ಲ ಕಾಲ: ಚಾಳುಕ್ಯ ವಿಕ್ರಮ ವರುಷದ ೪೫ (ಕ್ರಿ.ಶ ೧೧೨೧) ಭಾಷೆ: ಕನ್ನಡ ಶಾಸನ ದೊರೆತ ಸ್ಥಳ: ಊರಿನ ಮಧ್ಯ ನಡು ರಸ್ತೆಯ ಕಟ್ಟೆಯ ಮೇಲೆ. (ಹೈ.ಕ.ಭಾ.ಶಿ.ಶಾ೧೯೯೨)

ಶಾಸನ ವಿಷಯ:- ಶಿವಾಲಯವಳಿಯಲು ಧರ್ಮ ನಿಮಿತ್ತವಾಗಿ ಗಂಗರಾಸಿಜೀಯರು ಇರಿದುಕೊಂಡು ಪ್ರಾಣತ್ಯಾಗ ಮಾಡಿಕೊಂಡ ಉಲ್ಲೇಖವಿದೆ. ಇದು ಆತ್ಮಬಲಿದಾನ ಶಾಸನ. ವಿಶೇಷ ಉಲ್ಲೇಖ: ಮಣಿಯೂರು ೧೨, ಕಂಪಣ, ಪೇರ್ಗ್ಗಡೆ, ದೇವಾಲಯ ಸಂರಕ್ಷಣೆ, ಕ್ಷಮೆ ಕೊಡುವುದು.[೨]

ಶ್ರೀ ಮನ್ಮಹಾ ಪ್ರದಾನಂ ಕಾಳಿದಾಸಯ್ಯ ದಂಡನಾಯಕರು ಮಲಂದೆಸಾಸಿರ ಪೆರ್ಗಡೆ ಬಳಿಯ **ಮಣಿಯೂರು ೧೨ ಕಂಪಣ ಪೆರ್ಗ್ಗಡೆ** - ವಧಿಕಾರಿ ಯಾದಿತ್ಯ ನಾಯಕಂ ಮನ್ಯೆಯಧೀಕ ಗೋವಣರಸ ಸರ್ವ ನಮಸ್ಯಂದಯ್ದುಂ ಸಿವಾಲಯವನಳಿಯಲು ಧರ್ಮ ನಿಮಿತ್ತವಾಗಿ **ಗಂಗಾರಾಸೀಜೇಯರು** ಅಧಿಕಾರಿಯ ಮೇಲಿರಿದುಕೊಂಡು ಸಾಯಲು **ಮಂಗಳವಾರದಂದು** ಪೆರ್ಗ್ಗಡೆ ಆದಿತ್ಯ ನಾಯೇನುಂ ಶ್ರಿಮನು ಮಮಾಮಂಡಳೇಶ್ವರ - ಅರಸರುಂ **ಮಣಿಯೂರು ಮುವತ್ತಿರ್ವರು** ಮಹಾಜನಂಗಳು ನೆರೆದು ಗಂಗಾರಾಸಿಜೀಯರು ಸತ್ತ ಸಂಬಂಧದೊಳು ಶ್ರಮಣಮಲಜೀಯರೊಳ ಸಿಂಗರಾಸಿಯ - ಬಳಿಕನುಂ **ಕ್ಷಮೆಯಂ ಕುಡಲು** - ಎಂಬ ಉಲ್ಲೇಖವಿದೆ. ಹೈದ್ರಾಬಾದ್ ಕರ್ನಾಟಕದ ಶಿಲಾ ಶಾಸನಗಳು ಮತ್ತು ಕಲಬುರ್ಗಿ ಜಿಲ್ಲೆಯ ಶಾಸನಗಳು ಈ ಎರಡು ಕೃತಿಗಳ ಶಾಸನ ಪಾಠಗಳು ನಾವು ಇಲ್ಲಿ ಅಧ್ಯಯನ ಮಾಡಿದಾಗ ಬಹಳ ವ್ಯತ್ಯಾಸ ಕಾಣುತ್ತೇವೆ.

ಸ್ಥಳ: ಮರ್ತೂರು	**ಆಳಿದ ದೊರೆ:** ಚಾಲುಕ್ಯ ವಿಕ್ರಮಾದಿತ್ಯ
ಕಾಲ: ೧೧೨೪	**ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ.-ವ್ಹಿ.ಶಿವಾನಂದ, ೧೯೯೨
ಭಾಷೆ: ಕನ್ನಡ	**ಪು.:** ೧೪೬-೧೫೬

ಪೆರ್ಗ್ಗಡೆ ಬೀಚಿರಾಜನಿಂದ ಮರ್ತೂರಿನ ಮಹಾಮಂಡಲೇಶ್ವರರು ಕೇಶವ ದೇವಸ್ಥಾನಗಳಲ ಪ್ರತಿಷ್ಠೆ ಮತ್ತು ಅವರಡಕ್ಕೆ ಬಿಟ್ಟ ದತ್ತಿ. ಮಂಡಲೇಶ್ವರ ಬಿಬ್ಬರಸ ಮತ್ತು ಗೊಂಕರಸರು ಬೀಚೇಶ್ವರ ದೇವ ದತ್ತಿಗಳ ವಿವರ. ವಿಜ್ಞಾನೇಶ್ವರ ಭಟ್ಟಾರಕ ಪಂಡಿತನನ್ನು ಇದರಲ್ಲಿ ತ್ರಿಭುವನಮಲ್ಲ ದೇವರ ಪರಮಾರಾಧ್ಯರು ಎಂದು ವಿಶೇಷಿಸಿದೆ. ಈ ವಿಜ್ಞಾನೇಶ್ವರನ ಮಗ ಬೀಚಿರಾಜನು ಮರ್ತೂರಿನಲ್ಲಿ ಪೆರ್ಗ್ಗಡೆಯಾಗಿದ್ದ ಸಂಗತಿ ಇಲ್ಲಿದೆ.

ವಿವರಣೆ-ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಸತ್ಯಾಶ್ರಯ ಕುಳತಿಳಕ ಚಾಳುಕ್ಯಾಭರಣಂ ಶ್ರೀಮತ್ರಿಭುವನಮಲ್ಲ ವಿಜಯರಾಜ್ಯಮುತ್ತರೊತ್ತರಾಭಿವೃದ್ಧಿ ಪ್ರವರ್ಧಮಾನ ಮಾ(ಚ)ಂದ್ರಾರ್ಕ ತಾರಂ ಸಲುತಂ, ಶ್ರೀಮತ್ ಜಯನ್ತೀ ಪುರದ ನೆಲೆವೀಡಿನೊಳ್ ಸುಖಸಂಕಥಾ ವಿನೋದದಿ ರಾಜ್ಯಂಗೆಯ್ಯುತ್ತಮಿರೆ ಸ್ವಸ್ತಿ ಯಮನಿಯಮ ಸ್ವಾಧ್ಯಾಯಧ್ಯಾನಧಾರಣ ಮೌನಾನುಷ್ಠಾನ ಜಪ ಸಮಾಧಿ ಶೀಲಸಂಪನ್ನರುಂ ಶ್ರೀಮತ್ತಿಭುವನಮಲ್ಲದೇವರು ಪರಮಾರಾಧ್ಯರುಮಪ್ಪ ಶ್ರೀಮತ್ ವಿಜ್ಞಾನೇಶ್ವರ ಭಟ್ಟಾರಕ ದೇವರ ಮಗಂ ಸ್ವಸ್ತಿ ಸಮಸ್ತ ಗುಣಸಂಪನ್ನರಪ್ಪ ಶ್ರೀಮತು ಪೆರ್ಗ್ಗಡೆ ಬೀಚಿರಾಜ ಮರತೂರಲು ಪ್ರತಿಷ್ಠೆಯಂ ಮಾಡಿಸಿದ ಮಹಾದೇವರ್ಗ್ಗಂ ಕೇಶವ ದೇವರ್ಗ್ಗಂ ಸ್ವಸ್ತಿ ಸಮಧಿಗತ ಪಂಚಮಹಾಶಬ್ದ

ಮಂಡಲೇಶ್ವರ, ಕದನ ಮಹೇಶ್ವರ। ವಿಜಯಲಕ್ಷ್ಮೀ ಕಾನ್ತ(ತು)ರಕ ರೇವನ್ತನಲಂದೆವೆಡಂಗ ಮನ್ನೆಯ ಸಿಂಗ ಸತ್ಯ ರಾಧೇಯ, ಸಾಹಸವೈನತೇಯ। ನೀತಿಚಾಣಕ್ಯನಮೋಘವಾಕ್ಯ। ಪರೋಪಕಾರ ವ್ಯಾಪಾರ ಪಾರಾಯಣ। ವೈರಿ ನಾರಾಯಣ। ಸುಜನಜನಕುಮುದ ಹಿಮಕರ। ಬನ್ಧು ಜನ ಕಮಳ ದಿವಾಕರ। ಗುಣರತ್ನ ಭೂಷಣ ಶಿಷ್ಟಜನ ಪೋಷಣ। ದೇವದ್ವಿಜ ಗುರುಪಾದಾರಾಧಕ। ಪರಬಳಸಾಧಕ, ದಾನ ವಿನೋದ ಮೃಗಮದಾಮೋದ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ, ಶ್ರೀಮನ್ಮಹಾಮಂಡಳೇಶ್ವರಂ ಬಿಬ್ಬರಸರುಂ ಗೊಂಕರಸನುಂ ಎಂದು ಉಲ್ಲೇಖಿಸಿದೆ.

ಪ್ರಭು ಮುಖ್ಯವಾಗಿ ಶ್ರೀಮಚ್ಚಾಳುಕ್ಯ ವಿಕ್ರಮ ವರ್ಷದ ೪೮ನೆಯ ಶೋಭಕೃತು ಸಂವತ್ಸರದ ಮಾಘ ಸುದ್ಧ ೭ ವಡ್ಡವಾರ ಸೂರ್ಯಗ್ರಹಣ ನಿಮಿತ್ತವಾಗಿ ಶ್ರೀ ಬೀಚೇಶ್ವರ ದೇವರ್ಗ್ಗೆಯೂರಂ ಪಡುಮಂ ಬೇವಿನ ಕೆರೆಯ ಕಯ್ಯಿಂದ ತೆಂಕ ಹೋಚನ ಬಾವಿಗೆ ಹೋದ ಹೇಚಿವಟ್ಟೆಯಂ ಪಡುವಲು ದೇವರಂಗಭೋಗಕ್ಕಂ ಪೂಜೆಗಂ ಚೈತ್ರ ಪವಿತ್ರಕ್ಕಂ ನಿವೇದ್ಯಕ್ಕಂ ಬೊನ್ತೇಶ್ವರ ಗಡಿಂಬದ ಘಳೆಯ ಕಿರಿಯಮತ್ತನಾಲ್ಕು ಪಂಚಮಹಾಶಬ್ಧಮಂ ಧೂಪ ಜಾಗಟೆಯುಮಂ ಬಾಜಿಸುವ ಹರಿಕಾರರ್ಗ್ಗೆ ಮತ್ತರೆರಡುಯಿಪ್ಪೊತ್ತಿನ ಸಂಜೆಯೊಳ್ ದೇವರ್ಗ್ಗೆ ಸಂಖದಿಂ ಭೋಗಮಾರ್ಪ್ಪ ಸಂಖಪಾಳಂಗೆ ಕಮ್ಮವರುನೂರು ಅನ್ತು ಸರ್ವನಮಶ್ಯವಾಗಿ ಬಿಟ್ಟ ಮತ್ತರು ೬ ಕಮ್ಮ ೬೦೦ಯರೂಂ ಮೂಡಣ ಸೆಜ್ಜೆವಾರಿಸಿ ಬಿಟ್ಟತೊಂಟದಿಂ ಬಡಗಲು ತೋಟಕ್ಕೆ ಬಿಟ್ಟ ಕಾಲಡಿಯ ಮತ್ತರು ೧ ನಂದಾದೀವಿಗೆ ಯೆಣ್ಣೆಗೆ ಗಾಣದಲು ಧಾರೆಯೆಣ್ಣೆ ಮಾರಿದ ಭತ್ತದಲು ಪೊಂಗೆಸೊಲಗೆವತ್ತ ತಂಬುಲಿಗರ್ಮ್ಮಾರಿದ ಯೆಲೆಯ ಹೇರಿಂಗೆಯೆಲೆ ಯಿರ್ಪ್ಪತ್ತಯ್ದು ಮಾರಿದ ಪೊಂಗೆಯಡದೆ ಹತ್ತು ಮಾರಿ ಸೆಟ್ಟಿ ಪ್ರತಿಷ್ಠಯಂ ಮಾಡಿಸಿದ ಸೂರ್ಯದೇವರ್ಗ್ಗೆ ನಿವೇದ್ಯಕ್ಕೆ (ನಟ್ಟ ಮಾರದ ಬಟ್ಟೆಯಿಂ) ಮೂಡ ಮೂಲಿಗ ಗೆಯಿಂದಂ ಬಡಗಲು ಬಿಟ್ಟ ಕಮ್ಮ ೪೫೦ ।ಶಾಪಾಶಯವಿದೆ.

ಸ್ಥಳ: ಮರ್ತೂರು	**ಆಳಿದ ದೊರೆ:** ?
ಕಾಲ: ಕ್ರಿ.ಶ.೧೨ನೆಯ ಶತಮಾನ	**ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
ಭಾಷೆ: ಕನ್ನಡ	**ಪು.:** ೨೪–೨೫

ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತ ಶ್ರೀಮತ್ ಮರಿತುರುವಿನ ಸಮಸ್ತ ಪ್ರಭುಗಳ ಕೈಯ್ಯಲು ****ಯ ನಾಯಕ ೬೦ಮತ್ತರು ಕೆಯ್ಯಮಂ, ೬೧ ಹೊನಮಂ, ಒಂದು ಕೇರಿಯುಮಂ ಪ್ರಭುಗಳಿಗೆ ***ಯಂ ತಲೆಗೊಟು** ಹಡೆದರು॥ ತೋಂಟಂ** ಮತ್ತರು ಎತಯ ಅ**** (ಪು.ಸಂ.೯೮.೧–೧೧ನೆಯ ಸಾಲು).

ಸ್ಥಳ: ಸರಡಗಿ	**ಆಳಿದ ದೊರೆ:** ?
ಕಾಲ: ಕ್ರಿ.ಶ.೧೦೧೧	**ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
ಭಾಷೆ: ಕನ್ನಡ	**ಪು.:** ೯೯–೧೦೦

ಕಲ್ಲಿನ ಮುಂಭಾಗ–

ಉತ್ತರೊತ್ತರ ರಾಜ್ಯಂಗೆಯುತ್ತಿರೆ* ಪಡಿಚಂದಮಾಗೆ ಸಕಳೋರ್ವ್ವೀ ಮಣ್ಡಳ ಮಾಡರದಿಂ** ಸರಾಗದಿಂ ****************** ಮಾದಿತ್ಯ ವಿಸ್ತರದಿ ಸಾಸನ ಮಾಡಿಸಿದ (ಪು.ಸಂ.೯೯.೧–

೯ನೆಯ ಸಾಲು). ಶಂಕರ ನಾರಾಯಣದೇವ ನೈಷ್ಠಿಕಸ್ಥಾನಮಾಗಿ ಬಿಟ್ಟ ಕ್ಷೇತ್ರ ಮತ್ತರು ಇದರೊಳಗೆ ದೇವರಷ್ಟಪರ್ವಕ್ಕೆ ಮತ್ತರು೧೦, ವಿದ್ಯಾದಾನಕ್ಕೆ ಮತ್ತರು೩೦, ಹಳವಿಗಬಿಕ್ಕೋಜಂಗೆ ಮತ್ತರು ೦೧, ಹಾಡುವ ಮತ್ತರು೩, ಪಾತ್ರಕ್ಕೆ ಮತ್ತರು ೦೧(ಪು.ಸಂ.೯೯. ೯–೧೩ಸಾಲು) ಎಂದು ಉಲ್ಲೇಖಿಸಿದೆ.

ಕಲ್ಲಿನ ಎಡಭಾಗ–

೧–೧೨ನೆಯ ಸಾಲಿನವರೆಗೆ ಶಾಪಾಶಯವಿದೆ(ಪು.ಸಂ.೯೯–೧೦೦).

ಸ್ಥಳ: ಸರಡಗಿ **ಆಳಿದ ದೊರೆ:** ತ್ರಿಭುವನ ಮಲ್ಲ

ಕಾಲ: ಕ್ರಿ.ಶ.೧೧೧೦ **ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ **ಪು.:** ೧೦೧–೧೦೨

ಚಾಲುಕ್ಯ ತ್ರಿಭುವನ ಮಲ್ಲದೇವರ ವಿಜಯರಾಜ್ಯ ಮುತ್ತರೋತ್ತರಾಭಿವೃದ್ಧಿ ಕಾಲದಲ್ಲಿ ಕಲ್ಯಾಣ ರಾಜಧಾನಿಯಲ್ಲಿ ಆಳ್ವಿಕೆ ಮಾಡುತ್ತಿದ್ದರು(ಪು.ಸಂ.೧೦೧. ೩–೪ನೆಯ ಸಾಲು).

ಬೃಹಸ್ಪತಿವಾರದಂದು ವಿಷ್ಣುಭಟ್ಟರ ಸರವಡಿಗೆಯ ಪ್ರಭುಗಳುಂ, ಅಯಿನೂರ್ವರು, ನಕರಮುಂಳಿರ್ದ್ದು, ಆದಿತ್ಯ ದೇವರಿಗೆ, ನಾರಾಯಣ ದೇವರಿಗೆ ಧೂಪ–ದೀಪ, ನೈವೇದ್ಯಾರ್ಚನೆಗೆ ಬಿಟ್ಟ ಹೇರಿಂಗೆ ಮಾನಭತ್ತ, ಅಂಗಡಿಯಲು ನಖರ, ಹೆಡಗೆಯಲು ಉಪ್ಪು, ಸೊಲ್ಲಗೆ ೨, ಹೊಂಗೆ, ಅಡಕೆ ೧೨, ಹೇರಿಂಗೆ ಎಲೆ೫೦, ಅಂಗಡಿಯಲ್ಲಿ ಭತ್ತ, ಧಾರೆಯೆಣ್ಣೆ, ಅರ್ದ್ದ ಸೊಲ್ಲಗೆ, ಮೆಣಸು, ಜಿರಗೆಯ ಹೇರಂಗೆ ಮಾನವೊಂದು, ಹೂ ಮಾರಿದೊಡೆ ಹಡಲಿಗೆಗೆರಡು ನಾರಂ ಕೊಡುವರು(ಪು.ಸಂ.೧೦೧. ೦೯–೧೯ನೆಯ ಸಾಲುಗಳು). ಶಾಪಾಶಯಗಳು(ಪು.ಸಂ೧೦೨, ೨೦–೨೮ನೆಯ ಸಾಲುಗಳು). ಏದಿನೀಸ್ವರ ದೇವರ್ಗೆ ಕಲಂಬುರಗೆಯ* ಶಂ ಹಡವಲು ಕೊಲಮತ್ತ ೦೬.ಸರ್ವ್ವಡಿಗೆಯ ಮೂಡಣ ಮಳಮೆ(ಪು.ಸಂ–೧೦೧.೨೯–೩೧ನೆಯ ಸಾಲು).

ಸ್ಥಳ: ಹಿರೇಝುಳಕಿ **ಆಳಿದ ದೊರೆ:** ಯಾದವ ದೊರೆ–
ನಾರಾಯಣ ಪ್ರತಾಪ ಕನ್ನರದೇವ

ಕಾಲ: ಕ್ರಿ.ಶ.೧೨ನೆಯ ಶತಮಾನ **ಪ್ರಕಟಿತ:** ಸಾಧನೆ.ಸಂ–೨,ಸಂಚಿಕೆ–೧–ಕ್ರಿ.ಶ.೧೯೭೩
ಪ್ರಸಂ.: ಡಾ. ಜಿ.ಎಸ್. ಶಿವರುದ್ರಪ್ಪ
ಪು.: ೫೭, ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ **ಪು.:** ೭೮

ಸ್ವಸ್ತಿ ಶ್ರೀಮತ್ ಯಾದವ ನಾರಾಯಣ ಪ್ರತಾಪ ಚಕ್ರವರ್ತಿ ಶ್ರೀ ಕನ್ನರದೇವ ವಿಜರಜ್ಯ ೮ಆನದ ಸಂವತ್ಸರದಲಿ 'ಸೋಮವಾರ ದಿನ' ಮಾವಿನ ಜಳಕಿಗೆ ವಿಸಪ್ರಹಾರಿ ಬೋಗಸ್ವರ ದೇವರಿಗೆ ಬಿಟ್ಟ 'ದಮ್ಮಾ' ಚಿಕಯನ ಮಕಳು ಕಲಿಗೌಡ (ಸಂಗಡ) ಮೆರಕೊಂಡು ದೇವರಿಗೆ ಬಿಟ್ಟ ಕೆಯಿ ಮತ್ತರು ೬, ಮದರ ಮತ್ತರು ೧, ಇದರಿಂದೆರಡು ನಂದದೀವಿಗೆ**** ಯಾದವ ನಾರಾಯಣ(ಪು.ಸಂ.೭೮. ೧–೧೪ನೆಯ ಸಾಲು).

ಸ್ಥಳ: ರುದ್ರವಾಡಿ	ಆಳಿದ ದೊರೆ: ಜಯಸಿಂಹ

ಕಾಲ: ಕ್ರಿ.ಶ.೧೧೦೩	ಪ್ರಕಟಿತ: ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ	ಪು.: ೭೦-೭೩

೧-೨ನೆಯ ಸಾಲುಗಳು ಶಿವ ಮತ್ತು ವಿಷ್ಣುವಿನ ಪ್ರಾರ್ಥನೆ. ೩-೬ನೆಯ ಸಾಲು ಚಾಲುಕ್ಯ ವಂಶದ ಉಗಮದ ಮತ್ತು ಮೂಲದ ವಿವರ ನೀಡಲಾಗಿದೆ.

ವಿಷ್ಣುವರ್ಧನ ವಿಜಯಾದಿತ್ಯಾದಿ ವಿಶೇಷಾಭಿದಾನರುಮೆನಿಸಿ ನೆಗಳ್ದ ರಾಜರತ್ನಗಳುದ್ಭವ ಭೂಮಿಯಾದ ಚಾಳುಕ್ಯ ವಂಶಮದೆನ್ತಪ್ಪುದೆನೆ। ಶರಣಾಗತ ಭೂಭೃತ್ಪಕ್ಷ ರಕ್ಷೆಯಿಂ ವಾಹಿನೀ ವಿಭುತ್ವಾದಿನು ದ್ಯತ್ಪುರುಷೊತ್ತಮ ಶೋಭೆಯಿನಂಬುರಾಶಿಗೆಣೆಯನೆ ಚಳುಕ್ಯ ವಂಶಮದ ನೆಸೆಗುಂ. ರಘುವಂಶದೋಳ್ ತುಳಬಳಂ, ರಘುವುದಯಿಪವೊಲೆ ಚಳುಕ್ಯ ವಂಶದೊದಳರದನ್ತಿ ಘಟಾಪಂಚಮುಖಂ ರಟ್ಟಘರಟ್ಟ ನೆನಲ್ಕೆ ಪುಟ್ಟದಂ ತೈಲನೃಪಂ(ಪು.ಸಂ.೭೦.೬-೯ನೆಯ ಸಾಲು).

ಸುರರಿಪುದಯ್ತೆಳೆಯಂ ಮುಂಮುರರಿಪು ತನ್ದನ್ದದಿನ್ದ ತನ್ದನವ ರಟ್ಟರ ಕಯ್ಗೆವೋದ ನೆಲನಂ ಧರೆ ನೂರ್ಮ್ಮಡಿ ತೈಲನೆಂದು ಕೊಂಡಾಡುವಿನಂ, ಆ ವಿಭುವಿಂಗಂ ಜಾಕಲದೇವಿಗೆನಾತ್ತಾಭವನಲ್ತೆ ಸತ್ಯಾಶ್ರಯನಾ ಭೂವಲ್ಲಭನನುಜನ ಶೇಷಾವನೀತಳ ಮರ್ಮ್ಮನನುಪಮಂ, ದಶವರ್ಮ್ಮಂ, ನೃಪನ ತನುಜಂ ಲಕ್ಷ್ಮೀನಿಳಯ ತ್ಯಾಗಿ ವಿಕ್ರಮಾದಿತ್ಯಂ ತದ್ಬುನಾಥನ ತಮ್ಮಂ ದಾತ್ರೀನುತ ಜಯಸಿಂಹನೆನಿಸಿದಂ ಜಯಸಿಂಹಂ।(ಪು.ಸಂ.೭೦.೯-೧೩ನೆಯ ಸಾಲು).

ಧರಾಪುರ ಹರನ ಸಿಧಾರಾಜಳ ಮಗ್ನರಿಪುನೃಪಂ ಸಕಳಧರಾಧರಂ, ತತ್ತನಯಂ ರಣಧೀರಂ ತ್ರೈಲೋಕ್ಯಮಲ್ಲ ನಾಹವಮಲ್ಲ। ಆ ಮನುಜೇಶನ ತನಯಂ ಸೋಮನೃಪಂ ತದನುಜಂ, ಮಹಾಸತ್ವಂ, ಸಂಗ್ರಾಮಹರಿ ಚಕ್ರವರ್ತಿ ಶಿಖಾಮಣಿ ಶುಭಮೂರ್ತಿ ವಿಕ್ರಮಾದಿತ್ಯ ನೃಪಂ, ಪರಮಾರ್ತ್ಥಂ ನಿನ್ನಮಾದೆಲು ದಲಖಿಳ ಮಹೀದೇವಿಯದೇವ********* ಕಾವಾಳ್ಗಳಾವೆರೆದೆರಗು ಪೊಡರಯೆ ಚೋಳನುಂ, ಲಾಳನುಂ, ಗೂರ್ಜರನು, ಪಾಂಚಾಳನು, ಕರ್ಣ್ನನು ಮುರದೆ ಬಗಳ್ತುತಮಾರಾನ್ತೊಡಾ ರಾಯರ ಬೇರಂ ಬೇರದಿಂ ಕಿಳ್ತುದಧಿಯೋಳಲೆಗಂ ರಾಯ ಬೆಂಕೊಂಡ ಭೂಪಂ(ಪು.ಸಂ.೭೧.೧೪-೧೯ನೆಯ ಸಾಲು).

ತ್ರಿಭುವನಮಲ್ಲ ಬೃಹವಾರದಂದು ಕಲಾಣ್ಯಪುರದಲುತ್ತರಾಯಣ ಸಂಕ್ರಮಣದಲೆ ಹಲವು ಮಾಹಾದಾನಗಳು ಮಾಡುವ ದಾನ ಕಾಲದಲ್ಲಿ ಶ್ರೀಮತ್ ಹಿರಿಅರಸಿ ಚಂದಲದೇವಿಯರ ಬಿನ್ನಪದಿಂದ ಮೊರಂಬ್ಬಳರ ಬಳಿಯ ಅಗ್ರಹಾರ ರುದ್ರವಾಡಿಯ ಶ್ರೀ ಕೇಶವದೇವರ್ಗ್ಗೆ ಪ್ರಭು ವಶಿಷ್ಟಗೊತ್ರ ವಾಸುದೇವ ಭಟ್ಟೋಲಪಾಧ್ಯಾಯ ಪ್ರಮುಖವಾಗಿ ಮಹಾಜನಯ್ವತ್ತರ್ಕ್ಕಂ ತ್ರಿಭೋಗಾಭ್ಯಂತರ ಸಿದ್ದಿ ಸರ್ವನಮಸ್ಯವಾಗುಭಯ ಸಾಮ್ಯಕ್ಕಂ ಕಾಣ್ಕೆ ವಿಶುದ್ದಿಯೋಳಗಾಗಿ ಸರ್ವ್ವಾಯ ಶುದ್ದಿ ಖಂಡದಾನವಾಗಿ ಧರ್ಮವತ್ತಳೆಯಂ ನೂರ ಇರ್ಪ್ಪತ್ತು ಗದ್ಯಾಣ ಪೊನ್ನತೆತ್ತು ಸುಖಮಿಪ್ಪಂತಾಗಿ ಧಾರಾಪೂರ್ವಕದಿಂ ಹಸ್ತೋದರ ಮಾಡಿದ ಸಂಬಂಧದಿ ಶ್ರೀ ಬಲ್ಲವರಸರ

ಸಮುಖಾದೇಶದೊಳೆ ಸಮಸ್ತ ಪ್ರಧಾನರ ಪೇಳ್ದೆಯೊಳಂ, ಚೋದೊರೆವಡಿಯರ, ರೇವದಾಸ ನಾಣತಿಯೊಳ ಕೊಟ್ಟ ಅಲಂದೆಯ ಸುಮಕಟ್ಟಿನ ಮೊರಂಬ ೯೪ರ ಬಳಿಯ ರುದ್ರವಾಡಿ (ಪು.ಸಂ.೭೧.೨೦-೨೧ನೆಯ ಸಾಲು).

ಬೃಹವಾರದಂದು ಮೊರಂಬ ೯೪ರ ಮನ್ನೆಯಂ ಮಹಾಮಂಡಳೇಶ್ವರಂ, ಕೀರ್ತ್ಯಿಂಗನಾಧಿಶ್ವರ ವೈರಿಕೃತಾಂತ, ತುರುಗರೇವಂತ, ಪರಬಲ ಮಲ್ಲಂ, ರಿಪುಹೃದಯಸೆಲ್ಲಂ, ಸತ್ಯ ರತ್ನಾಕರಂ, ಗೋತ್ರದಿವಾಕರಂ, ಪಿವೇಕನಾರಾಯಣ, ಧೈರ್ಯನಾರಾಯಣ, ಬಿಬ್ಬನಂಕಕಾರ, ಸಂಗ್ರಾಮನೀರ, ಕಾದಿಮುನ್ನಿರಿವಂ, ವೀರನಾರಿಭುಜಂಗಂ, ಮೊರಂಬಸಿಂಗ ಎನ್ನುವ ಬಿರುದು ಹೊಂದಿದ ಮಹಾಮಂಡಳೇಶ್ವರ ಮಾಗರಸರ ಮಗ ಕಂಬರಸನು, ದುಮ್ಮರಸನು ತನ್ನ ಮಕ್ಕಳು ಪೆರ್ಗ್ಗಡೆಕರಣಗಳು ಸಮಸ್ತ ಪರಿಗ್ರಹ ಬೆರಸುತ್ತರಾಯಣ ಸಂಕ್ರಮಣದಂದೆ ಮೊರಂಬ ೯೪ರ ಬಳಿಯ ರದ್ದವಾಡಿಯ ಪ್ರಭು ವಾಸುದೇವ ಭಟ್ಟೋಪಾಧ್ಯಾಯರ್ಗ್ಗಂ 'ವಲ್ಲಿಯ ಮಹಾಜನ ವಯ್ತದಿಂಬರಿಗಂ ವಲ್ಲಿಯ ಕೇಶವ ದೇವರಿಗೆ, ವಲ್ಲಿಯ ತನ್ನ ಕೊಡುಗೆಯ ಖಜ್ಜೂರಿಗೆಯ ಪಡುವಂ ಮಾಣಕೇಶ್ವರನ ಕೋಲ ಮೂನೂರು ಮತ್ತರ ಕೆಯಮನದರ ಬಳಿಯ ಮನೆಯಂ ಮನೆಯೂರ ಸಾಮ್ಯಂ ನಿಬಂಧವರುವ ಗೋಂಕರಸನರಸಿ ಕುಮಾರ ಪೆರ್ಗಡೆ ಕರಣವಧ್ಯಕ್ಷ ಸಂಧಿವಿಗ್ರಹಿ ಇಂತಿರ್ದ ಕಾಣಿಕೆಯಾಗಿ ವೆಕ್ಕಡಿಗರ ಸಮಸ್ತ ಪರಿಗ್ರಹದಾಯದಾಯ ವೋಳಗಾದಂತ ನಿತಮಂ. ಸರ್ವ್ವಾಯ ಶುದ್ಧಿ, ಸರ್ವನಮಸ್ಯ ಸರ್ವಭಾಧಾ ಪರಿಹಾರವಾಗಿ, ಐನೂರು ಗದ್ಯಾಣ ಪೊನ್ನ ಕ್ರಯ ದಾನವಾಗಿಕೊಂಡು ಕಾಲ್ಗರ್ಚ್ಚಿ ಧಾರಾಪೂರ್ವಕ ಮಾಡಿಕೊಟ್ಟ(ಪು.ಸಂ.೭೨.೨೯-೪೦ನೆಯ ಸಾಲು).

ವಕ್ತಾಯಸ್ಯ ಧರಾಮರೋಸ್ಪುರ ತರುಶ್ರೀ ವಾಸುದೇವೋವಿಭುಸೂನಾ ಸ್ಸೂರಿಜನಾಂಬುಜ ಸುಖಶ್ರೀ ವಾಸುದೇವಂ ಕಿಲಧ್ಯೇಯೋ ದೇವಗಣಾರ್ಚ್ಚಿಕಮಲ ಶ್ರೀ ವಾಸುದೇವಸ್ಥಿತ****ನ್ನೆಮ್ನಲ್ಲ ಚಮೂಪತಿ ಜಯತಿ ಶ್ರೀವಾಸುದೇವ ತ್ರಯಂ, ನರನಾಥ ರಾಯನಾರಯಣನ ತುಳಬಳಂ ವಿಕ್ರಮಾದಿತ್ಯದೇವಂ ಕರಂ ಮೇಲ್ದಿಯಲ್ಕೇ ಪೆತ್ತಂ ಕರಹರದದಡಪಂ ತತ್ಪ್ರಧಾನತ್ವಮೆಂಬೀ ಪರಮ ಪ್ರಾಣಾಧಿಕಾರಂಗಳನಿನ ವಿಧುಬಿಂಬಂಗಳುಳ್ಳನ್ನೆಗಂ, ಸಚ್ಚಾರಿತಂ, ವಾಶಿಷ್ಟ ಗೋತ್ರಾಂಬುಜವನದಿನಪಂ, ಮಲ್ಲಿದಂಡಾಧಿನಾಥಂ.

ಮುಗಿಲಂ ಮುಟ್ಟುತಿರು ದ್ವಿಜೇಂದ್ರ ನಿವನಾಲಂಕಾತ್ರಿ****ಚಾದ್ರಿಯಂ ಭಗವದ್ವಿಷ್ಣುಗ್ರಹಕ್ಕೆ ದಂಡನೊಕಂ ಚಲ್ವಾದೆಂದೀಜಗಂ ಪೊಗಳ್ತಲ್ಲ ಚಮಾಪ ನೆತ್ತಿದರ ಸತ್ಯೋತ್ತಾಂಗಮಂ ಕೂಟಕೋಟಿಗಳಿಂದೊಪ್ಪುವುದಂ ತ್ರಿಕೂಟಮನಂ ಲಕ್ಷ್ಮೀಶರಾವಾಸಮಂ(ಪು.ಸಂ.೭೩.೪೪-೪೭ನೆಯ ಸಾಲು).

ಕಲ್ಲೊಡೆಯಿನುಳ್ಳವೆತ್ತದರು ಧರ್ಮಖ್ಯಾನ ವಿಖ್ಯಾತವಂತರು ಸತ್ಪುಷ್ಕರಣೀ ಪವಿತ್ರಮದು ಲಕ್ಷ್ಮೀನಾಥನಾಷ್ಟಾನಮಂತರು ಸರ್ವಜನ ನಿಭಶ್ರುತ್ಯಾಧ್ಯಯನ, ಸಂಪನ್ನ ದ್ವಿಜಶ್ಲಾಘ್ಯಮಂತರ

ನೆಮ್ಮಂದಿವೆನೊಂದೆ ನಾಲಗೆಯೊಳೀನೇ ವರ್ಣಿ್ಪಂ ಬಣ್ಣಿಪಂ। ಸುರಪಂಗೆ ಕಾಸುರಾವಾಸಯೆನೆ ಪಡೆದು ನೋಡಲ್ಕಜಂ ಮಾಡಿದಂ, ಸಾಸಿರಕಣ್ಣಂ ಮಲ್ಲದಂಡಾಧಿಪಸುಕ್ಕತಮದಂ, ರುದ್ರವಾಡಗ್ರಹಾರ ಸ್ಥಿರಮೇಶೇಷ ತ್ರಿಕೂಟಾಯತನಮನುಭಯ ದ್ವಾದಶಾಬ್ಜಾಕ್ಷ, ಮೂರ್ತಿಸ್ಫುರದಾವಾಸಗಳ ನೋಡುವ ಬುಧಗಸಿತಂ, ಕಣ್ಗಳ ಮಾಡವೇಡಾ, ಹರಿಮುಖ್ಯ ತ್ರಿಪುರುಷಲುನ್ನರಿ ಮುಖ್ಯವೀರಲು ದಯಿನೇ ರಕ್ಷಿಂತು ಹರಿಮುಖ್ಯ ಗ್ರಹವದುಲುನ್ನರಿ ಪಾದಾಂ ಬೋಜ ಭಕ್ತುಡನಿಯಲ್ಲ ವಿಬುನ್, ಸುಕವಿಗಳಿ ಕಾವ್ಯಮನೆಯ್ದೆ ಕೇಳ್ದು ಕವಿರತ್ನ ಭೂಷಣಂದಲ್ಕರ್ಣಾಟಕ ಸಂಸ್ಕೃತಾಂಧ್ರ ಕವಿಯೆಂದು ಕೂರ್ಮ್ಮೆಯಿಂ ವಿಷ್ಣುಭಟ್ಟನಂ ಕೈಕೊಳ್ವಕ್ ನಿರ್ಮಳರಕ್ಕೆ ಮತ್ತ ಕೈ ದೆಳೆಯಿಂಬುಳ ಗೊಳ್ವನಿತಕ್ಕೆ, ವೃಷ್ಟಿಸತ್ಕಾರ್ಯ ಸಮಯತಕ್ಕೆ ಧರಣೀಜತೋರೆಗೆಯ್ದೆ ಧೇನುಗಳ ಧರ್ಮಜನನ್ತೆ ಧರ್ಮದೊಳೆ ಪಾಳಿಸುವು ಕ್ಷಿತಿಯಂ ನರೇಂದ್ರೀ ಯಾವದಿನೆಂದು ಬಿಂಬೇ ಯಾವರ್ದರಾವಳಿ***ಮಮೆಂಬು ದಶ್ವಯಾದತ್ ತಾವಜ್ಜಗದ್ವಿನುತ ಮಲ್ಲಚಮೂಪ ಧರ್ಮ್ಮಸ್ಥೇಮಾಚ್ಚ ಶೋಭಿಸುತ ಮಿತ್ರಕಳತ್ರ ಯುಕ್ತ (ಪು.ಸಂ.೭೩. ೪೮–೫೭ನೆಯ ಸಾಲು).

ಸ್ಥಳ: ರುದ್ರವಾಡಿ **ಆಳಿದ ದೊರೆ:** ಚಾಳುಕ್ಯ ವಿಕ್ರಮ

ಕಾಲ: ಕ್ರಿ.ಶ.೧೧೧೮ **ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ–ವ್ಹಿ.ಶಿವಾನಂದ, ೧೯೯೨

ಭಾಷೆ: ಕನ್ನಡ **ಪು.:** ೧೦೬–೧೦೯

ಶಾಸನದಲ್ಲಿ ಸೂರ್ಯ, ಈಶ್ವರ, ಚಂದ್ರರ ಚಿಹ್ನೆಗಳಿವೆ. ತ್ರಿಭುವನ ಮಲ್ಲತಂಮ್ಮಾರಾಧ್ಯರಪ್ಪ ಶ್ರೀ ಮದಯ್ಯಂ ಗಳು ಸರ್ವಕ್ರುತುಯಾಜಿಯದ ಬಿನ್ನಪದಿಂ ಮೋರಂಬ ಯಂಭತ್ತು ನಾಲ್ಕರ ಬಳಿಯ ಬಾಡಂ **ರುದ್ರವಾಡಿ**ಯ ಶ್ರೀ ಚನ್ನಕೇಶ್ವರ ದೇವರ ಅಲ್ಲಿಯ ಚತುರ್ವಿಂಸತಿ ದೇವರಂಗ ಭೋಗ ನೈವೇದ್ಯಕಂ ಅಲ್ಲಿಯ ದೇವಾಲಯದ ಖಂಡಾಸ್ವಾದಿತ ಜೀರ್ಣೋದ್ಧಾರಕ್ಕೆಂದು ದೇವರ **ಬ್ರಹ್ಮಪುರಿ**ಯ ಬ್ರಾಹ್ಮಣರಲುವರುಂಬಂತಾಗಿ ಶ್ರೀ ಮಚ್ಚಾಳುಕ್ಯ ವಿಕ್ರಮ ವರುಷದ ೪೨ನೆ ಹೇವಿಳಂಬ ಸಂವತ್ಸರ ಶ್ರಾವಣ ಬಹುಳ ಅಷ್ಟಮಮನ್ವಾದಿ **ಸೋಮವಾರ**ದಂದು **ಜಯಂತಿಪುರ**ದ ಮನೆಯ ಕೆರೆಯೊಳೆ ಮಹಾಕ್ರತು ಕಲ್ಪ ವೃಕ್ಷ ಮಹಾದಾನ ಕಾಲದಲ್ಲಿ ಬೆಂಕೊಳ್ವನ ಕೋಲಿಂ ಯೆಂಟನೂರು ಮತ್ತಭೂಮಿಯಂ ತ್ರಿಭೋಗಾಭ್ಯಂತರ ಸಿದ್ಧಿಯಿಂ ಸರ್ವನಮಸ್ಯವಾಗಿ ಧಾರಾಪೂರ್ವಕಂ ಮಾಡಿದ ಸಂಬಂಧಿಯಂ **ಶ್ರೀಬಲ್ಲವರಸಂ** ಸಾಮುಖ ದೇಶದೊಳೆ ಸಮಸ್ತ ಪ್ರಧಾನರ ಬಳ್ಳಿಯಿಂ ಚವೂದೊರೆ ಪಡೆಯಂ ಭೋಗಾದಿತ್ಯ ನಾಣತಿಯೊಳೆ ಅಯ್ಯಂಗಳ ಪರಿವರ್ತದಿಂ ಕೊಟ್ಟ ಮನೆಯ ಪಡೆಯ ಸಮಕಟ್ಟಿನ ಮೊರಂಬ ಮೂವತ್ತರ ಬಳಿಯ ಹಣರಂಬೆಗೆವಳಗೆ ೧ ಶ್ರೀಮದ್ವರಾಜಂ ಮಲ್ಲಿಕಾರ್ಜುನ ದೇವರ ಪರಿವರ್ತದಿಂದಲಂದೆಯ ಸಮುಕಟ್ಟಿನ ಮೊರಂಬಯೆಂಬತ್ತು ನಾಲ್ಕರ ಬಳಿಯ ಬಬ್ಬುಲೇಶ್ವರ ೧ ಅಂತ ಮತ್ತರು ೮೦೦ಕ್ಕೆ ಕೊಟ್ಟ ಬಾಡ ಯರಡು॥ ಮಲ್ಲುಣ ಭಟ್ಟ ದಂಡನಾಯಕನ, ಚೆನ್ನಕೇಶವ ದೇವರ ಅಲ್ಲಿಯ ಚತುರ್ವಿಂಸತಿ ದೇವಸ್ಥಾನಕ್ಕೆ ಬಿಟ್ಟದತ್ತಿಯ ಉಲ್ಲೇಖಯಿವೆ.

ಸ್ಥಳ: ರುದ್ರವಾಡಿ | ಆಳಿದ ದೊರೆ: ತ್ರಿಭುವನಮಲ್ಲ ದೇವ.
ಕಾಲ: ಕ್ರಿ.ಶ.೧೧೦೩ | ಪ್ರಕಟಿತ: ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
ಭಾಷೆ: ಕನ್ನಡ | ಪು.: ೭೪–೭೬

ವಿಷ್ಣುವಿನ ಪ್ರಾರ್ಥನೆ ಮತ್ತು ಚಾಳುಕ್ಯರ ವಂಶದ ಬಗ್ಗೆ ವಿಶ್ಲೇಷಣೆ(ಪು.ಸಂ.೭೪.೧–೧೨ನೆಯ ಸಾಲು).

ವಿಕ್ರಮಾದಿತ್ಯ ಭಟ್ಟೋಪಾಧ್ಯಾಯ ಸೋಮಯಾಜಿಯವರ ಬಿನ್ನಪದಿಂ ಮೊರಂಬ ೯೪ರ ಬಳಿಯ ರುದ್ದವಾಡಿಯ ಶ್ರೀ ಚೆನ್ನಕೇಶವದೇವರಲ್ಲಿ ಚತುರ್ವಿಂಶತಿ ಮೂರ್ತಿದೇವರಂಗಭೋಗ ನೈವಿದ್ಯಕ್ಕೆ ದೇವಾಲಯದ ಖಂಸಸ್ಪುಟಿತ ಜೀರ್ಣೋದ್ಧಾರಕ್ಕಂವಾದೇವರ 'ಬ್ರಹ್ಮಪುರಿಯ' ಬ್ರಾಹ್ಮಣರಯ್ವರಿಂಬಗೆವಾಗಿ ಸೋಮವಾರದಂದು ಜಯಂತಿಪುರದ ಮನ್ನೆಯಕೆರೆಯೊಳಗೆ ಮಹಾಕೃತು ಕಲ್ಪವೃಕ್ಷ ಮಹಾದಾನ ಕಾಲದಲ್ಲಿ ಬೆಂಕೊಳ್ವನ ಕೋಲ ೮೦೦ ಮತ್ತು ಮತ್ತರ್ಭೂಮಿಯಂ ತ್ರಿಭೋಗಾಭ್ಯಂತರ ಸಿದ್ದಿಯಿಂದ ಸರ್ವನಮಸ್ಯವಾಗಿ ಧಾರಾಪೂರ್ವಕವಾಗಿ ಮಾಡಿದಂ ಸಂಬಂಧಿಯಂ ಶ್ರೀ ಬಲ್ಲವರಸರ ಸಮುಖಾದೇಶದಿಂ(ಪು.ಸಂ.೭೫. ೧೬–೨೧ನೆಯ ಸಾಲು).

ಸಮಸ್ತ ಪ್ರಧಾನರ ಹೇಳಿಕೆಯಿಂದ ಚೋದೊರೆವಡೆಯರು. ಭೋಗಾದಿತ್ಯ ನಾನತಯೋಳ ವಯ್ಯಂಗಳ ಪರಿವರ್ತದಿಂ ಕೊಟ್ಟ ಮನ್ನೆದಡಿಯ ಸವಕಟ್ಟನುಜ್ಜಳಬೆ ೩೦ರ–ಬಳಿಯಬಾಡ, "ಜವಳಿಗೆ ಶ್ರೀಮದ್ಯುವರಾಜ ಮಲ್ಲಿಕಾರ್ಜುನ ದೇವರಿಗೆ ಪರಿವರ್ತದಿಂದ ಅಲಂದೆಯ ಸವಕಟ್ಟಿನ ಮೊರಂರ್ಬ೪ರ ಬಿಳಿಯ ಬಿಬ್ಬಲೇಶ್ವರ ಒಂದು, ಅಂತು ಮತ್ತ ೯೦೦ಕ್ಕೆ ಬಾಡ೨ ಎಂದು ಉಲ್ಲೇಖಿಸಿದೆ(ಪು.ಸಂ.೭೫. ೨೧–೨೪ನೆಯ ಸಾಲು).

ಶ್ರೀಮತ್ ತ್ರಿಭುವನಮಲ್ಲದೇವ ಶ್ರೀಪಾದಪದ್ಮೋಪಜೀವಿ ಮಲ್ಲಣಭಟ್ಟ ದಂಡನಾಯಕ(೩೨–೩೮ನೆಯ ಸಾಲು ಪ್ರಶಸ್ತಿ?).

ನಂನುತ ಜಯಸಿಂಹಂ ಮಹೀಶ್ವರನಾದ ಚಾವುಂಡ ದಂಡನಾಥ ಪಡೆದ ಕರಗದ ಬೆಸನದೆಂದು ಕರಗದ ಬೆಳೆನಂ ಪರೋಪಕಾರವ್ಯಸನಂ, ಆ ವಿಭುವಿಂಗ ಚಂದ್ರಕಬ್ಬೆಗಂ, ವಿನಯೊಂಬೋನಿಧಿ ಸೋಮನಾಥ ಭುಧನು, ಸನ್ಮಂಡನು, ತನಯರನ್ತಾಭೂಸುರಾವೀಶದೋಳ್, ದೇವನುತ ವಾಸುದೇವ ಶ್ರೀವನಿತೇಶ ವೀನಿತನಾದಂತೆ ಜಗದೋಳ್(ಪು.ಸಂ.೭೬. ೩೯–೪೦).

'ಭುವನಗಿರಿಯ ಕವಿರತ್ನ ಭೂಷಣ ವಿಷ್ಣುಭಟ್ಟರ ಕಾವ್ಯ'(ಪು.ಸಂ.೭೬, ೪೭ನೆಯ ಸಾಲು) ಎಂದು ಉಲ್ಲೇಖಿಸಿದೆ. ಮಲ್ಲಣ್ಣ ಭಟ್ಟನಿಗೆ ಹೊಗಳಿದ ಸಾಲುಗಳು–೩೨–೪೭.

ಸ್ಥಳ: ಹುಣಸೀ ಹಡಗಲಿ | ಆಳಿದ ದೊರೆ: ಚಾಲುಕ್ಯ ವಿಕ್ರಮಾದಿತ್ಯ/ರಾಣಿ ಚಂದಲದೇವಿ
ಕಾಲ: ೧೧೯೯ | ಪ್ರಕಟಣೆ: ಹೈ.ಕ.ಭಾ.ಕ.ಶಿ.ಶಾ.–ವ್ಹಿ.ಶಿವಾನಂದ, ೧೯೯೨
ಭಾಷೆ: ಕನ್ನಡ | ಪು.: ೫೮–೬೪

ವಿವರಣೆ–ಸ್ವಸ್ತನವರತ ಕಲ್ಯಾಣಾಭ್ಯುದಯ ಸಹಸ್ರ ಫಲಭೋಗ ಭಾಮಿನೀ ದ್ವಿತೀಯ ಲಕ್ಷೀ ಸಮಾನೆ, ರಾಯ ಝಳಪ್ಪ ಕಲ್ಪಕುಜ ಸಮಾಲಿಂಗಿತ ಕಲ್ಪಲತೆ। ಸಾಮಂತ ಸೀಮಂತಿನಿ,

ದುಷ್ಟದರ್ಪಿಷ್ಟ ಸ್ವಸ್ತಿ ಶಿರೋವಜ್ರಮುಷ್ಟಿ ದೀನಾನಾಥ ಕಟಕ ವೈತಾಳಿಕ ಸುವರ್ಣ ದೃಷ್ಟಿ ವಂದಿ ಚಿಂತಾಮಣಿ। ಅಂತಃಪುರ ಚೂಡಾಮಣಿ। ಮಲಪ ವಿದ್ಯಾಧರಿ। ಸಕಳ ಕಳಾಧರಿ। ರಾಯ ಮನೋಜ ರಾಜರತಿ। ಅಡಬಳ ಸರಸ್ವತಿ। ನೃತ್ಯ ವಿದ್ಯಾಧರಿ। ಸ್ವಸ್ತಿ ಗಜಕೇಸರಿ। ಕಲಿಕಾಲ ಸರಸ್ವತಿ। ಶ್ರೀಮತ್ರಿಭುವನಮಲ್ಲದೇವ ವಿಶಾಲವಕ್ಷಸ್ಥಳ ನಿವಾಸಿನಿಯರಪ್ಪ ಶ್ರೀಮತ್ಪಿರಿಯರಿಸಿ ಚಂದಲದೇವಿಯರು ಅಲಂದೆ ಸಾಸಿರದ ಪ್ರಮುಖವನೇಕ ಭತ್ತ ಗ್ರಾಮಂಗಳುಮಂ ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಲದಿಂದಲ್ ಅರಸುಗೆಯ್ಯುತ್ತಮಿರೆ। ತತ್ಪಾದ ಪದ್ಮೋಪಜೀವಿ ಸಮಧಿಗತ ಪಂಚ ಮಹಾಶಬ್ದ ಮಹಾ ಮಂಡಳೇಶ್ವರ ಕೊಪಣ ಪುರವರಾಧೀಶ್ವರಂ ಅಲಂದೆವೆಡಂಗಂ ಮನ್ನೆಯ ಸಿಂಗಂ ಸತ್ಯಯುಧಿಷ್ಠಿರಂ ಭಯಲೋಭ ನಿಷ್ಠುರಂ। ಸಂಗ್ರಾಮ ಷಣ್ಮುಖಂ। ಪರಿವಾರ ಶ್ರೀಮುಖಂ ಬಂಟರಭಾವಂ ಮರವುಗೆ ಕಾವಂ। ದೇವಗುರು ದ್ವಿಜಪಾದಾರಾಧಕಂ। ವೈರಿ ಬಳ ಸಾಧಕಂ। ದಾಡಿಗ ಬೇಂಟೆಕಾರಂ ರಾಜನಂಕಕಾರಂ ಪದ್ಮಾವತೀ ದೇವಿ ವರಲಬ್ಧ ಪ್ರಸಾದಂ। ದಾನವಿನೋದಂ ಶ್ರೀಮನ್ಮಹಾ ಮಂಡಳೇಶ್ವರ ಬಿಬ್ಬರಸಂ ಅಲಂದೆನಾಡ ಗೊಂಕ ನೂರಿಪ್ಪತ್ತರುವತ್ತು ಬಾಡವಪ್ಪ ಆತ್ಮೀಯ ಮಂಡಳಮನಖಂಡ ಪ್ರತಾಪದಿಂ ನಿರ್ವಾಯದ್ಯಂ ಮಾಡಿಯರಸುಗೆಯ್ಯುತ್ತಮಿರೆ।

ಸ್ವಸ್ತಿ ಶ್ರೀಮತ್ರಿಭುವನ ಮಲ್ಲದೇವರ ನಿರವಧಿ ಪ್ರತಾಪದಿಂದೆತ್ತಿ ಧಾರೆಯಂ ನಿರಾಧಾರಂ ಮಾಡಿಯಲ್ಲಿಯ ಉದಿಯಯ ಮಕ್ಕಳ ಜಜ್ಜುಗಿ ಜಗದೇವನಂ ಕಾಣಿಸಿಕೊಂಡು ಬರುತ್ತುಂ, ಚಾಳುಕ್ಯವಿಕ್ರಮ ವರ್ಷದ ೨೩ನೆಯ ಬಹುಧಾನ್ಯ ಸಂವತ್ಸರದ ಜೇಷ್ಠದಮಾವಾಸ್ಯೆಯ ಸೂರ್ಯ ಗ್ರಹಣದಂದು, ಗೋದಾವರೀ ತೀರದ ಕೋಟಿ ತೀರ್ಥದಲಿ ತುಲಾಪುರುಷಮೀದು ಪುರಾಣೋಕ್ತಿಯಿಂದನೇಕ ತುಷ್ಟದಾನಂಗಳಂ ಕುಡುವಲ್ಲಿಯ ದಾನೋಚಿತ ಕಾಲದಲ್ ಮಹಾ ಪ್ರಧಾನಂ ಮನೆವೆರ್ಗ್ಗಡೆ ಸಹವಾಸಿಗಳ ಅಧಿಷ್ಠಾಯಕಂ ಪತ್ತಲೆ ಕರಣಂ ಮನ್ನೆಯರ ಅಧ್ಯಕ್ಷಂ ದಂಡನಾಯಕಂ ಭೀವಣಯ್ಯಂಗಳ ಬಿನ್ನಪದಿಂ ನೃತ್ಯ ವಿದ್ಯಾಧರಿ ಚಂದಲದೇವಿಯರ ಧರ್ಮವಾಗಿಯಲಂದೆ ಸಾಸಿರದ ಚೌಧರೆ ರಕ್ಕಸಯ್ಯ ನಾಯಕರ್ ಆ ನಾಡಕಂಪಣ ಗೊಂಕ ನೂರಿಪ್ಪತ್ತರತುವತ್ತುಂ ಬಾಡದ ಬಳಿಯ ತಮ್ಮ ಪ್ರಭುತ್ವದೂರ್ಗಳ ಹಡಂಗಿಲೆಯೆರಡು ಮೇಳಕುಂದೆ ಮಳಲಿ ಕೊಳನೂರು ಬೆಳಗುಪ್ಪ ಮೂಳವಳಿಯಿಂತಿದರೊಳಾ ಹಡಂಗಿಲೆಯಲ್ ತಾವು ಮಾಡಿಸಿದ ಕಲ್ವೆಸದ ಬಸದಿಯ ಪಾರ್ಶ್ವನಾಥ ದೇವರ್ಗ್ಗ ವಲ್ಲಿಯ ಕೆಲದ ಪಟ್ಟಸಾಲೆಯ ಶಾಂತಿನಾಥ ದೇವರ್ಗ್ಗಂ ಸಂತತಂ ಮಾಡುವಭಿಷೇಕಕ್ಕಮಷ್ಟ ವಿಧಾರ್ಚನೆಗಂ ಜೀವದಯಾಷ್ಟಮಿ ಮೊದಲಾಗಿಯನೇಕ ಪರ್ವ್ವ ಮಹಾಪೂಜೆಗಳಂ ರಿಷಿಯರ್ಕಳಾಹಾರ ದಾನಕ್ಕ ಮಾಯೆರಡು ಬಸದಿಯ ಖಂಡಸ್ಫಟಿತ ಜೀರ್ಣೋದ್ದಾರದ ಬೆಸಕ್ಕವಾ ಹಡಂಗಿಲೆಯ ವಾಯುವ್ಯದ ಹೊಲದಲಲುಂಬರಗೆಯಲ್ ನುಡಿದಂತೆ ಗಂಡನ ಗಡಿಂಬದಲು ಬಿಟ್ಟ ಕರಿಯ ನೆಲಂ ಮತ್ತರು ಹನ್ನೆರಡು.

ಮತ್ತ ಕಾಲಡಿಯಲೊಂದು ಮತ್ತರುವರೆ ತೋಂಟವೋದಮಾ ಬಸದಿಯಿಂ ತೆಂಕಲುಂ ಪಡುವಲೀದ ಹತ್ತು ಮನೆಗಳುಮಂನಾ ಕೆಯೀ ಮೂಡಲು ಪಿರಿಯ ಮೇಳಕುಂದೆಯಿಂದ ಆ ಊರಿಗೆ ಪೋದ ಬಟ್ಟೆ ತೆಂಕ ನೆಟ್ಟಕಲ್। ಪಡುವ ನೀಲನೂರು ವೊಲಮೇರೆ। ಬಡಗ

ಹತ್ತಿಕುಂದೆಯ ಹೊಲ ಮೇರೆ। ಯಿವು ಚತುಸ್ಸೀಮೆ। ಯಿಂತೀ ವೃತಿಗೆಲ್ಲಮರುಣವೆರಡು ಗದ್ಯಾಣ ಪೊನ್ನಂ ತೆತ್ತು ತಮ್ಮ ಗುರು ಕುಲಂ ಶ್ರೀಮೂಲ ಸಂಘದ ದೇಸಿಗ ಗಣದ ಪುಸ್ತಕ ಗುಚ್ಛದ ಪಿರಿಯ ಸಮುದಾಯಂ ಶ್ರೀ ಬಾಲಚಂದ್ರ ಸಿದ್ಧಾಂತ ದೇವರ ಶಿಷ್ಯ ಪ್ರಶಿಷ್ಯ ಸಂತತಿಯ ನೈಷ್ಠಿಕ ತಪೋಧನರಿದ್ದೀ ಧರ್ಮಮಂ ಯತ್ನದಿಂ ಪ್ರತಿಪಾಲಿಸುವಂತಾಗಿ ರಕ್ಕಸಯ ನಾಯಕಕೋಟ್ಟರ್॥ ಯಿಂತು ಯಿವು ಮೊದಲಾಗಿಯನೇಕ ದಾನಧರ್ಮ ಪರೋಪಕಾರಗಳಿಂ ಪುರುಷಾರ್ಥಮಂ ಸಫಲ ಮಾಡಿ ತಂಮ ಪುತ್ರ ಪೌತ್ರಾದಿಗಳರಸುಗಳುಮೀ ಕ್ರಮದಿಂ ನಡೆಯಿಸುವಂತಾಗಿ ಶಾಸನಂ ಮಾಡಿ ಪುಣ್ಯ ಕಿಲಬ್ದ ವರಪ್ರಸಾದಂ ಮೃಗಮದಾಮೋದಂ ಗಂಡ ಗೋಪಾಲಂ, ರಿಪುಕರ್ನ ಕಾಲಿ ದಳದಂಕಕಾರಂ ನಾನೆಗನಂಕಕಾರಂ ಶ್ರೀಮದ್ಭೂಲೋಕ ಮಲ್ಲದೇವ ಪಾದಾರಾಧಕಂ, ಪರಬಲ ಸಾಧಕಂ ನಾಮಾದಿ ಎಂಬ ಶ್ರೀಮನ್ಮಹಾಮಂಡಲೇಶ್ವರಂ ಬಿಜ್ಜರಸರ ಪ್ರಶಸ್ತಿ ಶಾಸನ ಒಳಗೊಂಡಿದೆ. ಕೀರ್ತಿ ಶಾಸನಮಾಚಂದ್ರಾರ್ಕ ಸ್ಥಾಯಿಯಾಗಿ ನಿಲಿಸಿದರು॥

ಸ್ಥಳ: ಹರಸೂರ — **ಆಳಿದ ದೊರೆ:** ಕಲ್ಯಾಣ ಚಾಲುಕ್ಯ ದೊರೆ ?

ಕಾಲ: ಕ್ರಿ.ಶ.೧೨ನೆಯ ಶತಮಾನ — **ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ — **ಪು.:** ೧೦೩

ಹರಸೂರ(೧೨ನೆಯ ಶತಮಾನ): ಚಾಲುಕ್ಯ ಪ್ರತಾಪಚಕ್ರಿ ಸಂಪೂರ್ಣ ತ್ರುಟಿತ.

ಸ್ಥಳ: ಹರಸೂರ — **ಆಳಿದ ದೊರೆ:** ?

ಕಾಲ: ಕ್ರಿ.ಶ.೧೧೯೭ — **ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬

ಭಾಷೆ: ಕನ್ನಡ — **ಪು.:** ೧೦೩

ಜಗದೇಕಮಲ್ಲ ನೃಪನರ ಮನೆಯೊಳ್ವರಮಂತ್ರಿ ಸಿದ್ದಪಯೆನಿಪಂ ಧರೆಯೊಳು ಶ್ರೀ ಬಮ್ಮಣಯ್ಯ ದಂಡಾಧೀಶ। ಸ್ಥಿರಬಂಮ ಚಮೂಪತಿಗೆ, ವರಲಕ್ಕಾದೇವಿ ಜನನಿಗಂ ಪುಟ್ಟಿದ ತನಯ ಷಣ್ಮುಖ ದೊರೆಯಂ 'ಹೆಂಮಾಡಿದೇವಂ'.

ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ, ಶಿಷ್ಟ ಜನ ಫಳದಾಯಕಂ ವಿತರಣ ವಿಕ್ರಮಾದಿತ್ಯ, ಬುಧಜನಸ್ತುತ್ಯ, ಬಂಧುಜನಕುಮುದ, ಚಂದ್ರಂ, ವಿಭವಾಮರೇಂದ್ರ, ಸಕಲಲಗುಣ ಸಮುದ್ರ ಷಡರುದ್ರಂ ಹಯಶಾಲಿ ಹೋತ್ರಂ ಕದನ ತ್ರೀಣೇತ್ರಂ, ಚಾಳುಕ್ಯ ಪ್ರತಾಪ ಚಕ್ರಿ ಚಕ್ರಧರ, ವೈನತೇಯ, ಶೌಚಗಾಂಗೇಯ ಶ್ರೀ ಜಗದೇಕ ಮಲ್ಲದೇವ ಪಾದಾರಾಧಕ, ರಿಪುಬಳಸಾಧಕ ಎಂಬ ಪ್ರಶಸ್ತಿ ಹೊಂದಿದ ಶ್ರೀಮನ್ಮಹಾಪ್ರಧಾನ ಹಿರಿಯ ದಂಡನಾಯಕ ಬಮ್ಮಣ್ಣಯ್ಯ ಎಂದು ಉಲ್ಲೇಖಿತವಾಗಿದೆ(ಪು.ಸಂ.೧೦೮.೧೪-೨೨ನೆಯ ಸಾಲುಗಳು).

ಬಮ್ಮಣ್ಣಯನಂತ ಪ್ರತಿಯೆನಿಪ ವಿಪ್ರ ಸಂತತಿಗಧಿಕಂ ಮಾಂತನದಿಂದಿರ್ತ್ತದೇ ಚಿಂತಾಮಣಿ ಮೆನಿಸಿಯ ಗ್ರಹಾರಂಗಳುಮಂ. ವರಜಂಬೂದ್ವೀಪದೊಳಗಿನ ಭರತಾವನಿಯಲ್ಲಿ ಕುಂತಳ

ಜನಲಪದದೊಳು ಕರಮೆ ಸೆವುದಲಂದೆ ಸಾಸಿರ ಪಿರಿದದರೊಳ ಗೊಂಕನಾಡು ಜನಪರಿಪೂರ್ಣಂ॥ ಅದರಲ್ಲಿ ಶಾಲೆಯ ಸೀಮಳ ಮದನಾರಿ ಮುರಾರಿ ಪಂಕಜ ಪ್ರಿಯೆಗ್ರಹದಿ ಪದಪಿ ಜಿನಸದನಗಂ, ಸದಮಳ ಪೊಂಗಳ ಸಚಯ ದಿನ ತಿರಮಣೀಯಂ॥ ಸಲ್ಲಲಿತ ವಿಪ್ರ ಸಂಕುಲವೆಲ್ಲನೋಲ್ಪೆಮೆಂಬಿನಂ (ಪಡಿದನಿಬರ್ಬಲ್ಲಿದರು) ವಿಷ್ಣುವಂ ನರುಬಲ್ಲ ಶ್ರೀವೇದ, ಶಬ್ದ ಶಾಸ್ತ್ರಾದಿಗಳು ಅದರಲ್ಲಿ ಜ್ಞಾನ ಹೊಂದಿದ್ದರು(ಪು.ಸಂ.೧೦೮.೨೨-೨೮ನೆಯ ಸಾಲು).

ಬ್ರಾಹ್ಮಾಂಭೋಜ ದಿವಾಕರರುಂ ಶಿಷ್ಟಜನ ಕುಮುದ ಸುಧಾಕರರು, ಅವುಪಾಸನಾಗ್ನಿಹೋತ್ರ ದ್ವಿಜಗುರು ದೇವಪೂಜಾತತ್ಪರರು ದುಗ್ಧಾಬ್ಧಿ ದಿಂಡೀರ ಪಿಂಡ ಪಾಂಡುರ ನಿಜೋಜ್ವಳ ಕೀರ್ತಿಯುತರು. ಸಮಸ್ತ ಶಾಸ್ತ್ರಾ ಪಾರಾವಾರ ಪಾರಗರುಂ ಶ್ರೀ ಮುಕುಂದ ಪಾದೋದಕ ಪವಿತ್ರೀಕೃತೋತ್ತಮಾಂಗರುಮೆನಿಪ್ಪ ಶ್ರಿಮರ್ತ್ಸರ್ವನಮಸ್ಯ ಅಗ್ರಹಾರ ಶಾಲೆಯ ಸೀಮೊಳದಶೇಷ, ಮಹಾಜನಗಳು, ಶ್ರೀವಿಭು ಕೇತಿಶೆಟ್ಟಿ, ಪುರುಷಾಗ್ರಣಿ, ವಧುಕಾಳಿಕಬ್ಬೆ, ಭಾವಿಪ ಮಾಚಿಸೆಟ್ಟಿಯ ಅನುಜನಾದ ವಿನಯಾಂಬುಧಿ ಕಾಳಿಸೆಟ್ಟಿ, ತಾವವರಿಂದ ನೇರ್ಗ್ಗಿಳೆಯ ಬಂಮಣಸೆಟ್ಟಿ, ಸಾಗರಯ್ಯ, ಶ್ರಿವಿದಿತಪಸಿದ್ದಯಶ ಭಾಸ್ಕರಶೆಟ್ಟಿವಿಂತು ಪುಟ್ಟಿದರ್. ಭಾಸ್ಕರಯ್ಯ, ಸಾಗರಸೆಟ್ಟಿ ಈ ಧರ್ಮ ಪ್ರಕಟಿಸಿದರು.(ಪು.ಸಂ.೧೦೯.೨೯-೩೭ನೆಯ ಸಾಲುಗಳು).

ಇದು ಸೇವ್ಯವಹ ಬಾಳಿಸೆಟ್ಟಿ ವಿಭುಮುಂ ಮಾಡಿದ್ದು ಸಂದಯ್ದೆ ಬಿಟ್ಟುದ ತಾನು ಭಾಸ್ಕರ ಸೆಟ್ಟಿ ನಿರ್ಮಿಸಿದ ಬಾಳೇಶ್ವರಾವಾಸವುಂ ಪದಂ ನೆರೆ ಕೇತಿಸೆಟ್ಟಿ ವೊದಲೊಳು ಪ್ರಾರಂಭಮಾಡಿದೊಂದು ಮುದದಿಂ ಸಾಗರಸೆಟ್ಟಿ ಮಾಡಿಸಿದ 'ಕೇದಾರೇಶ್ವರಾವಾಸಮಂ'(ಪು.ಸಂ.೧೦೯. ೩೭-೩೯ನೆಯ ಸಾಲುಗಳು)

ಷಣ್ಮುಖ, ಕೇಶವಗೋಪತಿ 'ಸಪ್ತಮಾತೃಕಿರಣ' ವಾಣಿಯುವಿರದೊಂದು ವಾಪಿಯಂದಿಂತಿವು ಸಾಗರಸೆಟ್ಟಿ, ಭಾಸ್ಕರಯ್ಯ ಕೃತಂಗಳ್॥(ಪು.ಸಂ೧೦೯. ೩೯-೪೧ನೆಯ ಸಾಲುಗಳು). ತ್ರಿಭುವನದೇವರ ಆಳ್ವಿಕೆ ಕಾಲದಲ್ಲಿ ಬೃಹವಾರದಂದು ಗೊಂಕನಾಡು ಮಂನೆಯ, ಗೋಂಕರಸನು ಸೀಮೊಳ ಪ್ರಭು ನಾಚರಸನು ಮತ್ತು ಶೇಷ ಪ್ರಭುಗಳು, ವೈಶ್ಯಕುಲದ ಕುಮುದ ಸುಧಾಕರನೆನಿಸಿದ ಗುಣಿ ದೊಡ್ಡಮಣಿಯ ಕೇತಿಸೆಟ್ಟಿಯ ಶ್ರೀ ಬಾಳೇಶ್ವರ ದೇವರಿಗೆ ಪೂಜಾರ್ಥಕ್ಕಾಗಿ ಬಡಗ ಹೂದೋಟ೨ ಮತ್ತರು(ಪು.ಸಂ.೧೦೯-೧೧೦.೪೨-೪೫ನೆಯ ಸಾಲುಗಳು).

ಬಂಮಣಯ್ಯ ಹಿರಿಯ ದಂಡನಾಯಕರು, ಲಕ್ಕಾದೇವಿಯರು ಮತ್ತು ಹೆಮ್ಮಾಡಿ ದೇವರಸರು, ಶ್ರೀಮದಶೇಷ ಮಹಾಜನಮುಂ ಧರ್ಮ ಪ್ರತಿಪಾಲಿಸುವರು(ಪು.ಸಂ೧೧೦.೪೫-೪೯ನೆಯ ಸಾಲು). ಇಂತು ಪಾರ್ವತೀಶ ಶಾಸನ ಮುದದಿಂದ ಮಲ್ಲಿಸೆಟ್ಟಿನಂದನ ವಿನೆಯಾಭ್ಯುದಯಕರ ಮಾಚಿಸೆಟ್ಟಿ ನುಡಿಪೊ ತತ್ಕೃತಿ ಜಗಕ್ಕಿದೇಂ ಕೃತಿಯಲುತೆ ಮಲ್ಲೋಜ ಕಡೆದ(ಪು.ಸಂ.೧೧೦. ೪೯-೫೦ನೆಯ ಸಾಲುಗಳು).

ಸ್ಥಳ: ಹರಸೂರು ಆಳಿದ ದೊರೆ: ಕಳಚೂರಿ ರಾಯಮುರಾರಿ ಸೋವಿದೇವ

ಕಾಲ: ೧೧೭೨ ಪ್ರಕಟಣೆ: ಹೈ.ಕ.ಭಾ.ಕ.ಶಿ.ಶಾ.-ಫ್ಹಿ.ಶಿವಾನಂದ, ೧೯೯೨

ಭಾಷೆ: ಕನ್ನಡ ಪು.: ೧೯೦-೧೯೬

ಶಾಸನದಲ್ಲಿ ಸೂರ್ಯ, ಚಂದ್ರ, ನಿಂತ ಗೊಂಬೆ, ಧೂಪಾರತಿ ಗೊಂಬೆಗಳು, ಈಶ್ವರ, ಚೂರಿ, ಆಕಳು, ಕರುವಿನ ಚಿಹ್ನೆಗಳಿವೆ. ಸಮಸ್ತ ಬಿರುದಾಂಕಿತನಾದ ರಾಯಮುರಾರಿ ಸೋವಿದೇವನ ಮಹಾದಂಡನಾಯಕ ಮಾಧವಯ್ಯ ನಾಯಕರು, ಅಲಂದೆಯ ಸೋಮನಾಥ ಲಬ್ದ ವರಪ್ರಸಾದ, ಮನ್ನೆಯಸಿಂಹ ರಾಮರಸ ಹಾಗೂ ಮಹಾಮಂಡಳೇಶ್ವರ ವೀರ ಗೋಂಕರಸರೊಡನೆ ಶಾಲೆಯ ಸೀಮಳದ(ಹರಸೂರು) ಶ್ರೀ ಭೋಗೇಶ್ವರ ದೇವರಂಗ ಭೋಗಕ್ಕಾಗಿ ಗೊಂಕನೂರಿಪ್ಪತ್ತರ ಬಳಿಯ ಅಂಕುಲಗೆಯನ್ನು ದತ್ತಿಯಾಗಿರಿಸಿದ್ದು. ಕಳಚೂರಿ ವಂಶವಿಸ್ತಾರ. ಶಾಲೆಯ ಸೀಮಳ ಎಂಬುದು ಉಲ್ಲೇಖಿಸಲಾಗಿದೆ.

ವಿವರಣೆ-ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಧಿರಾಜ ರಾಜಪರಮೇಶ್ವರಂ ಕಾಳಾಂಜರ ಪುರವರಾಧೀಶ್ವರಂ ಸುವರ್ಣ ವೃಷಭ ಧ್ವಜಂ ಮಕರಧ್ವಜಂಕಳಚೂರಿಯ ಕುಲಕಮಲ ಮಾರ್ತಾಂಡಂ ಕದನ ಪ್ರಚಂಡಂ ಡಮರುಗ ತೂರ್ಯ ನಿರ್ಘೋಷಣಂ ವೈರಿಕುಲ ಭೀಷಣಂ ಶರಣಾಗತ ಗಜಸಾಮಂತ ವಜ್ರಪಂಜರಂ ವೈರಿ ದಿಕ್ಕುಂಜರಂ ಪ್ರತಾಪಲಂಕೇಶ್ವರಂ ಸುಭಟಾದಿತ್ಯ ಕಲಿಗಳಂಕುಶಂ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ। ಶ್ರಿಮದ್ರಾಯ ಮುರಾರಿ ಸೋಯಿದೇವ ಎಂದಿದೆ. ಪ್ರಶಸ್ತಿ ಸಹಿತವಾಗಿ ರಾಯ ಮುರಾರಿ ಸೋವಿದೇವನನ್ನು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ವಿಜಯ ರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನ ಮಾಚಂದ್ರರ್ಕ ತಾರಂಬರಂ ಸಲ್ಲುತ್ತಮಿರೆ॥ ತತ್ಪಾದ ಪದ್ಮೋಪಜೀವಿಯರಪ್ಪ ಶ್ರೀಮನ್ಮಮಹಾಪ್ರಧಾನಂ ಸೇನಾಧಿಪತಿ ಬಾಹತ್ತರ ನಿಯೋಗಾಧಿಪತಿ ಹಿರಿಯ ದಂಡ ನಾಯಕರ ಮಾಧವಯ್ಯ ನಾಯಕಂ॥ ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಕೊಪ್ಪಣ ಪುರವರಾಧೀಶ್ವರಂ ನಾಚರಾಜಾನ್ವಯಂಬೋಜ ದಿವಾಕರಂ ಸತ್ಯರತ್ನಾಕರಂ ಶ್ರೀಮದಲಂದೆಯ ಸೋಮನಾಥ ದೇವಲಬ್ದ ವರ ಪ್ರಸಾದಂ ಮೃಗಮದಾಮೋದಂ ಮಂನ್ನೆಯ ಸಿಂಹಂ ಮನ್ನೆಯ ಬಂಗಾರಂ ಶ್ರೀಮನ್ಮಮಹಾಮಂಡಲೇಶ್ವರಂ ವೀರರಾಮದೇವರಸರುಂ ವೀರಗೋಂಕರಸರುಂ ಇಂತಿವರಿಬ್ಬರು ಸಹಿತಮಾಗಿ ಶ್ರೀಮತ್ಸರ್ವನಮಸ್ಯದಗ್ರಹಾರಂ ಶಾಲೆಯ?ಜಕುಳ? ಶ್ರೀ ಭೋಗೇಶ್ವರ ದೇವರ ಅಂಗಭೋಗ ರಂಗಭೋಗಕ್ಕಂ ಚೈತ್ರ ಪವಿತ್ರಕ್ಕಂ ಖಂಡಾಸ್ಫಾದಿತಃ ಜೀರ್ಣೋದ್ಧಾರಕ್ಕಂ ಗೊಂಕ ನೂರಿಪ್ಪತ್ತುರುವತ್ತರ ಬಳಿಯ ಬಾಡದಂಕುಲಿಗೆಯಂ ರಾಯಮುರಾರಿ ಸೋವಿದೇವ ವರುಷದ ಆರನೆಯ ನಂದನ ಸಂವತ್ಸರದ ಮಾಘ ಶುದ್ಧ ಪುಣ್ಣಮಿ ಬೃಹಸ್ಪತಿವಾರದಂದು ಸೋಮಗ್ರಹಣ ನಿಮಿತ್ತಂ ಧಾರಾಪೂರ್ವಕಂ ಸರ್ವನಮಸ್ಯಮಾಗಿ ಕೊಟ್ಟರು॥ ಆ ಗ್ರಾಮ ಶೀಮೆಯೆಂತೆಂದಡೆ ಮೂಡಲ್ಬೆಣ್ಣೆತೊರೆ ಮೆರೆ। ತೆಂಕಲ ಹಳ್ಳಿಯ ಹಳ್ಳಂ ಮೇರೆ। ಆ ಹಳ್ಳದಿಂ ಪಡುವ ಮುಖ(ದ ಬರ)ಲಲ್ಲಿ ನಟ್ಟಕಲ್ಲು ಮೇಲಿ। ಅಲ್ಲಿಂ ಬಡಗ ಮೊಗದಿ ಶ್ರೀಪುರುಷ(ಕ್ಷಿತಿ?) ಬರಲವರ ವಾಡಿಯ ಸೀಮೆಯ್‌ನಳ್ಳ ಮರ ಮೇರೆ। ಅಲ್ಲಿಂ ಪಡುವ

ಮುಖದೆ ಬರೆ ನೈಋತ್ಯದ ಕೋಣಿನಲ್ಲಿ ಅಮರವಾಡಿಯ ಕಗ್ಗಲ್ಲ ಮೊರಡಿಯಂಕುಲಗೆಯ ಮುಗ್ಗುಡ್ಡೆಯ ನಟ್ಟ ಕವಿಲೆಯಕಲ್ಲು ಮೇರೆ। ಯಿಶಾನ್ಯದೊಲಂ ಯಾ ಹಳ್ಳದ ಬೆಂಣೆಯ ತೊರೆಯ ಕೂಡಲಲ್ಲಿ ನೆಟ್ಟಕಲ್ಲು ಮೇರೆ॥ ಶಾಪಾಶಯವಿದೆ.

ಇಂತೀ ಸ್ಥಾನಮನೂರ್ಜಿತಂ ಮಾಡಿ ಪಡೆದಾಚಾರ್ಯ ಹರಿಹರ ಜೀಯಂ॥ ಶ್ರೀಮಂಡನಂ ಮತ್ತಮಾ ಭೋಗೇಶ್ವರ ದೇವರ್ಗೆ ದೇಸಿಗಳಂ ನಕರಂಗಳಂ ಕೊಟ್ಟಯಾಗಾಣದಲರ್ಥ ಲೊಲಗೆಯಂಣ್ಣೆ ಹೊಂಗೆ ಮಾರಿದಡಕೆಯಲ್ಲೈ ದಡಕೆ ಹೇರಿಂಗಿಪ್ಪತ್ತುಯಲೆ ಭತ್ತದಲಿ ಕೊಟ್ಟವರೊಲ್ಲೊಂಮ್ಮನ ಕೊಂಡವರೊಲ್ಲೊಂಮ್ಮನ ಮೇಣಾಪೂಜೆಗಂ ಹಾಂಗೆ ಬೆಳ್ಳಿಯ ಹಾಗ ಮತ್ತ ಮನಾದಿಯಿಂ ಬಂದ ಕೆಯಿಮತ್ತರ೩೧೧೦ ವೂರ ನೈರುತ್ಯ ಪಕೋಣಿನಲ್ಲಿಂ ಪೊದಕ್ಕೆ ಸುತ್ತುಂ ನಟ್ಟ ಕಲ್ಮೇರೆ॥ ಆ ಸ್ಥಾನದ ಪ್ರಭು ಹೆಗ್ಗಡೆ ಗೌಡನ ಮೊಮ್ಮಗ ಚಿಕ್ಕಗೌಂಡಂ ಮುಖ್ಯವಾಗಿ ಯಾ ಪ್ರಭುತ್ವ ದಂಶದೊಳೊಲ್ಲವಷ್ಟಬಂಧಂ ತಂಮ್ಮನೆಯ ಪ್ರಬಂಧದ ಕೆಯ್ಯನುಂಡಿಪ್ಪರು॥ ದೇವರು ಪ್ರಭುಗಳು ಕಾಪಾಡುವರು॥

ಸೀಮೆಯ ಉಲ್ಲೇಖ- ಆ ಗ್ರಾಮ ಶೀಮೆಯೆಂತೆಂದಡೆ ಮೂಡಲ್ಬೆಣ್ಣೆತೊರೆ ಮೆರೆ। ತೆಂಕಲ ಹಳ್ಳಿಯ ಹಳ್ಳಂ ಮೇರೆ। ಆ ಹಳ್ಳದಿಂ ಪಡುವ ಮುಖ(ದ ಬರ)ಲಲ್ಲಿ ನಟ್ಟಕಲ್ಲು ಮೇಲಿ। ಅಲ್ಲಿಂ ಬಡಗ ಮೊಗದಿ ಶ್ರೀ ಪುರುಷ(ಕ್ಷಿತಿ?) ಬರಲವರ ವಾಡಿಯ ಸೀಮೆಯ್‌ನಳ್ಳ ಮರ ಮೇರೆ। ಅಲ್ಲಿಂ ಪಡುವ ಮುಖದೆ ಬರೆ ನೈಋತ್ಯದ ಕೋಣಿನಲ್ಲಿ ಅಮರವಾಡಿಯ ಕಗ್ಗಲ್ಲ ಮೊರಡಿಯಂಕುಲಗೆಯ ಮುಗ್ಗುಡ್ಡೆಯ ನಟ್ಟ ಕವಿಲೆಯಕಲ್ಲು ಮೇರೆ। ಯಿಶಾನ್ಯದೊಲಂ ಯಾ ಹಳ್ಳದ ಬೆಂಣೆಯ ತೊರೆಯ ಕೂಡಲಲ್ಲಿ ನೆಟ್ಟಕಲ್ಲು ಮೇರೆ॥

ಸ್ಥಳ: ಹರಸೂರು **ಆಳಿದ ದೊರೆ:** ಜಗದೇಕಮಲ್ಲ

ಕಾಲ: ೧೧೮೩ **ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ.-ಷ್ಟಿ.ಶಿವಾನಂದ, ೧೯೯೨

ಭಾಷೆ: ಕನ್ನಡ **ಪು.:** ೨೧೯-೨೨೨

ಆಕಳು, ಕರು, ಸೂರ್ಯ, ಈಶ್ವರ, ಚಂದ್ರ ಶಾಸನದಲ್ಲಿ ಚಿಹ್ನೆಗಳಿವೆ. ಶಾಲೆಯ ಶೀಮಳದ ಬಾಲೇಶ್ವರ ದೇವರ್ಗ್ಗೆ ಬಿಟ್ಟ ದತ್ತಿ. ಹರಸೂರಿಗೆ ಹಿಂದೆ ಶಾಲೆಯ ಸೀಮಳವೆಂದು ಹೆಸರಿದ್ದು ಅಂದಿನ ವಿದ್ಯಾಕೇಂದ್ರಗಳಲ್ಲಿ ಒಂದಾಗಿತ್ತೆಂಬ ಅಂಶ ಹರಸೂರಿನ ಬೇರೆ ಶಾಸನಗಳಿಂದಲೂ ತಿಳಿದುಬರುತ್ತದೆ. ಚಾಳುಕ್ಯ ವಂಶಾವಳಿ, ಗೊಂಕ ನಾಡು೧೨೦ ಎಂಬ ಉಲ್ಲೇಖವಿದೆ.

ಶ್ರೀ ರಮಣೀ ರಮಣ ವರವಿ ಸ್ತಾರದಿ ನವಂಳಂ ಸುರಾನದೀವರ ಸಕಳಾ। ಪಾರಸ್ತುತೆ ಸಾರಸ್ವತಿ ವರಹಸ್ತಿ ಮುಖ ಕುಡುಗೆ ಪರಮ ಹರಸುತ ಮುದದಿ॥ ವನಜಾಶೇಷಣನಾಭಿ ಕೂಪನಳಿನಾವೋದ್ದಂ(ಶ)ನಾತಂ ವೀರಂ ಜಿನನಾತಂಗೆ ಸುತಂ ಮನೋಜಭವನಿಭಂ*ಮುನಿವೋತಂಗೆ ನಂದನನಾಹಾರಿತ(ನುಂ) ಮಂಚನಪ್ರತಿಮ ತೇಜಂ ಕಂಜ ಮಿತ್ರಂಗೆ ಭಕ್ತಿ ನಿಮಿತ್ತಂ ಜಲದಿಂದಮರ್ಗುರ್ವೆರೆಯಲ್ ತಾಂ ರಾಜತಾದ್ರೀಕದೊಳ್॥ ಮದರಹಿತಮೆನಿಸುಮುತ್ತವಂ ಜದಮುದರದೊಳೊಗೆದನೆಂದ ಮುನಿವರರೆಲ್ಲಂ। ಬುಧತಂ ನೃಪನೆಂಬ ಪೆಸರ ಶ*ಳೆ ಬರುವಿನಂದು

ಕುಡಲ್ ತಾ ನೃಪ ವಂಶಂ॥ ಚಾಳುಕ್ಯರಾದರದರಿಂ ಪೇಳಲಿಕಂ ಪಲಬರೆನಿಸಿ ನೃಪರೀ ಧರೆಯಂ। ಲೀಲೆಯನಾಳ್ದಂ ಬಗೆಯಂ ಬಾಲೇಂದುಧರ ಪ್ರತಾಪನಪ್ರತಿಮ ರೂಪ॥ ಘನಶೌರ್ಯ ತೈಲಚಕ್ರಿಯ ತನಯಂ ಸತ್ಯಾಶ್ರಯಂತ ***ದುರ್ವಿಶ॥ನ ನಂದನ ವಿಕ್ರಮಯ್ಯಣಮುನುತಾಂ ಜಯಾಹ್ವ ದೇವಂ ತಂನೃಪ ಪುತ್ರಂ॥ ಅಹವಮಲ್ಲ ಕ್ಷಿತೀಪಂ ದ್ರೋಹಘರಟ್ಟಂ(***)ರ್ವಿರಾದಿಪತನಯಂ। ಬಾಹಾಬಲ ಸೋಮನವಂ ಸಾಹಸ ಘನನಾತನನುಜ ಪೇರ್ಮಾಡಿನೃಪಂ॥ ಆ ನೃಪತನಯಂ ಸೋಮ ಮಹೀನಾತಂ ತಂನೃಪಾಲನಂದನ ಜಗದೇಕಾನೃಪನಾತನ ಮಗಂದಾನಿ ಶ್ರೀ ತೈಲಚಕ್ರಿ ಚಕ್ರಿಲಲಾಮಂ॥ ಹರಿರಾಯ(ಮಂ) ಕಂಟತಾಡಿತ ಭರಣಂ ಜಗದೇಕಮಲ್ಲ ನೃಪನರಮನೆಯೊಳ್ ಪರಮಶ್ರೀ ಸದ್ವೃತಮೆನಿಪಂ ಧರೆಯೊಳ್ ಶ್ರೀ ಬಂಮ್ಮಣ್ಣಯ್ಯ ದಂಡಾಧೀಶಂ॥ ಸ್ಥಿರ ಬಮ್ಮ ಚಮೂಪತಿಗಂ ವರಲಕ್ಕಾದೇವಿ ಜನನಿಗಂ ಪುಟ್ಟಿದ ಸುಂದರರೂಪತನಯ ಷಣ್ಮುಖ ದೊರೆಯಂ ಪೇರ್ಮಾಡಿದೇವ ಮರೆವೊಗೆ(ತಾಪಂ)॥

ಸ್ವಸ್ತಿ ಸಮಧಿಗತ ಪಂಚ ಮಹಾಶಬ್ದ ಮಹಾ ಸಾಮಂತಾಧಿಪತಿ ಮಹಾ ಪ್ರಚಂಡ ದಂಡನಾಯಕಂ ಇಷ್ಟಜನ ಫಲದಾಯಕಂ ವಿತರಣ ವಇಕ್ರಮಾದಿತ್ಯಂ ಬುಧ ಜನಸ್ತುತ್ಯಂ ಬಂಧು ಜನಕುಮುದ ಚಂದ್ರ ವಿಭವಾಮರೇಂದ್ರ ಸಕಳಗುಣ ಸಮುದ್ರ ಆಹವರುದ್ರ ಹಯಶಾಲಿ ಹೋತ್ರ ಕದನತ್ರಿಣೇತ್ರ ಚಾಳುಕ್ಯ ಪ್ರತಾಪ ಚಕ್ರಧರ ವೈನತೇಯಂ ಶೋಭಗಾಂಗೇಯಂ ಶ್ರೀ ಮಜ್ಜಗದೇಕ ಮಲ್ಲದೇವ ಪಾದಾರಾಧಕಂ ರಿಪುಬಲಸಾಧಕಂ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಹಾಪ್ರಧಾನಂ ಹಿರಿಯ ದಂಡನಾಯಕಂ ಬಂಣ್ಯೆಯಂಗಳು॥

ಇಂತೆಸೆವ ಬಂಮಣ್ಯೆಯನ ನಂತ ಪ್ರತಿಯೆನಿಪ ರಿಪುಸಂತತಿಗಧಿ***। ಮಾಂತನದಿಂದಿತ್ತದೇಂ ಚಿಂತಾಮಣಿಯೆನಿಸಿಯಗ್ರಹರಂಗಳಮಂ॥ ವರಜಂಬೂ ದ್ವೀಪದೊಳಂ ಭರತಾವನಿಯಲ್ಲಿ ಕುಂತಳಂ ಜನಪದದೊಳ್। ಕರವೆಸೆದಂದು ಸಾಸಿರಕ್ಕೆ ಖರಿದದರೊಳೆ ಗೊಂಕನಾಡು ಜನಪರಿಪೂರ್ಣಂ॥ **ಅದರೊಳು ಸಾಲೆಯ ಶೀಮಲ ಮದನಾರಿ ಮುರಾರಿ** ಜ ಪ್ರಿಯಗ್ರಹಣಂ(ಪಂಕ) *** ಜಿನಸದನಂಗಳ ಸದಮಲ ಪೊಂಗಳಸ ಚಯ ವಿನಕರ ಮಣೀಯಂ॥** ಸಲ್ಲಲಿತ ವಿಪ್ರ ಸಂಕುಲವೆಲ್ಲಂ ನೂರೈವತ್ತುಮೆಂಬಿನಿ ಪಡೆದನಿಬ। ರ್ಬಲ್ಲಿದರುವಿಪ್ಪವಂನರು ಬಲ್ಲ ಶ್ರೀವೇದ ಶಬ್ದ ಶಾಸ್ತ್ರಾದಿಗಳಿಂ॥

ಸ್ವಸ್ತಿ ಯಮನಿಯಮಂ ಸ್ವಧ್ಯಾಯ ಧ್ಯಾನಧಾರಣ ಮೌನಾನುಷ್ಟಾನ ಜಪಸ್ಸಮಾಧಿಶೀಲ ಸಮಪಂನ್ನರುಂ ಮಧ್ಯದ್ವಹ್ಮಾಂಬೋಜ ದಿವಾಕರರುಂ। ಶಿಷ್ಟಜನ ಕುಮುದ ಸುಧಾಕರರುಂ। ಅವುಪಾಸನಾಗ್ನಿ ಹೋತ್ರ ದ್ವಿಜಗುರುದೇವ ಪೂಜಾ ತತ್ಪರರುಂ ದುಗ್ಧಾಧ್ಧಿ ಡಿಂಡಿರಪಿಂಡ ಪಾಂಡುರ ನಿಜೋಜ್ಜಲ ಕೀರ್ತಿಯುತರಂ ಸಮಸ್ತ ಶಾಸ್ತ್ರ ಪಾರಾವಾರ ಪಾರಗರುಂ ಶ್ರೀ ಮುಕುಂದ ಪಾದೋದಕ ಪರಿಕೀರ್ತಿನೋತ್ತು ಮಾಂಗರುವೆನಿಪ್ಪ ಶ್ರೀಮತ್ಸರ್ವನಮಶ್ಯದಗ್ರಹಾರಂ ಶಾಲೆಯ ಶೀಮಲಶೇಷ ಮಹಾಜನಂಗಳು॥

ಶ್ರೀ ವಿಭು ಕಾಳಿಶೆಟ್ಟಿ ಪುರುಷಾಗ್ರಣಿಗಂ ವಧು ಕಾಳಿಕವ್ವೆಗಂ ಭಾವಿತ ಮಾಚಿಶೆಟ್ಟಿ ತನುಜಂ ವಿನಯಾಂಭುಧಿ ಕಾಳಿಶೆಟ್ಟಿಯುಂ। ಕಾವವರಿಂಚ ನೇರ್ಗಿರಿಯ ಬಂಮಣಶೆಟ್ಟಿಯು ಸಾಗರ್ಯೆಯ್ಯನುಂ

ಶ್ರೀವಿಧಿತ ಪ್ರಶಿದ್ಧಯಶ ಭಾಸುರ ಶೆಟ್ಟಿಯುನಿಂತು ಪುಟ್ಟಿದರ್॥ ವರವಿಬುಧ ಕುವಲಯಂ ಭಾಸ್ಕರೈಯನುಂ ಗುಣರತುನಂ। ದೊರಕೊಳ್ವಾಸಾಗರಂ ಸಾಗರಶೆಟ್ಟಿಯುಮಿಂತು ಧರ್ಮ(ಮಂ) ಪ್ರಕಟಿಸಿದರು॥ ಯಿದು ಸೇವ್ಯಾವಹ ಬಾಲಿಶೇಶ್ವರ ಮಹಾಸ್ವಾಯಂಭುಮುಂ ಶಂಭು ಮೂಡಿದಂದೆದೈದೆಯ ಸಂತಸಂಬಟ್ಟು ಭಾಸ್ಕರ ಶೆಟ್ಟಿಯುಂ ನಿರ್ಮಿಸಿಯಿದ ಬಾಲೇಶ್ವರ ವಾಸಮಂ ಪರ್ಜಿದಾ ನರಕೇರಿ ಶೆಟ್ಟಿಯ್ಯುಂ ಮೊದಲೊಳ್ ಪ್ರಾರಂಭಾಗೆ ಮಾಡಿದುದ***** ಯಂದದಿಂ ಸಾಗರಶೆಟ್ಟಿ ನಿರ್ಮಿಸಿದನಾ ಕೇರೇಶ್ವರ ವಾಸಮಂ॥ ರತಿ ವಿಚಕ್ಷಣ ಕೇಶವ ಗೋಪತಿ **ಸಪ್ತಮಾ ಶ್ರುತಗಣಾವಾಣಿ** ಮದೀಷ್ಟಾ। ಪತಿಯೆಂದಿತಿಮ ಸಾಗರಸೆಟ್ಟಿ ರಸ ಭಾಸ್ಕರ ಮುವಲಯ ಶೆಟ್ಟಿತ್ರಯಗಳುಂ॥ ಸೆಟ್ಟಿಗಳು ನೀಡಿದ ದಾನದ ಬಗ್ಗೆ ವಿವರಣೆಯಿದೆ.

ಸ್ವಸ್ತಿ ಶ್ರೀಮತು ಚಾಳುಕ್ಯ ಚಕ್ರವರ್ತಿ ಜಗದೇಕಮಲ್ಲ ವರುಷದ ೨೦ನೆಯ ಯೀಶ್ವರ ಸಂವತ್ಸರದ ಪುಷ್ಯ ಬಹುಳ ತದಿಗಿ ಬೃಹವಾರದಂದುತ್ತರಾಯಣ ಸಂಕ್ರಾಂತಿಯಲು ಗೊಂಕನಾಡು ಮಂನೆಯ ಗೊಂಕರಸನು ಸಿಗ್ಗೂಳಪ್ರಭು ಬಿಜ್ಜರಸನು ಮಹಾಪ್ರಭುಗಳು ವ್ಯೋಮಕುಲಕುವುದ ಸುಧಾಕರರುಮೆನಿಸಿದ ಗುಣಿ ದೊಡ್ಡ ಮಣಿಯ ಕೇತಿಶೆಟ್ಟಿಯರು ಸರ್ವನಮಶ್ಯ ಶ್ರೀ ಬಾಲೇಶ್ವರ ದೇವರ್ಗ್ಗೆ ಪೂಜಾರ್ಥದಲ್ಲಿಯು ಖಂಡಾಸ್ವಾದಿತ ಜೀರ್ಣೋದ್ಧಾರಕ್ಕಂ***ಶಿದ್ಧಾಯ ಗದ್ಯಾಣ ಪ್ರತಿವರುಷ ಸಂನಿಧಾನದಲ್ಲು ಧಾರಾಪೂರ್ವಕಂ ಬಿಟ್ಟರು। ಮತ್ತಾ ಶಿದ್ದೇಶ್ವರ ದೇವರ್ಗೆ ದಂಡ ನಾಯಕರ ಸುಂಕದೊಳಗೆ॥ ಯತ್ತಲಾಗಿ ವಡೆದದೆ. ಬಾಲೇಶ್ವರ ದೇವರ ಪೂಜೆಗೆ ಮತ್ತು ಗುಡಿಯ ಜೀರ್ಣೋದ್ಧಾರಕ್ಕೆ ದಾನ ನೀಡಿದ ವಿಷಯ ತಿಳಿಸುತ್ತದೆ.

ಸ್ಥಳ: ಹೊಡಲ	**ಆಳಿದ ದೊರೆ:** ಯಾದವ ದೊರೆ–ಸಿಂಗಣದೇವ
ಕಾಲ: ಕ್ರಿ.ಶ.೧೨೬೭	**ಪ್ರಕಟಿತ:** ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
ಭಾಷೆ: ಕನ್ನಡ	**ಪು.:** ೮೬

ಸ್ವಸ್ತಿ ಶ್ರೀಮತ್ ಯಾದವ ನಾರಾಯಣ ಪ್ರತಾಪ ಚಕ್ರವರ್ತಿ ಸಿಂಗಣದೇವ, ವರ್ಷದ ೨ನೆಯ ವಿಭವ ಸಂವತ್ಸರದ ವೈಶಾಖ ಸುದ್ದ ೧ ಸೋಮವಾರದ ವ್ಯತಿಪಾತದಂದು ಶ್ರೀಮನ್ಮಹಾಪ್ರಧಾನ ಶ್ರೀ ಲಕ್ಷ್ಮೀದೇವ ದಂಡನಾಯಕರು, ಮನ್ನೆದಡಿಸಾಸಿರದ ಮನ್ನೆಯಂ***** ಮಾಗರಸ ಹೊಡಲ ಪ್ರಸನ್ನ ರಾಮನಾಥ ದೇವರ ಅಂಗಭೋಗ, ರಂಗಭೋಗ ಖಂಡಸ್ಫುಟಿತ ಜೀರ್ಣೋದ್ದಾರ, ತಪೋಧನರಾಹರ ದಾನಕ್ಕೆ 'ಮನ್ನೆದಡಿ ಸಾಸಿರದ ದೇವಸ್ಥಾನದಾಚಾರ್ಯ್ಯರು ರಾಮೇಶ್ವರ ಗುರುಗಳಿಗೆ ಧಾರಾಪೂರ್ವಕ ಮಾಡಿಕೊಟ್ಟರು(ಪು.ಸಂ.೮೬.೧–೫ನೆಯ ಸಾಲು).

ಸ್ಥಳ: ಹೊಡಲು	**ಆಳಿದ ದೊರೆ:** ಕಳಚೂರಿ ದೊರೆ ಸಂಕಮದೇವ
ಕಾಲ: ೧೧೮೧	**ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ.–ವ್ಹಿ.ಶಿವಾನಂದ, ೧೯೯೨
ಭಾಷೆ: ಕನ್ನಡ	**ಪು.:** ೨೦೯–೨೧೬

ಶಾಸನದಲ್ಲಿ ಚಂದ್ರ, ಕುಳಿತ ಋಷಿ, ದೂಪದಯ್ಯ, ಆಕಳು, ಕರು, ಸೂರ್ಯ ಚಿಹ್ನೆಗಳಿವೆ ಎಂದು ಉಲ್ಲೇಖಿಸಲಾಗಿದೆ. ಕಳಚೂರಿ ಸಂಕಮದೇವ, ಚಾಳುಕ್ಯ ತ್ರಿಭುವನಮಲ್ಲ ಸೋಮೇಶ್ವರ

ಹಾಗೂ ಯಾದವ ಸಿಂಗಣರ ಆಳಿಕೆಯ ಸಾಮಂತಾಧಿಪತಿಗಳು ಹೊಡಲ ಪ್ರಸನ್ನ ರಾಮನಾಥ ದೇವರ್ಗ್ಗೆ ಆಯಾ ಕಾಲದಲ್ಲಿ ನೀಡಿದ ಆರು ದತ್ತಿ ಮಾನ್ಯಗಳ ವಿವರಣೆಯಿದೆ. ಅಯ್ಯಾ ಹೊಳೆ ಐನೂರ್ವರು ಗೋಂಕನಾಡು ೧೨೦, ಅಲಂದೆವೆಡಂಗ ಬಿರುದಾಂಕಿತ ಮಲ್ಲಿದೇವರಸ, ಪ್ರಸನ್ನ ರಾಮೇಶ್ವರ ದೇವಾಲಯವನ್ನು ನಿರ್ಮಿಸಿದವನು ರೇಮಗಾವುಂಡ, ದೇವಸ್ಥಾನಕ್ಕೆ ೧೦೦ ಕೋಣ, ೧೦೦ ಎತ್ತುಗಳನ್ನು ಬಿಡುವ ಪದ್ಧತಿ ನಂಬುಗೆ. ಇದನ್ನು ಲಕ್ಕವಟ್ಟ ಎಂದಿದೆ. ಗಂಧವಣ, ಮುದ್ರಾವಣ ಸಿಪ್ಪೆ, ಸುಂಕ ಕಂದಾಯ ಶಬ್ದಗಳು.

ದತ್ತಿ-೧

ಸ್ವಸ್ತಿ ಸಮಧಿಗತ ಪಂಚ ಮಹಾಶಬ್ದ ಮಹಾಸಾಮಂತಂ ವಿಜಯ ಲಕ್ಷ್ಮೀಕಾಂತನಲಂದೆವೆಡಂಗ ಪಂಥೆಯಾಶಿಂಗ ಹರನ ರೇವಂ ತಂನಸಿತ ಶ್ರೀಕಾಂತಂ ನಾಮಾದಿ ಪ್ರಶಸ್ತಿ ಸಹಿತಂ ಶ್ರೀಮನ್ಮಹಾ ಮಂಡಲೇಶ್ವರಂ ಮಲ್ಲಿದೇವರಸರು ಶ್ರೀ ಮನ್ಮಹಾಮಂಡಲೇಶ್ವರಂ। ವೀರ ಗೋಂಕರಸರು॥ ಶ್ರೀಮತಂ ಗೋಂಕ ನೂರಿಪ್ಪತ್ತರ ಬಳಿಯ ಬಾಡ ಹೊಡಲ ಶ್ರೀಪ್ರಸನ್ನ ರಾಮೇಶ್ವರ ದೂಚೇಶ್ವರ(ಮಾಡೇಶ್ವರ) ಚಂನಕೇಶವ ದೇವರ್ಗ್ಗೆ ಶಕ ವರುಷದ ೧೧೦೨ನೆಯ ಶಾರ್ವರಿ ಸಂವತ್ಸರದ ಚೈತ್ರದಮಾವಾಸ್ಯೆ ಸೋಮವಾರ ಸೂರ್ಯ ಗ್ರಹಣದಂದು ಪ್ರಥಮ ಸ್ಥಳದಲ್ಲಿ ದೇವರ ಅಂಗಭೋಗ, ರಂಗಭೋಗ ಖಂಡಾಸ್ಫಾದಿತ ಜೀರ್ಣೋದ್ಧಾರಾಹಾರ ದಾನಕ್ಕಂ ಧಾರಾಪೂರ್ಬಕಮ ಮಾಡಿಕೊಟ್ಟ ಕಾಲ ಮತ್ತರು ೨೦ ಸರ್ವಮಾನ್ಯ॥ ಆ ದೇವರ ಭೂಮಿಯು ಸೀಮೆ ಮೂಡಲು ಯರದಹಳ್ಳ(ಯಭದ?) ಸೀಮೆಯಾದಿ। ಬಡಗಲು ಹಣಜಿಯಿಂ ಬರೆ ಹರತಿಗೆಯ್ಯಿ ಕಡೆಯಾದಿಯಾಗಿ ಬಿಟ್ಟ ಭೂಮಿ ದೇವರಿಂ ತೆಂಕಲು। ಪುರದ ಕೆರೆಯಿಂ ಬಡಗಲು। ಪುರದ ಕೇರಿ ದೇವರ್ಗ್ಗೆ ತೋಂಟ ೧ ಯಿ ವೃತ್ತಿಯಂಮನಲ್ಲಿಯ ಪ್ರಭು ಮಾದಿರಾಜ। ರುದ್ದರಸ। ಕೇಶವ ದೇವನು। ಧಾರಾಪೂರ್ವಕಂ ಮಾಡಿಕೊಟ್ಟರು।

ಸ್ವಸ್ತಿ ಶ್ರೀಮತು ಕಳಚೂರಿ ಚಕ್ರವರ್ತಿ ಸಂಕಮ ದೇವರ ವರುಷದ ೫ನೆಯ ಶಾರ್ವರಿ ಸಂವತ್ಸರದ ಪುಷ್ಯ ಶುದ್ಧ ಏಕಾದಶಿ ಸೋಮವಾರದ ವತೀಪಾತ ಉತ್ತರಾಯಣ ಸಂಕ್ರಾಂತಿಯಲ್ಲೂ ಶ್ರೀಮತು ಅಯ್ಯಾವಳೆಯ ಅಯಿನೂರ್ವ ಸ್ವಾಮಿಗಳುಂ ಮೂವತ್ತಾರು ಬೀಡು ಮುಮ್ಮುರಿ ದಂಡಮುಭಯ ನಾನಾ ದೇಸೀಯ ನಾಲ್ಸಾಸಿರಂ ಸಮುದ್ರಂ ಘಟ್ಟವಾಗಿ ನಾಡ ಸುಂಕವೆಗ್ಗಡೆ ಜೀನಯ್ಯನು ಪ್ರಮುಖವಾಗಿ ಶ್ರೀ ರಾಮನಾಥ ದೇವರ್ಗ್ಗೆ ಲಕ್ಕವಟ್ಟವಾಗಿ ಬಿಟ್ಟ ಕೋಣ೧೦೦ ಯತ್ತು೧೦೦ ಆ ಸ್ಥಳದಲ್ಲಿ ಹೊಂಗೆ ಕೊಟ್ಟೊಡೆ ಅದರಲ್ಲಿ ದೇವಮಾನ್ಯ........ ಅಂಗಡಿಯಲ್ಲಿ ಸಟ್ಟುಗ ಭತ್ತವಂದು ೧ ಗಾಣದಲ್ಲಿ ಎಣ್ಣೆಸೌಟು ಗಂಧವಣದ ವಿಕ್ರಯದ ಹೊಂಗೆ ಕೊಟ್ಟುಕೊಂಡಲ್ಲಿ ವೀಸ್ರ ಹೊಂಗೆ ಅಡಕೆ ಯಿಪ್ಪತ್ತೈದು ೧ ಯಲೆ ಹೊಂಗೆ ೧೦೦ ಪಾಣಿಖಂಡದ ಸಿಪ್ಪೆಯ ಸುಂಕದ ಧರ್ಮನಿರ್ಣಯದ ಮುದ್ರಾಪಣಂ ದೇವರ್ಗೆ ಚಂದ್ರಾರ್ಕಸ್ಥಾಯಿಯಾಗಿ ಕೊಟ್ಟರು॥ ಕಲಿಯುಗ ಪುರಂದರಂ। ಕುಲನಿಖರ ಪ್ರದೀಪ ಚೂಡಾರತ್ನಂ। ಮಲೆದರ್ಗನಂಗದಹನಂ। ಬಲವದ್ಭಂಡುಗಿ ನರೇಂದ್ರ ದಂಡಾಧೀಶಂ॥

ದತ್ತಿ-೨

ಸ್ವಸ್ತಿ ಶ್ರೀಮತ್ಕಳಚುರಿಯ ಚಕ್ರವರ್ತಿ ಆಹವಮಲ್ಲ ದೇವ ವರುಷದ ೬ನೇ ಪ್ಲವ ಸಂವತ್ಸರದ ಬಾದ್ರಪದ ಬಹುಳ ಕಪಿಲ ವೃಷ್ಠಿಯಲು ಶ್ರೀ ಮನ್ಮಹಾ ಪ್ರಧಾನಂ ಬಾಹತ್ತರ ನಿಯೋಗಾಧಿಪತಿ ಹಿರಿಯ ದಂಡನಾಯಕಂ ಚಂದುಗಿ ದೇವರಸರುಂ। ಶ್ರೀಮನ್ಮಹಾ ಮಂಡಲೇಶ್ವರಂ ವೀರಗೊಂಕರಸರುಂ ಮಲ್ಲಿದೇವರಸರುಂ ಸಮಸ್ತ ಆ ಗ್ರಾಮತರುಂ ಗೊಂಕ ನೂರಿಪ್ಪತ್ತರುವತ್ತರ ಬಳಿಯಬಾಡಂ ಚಿಕ್ಕ ಜವಳಿಗೆಯಂ ಹೊಡಲ ಶ್ರೀ ರಾಮನಾಥದೇವರ್ಗ್ಗೆ ಅಂಗಭೋಗ ರಂಗಭೋಗಕ್ಕೆ ಖಂಡಾಸ್ಫಾದಿತ ಜೀರ್ಣೋದ್ಧಾರಕ್ಕಂ ತಪೋಧನರಾಹಾರದಾನಕ್ಕಂ ತ್ರಿಭೋಗಾಭ್ಯಂತರ ಶಿದ್ದಿಯಾಗಿ ಧಾರಾಪೂರ್ವಕಂ ಕೊಟ್ಟರು॥ ಶ್ರೀಮತು ಯಿಪ್ಲವ ಸಂವತ್ಸರದ ಚೈತ್ರದಮಾವಾಸ್ಯೆ ಸೋಮವಾರ ಹಿರಿಯ ಸಂಕ್ರಾಂತಿಯಲು ಶ್ರೀಮನ್ಮಹಾಪ್ರಧಾನಂ ಬಾಹತ್ತರ ನಿಯೋಗಾಧಿಪತಿ ಹಿರಿಯ ಸೋವಣಯ್ಯ ದಂಡನಾಯಕರುಂ, ಶ್ರೀಮನ್ಮಹಾ ಮಂಡಲೇಶ್ವರಂ ಬಾಣರಾದಿತ್ಯನುಂ ಬಾಣ...... ವಂಶಕುಲೋದ್ಭವನುಂ ಮಂನೆದಡಿ ಸಾಸಿರದ ವೀರ ದುಂಮರಸರುಂ ಸಮಸ್ತ ಆ ಗ್ರಾಮತರುಂ ಅಂಬುಲಿಗೆ ಮೂವತ್ತರ ಬಳಿಯ ಬಾಡಂ ದಿಗ್ಗದರಿಯನು ಹೊಡಲ ಶ್ರೀಪ್ರಸಂನ ರಾಮನಾಥ ದೇವರ್ಗೆ ಅಂಗಭೋಗ ರಂಗಭೋಗ ಖಂಡಾಸ್ಫಾದಿತ ಜೀರ್ಣೋದ್ಧಾರಕ್ಕಂ ತಪೋಧನರಾಹಾರ ದಾನಕ್ಕಂ ತ್ರಿಭೋಗಾಭ್ಯಂತರ ಸಹಿತಂ ಧಾರಾಪೂರ್ವಕಂ ಮಾಡಿಕೊಟ್ಟರು॥ ಆ ಪುಣ್ಯದಿನದಲು ಸೆಲಗರದ ಪ್ರಭು ಬೆಪ್ಪರಸರುಂ ಕಾಳಿಮರಸರುಂ ಕಲಿದೇವನುಂ ಆದಿತ್ಯನಾಯಕನುಂ ಹೊಡಲ ಶ್ರೀರಾಮನಾಥದೇವರ್ಗೆ ಗೋಸಕ್ಕೆ ನೈವೇದ್ಯಕ್ಕೆ ಮುದಡಗೆಯ ಸೀಮೆಯಿಂ ಬಡಗ ಹತ್ತಿಕೊಳದಲು ಕಾಲಡಿ ೧೨ ಮತ್ತರುಮಂ ಧಾರಾಪೂರ್ವಕಂ ಮಾಡಿಕೊಟ್ಟರು॥

ದತ್ತಿ-೩

ಸ್ವಸ್ತಿ ಸಮಸ್ತ ಭುವನಾಶ್ರಯಂ। ಶ್ರೀ ಪೃಥ್ವಿವಲ್ಲಭ ಮಹಾರಾಜಾಧಿರಾಜ ರಾಜ ಪರಮೇಶ್ವರಂ ಪರಮಭಟ್ಟಾರಕಂ ಸತ್ಯಾಶ್ರಯ ಕುಲತಿಲಕಂ ಚಾಳುಕ್ಯಾಭರಣಂ ಶ್ರೀಮತ್ರಿಭುವನಮಲ್ಲ ಸೋಮೇಶ್ವರ ರಾಜ್ಯ ಮುತ್ತರೋತ್ತರರಾಭಿವೃದ್ಧಿ ಪ್ರವರ್ಧಮಾನದಿಂದ ಕಲ್ಯಾಣ ರಾಜ್ಯದಲ್ಲಿ ಸುಖದಿಂದ ರಾಜ್ಯ ಮಾಡುತ್ತಿದ್ದರು. ನೆರದ ಮುನೀಂದ್ರದೇವ ನಿಕರುಂಬ ಸಮೇತದೊಳಿರ್ದು ಪಾರ್ವತೀ ನರನೆನಿಸಿರ್ದ ಚಂದ್ರಧರನೊಪ್ಪೂವ ಮೇರುಗಿರೀಂದ್ರಮಿಂದುಮೀ। ಪುರುಷಮರಂದರಂಗೆ ಮೃಢ ಪಂಕಜಪಾದ ಯಂಗಾರ್ಜಿತಂಗೆ ತಾಂಕರುಣದಿ ವೀಗೆಬಾರಣ ಮಹೀಪತಿಗುತ್ಸಮಂ ನಿರಂತರಂ॥ ಮೇರು ಗಿರೀಂದ್ರದಿಂದೊಗೆದ ಕಲ್ಪಕುಜಾತಮು ಪಣ್ತುದೆಂಬಿನಿಂ ಕ್ಷೀರ ಸಮುದ್ರ ಮಂಥನದಿ ಪುಟ್ಟಿದ ಕಾಮಿನಿ ಕೂರ್ತಳಂಬಿನಿಂ॥ ಶಾರದೆ ಕಾಮಧೇನು ದಯೆಯಿಂ ಬರಲೀಯಲೆ ಬಂದಳೆಂಬಿನಿಂ ವಾರಿಜನಾಥ ಮೂರ್ತಿಯೆನೆ ಭಾವ ಮಹೀಪತಿಯ ಸುಭಾಗಮಂ॥ ಕಡುಪೆಂಪಂ ಪೊರವೀಡು ಬಿಟ್ಟ ರವಮಂ ಪಾಹ್ಯಾದಿಗಳ್ಕೇಳು ಮಾರ್ನುಡಿಯಲ್ಕಂಮದೆ ಭಾವ ಭೂಪನ ಚಮೂಚಕ್ರಾರಿ ಸೈನ್ಯಾರ್ಣವಂ ನಡೆಯಲ್ಕಾದುವ ರಾಯರಾರೆನುತ ವಂಗಿತಾದಿ ಭೂಪಾಲ್ ಮಿಡುಕಲ್ಕಂನುದೆ

ಸಂಚಿತಾರ್ಥ ಯಶಮಂ ಮುಂ ಕೊಟ್ಟ ಮೆಂದಟ್ಟಿದರ್ ಪೊಡಲೊಳ್ ಕಾರ್ಪ ನೃಪಾಲರಾರೊ ಮುದದಿಂದೀರಾಯ ಕೋಳಾಹಳಂ ಕಡು ಬಂದೇಳ್ತರೆ ವೈರಿ ಭೂಪರಿದಿರೊಳ್ ಮಾರಾಂತು ನಿಲ್ವಂನ್ನರಾರ್। ಮೃಡ ಪಾದಾರ್ಚಿತನಪ್ಪ ಬಾವಣ ಮಹೀನಾಥಂಗೆ ವೀರಾರಿಗಳ್ ಕುಡುವೆಂ ಕಪ್ಪಮನೆಂದು ಕಂದಿಳುಪಿದರ್ಥಯುರ್ವಿ ಸರ್ವಸ್ವಮುಂ॥ ಶ್ರೀರಾಮಾಧಾಮನೆಂದಾ ಪೆಸರೆಸೆವಿನಗಂ ಗೋಂಕ ದೇಶಾಂತರ ದೊಳ್ ಭೂರಿ ಶ್ರೀ ರಾಮನಂ ಕಂಡನುಪಮನಿಲಯಂ ಶ್ರೀಧರ ಸ್ಥಾನಮೊಂದಾಮೂರೊಳ್ ಶ್ರೀನಂದಿ ಗೇಹಾಲಯಮೆಸೆವಿನಗಂ ಮಾಡಿದಂ ಭಾವಭೂಪಂ(ಅಕ್ಷರಗಳು ಅಳಿಸಿವೆ). ಆ ನಂದಿಯ ಮಂಟಪದೊಳಗಾನಂದಂ ಬೆರಸನಾಡುತಿರ್ದಾ ಸುರತಂ। (ಭೋಗಾಪ ಭೋಗ್ಯರೆಸೆಯಲ್(?)) ಆನಂದದಿ ನೋಡುತಿರ್ದನಾ ಶ್ರೀರಾಮಂ॥ ಶ್ರೀ ಚಾಳುಕ್ಯ ಕುಲಪ್ರತಿಷ್ಠಿತ ನುತಂ ಶ್ರೀ ಬ್ರಹ್ಮದಂಡಾಧಿಪ ಶ್ರೀ ಚಾತುರ್ಬಲ ಮುಖ್ಯ ಬೃವಣ ಚಮೂಪಂ ಧರ್ಮಮಂ ಕಂದದ ಶ್ರೀ ಚಂದ್ರಾವರ ಸಲ್ಲುತಂಮಿರೆ ಬಿಟ್ಟಂ ಬೆಟ್ಟದಾ ಬೇವುರಂ ಶ್ರೀ ಚಾಮಾಪುರಮಂ ಜಗಜ್ಜನನುತಂ ಶ್ರೀಮಂತ್ರಿ ಚೂಡಾಮಣಿ॥ ಶ್ರೀ ವನಿತಾ ವಿನೋದ ಸದನಂ ಭುಜಕೀರ್ತಿಯುಪಾರ್ಜಿತಂ ಮನು .... ಕಾವಗುಣಂ ಶರಣ್ಬೊಗೆಮನಂದೆ ಬೇಡಿದರ್ಗ್ಗಿವ *** .... ನಾಥನ ಸಮಾನಮನಲ್ಕೊಳರೇ ಧರಿತ್ರಿಯೊಳ್॥ ಅಗಣಿತ ವಸ್ತು ವಾಹನ ಚಯಂಗಳನಂತಮನಪ್ಪು ಕೆಯಿದ ಲಕ್ಷಿಗೆ ನೆಲೆಯಾಗಿ ಸಂತಮಿರಲೊಲ್ಲದೆ ಕೆಂಮನೆ ಪದ್ಮದೇವನೊಳ್। ಪಗೆಗೊಳಲಾಸೆಗೆ ಯಿವಪಗೆವಂತೆ ದಶಾನನ ಮುಂದೆ ಲಂಕೆಯಿಂ ನಗರಮೆ ತತ್ಸಮುದ್ರಮೆ ಭುಜಾಸಿಯನೇಂಗಳ ಚಂದ್ರಹಾಸಮೆ॥

ದತ್ತಿ–೪

ಸ್ವಸ್ತಿ ಶ್ರೀಮಚ್ಚಾಳುಕ್ಯ ಚಕ್ರವರ್ತಿ ತ್ರಿಭುವನಮಲ್ಲ ವರುಷದ ೪ನೆಯ ವಿಶ್ವಾಮಸು ಸಂವತ್ಸರದ ಆಶ್ವಿಯಜದಮಾವಾಸ್ಯೆ ಸೋಮವಾರ ವೆತೀಪಾತದಂದಂ ಶ್ರೀ ಮನ್ಮಹಾ ಪ್ರಧಾನಂ ರಾಯ ದಂಡನಾಥ ಗಂಡಪಿಂಡಾರಂ ಸಕಳ ಲಕ್ಷ್ಮೀನಿವಸನುಂ ಬಾಹತ್ತರ ನಿಯೋಗಾಧಿಪತಿ ಹಿರಿಯ ಬಾವಣಯ್ಯ ದಂಡ ನಾಯಕನುಂ ಕುಮಾರ ಪದ್ಮುಗಿ ದೇವದಂಡನಾಯಕರುಂ ಶ್ರೀಮನ್ಮಹಾ ಮಂಡಲೇಶ್ವರಂ ಭುಜಬಲಗೊಂಕ ದೇವನುಂ ವೀರಗೊಂದರಸನುಂ ಗೊಂಕ ನೂರಿಪ್ಪತ್ತರುವತ್ತರ ಬಳಿಯ ಬಾಡಂ ಬೆಟ್ಟದ ಜೀವೂರಗೆಯಮಂ ಹೊಡಲ ಶ್ರೀಪ್ರಸಂನ ತಪೋಧನರಾಹಾರ ದಾನಕ್ಕಂ ತ್ರಿಭೋಗಬ್ಯಾಂತರ ಸಹಿತವಾಗಿ ಧಾರಾಪೂರ್ವಂ ಮಾಡಿಕೊಟ್ಟರು॥ ಆ ಪುಣ್ಯ ದಿನದಲು ಶ್ರೀಮನ್ಮಹಾ ಪಸಾಯಿತಂ ಕಲ್ಲೆಯ ಸೋಹಣಿಯರು ತಂಮ ಮೇಲಾಳಿಕೆಯ ಮುದುಡಗೆಯ ಸ್ಥಳದಲ್ಲಿ ಅಲ್ಲಿಯ ಪ್ರಭು ದುಗ್ಗ ಗಾವುಂಡನುಂ ಪ್ರಮುಖವಾಗಿ ಹೊಡಲ ಶ್ರೀ ರಾಮನಾಥ ದೇವರ ನೈವೇದ್ಯಕ್ಕೆ ವೂರಿಂ ಬಡಗ೨ ಯರಡೂ ಹಳ್ಳದ ಕೂಡಲ ಮೊದಲ ಕಟ್ಟಿಯಲು ಗರ್ದ್ದೆ ಕಾಲಡಿಯ ಮತ್ತರು ೧ ತೊರೆಯ ಕಡೆಯ ತೋಟ ಕಾಲಮತ್ತರು ೧ ವಂದುಮುಂ ಧಾರಾಪೂರ್ವಕಂ ಮಾಡಿಕೊಟ್ಟರು.

ದತ್ತಿ-೫

ಸ್ವಸ್ತಿ ಶ್ರೀಮತುಚಾಳುಕ್ಯ ಚಕ್ರವರ್ತಿ ತ್ರಿಭುವನಮಲ್ಲ ವೀರ ಸೋಮೇಶ್ವರ ದೇವರುಂ, ಪಂಚ ಪ್ರಧಾನರುಂ ಪ್ರಮುಖವಾಗಿ ಶ್ರೀಮತು ರಾಯ ದಂಡನಾಥ ಗಂಡ ಪಿಂಡಾರಂ ಸಕಳ ಲಕ್ಷ್ಮೀಪತಿ ಶ್ರೀಮತು ಬಾಣವಯ್ಯ(ಬಾವಣಯ್ಯ) ದಂಡ ನಾಯಕರುಂ ಕುಮಾರ ಪದ್ಮಗಿ ದೇವ ದಂಡನಾಯಕರುಂ ವುಭಯ ಮಂನೆಯರು ಯಜಮಾನ ಬೊಂಮ ಗಾವುಂಡನುಂ ರೇಮಗಾಮುಂಡನುಂ ಬೀಲಗಾಮುಂಡನಂ ಗೊಂಕ ನೂರಿಪ್ಪತ್ತರುವತ್ತರ ಬಳಿಯ ಬಾಡ ಹೊಡಲ ಶ್ರೀ ಪ್ರಸಂನ ರಾಮನಾಥ ದೇವರ ಸ್ಥಾನದಾಚಾರ್ಯ ಕುಮಾರ ಪಂಡಿತ ದೇವರ್ಗ್ಗೆ ಧಾರಾಪೂರ್ವಕಂ ಮಾಡಿಕೊಟ್ಟರೂಚಂದ್ರಾರ್ಕ ಸ್ಥಾಯಿಯಾಗಿ॥

ದತ್ತಿ-೬

ಸ್ವಸ್ತಿ ಶ್ರೀಮತು ಯಾದವ ನಾರಾಯಣಂ ಪ್ರತಾಪ ಚಕ್ರವರ್ತಿ ಸಿಂಗಣ ದೇವ ವರುಷದ *ನೆಯ ಪ್ರಭವ ಸಂವತ್ಸರದ ವೈಶಾಖ ಶುದ್ಧ ಪಾಡ್ಯಮಿ ಸೋಮವಾರ ವೆತೀಪಾತದಂದು ಶ್ರೀಮನ್ಮಹಾ ಪ್ರಧಾನ ಲಕ್ಷ್ಮದೇವ ದಂಡ ನಾಯಕರೂ ಮಂನೆಯದಡಿ ಸಾಸಿರದ ಮಂನೆಯ ಕೇಶವ ದೇವರಸರುಂ ಪೊಡಲ ಶ್ರೀ ಪ್ರಸಂನ ಶ್ರೀರಾಮನಾಥ ದೇವರ ಅಂಗಭೋಗ ರಂಗಭೋಗ ಖಂಡಾಸ್ಫಾದಿತ ಜೀರ್ಣೋದ್ಧಾರ ತಪೋಧನರಾಹಾರ ದಾನಕ್ಕಂ ಮಂನೆದಡಿ ಸಾಸಿರದ ಬಳಿಯ ಬಾಡಂ ಮುದುವಡಂ ಆ ದೇವರ ಸ್ಥಾನಾಚಾರ್ಯ ರಾಮೇಶ್ವರ ಗುರುಗಳಿಗೆ ಧಾರಾಪೂರ್ವಕಂ ಮಾಡಿಕೊಟ್ಟರು.

ಸ್ಥಳ: ಹಂದರಕಿ **ಆಳಿದ ದೊರೆ:** ಚಾಳುಕ್ಯ ಆರನೆಯ ವಿಕ್ರಮಾದಿತ್ಯ

ಕಾಲ: ೧೧೧೯ **ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ.-ವ್ಹಿ.ಶಿವಾನಂದ, ೧೯೯೨

ಭಾಷೆ: ಕನ್ನಡ **ಪು.:** ೧೧೯-೧೧೬

ಮಹಾಮಂಡಲೇಶ್ವರ ಲೋಕರಸನು ಪಂದರಿಕೆಯ ಲೋಕೇಶ್ವರ ದೇವಸ್ಥಾನಕ್ಕೆ ಅಘೋರ ಪಂಡಿತ ಸಮ್ಮುಖ ಭೂದಾನಗೈದುದು. ಬಿಜ್ಜರಸ ಮಹಾಮಂಡಲೇಶ್ವರನ ರಾಣಿ ಬಾಚಲದೇವಿ ಅದೇ ಊರಿನ ಆನೆಮೇಶ್ವರ ದೇವಸ್ಥಾನಕ್ಕೆ ದತ್ತಿಯನ್ನಿತ್ತುದು. ಅರಲು ಮುನ್ನೂರು, ಕಾಳಾಮುಖ ಗುರುಗಳ ನೈಷ್ಠಿಕ ಮಠ ಹಾಗೂ ಕನ್ನಡಕ್ಕರ ಓದುಗಳ ಉಲ್ಲೇಖವಿದೆ.

ಸ್ವಸ್ತಿ ಸಮಸ್ತ ಭುವನಾಶ್ರಯಂ, ಪರಮಭಟ್ಟಾರಕಂ ಸತ್ಯಶ್ರಯ ಕುಲ ತಿಲಕಂ ಚಾಳುಕ್ಯಾಭರಣಂ ಶ್ರೀಮತ್ರಿಭುವನಮಲ್ಲ ದೇವರ ವಿಜಯರಾಜ ಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಮಾಚಂದ್ರಾರ್ಕ ತಾರಂಬರಂ ಸಲ್ಲುತ್ತಮಿರೆ ರಾಜಧಾನಿಯ ಜಯಂತೀಪುರದ ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯವಾಳುತ್ತಿದ್ದರು.

ಸ್ವಸ್ತಿ ಶ್ರೀಮನ್ಮಹಾಮಂಡಳೇಶ್ವರಂ ಲೋಕರಸನುಂ ಶ್ರೀಮದಾಚಾರ್ಯರು ಅಘೋರ ಶಕ್ತಿ ಪಂಡಿತರಂ ಅಭಿನವ ಶಿವಲೋಕಮಿದೆಂಬಂತೆ ನೆಗಳ್ತೆವೆತ್ತ ಸಕಳ ವಸುಮತೀ ತಳಕ್ಕೆ ನೆಲೆಯೆಂದೆನಿಸಿ

ನೆಗಳ್ದ ಕುಂತಳ ಮಹೀತಳಕ್ಕೆ ಮುಖಮಿದೆಂಬಂತಿರ್ದರಲ್ಲೂನೂರಕ್ಕಂ ತಿಲಕಮಿದೆಂಬಂತಿರ್ದ್ದ ಧರಾಂಗನಾ **ಕುಚಾ ಗ್ರಹಾರಮೆನಿಸಿರ್ದ ಪಂದಿರ್ಕೆಯ** ಲೋಕೇಶ್ವರ ದೇವರ್ಗ್ಗೆ ವೂರಿಂ ಬಡಗಲು ತಳಪ್ರಿತ್ತಿ ಪಡುವಲು ಕೆಂಮೊರಡಿಯಲ್ಲಿಂ ಬಡಗ ಚಿಕ್ಕಬೆಟ್ಟದಿಂ ಮೂಡಲು ಮೇರೆಯಾಗಿ ಆಲ ಕಟ್ಟೆಯ(ಆಲಕಟ್ಟೆಯ?) ಬಾವಿ ನಡು ಮಧ್ಯವಾಗಿ ಮೂಡಲೆರಡು ಹಳ್ಳಂ ಕೂಡಿದ್ದು ಮೇರೆಯಾಗಿ ದಾರಿಯ ಕೊಳ್ಳದಿಂ ಪತ್ತಿರ ಮೇರೆಯಿಂ ತೆಂಕ ಗುಡ್ಡನ ಹಾಳಿ ದೂರವಾಗ್ನೇಯದಲು ನೆಟ್ಟಕಲ್ಲು ಮೇರೆಯಿಂ ತೆಂಕ ಗುಡ್ಡನ ಹಾಳಿ ದೂರವಾಗ್ನೇಯದಲು ನೆಟ್ಟಕಲ್ಲು ಮೇರೆಯಿಂದೊಳಗಣ ಭೂಮಿ ಕಾಲಮತ್ತರು ಸಾಸಿರದ ನೂರು, ಅದರೊಳಗೆ ವೂರ ಪ್ರಭುವಿಗೆ ದಶವಂದಂ ಮತ್ತರು ನೂರುನುಳಿಯ ನಿಕರಂ ಸಾವಿರ ೧೦೦೦ ಬಟ್ಟೆಯ ಭೈರವನಿಂ ಅಲ್ಲಿಂ ಮೂಡ ದೇವಾಲ್ಯದಿಂ ತೆಂಕ ತೋಂಟ ಕಾಲಮತ್ತರು ೩ ಮತ್ತಮಾಮೂರಿಂ ಬಡಗ ಬೆಟ್ಟ ತೆಂಕಪಳ್ಳ ಮೇರೆ ಕಾಲ ಮತ್ತರು ೪೦ ಚವುಡೇಶ್ವರಿ ಗೆರೆಯಿಂ ವೊಳಲಕುಂದೆಯ ಬಟ್ಟೆಯಿಂ ತೆಂಕಮುಳ್ಳ ಮೇಯನ ತೀರ್ಥದಿಂ ಪಡುವಲು ಗುಂಡಿಗೆರೆಯಿಂದೊಳಗೆ ಮಸಂಬು ಕಾಲ ಮತ್ತರು೨೦ ಕೊಸನಮಗೆರೆಯಿಂ ಮೂಡ ಕಾರಿಯಕುಂಟೆ ಯಿಂದೊಳಗೆ ಮಸಂಬು ಕಾಲಮತ್ತರು ೬೦ ಆ* ಕೆರೆಯಿಂ ಮಸಂಬು ಕಾಲಮತ್ತರು ೫ವೂರಿಂ ಪಡುವಲು ತಾವರೆಗೆರೆಯಿಂ ತೆಂಕ ಪತ್ತಿರೆ ಪಾಳಕೇಯಿ ಕಾಲಮತ್ತರು ೨೦ ತಾವರೆಗೆರೆಯಿಂ ತೆಂಕ ಕಾಲಿಯ ಕೆರೆ ನೀರ್ನೆಲಂ ಕಾಲ ಮತ್ತರು ೧೦ ಮತ್ತಂ ತಾವರೆಗೆರೆಯಿಂ ಪತ್ತಿರೆ ಪಡುವಲು ಪೆರ್ಗ್ಗಡೆ ಕೆರೆಯ ಕಾಲಲು ಬೆಳವ ನಿರ್ನೆಲಂ ಕಾಲ ಮತ್ತರು ೭ ವೂರಿಂ ಮೂಡ ಕೋಟೆಯಿಂ ಪತ್ತಿರ ಪೂದೋಂಟಂ ಮತ್ತರು ೨ ಅಲ್ಲಿಂ ಪತ್ತಿರೆ ನಿರ್ನೆಲಂ ಮತ್ತರೆರಡು ದೇವರಿಂ ಪತ್ತಿರೆ ಬಡಗಲ್ಬಿಟ್ಟ ಕಾಲ ನಿರ್ನೆಲ ಮತ್ತರು ೮ ದೇವಾಲ್ಯದಿಂ ಮೂಡಿ ಪುರವರ್ಗವಾ ಪುರವರ್ಗದಿಂ ಬಡಗ ಪೂದೋಂಟ ಕಾಲಮತ್ತರು ೪ ಹುಣಿಸೆಯ ಬೆಂಚೆಯ ೧(ಆ)ಸಗ ಗೆರಿ ಬಸು*ದಿ ಗುಂದಿ॥ ಎಂಬ ದಾನ ನೀಡಿದ ಉಲ್ಲೇಖವಿದೆ.

ಶ್ರೀಮಚ್ಚಾಳುಕ್ಯ ವಿಕ್ರಮ ಕಾಲದ (೪೫ನೆಯ ವಿಳಂಬಿ ಸಂವತ್ಸರದ) ಜೇಷ್ಠ ದ ಪುಂಣ್ಣೆ(ಮಿ) ಬುಧವಾರ ಸೋಮಗ್ರಹಣದಲು ಶ್ರೀ ಲೋಕೇಶ್ವರ ದೇವರ್ಗ್ಗೆ ಮಹಾಮಂಡಲೇಶ್ವರಂ ಲೋಕರಸರು ಅರಲು ಮುಂನೂರರ ಬಳಿಯ ಬಾಡಂ ದುಂಡಿ ತುರುವಳಿಗೆ ಯಂತೆರಡೂರು ಪ್ರಭುತ್ವಮುಂ ಮಂನೆಯಮುಮಂ ಧಾರಾಪೂರ್ವಕಂ ಮಾಡಿ ಬಿಟ್ಟು ತೇಜಿಗ ಹೊಲನಿಂ ಲಂಜಿದೇಳಲಿಂದೂರ ತೆಂಕಲ ಬಾಚಕ್ಕನ ಪಳ್ಳಂ। ಕಳಂಬೆಯ ಪಿರಿಯ ಪಳ್ಳಂ। ಬಡಗಲು ಮಾವಿಣತ್ತಿನ ಕೊಪ್ಪಲು। ಮೂಡಲು ಸವುಳಂ ಪಳ್ಳಮಿಂತಿಂ ಚತುಸ್ಸೀಮೆಯಿಂದೊಳಗೆ ಕಾಲ ಮತ್ತರು ೫೦೦ ಲೋಕ ಸಮರ್ಥನಿಂದಾದಿಯಾಗಿ ಭುಕ್ತಿ ಶಾಸನಮಾಗಿಯುಂಡ ಭೂಮಿಯಂ ಶಿಲಾಲಿಖಿತಮಾಗೆ ಪ್ರತಿಷ್ಠಾ ಮಾಡಿದರು॥ ಸರ್ವ್ವನಮಸ್ಯಂ ನೈಷ್ಠಿಕ ಮಠದಾಚಾರ್ಯ ಮಾಂನ್ಯವಳಿಯಾಗಿ ಕಾಳಾಮುಖ ನೈಷ್ಠಿಕ ತಪೋಧನರಾಗಬೇಳ್ಕುಂ ದೇವರಂಗ ಭೋಗಕ್ಕಂ ಪೂಜಗಂ ತಪೋಧನರಾಹಾರದಾನಕ್ಕಂ ಕಂನಡಕ್ಕರ ವೋದುವ ವಿದ್ಯಾರ್ಥಿ ಮಾಣಿಗಳಿಂಗೆ, ವೋದಿಸುವ ವುಪಾದ್ಯಾಯರ್ಕ್ಕಂ ಜೀರ್ಣೋದ್ಧಾರಕ್ಕಂ ಪಾತ್ರ ಪಾವುಳಕ್ಕಂ ಕಂಬದ ಸೂಳೆಯರ್ಗ್ಗಂ, ಮಠದಾಚಾರ್ಯರಿನಿತುಮಾಗಿ

ನಡಿಬಿಸುವರು॥ ಸ್ಪಸ್ತ್ಯಾನೇಕ ಭಂಗುರ ತರಂಗ ಸಂಘಾತ ವೀಚಿಚ್ಛಾಯ ಲವಣಾಬ್ಧಿ ವಲಯ ವಲಬಿತ ಯಿಳಾವನ ಗಂಗಾತೀರ ಪರಿಯತ್ರ ತನ್ಮಧ್ಯ ದೇಶಾಧೀಶ್ವರಂ ಮಾಹಿಷ್ಮತೀಪುರವರೇಶ್ವರಂ ಅಹಿಹಯ ವಂಶೋದ್ಭವಂ, ವಿವೇಕ ವನಜೋದ್ಭವಂ, ವೈರಿ ಮಂಡಳೀಕ ಶರಭ ಭೇರುಂಡಂ, ವೀರಮಾರ್ತಾಂಡಂ, ಚಂನಮಂನೆಯ ಲಲಾಟಪಟ್ಟಂ ವೈರಿಘರಟ್ಟಂ ಹಯವತ್ಸರಾಜಂ ಸಹಜ ಮನೋಜಂ, ಸತ್ಯಯುಧಿಷ್ಠರಂ ಶರಣಾಗತ ವಜ್ರಪಂಜರಂ, ಮಾರ್ಕೊಲೆ ಭೈರವಂ, ಬಂಟರ ಬೋವಂ ಬಿರುದ ಮಂನೆಯರ ಗಂಡಂ ನಿಕರ(ಕೊ)ಳ್ಗಂಡಂ ಶ್ರೀಲೋಕೇಶ್ವರ ದೇವ ಲಬ್ಧ ವರಪ್ರಸಾದಂ ಮೃಗಮದಾಮೋದಂ ಗಂಡ ಗೋಪಾಲಂ, ರಿಪುಕರ್ನ ಕಾಲಿ ದಳದಂಕಕಾರಂ ನಾನೆಗನಂಕದಾರಂ ಶ್ರೀಮದ್ಭೂಲೋಕ ಮಲ್ಲದೇವ ಪಾದಾರಾಧಕಂ, ಪರಬಲ ಸಾಧಕಂ ನಾಮಾದಿ ಎಂಬ ಶ್ರೀಮನ್ಮಹಾಮಂಡಲೇಶ್ವರಂ ಬಿಜ್ಜರಸರ ಪ್ರಶಸ್ತಿ ಶಾಸನ ಒಳಗೊಂಡಿದೆ.

ಸ್ಥಳ: ಹಂದರಕಿ **ಆಳಿದ ದೊರೆ:** ಚಾಲುಕ್ಯ ವಿಕ್ರಮಾದಿತ್ಯ

ಕಾಲ: ೧೧೨೨ **ಪ್ರಕಟಣೆ:** ಹೈ.ಕ.ಭಾ.ಕ.ಶಿ.ಶಾ.-ಪ್ಹಿ.ಶಿವಾನಂದ, ೧೯೯೨

ಭಾಷೆ: ಕನ್ನಡ **ಪು.:** ೧೧೯-೧೨೦

ವಿವರಣೆ-ಪ್ರಾರ್ಥನೆಯೊಂದಿಗೆ ಶಾಸನ ಆರಂಭವಾಗಿದೆ. ಸ್ವಸ್ತಿ ಶ್ರೀಮತು ಚಾಳುಕ್ಯ ವಿಕ್ರಮ ವರುಷ ೪೬ನೆಯ ಪ್ಲವ ಸಂವತ್ಸರದ ಚೈತ್ರದ ಪುಂಣಮಿ ಸೋಮವಾರ ಸೋಮಗ್ರಹಣ ನಿಮಿತ್ತದಿಂ ಸಾಂತಲದೇವಿಯರ ಬೆಸದಿಂದ ಹೆಗ್ಗಡೆ ಚಂದಿರಾಜಯ್ಯಂ ಹಂದಿರ್ಕೆಯ ಗಡಿಯಿಂ ತೆಂಕ ನಾಳಿಗಿವೆಟ್ಟದಿಂ, ಪಡುವಲು ಅರಮನೆಯಿಂದೀಶಾನ್ಯದಲೊಂದು ಮನೆಯ ನಿವೇಶನಮದರೆ ಮೂಡಣಂಗಡಿಯ ನಿವೇಶನ ವಂದಂ ಲೋಕೇಶ್ವರ ದೇವರ್ಗೆ ಧಾರಾಪೂರ್ವಕಂ ಮಾಡಿ ಬಿಟ್ಟ॥ ಅನ್ವಯಲಾದಾ ಧರ್ಮದ ನಿನ್ನೂರ್ಜಿತ ಮಾರ್ಪನೆಂದು ಆನೆಗ ದೇವಂ। ತನ್ನ ಸ್ವಹಸ್ತದಿ ಕೊಟ್ಟಂ ಮುನ್ನಿಬ ಆನೆಮಗೆರೆಗೆ ಗರ್ದೆಯ ಮತ್ತಂ॥ ಅಂತಂ ಹಣದಿಂ **** ಸರ್ವನಮಸ್ಯಂ ರೇವಣೇಶ್ವರರ ಗರ್ದೆಯ ಬಡಗಲು ಪೂದೋಂಟ ಮತ್ತರು ೧ ಅಲ್ಲಿಂ ಪತ್ತಿರೆ ನೀರ್ನೆಲದ ಮತ್ತರುಖಿ.

ಶಾಸನಗಳ ವಿಶೇಷ ಅಂಶಗಳು

ಹೈದ್ರಾಬಾದ್ ಕರ್ನಾಟಕದ ಶಿಲಾಶಾಸನಗಳು ಮತ್ತು ಕಲಬುರ್ಗಿ ಜಿಲ್ಲೆಯ ಶಾಸನಗಳು ಈ ಎರಡು ಕೃತಿಯಲ್ಲಿರುವ ಪಾಠಗಳ ವಿವರಣೆಯಲ್ಲಿ ಬಹಳಷ್ಟು ವ್ಯತ್ಯಾಸ ಕಂಡು ಅವುಗಳನ್ನು ಎರಡರಲ್ಲಿಯೂ ದಪ್ಪಕ್ಷರಗಳ ಮೂಲಕ ವ್ಯತ್ಯಾಸ ತಿಳಿಸುವ ಪ್ರಯತ್ನ ಮಾಡಲಾಗಿದೆ. 'ಯೀ ಧರ್ಮಕ್ಕಾವನೋರ್ವ ಸ್ಥಾನಪತಿಯೆಂಬುದಲ್ಲದೇಕ ಕಾರ್ಯಮನಾರೋರ್ವರುಯೆಲ್ಲ ಶುಭೆಯಪ್ಪನಂ ನಿಲಿಸುವರು। ಯಿಲ್ಲಿ ಬ್ರಾಹ್ಮಣನಲ್ಲದೆ ಸೂದ್ರಂ ಪೂಜಿಸಲಾಗದು॥ ಯಿಲ್ಲಿ ನಡವಂಗೆ ಗುಣ ಶಾನವಲ್ಲದಿಂತಪ್ಪಂ ಗಾವನೊಡೆಯ ನೇನೆಂನಂನ್ಯಾಕೆ ತಳದ ಪೀಠೆನಲು ಬಾರದು॥' ಕ್ರಿ.ಶ.೧೨೯೨ರ ಬೋದನ ಶಾಸನ ಎಂದು ಕಲಬುರ್ಗಿ ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖವಾದರೆ, ಹೈದ್ರಾಬಾದ್

ಕರ್ನಾಟಕ ಭಾಗದ ಶಿಲಾ ಶಾಸನದಲ್ಲಿ 'ಯೀ ಧರ್ಮಕ್ಕಾವನೋರ್ವ ಸ್ಥಾನಪತಿಯೆಂಬುದಲ್ಲದೇಕ ಕಾರ್ಯಮನಾರೋರ್ವ ರುಯಲ್ಲ ಸಾಗುಮಾಡುವವರನೇ ನಡಿಯಿಸುವರು। **ಹೊಲ್ಲಾಗಿ ನಡದರುಂ ಯಜಮಾನಿಕೆ ಕಿತ್ತುಕಳೆದು ಮತ್ತೋರ್ವ ಶುಭೆಯಪ್ಪನಂ** ನಿಲಿಸುವರು। ಯಿಲ್ಲಿ ಬ್ರಾಹ್ಮಣನಲ್ಲದೆ ಸೂದ್ರಂ ಪೂಜಿಸಲಾಗದು॥' ಎಂದು **ಕ್ರಿ.ಶ.** ೧೧೯೨ರ ಬೋಧನ ಶಾಸನ ಎಂದು ಕಾಲ ಮತ್ತು ಶಾಸನ ಪಾಠದಲ್ಲಿ ವಿವರಣೆ ಬಹಳಷ್ಟು ಬದಲಾವಣೆಗಳಿವೆ. ಕಲಬುರ್ಗಿ ಜಿಲ್ಲೆಯ ಶಾಸನಗಳು ಮಣ್ಣೂರು ಕ್ರಿ.ಶ.೧೧೨೧ರ ಶಾಸನದಲ್ಲಿ;

ಮೇಲಿನ ಶಾಸನಗಳ ಪಾಠವನ್ನು ಅರ್ಥೈಸುತ್ತಾ ಹೋದಾಗ ಅವುಗಳಲ್ಲಿ ಹಲವು ಅಂಶಗಳು ವಿಶೇಷವಾಗಿ ಕಂಡು ಬಂದವು. ರಾಜಕೀಯ ಇತಿಹಾಸ ಕಟ್ಟುವ ಉದ್ದೇಶದಿಂದ ಅವುಗಳನ್ನಾಯ್ಕೆ ಮಾಡಲಾರಂಭಿಸಿದೆ. ಅದು ಕೇವಲ ರಾಜಕೀಯ ಇತಿಹಾಸಕ್ಕೆ ಸೀಮಿತಗೊಳ್ಳದೆ ಕೃಷಿ, ಬೆಳೆಗಳು, ಭೌಗೋಳಿಕತೆ, ಆರ್ಥಿಕ ವ್ಯವಸ್ಥೆ, ಸಾಮಾಜಿಕ ಸ್ತರ ವಿನ್ಯಾಸ, ವರ್ಣವ್ಯವಸ್ಥೆ, ಸಾಮಾನ್ಯ ಜನ ಜೀವನ, ವ್ಯಾಪಾರಿಗಳ ಜೀವನ ಮತ್ತು ಅವರದೇ ಆದ ವೃತ್ತಿ ಸಂಘಗಳ ಕುರಿತು ವಿವರಿಸುತ್ತದೆ. ಸಾಂಸ್ಕೃತಿಕ ಕೊಡುಗೆ, ಶೈಕ್ಷಣಿಕ, ಸಾಹಿತ್ಯಿಕ ಮತ್ತು ಭಾಷೆ–ಲಿಪಿಯ ಬೆಳವಣಿಗೆಯ ಬಗ್ಗೆ ಅಭ್ಯಸಿಸಲು ನಮಗೆ ಮಾರ್ಗದರ್ಶಿಸುವುದರ ಜೊತೆಗೆ ಅದೇ ಕಾಲಕ್ಕೆ ಕರೆದುಕೊಂಡು ಹೋಗಿ ನಮಗೆ ನಿರ್ದಿಷ್ಟ ಮಾಹಿತಿ ನೀಡುವ ಕಾರ್ಯ ಮಾಡುತ್ತಿದೆ.

ಬಿಂಗೋಳಿ ಕ್ರಿ.ಶ. ೧೦೭೮ರ ಶಾಸನ ತ್ರಿಭುವನಮಲ್ಲ ದೇವರು ಜಯಂತಿಪುರ ಆಳ್ವಿಕೆ ಮಾಡುವ ಉಲ್ಲೇಖವಿದೆ. ಕುರುಬ ಜನಾಂಗದವರಾದ ಬಕ್ಕಯ್ಯ, ಸೋವಿಮಯ್ಯ, ಮುದ್ದಯ್ಯರ ಉಲ್ಲೇಖ. ನಾಣ್ಯ–ದ್ರಮ್ಮದ ಉಲ್ಲೇಖವಾಗಿದೆ. ಮಣ್ಣೂರು ಕ್ರಿ.ಶ. ೧೧೨೧ರ ಗಂಗರಾಸಿಜೀ ಶಿವಾಲಯ ಅಳಿದ ಕಾರಣ ಆತ್ಮ ಬಲಿದಾನ ಮಾಡಿಕೊಂಡ ಉಲ್ಲೇಖವಿದೆ. ಆಡಳಿತ ಘಟಕ ಮತ್ತು ಅಧಿಕಾರಿಗಳು– ಮಹಾಪ್ರಧಾನ, ದಂಡನಾಯಕರು ಕಾಳಿದಸಯ್ಯ, ಅಲಂದೆ ಸಾಸಿರ ಪೆರ್ಗಡೆ ಒಡೆತನ–ಕಾಳಿದಾಸಯ್ಯ, ಮಣಿಯೂರು ಹನ್ನೆರಡು ಕಂಪಣವೆರ್ಗಡೆ ಅಧಿಕಾರಿ– ಆದಿತ್ಯನಾಯಕ, ಮನ್ನೆಯ–ಚಿಕ್ಕಗೊವಣರಸ, ಮಹಾಮಂಡಳೇಶ್ವರ–ಆಹವಮಲ್ಲರಸರ ಉಲ್ಲೇಖವಿದೆ.

ಕೌಂಟಿಯ ಕ್ರಿ.ಶ. ೧೦೮೭ರ ಶಾಸನದಲ್ಲಿ ಮಹಾಮಂಡಳೇಶ್ವರ–ಬಿಬ್ಬರಸರ ಉಲ್ಲೇಖವಿದೆ. ಸರಡಗಿಯ ಕ್ರಿ.ಶ. ೧೦೧೧ರ ಶಾಸನದಲ್ಲಿ ಹಾಡುವವರು, ಪಾತ್ರಕ್ಕೆ ದಾನ. ವಿದ್ಯಾದಾನ, ಹಳವಿಗ ಬಿಕ್ಕೋಜಂಗೆ ದಾನ ನೀಡಿದ ವಿವರಣೆಯಿದೆ. ಕ್ರಿ.ಶ. ೧೧೧೦ರ ವಿಷ್ಣುಭಟ್ಟರ ಸರವಡಿಗೆಯ ಪ್ರಭುಗಳು, ವ್ಯಾಪಾರಿಗಳಾದ ಐನೂರ್ವರು, ನಕರರ ಉಲ್ಲೇಖವಿದೆ. ಮಣ, ಮಾನ, ನಾರಂ ಎಂಬ ಉಲ್ಲೇಖವಿದೆ. ಹರಸೂರ ಕ್ರಿ.ಶ. ೧೯೭ರ ಶಾಸನದಲ್ಲಿ ಪಾರ್ವತೀಶ ಶಾಸನ ಮುದದಿಂದ ಮಾಚಿಸೆಟ್ಟಿಗಳ ಮಾತು/ಸಾಹಿತ್ಯ ಅದೇ ರೀತಿ ಜಗಕ್ಕದೇಂ ಬರೆಯಲು ಮಲ್ಲೋಜ ಕಡೆದ ಎಂದು ಉಲ್ಲೇಖಿಸಿದೆ. ಹಿರಿಯ ದಂಡನಾಯಕ ಬಂಮಣ್ಣಯ್ಯ, ಶೇಷ–ಮಹಾಜನ ಗೋಂಕನಾಡು ಮನ್ನೆಯ ಗೋಂಕರಸ, ಸೀಮೊಳ ಪ್ರಭು ನಾಚರಸ, ಜಗದೇಕಮಲ್ಲನೃಪರ

ಮನೆಯೋಳ್ವರ ಮಂತ್ರಿ ಸಿದ್ದಪಯ್ಯ ಎಂಬ ಅಧಿಕಾರಿಗಳ ವಿವರಣೆ ನೀಡಿದೆ. ನಿಂಬರ್ಗದ ಕ್ರಿ.ಶ.೧೯೮೮ರ ಶಾಸನ ಬಿಬ್ಬರಸರು ತಮ್ಮ ಮನ್ನೆಯಮುಮಂ ಶ್ರೀಮದಾಹವಮಲ್ಲ ದೇವರ್ಗ್ಗೆ ದ್ರೋಹ ರಾಗಲವಂದಿರಂ*** ರಮುಮಂ ಆಯದಾಯ ಪರಿಹಾರವಾಗಿ ಬಿಟ್ಟರು. ಆಲದಮರ, ಬೇವಿನಮರ, ಹುಲ್ಲೆಯ ಬೆಟ್ಟ, ಭಾಸ್ಕರಬೆಟ್ಟ ಮತ್ತು ನರ್ಮದಾ ನದಿ ಉಲ್ಲೇಖ.

ನಿಂಬರ್ಗಿಯ ಕ್ರಿ.ಶ.೧೦೫೫ರ ಶಾಸನದಲ್ಲಿ ಚಂಪಕವನ ಗಂಧಶಾಲಿ, ಮಯೂರ, ಹಂಸ, ಮಕರಗಳ ಉಲ್ಲೇಖವಿದೆ. ಪಡಸಾವಳಿಗೆಯ ಕ್ರಿ.ಶ.೧೧೧೦ರ ಶಾಸನದಲ್ಲಿ ಪಟ್ಟಸಾವಳಿಗೆಯ ಪ್ರಭು ಮತ್ತು ಬಾಣಸವೆರ್ಗ್ಗಡೆ ನಾರಾಯಣದೇವ, ದಂಡನಾಯಕ–ನಾರದೇವ ಹೆಗ್ಗಡೆ ಅಧಿಕಾರಿಗಳು ಮತ್ತು ಮೊರಂಬ ಎಂಬತ್ತರ ಮನ್ನೆಯ ಉಲ್ಲೇಖವಿದೆ. ಹುಂಜದ ಉಲ್ಲೇಖವಿದೆ. ಮಡಿಹಾಳದ ಕ್ರಿ.ಶ.೧೧೮೪ರ ಶಾಸನವು ದೊರೆ ತ್ರಿಭುವನಮಲ್ಲ ಸೋಮೇಶ್ವರ. ಮಹಾಪ್ರಧಾನ ರಾಯ ದಂಡನಾಥ ಮತ್ತು ದಂಡನಾಯಕ–ಚಾವಣಯ್ಯ, ಕುಮಾರ ಪದ್ಮರಸ–ದಂಡನಾಯಕರನ್ನು ಹೆಸರಿಸುತ್ತದೆ. ನಿಂಬರ್ಗಿಯ ಕ್ರಿ.ಶ.೧೨ನೆಯ ಶತಮಾನದ ಮುನೀಂದ್ರ–ಸುರೇಶ್ವರ, ಮಾಡಿಫಳದ ಆಚಾರ್ಯ–ಧ್ರುವೇಶ. ವೇಳುಗ್ರಾಮದ ಭೂಷಣೇಶ್ವರದ ಸಮ್ಮಾದಿ ಆಚಾರ್ಯರ ಉಲ್ಲೇಖವಿದೆ. ಮಡಿಹಾಳ ಕ್ರಿ.ಶ.೧೨ನೆಯ ಶತಮಾನ ನೀರನವ್ಯವಸ್ಥೆಗೆ ಬಾವಿ, ತಡಾಗವನ್ನು ನಿರ್ಮಿಸಿದ ಉಲ್ಲೇಖವಿದೆ. ಸುಂಕಗಳಲ್ಲಿ–ತಿಪ್ಪೆಸುಂಕ, ಶಿವಮುನಿ–ವಾದೀಶ್ವರ ಮುನಿಪತಿ ಮತ್ತು ಅವರ ಶಿಷ್ಯರ ಮತ್ತು ಗಾಣವಾಯಿಲೆಯಂರ? ಉಲ್ಲೇಖ. ಕ್ರಿ.ಶ.೧೨ನೆಯ ಶತಮಾನದ ಶಾಸನ ತೆರಿಗೆ ನೀಡಿದ ವಿವರಣೆಯಿದೆ. ಮಡಿಹಾಳದ ಕ್ರಿ.ಶ.೧೩ನೆಯ ಶತಮಾನದ ಶಾಸನ ಸಿರಿಊರು, ಮಠದ ಪರಿಸೂತ್ರಕೆ, ಸತ್ರಕ್ಕೆ, ದಾನದ ಉಲ್ಲೇಖವಿದೆ. ಮಡಕೆಯ ಉಲ್ಲೇಖ. ಹಿರೇಝುಳಕಿಯ ಕ್ರಿ.ಶ.೧೨ನೆಯ ಶತಮಾನದ ಶಾಸನದಲ್ಲಿ ಹಿರೇಝುಳಕಿಗೆಗೆ ಮಾವಿನ ಜಳಕಿ ಎಂದು ಕರೆಯುತ್ತಿದ್ದರು. ದಮ್ಮಾ ನಾಣ್ಯದ ಉಲ್ಲೇಖವಿದೆ. ರುದ್ರವಾಡಿ ಕ್ರಿ.ಶ:೧೧೦೩ರ ಶಾಸನದಲ್ಲಿ ಕ್ರಯ–ಐನೂರು ಗದ್ಯಾಣ ಪೊನ್ನ ಕ್ರಯದಾನವಾಗಿಕೊಂಡು ಕಾಲ್ಗರ್ಚಿ ಎಂಬ ಉಲ್ಲೇಖವಿದೆ. ಕರ್ನಾಟಕ, ಸಂಸ್ಕೃತ, ಆಂಧ್ರ ಕವಿಯೆಂದು ಮತ್ತು ಕವಿರತ್ನ ಭೂಷಣೆಂದು ವಿಷ್ಣುಭಟ್ಟರಿಗೆ ಕರೆದ ಉಲ್ಲೇಖ. ಮಲ್ಲ ದಂಡಾಧೀಪ–ಆಡಳಿತ ಅಧಿಕಾರಿ ಸಾವಿರ ಕಣ್ಣುಗಳನ್ನು ಮಾಡಿಸಿದ ಉಲ್ಲೇಖವಿದೆ. ಕ್ರಿ.ಶ:೧೧೦೩ರ ಅಗ್ರಹಾರ, ಬ್ರಹ್ಮಪುರಿ ಉಲ್ಲೇಖವಿದೆ.

ಮಡಿಹಾಳ್(ಸು.೧೨ನೆಯ ಶತಮಾನ) ಮಹಾಪ್ರಧಾನ ರಾಯದಂಡನಾಥ ಗಂಡಪೆಂಡಾರ, ಚಾವಣಯ್ಯ ದಂಡನಾಯಕ, ಚಂದಲದೇವಿ, ಕುಮಾರ ಪದ್ದರಸ ದಂಡನಾಯಕರು, ಮನ್ನೆಯ ಮಲ್ಲಿದೇವರಸರು. ಸಾಮಾಜಿಕ ವ್ಯವಸ್ಥೆಯ ಮತ್ತು ಸೂಳೆಗೇರೆ, ಬಡಗಿ, ಸಿಪ್ಪಿಗ, ಕುಮ್ಮಾರರ ವಿವರಣೆಯನ್ನು ನೀಡುತ್ತದೆ. ಮಡಿಹಾಳ್ ಕ್ರಿ.ಶ.೧೨೪೧, ಹೂದೋಟದ ಬಗ್ಗೆ ತಿಳಿಸುತ್ತದೆ. ಸು.೧೨ನೆಯ ಶತಮಾನದ ಶಾಸನ ಮಂಡಳೀಕ ಗುಣೋತ್ತರನಪ್ಪ ಆಹವಮಲ್ಲ, ಮಾಡಿಫಳದ ಆಚಾರ್ಯ–ಧ್ರುವೇಶ ಬ್ರತೀಶ್ವರರ ನಾಮ ಉಲ್ಲೇಖಿಸುತ್ತದೆ. ಸು.೧೨ನೆಯ ಶತಮಾನ ಶಾಸನ ಬಾವಿಯ ಉಲ್ಲೇಖ, ತಡಾಗ ನಿರ್ಮಿಸಿದ ವಿವರಣೆಯಿದೆ. ಆವಟಮಂತರಿಕೆ? ತಿಪ್ಪೆಸುಂಕ,

ನಂದಾದೀಪಕ್ಕೆ ಮತ್ತು ಗಾಣಕ್ಕೆ ಬಿಟ್ಟ ವಿವರಣೆಯಿದೆ. ಹೊಲಕೇರಿ, ಗಾಣಾಯಿಲೆ ಮತ್ತು ತಿಪ್ಪೆಸುಂಕದ ಉಲ್ಲೇಖವಿದೆ. ಕ್ರಿ.ಶ. ೧೩ನೆಯ ಶತಮಾನದ ಶಾಸನದಲ್ಲಿ ಅಳತೆ ಮಾಪನವಾದ ಕಾಲಡಿಯ ಮತ್ತರು ಎಂದು ಉಲ್ಲೇಖಿಸಲಾಗಿದೆ. ಕ್ರಿ.ಶ. ೧೩ನೆಯ ಶತಮಾನದ ಶಾಸನದಲ್ಲಿ ಸಿರಿಯೂರು, ಅಳತೆ-ಕಾಲಮತ್ತರು, ಉದ್ದ ಮತ್ತು ಅಗಲದ ಉಲ್ಲೇಖವಿದೆ. ಅಡಿಕೆ, ಎಲೆ, ಮಡಕೆ, ಮಾವು, ಎಳ್ಳಿನ ಉಲ್ಲೇಖವಿದೆ. ಆತನೂರು ಶಾಸನ ಸು.೧೨ನೆಯ ಶತಮಾನದ ಶಾಸನದಲ್ಲಿ ಹಣ ಐದು ಎಂದು ಉಲ್ಲೇಖಿಸಿದೆ. ಕ್ರಿ.ಶ. ೧೧೦೭, ಅಫ್ಜಲ್‌ಪುರ ಶಾಸನವು ಪ್ರಶಸ್ತಿ ಸಹಿತ, ದಾನಶಾಸನವಾಗಿದೆ. ಆಡಳಿತ ಅಧಿಕಾರಿಗಳಾದ ಯುವರಾಜ ಮಲ್ಲಿಕಾರ್ಜುನ, ಮಹಾಪ್ರಧಾನನಾದ ನಾಚಿಮರಸ, ಮನ್ನೆಯ ಮಹಾಮಂಡಳೇಶ್ವರ ಡಾಂಕರಸ ಎಂದು ಉಲ್ಲೇಖಿತವಾಗಿದೆ. ಡಾಂಕರಸನ ಪ್ರಶಸ್ತಿ, ಯುವರಾಜ ಮಲ್ಲಿಕಾರ್ಜುನನ ಪ್ರಶಸ್ತಿ, ದತ್ತಿನಾಪುರದ ರೇವಣಯ್ಯರ ಪ್ರಶಸ್ತಿ ವಿವರವಿದೆ. ಬೀಚವಳ್ಳಿಯನ್ನು ಬ್ರಹ್ಮಪುರಿಯನ್ನಾಗಿ ಮಾಡಿದ ಉಲ್ಲೇಖವಿದೆ. ನಾಣ್ಯ-ಹಣ ಎಂದು ಉಲ್ಲೇಖವಾಗಿದೆ.

ಗೊಬ್ಬೂರು ಶಾಸನ ಸು.೧೨ನೆಯ ಶತಮಾನದ್ದಾಗಿದೆ. ಅರಸ ತ್ರಿಭುವನ ಮಲ್ಲದೇವರು, ಆಡಳಿತ ಅಧಿಕಾರಿಗಳು ಮಹಾಮಂಡಳೇಶ್ವರ-ರಾಯದೇವರಸರು, ಹೆಗ್ಗಡೆ-ರೇವನಯ್ಯ ನಾಯಕರು, ಮನ್ನೆಯ ಪ್ರಭು ಮಲ್ಲಿಗರು ಎಂದು ಉಲ್ಲೇಖಿತವಾಗಿದೆ. ಕುಂತಲದೇಶದಲ್ಲಿ ಅಲಂದೆ ನಾಡಿನಲ್ಲಿ ಗೊಬ್ಬೂರು, ಭೋಗಾವತಿ ಊರುಗಳಿವೆ ಎಂದು ಉಲ್ಲೇಖಿತ. ಗ್ರಾಮದ ಪ್ರಮುಖ ವ್ಯಾಪಾರಿ ಸಂಘಗಳು:- ನಕರಗಳು, ಸ್ವಾಮಿಗಳು, ಮುಮ್ಮರಿದಂಡಂಗಳು, ನಾನಾದೇಸಿಗಳು ಎಂದು ಉಲ್ಲೇಖಿತವಾಗಿದೆ. ಕ್ರಿ.ಶ. ೧೧೪೦ ಶಾಸನವು ರಾಜ ಜಗದೇಕ ಮಲ್ಲನ ಹೆಸರು ಸೂಚಿಸುತ್ತದೆ. ಕ್ರಿ.ಶ. ೧೧೭೦ ಶಾಸನದಲ್ಲಿ ಆಡಳಿತ ಅಧಿಕಾರಿಗಳಾದ ಮಹಾಮಂಡಳೇಶ್ವರ ಮತ್ತು ಕೋಪಣ ಊರಿನ ಅಧಿಕಾರಿ ನಾಭಿರಾಜ. ಅಳಂದೆಯ ಮಹಾಮಂಡಳೇಶ್ವರ ಮಲಿದೇವನಂಕಕಾರ ಕಲಿಕಾಮ ಹಿರಿಯ ಕನ್ನಡ ಸಂಧಿವಿಗ್ರಹಿ ಮತ್ತು ದಂಡನಾಯಕ ಕಾಳಿಮಯ್ಯ ನಾಯಕರನ್ನು ಉಲ್ಲೇಖಿಸುತ್ತದೆ ಮಹಾಪ್ರಧಾನ ಬಾಹತ್ತರ ನಿಯೋಗಾಧಿಪತಿ ಶ್ರೀಕರಣ ಕಾಳಿದಾಸ-ಶ್ರೀರಣ ಪದವಿ ಹೊಂದಿದ ಮತ್ತು ವಿಭುಗ ನಿಧಾನ ಹಿರಿಯ ಸಂಧಿವಿಗ್ರಹಿ ಅಧಿಕಾರ ಪದವಿ ಹೊಂದಿದ ಉಲ್ಲೇಖವಿದೆ. ಮೇಳಕುಂದೆ, ಕಲಂಬುರಗೆ, ಗೊಬ್ಬೂರು, ಪಂದರಕೆ, ಮೊದಗನೂರು ಕುಪ್ಪ ಊರುಗಳ ಉಲ್ಲೇಖವನ್ನೊಳಗೊಂಡಿದೆ.

ಚಿನಮಳ್ಳಿಯ ಕ್ರಿ.ಶ.೧೧೭೫ರ ಶಾಸನವು ರಾಜ-ರಾಯಮುರಾರಿ ಸೋವಿದೇವ, ಮಹಾಪ್ರಧಾನ ದಂಡಾಧಿಪತಿ ಅತ್ತಿನರೆಂಬತ್ತರ ಕಲ್ಯಾಣ ದಂಡನಾಯಕರು. ಮಹಾಮಂಡಳೇಶ್ವರ ಮನ್ನೆಯ ಅಹವಮಲ್ಲರಸರು, ಹೆಗ್ಗಡೆ ಬಮ್ಮಣ್ಣಯ್ಯ, ಅತ್ತಿನೂರು ಪ್ರಭು ಅಮ್ಮಣ್ಣ ನಾಯಕ ರಾಜಕೀಯ ಆಡಳಿತಗಾರರ ನಾಮ ಸೂಚಿಸುತ್ತದೆ. ಅತ್ತಿನೂರೆಂಬತ್ತು, ಮನ್ನೆಯ ಆಡಳಿತ ಘಟಕಕಗಳನ್ನು ಹೆಸರಿಸುತ್ತದೆ. ವ್ಯಾಪಾರಿಗಳಾದ, ವೀರ ಬಣಂಜಗರಾದ ಮದಯಿನೂರು ಸ್ವಾಮಿಗಳು, ಮೂವತ್ತಾರು ಬೀಡು ಮುಮ್ಮರಿ ದಂಡಗಳು, ಅಲಂದೆ ಸಾಸಿರದ ಸೆಟ್ಟಿಗುತ್ತರ ಉಲ್ಲೇಖವಿದೆ. ಮೆಣಸು, ಅಡಕೆ,

ಭತ್ತ, ಎಲೆ, ಅಲ್ಲ, ಅರಸಿನದ ಉಲ್ಲೇಖಗಳಿವೆ. ವೀರಬಣಂಜಗರ ಧರ್ಮದ ಉಲ್ಲೇಖವಿದೆ. ಬಂದರವಾಡ ಕ್ರಿ.ಶ. ೧೧೧೮ರ ಶಾಸನದಲ್ಲಿ ಆಡಳಿತ ಘಟಕ ಮತ್ತು ಅಧಿಕಾರಿಗಳಾದ ರಾಜ ತ್ರಿಭುವನ ಮಲ್ಲ ದೇವರು, ಯುವರಾಜ ಮಲ್ಲಿಕಾರ್ಜುನ, ದಂಡನಾಯಕ ಮತ್ತು ಮಹಾಸಾಮಂತ ಲಕ್ಷ್ಮರಸ, ಮನ್ನೆಯ ಮಹಾಮಂಡಳೇಶ್ವರ ಗೊಂಕರಸರು, ಸುಂಕವೆರ್ಗಡೆ ಅಳಿಯ ವೈಜರಸರು, ಅಲಂದೆ ಸಾಸಿರದ ಕಂಪಣವತ್ತಿ, ಮಹಾಪ್ರಧಾನ ದಂಡನಾಯಕ ವಡ್ಡರಾವುಳದ ಸುಂಕವೆರ್ಗಡೆ ತ್ರಿಪುರಾಂತ ಕೈಯರು, ಅಲಂದೆ ಸಾಸಿರದ ವೆರ್ಗಡೆ ಲಕ್ಷ್ಮರಸ, ಕಂಚೆಯ ನಾಯಕರು, ಮಹಾಮಂಡಳೇಶ್ವರ ಕೋವಣರಸ, ಹಡವಳದ ಗೋಪಣಯ್ಯ(ಸುಂಕಗಾರ) ಎಂದು ಉಲ್ಲೇಖಿಸುತ್ತದೆ. ಕ್ರಿ.ಶ. ೧೧೭೪ರ ಶಾಸನದಲ್ಲಿ ಆಡಳಿತ ಘಟಕ ಮತ್ತು ಅಧಿಕಾರಿಗಳು- ರಾಜ-ರಾಯಮುರಾರಿ ಸೋವಿದೇವರ ಆಳ್ವಿಕೆ ಭಾಗ-ಕೋಪಣಪುರ. ಮಹಾಮಂಡಳೇಶ್ವರ ವೀರ ಅಹವಮಲ್ಲ ದೇವರ ಉಲ್ಲೇಖವಿದೆ. ಚಿಣಬಗೆರೆಯ ತೆಂಕವಲವತ್ತಿನೂರ ಕೋಟೆಯ ಉಲ್ಲೇಖವಿದೆ.

೩.೪. ಅಪ್ರಕಟಿತ ಶಾಸನಗಳು

ಗ್ರಾಮ: ಇಟಗಾ(ಬಿ) **ಶಿಲ್ಪ:** ಅಪ್ರಕಟಿತ ಶಾಸನ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಊರೊಳಗೆ

ಗಜಲಕ್ಷ್ಮಿ ಲಲಾಟವನ್ನು ಮೇಲ್ಭಾಗದಲ್ಲಿ ಕೆತ್ತಲಾಗಿದ್ದು ಕೆಳಭಾಗದಲ್ಲಿ ಅಕ್ಷರಗಳು ನಶಿಸಿದ ಶಿಲಾಫಲಕವಿದೆ(ಅಪ್ರಕಟಿತ).

ಗ್ರಾಮ: ಬಸವಪಟ್ಟಣ **ಶಿಲ್ಪ:** ಅಪ್ರಕಟಿತ ಶಾಸನ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೦ನೆಯ ಶತಮಾನ

ಸ್ಥಿತಿ: ಉತ್ತಮ **ದೊರೆತ ಸ್ಥಳ:** ಹನುಮಾನ್‌ಗುಡಿ

ಶಾಸನದ ಎದುರಿಗೆ ಲಿಂಗ ಪೀಠದಲ್ಲಿರುವ ಲಿಂಗವಿದೆ. ಇನ್ನೊಂದು ಸಂಪೂರ್ಣ ತ್ರುಟಿತ ಅಪ್ರಕಟಿತ? ಶಾಸನಶಿಲ್ಪವಿದೆ. ತ್ರುಟಿತ ನಾಗಶಿಲ್ಪ, ಸಿಂಹಪೀಠವಿದೆ. ದೇವಾಲಯದ ಬಲಕ್ಕೆ ಒಂದು ತ್ರುಟಿತ ಲಿಂಗ ಮತ್ತು ಬಾಗಿಲವಾಡವಿದೆ.

ಗ್ರಾಮ: ಕವಲಗಾ(ಬಿ) **ಶಿಲ್ಪ:** ಅಪ್ರಕಟಿತ ಶಾಸನ

ಶಿಲೆ: ಕಪ್ಪುಕಲ್ಲು **ಕಾಲ:** ?

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಊರಮಧ್ಯ

ಇಲ್ಲಿ ಎರಡು ಶಾಸನಗಳು ದೊರೆತಿವೆ. ಒಂದು ಹೆಚ್ಚು ತ್ರುಟಿತವಾಗಿದೆ.

ಗ್ರಾಮ: ಶರಣ ಶಿರಸಗಿ **ಶಿಲ್ಪ:** ಅಪ್ರಕಟಿತ ಶಾಸನ

ಶಿಲೆ: ಕಪ್ಪುಕಲ್ಲು **ಕಾಲ:** ?

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ನಂದಿಕೇಶ್ವರ ಗುಡಿ

ಗ್ರಾಮ: ಹುಣಸಿ ಹಡಗಲಿ **ಶಿಲ್ಪ:** ಅಪ್ರಕಟಿತ ಶಾಸನ,

ಶಿಲೆ: ಕಪ್ಪುಕಲ್ಲು **ಕಾಲ:** ?

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಧರಣೇಂದ್ರ ಪದ್ಮಾವತಿದೇವಿ ಜೈನ ಬಸದಿ

ಅಪ್ರಕಟಿತ ಒಂದು ಶಾಸನ ಬಾಗಿಲಿನ ಕೆಳಭಾಗದಲ್ಲಿದೆ.

ಗ್ರಾಮ: ಹೊನ್ನಕಿರಣಗಿ **ಶಿಲ್ಪ:** ಅಪ್ರಕಟಿತ ಶಾಸನ

ಶಿಲೆ: ಕಪ್ಪುಕಲ್ಲು. **ಕಾಲ:** ?

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಸನ್ಯಾಸಿ ಗುಡಿ

ಸನ್ಯಾಸಿಯ ಗುಡಿಯಲ್ಲಿ ಒಂದು ಪೂಜಿಸುತ್ತಿರುವ ರೇಖಾಮಾದರಿಯ ನಾಗ ಕೆತ್ತನೆಯಿದೆ. ಅದರ ಬಲಕ್ಕೆ ಶಾಸನವಿದೆ.

ಗ್ರಾಮ: ಕವಲಗಾ(ಬಿ) **ಶಿಲ್ಪ:** ಅಪ್ರಕಟಿತ ಶಾಸನ

ಶಿಲೆ: ಕಪ್ಪುಕಲ್ಲು. **ಕಾಲ:** ?

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಸಿದ್ದಪ್ಪಯ್ಯನ ಗುಡಿ

ಒಂದು ಅಪ್ರಕಟಿತ ಶಾಸನವಿದೆ. ಅಕ್ಷರಗಳು ಬಹಳಷ್ಟು ಹಾಳಾಗಿವೆ.

ಗ್ರಾಮ: ಕವಲಗಾ(ಬಿ) **ಶಿಲ್ಪ:** ಅಪ್ರಕಟಿತ ಶಾಸನ

ಶಿಲೆ: ಕಪ್ಪುಕಲ್ಲು **ಕಾಲ:** ಸು.೧೧ನೆಯ ಶತಮಾನ.

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಊರ ಮಧ್ಯೆ

ಇದೇ ಊರಿನಲ್ಲಿ ಇನ್ನೊಂದು ಅಪ್ರಕಟಿತ ಶಾಸನ ದೊರಕಿದೆ. ಇದರ ಲಲಾಟಬಿಂಬ ಮತ್ತು ಕೆಳಗಿನ ಕೆಲವು ಸಾಲುಗಳು ಮಾತ್ರ ಲಭ್ಯವಾಗಿವೆ. ಉಳಿದ ಕೆಳಭಾಗ ತ್ರುಟಿತವಾಗಿದ್ದು ಈ ಭಾಗ ದೊರಕಿಲ್ಲ.

ಗ್ರಾಮ: ಖಣದಾಳ್ **ಶಿಲ್ಪ:** ಅಪ್ರಕಟಿತ ಶಾಸನ

ಶಿಲೆ: ಕಪ್ಪುಕಲ್ಲು **ಕಾಲ:** ಸು.೧೦-೧೧ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಊರ ಹೊರಗೆ

ಇಲ್ಲಿ ಗಡಿಗಲ್ಲು ಶಾಸನವು ದೊರಕಿದ್ದು ಇದು ಪ್ರಸ್ತುತ ಅಪ್ರಕಟಿತ ಶಾಸನವಾಗಿದೆ. ಗಡಿಕಾಯುವವನು ಭರ್ಚಿ ಹಿಡಿದಂತೆ ಕೊರೆದ ಕೆತ್ತನೆಯಿದೆ. ರೇಖಾಚಿತ್ರದಂತೆ ಕೆತ್ತಿರುವ ಸೂರ್ಯ, ಚಂದ್ರ ಲಲಾಟದಲ್ಲಿದೆ. ಶಂಖ ಹೆಗಲ ಹಿಂದೆ ಹಾರುವ ಬಟ್ಟೆಗೆ ತಾಕಿದಂತೆ ಮತ್ತು ಚಕ್ರ ಎಡಗೈಯಲ್ಲಿ ಹಿಡಿದಂತೆ ರೇಖೆಯಲ್ಲಿ ಕೋರೆಯಲಾಗಿದೆ. ಬಲಗೈ ಅಷ್ಟಕ್ಕೆ ನಿಲ್ಲು ಎನ್ನುವ ಸೂಚನೆ ಮಾಡುವಂತಿದೆ? ಮುಡಿ ಧರಿಸಿ ತೊಡೆಯವರೆಗೆ ಬಟ್ಟೆ ಧರಿಸಿರುವುದು. ಕಾಲ್ಗಡಗ ಮತ್ತು ಕೈಗಡಗದ ಕೆತ್ತನೆಯಿದೆ. ಅದರ ಕೆಳಗೆ ಶಾಸನವಿದೆ.

ಗ್ರಾಮ: ಅವರಾದ(ಕೆ) ಶಿಲ್ಪ: ಅಪ್ರಕಟಿತ ಶಾಸನ
ಕಾಲ: ಸು. ೧೧ನೆಯ ಶತಮಾನ ಸ್ಥಿತಿ: ತ್ರುಟಿತ
ಶಿಲೆ: ಕಪ್ಪುಕಲ್ಲು. ದೊರೆತ ಸ್ಥಳ: ಹನುಮಾನ್ ಗುಡಿ

ಹನುಮಾನ್ ಗುಡಿಯ ಪ್ರಾಂಗಣದಲ್ಲಿ ಒಂದು ಅಪ್ರಕಟಿತ ಶಾಸನ ದೊರಕಿದೆ. ಇದು ಕಲ್ಯಾಣ ಚಾಲುಕ್ಯರ ಕಾಲದ್ದಾಗಿದೆ.

ಗ್ರಾಮ: ಹೇರೂರು(ಬಿ) ಶಿಲ್ಪ: ಅಪ್ರಕಟಿತ ಶಾಸನ
ಕಾಲ: ಸು. ೧೪ನೆಯ ಶತಮಾನ ಸ್ಥಿತಿ: ತ್ರುಟಿತ
ಶಿಲೆ: ಬಿಳಿಕಲ್ಲು ದೊರೆತ ಸ್ಥಳ: ಹನುಮಾನ್ ಗುಡಿ

ಹನುಮಾನ್ ಗುಡಿಯ ಎದುರುಗಡೆ ನೆಲದಲ್ಲಿ ಅರ್ಧಭಾಗ ಹೂತುಹೋಗಿದೆ. ಅಕ್ಷರಗಳು ಕಲ್ಯಾಣ ಚಾಲುಕ್ಯರ ನಂತರದ ಕಾಲದ್ದಾಗಿವೆ.

ಗ್ರಾಮ: ಹೇರೂರು(ಬಿ) ಶಿಲ್ಪ: ಅಪ್ರಕಟಿತ ಶಾಸನ
ಕಾಲ: ಸು.೧೧ನೆಯ ಶತಮಾನ ಸ್ಥಿತಿ: ತ್ರುಟಿತ
ಶಿಲೆ: ಕಪ್ಪುಕಲ್ಲು. ದೊರೆತ ಸ್ಥಳ: ಹನುಮಾನ್ ಗುಡಿ

ಹನುಮಾನ್ ಗುಡಿಯ ಅಗಸಿ ಬಾಗಿಲಿನ ಎಡಭಾಗದಲ್ಲಿ ಶಾಸನ ಕೆತ್ತಲಾಗಿದೆ. ಇವುಗಳಲ್ಲದೇ ಬೆಳಗುಂಪಾ(ಕೆ), ಕುಪನೂರು, ಬೆಡಕ್‌ಪಳ್ಳಿಯಲ್ಲಿ ಅಪ್ರಕಟಿತ ಶಾಸನಗಳು ದೊರೆತಿವೆ.

೩.೫. ವೀರಗಲ್ಲುಗಳು

"ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ
ಕ್ಷಣ ವಿದ್ವಂಸಿ ನೀ ಕಾಯೇ ಕಾ ಚಿಂತಾ ಮರಣೇ ರಣೇ"

ಎಂಬುದಾಗಿ ಕರ್ನಾಟಕದ ವೀರಗಲ್ಲುಗಳ ಪಾಠದ ನಾಂದಿ ಶ್ಲೋಕವಾಗಿದೆ.[೨೮]

"ವರನ್ತೇಜಸ್ವಿನೋ ಮೃತ್ಯುರ್ನತು ಮಾನಾವಖಣ್ಡನಮ್
ಮೃತ್ಯುಸ್ತತ್ ಕ್ಷಣಿಕೋ ದುಃಖಮ್ಮಾನಭಂಗಂ ದಿನೇ ದಿನೇ"
ಕ್ರಿ.ಶ. ೧೧೪೦ರ ಶಾಸನದಲ್ಲಿ ಉಲ್ಲೇಖ.
"ಅನಿತ್ಯಮದ್ರುವಂ ಪ್ರಾಣಂ ಮಾನಮಾಚಂದ್ರ ತಾರಕಂ
ಪ್ರಾಣಮೇವ ಪರಿತ್ಯಾಗೇ ಮಾನವೇವ ಸುರಕ್ಷಿತಂ"

ಎಂಬ ಶ್ಲೋಕದಲ್ಲಿ ವೀರತ್ವದ ಪಾರಮಾರ್ಥಿಕ ಫಲವೂ ವ್ಯಕ್ತವಾಗುತ್ತದೆ.[೨೯] ಮಾನ ಇಲ್ಲವೆ ಒಂದು ಜೀವಿಯ ರಕ್ಷಣೆಗಾಗಿ ತಮ್ಮ ಪ್ರಾಣ ತ್ಯಾಗ ಮಾಡಿದ ವೀರನ ವೀರಗಾಥೆಯನ್ನು ವಿವರಿಸುವ ಶಿಲ್ಪಗಳೆ ವೀರಗಲ್ಲುಗಳಾಗಿವೆ. ದೇಶದ ರಕ್ಷಣೆ, ಉಪ್ಪಿನ ಋಣ ತೀರಿಸುವ ಉದ್ದೇಶ ಮತ್ತು ಹೆಣ್ಣಿನ ಮಾನ, ಗೋ–ಸಂಪತ್ತಿನ ರಕ್ಷಣೆಗಳ ಉದ್ದೇಶದಿಂದ ಹೋರಾಡುವ ವೀರನ

ಬಗ್ಗೆ ವೀರಗಲ್ಲುಗಳು ಸೂಚಿಸುತ್ತವೆ. ಲೌಕಿಕ ಮತ್ತು ಧಾರ್ಮಿಕ, ವ್ಯಕ್ತಿಗತ ಉದ್ದೇಶದಿಂದ ಮಡಿದವರಿಗಾಗಿ ನೆಟ್ಟ ಕಲ್ಲುಗಳೆ ವೀರಗಲ್ಲಾಗಿವೆ. ಒಟ್ಟಿನಲ್ಲಿ ವೀರನು ಲೌಕಿಕ ಮತ್ತು ಪಾರಮಾರ್ಥಿಕ ಉದ್ದೇಶದಿಂದ ಹೋರಾಡಿ ಜಯಿಸುತ್ತಿದ್ದ ಇಲ್ಲವೆ ಮಡಿಯುತ್ತಿದ್ದರು. ಜಯಿಸಿದ ವೀರರಿಗೆ ಬಾಳ್ಗಚ್ಚುವಾಗಿ ಅನೇಕ ಗೌರವ ಧನ ಪದವಿ, ಭೂಮಿ ನೀಡುತ್ತಿದ್ದರು. ಇದಕ್ಕೆ ಉತ್ತಮ ಉದಾಹರಣೆ ೫ನೆಯ ಶತಮಾನದ ಪ್ರಾಚೀನ ಕನ್ನಡದ ಹಲ್ಮಿಡಿ ಶಾಸನವಾಗಿದೆ.

ಮರಣ ಹೊಂದಿದ ವೀರನ ರಕ್ತಸಂಬಂಧಿಗಳು ಇಲ್ಲವೆ ಆತ್ಮೀಯರು ಆ ವೀರನ ಹೆಸರಲ್ಲಿ ವೀರಗಲ್ಲು ನೆಡುತ್ತಿದ್ದರು. ವೀರ ಸತ್ತು ಸ್ವರ್ಗಕ್ಕೆ ಹೋಗಿರುವಂತೆ, ಮುಕ್ತಿ ಪಡೆದಂತೆ ಕೆತ್ತಿಸಿ ವೀರರಲ್ಲಿ ಪಾರಮಾರ್ಥಿಕ ಗುರಿ, ಉದ್ದೇಶ ಜಾಗೃತಗೊಳಿಸುತ್ತಿದ್ದ ವೀರಗಲ್ಲುಗಳು ಹೋರಾಡಲು ಉತ್ತೇಜಿಸುತ್ತಿದ್ದವು. ಕರ್ನಾಟಕದಲ್ಲಿ ಈ ರೀತಿಯ ವೀರಗಲ್ಲುಗಳು ಸಾಕಷ್ಟು ಸು.೫ನೆಯ ಶತಮಾನದ ಅಂತ್ಯ ಭಾಗದಿಂದ ದೊರೆಯುತ್ತವೆ ಎಂದು ಹೇಳಬಹುದು.

ಪ್ರಸ್ತುತ ಗುಲ್ಬರ್ಗಾ ಜಿಲ್ಲೆಯ ಉತ್ತರ ಭಾಗದಲ್ಲಿ ಸುಮಾರು ಕ್ರಿ.ಶ.೬ನೆಯ ಶತಮಾನದಿಂದ ವೀರಗಲ್ಲುಗಳು ದೊರೆತಿವೆ. ಕ್ರಿ.ಶ.೬-೭ನೆಯ ಶತಮಾನದಿಂದ ೧೨ನೆಯ ಶತಮಾನದ ಅಂತ್ಯ ಭಾಗದವರೆಗೆ ವೀರಗಲ್ಲುಗಳು ದೊರಕುತ್ತವೆ. ಅಂತಹ ವೀರಗಲ್ಲುಗಳ ವೈವಿಧ್ಯತೆ ಈ ರೀತಿಯಾಗಿ ಇಲ್ಲಿ ಕಾಣಬಹುದು.

೩.೫.೧. ಹೋರಾಟದ ವೀರಗಲ್ಲುಗಳು

ಯುದ್ಧದಲ್ಲಿ ಹೋರಾಡಿ ಮಡಿದ ವೀರರನ್ನು ಸೂಚಿಸುವ ವೀರಗಲ್ಲು ಶಿಲ್ಪಗಳು ಇಲ್ಲಿ ಹೆಚ್ಚು ದೊರೆಯುತ್ತವೆ. ರಟ್ಕಲ್‌ನಲ್ಲಿನ ವೀರಗಲ್ಲುಗಳು, ಯುದ್ಧದಲ್ಲಿ ಹೋರಾಡುತ್ತಿರುವ ವೀರರ ಶಿಲ್ಪಗಳನ್ನು ಒಳಗೊಂಡಿವೆ. ಸೋಮನಿಂಗದಹಳ್ಳಿಯ ವೀರಗಲ್ಲುಗಳು ಯುದ್ಧದಲ್ಲಿ ಶತ್ರು ಸೈನ್ಯದ ವಿರುದ್ಧ ಹೋರಾಡುತ್ತಿರುವ ದೃಶ್ಯಾವಳಿಯನ್ನೊಳಗೊಂಡಿದೆ. ಗೊಟ್ಟಂಗೊಟ್ಟಿಯಲ್ಲಿಯ ಎಂಟು ವೀರಗಲ್ಲುಗಳಲ್ಲಿ ವೀರರು ಹೋರಾಡಿ ಮಡಿದ ಚಿತ್ರಣ ಕೆತ್ತಲ್ಪಟ್ಟಿದೆ. ಇವು ಹೆಚ್ಚಾಗಿ ಕಾಲಾಳುಗಳು ಹೋರಾಡಿದ ವಿವರ ನೀಡುವ ವೀರಗಲ್ಲುಗಳಾಗಿವೆ.

೩.೫.೨. ಸಲ್ಲೇಖನ ವ್ರತದ ಸ್ಮಾರಕಗಳು

ನಿಷಧಿಕಲ್ಲು/ಆತ್ಮಬಲಿದಾನಗಳು: ಧಾರ್ಮಿಕ ಆದರ್ಶಭಾವ ಹೊಂದಿದ್ದ ಜನತೆ ಧಾರ್ಮಿಕ ಉದ್ದೇಶಗಳಿಗಾಗಿ, ಸಮಾಜ ಕಲ್ಯಾಣಕ್ಕಾಗಿ ಇಲ್ಲವೆ ವ್ಯಕ್ತಿಗತ ಉದ್ದೇಶಕ್ಕಾಗಿ ಆತ್ಮಬಲಿದಾನ ಮಾಡಿಕೊಳ್ಳುತ್ತಿದ್ದರು. ಉದಾ-ಎತ್ಬಾಪುರದ ನಿಷಿಧಿಗಲ್ಲು. ಹುಣಸಿ ಹಡಗಲಿಯಲ್ಲಿ ದೊರೆತ ಶಿಲ್ಪಗಳು ಜೈನ ಯತಿಗಳು ಸಲ್ಲೇಖನ ವ್ರತ ಮಾಡಿ ಪ್ರಾಣ ತ್ಯಾಗ ಮಾಡಿದ ಬಗ್ಗೆ ತಿಳಿಸುತ್ತವೆ. ಜೈನ ಧರ್ಮದಲ್ಲಿ ಧಾರ್ಮಿಕ ಉದ್ದೇಶ ಇಲ್ಲವೆ, ವ್ಯಕ್ತಿಗತ ಉದ್ದೇಶ ಇಲ್ಲವೆ ಸಾರ್ವಜನಿಕ ಕಲ್ಯಾಣದ ಉದ್ದೇಶಕ್ಕಾಗಿ ಸಲ್ಲೇಖನ ವ್ರತ ಆಚರಣೆ ಮಾಡಿ ಮರಣ ಹೊಂದಿದ ವಿಷಯವನ್ನು ಸೂಚಿಸುವ ಕಲ್ಲುಗಳಾಗಿವೆ. ಉದಾ: ಎತ್ಬಾಪುರದ ಹನುಮಾನ್ ಮಂದಿರದ ಹತ್ತಿರ ದೊರೆತ ಎರಡು ಪಾದಗಳು ಇಲ್ಲಿ ನಿಷಧಿ ಹೋದ ಬಗ್ಗೆ ಸೂಚಿಸುತ್ತದೆ.

೩.೫.೩. ಮಹಾಸತಿಗಲ್ಲುಗಳು

ಮರಣ ಹೊಂದಿದ ಪತಿಯೊಂದಿಗೆ ಪತ್ನಿ ಚಿತೆಯೇರಿ ಸತಿ ಹೋಗಿದ್ದವರ ನೆನಪಿಗಾಗಿ ನೆಟ್ಟ ಕಲ್ಲುಗಳೇ ಮಾಸ್ತಿಗಲ್ಲುಗಳಾಗಿವೆ. ಅಂತಹ ಪದ್ಧತಿ ಇಲ್ಲಿ ಇತ್ತು ಎನ್ನುವುದಕ್ಕೆ ಚಿಂಚೋಳಿ ತಾಲೂಕಿನಲ್ಲಿ ದೊರೆತ ಏಳು ಮಾಸ್ತಿಗಲ್ಲುಗಳು ಸಾಕ್ಷಿಯಾಗಿವೆ. ಉದಾ: ಎತ್ಪಾಪುರದಲ್ಲಿ ಸು.೬–೭ನೆಯ ಶತಮಾನದ ಪುರಾತನ ಮಾಸ್ತಿ ಮೂರ್ತಿ ದೊರೆತಿದೆ. ರುಮ್ಮನಗೂಡದ ಸು.೧೦ನೆಯ ಶತಮಾನದ ಮಾಸ್ತಿಗಲ್ಲುಗಳು ಕಪ್ಪುಶಿಲೆಯಲ್ಲಿದ್ದು ಒಕ್ಕೈ ಮಾಸ್ತಿಗಳಾಗಿವೆ. ಸೋಮನಿಂಗದ ಹಳ್ಳಿಯಲ್ಲಿ ದೊರೆತ ಒಂದು ವೀರ ಮಾಸ್ತಿ ಮತ್ತೊಂದು ಮಾಸ್ತಿಗಲ್ಲು ಇಲ್ಲಿಯೂ ಸತಿ ಹೋಗುವ ಪದ್ಧತಿ ಕ್ರಿ.ಶ. ೧೧ನೆಯ ಶತಮಾನದಲ್ಲಿತ್ತು ಎನ್ನುವುದಕ್ಕೆ ಕುರುಹುಗಳಾಗಿವೆ. ಭೂತಪುರದ ಸು.೧೧–೧೨ನೆಯ ಶತಮಾನದ ಒಕ್ಕೈ ಮಾಸ್ತಿ.೩ ಹಲ್‌ಚೇರಾದ ಮಾಸ್ತಿಗಲ್ಲು, ಗುಲ್ಬರ್ಗಾದ ಮಾಸ್ತಿಗಲ್ಲು, ಇವುಗಳೆಲ್ಲ ಈ ಪ್ರದೇಶದಲ್ಲಿ ಪತಿಯ ಮರಣದ ನಂತರ ಸತಿ ಹೋಗುವ ಪದ್ಧತಿ ಇತ್ತೆಂಬುದನ್ನು ಸೂಚಿಸುತ್ತವೆ.

೩.೫.೪. ಇತರೆ ಸ್ಮಾರಕಗಳು

ಗಡಿಕಲ್ಲು : ಗಡಿಯನ್ನು ಅಥವಾ ಸೀಮೆಯನ್ನು ಸೂಚಿಸುವ ಕಲ್ಲುಗಳೇ ಗಡಿಕಲ್ಲುಗಳಾಗಿವೆ. ಖಣದಾಳ್ ಮತ್ತು ಬೇಡಕ್‌ಪಳ್ಳಿಯ ಒಂದು ಬಿಳಿಕಲ್ಲಿನ ಮೇಲೆ ಈಟಿ ಹಿಡಿದು ಶಂಖದಂಥ ಮುಡಿ ಧರಿಸಿ ಕಾವಲು ನಿಂತಂತೆ ನಿಲ್ಲಿಸಲ್ಪಟ್ಟ ಕಲ್ಲಿದೆ. ಇವು ಶಾಸನ ಶಿಲ್ಪಗಳಾಗಿವೆ.

ಹಂದಿ ಬೇಟೆಯ ವೀರಗಲ್ಲು : ಹುಲುಸುಗೂಡಿನ ಅಗಸಿ ಬಳಿ ದೊರೆತ ಒಂದು ವೀರಗಲ್ಲು ಹಂದಿ ಬೇಟೆಯಾಡುತ್ತಿರುವಂತೆ ಕೆತ್ತಲ್ಪಟ್ಟಿದೆ. ಪ್ರಸ್ತುತ ಈ ಭಾಗದಲ್ಲಿ ದೊರೆತ ಶಾಸನ ವೈವಿಧ್ಯತೆಗಳನ್ನು ಇಲ್ಲಿ ಸೆರೆಹಿಡಿಯಲಾಗಿದೆ. ಸಿಂಹ ಬೇಟೆಯ ವೀರಗಲ್ಲು ಚಿಂಚನ್‌ಸೂರು ಮತ್ತು ಬೋಳೆವಾಡಗಳಲ್ಲಿ ದೊರೆತಿವೆ.

ಸ್ಥಳ: ಭೈರಮಡಗಿ	**ಶಿಲ್ಪ:** ವೀರಗಲ್ಲು
ಶಿಲೆ: ಕಪ್ಪುಶಿಲೆ	**ದೊರೆತ ಸ್ಥಳ:** ರಾಮಲಿಂಗ ಗುಡಿ
ಸ್ಥಿತಿ: ಉತ್ತಮ	**ಕಾಲ:** ಸು. ೧೧ನೆಯ ಶತಮಾನ

ಮೂರು ಸ್ತರದ ವೀರಗಲ್ಲಿನ ಕೆಳಸ್ತರವು ವೀರ ಭರ್ಚಿಯಿಂದ ಹೋರಾಡುತ್ತಿರುವನು. ಶತ್ರುವಿಗೆ ಇರಿಯುವ ದೃಶ್ಯ ಕೆತ್ತಲಾಗಿದೆ. ಎರಡನೆಯ ಸ್ತರದಲ್ಲಿ ಅಪ್ಸರೆಯರು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ದೃಶ್ಯವಿದೆ. ಮೇಲಿನ ಸ್ತರದಲ್ಲಿ ಲಿಂಗೈಕ್ಯ ಹೊಂದಿದ ವೀರನು ಲಿಂಗ ಪೂಜೆ ಮಾಡುತ್ತಿರುವ ದೃಶ್ಯವಿದೆ.

ಸ್ಥಳ: ಗೌಡಗಾಂವ್	**ಶಿಲ್ಪ:** ವೀರಗಲ್ಲು
ಶಿಲೆ: ಕಪ್ಪುಶಿಲೆ	**ದೊರೆತ ಸ್ಥಳ:** ಮಲ್ಲಯ್ಯನಗುಡಿ
ಸ್ಥಿತಿ: ತ್ರುಟಿತ	**ಕಾಲ:** ಸು. ೧೧ನೆಯ ಶತಮಾನ

ಮೂರು ಸ್ತರದ ವೀರಗಲ್ಲಿನಲ್ಲಿ ಮೊದಲನೆಯ ಸ್ತರದಲ್ಲಿ ವೀರನು ಖಡ್ಗ ಮತ್ತು ಭಲ್ಲೆ ಹಿಡಿದು ಶತ್ರುವನ್ನು ಇರಿಯುತ್ತಿರುವಂತೆ ಕೆತ್ತಲಾಗಿದೆ. ಎರಡನೆಯ ಸ್ತರದಲ್ಲಿ ಅಪ್ಸರೆಯರು

ಸ್ವರ್ಗಕ್ಕೆ ವೀರನಿಗೆ ಕರೆದೊಯ್ಯುತ್ತಿರುವಂತೆ, ಮೂರನೆಯ ಸ್ತರದಲ್ಲಿ ಲಿಂಗಕ್ಕೆ ಕೈಮುಗಿದ ದೃಶ್ಯಾವಳಿಯಿದೆ.

ಸ್ಥಳ: ಗೌಡಗಾಂವ್ **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಮಲ್ಲಯ್ಯನ ಗುಡಿ

ಸ್ಥಿತಿ: ತ್ರುಟಿತ **ಕಾಲ:** ಸು.೧೧ನೆಯ ಶತಮಾನ

ಮೂರು ಸ್ತರದ ವೀರಗಲ್ಲಿನಲ್ಲಿ ಮೊದಲನೆಯ ಸ್ತರದಲ್ಲಿ ವೀರನು ಭರ್ಚಿಯಿಂದ ಶತ್ರುವನ್ನು ಇರಿಯುತ್ತಿರುವಂತೆ ಕೆತ್ತಲಾಗಿದೆ. ಶತ್ರುವು ಖಡ್ಗ ಮತ್ತು ಭಲ್ಲೆ ಹಿಡಿದು ಹೋರಾಡುತ್ತಿರುವನು. ಎರಡನೆಯ ಸ್ತರದಲ್ಲಿ ಅಪ್ಸರೆಯರು ಸ್ವರ್ಗಕ್ಕೆ ವೀರನಿಗೆ ಕರೆದೊಯ್ಯುತ್ತಿರುವಂತೆ, ಮೂರನೆಯ ಸ್ತರದಲ್ಲಿ ಲಿಂಗಕ್ಕೆ ಕೈಮುಗಿದ ದೃಶ್ಯಾವಳಿಯಿದೆ. ವೀರನು ವೀರಮುಡಿ, 'ವಿ' ಆಕಾರದ ವಸ್ತ್ರ ಧರಿಸಿರುವನು.

ಸ್ಥಳ: ಗೌಡಗಾಂವ್ **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಮಲ್ಲಯ್ಯನ ಗುಡಿ

ಸ್ಥಿತಿ: ತ್ರುಟಿತ **ಕಾಲ:** ಸು. ೧೧ನೆಯ ಶತಮಾನ

ಮೂರು ಸ್ತರದ ವೀರಗಲ್ಲಿನಲ್ಲಿ ಮೊದಲನೆಯ ಸ್ತರದಲ್ಲಿ ವೀರನು ಖಡ್ಗ ಮತ್ತು ಭಲ್ಲೆ ಹಿಡಿದು ಶತ್ರುವೊಂದಿಗೆ ಹೋರಾಡುತ್ತಿರುವಂತೆ ಕೆತ್ತಲಾಗಿದೆ. ಶತ್ರುವು ಖಡ್ಗ ಮತ್ತು ಭಲ್ಲೆ ಹಿಡಿದು ಹೋರಾಡುತ್ತಿರುವನು. ಎರಡನೆಯ ಸ್ತರದಲ್ಲಿ ಅಪ್ಸರೆಯರು ಸ್ವರ್ಗಕ್ಕೆ ವೀರನನ್ನು ಕರೆದೊಯ್ಯುತ್ತಿರುವಂತೆ, ಮೂರನೆಯ ಸ್ತರದಲ್ಲಿ ಲಿಂಗಕ್ಕೆ ಕೈಮುಗಿದ ದೃಶ್ಯಾವಳಿಯಿದೆ. ವೀರನು ವೀರ ಮುಡಿ ಧರಿಸಿರುವನು.

ಸ್ಥಳ: ಗೌಡಗಾಂವ್ **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಮಲ್ಲಯ್ಯನ ಗುಡಿ

ಸ್ಥಿತಿ: ತ್ರುಟಿತ **ಕಾಲ:** ಸು. ೧೧ನೆಯ ಶತಮಾನ

ಮಲ್ಲಯನ ಗುಡಿಯ ಎದುರಿಗೆ ಒಂದು ಸ್ತರದ ವೀರಗಲ್ಲಿದೆ. ಬಿಲ್ಲು ಮತ್ತು ಬಾಣ ಹಿಡಿದಿರುವ ಕೆತ್ತನೆಯಿದೆ. ಸು. ೯ನೆಯ ಶತಮಾನದ್ದಾಗಿದೆ.

ಸ್ಥಳ: ಕರಿಬೋಸಗಾ **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಹನುಮಾನ್ ಮಂದಿರ

ಸ್ಥಿತಿ: ತ್ರುಟಿತ **ಕಾಲ:** ಸು. ೧೧ನೆಯ ಶತಮಾನ

ಖಡ್ಗ ಮತ್ತು ಭಲ್ಲೆ ಹಿಡಿದು ಹೋರಾಡುತ್ತಿರುವ ವೀರನಶಿಲ್ಪ ಕೆಳಸ್ತರದಲ್ಲಿದೆ. ಮೇಲಿನ ಸ್ತರದಲ್ಲಿ ಲಿಂಗೈಕ್ಯವಾದ ವೀರ ಶಿವಲಿಂಗವನ್ನು ಪೂಜಿಸುತ್ತಿರುವಂತೆ ಕೊರೆಯಲಾಗಿದೆ.

ಸ್ಥಳ: ಮದರಾ(ಕೆ) ಶಿಲ್ಪ: ವೀರಗಲ್ಲು

ಶಿಲೆ: ಕಪ್ಪುಕಲ್ಲು. ದೊರೆತ ಸ್ಥಳ: ನಂದಿಬಸವನ ಗುಡಿ

ಸ್ಥಿತಿ: ತ್ರುಟಿತ ಕಾಲ: ಸು. ೧೧ನೆಯ ಶತಮಾನ

ಮೂರು ಸ್ತರದಲ್ಲಿರುವ ಈ ಶಿಲ್ಪದ ಕೆಳಸ್ತರದಲ್ಲಿ ಒಬ್ಬ ಕೈಮುಗಿದು ಕುಳಿತಿರುವನು. ಶತ್ರು ಆಯುಧದಿಂದ ಆಕ್ರಮಣ ಮಾಡುತ್ತಿರುವವನಿಗೆ ವೀರನು ಹೋರಾಡುತ್ತಿರುವಂತೆ ಇಕ್ಕೆಲುಗಳಲ್ಲಿ ಕೆತ್ತಲಾಗಿದೆ. ಎರಡನೆಯ ಸ್ತರದಲ್ಲಿ ಅಪ್ಸರೆಯರು ಸ್ವರ್ಗಕ್ಕೆ ಕರೆದೊಯ್ಯುತ್ತಿರುವಂತೆ ಕೆತ್ತಲಾಗಿದೆ. ಲಿಂಗೈಕ್ಯ ಹೊಂದಿರುವ ವೀರನು ಶಿವಲಿಂಗಕ್ಕೆ ಕೈಮುಗಿದು ಕುಳಿತಂತೆ ಮೇಲಿನ ಸ್ತರದಲ್ಲಿ ಕೆತ್ತಲಾಗಿದೆ.

ಸ್ಥಳ: ಮದರಾ(ಕೆ) ಶಿಲ್ಪ: ವೀರಗಲ್ಲು

ಶಿಲೆ: ಕಪ್ಪುಕಲ್ಲು ದೊರೆತ ಸ್ಥಳ: ನಂದಿಬಸವನ ಗುಡಿ

ಸ್ಥಿತಿ: ತ್ರುಟಿತ ಕಾಲ: ಸು.೧೧ನೆಯ ಶತಮಾನ

ಮೂರು ಸ್ತರದ ವೀರಗಲ್ಲಿನಲ್ಲಿ ಮೊದಲನೆಯ ಸ್ತರದಲ್ಲಿ ವೀರನು ಶತ್ರುವಿನ ರುಂಡ ಖಡ್ಗದಿಂದ ಚೆಂಡಾಡಿದಂತೆ ಕೆತ್ತಲಾಗಿದೆ. ಎರಡನೆಯ ಸ್ತರದಲ್ಲಿ ಅಪ್ಸರೆಯರು ಸ್ವರ್ಗಕ್ಕೆ ವೀರನನ್ನು ಕರೆದೊಯ್ಯುತ್ತಿರುವಂತೆ, ಮೂರನೆಯ ಸ್ತರದಲ್ಲಿ ಲಿಂಗಕ್ಕೆ ಕೈಮುಗಿದ ದೃಶ್ಯಾವಳಿಯಿದೆ.

ಸ್ಥಳ: ಮದರಾ(ಕೆ) ಶಿಲ್ಪ: ವೀರಗಲ್ಲು

ಶಿಲೆ: ಕಪ್ಪುಕಲ್ಲು. ದೊರೆತ ಸ್ಥಳ: ನಂದಿಬಸವನ ಗುಡಿ

ಸ್ಥಿತಿ: ಉತ್ತಮ ಕಾಲ: ಸು.೧೧ನೆಯ ಶತಮಾನ

ಮೂರು ಸ್ತರದ ವೀರಗಲ್ಲಿನಲ್ಲಿ ಮೊದಲನೆಯ ಸ್ತರದಲ್ಲಿ ವೀರನು ಖಡ್ಗ ಮತ್ತು ಭಲ್ಲೆ ಹಿಡಿದಂತೆ ಕೆತ್ತಲಾಗಿದೆ. ಎರಡನೆಯ ಸ್ತರದಲ್ಲಿ ಅಪ್ಸರೆಯರು ಸ್ವರ್ಗಕ್ಕೆ ವೀರನಿಗೆ ಕರೆದೊಯ್ಯುತ್ತಿರುವಂತೆ, ಮೂರನೆಯ ಸ್ತರದಲ್ಲಿ ಲಿಂಗಕ್ಕೆ ಕೈಮುಗಿದ ದೃಶ್ಯಾವಳಿಯಿದೆ.

ಸ್ಥಳ: ಮದಿರಾ(ಕೆ) ಶಿಲ್ಪ: ವೀರಗಲ್ಲು

ಶಿಲೆ: ಕಪ್ಪುಕಲ್ಲು ದೊರೆತ ಸ್ಥಳ: ನಂದಿಬಸವನ ಗುಡಿ

ಸ್ಥಿತಿ: ಉತ್ತಮ ಕಾಲ: ಸು.೧೧ನೆಯ ಶತಮಾನ

ಮೂರು ಸ್ತರದ ವೀರಗಲ್ಲಿನಲ್ಲಿ ಮೊದಲನೆಯ ಸ್ತರದಲ್ಲಿ ವೀರನು ಶತ್ರುವಿನ ರುಂಡ ಖಡ್ಗದಿಂದ ಚೆಂಡಾಡಿದಂತೆ ಕೆತ್ತಲಾಗಿದೆ. ಎರಡನೆಯ ಸ್ತರದಲ್ಲಿ ಅಪ್ಸರೆಯರು ಸ್ವರ್ಗಕ್ಕೆ ವೀರನನ್ನು ಕರೆದೊಯ್ಯುತ್ತಿರುವಂತೆ, ಮೂರನೆಯ ಸ್ತರದಲ್ಲಿ ಲಿಂಗಕ್ಕೆ ಕೈಮುಗಿದ ದೃಶ್ಯಾವಳಿಯಿದೆ.

ಸ್ಥಳ: ಬಂಗರಗಾ ಶಿಲ್ಪ: ವೀರಗಲ್ಲು

ಶಿಲೆ: ಕಪ್ಪುಕಲ್ಲು. ದೊರೆತ ಸ್ಥಳ: ಊರೊಳಗೆ

ಸ್ಥಿತಿ: ತ್ರುಟಿತ ಕಾಲ: ಸು.೧೧ನೆಯ ಶತಮಾನ

ತ್ರುಟಿತ ವೀರಗಲ್ಲು ಶಿಲ್ಪ ಮೂರು ಸ್ತರದಲ್ಲಿ ಕುದುರೆಯೇರಿ ವೀರ ಹೋರಾಡುತ್ತಿರುವ ಮತ್ತು ಮುಂದಿನವು ಅಸ್ಪಷ್ಟವಾಗಿವೆ.

ಸ್ಥಳ: ದೇವಂತಿ ಶಿಲ್ಪ: ವೀರಗಲ್ಲು
ಶಿಲೆ: ಕಪ್ಪುಕಲ್ಲು ದೊರೆತ ಸ್ಥಳ: ಊರೊಳಗೆ
ಸ್ಥಿತಿ: ತ್ರುಟಿತ ಕಾಲ: ಸು.೧೧ನೆಯ ಶತಮಾನ

ವೀರಗಲ್ಲು ಶಿಲ್ಪ ಒಂದು ಸ್ತರದಲ್ಲಿದೆ. ವೀರನು ಖಡ್ಗ ಹಿಡಿದು ಕುದುರೆಯೇರಿ ಹೋರಾಡುತ್ತಿರುವ ಕೆತ್ತನೆಯಿದೆ.

ಸ್ಥಳ: ಝುಳಕಿ(ಬಿ) ಶಿಲ್ಪ: ವೀರಗಲ್ಲು
ಶಿಲೆ: ಕಪ್ಪುಕಲ್ಲು ದೊರೆತ ಸ್ಥಳ: ಆಂಜನೇಯ ಗುಡಿ
ಸ್ಥಿತಿ: ತ್ರುಟಿತ ಕಾಲ: ಸು.೧೧ನೆಯ ಶತಮಾನ

ಆಂಜಿನೇಯನ ಗುಡಿಯಲ್ಲಿರುವ ಎರಡು ಸ್ತರದ ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆರಿದ್ದು ಕೋಡೆ ಹಿಡಿದ ಸೈನಿಕ ಮತ್ತು ಹಿಂದೆ, ಮುಂದೆ ಮತ್ತು ಕುದುರೆಯ ಲಗಾಮು ಹಿಡಿದ ಪದಾತಿ ಸೈನಿಕರ ಕೆತ್ತನೆಯಿದೆ. ಮೇಲಿನ ಸ್ತರದಲ್ಲಿ ಶಿವಲಿಂಗದ ಮುಂದೆ ಅಂಜಲಿ ಮುದ್ರೆಯಲ್ಲಿ ಕುಳಿತ ವೀರನ ದೃಶ್ಯಾವಳಿಯಿದೆ.

ಸ್ಥಳ: ಬಿದನೂರು ಶಿಲ್ಪ: ವೀರಗಲ್ಲು
ಶಿಲೆ: ಕಪ್ಪು ಕಲ್ಲು. ದೊರೆತ ಸ್ಥಳ: ಅಗಸಿ
ಸ್ಥಿತಿ: ತ್ರುಟಿತ ಕಾಲ: ಸು.೧೦ನೆಯ ಶತಮಾನ

ಅಗಸಿಯ ಬಳಿ ವೀರಗಲ್ಲು ಒಂದು ಸ್ತರದಲ್ಲಿದೆ. ಒಬ್ಬ ವೀರ ಮುಡಿ ಧರಿಸಿ ಸೊಂಟಕ್ಕೆ ಕೈ ಹಿಡಿದು(ಎಡ), ಬಲಗೈಯಲ್ಲಿ ಖಡ್ಗ? ಹಿಡಿದಂತೆ ಕೆತ್ತನೆಯಿದೆ. ಇದರಲ್ಲಿ ವೀರನನ್ನು ಮಾತ್ರ ತೋರಿಸಲಾಗಿದೆ.

ಸ್ಥಳ: ಬಿದನೂರು ಶಿಲ್ಪ: ವೀರಗಲ್ಲು
ಶಿಲೆ: ಕಪ್ಪು ಕಲ್ಲು. ದೊರೆತ ಸ್ಥಳ: ಹನುಮಾನ್ ಗುಡಿ
ಸ್ಥಿತಿ: ತೃಟಿತ ಕಾಲ: ಸು.೧೦ನೆಯ ಶತಮಾನ

ದ್ಯಾಮವ್ವನ ಗುಡಿಯ ಮುಂದೆ ಒಂದು ಸ್ತರದ ತ್ರುಟಿತ ವೀರಗಲ್ಲಿನಲ್ಲಿ ಖಡ್ಗ ಹಿಡಿದ ಕೆತ್ತನೆಯಿದೆ. ಶತ್ರುವಿನ ಶವದ ಮೇಲೆನಿಂತು ಹೋರಾಡುತ್ತಿರುವಂತೆ ಕೆತ್ತಲಾಗಿದೆ.

ಸ್ಥಳ: ಬೆಳಗುಂಪಾ(ಕೆ) ಶಿಲ್ಪ: ವೀರಗಲ್ಲು
ಶಿಲೆ: ಕಪ್ಪು ಕಲ್ಲು. ದೊರೆತ ಸ್ಥಳ: ಶಂಕರಲಿಂಗ ಗುಡಿ
ಸ್ಥಿತಿ: ಉತ್ತಮ ಕಾಲ: ಸು.೯ನೆಯ ಶತಮಾನ

ಎರಡು ಸ್ತರದ ವೀರಗಲ್ಲಿದೆ. ಕೆಳಸ್ತರದಲ್ಲಿ ವೀರ ಶತ್ರುವನ್ನು ಖಡ್ಗದಿಂದ ಇರಿಯುತ್ತಿರುವಂತೆ ಕೆತ್ತಲಾಗಿದೆ. ವೀರ ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಭಲ್ಲೆ ಹಿಡಿದಿರುವನು. ಮೇಲಿನ ಸ್ತರದಲ್ಲಿ

ಲಿಂಗೈಕ್ಯವಾದ ವೀರನನ್ನು ಅಪ್ಸರೆಯರು ಕರೆದೊಯ್ಯುವ(ಎಡ) ಶಿವಲಿಂಗಕ್ಕೆ ನಮಸ್ಕರಿಸುವ(ಬಲ) ಕೆತ್ತನೆಯಿದೆ. ವೀರಮುಡಿ, ಕರ್ಣಕುಂಡಲ, ಕೈಗಡಗ, ಬಾಹುವಲ್ಯ, ಯಜ್ಞೋಪವೀತ, ಸೊಂಟಪಟ್ಟಿ ಮತ್ತು ಅದಕ್ಕೆ ಚೂರಿ ನೇತುಹಾಕಿದೆ. 'ವಿ' ಆಕಾರದ ಸೊಂಟಕ್ಕೆ ಬಟ್ಟೆ ಧರಿಸಿರುವ ಮತ್ತು ಕಾಲ್ಗಡಗ ಧರಿಸಿರುವಂತೆ ಕೆತ್ತನೆಯಿದೆ.

ಸ್ಥಳ: ಗರೂರು **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪು ಕಲ್ಲು. **ದೊರೆತ ಸ್ಥಳ:** ಹನುಮಾನ್ ಗುಡಿ

ಸ್ಥಿತಿ: ತ್ರುಟಿತ **ಕಾಲ:** ಸು.೧೨ನೆಯ ಶತಮಾನ

ತ್ರುಟಿತ ಕಪ್ಪುಶಿಲೆಯ ಒಂದು ಸ್ತರದ ವೀರಗಲ್ಲು ವೀರಭದ್ರೇಶ್ವರ ಗುಡಿ ಆವರಣದಲ್ಲಿದೆ. ಬಿಲ್ಲು-ಬಾಣ ಹಿಡಿದು ಹೋರಾಡುತ್ತಿರುವ ಶಿಲ್ಪವಿದೆ. ಹಿಂದೆ ಬಾಣದ ಬತ್ತಳಿಕೆಯಿದೆ. ಅದರ ಪಕ್ಕದಲ್ಲಿ ತ್ರುಟಿತ ಅಸ್ಪಷ್ಟ ಅಧಿದೇವತೆಯ ಶಿಲ್ಪವಿದೆ.

ಸ್ಥಳ: ಸಿರನೂರು **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಈಶ್ವರಲಿಂಗ ಮಂದಿರ

ಸ್ಥಿತಿ: ತ್ರುಟಿತ **ಕಾಲ:** ಸು. ೧೦ನೆಯ ಶತಮಾನ

ಈಶ್ವರಲಿಂಗ ಗುಡಿಯ ಪ್ರಾಂಗಣದಲ್ಲಿ ದೊರೆತ ವೀರಗಲ್ಲು ಎರಡು ಸ್ತರದಲ್ಲಿದೆ. ಕೆಳಸ್ತರದಲ್ಲಿ ವೀರ ಕುದುರೆಯನ್ನೇರಿ ಖಡ್ಗ ಹಿಡಿದು ಹೋರಾಡುತ್ತಿರುವ ಮತ್ತು ಶಿವಲಿಂಗವನ್ನು ಪೂಜಿಸುತ್ತಿರುವ ವೀರನ ಶಿಲ್ಪವಿದೆ.

ಸ್ಥಳ: ಸಿರನೂರು **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಈಶ್ವರಲಿಂಗ ಮಂದಿರ,

ಸ್ಥಿತಿ: ತ್ರುಟಿತ **ಕಾಲ:** ಸು.೧೦ನೆಯ ಶತಮಾನ

ಅಂತರಾಳದಲ್ಲಿ ಮೂರು ಸ್ತರದ ವೀರಗಲ್ಲಿದೆ. ಕೆಳಸ್ತರದಲ್ಲಿ ವೀರ ಭರ್ಚಿಯಿಂದ ಶತ್ರುವನ್ನು ಇರಿಯುತ್ತಿರುವ ಶಿಲ್ಪವಿದೆ. ಎರಡನೆಯ ಸ್ತರದಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಶಿಲ್ಪವಿದೆ. ವೀರ ಶಿವಲಿಂಗದ ಮುಂದೆ ನಮಸ್ಕರಿಸುವ ಭಂಗಿಯಲ್ಲಿದೆ.

ಸ್ಥಳ: ಸಿರನೂರು **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಈಶ್ವರಲಿಂಗ ಮಂದಿರ,

ಸ್ಥಿತಿ: ತ್ರುಟಿತ **ಕಾಲ:** ಸು.೧೦ನೆಯ ಶತಮಾನ

ಒಂದು ಸ್ತರದ ವೀರಗಲ್ಲು ಶಿಲ್ಪವು ಅಂತರಾಳದಲ್ಲಿದೆ. ವೀರನು ಖಡ್ಗ ಮತ್ತು ಭಲ್ಲೆ ಹಿಡಿದು ಹೋರಾಡುತ್ತಿರುವ ಶಿಲ್ಪವಿದೆ.

ಸ್ಥಳ: ಶ್ರೀನಿವಾಸ ಸರಡಗಿ **ಶಿಲ್ಪ:** ವೀರಗಲ್ಲು
ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಹನುಮಾನ್ ಮಂದಿರ
ಸ್ಥಿತಿ: ತ್ರುಟಿತ **ಕಾಲ:** ಸು.೧೧ನೆಯ ಶತಮಾನ

ಊರ ಹೊರಗಿನ ಮೇಲಿನ(ಹಳೆಯ)ಅಗಸಿಯ ಹನುಮಾನ್ ದೇವಾಲಯದ ಎದುರಿಗೆ, ಒಂದು ವೀರಗಲ್ಲಿನ ಬಲಕ್ಕೆ ಶಾಸನ ಬರೆದಿರುವ ಶಿಲ್ಪವಿದೆ. ಎರಡು ಸ್ತರದ ವೀರಗಲ್ಲಿನ ಮೊದಲನೆಯ ಸ್ತರದಲ್ಲಿ ಕೊಡಲಿಯಿಂದ ಶತ್ರುವಿನೊಂದಿಗೆ ಹೋರಾಡುತ್ತಿರುವ ವೀರ, ಎರಡನೆಯ ಸ್ತರದಲ್ಲಿ ಅಪ್ಸರೆಯರು ಸುರಲೋಕಕ್ಕೆ ವೀರನನ್ನು ಕರೆದೊಯ್ಯುತ್ತಿರುವುದು, ವೀರಗಲ್ಲಿನ ಲಲಾಟದ ಮೇಲೆ ಲಿಂಗೈಕ್ಯ ಹೊಂದಿರುವ ದೃಶ್ಯಾವಳಿಯಿದೆ.

ಸ್ಥಳ: ಶ್ರೀನಿವಾಸ ಸರಡಗಿ **ಶಿಲ್ಪ:** ವೀರಗಲ್ಲು
ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಹನುಮಾನ್ ಮಂದಿರ
ಸ್ಥಿತಿ: ತ್ರುಟಿತ **ಕಾಲ:** ಸು.೧೧ನೆಯ ಶತಮಾನ

ತ್ರುಟಿತ ಒಂದು ಸ್ತರದ ವೀರಗಲ್ಲು, ಮತ್ತೊಂದು ಸ್ತರದ ವೀರಗಲ್ಲು(ತ್ರುಟಿತ). ಚತುರ್ಬಾಹು ತ್ರುಟಿತ ಶಿಲ್ಪ ಹಿಂದಿನ ಬಲಗೈ ತ್ರುಟಿತ. ಹಿಂದಿನ ಎಡಗೈಯಲ್ಲಿ ಅಂಕುಶ? ಮುಂದಿನ ಬಲಗೈಯಲ್ಲಿ ಒಂದು ಉದ್ದನೆಯ ಬಳಪದಂತೆ, ಎಡಗೈಯಲ್ಲಿ ಕಮಂಡಲದಂತೆಯಿರುವ ಶಿಲ್ಪವಿದೆ? ಒಂದು ಶಿಲೆಯ ಮೇಲೆ ಚೌಕಾಕಾರದ ರೇಖೆಯಿದ್ದು ಅದು ಗುಣಾಕಾರ ಚಿಹ್ನೆಯಂತೆ ರೇಖೆ ಕೊರೆಯಲಾಗಿದೆ. ಅದರ ಮೂರು ಭಾಗದಲ್ಲಿ ಗುಂಡಗೆ ಕೆತ್ತಲಾಗಿದೆ. ಸು.೧೦ನೆಯ ಶತಮಾನದವುಗಳಾಗಿವೆ.

ಸ್ಥಳ: ಶ್ರೀನಿವಾಸ ಸರಡಗಿ **ಶಿಲ್ಪ:** ವೀರಗಲ್ಲು
ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಹನುಮಾನ್ ಮಂದಿರ,
ಸ್ಥಿತಿ: ತ್ರುಟಿತ **ಕಾಲ:** ಸು.೧೧ನೆಯ ಶತಮಾನ

ಸಿಂಹದ ಕಟ್ಟೆಯ ಮೇಲೆ ಎರಡು ವೀರಗಲ್ಲುಗಳಿವೆ. ಒಂದು ಸ್ತರದಲ್ಲಿರುವ ವೀರನು ಆಯುಧ ಹಿಡಿದು ಹೋರಾಡುತ್ತಿರುವ ಶಿಲ್ಪವಿದೆ. ಇನ್ನೊಂದರಲ್ಲಿ ಅಪ್ಸರೆಯರು ವೀರನನ್ನು ಸುರಲೋಕಕ್ಕೆ ಕರೆದೊಯ್ಯುತ್ತಿರುವ ಮತ್ತು ಲಿಂಗೈಕ್ಯವಾಗುತ್ತಿರುವ ಶಿಲ್ಪವಿದೆ. ಸಿಂಹಕಟ್ಟೆಯ ಕೆಳಗೆ ಮೂರುಸ್ತರದ ವೀರಗಲ್ಲಿದೆ. ಮೊದಲನೆಯ ಸ್ತರದಲ್ಲಿ ತುರುಗೋಳ್, ಎರಡನೆಯ ಸ್ತರದಲ್ಲಿ ವೀರನು ಶತ್ರುಗಳೊಂದಿಗೆ ಹೋರಾಡುತ್ತಿರುವುದು, ಮೂರನೆಯ ಸ್ತರದಲ್ಲಿ ಅಪ್ಸರೆಯರು ಕರೆದೊಯ್ಯುತ್ತಿರುವ ಶಿಲ್ಪವಿದೆ.

ಸ್ಥಳ: ಶ್ರೀನಿವಾಸ ಸರಡಗಿ **ಶಿಲ್ಪ:** ವೀರಗಲ್ಲು
ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಹನುಮಾನ್ ಮಂದಿರ
ಸ್ಥಿತಿ: ತ್ರುಟಿತ **ಕಾಲ:** ಸು.೮ನೆಯ ಶತಮಾನ

ಅಂಬಾಬಾಯಿ ಗುಡಿಯೊಳಗೆ ಒಂದು ತ್ರುಟಿತ ವೀರಗಲ್ಲಿದೆ. ಕಪ್ಪು ಶಿಲೆಯ ವೀರಗಲ್ಲು ತ್ರುಟಿತವಾಗಿದೆ

ಸ್ಥಳ: ಶ್ರೀನಿವಾಸ ಸರಡಗಿ ಶಿಲ್ಪ: ವೀರಗಲ್ಲು

ಶಿಲೆ: ಕಪ್ಪುಶಿಲೆ ದೊರೆತ ಸ್ಥಳ: ಹನುಮಾನ್ ಮಂದಿರ

ಸ್ಥಿತಿ: ತ್ರುಟಿತ ಕಾಲ: ಸು.೧೧ನೆಯ ಶತಮಾನ

ಪಂಚಾಯತ್ ಕಟ್ಟೆಯ ಗಿಡದ ಬಳಿ ಒಂದು ಸ್ತರದ ವೀರಗಲ್ಲು. ಕಪ್ಪುಶಿಲೆಯಲ್ಲಿದೆ. ಬಿಲ್ಲು, ಬಾಣ ಹಿಡಿದಂತೆ ಕೆತ್ತಿದೆ.

ಸ್ಥಳ: ಶ್ರೀನಿವಾಸ ಸರಡಗಿ ಶಿಲ್ಪ: ವೀರಗಲ್ಲು

ಶಿಲೆ: ಕಪ್ಪುಶಿಲೆ ದೊರೆತ ಸ್ಥಳ: ಹನುಮಾನ ಮಂದಿರ

ಸ್ಥಿತಿ: ತ್ರುಟಿತ ಕಾಲ: ಸು.೧೧ನೆಯ ಶತಮಾನ

ತ್ರುಟಿತ ಮೇಲ್ಭಾಗದ ಸ್ತರದ ವೀರಗಲ್ಲು ಮೂರು ನಂದಿ ಕೆತ್ತನೆ, ಸೂರ್ಯ-ಚಂದ್ರರ ಕೆತ್ತನೆ ಮತ್ತು ಲಿಂಗವನ್ನು ಕೊರೆಯಲಾಗಿದೆ.

ಸ್ಥಳ: ಸಣ್ಣೂರು ಶಿಲ್ಪ: ವೀರಗಲ್ಲು

ಶಿಲೆ: ಕಪ್ಪುಶಿಲೆ ದೊರೆತ ಸ್ಥಳ: ರಾಮಲಿಂಗೇಶ್ವರ ಮಂದಿರ

ಸ್ಥಿತಿ: ತೃಟಿತ ಕಾಲ: ಸು.೧೧ನೆಯ ಶತಮಾನ

ದೇವಾಲಯದ ಮುಂಭಾಗದಲ್ಲಿರುವ ತ್ರಿವಳಿಯಲ್ಲಿರುವ ವೀರಗಲ್ಲು, ಕೆಂಪು-ಬಿಳುಪು ಮಿಶ್ರ ಕುಸುರಿ ಕಲ್ಲಿನಲ್ಲಿದೆ. ಮೊದಲನೆಯ ಸ್ತರದಲ್ಲಿ ವೀರನು ಖಡ್ಗ, ಭಲ್ಲೆ ಹಿಡಿದು ಕುದುರೆಯ ಮೇಲಿರುವ ಶತ್ರುಗಳ ವಿರುದ್ಧ ಹೋರಾಡುತ್ತಿದ್ದಾನೆ. ಎರಡನೆಯ ಸ್ತರದಲ್ಲಿ ಅಪ್ಸರೆಯರು ದೇವಲೋಕಕ್ಕೆ ಕರೆದೊಯ್ಯುತ್ತಿರುವ ಶಿಲ್ಪಗಳಿವೆ. ವಿಶೇಷತೆಯೆಂದರೆ ಈ ಸ್ತರದಲ್ಲಿ ಕೈ ಮುಗಿದು ಕುಳಿತ ಸ್ತ್ರೀ ಶಿಲ್ಪವಿದೆ. ಸತಿಹೋದ ಪತ್ನಿ ಮೊದಲೇ ದೇವಲೋಕದಲ್ಲಿ ಕಾಯುತ್ತಿರುವಂತೆ ಶಿಲ್ಪದಲ್ಲಿ ಕೆತ್ತಲಾಗಿದೆ? ಮೂರನೆಯ ಸ್ತರದಲ್ಲಿ ಕಾಳಾಮುಖ ಋಷಿಯು ಶಿವಲಿಂಗದ ಪೂಜೆ ಮಾಡುತ್ತಿರುವ ಮತ್ತು ವೀರನು ಕೈಮುಗಿದು ಕುಳಿತಿರುವಂತೆ ಕೆತ್ತಲಾಗಿದೆ.

ಸ್ಥಳ: ಬೋಳೆವಾಡ ಶಿಲ್ಪ: ವೀರಗಲ್ಲು,

ಶಿಲೆ: ಕಪ್ಪು ಕಲ್ಲು ದೊರೆತ ಸ್ಥಳ: ಭೋಗಲಿಂಗೇಶ್ವರ ಗುಡಿ

ಸ್ಥಿತಿ: ತ್ರುಟಿತ ಕಾಲ: ಸು.೧೧ನೆಯ ಶತಮಾನ

ದೇವಾಲಯದ ಎದುರುಗಡೆಯಿರುವ ವೀರಗಲ್ಲು ತ್ರಿವಳಿಯಿಂದ ಕೂಡಿದೆ. ಇಬ್ಬರು ವೀರರು ಪರಸ್ಪರ ಶತೃಗಳೊಂದಿಗೆ ಖಡ್ಗ, ಭಲ್ಲೆ ಹಿಡಿದು ಎರಡು ಸ್ತರದಲ್ಲಿ ಹೋರಾಡುತ್ತಿರುವುದು ಮೂಡಿಬಂದಿದೆ. ಮೂರನೆಯ ಸ್ತರದಲ್ಲಿ ಅಪ್ಸರೆಯರು ದೇವಲೋಕಕ್ಕೆ ಕರೆದೊಯ್ಯುತ್ತಿರುವರು. ಲಲಾಟ ಬಿಂಬದಲ್ಲಿ ಲಿಂಗೈಕ್ಯ ಹೊಂದಿದ ಕೆತ್ತನೆಯಿದೆ.

ಸ್ಥಳ: ಬೋಳೆವಾಡ **ಶಿಲ್ಪ:** ವೀರಗಲ್ಲು,

ಶಿಲೆ: ಕಪ್ಪು ಕಲ್ಲು **ದೊರೆತ ಸ್ಥಳ:** ಭೋಗಲಿಂಗೇಶ್ವರ ಗುಡಿ

ಸ್ಥಿತಿ: ತ್ರುಟಿತ **ಕಾಲ:** ಸು.೧೧–೧೨ನೆಯ ಶತಮಾನ

ಒಂದು ಸ್ತರದ ವೀರಗಲ್ಲಿನಲ್ಲಿ ಸಿಂಹದೊಂದಿಗೆ ಹೋರಾಡುತ್ತಿರುವ ವೀರನ ಶಿಲ್ಪವಿದೆ. ಬಲಗೈಯಲ್ಲಿ ಭಲ್ಲೆ ಎಡಗೈಯಲ್ಲಿ ಖಡ್ಗ ಹಿಡಿದಿರುವ ವೀರನ ಶಿಲ್ಪವಿದೆ. ಖಡ್ಗದಿಂದ ಸಿಂಹವನ್ನು ಇರಿಯುತ್ತಿರುವ ಕೆತ್ತನೆಯಿದೆ. ವೀರಮುಡಿ, ಕರ್ಣಕುಂಡಲ, ಕುಚಹಾರ ಧರಿಸಿದಂತೆ ಕೆತ್ತಲಾಗಿದೆ.

ಗ್ರಾಮಸ್ಥರ ಹೇಳಿಕೆ ಪ್ರಕಾರ, ಯಾದವ ದೊರೆ ರಾಮಚಂದ್ರನಲ್ಲಿ ಬೋಳೆವಾಡದ ಸೈನಿಕನಿದ್ದ ಈತನು ಸಿಂಹದೊಂದಿಗೆ ಕಾದಾಡಿ ಕೊಂದು ಗಾಯಗೊಂಡು ಮರಣ ಹೊಂದಿದ್ದ ಎಂಬ ಐತಿಹ್ಯವಿದೆ. ಈ ವೀರಗಲ್ಲು ಅದಕ್ಕೆ ಸಾಕ್ಷಿಯಾಗಿ ನಿಂತಿದೆ.

ಸ್ಥಳ: ಬೋಳೆವಾಡ **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪು ಕಲ್ಲು **ದೊರೆತ ಸ್ಥಳ:** ಭೋಗಲಿಂಗೇಶ್ವರ ಗುಡಿ

ಸ್ಥಿತಿ: ತ್ರುಟಿತ **ಕಾಲ:** ಸು.೧೧ನೆಯ ಶತಮಾನ

ಒಂದು ಸ್ತರದ ವೀರಗಲ್ಲಿನಲ್ಲಿ ವೀರನು ಭರ್ಚಿ ಹಿಡಿದು ಹೋರಾಡುತ್ತಿರುವಂತೆ ಕೆತ್ತಲಾಗಿದೆ. ಸೊಂಟಕ್ಕೆ ಇಳಿಬಟ್ಟೆ, ಕೈಗಡಗ, ಕಾಲ್ಗಡಗ, ಕರ್ಣಕುಂಡಲ, ವೀರ ಮುಡಿ ಧರಿಸಿರುವಂತೆ ಕೆತ್ತಲಾಗಿದೆ.

ಸ್ಥಳ: ಬೋಳೆವಾಡ **ಶಿಲ್ಪ:** ವೀರಗಲ್ಲು,

ಶಿಲೆ: ಕಪ್ಪು ಕಲ್ಲು **ದೊರೆತ ಸ್ಥಳ:** ಭೋಗಲಿಂಗೇಶ್ವರ ಗುಡಿ

ಸ್ಥಿತಿ: ತ್ರುಟಿತ **ಕಾಲ:** ಸು.೧೧ನೆಯ ಶತಮಾನ

ಒಂದು ಸ್ತರದ ವೀರಗಲ್ಲು ಬಿಲ್ಲು ಬಾಣ ಹಿಡಿದು ಹೋರಾಡುತ್ತಿರುವ ಶಿಲ್ಪವಿದೆ. ವೀರಮುಡಿ, ಕರ್ಣಕುಂಡಲ, ತೋಳ್ಬಂದಿ, ಕೈಗಡಗ, ಸೊಂಟಕ್ಕೆ 'ವಿ' ಆಕಾರದ ಬಟ್ಟೆ, ಸೊಂಟಪಟ್ಟಿಯಲ್ಲಿ ಚೂರಿ ಮತ್ತು ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಬೋಳೆವಾಡ **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪು ಕಲ್ಲು **ದೊರೆತ ಸ್ಥಳ:** ಭೋಗಲಿಂಗೇಶ್ವರ ಗುಡಿ

ಸ್ಥಿತಿ: ತ್ರುಟಿತ **ಕಾಲ:** ಸು.೧೧–೧೨ನೆಯ ಶತಮಾನ

ಎರಡು ಸ್ತರದ ವೀರಗಲ್ಲು ಒಂದು ಕೈಯಲ್ಲಿ ಭಲ್ಲೆ ಇನ್ನೊಂದು ಕೈಯಲ್ಲಿ ಖಡ್ಗ ಹಿಡಿದು ಹೋರಾಡುತ್ತಿರುವ ಕೆತ್ತನೆಯಿದೆ. ಮೇಲಿನ ಸ್ತರದಲ್ಲಿ ಲಿಂಗೈಕ್ಯವಾದ ವೀರನನ್ನು ಅಪ್ಸರೆಯರು ಚಾಮರ ಬೀಸುತ್ತಾ ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಕೆತ್ತನೆಯಿದೆ. ವೀರಮುಡಿ, ಕರ್ಣಕುಂಡಲ,

ತೋಳ್ಬಂದಿ, ಕೈಗಡಗ, ಸೊಂಟಕ್ಕೆ 'ವಿ' ಆಕಾರದ ಬಟ್ಟೆ, ಸೊಂಟಪಟ್ಟಿಯಲ್ಲಿ ಚೂರಿ ಮತ್ತು ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಬೋಳೆವಾಡ **ಶಿಲ್ಪ:** ವೀರಗಲ್ಲು,
ಶಿಲೆ: ಕಪ್ಪು ಕಲ್ಲು **ದೊರೆತ ಸ್ಥಳ:** ಭೋಗಲಿಂಗೇಶ್ವರ ಗುಡಿ
ಸ್ಥಿತಿ: ತ್ರುಟಿತ **ಕಾಲ:** ಸು.೧೧–೧೨ನೆಯ ಶತಮಾನ

ಒಂದು ಸ್ತರದ ವೀರಗಲ್ಲು ಶಿಲ್ಪದಲ್ಲಿ ಖಡ್ಗ ಮತ್ತು ಭಲ್ಲೆ ಹಿಡಿದಂತೆ ಕೆತ್ತಲಾಗಿದೆ. ವೀರಮುಡಿ, ಕರ್ಣಕುಂಡಲ, ತೋಳ್ಬಂದಿ, ಕೈಗಡಗ, ಸೊಂಟಕ್ಕೆ 'ವಿ' ಆಕಾರದ ಬಟ್ಟೆ, ಸೊಂಟಪಟ್ಟಿಯಲ್ಲಿ ಚೂರಿ ಮತ್ತು ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಬೋಳೆವಾಡ **ಶಿಲ್ಪ:** ವೀರಗಲ್ಲು,
ಶಿಲೆ: ಕಪ್ಪು ಕಲ್ಲು **ದೊರೆತ ಸ್ಥಳ:** ಭೋಗಲಿಂಗೇಶ್ವರ ಗುಡಿ
ಸ್ಥಿತಿ: ತ್ರುಟಿತ **ಕಾಲ:** ಸು೧೧–೧೨ನೆಯ ಶತಮಾನ

ಭರ್ಚಿ ಹಿಡಿದು ಹೋರಾಡುತ್ತಿರುವ ವೀರನ ಶಿಲ್ಪವು ಒಂದು ಸ್ತರದಲ್ಲಿ ಮೂಡಿಬಂದಿದೆ. ವೀರಮುಡಿ, ಕರ್ಣಕುಂಡಲ, ತೋಳ್ಬಂದಿ, ಕೈಗಡಗ, ಸೊಂಟಕ್ಕೆ 'ವಿ' ಆಕಾರದ ಬಟ್ಟೆ, ಸೊಂಟಪಟ್ಟಿಯಲ್ಲಿ ಚೂರಿ ಮತ್ತು ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಬೋಳೆವಾಡ **ಶಿಲ್ಪ:** ವೀರಗಲ್ಲು,
ಶಿಲೆ: ಕಪ್ಪು ಕಲ್ಲು **ದೊರೆತ ಸ್ಥಳ:** ಭೋಗಲಿಂಗೇಶ್ವರ ಗುಡಿ
ಸ್ಥಿತಿ: ತ್ರುಟಿತ **ಕಾಲ:** ಸು೧೧–೧೨ನೆಯ ಶತಮಾನ

ಎರಡು ಸ್ತರದ ವೀರಗಲ್ಲು ಶಿಲ್ಪವಿದೆ. ವೀರ ಖಡ್ಗ ಮತ್ತು ಭಲ್ಲೆ ಹಿಡಿದು ಶತ್ರುಗಳೊಂದಿಗೆ ಹೋರಾಡುತ್ತಿರುವಂತೆ ಕೆತ್ತಲಾಗಿದೆ. ಎರಡನೆಯ ಸ್ತರದಲ್ಲಿ ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಶಿಲ್ಪದ ಕೆತ್ತನೆಯಿದೆ. ವೀರಮುಡಿ, ಕರ್ಣಕುಂಡಲ, ತೋಳ್ಬಂದಿ, ಕೈಗಡಗ, ಸೊಂಟಕ್ಕೆ 'ವಿ' ಆಕಾರದ ಬಟ್ಟೆ, ಸೊಂಟಪಟ್ಟಿಯಲ್ಲಿ ಚೂರಿ ಮತ್ತು ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಬೋಳೆವಾಡ **ಶಿಲ್ಪ:** ವೀರಗಲ್ಲು,
ಶಿಲೆ: ಕಪ್ಪು ಕಲ್ಲು **ದೊರೆತ ಸ್ಥಳ:** ಭೋಗಲಿಂಗೇಶ್ವರ ಗುಡಿ
ಸ್ಥಿತಿ: ತೃಟಿತ **ಕಾಲ:** ಸು.೧೧–೧೨ನೆಯ ಶತಮಾನ

ತ್ರುಟಿತ ಲಿಂಗೈಕ್ಯವಾದ ಕೆತ್ತನೆಯಿರುವ ಮತ್ತೊಂದು ತ್ರುಟಿತ ಅಪ್ಸರೆಯರು ಒಯ್ಯುತ್ತಿರುವ ಕೆತ್ತನೆಗಳಿರುವ ವೀರಗಲ್ಲು ಇಲ್ಲಿವೆ.

ಸ್ಥಳ: ಸಣ್ಣೂರು **ಶಿಲ್ಪ:** ವೀರಗಲ್ಲು
ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ರಾಮಲಿಂಗೇಶ್ವರ ಮಂದಿರ
ಸ್ಥಿತಿ: ತ್ರುಟಿತ **ಕಾಲ:** ಸು.೧೧ನೆಯ ಶತಮಾನ

ದೇವಾಲಯದ ಮುಂಭಾಗದ ದ್ವೀಪಸ್ಥಂಭದ ಕೆಳಗಡೆ ಇರುವಂಥ ವೀರಗಲ್ಲು ಎರಡು ಸ್ತರದಲ್ಲಿ ಕೆಂಪು–ಬಿಳುಪು ಮಿಶ್ರ ಕುಸುರಿ ಕಲ್ಲಿನಲ್ಲಿದೆ. ಮೊದಲನೆಯ ಸ್ತರದಲ್ಲಿ ವೀರನು ಖಡ್ಗ,

ಭಲ್ಲೆ ಹಿಡಿದು ನಿಂತಿರುವಂತೆ ಕೆತ್ತಲಾಗಿದೆ. ಎರಡನೆಯ ಸ್ತರದಲ್ಲಿ ವೀರನು ಲಿಂಗೈಕ್ಯವಾಗಿದ್ದು ಶಿವಲಿಂಗದ ಮುಂದೆ ಕೈಮುಗಿದು ಕುಳಿತಿರುವಂತೆ ಕೆತ್ತಲಾಗಿದೆ.

ಸ್ಥಳ: ಸಣ್ಣೂರು **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಅಗಸಿ

ಸ್ಥಿತಿ: ತ್ರುಟಿತ **ಕಾಲ:** ಸು.೧೧ನೆಯ ಶತಮಾನ

ಊರ ಅಗಸಿಯ ಹನುಮಾನ್ ಮಂದಿರದ ಬಳಿಯಿರುವ ೮-೯ನೆಯ ಶತಮಾನದ ಕಪ್ಪು ಶಿಲೆಯಲ್ಲಿರುವ ತ್ರುಟಿತ ವೀರಗಲ್ಲು ದ್ವಿವಳಿಯಲ್ಲಿರುವುದು. ಯುದ್ಧ ಮಾಡುತ್ತಿರುವ ವೀರರ ಶಿಲ್ಪವಿದೆ. ಎರಡನೆಯ ಸ್ತರದಲ್ಲಿರುವ ಶಿಲ್ಪದಲ್ಲಿ ಮೂರು ಬಿಂಬಗಳು ಧ್ಯಾನಕ್ಕೆ ಕುಳಿತಿರುವಂತೆ ಪ್ರಭಾವಳಿಯಲ್ಲಿ ಕೆತ್ತಲಾಗಿದೆ.

ಸ್ಥಳ: ಸಣ್ಣೂರು **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಅಗಸಿ

ಸ್ಥಿತಿ: ತ್ರುಟಿತ **ಕಾಲ:** ಸು.೧೧ನೆಯ ಶತಮಾನ

ಊರ ಅಗಸಿಯ ಹನುಮಾನ್ ಮಂದಿರದ ಮುಂದಿರುವ ವೀರಗಲ್ಲು ಮೂರು ಸ್ತರದಲ್ಲಿದೆ. ಸು.೯ನೆಯ ಶತಮಾನದ್ದಾಗಿದೆ ಕೆಳಸ್ತರದಲ್ಲಿ ವೀರ ಶತ್ರುಗಳೊಂದಿಗೆ ಹೋರಾಡುತ್ತಿರುವಂತೆ ಎರಡನೆಯ ಸ್ತರದಲ್ಲಿ, ಮೂವರು ಅಪ್ಸರೆಯರು ಇಬ್ಬರು ವೀರರ ಅಕ್ಕ-ಪಕ್ಕ ಮತ್ತು ಮಧ್ಯದಲ್ಲಿ ನಿಂತು ದೇವಲೋಕಕ್ಕೆ ಕರೆದೊಯ್ಯುತ್ತಿರುವಂತೆ ಕೆತ್ತಲಾಗಿದೆ. ಮೂರನೆಯ ಸ್ತರದಲ್ಲಿ ಇಬ್ಬರು ವೀರರು ಧ್ಯಾನಕ್ಕೆ ಕುಳಿತಿರುವಂತೆ, ಅಪ್ಸರೆಯರು ಅವರಿಗೆ ಚಾಮರ ಬೀಸುತ್ತಿರುವಂತೆ ಕೆತ್ತಲಾಗಿದೆ.

ಸ್ಥಳ: ಸಣ್ಣೂರು **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಅಗಸಿ

ಸ್ಥಿತಿ: ತ್ರುಟಿತ **ಕಾಲ:** ಸು.೧೧ನೆಯ ಶತಮಾನ

ಊರ ಅಗಸಿಯ ಹನುಮಾನ್ ಮಂದಿರದ ಮುಂದಿರುವ ತ್ರುಟಿತ ಕಪ್ಪುಶಿಲೆಯ ವೀರಗಲ್ಲು ಮೂರು ಸ್ತರದಲ್ಲಿದೆ. ಸು.೯ನೆಯ ಶತಮಾನದ್ದಾಗಿದೆ. ಕೆಳಸ್ತರದಲ್ಲಿ ವೀರ ಶತ್ರುಗಳೊಂದಿಗೆ ಹೋರಾಡುತ್ತಿರುವಾಗ ಒಬ್ಬ ಶತ್ರು ಹಿಂದಿನಿಂದ ಖಡ್ಗದಿಂದ ಇರಿಯುವಂತೆ ಕೆತ್ತಲಾಗಿದೆ. ಎರಡನೆಯ ಸ್ತರದಲ್ಲಿ, ಇಬ್ಬರು ಅಪ್ಸರೆಯರು ಇಬ್ಬರು ವೀರರ ಅಕ್ಕ-ಪಕ್ಕದಲ್ಲಿ ನಿಂತು ದೇವಲೋಕಕ್ಕೆ ಕರೆದೊಯ್ಯುತ್ತಿರುವಂತೆ ಮತ್ತು ದೇವಲೋಕದಲ್ಲಿ ವೀರನ ಪತ್ನಿ? ಧ್ಯಾನಕ್ಕೆ ಕುಳಿತಂತೆ ಕೆತ್ತಲಾಗಿದೆ. ಮೂರನೆಯ ಸ್ತರದಲ್ಲಿ ಇಬ್ಬರು ವೀರರು ಧ್ಯಾನಕ್ಕೆ ಕುಳಿತಿರುವಂತೆ, ಅಪ್ಸರೆಯರು ಅವರಿಗೆ ಚಾಮರ ಬೀಸುತ್ತಿರುವಂತೆ ಕೆತ್ತಲಾಗಿದೆ.

ಸ್ಥಳ: ಸಣ್ಣೂರು | ಶಿಲ್ಪ: ವೀರಗಲ್ಲು
ಶಿಲೆ: ಕಪ್ಪುಶಿಲೆ | ದೊರೆತ ಸ್ಥಳ: ಹನುಮಾನ್ ಮಂದಿರ
ಸ್ಥಿತಿ: ತ್ರುಟಿತ | ಕಾಲ: ಸು.೧೧ನೆಯ ಶತಮಾನ

ಸು.೧೦-೧೧ನೆಯ ಶತಮಾನದ್ದಾಗಿದೆ. ಊರ ಅಗಸಿಯ ಹನುಮಾನ್ ಮಂದಿರದ ಪಕ್ಕದಲ್ಲಿರುವ ವೀರಗಲ್ಲು ಭಲ್ಲೆ, ಖಡ್ಗ ಹಿಡಿದು ನಿಂತಂತೆ ಕೆತ್ತಲಾಗಿದೆ.

ಸ್ಥಳ: ಮೇಳಕುಂದಾ(ಕೆ) | ಶಿಲ್ಪ: ವೀರಗಲ್ಲು
ಶಿಲೆ: ಕಪ್ಪುಶಿಲೆ | ದೊರೆತ ಸ್ಥಳ: ಹನುಮಾನ್ ಮಂದಿರ
ಸ್ಥಿತಿ: ಕನಿಷ್ಠ | ಕಾಲ: ಸು.೧೦ನೆಯ ಶತಮಾನ

ಎರಡು ಸ್ತರ ಮಾತ್ರ ಉಳಿದಿದ್ದು, ಅಪ್ಸರೆಯರು ವೀರನನ್ನು ಕರೆದೊಯ್ಯುವ ಶಿಲ್ಪ, ಮೇಲಿನ ಸ್ತರದಲ್ಲಿ ಶಿವಲಿಂಗ ಪೂಜಿಸುವ ಯತಿ, ವೀರ ಮುಡಿಕಟ್ಟಿ ನಮಸ್ಕರಿಸುತ್ತಿರುವ ಭಂಗಿಯಲ್ಲಿದೆ. ಲಲಾಟದ ಮೇಲೆ ಕಿರೀಟ ಕೆತ್ತಲ್ಪಟ್ಟಿದೆ.

ಸ್ಥಳ: ಮೇಳಕುಂದಾ(ಬಿ) | ಶಿಲ್ಪ: ವೀರಗಲ್ಲು
ಶಿಲೆ: ಕಪ್ಪುಶಿಲೆ | ದೊರೆತ ಸ್ಥಳ: ಹನುಮಾನ್ ಮಂದಿರ
ಸ್ಥಿತಿ: ತ್ರುಟಿತ | ಕಾಲ: ಸು.೧೦ನೆಯ ಶತಮಾನ

ಅರಳಿ ಗಿಡದ ಕೆಳಗೆ ಒಂದು ತ್ರುಟಿತ ವೀರಗಲ್ಲಿದೆ. ಮೂರು ಸ್ತರದಲ್ಲಿ ಎರಡು ಸ್ತರ ಮಾತ್ರ ಉಳಿದಿದೆ. ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಶಿಲ್ಪವಿದೆ. ಮೇಲಿನ ಸ್ತರದಲ್ಲಿ ಕೈಮುಗಿದು ಶಿವಲಿಂಗದ ಮುಂದೆ ಕುಳಿತ ಶಿಲ್ಪವಿದೆ.

ಸ್ಥಳ: ಮೇಳಕುಂದಾ(ಕೆ) | ಶಿಲ್ಪ: ವೀರಗಲ್ಲು
ಶಿಲೆ: ಕಪ್ಪುಶಿಲೆ | ದೊರೆತ ಸ್ಥಳ: ಭೋಗಲಿಂಗೇಶ್ವರ ಗುಡಿ
ಸ್ಥಿತಿ: ಮಧ್ಯಮ | ಕಾಲ: ಸು.೧೦ನೆಯ ಶತಮಾನ

ಮೂರು ಸ್ತರದ ವೀರಗಲ್ಲು ಶಿಲ್ಪ ದೇವಕೋಷ್ಠಕದಲ್ಲಿದೆ. ವೀರರು ಖಡ್ಗ, ಭಲ್ಲೆ ಹಿಡಿದು ಹೋರಾಡುತ್ತಿರುವ ಶಿಲ್ಪವಿದೆ. ಅಪ್ಸರೆಯರು ವೀರನನ್ನು ದೇವಲೋಕಕ್ಕೆ ಕರೆದೊಯ್ಯುತ್ತಿರುವ ಶಿಲ್ಪ ಮಧ್ಯದ ಸ್ತರದಲ್ಲಿದೆ. ಮೇಲ್‌ಸ್ತರದಲ್ಲಿ ವೀರನು ಶಿವಲಿಂಗವನ್ನು ನಮಸ್ಕರಿಸುತ್ತಿರುವಂತೆ ಕೆತ್ತಲಾಗಿದೆ.

ಸ್ಥಳ: ಮೇಳಕುಂದಾ(ಕೆ) | ಶಿಲ್ಪ: ವೀರಗಲ್ಲು
ಶಿಲೆ: ಕಪ್ಪುಶಿಲೆ | ದೊರೆತ ಸ್ಥಳ: ಭೋಗಲಿಂಗೇಶ್ವರ ಗುಡಿ
ಸ್ಥಿತಿ: ತ್ರುಟಿತ | ಕಾಲ: ಸು.೧೦ನೆಯ ಶತಮಾನ

ಮೂರು ಸ್ತರದ ವೀರಗಲ್ಲು ಶಿಲ್ಪ ಆಲದಮರ ಕೆಳಗಿದೆ. ಕೆಳಸ್ತರದ ಶಿಲ್ಪ ತ್ರುಟಿತವಾಗಿದೆ. ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಶಿಲ್ಪ, ಶಿವಲಿಂಗಕ್ಕೆ ವೀರನು ನಮಸ್ಕರಿಸುತ್ತಿರುವ ಶಿಲ್ಪ ಕೆತ್ತಲಾಗಿದೆ.

ಗ್ರಾಮ: ಗರೂರು **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪು ಕಲ್ಲು **ದೊರೆತ ಸ್ಥಳ:** ಹನುಮಾನ್ ಗುಡಿ

ಸ್ಥಿತಿ: ತ್ರುಟಿತ **ಕಾಲ:** ಸು.೧೨ನೆಯ ಶತಮಾನ

ಮೂರು ಸ್ತರದ ವೀರಗಲ್ಲಿದೆ. ಮೊದಲನೆಯ ಸ್ತರದಲ್ಲಿ ವೀರ ಎಡಗೈಯಲ್ಲಿ ಭಲ್ಲೆ ಹಿಡಿದು, ಶತ್ರುವನ್ನು ಬಲಗೈಯಲ್ಲಿರುವ ಖಡ್ಗದಿಂದ ಇರಿಯುತ್ತಿರುವಂತೆ ಕೆತ್ತಲಾಗಿದೆ. ಶತ್ರುಗಳು ಕುದುರೆಯ ಮೇಲೆ ಕುಳಿತುಕೊಂಡು ಹೋರಾಡುತ್ತಿರುವಂತೆ ವೀರ ನೆಲದ ಮೇಲೆ ನಿಂತು ಹೋರಾಡುತ್ತಿರುವಂತೆ ಕೆತ್ತಲಾಗಿದೆ. ಎರಡನೆಯ ಸ್ತರದಲ್ಲಿ ವೀರನನ್ನು ವಿಮಾನದಲ್ಲಿ ಅಪ್ಸರೆಯರು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಶಿಲ್ಪವಿದೆ. ಮೂರನೆಯ ಸ್ತರದಲ್ಲಿ ಲಿಂಗೈಕ್ಯವಾದ ವೀರ ಶಿವಲಿಂಗದ ಮುಂದೆ ಯತಿಯೊಂದಿಗೆ ಅಂಜಲಿ ಮುದ್ರೆಯಲ್ಲಿ ಕುಳಿತಂತೆ ಕೆತ್ತಲಾಗಿದೆ. ವೀರಮುಡಿ, ಕರ್ಣಕುಂಡಲ, ಬಾಹುಬಂಧ, ಸೊಂಟಕ್ಕೆ ಬಟ್ಟೆ ಧರಿಸಿರುವ ಕೆತ್ತನೆಯಿದೆ.

ಸ್ಥಳ: ಕಲಬೆನ್ನೂರು **ಶಿಲ್ಪ:** ವೀರಗಲ್ಲು

ಶಿಲೆ: ಬಳಪದ ಕಲ್ಲು **ದೊರೆತ ಸ್ಥಳ:** ಹನುಮಾನ್ ಮಂದಿರ

ಸ್ಥಿತಿ: ಉತ್ತಮ **ಕಾಲ:** ಸು.೧೧ನೆಯ ಶತಮಾನ

ಹನುಮಾನ್ ಮಂದಿರದಲ್ಲಿರುವ ಮತ್ತೊಂದು ಗಣಪತಿ ಶಿಲ್ಪಕ್ಕೆ ಚತುರ್ಭುಜಗಳಿವೆ. ಪಾಶಾಂಕುಶ, ಮೋದಕ ಮತ್ತು ದಂತ ಹಸ್ತವಾಗಿವೆ. ಕಿರೀಟ, ಕೊರಳ ಹಾರ, ಕೈಗಡಗ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಕಲಬೆನ್ನೂರು ವೀರಗಲ್ಲು **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ಉತ್ತಮ ಬಳಪದ ಕಲ್ಲು

ಒಂದು ಸ್ತರದ ವೀರಗಲ್ಲು ಇದರಲ್ಲಿ ವೀರ ಖಡ್ಗ ಮತ್ತು ಭಲ್ಲೆ ಹಿಡಿದು ಹೋರಾಡುತ್ತಾ ಶತ್ರುವನ್ನು ಇರಿಯುತ್ತಿರುವುದನ್ನು ಕೆತ್ತಲಾಗಿದೆ. ವೀರನು ಕಿವಿ ಓಲೆ, ಕೈಗಡಗ, ಕಾಲ್ಗಡಗ, ಸೊಂಟಕ್ಕೆ ಬಟ್ಟೆ ಧರಿಸಿರುವ ಕೆತ್ತನೆಯಿದೆ.

ಸ್ಥಳ: ಕಲಬೆನ್ನೂರು **ಶಿಲ್ಪ:** ವೀರಗಲ್ಲು

ಶಿಲೆ: ಬಳಪದ ಕಲ್ಲು **ದೊರೆತ ಸ್ಥಳ:** ಈಶ್ವರ ಗುಡಿ

ಸ್ಥಿತಿ: ಉತ್ತಮ **ಕಾಲ:** ಸು.೧೧ನೆಯ ಶತಮಾನ

ದೇವಾಲಯದ ಅಧಿಷ್ಠಾನದಲ್ಲಿರುವ ವೀರಗಲ್ಲು ಏಕ ಸ್ತರದಲ್ಲಿದೆ. ವೀರನು ಬಿಲ್ಲು, ಬಾಣ ಹಿಡಿದಿರುವ ಆತನ ಕಾಲ್ಕೆಳಗೆ ಶತ್ರುವನ್ನು ಚಿತ್ರಿಸಲಾಗಿದೆ. ವೀರನು ವೀರ ಮುಡಿ ಕಟ್ಟಿರುವ, 'ವಿ' ಆಕಾರದ ಬಟ್ಟೆ ಸೊಂಟಕ್ಕೆ ಸುತ್ತಿಕೊಂಡಿರುವನು. ಕಿವಿ ಓಲೆ, ಸೊಂಟದಲ್ಲಿ ಚೂರಿ ಕಟ್ಟಿಕೊಂಡಿರುವನು.

ಸ್ಥಳ: ಕಡಣಿ(ಕಣ್ಣಿ) **ಶಿಲ್ಪ:** ವೀರಗಲ್ಲು,

ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಹನುಮಾನ್ ಮಂದಿರ

ಸ್ಥಿತಿ: ತ್ರುಟಿತ **ಕಾಲ:** ಸು.೧೦ನೆಯ ಶತಮಾನ

ಹನುಮಾನ್ ಮಂದಿರದ ಎದುರಿಗೆ ಮೂರು ಸ್ತರದ ವೀರಗಲ್ಲು ಒಂದು ಭಾಗ ಯುದ್ಧ ಮಾಡುತ್ತಿರುವ ಶಿಲ್ಪದ ಕೆತ್ತನೆ ಅದರ ಪಕ್ಕದಲ್ಲಿರುವ ತುಂಡು ಅಪ್ಸರೆಯರು ಕರೆದೊಯ್ಯುತ್ತಿರುವಂತಿದೆ. ಮೇಲಿನ ಭಾಗದಲ್ಲಿ ವೀರ ಕುಳಿತು ನಮಸ್ಕರಿಸುತ್ತಿರುವ ಮತ್ತು ಒಬ್ಬ ಯತಿ ನಿಂತು ಶಿವಲಿಂಗವನ್ನು ಪೂಜಿಸುತ್ತಿರುವ ಕೆತ್ತನೆಯಿದೆ. ವೀರ ಮತ್ತು ಶತ್ರುಗಳು ಖಡ್ಗ, ಭಲ್ಲೆ, ಹಿಡಿದು ಹೋರಾಡುತ್ತಿರುವರು.

ಸ್ಥಳ: ಕಡಣಿ(ಕಣ್ಣಿ) **ಶಿಲ್ಪ:** ವೀರಗಲ್ಲು,

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಶಂಕರಲಿಂಗೇಶ್ವರ ಗುಡಿ,

ಶಿಲೆ: ಕಪ್ಪುಶಿಲೆ **ಕಾಲ:** ಸು.೧೦ನೆಯ ಶತಮಾನ

ಏಕಸ್ತರದ ವೀರಗಲ್ಲು ಗುಡಿಯ ಪ್ರವೇಶದ್ವಾರದ ಕಟ್ಟೆಗೆ ನಿಲ್ಲಿಸಲಾಗಿದೆ. ಖಡ್ಗ, ಭಲ್ಲೆ ಹಿಡಿದು ಹೋರಾಡುತ್ತಿರುವ ವೀರನ ಶಿಲ್ಪವಿದೆ. ದೀಪಸ್ತಂಭದ ಬಳಿ ಇನ್ನೊಂದು ತ್ರುಟಿತ ವೀರಗಲ್ಲು ಅಸ್ಪಷ್ಟವಾಗಿದೆ.

ಸ್ಥಳ: ಹಾತಿಗುಂದಾ **ಶಿಲ್ಪ:** ವೀರಗಲ್ಲು

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಶಿಲೆ: ಕಪ್ಪುಶಿಲೆ **ಕಾಲ:** ಸು.೯ನೆಯ ಶತಮಾನ

ಹನುಮಾನ್ ಗುಡಿಯ ಪ್ರವೇಶ ದ್ವಾರದ ಕೆಳಭಾಗದ ಗೋಡೆಯಲ್ಲಿ ಒಂದು ಸ್ತರದ ವೀರಗಲ್ಲಿದೆ. ಹೋರಾಡುತ್ತಿರುವ ವೀರನ ಶಿಲ್ಪವಿದೆ. ಲಲಾಟದಲ್ಲಿ ಶಿವಲಿಂಗವಿದೆ.

ಸ್ಥಳ: ಇಟಗಾ(ಬಿ) **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪು ಕಲ್ಲು **ದೊರೆತ ಸ್ಥಳ:** ಊರೊಳಗೆ

ಸ್ಥಿತಿ: ತ್ರುಟಿತ **ಕಾಲ:** ಸು.೧೦ನೆಯ ಶತಮಾನ

ವೀರಗಲ್ಲು ತ್ರುಟಿತವಾಗಿದೆ. ತೃಟಿತ ಒಂದು ಸ್ತರದ ವೀರಗಲ್ಲಿನಲ್ಲಿ ಒಬ್ಬ ವೀರನು ಖಡ್ಗ ಮತ್ತು ಭಲ್ಲೆ ಹಿಡಿದು ಹೋರಾಡುವ ಕೆತ್ತನೆಯಿದೆ.

ಸ್ಥಳ: ಇಟಗಾ(ಬಿ) **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪು ಕಲ್ಲು. **ದೊರೆತ ಸ್ಥಳ:** ಊರೊಳಗೆ

ಸ್ಥಿತಿ: ತ್ರುಟಿತ **ಕಾಲ:** ಸು.೧೦ನೆಯ ಶತಮಾನ

ಇನ್ನೊಂದು ತೃಟಿತ ವೀರಗಲ್ಲಿನಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಶಿಲ್ಪ. ಮೇಲಿನ ಸ್ತರದಲ್ಲಿ ಅಂಜಲಿ ಮುದ್ರೆಯಲ್ಲಿ ಕುಳಿತ ವೀರನ ಕೆತ್ತನೆಯಿದೆ.

ಸ್ಥಳ: ಇಟಗಾ(ಬಿ) **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪು ಕಲ್ಲು **ದೊರೆತ ಸ್ಥಳ:** ಈಶ್ವರ ಗುಡಿ

ಸ್ಥಿತಿ: ತ್ರುಟಿತ **ಕಾಲ:** ಸು.೧೧ನೆಯ ಶತಮಾನ

ದೇವಾಲಯದ ಭಿತ್ತಿ ಭಾಗದಲ್ಲಿ ಮೂರು ಸ್ತರದ ವೀರಗಲ್ಲಿದೆ. ಕೆಳಭಾಗದಲ್ಲಿ ಖಡ್ಗ, ಭಲ್ಲೆ ಹಿಡಿದು ಶತ್ರುವಿನೊಂದಿಗೆ ಹೋರಾಡುತ್ತಿರುವ ಶಿಲ್ಪವಿದೆ. ಎರಡನೆಯ ಸ್ತರದಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಕೆತ್ತನೆಯಿದೆ. ಮೇಲಿನ ಸ್ತರದಲ್ಲಿ ಶಿವಲಿಂಗದ ಮುಂದೆ ನಮಸ್ಕರಿಸುತ್ತಿರುವ ವೀರನ ಕೆತ್ತನೆಯಿದೆ. ವೀರ ಮುಡಿ, ಕರ್ಣಕುಂಡಲ, ಕೈಗಡಗ, ಕಾಲ್ಗಡಗ, ತೊಡೆಯವರೆಗೆ ಹಾಕುವ ಬಟ್ಟೆ ಮತ್ತು ಸೊಂಟಪಟ್ಟಿಕೆ ಧರಿಸಿದೆ.

ಸ್ಥಳ: ಇಟಗಾ(ಬಿ) **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪು ಕಲ್ಲು **ದೊರೆತ ಸ್ಥಳ:** ಈಶ್ವರ ಗುಡಿ

ಸ್ಥಿತಿ: ತ್ರುಟಿತ **ಕಾಲ:** ಸು.೧೧ನೆಯ ಶತಮಾನ

ಭಿತ್ತಿಯ ಇನ್ನೊಂದು ವೀರಗಲ್ಲು ಮೂರಸ್ತರದಲ್ಲಿದೆ. ಕೆಳಭಾಗದಲ್ಲಿ ಖಡ್ಗ, ಭಲ್ಲೆ ಹಿಡಿದು ಶತ್ರುವಿನೊಂದಿಗೆ ಹೋರಾಡುತ್ತಿರುವ ಶಿಲ್ಪವಿದೆ. ಎಡರನೆಯ ಸ್ತರದಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಕೆತ್ತನೆಯಿದೆ. ಮೇಲಿನ ಸ್ತರದಲ್ಲಿ ಶಿವ? ಯತಿಯ? ಮುಂದೆ ನಮಸ್ಕರಿಸುತ್ತಿರುವ ವೀರನ ಕೆತ್ತನೆಯಿದೆ. ವೀರ ಮುಡಿ, ಕರ್ಣಕುಂಡಲ, ಕೈಗಡಗ, ಕಾಲ್ಗಡಗ, ತೊಡೆಯವರೆಗೆ ಹಾಕುವ ಬಟ್ಟೆ ಮತ್ತು ಸೊಂಟಪಟ್ಟಿಕೆ ಧರಿಸಿದೆ.

ಸ್ಥಳ: ಇಟಗಾ(ಬಿ) **ಶಿಲ್ಪ:** ವೀರಗಲ್ಲು

ಶಿಲೆ: ಕಪ್ಪು ಕಲ್ಲು. **ದೊರೆತ ಸ್ಥಳ:** ಈಶ್ವರ ಗುಡಿ

ಸ್ಥಿತಿ: ತ್ರುಟಿತ **ಕಾಲ:** ಸು.೧೧ನೆಯ ಶತಮಾನ

ದೇವಾಲಯದ ಭಿತ್ತಿ ಭಾಗದಲ್ಲಿ ಮೂರು ಸ್ತರದ ವೀರಗಲ್ಲಿದೆ. ಕೆಳಭಾಗದಲ್ಲಿ ಖಡ್ಗ, ಭಲ್ಲೆ ಹಿಡಿದು ಶತ್ರುವಿನೊಂದಿಗೆ ಹೋರಾಡುತ್ತಿರುವ ಶಿಲ್ಪವಿದೆ. ಎರಡನೆಯ ಸ್ತರದಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಕೆತ್ತನೆಯಿದೆ. ಮೇಲಿನ ಸ್ತರದಲ್ಲಿ ಶಿವಲಿಂಗದ ಮುಂದೆ ನಮಸ್ಕರಿಸುತ್ತಿರುವ ವೀರನ ಕೆತ್ತನೆಯಿದೆ. ವೀರ ಮುಡಿ, ಕರ್ಣಕುಂಡಲ, ಕೈಗಡಗ, ಕಾಲ್ಗಡಗ, 'ವಿ' ಆಕಾರದ ಸೊಂಟಪಟ್ಟಿಕೆ ಧರಿಸಿದೆ.

ಸ್ಥಳ: ಕಲಬೆನ್ನೂರು **ಶಿಲ್ಪ:** ತುರುಗೋಳ್ ವೀರಗಲ್ಲು,

ಶಿಲೆ: ಬಳಪದ ಕಲ್ಲು **ದೊರೆತ ಸ್ಥಳ:** ತ್ರಿಕೂಟೇಶ್ವರ ಗುಡಿ

ಸ್ಥಿತಿ: ಉತ್ತಮ **ಕಾಲ:** ಸು.೧೧ನೆಯ ಶತಮಾನ

ತ್ರಿಕೂಟೇಶ್ವರ ದೇವಾಲಯದ ಎದುರುಗಡೆಯ ಗೋಡೆ ಬಳಿ ತುರುಗೋಳ್ ವೀರಗಲ್ಲಿಡಲಾಗಿದೆ. ಎರಡು ಸ್ತರದ ವೀರಗಲ್ಲು ಕೆಳಸ್ತರದಲ್ಲಿ ವೀರನು ಹೋರಾಡುತ್ತಿರುವ ಶಿಲ್ಪವಿದೆ. ವೀರನು

ಶತ್ರುವನ್ನು ಭರ್ಚಿಯಿಂದ ಇರಿಯುತ್ತಿರುವ ಮತ್ತು ಒಂದು ಕೈಯಲ್ಲಿ ಭಲ್ಲೆ ಹಿಡಿದಿರುವ ಶಿಲ್ಪವಿದೆ. ಎದುರಿಗಿರುವ ವೀರರು ಖಡ್ಗ ಭಲ್ಲೆ ಹಿಡಿದಿರುವರು. ವೀರನು ತುರುಬ, ಕೊರಳಿನ ಹಾರ, ಸೊಂಟಪಟ್ಟಿ, ಸೊಂಟಕ್ಕೆ ಚೂರಿಯಿಟ್ಟುಕೊಂಡಿರುವ ಮತ್ತು ಬಟ್ಟೆ ಧರಿಸಿರುವನು. ಮೇಲ್‌ಸ್ತರದಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಶಿಲ್ಪವಿದೆ. ಲಲಾಟ ಬಿಂಬದಲ್ಲಿ ವೀರ ಲಿಂಗೈಕ್ಯವಾಗಿರುವ ಕೆತ್ತನೆಯಿದೆ.

ಸಲ್ಲೇಖನ ವ್ರತದ ಸ್ಮಾರಕಗಳು

ಗ್ರಾಮ: ಗರೂರು　　**ಶಿಲ್ಪ:** ಸಲ್ಲೇಖನವೃತ

ಶಿಲೆ: ಕಪ್ಪು ಕಲ್ಲು.　　**ದೊರೆತ ಸ್ಥಳ:** ಹನುಮಾನ್ ಗುಡಿ

ಸ್ಥಿತಿ: ತ್ರುಟಿತ　　**ಕಾಲ:** ಸು.೧೨ನೆಯ ಶತಮಾನ

ಮೂರು ಸ್ತರದ ಧಾರ್ಮಿಕ (ಆತ್ಮಾಹುತಿ ಶಿಲ್ಪ) ವ್ರತವನ್ನಾಚರಿಸಿ? ಸಮಾಧಿಗತನಾದಂತೆ ಕೆತ್ತಲಾಗಿದೆ. ಕೆಳಗಿನ ಸ್ತರದಲ್ಲಿ ಒಬ್ಬ ಯತಿಯು ನಮಸ್ಕರಿಸುವ ಭಂಗಿಯಲ್ಲಿ ಕುಳಿತಿರುವ ಶಿಲ್ಪವಿದೆ. ಅವನ ಕೆಳಗೆ ಈರ್ವರು ದುಂಡನೆಯ ಕುಂಡಲ ಹಿಡಿದಂತೆ? ಕೆತ್ತಲಾಗಿದೆ. ಇಕ್ಕೆಲಗಳಲ್ಲಿ ಸ್ತ್ರಿ ಮತ್ತು ಪುರುಷ ಭಕ್ತರು ಕೈಮುಗಿಯುತ್ತಾ ನಿಂತಿರುವ ಕೆತ್ತನೆಯಿದೆ. ಮಧ್ಯದ ಸ್ತರದಲ್ಲಿ ನಾಲ್ವರು ಅಪ್ಸರೆಯರು ಸಮಾಧಿಗತ ಯತಿಯನ್ನು ಕರೆದೊಯ್ಯುತ್ತಿರುವ ಶಿಲ್ಪವಿದೆ. ಮೇಲಿನ ಸ್ತರದಲ್ಲಿ ಶಿವಲಿಂಗದ ಇಕ್ಕೆಲಗಳಲ್ಲಿ ಈರ್ವರು ಅಂಜಲಿ ಮುದ್ರೆಯಲ್ಲಿ ಕುಳಿತಂತೆ ಕೆತ್ತಲಾಗಿದೆ.

ಸ್ಥಳ: ಇಟಗಾ(ಬಿ)　　**ಶಿಲ್ಪ:** ಸಲ್ಲೇಖನ ವ್ರತ

ಶಿಲೆ: ಕಪ್ಪು ಕಲ್ಲು　　**ದೊರೆತ ಸ್ಥಳ:** ಊರೊಳಗೆ

ಸ್ಥಿತಿ: ತ್ರುಟಿತ　　**ಕಾಲ:** ಸು.೧೧ನೆಯ ಶತಮಾನ

ಜೈನ ಪಾದುಕೆಗಳು ಅದಕ್ಕೆ ತಾಕಿದಂತೆ ಎರಡು ಪತಿ-ಪತ್ನಿಯರ ಶಿಲ್ಪಗಳಿವೆ.

ಸ್ಥಳ: ಇಟಗಾ(ಬಿ)　　**ಶಿಲ್ಪ:** ಸಲ್ಲೇಖನ ವ್ರತ

ಶಿಲೆ: ಕಪ್ಪು ಕಲ್ಲು　　**ದೊರೆತ ಸ್ಥಳ:** ಈಶ್ವರ ಗುಡಿ

ಸ್ಥಿತಿ: ತ್ರುಟಿತ　　**ಕಾಲ:** ಸು.೧೧ನೆಯ ಶತಮಾನ

ಜೈನ ಯತಿಯೊಬ್ಬ ಸಲ್ಲೇಖನ ವ್ರತ ಮಾಡಿದ ಕೆತ್ತನೆ ಚಿಕ್ಕ ಬಿಂಬದಲ್ಲಿ ಕೆತ್ತಲಾಗಿದೆ. ಮೇಲೆ ಸೂರ್ಯ, ಚಂದ್ರರ ಕೆತ್ತನೆಯಿದೆ. ಒರಟು ಕಪ್ಪುಕಲ್ಲಿನಲ್ಲಿದೆ.

ಸ್ಥಳ: ಹುಣಸಿ ಹಡಗಲಿ　　**ಶಿಲ್ಪ:** ಸಲ್ಲೇಖನ ವ್ರತ

ಶಿಲೆ: ಒರಟಾದ ಕಪ್ಪು ಕಲ್ಲು　　**ದೊರೆತ ಸ್ಥಳ:** ಧರಣೇಂದ್ರ ಜೈನ ಬಸದಿ

ಸ್ಥಿತಿ: ತ್ರುಟಿತ　　**ಕಾಲ:** ಸು.೯ನೆಯ ಶತಮಾನ

ಈರ್ವರು ಜೋಡಿ ಜೈನ ಯತಿಗಳು ಧ್ಯಾನಕ್ಕೆ ಕುಳಿತಂತೆ ಕೆತ್ತಲಾಗಿದೆ. ಸಲ್ಲೇಖನ ವ್ರತ? ಮಾಡಿ ಮೋಕ್ಷ ಹೊಂದಿರುವ ಶಿಲ್ಪಗಳಂತೆ ತೋರುತ್ತದೆ. ಕಪ್ಪು ಒರಟಾದ ಕಲ್ಲಿನಲ್ಲಿ ಕೆತ್ತಲಾಗಿದೆ.

ಸ್ಥಳ: ಹುಣಸಿ ಹಡಗಲಿ — ಶಿಲ್ಪ: ಸಲ್ಲೇಖನ ವ್ರತ

ಶಿಲೆ: ಒರಟಾದ ಕಪ್ಪು ಕಲ್ಲು — ದೊರೆತ ಸ್ಥಳ: ಧರಣೇಂದ್ರ ಜೈನ ಬಸದಿ

ಸ್ಥಿತಿ: ತ್ರುಟಿತ — ಕಾಲ: ಸು.೯ನೆಯ ಶತಮಾನ

ಗುಡಿಯ ಒಳ ಪ್ರಾಂಗಣದಲ್ಲಿ ಎರಡು ಸಲ್ಲೇಖನ ವ್ರತ ಮಾಡಿದ ಶಿಲ್ಪಗಳಿವೆ. ಎರಡು ಜೋಡಿಶಿಲ್ಪ ಮತ್ತೊಂದು ಒಬ್ಬ ಜೈನ ಯತಿ ಅಂಜಲಿ ಮುದ್ರೆಯಲ್ಲಿ ಕುಳತಂತೆ ಅವುಗಳನ್ನು ಕೆತ್ತಲಾಗಿದೆ.

ಮಾಸ್ತಿಗಲ್ಲುಗಳ ಸಮೀಕ್ಷೆ

ಸ್ಥಳ: ಗುಲ್ಬರ್ಗಾ — **ಶಿಲ್ಪ:** ಮಾಸ್ತಿಗಲ್ಲು

ಶಿಲೆ: ಕಪ್ಪು ಕಲ್ಲು. — **ದೊರೆತ ಸ್ಥಳ:** ಹನುಮಾನ್ ಗುಡಿ

ಸ್ಥಿತಿ: ತ್ರುಟಿತ — **ಕಾಲ:** ಸು.೧೨ನೆಯ ಶತಮಾನ

ಬಿದ್ದಾಪುರ ಕಾಲೋನಿಯಲ್ಲಿರುವ ಹನುಮಾನ್ ಗುಡಿಯೊಳಗೆ ಪ್ರವೇಶದ್ವಾರದ ಬಲಕ್ಕಿರುವ ಒಂದು ಎತ್ತರದ ಮಾಸ್ತಿಗಲ್ಲು ಒಕ್ಕೈ ಮಾಸ್ತಿಯಾಗಿದೆ. ಲಲಾಟದ ಮೇಲೆ ಪತಿ ಮತ್ತು ಪತ್ನಿ ಕೈಮುಗಿದು ಶಿವಲಿಂಗದ ಮುಂದೆ ಕುಳಿತಂತೆ ಕೆತ್ತಲಾಗಿದೆ. ಕೈಬಳೆ ಧರಿಸಿರುವ ಒಕ್ಕೈ ಮಾಸ್ತಿಯ ಕೆಳ ಭಾಗ ಗಂಡನನ್ನು ಸುಡುತ್ತಿರುವ ಚಿತೆಗೆ ನಮಸ್ಕರಿಸುತ್ತಿರುವಳು ಮತ್ತು ಇದು ಅಸ್ಪಷ್ಟವಾಗಿದೆ. ಪ್ರಸ್ತುತ ಬಹಳಷ್ಟು ಹಾಳಾಗಿದೆ.

ಸ್ಥಳ: ಖಜೂರಿ — **ಶಿಲ್ಪ:** ಮಾಸ್ತಿಗಲ್ಲು

ಶಿಲೆ: ಕಪ್ಪುಕಲ್ಲು. — **ದೊರೆತ ಸ್ಥಳ:** ಊರ ಮಧ್ಯೆ

ಸ್ಥಿತಿ: ತ್ರುಟಿತ — **ಕಾಲ:** ಸು.೧೧ನೆಯ ಶತಮಾನ

ಸ್ಥಾನಿಕ ಭಂಗಿಯಲ್ಲಿರುವ ಸ್ತ್ರೀ ಶಿಲ್ಪವು, ಕೈಯೆತ್ತಿದಂತತಿದೆ. ಇದು ಮಾಸ್ತಿಗಲ್ಲಿನಂತೆ ತೋರುತ್ತದೆ.

ಸ್ಥಳ: ತಡಕಲ್ — **ಶಿಲ್ಪ:** ಮಾಸ್ತಿಗಲ್ಲು

ಶಿಲೆ: ಕಪ್ಪುಕಲ್ಲು — **ದೊರೆತ ಸ್ಥಳ:** ಊರ ಮಧ್ಯೆ

ಸ್ಥಿತಿ: ತ್ರುಟಿತ — **ಕಾಲ:** ಸು.೧೧ನೆಯ ಶತಮಾನ

ಸತಿಗಲ್ಲಿನಲ್ಲಿ ಸತಿ ಮತ್ತು ಪತಿ ಇಬ್ಬರು ಕೈಮುಗಿದು ಕುಳಿತ ಭಂಗಿಯಲ್ಲಿದೆ. ಒಂದು ಸ್ತರದ ಭಾಗವಿದೆ.

ಸ್ಥಳ: ಬಿದನೂರು — **ಶಿಲ್ಪ:** ಮಾಸ್ತಿಗಲ್ಲು

ಶಿಲೆ: ಕಪ್ಪು ಕಲ್ಲು — **ದೊರೆತ ಸ್ಥಳ:** ಹನುಮಾನ್ ಗುಡಿ

ಸ್ಥಿತಿ: ತ್ರುಟಿತ — **ಕಾಲ:** ಸು.೧೦ನೆಯ ಶತಮಾನ

ತ್ರುಟಿತ ಮಾಸ್ತಿಗಲ್ಲು ಒಕ್ಕೈ ಮಾಸ್ತಿಗಲ್ಲಾಗಿದೆ. ಒಕ್ಕೈ ಬಳಿ ಪತಿ-ಪತ್ನಿಯರ ಶಿಲ್ಪ, ಲಲಾಟದ ಮೇಲೆ ಲಿಂಗೈಕ್ಯ ಹೊಂದಿದ, ಪತಿ-ಪತ್ನಿಯು ಅಂಜಲಿ ಮುದ್ರೆಯಲ್ಲಿ ಶಿವಲಿಂಗದ ಮುಂದೆ ಕುಳಿತಿರುವರು.

ಸ್ಥಳ: ಕರಿಬೋಸಗಾ 		ಶಿಲ್ಪ: ಮಾಸ್ತಿಗಲ್ಲು

ಶಿಲೆ: ಕಪ್ಪುಶಿಲೆ 		ದೊರೆತ ಸ್ಥಳ: ಹನುಮಾನ್ ಮಂದಿರ

ಸ್ಥಿತಿ: ತ್ರುಟಿತ 		ಕಾಲ: ಸು.೧೨ನೆಯ ಶತಮಾನ

ಒಕ್ಕೈ ಮಾಸ್ತಿಗಲ್ಲಿನ ಲಲಾಟದ ಮೇಲೆ ಲಿಂಗೈಕ್ಯಗೊಂಡ ಸತಿ-ಪತಿಯರಿಬ್ಬರೂ ಶಿವಲಿಂಗಕ್ಕೆ ನಮಸ್ಕರಿಸುತ್ತಿರುವಂತೆ ಕೆತ್ತಲಾಗಿದೆ.

ಸ್ಥಳ: ಬೋಳೆವಾಡ, 		ಶಿಲ್ಪ: ಮಾಸ್ತಿಗಲ್ಲು,

ಶಿಲೆ: ಒರಟಾದ ಕಪ್ಪು ಕಲ್ಲು 		ದೊರೆತ ಸ್ಥಳ: ಹನುಮಾನ್ ಗುಡಿ

ಸ್ಥಿತಿ: ತ್ರುಟಿತ 		ಕಾಲ: ಸು.೧೧ನೆಯ ಶತಮಾನ

ಒಕ್ಕೈ ವೀರ ಮಾಸ್ತಿಗಲ್ಲು, ಹನುಮಾನ್ ಮಂದಿರದ ಬಳಿ ಬಿದ್ದಿದೆ. ವೀರನು ಕುದುರೆ ಮೇಲೆ ಕುಳಿತು ಹೋರಾಡುವ ಶಿಲ್ಪವಿದೆ. ಮಾಸ್ತಿಗಲ್ಲಿನ ಲಲಾಟದ ಮೇಲೆ ಲಿಂಗೈಕ್ಯವಾಗಿರುವ ಸತಿಯು ಪತಿಯೊಂದಿಗೆ ಕುಳಿತು ಶಿವಲಿಂಗಕ್ಕೆ ನಮಸ್ಕರಿಸುವಂತೆ ಕೆತ್ತಲಾಗಿದೆ. ಕಪ್ಪು ಶಿಲೆಯಲ್ಲಿದೆ.

ಸ್ಥಳ: ಅವರಾದ(ಕೆ) 		ಶಿಲ್ಪ: ಮಾಸ್ತಿಗಲ್ಲು

ಶಿಲೆ: ಕಪ್ಪು ಕಲ್ಲು 		ದೊರೆತ ಸ್ಥಳ: ಹನುಮಾನ್ ಗುಡಿ

ಸ್ಥಿತಿ: ತ್ರುಟಿತ 		ಕಾಲ: ಸು.೧೦ನೆಯ ಶತಮಾನ

ಅಗಸಿಯ ಬಳಿಯಿರುವ ಪತಿ-ಪತ್ನಿಯರು ಕೈಮುಗಿಯುತ್ತಾ ನಿಂತಿರುವ ಶಿಲ್ಪವಿದೆ. ಶಿಲ್ಪ ಫಲಕದಲ್ಲಿ ಹೂವಿನ ಪ್ರಭಾವಳಿ ಕೆತ್ತನೆಯಿದೆ. ಅದರ ಕೆಳಗೆ ಲಿಂಗವಿದೆ. ಶಿವಲಿಂಗದ ಪಕ್ಕದಲ್ಲಿ ನಮಸ್ಕಾರ ಭಂಗಿಯಲ್ಲಿರುವ ಈ ಶಿಲ್ಪವಿದೆ.

ಸ್ಥಳ: ಸಣ್ಣೂರು 		ಶಿಲ್ಪ: ಮಾಸ್ತಿಗಲ್ಲು

ಶಿಲೆ: ಕಪ್ಪುಶಿಲೆ, 		ದೊರೆತ ಸ್ಥಳ: ಅಗಸಿ

ಸ್ಥಿತಿ: ತ್ರುಟಿತ 		ಕಾಲ: ಸು.೧೧ನೆಯ ಶತಮಾನ

ಗುಡಿಯ ಗೋಡೆಯೊಳಗಿರುವ ತ್ರುಟಿತ ಇನ್ನೊಂದು ಮಾಸ್ತಿಗಲ್ಲಿದೆ.

ಸ್ಥಳ: ಸಣ್ಣೂರು 		ಶಿಲ್ಪ: ಮಾಸ್ತಿಗಲ್ಲು

ಶಿಲೆ: ಕಪ್ಪುಶಿಲೆ 		ದೊರೆತ ಸ್ಥಳ: ಅಗಸಿ

ಸ್ಥಿತಿ: ತ್ರುಟಿತ 		ಕಾಲ: ಸು.೯ನೆಯ ಶತಮಾನ

ಊರ ಅಗಸಿಯ ಹನುಮಾನ್ ಮಂದಿರದ ಪಕ್ಕದಲ್ಲಿರುವ ವೀರ ಮಾಸ್ತಿಗಲ್ಲಿದೆ. ಸು. ೯ನೆಯ ಶತಮಾನದ್ದಾಗಿದೆ. ವೀರನ ಶವ ಕಟ್ಟಿಗಯ ಮೇಲೆ ಮಲಗಿಸಿದಂತೆ ಕೆತ್ತಲಾಗಿದೆ. ವೀರ ಸತಿ ನಮಸ್ಕರಿಸುತ್ತಾ ಮೇಲಿಂದ ಅಗ್ನಿಗೆ ಬಿಳಲು ಸಿದ್ಧವಿದ್ದಂತೆ ಕೆತ್ತಲಾಗಿದೆ. ತ್ರುಟಿತ ಮಾಸ್ತಿ ಕೈ-ಬಾಹುವಲ್ಯ, ಕೈಬಳೆ ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಇಟಗಾ(ಬಿ) **ಶಿಲ್ಪ:** ಮಾಸ್ತಿಗಲ್ಲು
ಶಿಲೆ: ಕಪ್ಪು ಕಲ್ಲು. **ದೊರೆತ ಸ್ಥಳ:** ಈಶ್ವರ ಗುಡಿ
ಸ್ಥಿತಿ: ತ್ರುಟಿತ **ಕಾಲ:** ಸು.೧೧ನೆಯ ಶತಮಾನ

ಒಕ್ಕೈ ಮಾಸ್ತಿಗಲ್ಲು ಗುಡಿಯ ಪ್ರವೇಶ ದ್ವಾರದಲ್ಲಿ ನೆಡಲಾಗಿದೆ. ಕೈಬಳೆ ಮತ್ತು ಬಾಹುವಲ್ಯ ಧರಿಸಿದಂತೆ ಕೆತ್ತಲಾಗಿದೆ. ಲಲಾಟದಲ್ಲಿ ಲಿಂಗೈಕ್ಯವಾದಂತೆ ಕೆತ್ತಲಾಗಿದೆ. ಪೈಂಟ್ ಮಾಡಿದ ಕಾರಣ ಸ್ಪಷ್ಟತೆಯಿಲ್ಲ.

ಸ್ಥಳ: ಭೈರಮಡಗಿ **ಶಿಲ್ಪ:** ಮಾಸ್ತಿಗಲ್ಲು
ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ರಾಮಲಿಂಗ ಗುಡಿ
ಸ್ಥಿತಿ: ಉತ್ತಮ **ಕಾಲ:** ಸು.೧೨ನೆಯ ಶತಮಾನ

ರಾಮಲಿಂಗೇಶ್ವರ ಗುಡಿಯ ಪ್ರಾಂಗಣದಲ್ಲಿರುವ ಒಕ್ಕೈ ಮಾಸ್ತಿಗಲ್ಲು ಕಪ್ಪುಶಿಲೆಯಲ್ಲಿದೆ. ಸು.೧೩ನೆಯ ಶತಮಾನದ್ದಾಗಿದೆ. ಲಲಾಟದಲ್ಲಿ ಸತಿ–ಪತಿಯರು ಶಿವಲಿಂಗ ಪೂಜೆ ಮಾಡುತ್ತಿರುವ ಕೆತ್ತನೆಯಿದೆ.

ಸ್ಥಳ: ತಾಡತೆಗನೂರು **ಶಿಲ್ಪ:** ಮಾಸ್ತಿಗಲ್ಲು,
ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಭಾವಲಿಂಗೇಶ್ವರ ಗುಡಿ
ಸ್ಥಿತಿ: ತ್ರುಟಿತ **ಕಾಲ:** ಸು.೯ನೆಯ ಶತಮಾನ

ಒಕ್ಕೈ ಮಾಸ್ತಿಗಲ್ಲು ಭಾವಲಿಂಗೇಶ್ವರ ಗುಡಿಯ ಪ್ರವೇಶದ್ವಾರದ ಎದುರಿಗೆ ನಿಲ್ಲಿಸಲಾಗಿದೆ. ಸತಿಯಾಗಿರುವ ಶಿಲ್ಪ, ಸತಿಯು ಪತಿಯೊಂದಿಗೆ ಶಿವಲಿಂಗವನ್ನು ನಮಸ್ಕರಿಸುವ ಶಿಲ್ಪ ಚಿಕ್ಕದಾಗಿ ಮಾಸ್ತಿಯಗೈ ಮೇಲೆ ಕೆತ್ತಲಾಗಿದೆ. ಲಲಾಟದ ಮೇಲೆ ಸೂರ್ಯ, ಚಂದ್ರರ ಕೆತ್ತನೆ ಲಲಾಟದ ಮೇಲಿದೆ.

ಸ್ಥಳ: ತಾಡತೆಗನೂರು **ಶಿಲ್ಪ:** ವೀರಮಾಸ್ತಿ,
ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಭಾವಲಿಂಗೇಶ್ವರ ಗುಡಿ
ಸ್ಥಿತಿ: ತ್ರುಟಿತ **ಕಾಲ:** ಸು.೯ನೆಯ ಶತಮಾನ

ಭಾವಲಿಂಗೇಶ್ವರ ಗುಡಿಯ ಎದುರಿಗೆ ಮತ್ತೊಂದು ಒಕ್ಕೈ ಮಾಸ್ತಿಗಲ್ಲಿದೆ. ಅರ್ಧಭಾಗ ಭೂಮಿಯಲ್ಲಿ ಹೂತುಹೋಗಿದೆ. ಲಲಾಟದ ಮೇಲೆ ಶಿವಲಿಂಗವನ್ನು ಪತಿ–ಪತ್ನಿಯರು ನಮಸ್ಕರಿಸುವ ಶಿಲ್ಪವಿದೆ. ಸೂರ್ಯ, ಚಂದ್ರರ ಶಿಲ್ಪಗಳಿವೆ.

ಸ್ಥಳ: ಮೇಳಕುಂದಾ(ಕೆ) **ಶಿಲ್ಪ:** ಮಾಸ್ತಿಗಲ್ಲು,
ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಭೋಗಲಿಂಗೇಶ್ವರ ಗುಡಿ
ಸ್ಥಿತಿ: ಮಧ್ಯಮ **ಕಾಲ:** ಸು.೧೦ನೆಯ ಶತಮಾನ

ಗರ್ಭಗುಡಿಯ ಬಲಭಾಗದ ದೇವಕೋಷ್ಠಕದಲ್ಲಿ ಇಬ್ಬರು ಪತಿ–ಪತ್ನಿಯರ ಶಿಲ್ಪ ನಮಸ್ಕರಿಸುತ್ತಿರುವಂತೆ ಕೆತ್ತಲಾಗಿದೆ. ಪತಿಯ ಶಿಲ್ಪ ಕರ್ಣಕುಂಡಲ, ಮುಡಿ ಕಟ್ಟಿದಂತಿದೆ. ಪತ್ನಿಯ ಶಿಲ್ಪ ಕಿವಿ ಓಲೆ ಮತ್ತು ಪ್ರಭಾವಳಿಯಂತೆ ತೋರುವ ಕೂದಲು ವಿನ್ಯಾಸಗೊಳಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಕ.ಜಿ.ಶಾ. ಹನುಮಾಕ್ಷಿ ಗೋಗಿ, ಪು. .....

೨. ಪಾಟೀಲ್.ಎಂ.ಬಿ. (ಸಂ)., ಕ.ಸ.ಗೆ.ಕ.ಜಿ. ೧೯೯೭, ಪು. ೭೦೨.

೩. ಪೂರ್ವೋಕ್ತ, ಪು. ೭೮೯.

೪. ಪೂರ್ವೋಕ್ತ, ಪು. ೭೨೯.

೫. ಪೂರ್ವೋಕ್ತ, ಪು. ೭೮೦.

೬. ಪೂರ್ವೋಕ್ತ, ಪು. ೭೮೦.

೭. ಪೂರ್ವೋಕ್ತ, ಪು. ೭೬೩.

೮. ಪೂರ್ವೋಕ್ತ, ಪು. ೭೬೩.

೯. ಪೂರ್ವೋಕ್ತ, ಪು. ೭೪೧.

೧೦. ಪೂರ್ವೋಕ್ತ, ಪು. ೭೦೨.

೧೧. ಪೂರ್ವೋಕ್ತ, ಪು. ೭೧೯.

೧೨. ಪೂರ್ವೋಕ್ತ, ಪು. ೭೧೯.

೧೩. ಕ.ಸ.ಗೆ.ಕ.ಜಿ., ೧೯೯೭, ಪು. ೭೦೨.

೧೪. ಪೂರ್ವೋಕ್ತ, ಪು. ೯೬೯.

೧೫. ಪೂರ್ವೋಕ್ತ, ಪು. ೯೩೯.

೧೬. ಪೂರ್ವೋಕ್ತ, ಪು. ೯೮೯.

೧೭. ಹನುಮಾಕ್ಷಿ ಗೋಗಿ., ಕ.ಜಿ.ಶಾ., ೧೯೯೬, ಪು. ೨೫೯-೨೬೩.

೧೮. ಪಾಟೀಲ್.ಎಂ.ಬಿ. (ಸಂ)., ಕ.ಸ.ಗೆ.ಗು.ಜಿ., ೧೯೯೭, ಪು. ೭೦೨.

೧೯. ಪಾಟೀಲ್.ಎಂ.ಬಿ. (ಸಂ)., ಕ.ಸ.ಗೆ.ಕ.ಜಿ, ೧೯೯೭, ಪು. ೭೩೯.

೨೦. ಸಾಧನೆ. ಸಂ-೨, ಸಂಚಿಕೆ-೧-ಕ್ರಿ.ಶ.೧೯೭೩, ಪ್ರಸಂ. ಡಾ. ಜಿ.ಎಸ್. ಶಿವರುದ್ರಪ್ಪ, ಪು. ೪೮-೫೦.

೨೧. ಶಿವಾನಂದ.ಎ., ಹೈ.ಕ.ಭಾ.ಶಿ.ಶಾ., ಪು. ೧೧೮-೧೧೯.

೨೨. ಗೋಪಾಲ್.ಆರ್.(ಸಂ), ಗು.ಜಿ.ಇ., ೨೦೦೭. ಪು. ೧೭-೧೮.

೨೩. ಪೂರ್ವೋಕ್ತ ಪು. ೧೮-೧೯.

೨೪. ಪೂರ್ವೋಕ್ತ, ಪು. ೧೭

೨೫. ಪೂರ್ವೋಕ್ತ, ಪು. ೧೯.

೨೬. ಪೂರ್ವೋಕ್ತ, ಪು. ೨೦-೨೧.

೨೭. ಪೂರ್ವೋಕ್ತ, ಪು. ೧೯.

೨೮. ಶೇಷಶಾಸ್ತ್ರಿ.ಆರ್. ಕರ್ನಾಟಕದ ವೀರಗಲ್ಲುಗಳು, ೧೯೮೨, ಪು. ೨೭.

೨೯. ಪೂರ್ವೋಕ್ತ, ಪು. ೨೮

೩೦. ಪಾಟೀಲ್.ಎಂ.ಬಿ. (ಸಂ)., ಕ.ಸ.ಗೆ.ಕ.ಜಿ., ೧೯೯೭, ಪು. ೭೪೭.

♦ ♦ ♦

ಅಧ್ಯಾಯ : ನಾಲ್ಕು

ದೇವಾಲಯಗಳು

ಅಧ್ಯಾಯ : ನಾಲ್ಕು

ದೇವಾಲಯಗಳು

೪.೧. ದೇವಾಲಯಗಳ ಉಗಮ ಮತ್ತು ಮಹತ್ವ

ದೇವಾಲಯಗಳು ಜನರ ಭಕ್ತರ ಮತ್ತು ನಿಷ್ಠೆಗಳ ಪ್ರತೀಕಗಳಾಗಿವೆ.[೧] ದೇವಾಲಯಗಳು ಧಾರ್ಮಿಕ ಮೌಲ್ಯಗಳೊಂದಿಗೆ ಜನರ ಜೀವನ ಶೈಲಿ, ಸಂಸ್ಕೃತಿ, ಉಡುಗೆ–ತೊಡುಗೆಗಳ ಬಗ್ಗೆ ಮತ್ತು ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ. ಪ್ರಾಚೀನ ಕಾಲದಲ್ಲಿ ದೇವಾಲಯಗಳ ಬೆಳವಣಿಗೆಯನ್ನು ಕಾಣಬೇಕಾದರೆ, ಹಿಂದೂ ದೇವಾಲಯಗಳನ್ನು ಕಲ್ಲಿನಿಂದ ನಿರ್ಮಿಸುವುದರಲ್ಲಿ ಪ್ರಮುಖವಾದ ಹೆಜ್ಜೆಯನ್ನಿಟ್ಟದ್ದು ಗುಪ್ತರ ಯುಗದಲ್ಲಿ ಎನ್ನಬಹುದು. ಹಿಂದೂ ಧರ್ಮದ ಶ್ರದ್ಧಾವಂತ ಅನುಯಾಯಿಗಳಾದ ಗುಪ್ತರಿಂದ ದೇವಾಲಯಗಳ ರಚನೆಗೆ ವಿಶೇಷ ಪ್ರೋತ್ಸಾಹ ಪೋಷಣೆಗಳು ಸಿಕ್ಕವು. ದೇವಾಲಯ ಅವರ ಕಾಲದಲ್ಲಿ ಚಚ್ಚೌಕವಾದ ಗರ್ಭಗುಡಿ ಅದರೊಳಗೆ ದೇವರ ಮೂರ್ತಿಯಿಂದ ಕೂಡಿದ ಕೋಣೆಯಂತಿತ್ತು.[೨] ಪ್ರಾಚೀನವಾದ ದೇವಾಲಯಗಳಲ್ಲಿ ಗರ್ಭಗುಡಿಯು ದೇವಾಲಯದೊಳಗಿನ ಭಾಗದಲ್ಲಿ ಸೇರಿರುತ್ತಿತ್ತು. ಗರ್ಭಗೃಹದ ಸುತ್ತಲೂ ಪ್ರದಕ್ಷಿಣ ಪಥಕ್ಕೆ ಅವಕಾಶವಿರಲಿಲ್ಲ. ಕ್ರಮೇಣ ಗರ್ಭಗುಡಿ ಬೇರೆಯಾಗಿ ರಂಗ ಮಂಟಪದಿಂದ ಹಿಂದೆ ಸರಿಯಿತು. ಅವುಗಳ ಮೇಲೆ ಶಿಖರಗಳು ಮೂಡತೊಡಗಿದವು. ಗರ್ಭಗೃಹ ಮತ್ತು ಶಿಖರಗಳನ್ನು ವಿಮಾನಗಳೆಂದು ಕರೆಯತೊಡಗಿದರು. ಗರ್ಭಗೃಹದ ಮುಂದಿನ ಅನೇಕ ಕಂಬಗಳಿಂದ ಕೂಡಿದ ರಂಗಮಂಟಪ ನವರಂಗವಾಗಿ ಬೆಳೆಯಿತು. ಗರ್ಭಗೃಹದ ಮಧ್ಯೆ ಅವೆರಡನ್ನೂ ಸೇರಿಸುವಂತೆ ಇನ್ನೊಂದು ಚಿಕ್ಕಮಂಟಪ ಏರ್ಪಟ್ಟಿತು. ಅದು ಸುಕನಾಸಿ ಎನಿಸಿಕೊಂಡಿತು. ನವರಂಗವಾದ ಮೇಲೆ ಹೊರಭಾಗದಲ್ಲಿ, ಸುತ್ತುಗೋಡೆಗಳಿಂದ ಆವೃತ್ತವಲ್ಲದ, ಆದರೆ ಕಂಬಗಳಿಂದ ಕೂಡಿ ಅಲಂಕೃತ ಮೇಲ್ಛಾವಣಿಯನ್ನುಳ್ಳ ಅರ್ಧಮಂಟಪ ನಿರ್ಮಿತವಾಗ ತೊಡಗಿತು. ಇದನ್ನು ಮುಖಮಂಟಪವೆಂದು ಕರೆದರು.[೩]

ದೇವಾಲಯಗಳನ್ನು ದೇವರೆ ನೆಲೆ ನಿಂತನೆಂಬ ನಂಬಿಕೆಯುಳ್ಳ ಸ್ಥಳಗಳಲ್ಲಿ ಕಟ್ಟಲಾಗುತ್ತಿತ್ತು. ಉದಾಹರಣೆಗೆ ಪುರಹರನೊಲ್ದು ತಾಂ ನೆಲೆಸಿದನೆಂದು ಶಾಸನವೊಂದು ಹೇಳಿದೆ. ಚಿನಮಳ್ಳಿಯ ಶಾಸನವು (ಅಫ್ಜಲ್‌ಪುರ ಶಾಸನ) ರಾಯ ರಾಜಗುರು ವೀರಕೇದಾರ ದೇವನ ತಪೋ

ಪ್ರಭಾವಕ್ಕೆ ಪ್ರಸನ್ನವಾಗಿ ಚಿನಮಿಳೆಯು ಅಭಿನವ ಕೈಲಾಸವೆಂದು ಬಗೆದು ಶ್ರೀಶೈಲ ಮಲ್ಲಿಕಾರ್ಜುನನು ಅಲ್ಲಿ ಬಂದು ನೆಲೆಸಿದನೆಂದು ಹೇಳಿದೆ. ವಿಷ ಪ್ರಜಾರಿ ಭೋಗೇಶ್ವರ ಆಳಂದ ಶಾಸನದಲ್ಲಿ ಉಲ್ಲೇಖಿತವಾಗಿದೆ. ದೇವರು ಇಲ್ಲಿ ವಿಷದ ಪ್ರಭಾವವನ್ನು ಕಡಿಮೆ ಮಾಡುತ್ತಾನೆಂಬ ವಿಶೇಷತೆಯಿದೆ.[೪] ಕರ್ನಾಟಕದಲ್ಲಿ ಕ್ರಿಸ್ತ ಶಕದ ಆರಂಭದಲ್ಲಿ ಕಟ್ಟಿದ ದೇವಾಲಯಗಳು ಉಳಿದಿಲ್ಲವಾದರೂ ಕ್ರಿ.ಶ.೧೫೦ರ ಕದಂಬರ ಪ್ರಾಕೃತ ಶಾಸನದಿಂದ ದೇವಾಲಯಗಳು ರಚನೆಗೊಂಡಿರುವುದು ತಿಳಿದು ಬರುತ್ತದೆ.[೫] ದೇವಾಲಯದ ರಚನೆಯನ್ನು ನೋಡಿದಾಗ, ಅಧಿಷ್ಠಾನವೆಂದರೆ, ಆಧಾರ/ತಳಹದಿಗೆ ಅಧಿಷ್ಠಾನ ಎನ್ನುವರು. ಕಂಬಗಳು, ಭಿತ್ತಿಭಾಗ, ಛಾವಣಿ ಮತ್ತು ಶಿಖರಗಳಿಂದ ರಚಿಸಲ್ಪಡುತ್ತವೆ. ದೇವಾಲಯದ ಮೇಲ್ನೋಟಕ್ಕೆ ಇವುಗಳ ಕಂಡರೆ ಒಳ ಭಾಗದಲ್ಲಿ ಗರ್ಭಗೃಹ, ಅರ್ಧ ಮಂಟಪ/ಅಂತರಾಳ, ನವರಂಗ, ಭಿತ್ತಿ ಭಾಗ, ದೇವಕೋಷ್ಠಗಳು, ಸುಕನಾಸಿ, ಶಿಖರಗಳು ಹೀಗೆ ತನ್ನದೇಯಾದ ಶೈಲಿ, ಲಕ್ಷಣಗಳಿಂದ ರಚಿತವಾಗುತ್ತವೆ.

೪.೨. ದೇವಾಲಯಗಳ ವಿವಿಧ ನಾಮಗಳು ಮತ್ತು ರಚನಾ ವಿಧಾನ

ದೇವಾಲಯವನ್ನು ವಿವಿಧ ಹೆಸರುಗಳಿಂದ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಗುಡಿ (ಆಳಂದ ಶಾಸನ), ಸದನ (ಗುಲ್ಬರ್ಗಾ ಶಾಸನ) ವೆಂದಿದೆ. ಮರ್ತೂರು ಶಾಸನದಲ್ಲಿ ಶಿವ ಸದನವು ವಿಶ್ವಕರ್ಮ ನಿರ್ಮಿತ ಎಂಬುವಷ್ಟು ಸುಂದರವಾಗಿತ್ತು ಎಂದು ತಿಳಿಸುತ್ತದೆ. ಹರಸೂರಿನ ದೇವಾಲಯವು ಸುರ ಗಿರಿಯರೆ ದಕ್ಷಿಣ ಮೇರುವಿನಂತೆ, ಮಾಡಿಹಾಳದ ತ್ರಿಕೂಟ ದೇವಾಲಯವು ಕೂಟ ಕೋಟಿಗಳಿಂದದೊಪ್ಪುವಂತಿತ್ತು ಎಂದಿದೆ.[೬] ಸಿರಿವಳ್ಳಿಯ ದೇವಾಲಯದ ಶಾಸನವು ಲೋಕ ಪಾಪ ಸಮೂಹಂಗಳನಿಕ್ಕಿಮೆಟ್ಟಿ ಕೆಡಿಸಲು ಸಾಲ್ದರ್ದ ಪ್ರಣ್ಯಾಂಬುವಂ ಪೊಸಂತಾಗಿರ್ದದನೆಯ ವಜ್ರಘಟಿತ ಪ್ರಕಾರಮಪ್ಪಂತು ಕಟ್ಟಸಿರ್ದ ನಿರ್ಮಳ ತೀರ್ಥಮಂ ಎಂದು ಹೇಳಿದೆ. ಇದು ದೇವಾಲಯ ನಿರ್ಮಾಣದ ಉದ್ದೇಶವನ್ನು ವಾಸ್ತುವಿನ ಉಪಮೆಯೊಂದಿಗೆ ಹೋಲಿಸಿ ಹೇಳುತ್ತಿದೆಯಲ್ಲದೆ, ಪ್ರಕಾರದ ರಚನಾ ವೈಖರಿಯನ್ನು ತಿಳಿಸುತ್ತದೆ.[೬]

'ಪ್ರಸಾದ ಪ್ರತಿಮಾರಾಮ ಗೃಹವಾಪ್ಯಾದಿ ಸಂಸ್ಕೃತಿಃ
ಕಥಿತಾ ಯತ್ರ ತಚ್ಛಿಲ್ಪಶಾಸ್ತ್ರಮುಕ್ತಂ ಮಹರ್ಷಿಭಿಃ'

ದೇವಾಲಯ, ಅರಮನೆ ಅಥವಾ ರಾಜಗೃಹ ರಚನೆ, ದೇವತಾ ಮೂರ್ತಿಗಳ ರಚನೆ, ಸರ್ವಜನೋಪಯೋಗಿ ಗೃಹಗಳು, ಬಾವಿ, ಪುಷ್ಕರಣಿ ಮುಂತಾದವುಗಳನ್ನು ಶುಕ್ರನೀತಿ ಗ್ರಂಥವು ಶಿಲ್ಪಶಾಸ್ತ್ರದಡಿಯಲ್ಲಿ ಗುರುತಿಸುತ್ತದೆ.[೮]

"ಗರ್ಭಗೇಹಂ ಶಿರಂ ಪ್ರೋಕ್ತಂ ಶಿಖಾ ಶಿಖರಮುಚ್ಯತೇ
ನಾಸಿಕ ಶುಕನಾಸೀ ಸ್ಯಾತ್ ಅಂತರಲಾಂಗಲಂ ಸ್ಮೃತಂ
ಮಂಟಪಂ ದೇಹಮಿತ್ಯುಕ್ತಂ ಪ್ರಾಕಾರಃ ಕರ ಉಚ್ಯತೇ
ಗೋಪುರಂ ಪಾದ ಇತ್ಯುಕ್ತಂ ದೇವಸ್ಥಾನಂ ಪ್ರಕಥ್ಯತೇ"

ವಿಟ್ರೂವಿಯಸ್ಸನ ವಾಸ್ತುಶಾಸ್ತ್ರವೂ ಮಾನವ ಶರೀರ ರಚನೆಯಲ್ಲಿರುವ ವಿವಿಧ ಅಂಗಾಂಗಗಳ ಸಾಮರಸ್ಯ. ಸಮತೋಲನವನ್ನು, ವಾಸ್ತು ರಚನೆಗಳಲ್ಲಿಯೂ ಅಪೇಕ್ಷಿಸುತ್ತದೆ.[೯]

೪.೩. ದೇವಾಲಯಗಳ ವೈಶಿಷ್ಟ್ಯತೆ

ಗುಲ್ಬರ್ಗಾ ಜಿಲ್ಲೆಯ ಉತ್ತರ ಭಾಗದ ದೇವಾಲಯಗಳ ಉಗಮವನ್ನು ಅಧ್ಯಯನಕ್ಕೆ ತೆಗೆದು ಕೊಂಡಾಗ ನಮಗೆ ತಿಳಿದು ಬರುವ ಸಂಗತಿಯೆಂದರೆ ಸು.೬ನೆಯ ಶತಮಾನದಿಂದ ೭ನೆಯ ಶತಮಾನದ ಕಾಲದಲ್ಲಿ ಬಾದಾಮಿ ಚಾಲುಕ್ಯರ ಕಾಲದ ದೇವಾಲಯದ ಅವಶೇಷಗಳು, ರಾಷ್ಟ್ರಕೂಟರ ಕಾಲದ ದೇವಾಲಯಗಳ ರಚನೆಯಿಂದ ಬಹುಮನಿಯರ ಕಾಲದ ಆಳ್ವಿಕೆಯವರೆಗೆ ಕಾಣಬಹುದು. ಮೌರ್ಯರು, ಶಾತವಾಹನರ ಕಾಲದಲ್ಲಿ ಈ ಭಾಗದಲ್ಲಿ ಮೂರ್ತಿಶಿಲ್ಪಗಳ ಕುರುಹು ಗುಲ್ಬರ್ಗಾ ವಸ್ತು ಸಂಗ್ರಹಾಲಯದಲ್ಲಿ ಮತ್ತು ಚಿತ್ತಾಪುರದ ಭಾಗಗಳಲ್ಲಿ ಕಾಣಬಹುದಾಗಿದೆ.

ಏಕಕೂಟ, ದ್ವಿಕೂಟ, ತ್ರಿಕೂಟ ಮತ್ತು ಚತುರ್‌ಕೂಟ(ಚತುಷ್ಕೂಟ)ಗಳಲ್ಲಿ ವಿಂಗಡಿಸಬಹುದು. ಶೈಲಿಯ ಹಿನ್ನೆಲೆಯಲ್ಲಿ ನಾಗರ, ದ್ರಾವಿಡ ಮತ್ತು ವೇಸರ ಶೈಲಿಯಲ್ಲಿ ವರ್ಗೀಕರಿಸಲಾಗುವುದು. ರಾಜರ ಆಳ್ವಿಕೆ ಮೇಲೆ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಕಲಚೂರಿ ಮತ್ತು ಬಹುಮನಿಯರ ಕಾಲದ ದೇವಾಲಯಗಳೆಂದು ವರ್ಗೀಕರಿಸಬಹುದು. ಶಾತವಾಹನರ ಕಾಲದಿಂದ ನಿಜಾಮರ ಆಳ್ವಿಕೆ ಕಾಲದವರೆಗಿನ ಚಾರಿತ್ರಿಕ ವಿವರವನ್ನೊಳಗೊಂಡಿದೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ದೇವಾಲಯಕ್ಕೆ ಸಂಬಂಧಿಸಿದ ಅನೇಕ ಕುರುಹುಗಳು ದೊರೆತಿವೆ. ನಂತರ ಬಂದ ರಾಷ್ಟ್ರಕೂಟರ ಕಾಲದಿಂದ ಕಲ್ಯಾಣ ಚಾಲುಕ್ಯರ ಕಾಲದವರೆಗೆ ದೇವಾಲಯ ಮತ್ತು ವಾಸ್ತುಶಿಲ್ಪ ಪರಾಕಾಷ್ಠತೆ ತಲುಪಿತು. ಕಲ್ಯಾಣ ಚಾಲುಕ್ಯರ ನಂತರ ಈ ಭಾಗದಲ್ಲಿ ವಾಸ್ತುಶಿಲ್ಪದ ಅವನತಿ ಕಾಲವಾಗಿ ಪರಿಣಮಿಸಿತು.

೪.೪. ದೇವಾಲಯಗಳ ವೈವಿಧ್ಯತೆಗಳು

ಪ್ರಸ್ತುತ ಅಧ್ಯಯನದ ಅನುಕೂಲಕ್ಕೆ ಧಾರ್ಮಿಕ ಹಿನ್ನೆಲೆಯಲ್ಲಿ ಶೈವ, ವೈಷ್ಣವ, ಜೈನ, ಶಾಕ್ತ ಮತ್ತು ಇತರೆ ದೇವಾಲಯಗಳೆಂದು ವಿಂಗಡಿಸಲಾಗಿದೆ. ದೇವಾಲಯವನ್ನು ಯಾವ ಸ್ಥಳದಲ್ಲಿ ಕಟ್ಟಬೇಕು ಎಂಬುದನ್ನು ನಿಯಮಗಳಿಗನುಸಾರವಾಗಿ ಮಾಡಲಾಗುತ್ತಿತ್ತು. ಊರಿನ ಮಧ್ಯ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ವಿಷ್ಣು ದೇವಾಲಯವಿರಬೇಕು. ಈಶಾನ್ಯದಲ್ಲಿ ಶಿವನ ದೇವಾಲಯವಿರಬೇಕು. ಉದಾಹರಣೆಗೆ ಬಡಗಲು ಮಾಡಿಸಿದ ತ್ರಿಕೂಟ ದೇವಾಲಯ, ಶ್ರೀಶೈಲದ ಮಲ್ಲಿಕಾರ್ಜುನ ಬಂದು ಉತ್ತರಾಭಿಮುಖವಾಗಿ ನೆಲೆಸಿದನು. ಸಿರವಳ್ಳಿಯ ಪಶ್ಚಿಮ ದಿಸೆಯಲ್ಲಿನ ಹರಿಹರ ಭವನ ಇತ್ಯಾದಿ ಆಯಾ ದೇವಾಲಯಗಳ ದಿಕ್ಕು ದೆಸೆಗಳನ್ನು ಸೂಚಿಸಿವೆ.[೧೦]

ಶಾಸನಗಳ ಪ್ರಕಾರ ನಿರ್ಮಿತ ದೇವಾಯಗಳೆಂದರೆ, ಚಿಂಚೋಳಿ ಮತ್ತು ಮಾಶಾಳಗಳಲ್ಲಿ ತ್ರೈಪುರುಷ ದೇವಾಲಯದಲ್ಲಿ ಬ್ರಹ್ಮನಿದ್ದರೆ, ಇಲ್ಲಿನ ಅನೇಕ ತ್ರೈಪುರುಷ ದೇವಾಲಯಗಳಲ್ಲಿ ಬ್ರಹ್ಮನ ಬದಲು ಆದಿತ್ಯ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಮತ್ತೂರು, ಶಿರೋಳ್ಳಿ, ಮಾಶಳದ

ಶಾಸನಗಳಲ್ಲಿ ತ್ರೈಪುರುಷ ದೇವಾಲಯದ ಉಲ್ಲೇಖ ಸ್ಪಷ್ಟವಾಗಿಲ್ಲದಿದ್ದರೂ ಇತರ ಆಧಾರಗಳಿಂದ ಅವುಗಳನ್ನು ತ್ರೈಪುರುಷ ದೇವಾಲಯ ಎಂದು ಗುರುತಿಸಬಹುದಾಗಿದೆ.[೧೧] ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದಲ್ಲಿ ಶೈವ ಧರ್ಮದ ದೇವಾಲಯಗಳು ಅತ್ಯಧಿಕವಾಗಿವೆ. ಕಾಳಾಮುಖ ಶೈವದ ಕೇಂದ್ರವೂ ಆಗಿತ್ತು. ಶೈವರ ಪ್ರಭಾವದಿಂದ ಅನೇಕ ಬಸದಿಗಳು ಮತ್ತು ವೈಷ್ಣವ ಗುಡಿಗಳು ಶೈವ ದೇವಾಲಯಗಳಾಗದವು. ಬೊಂದರವಾಡ ಗ್ರಾಮದ ಸೋಮೇಶ್ವರ ದೇವಾಲಯ, ಮಾಶಾಳದ ಈಶ್ವರ ದೇವಾಲಯ, ಅಫ್ಜಲ್‌ಪುರದ ಕಾಳಪ್ರಿಯ, ನಖರೇಶ್ವರ, ತ್ರೈಕೂಟದ ರೇವಣೇಶ್ವರ ದೇವಾಲಯಗಳು ಉದಾಹರಣೆಗಳಾಗಿವೆ.

ತಿರುಮಲಾಪುರ, ಕೇಶವಪುರ, ರಾಮತೀರ್ಥ ಇತ್ಯಾದಿ ಗ್ರಾಮಗಳು ವೈಷ್ಣವ ಧರ್ಮದ ಪ್ರಭಾವ ತಿಳಿಸುತ್ತವೆ. ಕ್ರಿ.ಶ.೧೧ನೆಯ ಶತಮಾನದಲ್ಲಿ ವೈಷ್ಣವ ಧರ್ಮದ ಪ್ರಭಾವ ಕಡಿಮೆಯಾಗಿದ್ದು, ಇಲ್ಲಿ ತಮ್ಮ ಪ್ರಭಾವ ಹೆಚ್ಚಿಸಿಕೊಳ್ಳಲು ಶೈವರೊಂದಿಗೆ ಸಹಿಷ್ಣುತೆಯಿಂದ ಸಮ್ಮಿಳಿತಗೊಳ್ಳಬೇಕಾಯಿತು. ಶೈವ ಮತ್ತು ವೈಷ್ಣವರಲ್ಲಿ ಐಕ್ಯತೆ ಉಂಟಾಗಿ ಧಾರ್ಮಿಕ ಸಾಮರಸ್ಯ ಮತ್ತು ಸಹಿಷ್ಣುತೆಯಿಂದಿದ್ದರು ಎನ್ನುವುದಕ್ಕೆ ಹರಿಹರ, ಶಂಕರನಾರಾಯಣ ದೇವಾಲಯಗಳು ಸಾಕ್ಷಿಯಾಗಿವೆ.

ಸು.೭–೮ನೆಯ ಶತಮಾನದಿಂದ ಜೈನ ಧರ್ಮವು ಪ್ರಚಾರದಲ್ಲಿತ್ತು. ಹಲವಾರು ಜೈನ ಬಸದಿಗಳು, ಜೈನ ಕುರುಹುಗಳು ಈ ಪ್ರದೇಶ ಪ್ರಮುಖ ಜೈನ ಕೇಂದ್ರವಾಗಿತ್ತು ಎನ್ನುವುದಕ್ಕೆ ಸಾಕ್ಷಿಯಾಗಿವೆ. ಹುಣಸಿ ಹಡಗಲಿ ಗ್ರಾಮದಲ್ಲಿ ಎರಡು ಬಸದಿ, ಗುಲ್ಬರ್ಗಾ ಜಿಲ್ಲೆಯ ಸು.ಕ್ರಿ.ಶ.೬–೮ನೆಯ ಶತಮಾನದಿಂದ ಜೈನ ಮತವು ಪ್ರಚಲಿತದಲ್ಲಿದೆ. ಈ ಜಿಲ್ಲೆಯ ಉಳಿದಿರುವ ಶಾಸನಗಳಲ್ಲಿ ಕೇವಲ ೩೫ ಜೈನ ಶಾಸನಗಳು ದೊರೆಯುವುದಾದರೂ ಕರ್ನಾಟಕ ರಾಜ್ಯದ ಗುಲ್ಬರ್ಗಾ ಜಿಲ್ಲೆಯ ಗ್ಯಾಜಿಟಿಯರನಲ್ಲಿ ನೀಡಿರುವ ವಿವರಗಳು ಸು.೪೦–೪೫ ಬಸದಿಗಳು ಈ ಜಿಲ್ಲೆಯಲ್ಲಿದ್ದಂತೆ ತಿಳಿಸಿದೆ. ಇವಲ್ಲದೆ ನೂರಾರು ಜಿನಾವಶೇಷಗಳು, ಬೇರೆ ಬೇರೆ ದೇವಾಲಯಗಳಾಗಿ ಬದಲಾಗಿರುವುದು ಕಂಡು ಬರುತ್ತದೆ. ಸು.೬–೮ ಬಸದಿಗಳು ಬೇರೆ ಮತದ ದೇವಾಲಯಗಳಾಗಿ ಬದಲಾಗಿರುವುದು ಗಮನಾರ್ಹವಾಗಿದೆ. ಈ ಜಿಲ್ಲೆಯ ಜೈನ ಮತದ ಇತಿಹಾಸವನ್ನು ಗಮನಿಸುವಲ್ಲಿ ಆ ಪ್ರದೇಶದಲ್ಲಿ ನೆಲೆಸಿದ್ದ ಜೈನಯತಿಗಳು, ಶ್ರಾವಕ, ಶ್ರಾವಿಕೆಯರು ಮತ್ತು ಅಲ್ಲಿದ್ದ ಬಸದಿಗಳು ಮತ್ತು ಜಿನಬಿಂಬಗಳನ್ನಾಧರಿಸಿ ತಿಳಿಯಬಹುದಾಗಿದೆ. ವಿಶೇಷವಾಗಿ ರಾಷ್ಟ್ರಕೂಟರು ಮತ್ತು ಚಾಲುಕ್ಯರು ಈ ಭಾಗವನ್ನು ಆಳುತ್ತಿದ್ದಾಗ ಜೈನ ಮತಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆತಿದ್ದು ಹರಸೂರು, ಹುಣಸಿ ಹಡಗಲಿ ಮುಂತಾದ ಸ್ಥಳಗಳು ಪ್ರಮುಖ ಜೈನ ಕೇಂದ್ರಗಳಾಗಿದ್ದವು. ಎ.ಎಸ್. ಅಲ್ತೇಕರ್ ಅವರು ರಾಷ್ಟ್ರಕೂಟರ ಕಾಲದಲ್ಲಿ ರಾಜ್ಯದ ಸುಮಾರು ಮೂರನೆಯ ಒಂದು ಭಾಗದ ಜನರು ಜೈನರಾಗಿದ್ದರೆಂದು ತಿಳಿಸಿದ್ದಾರೆ.[೧೨] ಪ್ರಸ್ತುತ ಶೈವ, ವೈಷ್ಣವ, ಜೈನ ಮತ್ತು ಶಾಕ್ತ ದೇವಾಲಯಗಳೆಂದು ವಿಂಗಡಿಸಲಾಗಿದೆ.

೪.೪.೧. ಶೈವ ದೇವಾಲಯಗಳು

ಸ್ಥಳ: ಭೈರಮಡಗಿ | **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ | **ದೇವಾಲಯ:** ಭೈರಲಿಂಗೇಶ್ವರ
ಸ್ಥಿತಿ: ಕನಿಷ್ಠ | **ಕಾಲ:** ಸು.೧೫ನೆಯ ಶತಮಾನ

ಗರ್ಭಗುಡಿ, ಅಂತರಾಳ, ನವರಂಗ ಮಾತ್ರ ಉಳಿದಿದೆ. ಗರ್ಭಗುಡಿಯಲ್ಲಿ ಚತುರ್ಬಾಹು ಕಾಲಭೈರವ ಮತ್ತೊಂದು ತ್ರುಟಿತ? ಮೂರ್ತಿಯಿದೆ. ಗರ್ಭಗುಡಿ ಮತ್ತು ಅಂತರಾಳದ ಬಾಗಿಲವಾಡವು ನಿರಾಡಂಬರವಾಗಿದೆ. ತ್ರಿದಳ ಭುವನೇಶ್ವರಿಯಿದೆ. ನವರಂಗದಲ್ಲಿ ಭುವನೇಶ್ವರಿ ಮತ್ತು ನಾಲ್ಕು ಕಂಬಗಳಿವೆ. ಕಂಬಗಳು ೧೫ನೆಯ ಶತಮಾನದ್ದಾಗಿವೆ. ಇದರ ಪ್ರಾಂಗಣದಲ್ಲಿ ವೈಷ್ಣವನ ಮೂರ್ತಿ, ಒಂದು ಹೆಡೆಯ ನಾಗಶಿಲ್ಪ, ದ್ವಿಪಾದಿಕೆಗಳು, ಇತರೆ ಕಲ್ಯಾಣ ಚಾಲುಕ್ಯರ ಕಾಲದ ಅವಶೇಷಗಳು ಬಿದ್ದಿವೆ. ಗುಡಿಯ ಪ್ರವೇಶ ದ್ವಾರದ ಲಲಾಟದ ಮೇಲೆ ಸಪ್ತಮಾತೃಕೆಯರ ಶಿಲ್ಪ ಕಪ್ಪುಶಿಲೆಯಲ್ಲಿದೆ.

ಸ್ಥಳ: ಭೈರಮಡಗಿ | **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ | **ದೇವಾಲಯ:** ರಾಮಲಿಂಗೇಶ್ವರ
ಸ್ಥಿತಿ: ಕನಿಷ್ಠ | **ಕಾಲ:** ಸು.೧೧ನೆಯ ಶತಮಾನ

ಭೈರಲಿಂಗೇಶ್ವರ ಗುಡಿಯ ಪ್ರಾಂಗಣದಲ್ಲಿದೆ. ಗರ್ಭಗುಡಿಯಲ್ಲಿ ಲಿಂಗ ಪೀಠದಲ್ಲಿ ಎರಡು ಈಶ್ವರ ಲಿಂಗವಿದೆ. ಸಾದಾ ಭುವನೇಶ್ವರಿಯಿದೆ. ಗರ್ಭಗುಡಿಯ ಮುಂದೆ ನವರಂಗವಿದೆ. ಗುಡಿಯ ಮುಂದೆ ನಂದಿಶಿಲ್ಪ ಅದಕ್ಕೆ ಹೊಂದಿಕೊಂಡಂತೆ ಮಾಸ್ತಿಗಲ್ಲಿದೆ. ನವರಂಗದ ಕಂಬಗಳು ಚಾಲುಕ್ಯ ಶೈಲಿಯಲ್ಲಿವೆ.

ಸ್ಥಳ: ದಿಕ್ಷಾಸಂಗ | **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ | **ದೇವಾಲಯ:** ಕಲ್ಲೇಶ್ವರ
ಸ್ಥಿತಿ: ಕನಿಷ್ಠ | **ಕಾಲ:** ಸು.೧೨ನೆಯ ಶತಮಾನ

ಗರ್ಭಗುಡಿಯಲ್ಲಿ ಈಶ್ವರ ಲಿಂಗವಿದೆ. ಪ್ರಸ್ತುತ ಸಭಾಮಂಟಪ ಮಾತ್ರವಿದೆ. ಗರ್ಭಗುಡಿಯ ಕಟ್ಟಡ ಮತ್ತು ದೇವಾಲಯದ ಉಳಿದ ಭಾಗದ ಕಟ್ಟಡ ಅವಸಾನಗೊಂಡಿವೆ.

ಸ್ಥಳ: ಗೌಡಗಾಂವ | **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ | **ದೇವಾಲಯ:** ಮಲ್ಲಯ್ಯ
ಸ್ಥಿತಿ: ಕನಿಷ್ಠ | **ಕಾಲ:** ಸು.೧೩ನೆಯ ಶತಮಾನ,

ಪ್ರಸ್ತುತ ಅವಸಾನಗೊಂಡಿರುವ ಮಲ್ಲಯ್ಯನ ಗುಡಿಯ ಗರ್ಭಗುಡಿ, ಅಂತರಾಳ ಮತ್ತು ಪ್ರಾಂಗಣ ಮಾತ್ರ ಉಳಿದಿದೆ. ಅಂತರಾಳಕ್ಕೆ ಕಮಾನಿನಾಕಾರದ ಪ್ರವೇಶ ದ್ವಾರ ಮಾಡಲಾಗಿದೆ.

ಶಿವಲಿಂಗ, ನಂದಿಶಿಲ್ಪ ತ್ರುಟಿತ ಇತರೆ ಶಿಲ್ಪಗಳು ಮತ್ತು ವೈಷ್ಣವ ಶಿಲ್ಪಗಳಿವೆ. ಗಜಲಲಾಟ, ವೀರಗಲ್ಲುಗಳು, ಅಧಿದೇವತೆಯ ಶಿಲ್ಪ, ನಾಗಶಿಲ್ಪ ಮತ್ತು ಸಪ್ತಮಾತೃಕೆಯ ತ್ರುಟಿತ ಶಿಲ್ಪವಿದೆ. ವೈಷ್ಣವ ಶಿಲ್ಪಗಳಿವೆ. ಗುಡಿಯ ಮುಂದೆ ಬೇವಿನ ಗಿಡದ ಕೆಳಗೆ ವೈಷ್ಣವ ಶಿಲ್ಪ, ನಾಗ, ಶಿವಲಿಂಗ ಮತ್ತು ತ್ರುಟಿತ ಶಾಸನ? ವೀರಗಲ್ಲಿನ? ಲಲಾಟವಿದೆ.

ಸ್ಥಳ: ಹಾವನೂರು **ಶೈಲಿ:** ಕಲ್ಯಾಣ ಚಾಲುಕ್ಯ,
ಶಿಲೆ: ಕಪ್ಪುಶಿಲೆ **ದೇವಾಲಯ:** ಈಶ್ವರ ಲಿಂಗ
ಸ್ಥಿತಿ: ಕನಿಷ್ಠ **ಕಾಲ:** ಸು.೧೩ನೆಯ ಶತಮಾನ

ಹನುಮಾನ್ ಮಂದಿರದ ಗರ್ಭಗುಡಿಯ ಎಡಕ್ಕೆ ಈಶ್ವರ ಲಿಂಗ ಗುಡಿಯಿದೆ. ಗರ್ಭ ಗುಡಿಯಲ್ಲಿ ಲಿಂಗ ಪೀಠದ ಮೇಲೆ ಸ್ಥಾಪಿತ ಶಿವಲಿಂಗವಿದೆ. ಎರಡು ಗರ್ಭಗುಡಿಗಳು ಅಕ್ಕ-ಪಕ್ಕದಲ್ಲಿವೆ. ಒಂದೆ ಪ್ರಾಂಗಣದಲ್ಲಿವೆ. ಕಮಾನುಗಳು ಕಟ್ಟಲಾಗಿವೆ. ಸು.೧೪-೧೫ನೆಯ ಶತಮಾನದಲ್ಲಿ ಜೀರ್ಣಗೊಂಡಿದೆ. ಗುಡಿಯ ಮುಂದೆ ತ್ರುಟಿತ ನಂದಿಶಿಲ್ಪ, ಗಣೇಶ ಶಿಲ್ಪ, ಹನುಮಾನ್ ಶಿಲ್ಪ, ತ್ರುಟಿತ ಚತುರ್ಮುಖ ಬ್ರಹ್ಮನ ಶಿಲ್ಪ ಮತ್ತು ದೀಪಸ್ತಂಭವಿದೆ.

ಸ್ಥಳ: ಹಾವನೂರು **ಶೈಲಿ:** ಕಲ್ಯಾಣ ಚಾಲುಕ್ಯ,
ಶಿಲೆ: ಕಪ್ಪುಶಿಲೆ **ದೇವಾಲಯ:** ಸಿದ್ದರಾಮೇಶ್ವರ
ಸ್ಥಿತಿ: ಕನಿಷ್ಠ **ಕಾಲ:** ಸು.೧೩ನೆಯ ಶತಮಾನ

ಗುಡಿಯ ಮುಂದೆ ಮಲ್ಲಿಕಾರ್ಜುನ ಗುಡಿ, ನಂದೀಶನ ಗುಡಿ, ಗರ್ಭಗುಡಿಯಲ್ಲಿ ಈಶ್ವರನ ಶಿಲ್ಪ ಬಲಕ್ಕೆ ಲಿಂಗಪೀಠ ಮತ್ತು ನಂದಿಶಿಲ್ಪವಿದೆ. ಎರಡಕ್ಕೂ ಸಾದ ಬಾಗಿಲವಾಡವಿದೆ ಮತ್ತು ಭುವನೇಶ್ವರಿಯಿದೆ.

ಸ್ಥಳ: ಹಾವನೂರು **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಮಲ್ಲಿಕಾರ್ಜುನ
ಸ್ಥಿತಿ: ಕನಿಷ್ಠ **ಕಾಲ**-ಸು.೧೩ನೆಯ ಶತಮಾನ

ಗರ್ಭಗುಡಿಯಲ್ಲಿ ಶಿವಲಿಂಗವಿದೆ. ನಂದಿಶಿಲ್ಪ ಅಂತರಾಳದಲ್ಲಿದೆ. ಚಿಕ್ಕ ಬಾಗಿಲು ಮತ್ತು ಸಾದಾ ಬಾಗಿಲವಾಡವಿದೆ.

ಸ್ಥಳ: ಆತನೂರು **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಶಂಕರಲಿಂಗ
ಸ್ಥಿತಿ: ಕನಿಷ್ಠ **ಕಾಲ:** ಸು.೧೩ನೆಯ ಶತಮಾನ

ಶಂಕರಲಿಂಗ ಗುಡಿಯ ಪೂರ್ವಾಭಿಮುಖವಾಗಿದೆ. ಭಿತ್ತಿಭಾಗ, ಉಪಾನಗಳಿದ್ದು, ಪ್ರಸ್ತುತ ಶಿಖರ ಭಾಗ ಉಳಿದಿವೆ. ತ್ರಿಕೂಟ ಗುಡಿಯ ಉಳಿದೆರಡು ಗರ್ಭಗುಡಿ ನಶಿಸಿವೆ. ಪ್ರವೇಶ

ದ್ವಾರದ ಬಾಗಿಲವಾಡ ದ್ವಿಶಾಖಾಲಂಕೃತವಾಗಿದೆ. ಕೂಡ್ಯ ಸ್ತಂಭ, ಕೂಡ್ಯಸ್ತಂಭದಲ್ಲಿ ತ್ರುಟಿತ ಚಾಮರಧಾರಿಯರ ಶಿಲ್ಪ, ಚತುರ್ದಳದ ಕೆತ್ತನೆಯಿವೆ. ಬಾಗಿಲವಾಡದ ಇಕ್ಕೆಲಗಳಲ್ಲಿ ಕೂಡ್ಯಸ್ತಂಭ, ದೇವಕೋಷ್ಠಕಗಳಿವೆ. ಬಾಗಿಲಿನ ತೋರಣದಲ್ಲಿ ಮಕರ ತೋರಣದ ಮಧ್ಯೆದಲ್ಲಿ ವೇಣುಗೋಪಾಲನ ಶಿಲ್ಪವಿದೆ. ಇಕ್ಕೆಲಗಳಲ್ಲಿ ಗೋಪಿನ? ಶಿಲ್ಪಗಳಿವೆ. ನವರಂಗದಲ್ಲಿ ತ್ರಿದಳ ಭುವನೇಶ್ವರಿ ಶಿಲ್ಪವಿದೆ. ಗರ್ಭಗುಡಿಯ ಬಾಗಿಲವಾಡ ತ್ರಿಶಾಖವಾಗಿದೆ. ಕೂಡ್ಯಸ್ತಂಭಗಳ ಕೆತ್ತನೆಯಿವೆ. ಲಲಾಟದಲ್ಲಿ ಗಣಪತಿ ಶಿಲ್ಪವಿದೆ. ತೋರಣದಲ್ಲಿ ಕಮಲದ ಹೂವಿನ ಕೆತ್ತನೆಗಳಿವೆ. ಬಾಗಿಲಿನ ಇಕ್ಕೆಲಗಳಲ್ಲಿ ಕೂಡ್ಯಸ್ತಂಭಗಳ ಕೆತ್ತನೆಯಿವೆ. ಎತ್ತರದ ಹೊಸ್ತಿಲಿಗೆ ಚತುರ್ದಳದ ಕೆತ್ತನೆಗಳಿವೆ. ಗರ್ಭಗುಡಿಯಲ್ಲಿ ಶಿವಲಿಂಗ, ಗಣಪತಿ ಮತ್ತು ತ್ರುಟಿತ ಶಿಲ್ಪ ಮತ್ತು ನಂದಿ ಶಿಲ್ಪಗಳಿವೆ. ಗರ್ಭಗುಡಿಯಲ್ಲಿ ತ್ರಿದಳ ಭುವನೇಶ್ವರಿ ಕೆತ್ತನೆಯಿದೆ.

ಶಂಕರಲಿಂಗ ದೇವಾಲಯ ತ್ರಿಕೂಟವಾಗಿದ್ದು, ಪ್ರಧಾನ ಗರ್ಭಗೃಹಕ್ಕಷ್ಟೇ ಅಂತರಾಳವಿದೆ. ಉಳಿದೆರಡು ಕೇವಲ ಗರ್ಭಗೃಹಗಳು ಹೊಂದಿವೆ. ಒಂದೇ ನವರಂಗವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಚತುರ್ಶಾಖಾಲಂಕೃತವಾದ ಬಾಗಿಲವಾಡವಿದೆ. ಉಳಿದದ್ದು ಶಿಥಿಲವಾಗಿದೆ. ಎತ್ತರವಾದ ಕಮಲಾಕಾರದ ಅಧಿಷ್ಠಾನದ ಮೇಲೆ ಇರುವ ಮೂರು ಸ್ತರದ ಭಿತ್ತಿಯು ನಿರಾಡಂಬರವಾಗಿದೆ.[೧೩]

ವೇಸರಶೈಲಿಯ ಶಿಖರ ಪಟ್ಟಿಕೆಗಳ ಮಧ್ಯ ಕಾಲೆತ್ತಿ ನಿಂತ ಸಿಂಹಗಳ ರಚನೆಯಿದೆ. ಹೊಸ್ತಿಲಲ್ಲಿ ಕೀರ್ತಿಮುಖ, ಚಂದ್ರಶಿಲೆಗಳಿವೆ. ಅಂತರಾಳದ ಪ್ರವೇಶ ದ್ವಾರಕ್ಕೆ ಅರ್ಧಗಂಬಗಳ ಮೇಲೆ ಚಾಮರಧಾರಣೆಯರ ಶಿಲ್ಪಗಳು, ಮೇಲ್ಭಾಗ ಮುಂಚಾಚಿದ ಪಟ್ಟಿಕೆ ಮತ್ತು ಮಕರ ತೋರಣದಲ್ಲಿ ಗೋಪಾಲಕೃಷ್ಣನ ಶಿಲ್ಪವಿದೆ. ಸಭಾಮಂಟಪದ ಉತ್ತರ ಭಾಗದಲ್ಲಿ ಎರಡು ಗರ್ಭಗೃಹಗಳ ಪ್ರವೇಶದ್ವಾರಗಳು ಉಳಿದುಕೊಂಡಿವೆ.[೧೪]

ಸ್ಥಳ: ಬಂದರವಾಡ — **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ — **ದೇವಾಲಯ:** ಈಶ್ವರ

ಸ್ಥಿತಿ: ಕನಿಷ್ಠ — **ಕಾಲ:** ಸು.೧೩ನೆಯ ಶತಮಾನ

ಪೂರ್ವಾಭಿಮುಖವಾಗಿರುವ ಗರ್ಭಗುಡಿ, ಅಂತರಾಳ, ನವರಂಗ, ಮೂರು ಪ್ರವೇಶ ದ್ವಾರಗಳಿವೆ. ನವರಂಗದ ಕಂಬಗಳು ಚಾಲುಕ್ಯ ಶೈಲಿಯಲ್ಲಿವೆ. ಪೀಠಭಾಗ, ಚೌಕ, ಗಳ ಭಾಗದಲ್ಲಿ ಅಷ್ಟಕೋನಾಕೃತಿ ಕೆತ್ತನೆಯಿವೆ. ಚೌಕ, ವೃತ್ತಾಕಾರ, ತಟ್ಟೆಯಾಕಾರ ಮತ್ತು ಬೋದಿಗೆಗಳನ್ನೊಳಗೊಂಡಿದೆ. ನಕ್ಷತ್ರಾಕಾರದ ಭುವನೇಶ್ವರಿಯಿದೆ. ಅಂತರಾಳಕ್ಕೆ ಎರಡು ಕಂಬಗಳಿವೆ. ಗರ್ಭಗುಡಿಯಲ್ಲಿ ಲಿಂಗಪೀಠವಿಲ್ಲದ ನೆಲದಲ್ಲಿರುವ ಶಿವಲಿಂಗವಿದೆ. ತ್ರಿಶಾಖಾಲಂಕೃತ ಬಾಗಿಲವಾಡ, ಸರಳ, ಕೂಡ್ಯಸ್ತಂಭ, ಕನಕದಳದ ಕೆತ್ತನೆಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಭಿತ್ತಿಭಾಗದ ಒಂದು ದೇವಕೋಷ್ಠಕದಲ್ಲಿ ಸಪ್ತಮಾತೃಕೆಯರ ಶಿಲ್ಪವಿದೆ. ಒಂದು ಲಿಂಗ ಪೀಠದಲ್ಲಿ ಸ್ಥಾನಿಕ

ಸಪ್ತಋಷಿಗಳು ಅಂಜಲಿ ಮುದ್ರೆಯಲ್ಲಿರುವ ಕೆತ್ತನೆಯಿದೆ. ಸೂರ್ಯಪೀಠದಂತೆ ತೋರುತ್ತದೆ. ಒಂದು ಶಾಸನ ದೇವಾಲಯದಲ್ಲಿದೆ.

ಸ್ಥಳ: ಬಂದರವಾಡ　　**ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ　　**ದೇವಾಲಯ:** ಈಶ್ವರ ದೇವಾಲಯ

ಸ್ಥಿತಿ: ಕನಿಷ್ಠ　　**ಕಾಲ:** ಸು.೧೩ನೆಯ ಶತಮಾನ

ಪಶ್ಚಿಮಾಭಿಮುಖವಾಗಿರುವ ದೇವಾಲಯದ ಎತ್ತರದ ಜಗತಿಯ ಮೇಲೆ ನಿರ್ಮಾಣವಾಗಿದೆ. ದೇವಾಲಯವು ಗರ್ಭಗೃಹ, ತೆರೆದ ಅಂತರಾಳ ಮತ್ತು ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದ ಪ್ರವೇಶ ದ್ವಾರಕ್ಕೆ ಅರ್ಧಗಂಬ, ಲಲಾಟಬಿಂಬದಲ್ಲಿ ಗಜಲಕ್ಷ್ಮಿ, ಮೇಲ್ಭಾಗ ಪಟ್ಟಿಕೆಗಳಿವೆ. ಒಳಗೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ತೆರೆದ ಅಂತರಾಳದ ಪ್ರವೇಶದಲ್ಲಿ ಎರಡು ಕಂಬಗಳಿವೆ. ಸಭಾಮಂಟಪಕ್ಕೆ ಉತ್ತರ ಪೂರ್ವ ಭಾಗಗಳಲ್ಲಿ ಪ್ರವೇಶದ್ವಾರಗಳಿದ್ದು, ಉತ್ತರದ ಪ್ರವೇಶದ್ವಾರಕ್ಕೆ ಅರ್ಧಗಂಬ ಮತ್ತು ಪದ್ಮ ಜಾಲಂದ್ರಗಳಿವೆ. ದೇವಕೋಷ್ಠಕದಲ್ಲಿ ಸಪ್ತಮಾತೃಕೆಯ ಶಿಲ್ಪವನ್ನಿಡಲಾಗಿದೆ.[೧೫] ದೇವಾಲಯವು ಪೂರ್ವಾಭಿಮುಖವಾಗಿದೆ. ಸೋಮೇಶ್ವರ ದೇವಾಲಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಗರ್ಭಗೃಹದ ದ್ವಾರಬಂಧವು ಸಪ್ತಶಾಖಾಲಂಕೃತವಾಗಿದೆ. ನವರಂಗದಲ್ಲಿ ಸಪ್ತಮಾತೃಕಾ ಶಿಲ್ಪ ಮತ್ತು ಸೂರ್ಯಪೀಠಗಳಿವೆ.[೧೬]

ಸ್ಥಳ: ಬಂದರವಾಡ　　**ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ　　**ದೇವಾಲಯ:** ಭೋಗಲಿಂಗೇಶ್ವರ

ಸ್ಥಿತಿ: ಕನಿಷ್ಠ　　**ಕಾಲ:** ಸು.೧೩ನೆಯ ಶತಮಾನ

ಗೌಡರ ವಾಡೆಗೆ ಸೇರಿದಂತೆ ಇರುವ ಇನ್ನೊಂದು ದೇಗುಲವಿದೆ. ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ಪಾರ್ಶ್ವದ್ವಾರ ಮಂಟಪಗಳಿವೆ. ದ್ವಾರಬಂಧ, ಕಕ್ಷಾಸನವಿದೆ. ನವರಂಗದ ಛತ್ತು ಕಮಲಾಕೃತಿ ಕೆತ್ತಲಾಗಿದೆ. ಪ್ರಸ್ತುತ ಜೀರ್ಣಗೊಂಡಿದೆ. ಶಿವಲಿಂಗ, ನಂದಿ, ಗಣಪತಿ, ಭೈರವ, ಮಹಿಷಮರ್ದಿನಿ, ಸರ್ಪ ಆವೃತ ಭೈರವ ಪಾದಗಟ್ಟಿ ಇತ್ಯಾದಿ ಅವಶೇಷಗಳು ಇಲ್ಲಿವೆ.[೧೬]

ಸ್ಥಳ: ಬಂದರವಾಡ,　　**ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ　　**ದೇವಾಲಯ:** ಸೋಮನಾಥ

ಸ್ಥಿತಿ: ಕನಿಷ್ಠ　　**ಕಾಲ:** ಸು.೧೦ನೆಯ ಶತಮಾನ

ಕಕ್ಷಾಸನ, ಮುಖ ಮಂಟಪ, ನವರಂಗ, ಅಂತರಾಳ ಮತ್ತು ಗರ್ಭಗುಡಿಯಿರುವ ದೇವಾಲಯವು ರಾಷ್ಟ್ರಕೂಟ ಶೈಲಿಯ ಕಂಬಗಳಿಂದ ಕೂಡಿದೆ. ಕೆಳಗೆ ಚೌಕ ಮಧ್ಯದಲ್ಲಿ ದುಂಡನೆಯ ಕೆತ್ತನೆ, ವೃತ್ತಾಕಾರ ತಟ್ಟೆ ಮತ್ತು ಬೋದಿಗೆಗಳಿಂದ ಕೂಡಿದ ಪ್ರವೇಶ ದ್ವಾರದ ಕಂಬವಿದೆ. ಅಧಿಷ್ಠಾನ ಚತುರ್ದಳ ಮತ್ತು ಅದರ ಮೇಲೆ ಗಜ ಪಟ್ಟಿಕೆಗಳಿಂದ ಕೂಡಿದೆ.

ಕಕ್ಷಾಸನದ ಕಂಬಗಳು ಅಷ್ಟಕೋನಾಕೃತಿ, ಚೌಕ, ವೃತ್ತಾಕಾರದ ತಟ್ಟೆ ಮತ್ತು ಬೋದಿಗೆಗಳಿಂದ ಕೂಡಿವೆ. ಚಾಲುಕ್ಯ ಶೈಲಿಯಲ್ಲಿ ಕಂಬಗಳ ಕೆತ್ತನೆಯಿವೆ. ದೇವಾಲಯದ ಭಿತ್ತಿ ಭಾಗದಲ್ಲಿ ನಾಟ್ಯ ಗಣಪತಿಯ ಶಿಲ್ಪವಿದೆ. ಚತುರ್ಬಾಹುವಿನ ಪಾಶಾಂಕುಶ, ದಂತ ಮತ್ತು ಮೋದಕ ಹಸ್ತವಿರುವ ಗಣಪತಿಯಿದೆ. ಕಿರೀಟ, ಕರ್ಣಕುಂಡಲ, ಬಾಹುವಲ್ಯ, ಕೈಗಡಗ, ಕೊರಳಿನಾಭರಣ, ವಕ್ಷಬಂಧ, ಸೊಂಟಪಟ್ಟಿ, ಕಾಲ್ಗಡಗ ಧರಿಸಿದ ಕೆತ್ತನೆಯಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ.

ಸ್ಥಳ: ಬಂದರವಾಡ,	**ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ	**ದೇವಾಲಯ:** ಈಶ್ವರಲಿಂಗ
ಸ್ಥಿತಿ: ಕನಿಷ್ಠ	**ಕಾಲ:** ಸು.೧೨ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯ ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳಿಂದ ಕೂಡಿದೆ. ಗರ್ಭಗೃಹದ ಪ್ರವೇಶ ದ್ವಾರಕ್ಕೆ ಪದ್ಮ, ಅರ್ಧಗಂಬ, ವಜ್ರಾಕಾರ ಕೆತ್ತನೆ, ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಕಕ್ಷಾಸನದ ಹೊರಗೋಡೆಗೆ ಪದ್ಮ ಮತ್ತು ಆನೆ ಸಾಲುಗಳಿವೆ.[೧೮]

ಸ್ಥಳ: ಮಣ್ಣೂರು	**ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ	**ದೇವಾಲಯ:** ಗವಿಸಿದ್ದೇಶ್ವರ
ಸ್ಥಿತಿ: ಕನಿಷ್ಠ	**ಕಾಲ:** ಸು.೧೦ನೆಯ ಶತಮಾನ

ತಗ್ಗಿನಲ್ಲಿರುವ ದೇಗುಲಕ್ಕೆ ಗರ್ಭಗೃಹ, ಅಂತರಾಳ ಹಾಗೂ ನವರಂಗವಿದೆ. ಗುಡಿ ಪ್ರವೇಶಿಸಲು ಪಾರ್ಶ್ವದ್ವಾರವಿದೆ. ಅರ್ಧಮಂಟಪ, ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದೆ. ಶೈವದ್ವಾರ ಪಾಲಕರ ಕೆತ್ತನೆಯಿದೆ. ನವರಂಗದಲ್ಲಿ ಗಣಪತಿ, ನಾಗ ಹಾಗೂ ಸಪ್ತಮಾತೃಕೆಯರ ಶಿಲ್ಪಗಳಿವೆ.[೧೯]

ಸ್ಥಳ: ಮಣ್ಣೂರು	**ಶೈಲಿ:** ಕಲ್ಯಾಣ ಚಾಲುಕ್ಯ,
ಶಿಲೆ: ಕಪ್ಪುಶಿಲೆ	**ದೇವಾಲಯ:** ಕಲ್ಲಾಲಿಂಗೇಶ್ವರ
ಸ್ಥಿತಿ: ಕನಿಷ್ಠ	**ಕಾಲ:** ಸು.೧೦ನೆಯ ಶತಮಾನ

ಹೊಳೆ ದಂಡೆಯಲ್ಲಿರುವ ದೇವಾಲಯದಲ್ಲಿ ನವರಂಗವಷ್ಟೇ ಈಗ ಉಳಿದಿದೆ. ಗರ್ಭಗೃಹ, ಅಂತರಾಳದ ಭಾಗಗಳು ನಾಶವಾಗಿವೆ. ಇದರ ಕಂಬಗಳು ಬೃಹತ್ತಾಗಿವೆ. ಇದರ ಮುಂಬದಿಯಲ್ಲಿ ವೀರಗಲ್ಲಿದೆ.[೨೦]

ಸಭಾಮಂಟಪದ ಪಶ್ಚಿಮ ಭಾಗದಲ್ಲಿ ಎತ್ತರ ಜಗತಿಯನ್ನು ನಿರ್ಮಿಸಿ ಪ್ರಾಚೀನ ಕಾಲದ ಶಿವಲಿಂಗವನ್ನು ಅದರ ಮೇಲೆ ಪ್ರತಿಷ್ಠಾಪಿಸಲಾಗಿದೆ. ನಾಲ್ಕು ಕಂಬಗಳ ಮಧ್ಯದಲ್ಲಿ ನಂದಿ ಶಿಲ್ಪವನ್ನಿಡಲಾಗಿದೆ.[೨೧]

ಸ್ಥಳ: ಮಾಶಾಳ **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ರಾಮಲಿಂಗ

ಸ್ಥಿತಿ: ಕನಿಷ್ಠ **ಕಾಲ:** ಸು.೧೩ನೆಯ ಶತಮಾನ

ಊರ ಪಂಚಾಯತಿ ಬಳಿಯಿರುವ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ, ತೆರೆದ ನವರಂಗಗಳನ್ನೊಳಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ತ್ರಿಶಾಖಾಲಂಕೃತ ಬಾಗಿಲವಾಡವಿದೆ. ನವರಂಗದ ಅಂಚಲ್ಲಿ ಕಕ್ಷಾಸನವಿದೆ. ಇಲ್ಲಿರುವ ದೇವಕೋಷ್ಠಗಳು ಸುಂದರವಾದ ಬಾಗಿಲವಾಡಗಳನ್ನು ಹೊಂದಿವೆ.

ಸ್ಥಳ: ಮಾಶಾಳ **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಈಶ್ವರಗುಡಿ

ಸ್ಥಿತಿ: ಕನಿಷ್ಠ **ಕಾಲ:** ಸು.೧೨ನೆಯ ಶತಮಾನ

ಪೂರ್ವಾಭಿಮುಖವಾಗಿರುವ ಯಾಳಬಾವಿ ತೋಂಟದ ದೇಗುಲವೇ ಶಾಸನೋಕ್ತ ದೇವಾಲಯವಾಗಿದೆ. ಇದನ್ನು ಗೋವಿಂದಮಯ್ಯನು ೧೧೧೫ರಲ್ಲಿ ನಿರ್ಮಿಸಿ ದಾನ ಬಿಟ್ಟ ವಿಷಯ ಅಲ್ಲೇ ಇರುವ ಶಾಸನದಿಂದ ಗೊತ್ತಾಗುತ್ತದೆ. ತ್ರಿಕೂಟ ದೇವಾಲಯವು ಮೂರು ಪ್ರತ್ಯೇಕ ಗರ್ಭಗೃಹಗಳಿಂದ ಕೂಡಿದೆ. ಪ್ರಮುಖ ಗರ್ಭಗೃಹ ಮತ್ತು ಉತ್ತರ ಗರ್ಭಗೃಹಗಳು ಬರಿದಾಗಿವೆ. ದಕ್ಷಿಣದ ಗರ್ಭಗೃಹದಲ್ಲಿ ಬಲಹರಿ ಶಿವಲಿಂಗವಿದೆ. ಶಾಸನೋಕ್ತ ಮಹಾದೇವ ಇದಾಗಿದ್ದು ಉಳಿದೆರಡರಲ್ಲಿ ಕ್ರಮವಾಗಿ ಕೇಶವ ಹಾಗೂ ಆದಿತ್ಯನ ಮೂರ್ತಿಗಳು ಹಿಂದೆಯಿದ್ದವು. ಇವುಗಳ ಬಾಗಿಲವಾಡಗಳು ತ್ರಿಶಾಖಾಲಂಕೃತವಾಗಿದೆ. ನವರಂಗದಲ್ಲಿ ಒಟ್ಟು ನಾಲ್ಕು ದೇವಕೋಷ್ಠಗಳಿದ್ದು ಬರಿದಾಗಿವೆ. ನವರಂಗದ ಮುಂಭಾಗದ ಮುಖಮಂಟಪವಿದ್ದು ಕಕ್ಷಾಸನವಿದೆ. ಶಿಖರ ನಾಶಗೊಂಡಿದೆ. ಶಿಕ್ಷಣ ನೀಡುವ ಶಾಲೆಯು ಆಗಿತ್ತೆಂಬ ಅಂಶ ಅಲ್ಲೇ ಇರುವ ಶಾಸನದಿಂದ ಗೊತ್ತಾಗುತ್ತದೆ.[೨೨]

ಸ್ಥಳ: ಮಾಶಾಳ **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಈಶ್ವರ ಗುಡಿ

ಸ್ಥಿತಿ: ಕನಿಷ್ಠ **ಕಾಲ:** ಸು.೧೨ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯ ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿದೆ. ಕಲ್ಲುಕಂಬ ಬಾವಿ ದೇಗುಲವು ತಿಪ್ಪಣ್ಣನು ನಿರ್ಮಿಸಿ ಮುಂದಿರುವ ಸೋಪಾನ ಪುಷ್ಕರಣಿಯನ್ನು ವಿಸ್ತರಿಸಿದ ಅಂಶ ಶಾಸನದಿಂದ ತಿಳಿದುಬರುತ್ತದೆ. ಶಾಸನೋಕ್ತ ತಿಪ್ಪೇಶ್ವರ ಗುಡಿಯಾಗಿದೆ. ಗರ್ಭಗೃಹ, ಅಂತರಾಳ ಹಾಗೂ ತೆರೆದ ನವರಂಗ ದೀಪಮಾಲೆ ಕಂಬವಿದೆ.[೨೩]

ಸ್ಥಳ: ಮಾಶಾಳ **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಮಹಾದೇವ

ಸ್ಥಿತಿ: ಕನಿಷ್ಠ **ಕಾಲ:** ಸು.೧೩ನೆಯ ಶತಮಾನ

ದ್ವಿಕೂಟವಾಗಿರುವ ಗರ್ಭಗುಡಿಯಲ್ಲಿ ಶಿವಲಿಂಗ-ನಂದಿಗಳಿವೆ. ಇನ್ನೊಂದು ಪ್ರಸ್ತುತ ಬರಿದಾಗಿದೆ. ಗರ್ಭಗುಡಿಯ ಬಾಗಿಲವಾಡ ತ್ರಿಶಾಖಾಲಂಕೃತವಾಗಿದೆ. ಅಂತರಾಳದ ದೇವಕೋಷ್ಠದಲ್ಲಿ ಸಪ್ತಮಾತೃಕೆ

ಶಿಲ್ಪವಿದೆ. ನವರಂಗದ ದೇವಕೋಷ್ಠಗಳು ಖಾಲಿಯಾಗಿವೆ. ನವರಂಗವನ್ನು ಪ್ರವೇಶಿಸಲು ಉತ್ತರದಿಂದ ಸೌಕರ್ಯವಿದ್ದು ಮುಖ ಮಂಟಪವಿದೆ. ದೇವಾಲಯದ ಶಿಖರವೂ ನಶಿಸಿದೆ.[೨೪]

ಸ್ಥಳ: ರೇವೂರು(ಬಿ) **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಕಲ್ಲಾನಿಂಗ
ಸ್ಥಿತಿ: ಕನಿಷ್ಠ **ಕಾಲ:** ಸು.೧೧ನೆಯ ಶತಮಾನ

ಪೂರ್ವಾಭಿಮುಖವಾಗಿರುವ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳಿವೆ. ಪಾಳುಬಿದ್ದ ಗರ್ಭಗೃಹದಲ್ಲಿ ಶಿವಲಿಂಗವಿದೆ. ನವರಂಗದಲ್ಲಿನ ದೇವಕೋಷ್ಠಕಗಳೆರಡರಲ್ಲಿ ತ್ರುಟಿತ ಗಣಪತಿ ಮತ್ತು ವಿಷ್ಣು ಶಿಲ್ಪಗಳಿವೆ.

ಎತ್ತರ ಜಗತಿಯ ಮೇಲೆ ನಿರ್ಮಾಣವಾದ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿವೆ. ಗರ್ಭಗೃಹ ಸಂಪೂರ್ಣ ಹಾಳಾಗಿದ್ದು ಅಂತರಾಳದ ಪ್ರವೇಶ ದ್ವಾರಕ್ಕೆ ಅರ್ಧಗಂಬ, ಪದ್ಮಜಾಲಂಧ್ರ ಮಾದರಿಯ ಕೆತ್ತನೆಯಿದೆ. ಮೇಲ್ಭಾಗಕ್ಕೆ ಮಕರ ತೋರಣವಿದೆ. ಒಳಗೆ ನಂದಿ ಶಿಲ್ಪವಿದೆ. ದೇವಾಲಯದ ಮುಂಭಾಗದಲ್ಲಿ ಪ್ರಾಚೀನ ಕಾಲದ ಶಿವಲಿಂಗವಿದೆ.[೨೫]

ಸ್ಥಳ: ರೇವೂರು(ಬಿ) **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಮಲ್ಲಯ್ಯ
ಸ್ಥಿತಿ: ಕನಿಷ್ಠ **ಕಾಲ:** ಸು.೧೩ನೆಯ ಶತಮಾನ

ಪೂರ್ವಾಭಿಮುಖವಾಗಿರುವ ಗುಡಿಗೆ ಗರ್ಭಗೃಹ ಮತ್ತು ನವರಂಗಗಳಿವೆ. ಸು.೧೩ನೆಯ ಶತಮಾನದ ಕಂಬಗಳು, ಗರ್ಭಗೃಹದಲ್ಲಿ ಜೋಡಿ ಶಿವಲಿಂಗಗಳಿವೆ. ತ್ರಿಶಾಖಾಲಂಕೃತವಾದ ಬಾಗಿಲವಾಡವಿದೆ. ತೆರೆದ ಸಭಾಮಂಟಪದ ನಡುವಣ ಛತ್‌ನಲ್ಲಿ ಕಮಲದ ಕೆತ್ತನೆಯಿದೆ. ಗುಡಿಯ ಬಳಿ ವೀರಗಲ್ಲಿದೆ.[೨೬]

ಸ್ಥಳ: ಶಿರಸಗಿ **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಮಲ್ಲಿಕಾರ್ಜುನ
ಸ್ಥಿತಿ: ಕನಿಷ್ಠ ಕಾಲ–ಸು.೧೧ನೆಯ ಶತಮಾನ

ಪೂರ್ವಾಭಿಮುಖವಾಗಿರುವ ತ್ರಿಕೂಟ ದೇವಾಲಯವಾಗಿದೆ. ಮೂರು ಗರ್ಭಗೃಹದಲ್ಲಿ ಪ್ರಧಾನ ಗರ್ಭಗೃಹ ಅಂತರಾಳವನ್ನು ಹೊಂದಿದೆ. ಪ್ರಸ್ತುತ ನಾಶವಾಗಿದ್ದು ನವರಂಗದಲ್ಲಿ ವಿಷ್ಣು, ಯತಿ ಹಾಗೂ ಮಹಿಷಮರ್ದಿನಿ ಶಿಲ್ಪಗಳಿವೆ. ನವರಂಗದ ಕಂಬಗಳು ಸೂಕ್ಷ್ಮ ಕೆತ್ತನೆಯನ್ನೊಳಗೊಂಡಿದೆ. ಬೋದಿಗೆಯಲ್ಲಿ ಯಕ್ಷರನ್ನು ಕೆತ್ತಲಾಗಿದೆ. ಮುಖಮಂಟಪದ ಅಧಿಷ್ಠಾನವು ಆನೆ, ವಜ್ರಾಕಾರ ಹಾಗೂ ನರ್ತಕಿಯರ ಕೆತ್ತನೆಗಳಿವೆ. ಭಿತ್ತಿ ಭಾಗದಲ್ಲಿ ಜಾಲಾಂಧ್ರಗಳಿವೆ. ನವರಂಗದ ಕಕ್ಷಾಸನದ ಅಂಚಲ್ಲಿ ನಾಲ್ಕು ಅಡಿ ಅಂತರದಲ್ಲಿ ತ್ರಿಶೂಲಗಳನ್ನು ಕೆತ್ತಿದ್ದು, ಇದೊಂದು ಅಳತೆಗೋಲಿನ ಪ್ರಾತಿನಿಧಿಕ ರೇಖಾ ಕೆತ್ತನೆಯಾಗಿವೆ.[೨೭]

ಸ್ಥಳ: ಕೋಗನೂರು | ಶೈಲಿ: ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ | ದೇವಾಲಯ: ಶಂಕರಲಿಂಗ
ಸ್ಥಿತಿ: ಕನಿಷ್ಠ | ಕಾಲ: ಸು.೧೧ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯ ನಕ್ಷತ್ರಾಕಾರದ ಎತ್ತರ ಜಗತಿಯ ಮೇಲೆ ಕಟ್ಟಲ್ಪಟ್ಟಿದೆ. ಈ ದೇವಾಲಯದ ಗರ್ಭಗುಡಿಯ ಮೇಲ್ಭಾಗದ ಶಿಖರದ ಮೇಲ್ಭಾವಣಿಯೂ ನಕ್ಷತ್ರಾಕಾರದಲ್ಲಿ ಕಟ್ಟಲ್ಪಟ್ಟಿದೆ. ಶಿಖರವು ನಾಶಗೊಂಡಿದೆ. ಸುಕನಾಸಿ, ನವರಂಗ, ಅಂತರಾಳ, ಗರ್ಭಗೃಹವನ್ನೊಳಗೊಂಡಿದೆ. ಅಧಿಷ್ಠಾನ ಭಾಗದಲ್ಲಿ ಚತುರ್ದಳ ಹೂವಿನ ಕೆತ್ತನೆಗಳಿವೆ. ನವರಂಗದ ಮೇಲ್ಭಾವಣಿಯಲ್ಲಿ ಅಷ್ಟದಿಕ್ಪಾಲಕರ ಮತ್ತು ದ್ವಿದಳ ಭುವನೇಶ್ವರಿಯ ಕೆತ್ತನೆಯಿವೆ. ನವರಂಗದ ಕಂಬಗಳು ಚಾಲುಕ್ಯ ಶೈಲಿಯಲ್ಲಿವೆ. ಕಂಬಗಳು ಚೌಕ, ಅಷ್ಟಕೋನ ಚೌಕ ಮತ್ತು ದುಂಡಗಿನ ಸ್ತರಗಳಲ್ಲಿ ಸೂಕ್ಷ್ಮ ಕೆತ್ತನೆಗಳಿವೆ. ನವರಂಗದ ಸುತ್ತಲಿನ ಮೇಲ್ಭಾವಣಿಯಲ್ಲಿ ವಿವಿಧ ರೀತಿಯ ಭುವನೇಶ್ವರಿಗಳಿವೆ. ಅರ್ಧಮಂಟಪದಲ್ಲಿ ನಂದಿ ಶಿಲ್ಪವಿದೆ. ಅಂತರಾಳದ ಬಾಗಿಲಿನ ಇಕ್ಕೆಲಗಳಲ್ಲಿ ಬೃಹತ್ ಶೈವ ದ್ವಾರಪಾಲಕರ ಶಿಲ್ಪ ನುಣುಪಾದ ಕಲ್ಲಿನಲ್ಲಿ ಕೆತ್ತಲಾಗಿವೆ. ಇವುಗಳ ಪಕ್ಕದಲ್ಲಿರುವ ದೇವಕೋಷ್ಠಕಗಳಲ್ಲಿ ಭೈರವ, ನಾಗ ಮತ್ತು ಗಣಪತಿ ಶಿಲ್ಪಗಳಿವೆ. ಅಂತರಾಳದ ಬಾಗಿಲವಾಡಕ್ಕೆ ಕೂಡ್ಯ ಸ್ತಂಭ ಮತ್ತು ದ್ವಾರಪಾಲಕರ ಕೆತ್ತನೆಯಿದೆ. ಇದರ ಲಲಾಟವು ಮಕರ ತೋರಣದಿಂದಲಂಕೃತವಾಗಿದೆ. ನಟರಾಜನು ಮಧ್ಯದಲ್ಲಿ ನೃತ್ಯ ಮಾಡುತ್ತಿದ್ದು ಇಕ್ಕೆಲಗಳಲ್ಲಿ ಸಂಗೀತ, ವಾದ್ಯ, ತಮಟೆ, ಡೋಲು, ಶಹನಾಯಿ, ನೃತ್ಯ ಮಾಡುವವರ ಮೇಳದ ಕೆತ್ತನೆಯಿದೆ. ಬಾಗಿಲ ಪ್ರವೇಶ ಭಾಗಕ್ಕೆ ತ್ರಿಶೂಲದಾಕಾರದ ಕೆತ್ತನೆ ಮತ್ತು ಪಕ್ಕದಲ್ಲಿ ಹೂ-ಗೊಂಡೆಗಳಂತೆ ಕೆತ್ತನೆಯಿವೆ. ಮಧ್ಯದಲ್ಲಿ ಹೂವಿನ ಕೆತ್ತನೆಯಿದೆ. ಗರ್ಭಗುಡಿಯು ಬಾಗಿಲವಾಡ ಪಂಚಶಾಖಾಲಂಕೃತವಾಗಿದೆ. ಇದರಲ್ಲಿ ಗಂಗೆ, ಯಮುನೆಯರ, ಹೂ-ಹಣ್ಣು ಹಿಡಿದಿರುವ ಸ್ತ್ರೀ ಶಿಲ್ಪ, ದ್ವಾರಪಾಲಕರ ಶಿಲ್ಪಗಳ ಕೆತ್ತನೆಯಿವೆ. ನಾಗರ ಶೈಲಿಯ ಚಿಕ್ಕ ಗೋಪುರಗಳನ್ನು ಮಂಟಪಗಳಲ್ಲಿ ಕೆತ್ತಲಾಗಿದೆ. ಬಾಗಿಲವಾಡದಲ್ಲಿ ನೃತ್ಯಗಾರರ, ಆಯುಧಧಾರಿ ಗಂಧರ್ವರ ಕೆತ್ತನೆಯಿವೆ. ಕೂಡ್ಯಸ್ತಂಭದಲ್ಲಿ ಚಿಕ್ಕ ದೇವಕೋಷ್ಠಕ ಅದರಲ್ಲಿ ಮೂರ್ತಿಗಳ ಮತ್ತು ಸಿಂಹವ್ಯಾಳಿಗಳ ಪಟ್ಟಿಕೆಗಳಿವೆ. ಲಲಾಟದಲ್ಲಿ ಗಣಪತಿ ಶಿಲ್ಪವಿದೆ. ಲಲಾಟದ ಮೇಲ್ಭಾಗದಲ್ಲಿ ನೃತ್ಯಗಾರರ ಶಿಲ್ಪಗಳ ಕೆತ್ತನೆಯಿದೆ. ಗರ್ಭಗುಡಿಯ ಭುವನೇಶ್ವರಿಯು ತ್ರಿದಳದಲ್ಲಿದೆ. ನಕ್ಷತ್ರಾಕಾರ, ಹೂವಿನ ಕೆತ್ತನೆಯಿಂದ ಕೂಡಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ.

ಎತ್ತರದ ಅಧಿಷ್ಠಾನದ ಮೇಲೆ ಬಹುಕೋನಾಕಾರದ ತಳವಿನ್ಯಾಸವನ್ನುಳ್ಳ ಗರ್ಭಗೃಹವಿದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಎಡಭಾಗ ಭಿತ್ತಿಗೆ ಪಂಚದೀಪಗಳಿಡುವ ನಂದಾದೀಪ ಫಲಕವಿದೆ. ಗರ್ಭಗೃಹದ ದ್ವಾರಬಂಧವು ಪಂಚಶಾಖಾಲಂಕೃತವಾಗಿದೆ. ಲಲಾಟದಲ್ಲಿ ಗಣಪತಿಯಿದೆ. ಹೊಸ್ತಿಲ ಮುಂದೆ ಕಮಲದ ಮೊಗ್ಗಿನಿಂದ ವೃತ್ತವಾದ ಚಂದ್ರಶಿಲೆಯಿದೆ. ಅಂತರಾಳ, ದ್ವಾರಬಂಧ, ತೊಲೆಯ ಮೇಲೆ ಮಕರತೋರಣವಿದೆ.

ಇದರ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರ ಮೂರ್ತಿ ನಾಲ್ಕುವರೆ ಅಡಿಯಲ್ಲಿವೆ. ನವರಂಗದಲ್ಲಿ ಜಿತ್ತೇರಿಯ ಶಿಖರದೊಂದಿಗೆ ಎರಡು ದೇವಕೋಷ್ಠಗಳಲ್ಲಿ ಗಣಪತಿ, ಭೈರವ ಮೂರ್ತಿ ಮತ್ತು ನಾಗಶಿಲ್ಪಗಳಿವೆ. ನವರಂಗದ ಕಂಬಗಳು, ಚಾಲುಕ್ಯ ಶೈಲಿಯಲ್ಲಿವೆ. ಕಂಬಗಳು ರೇಖಾಲಂಕೃತವಾಗಿದೆ. ನಡುವೆ ಛತ್ ಮೇಲೆ ಅಷ್ಟದಿಕ್ಪಾಲಕರಿಂದ ಆವೃತವಾಗಿರುವ ಪಂಚದಳದ ಕಮಲ ಫಲಕದಿಂದ ಕೆತ್ತಲ್ಪಟ್ಟಿದೆ. ಮುಖಮಂಟಪವು ಕಕ್ಷಾಸನದಿಂದ ಕೂಡಿದೆ. ಅದರ ಹಿಂಬದಿ ವಜ್ರಪಟ್ಟಿಕೆಯಿಂದ ಕೂಡಿದೆ.[೨೮]

ಗರ್ಭಗುಡಿಯ ಬಾಗಿಲವಾಡದಲ್ಲಿ ಡಮರು, ನಾಗಾ, ಗದಾ ಹಿಡಿದಿರುವ ದ್ವಾರಪಾಲಕರ ಶಿಲ್ಪಗಳ ಕೆತ್ತನೆಯಿದೆ. ಯೋಗ ಶಿಲ್ಪಗಳು, ಗೂಡುಗಳಲ್ಲಿ ಶಿವ ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಹೊಸ್ತಿಲಲ್ಲಿ ಗೂಡು ಮುಂಭಾಗ ಚಂದ್ರ ಶಿಲೆಯಿದೆ.[೨೯]

ಸ್ಥಳ: ಗೊಬ್ಬೂರ(ಬಿ) **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಕಲ್ಲಾಲಿಂಗ

ಸ್ಥಿತಿ: ಕನಿಷ್ಠ **ಕಾಲ:** ಸು.೧೧ನೆಯ ಶತಮಾನ

ದಕ್ಷಿಣಾಭಿಮುಖವಾಗಿರುವ ತ್ರಿಕೂಟ ದೇವಾಲಯವು ಪಂಚಶಾಖಾಲಂಕೃತ ಬಾಗಿಲವಾಡದಿಂದ ಕೂಡಿದೆ. ಹೂಬಳ್ಳಿ, ಕೂಡ್ಯಸ್ತಂಭ, ಎರಡು ಕಾಲಿನ ಮೇಲೆ ನಿಂತ ಸಿಂಹ ವೆಯ್ಯಾವಳಿಗಳ ಕೆತ್ತನೆಯಿದೆ. ಡಮರು, ತ್ರಿಶೂಲ, ಗದಾ ಮತ್ತು ಸರ್ಪ ಹಸ್ತಗಳಿವೆ. ಇಕ್ಕೆಲಲ್ಲಿ ಆಯುಧಧಾರಿಯರು, ಚಾಮರಧಾರಿಯರು, ಗಂಗೆ, ಯಮುನೆಯರ ಶಿಲ್ಪಗಳಿವೆ. ಹೊಸ್ತಿಲಲ್ಲಿ ನೃತ್ಯ, ಸಂಗೀತ ಮತ್ತು ಕೊಳಲು, ತಬಲ, ವಾದ್ಯಗಾರರ ಶಿಲ್ಪಗಳಿವೆ. ಅಧಿಷ್ಠಾನದ ಭಾಗದಲ್ಲಿ ಗಜಪಟ್ಟಿಕೆ, ಹೂವುಗಳ ಪಟ್ಟಿ, ಅದರ ಮೇಲೆ ಚಿಕ್ಕ ಕೂಡ್ಯ ಸ್ತಂಭಗಳು ಆ ಸ್ತಂಭಗಳಲ್ಲಿ ಮತ್ತು ಅವುಗಳ ಹಿಂಜರಿತದ ಪಟ್ಟಿಗಳಲ್ಲಿ ಮದನಿಕೆಯರು ಮತ್ತು ನೃತ್ಯ, ವಾದ್ಯಗಾರರ ಶಿಲ್ಪಗಳ ಕೆತ್ತನೆಯಿವೆ. ನವರಂಗ, ಅಂತರಾಳ ಮತ್ತು ಗರ್ಭಗುಡಿಯಿವೆ. ನವರಂಗದ ಕಂಬಗಳು ಚೌಕ, ವೃತ್ತ, ಚೌಕ, ತಟ್ಟೆಯಾಕಾರ ಮತ್ತು ಬೋದಿಗೆಗಳಿಂದ ಕೂಡಿವೆ. ಇದಕ್ಕೆ ನಕ್ಷತ್ರಾಕಾರದ ಭುವನೇಶ್ವರಿಯಿದೆ. ಸುತ್ತಲೂ ಅಷ್ಟದಿಕ್ಪಾಲಕರು ಪತ್ನಿ ಸಮೇತ ವಾಹನ ರೂಢರಾಗಿರುವ ಕೆತ್ತನೆಗಳಿವೆ. ನವರಂಗದ ಮೇಲ್ಛಾವಣಿಯ ಪಟ್ಟಿಕೆಯಲ್ಲಿ ದೇವತೆಗಳ, ನೃತ್ಯ ಮತ್ತು ಸಂಗೀತಗಾರರ ಕೆತ್ತನೆಯಿವೆ. ಮೂರು ಗರ್ಭಗುಡಿಗಳಿವೆ. ಪ್ರಮುಖ ಗರ್ಭಗುಡಿಯಲ್ಲಿ ಬೃಹತ್ ಶಿವಲಿಂಗವಿದೆ. ಬಾಗಿಲವಾಡವು ತ್ರಿಶಾಖಾಲಂಕೃತವಾಗಿದೆ. ಕೂಡ್ಯಸ್ತಂಭದ ಕೆಳಗೆ ಶೈವ ದ್ವಾರಪಾಲಕರ ಕೆತ್ತನೆಯಿದೆ. ಇನ್ನೊಂದು ಗರ್ಭಗುಡಿಯ ಬಾಗಿಲವಾಡವು ಪಂಚಶಾಖಾಲಂಕೃತವಾಗಿದೆ. ಶೈವ ದ್ವಾರಪಾಲಕರ, ಚಾಮರಧಾರಿಯರ, ನೃತ್ಯಗಾರರ, ಗಂಗೆ–ಯಮುನೆ? ಯರ ಕೆತ್ತನೆ ಕೂಡ್ಯಸ್ತಂಭದ ಕೆಳಗೆ ಕೆತ್ತಲಾಗಿದೆ. ನಕ್ಷತ್ರಾಕಾರದ ಭುವನೇಶ್ವರಿಯಿದೆ. ಅಂತರಾಳದ ಹೊಸ್ತಿಲು ಭಾಗದಲ್ಲಿ ನೃತ್ಯ, ವಾದ್ಯಗಾರರ ಕೆತ್ತನೆಯಿವೆ. ಮತ್ತೊಂದು ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಹೊಸ್ತಿಲು ಭಾಗಕ್ಕೆ

ವೇಸರ ಶೈಲಿ ಶಿಖರದ ಕೆತ್ತನೆ ಮತ್ತು ಸಂಗೀತ, ನೃತ್ಯ ಮತ್ತು ವಾದ್ಯಗಾರರ ಕೆತ್ತನೆಯಿದೆ. ಬಾಗಿಲವಾಡಕ್ಕೆ ಶೈವ ದ್ವಾರಪಾಲಕರ, ಚಾಮರಧಾರಿಯರ, ನೃತ್ಯಗಾರರ, ಗಂಗೆ-ಯಮುನೆ?ಯರ ಕೆತ್ತನೆ ಕೂಡ್ಯಸ್ತಂಭದ ಕೆಳಗೆ ಕೆತ್ತಲಾಗಿದೆ. ನಕ್ಷತ್ರಾಕಾರದ ಅಧಿಷ್ಠಾನವಿದೆ. ಭಿತ್ತಿ ಭಾಗದಲ್ಲಿ ನಾಟ್ಯ ಗಣೇಶನ ಶಿಲ್ಪ, ಮದನಿಕೆಯರ ಶಿಲ್ಪಗಳು-ಶುಕ ಸುಂದರಿ, ಸರ್ಪ ಸುಂದರಿ, ಬೀಜಪುರ ಹಿಡಿದಿರುವ ಸುಂದರಿ, ಶಿಲಾಬಾಲಕರ ಶಿಲ್ಪ, ಡಮರು, ತ್ರಿಶೂಲ ಹಿಡಿದಿರುವ ಶಿವನ ಶಿಲ್ಪವಿದೆ. ನೃತ್ಯ ಭಂಗಿಯಲ್ಲಿರುವ ಶಿಲ್ಪವು ಕರ್ಣಕುಂಡಲ, ಬಾಹುವಲ್ಯ, ಕೈಗಡಗ, ಕೊರಳಿನಹಾರ, ಯಜ್ಞೋಪವೀತ, ಸೊಂಟಪಟ್ಟಿ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ. ಇಕ್ಕೆಲಲ್ಲಿ ನೃತ್ಯ ಮಾಡುತ್ತಿರುವ ಸ್ತ್ರೀಯರ ಕೆತ್ತನೆಗಳಿವೆ.

ಇದರ ಪಕ್ಕದಲ್ಲಿ ಪದ್ಮಾಸನ ಶಿಲ್ಪವಿದೆ. ಹಿಂದೆ ಏಳು ಹೆಡೆಯ ನಾಗ ಪ್ರಭಾವಳಿಯಿರುವ ಖಡ್ಗ, ಭಲ್ಲೆ ಆಯುಧ ಹಿಡಿದ ತ್ರುಟಿತ ನಾಗ ಶಿಲ್ಪವಿದೆ. ಏಳು ಹೆಡೆಯ ನಾಗ ಮತ್ತು ಒಂದು ಹೆಡೆಯ ನಾಗ ಒಂದಕ್ಕೊಂದು ಸುತ್ತಿಕೊಂಡಿವೆ. ಪ್ರಭಾವಳಿಯಲ್ಲಿ ಏಳು ಹೆಡೆಯ ನಾಗ ಖಡ್ಗ, ಭಲ್ಲೆ ಆಯುಧ ಹಿಡಿದ ನಾಗಶಿಲ್ಪವಿದೆ. ಸಪ್ತಮಾತೃಕೆಯರ ಶಿಲ್ಪವಿದೆ ಮತ್ತು ಎತ್ತರದ ಶಿವಲಿಂಗವಿದೆ. ತ್ರುಟಿತ ಜಾಗಟೆ ಬಾರಿಸುವ ಶಿಲ್ಪವಿದೆ. ಮೂರು ಶಾಸನಗಳು ದೇವಾಲಯದ ಆವರಣದಲ್ಲಿವೆ.

ಮೂರು ದಿಕ್ಕಲ್ಲೂ ಒಂದೊಂದು ಗರ್ಭಗೃಹ ಅಂತರಾಳಗಳಿವೆ. ಮಧ್ಯದಲ್ಲಿ ಒಂದು ನವರಂಗವಿದೆ. ಇದಕ್ಕೆ ತೆರೆದ ಮುಖ ಮಂಟಪವಿದೆ. ಎರಡು ಗರ್ಭಗೃಹಗಳಲ್ಲಿ ಶಿವಲಿಂಗ ಮತ್ತು ಪೂರ್ವದ ಗರ್ಭಗೃಹದಲ್ಲಿ ಬಲಹರಿ ಲಿಂಗವಿದೆ. ಇವುಗಳ ಬಾಗಿಲವಾಡಗಳು ಪಂಚಶಾಖಾಲಂಕೃತಗೊಂಡಿದೆ. ಲಲಾಟಗಳಲ್ಲಿ ಗಜಲಕ್ಷ್ಮಿಯರಿದ್ದಾರೆ. ನವರಂಗದ ಛಾವಣಿಯಲ್ಲಿ ಅಷ್ಟದಿಕ್ಪಾಲಕರ ಮತ್ತು ಕಮಲದಿಂದ ಆವೃತಗೊಂಡಿದೆ. ಮುಖಮಂಟಪ ಕಕ್ಷಾಸನ ಕಮಲದಂತಿದೆ. ಪುಷ್ಕರಣಿ ಗುಡಿಯ ಎದುರಿನ ಎಡಪಕ್ಕಕ್ಕಿದೆ. ಭಿತ್ತಿಯಲ್ಲಿ ಪಂಚತಂತ್ರದ ಮಂಗ-ಬೆಣ್ಣೆಯ ಕೆತ್ತನೆಯಿದೆ.[೨೦]

ಪಶ್ಚಿಮ ಗರ್ಭಗೃಹದ ಗೋಡೆಯ ಮೂರು ಮುಖಗಳಲ್ಲಿ ಮುಂಚಾಚಿದ ಗೂಡು, ಶಿಲಾಬಾಲಿಕೆ, ದೇವತೆಗಳ ಶಿಲ್ಪಗಳಿಂದ ಅಲಂಕರಿಸಿದೆ. ಇದರ ಮೇಲೆ ಇಳಿಜಾರಾದ ಶಿಖರ, ಮೇಲ್ಭಾಗ ಸ್ತೂಪಿಯಿದೆ. ಮೂರು ಶಿಲಾಶಾಸನಗಳು ಹೊರಭಾಗದಲ್ಲಿ ನಾಗ, ಆನೆ ಶಿಲ್ಪಗಳು ಮತ್ತು ಹತ್ತಿರದಲ್ಲಿ ಶಿಲೆಯಿಂದ ಕಟ್ಟಲ್ಪಟ್ಟ ಪ್ರಾಚೀನ ಕಾಲದ ಬಾವಿಯಿದೆ.[೨೧]

ಸ್ಥಳ: ಗೊಬ್ಬೂರು(ಬಿ) **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಶಿವಲಿಂಗೇಶ್ವರ

ಸ್ಥಿತಿ: ಕನಿಷ್ಠ **ಕಾಲ:** ಸು.೧೧ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯವು ತ್ರಿಕೂಟವಾಗಿದೆ. ಮೂರು ಗರ್ಭಗುಡಿಗಳಿವೆ. ಪ್ರಮುಖ ಗರ್ಭಗುಡಿಯ ಬಾಗಿಲವಾಡವು ಪಂಚಶಾಖಾಲಂಕೃತವಾಗಿದೆ. ಚತುರ್ದಳ, ಹೂಬಳ್ಳಿ,

ಕೂಡ್ಯಸ್ತಂಭ, ಸಿಂಹವೆಯ್ಯಾವಳಿಯ ಕೆತ್ತನೆಯಿವೆ. ಗಂಗೆ–ಯಮುನೆಯರ, ಶೈವದ್ವಾರಪಾಲಕರು ತ್ರಿಶೂಲ, ಡಮರು, ಗದಾ ಹಿಡಿದಿವೆ. ಚಾಮರಧಾರೆಯರ ಶಿಲ್ಪದ ಕೆತ್ತನೆಯಿವೆ. ಗಜಲಕ್ಷ್ಮಿ ಲಲಾಟವಿದೆ. ಹೊಸ್ತಿಲಲ್ಲಿ ನವಿಲು, ವೆಯ್ಯಾವಳಿ, ಚತುರ್ದಳದ ಕೆತ್ತನೆಯಿವೆ. ಗರ್ಭಗುಡಿಗೆ ಅಂತರಾಳವಿದೆ. ಮತ್ತೊಂದು ಗರ್ಭಗುಡಿ ಖಾಲಿಯಿದೆ. ಪಂಚಶಾಖಾಲಂಕೃತವಿರುವ ಬಾಗಿಲವಾಡದಲ್ಲಿ ಚತುರ್ದಳ, ಸಿಂಹವೆಯ್ಯಾವಳಿ, ಕೂಡ್ಯಸ್ತಂಭ, ಸಿಂಹವೆಯ್ಯಾವಳಿಯ ಕೆತ್ತನೆಗಳಿವೆ. ಗಂಗೆ–ಯಮುನೆಯರ, ಶೈವದ್ವಾರಪಾಲಕರು ತ್ರಿಶೂಲ, ಡಮರು, ಗದಾ ಹಿಡಿದಿವೆ. ಚಾಮರಧಾರಿಯರ ಶಿಲ್ಪದ ಕೆತ್ತನೆಯಿವೆ. ಹೊಸ್ತಿಲಿಗೆ ನವಿಲು, ವೆಯ್ಯಾವಳಿ, ಚತುರ್ದಳದ ಕೆತ್ತನೆಯಿವೆ. ಇನ್ನೊಂದು ಗರ್ಭಗುಡಿ ಹಾಳಾಗಿದೆ. ಸಪ್ತಮಾತೃಕೆಯರ ಶಿಲ್ಪ, ತ್ರುಟಿತ ಶಾಸನ, ತ್ರುಟಿತ ಗಣಪತಿ, ನಾಗಶಿಲ್ಪ, ತ್ರುಟಿತ ಬಾಗಿಲವಾಡದಲ್ಲಿ ಶೈವದ್ವಾರಪಾಲಕರು ಮತ್ತು ಚಾಮರಧಾರಿಯರ ಶಿಲ್ಪ, ತ್ರುಟಿತ ನಂದಿ ಶಿಲ್ಪ, ಶಾಸನ ಪ್ರಾಂಗಣದಲ್ಲಿವೆ. ಒಂದು ಹೆಡೆಯ, ಮೂರು ಮತ್ತು ಏಳು ಹೆಡೆಯ ನಾಗ ಸುತ್ತಿಕೊಂಡ ಕೆತ್ತನೆಯಿದೆ. ತ್ರುಟಿತ ನಾಗಶಿಲ್ಪದಲ್ಲಿ ಮೂರು ಹೆಡೆಯ ಮತ್ತು ಒಂದು ಹೆಡೆಯ ನಾಗಗಳ ಮೇಲೆ ಶಿವಲಿಂಗದ ಕೆತ್ತನೆಯಿದೆ.

ದಕ್ಷಿಣ ಗರ್ಭಗೃಹದ ಹೊಸ್ತಿಲ ಮಧ್ಯದಲ್ಲಿ ಹಂಸ, ಇಕ್ಕೆಲಗಳಲ್ಲಿ ಕೀರ್ತಿಮುಖ ಮತ್ತು ಆನೆ ಶಿಲ್ಪಗಳಿವೆ. ಒಳಗೆ ಯಾವುದೇ ಶಿಲ್ಪವಿಲ್ಲ. ಸಭಾಮಂಟಪದಲ್ಲಿ ಗಣೇಶ, ನಾಗ, ನಂದಿ ಮತ್ತು ಶಾಸನಗಳಿವೆ.ಬಿ

ಸ್ಥಳ: ಚಿನಮಗೇರಿ **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಈಶ್ವರ

ಸ್ಥಿತಿ: ಕನಿಷ್ಠ **ಕಾಲ:** ಸು.೧೧ನೆಯ ಶತಮಾನ

ಸುಕನಾಸಿ, ಕಕ್ಷಾಸನ, ನವರಂಗ, ಮೂರು ಗರ್ಭಗೃಹಗಳಿರುವ ತ್ರಿಕೂಟ ದೇವಾಲಯವು ಪೂರ್ವಾಭಿಮುಖವಾಗಿದೆ. ಒಂದು ಗರ್ಭಗುಡಿಯಲ್ಲಿ ಚಿಕ್ಕ ಶಿವಲಿಂಗವಿದೆ. ಸರಳ ಬಾಗಿಲವಾಡ ಮತ್ತು ಮಧ್ಯದಲ್ಲಿ ಕೂಡ್ಯಸ್ತಂಭಗಳಿವೆ. ಕೂಡ್ಯಸ್ತಂಭಗಳ ಕೆಳಗೆ ಶೈವ ದ್ವಾರಪಾಲಕರು ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಶೈವ ದ್ವಾರಪಾಲಕರ ಚತುರ್ಭುಜದಲ್ಲಿ ಹಿಂದಿನ ಕೈಗಳಲ್ಲಿ ಗದೆ, ಸರ್ಪ, ಮುಂದಿನ ಕೈ ವರದ ಹಸ್ತ ಉಳಿದವು ತ್ರುಟಿತವಾಗಿವೆ. ತೋರಣದಲ್ಲಿ ಸಿಂಹಗಳು ಮತ್ತು ಮಧ್ಯದಲ್ಲಿ ನಾಗರಶೈಲಿಯ ಶಿಖರಗಳ ಕೆತ್ತನೆಯಿವೆ. ಇನ್ನೊಂದು ಗರ್ಭಗುಡಿಯಲ್ಲಿ ಶಿವಲಿಂಗ ಮತ್ತು ನಂದಿ ಶಿಲ್ಪವಿದೆ. ಅಂತರಾಳಕ್ಕೆ ಮಕರತೋರಣ, ದ್ವಾರಪಾಲಕೆಯರ ಶಿಲ್ಪ ಮತ್ತು ದೇವಕೋಷ್ಠಕಗಳಿವೆ. ಅಂತರಾಳಕ್ಕೆ ದ್ವಾರಪಾಲಕರ ಬದಲಿಗೆ ಗಂಗೆ–ಯಮುನೆಯರ? ಶಿಲ್ಪಗಳಿವೆ. ಇದರ ಲಲಾಟದಲ್ಲಿ ಗಣಪತಿ ಶಿಲ್ಪವಿದೆ. ಸರಳ ಬಾಗಿಲವಾಡ ಮತ್ತು ಮಧ್ಯದಲ್ಲಿ ಕೂಡ್ಯಸ್ತಂಭಗಳಿವೆ. ಕೂಡ್ಯಸ್ತಂಭಗಳ ಕೆಳಗೆ ಶೈವ ದ್ವಾರಪಾಲಕರು ಮತ್ತು ಅದರ ಇಕ್ಕೆಲಲ್ಲಿ ಗಂಗೆ–ಯಮುನೆಯರು, ಚಾಮರಧಾರಿಯರ ಶಿಲ್ಪಗಳಿವೆ. ಶೈವ ದ್ವಾರಪಾಲಕರ ಚತುರ್ಭುಜಗಳಲ್ಲಿ

ತ್ರಿಶೂಲ, ಡಮರು, ಗದಾ ಮತ್ತು ವರದ ಹಸ್ತವಿದೆ. ಅಂತರಾಳವಿದೆ. ಮಕರತೋರಣ ಅದರ ಮಧ್ಯ ನಾಟ್ಯ ಶಿವ, ಇಕ್ಕೆಲಲ್ಲಿ ಬ್ರಹ್ಮನ ಮತ್ತು ವಿಷ್ಣುವಿನ ವಾದ್ಯಗಾರರ ಶಿಲ್ಪಗಳಿವೆ. ಪ್ರಮುಖ ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಎದುರಿಗೆ ನಂದಿ ಶಿಲ್ಪವಿದೆ. ಅಂತರಾಳ ಮತ್ತು ದೇವಕೋಷ್ಟಕಗಳಿವೆ. ದೇವಕೋಷ್ಟಕಗಳಲ್ಲಿ ಶಿವಲಿಂಗವಿದೆ. ಕೂಡ್ಯಸ್ತಂಭ ಮತ್ತು ಅದರ ಕೆಳಗೆ ಶೈವದ್ವಾರಪಾಲಕರ ಶಿಲ್ಪ, ಚತುರ್ದಳದ ಮಧ್ಯ ಜಾಲಾಂದ್ರಗಳಿವೆ. ಮಕರತೋರಣ ಅದರ ಮಧ್ಯ ನಾಟ್ಯ ಶಿವ, ವಾದ್ಯಗಾರರ ಮತ್ತು ವಿಷ್ಣುವಿನ ಶಿಲ್ಪಗಳಿವೆ. ನವರಂಗದಲ್ಲಿ ದ್ವಿದಳ ಭುವನೇಶ್ವರಿ ಕೆತ್ತನೆಯಿದೆ. ಕಕ್ಷಾಸನದಲ್ಲಿ ಸಪ್ತಮಾತೃಕೆಯರ ಶಿಲ್ಪವಿದೆ. ತ್ರುಟಿತ ನಂದಿ, ಜೈನಶಿಲ್ಪ, ವಿಷ್ಣು ಶಿಲ್ಪಗಳಿವೆ.

ಈಶ್ವರ ದೇವಾಲಯ ಉತ್ತರಾಭಿಮುಖವಾಗಿದೆ. ತ್ರಿಕೂಟ ದೇವಾಲಯ ಮೂರು ಗರ್ಭಗೃಹಗಳು, ಅವುಗಳಿಗೆ ಅಂತರಾಳಗಳು, ಸಭಾಮಂಟಪ ಮತ್ತು ಮುಖಮಂಟಪಗಳಿಂದ ಕೂಡಿದೆ. ಪೂರ್ವ-ಪಶ್ಚಿಮ ಗರ್ಭಗೃಹಗಳು ಮತ್ತು ಅಂತರಾಳಗಳು ದಕ್ಷಿಣದ ಮಾದರಿಯಲ್ಲಿದೆ. ಮುಖಮಂಟಪದಲ್ಲಿ ಕಕ್ಷಾಸನ, ಅದರ ಮೇಲೆ ಕಿರಿದಾದ ಕಂಬಗಳನ್ನು ನಿಲ್ಲಿಸಲಾಗಿದೆ. ಆವರಣದಲ್ಲಿ ವೀರಗಲ್ಲು ಮತ್ತು ಮಹಾಸತಿಗಲ್ಲುಗಳಿವೆ.[೩೩]

ತ್ರೈಪುರುಷ ದೇವಾಲಯವು ಪೂರ್ವಾಭಿಮುಖವಾಗಿರುವುದು. ವೀರಭದ್ರ ಗುಡಿಯ ಆವರಣದಲ್ಲಿರುವ ತ್ರಿಕೂಟ ದೇಗುಲವಿದೆ. ಮೂರು ಗರ್ಭಗುಡಿಯಿರುವ ಶಿವಲಿಂಗಗಳಿವೆ. ದ್ವಾರಬಂಧವು ತ್ರಿಶಾಖಾಲಂಕೃತವಾಗಿವೆ. ನವರಂಗದಲ್ಲಿ ಕಿರಿದಾದ ಎಂಟು ದೇವಕೋಷ್ಠಗಳಿವೆ. ಒಂದರಲ್ಲಿ ಬಲಹರಿ ಲಿಂಗವಿದೆ. ಅಂತರಾಳ ಮಕರತೋರಣಗಳಿಂದ ಕೆತ್ತಲ್ಪಟ್ಟಿದೆ. ನವರಂಗದ ಛತ್ ನಕ್ಷತ್ರಾಕಾರದ ಕಮಲದ ಕೆತ್ತನೆ ಹೊಂದಿದೆ. ನವರಂಗದಿಂದ ಪೂರ್ವಕ್ಕೆ ಅರ್ಧಮಂಟಪವಿದ್ದು ಕಕ್ಷಾಸನವನ್ನು ಹೊಂದಿದೆ. ನಾಲ್ಕು ಅಂತಸ್ತಿನ ಅಧಿಷ್ಠಾನವನ್ನೊಳಗೊಂಡಿದೆ. ಪ್ರಸ್ತುತ ಶಿಖರಗಳು ನಶಿಸಿವೆ. ಪ್ರಾಚೀನ ಕಾಲದಲ್ಲಿ ಶಿಕ್ಷಣ ಕೇಂದ್ರವಾಗಿತ್ತು. ಬಾವಿಯ ಒಳಗೋಡೆಯಲ್ಲಿ ಮಿಥುನ ಶಿಲ್ಪಗಳ ಕೆತ್ತನೆಯಿವೆ. ಕಟ್ಟೆಯ ಬಳಿ ಎರಡು ಮಾಸ್ತಿಗಲ್ಲುಗಳಿವೆ. ಕೇಶವ (ತ್ರುಟಿತ), ಆದಿತ್ಯ ಮತ್ತು ಮಹಿಷಮರ್ದಿನಿ ಶಿಲ್ಪಗಳಿವೆ.[೩೪]

ಸ್ಥಳ: ಚಿನಮಳಿ	**ಶೈಲಿ:** ಕಲ್ಯಾಣ ಚಾಲುಕ್ಯ,
ಶಿಲೆ: ಕಪ್ಪುಶಿಲೆ	**ದೇವಾಲಯ:** ಮಲ್ಲಿಕಾರ್ಜುನ
ಸ್ಥಿತಿ: ಕನಿಷ್ಠ	**ಕಾಲ:** ಸು.೧೨ನೆಯ ಶತಮಾನ

ಉತ್ತರಾಭಿಮುಖವಾಗಿರುವ ದೇವಾಲಯದ ಪ್ರವೇಶಕ್ಕೆ ತೃಟಿತ ಆನೆಗಳ ಶಿಲ್ಪಗಳಿವೆ. ಪ್ರವೇಶ ದ್ವಾರದಲ್ಲಿ ದ್ವಾರಪಾಲಕರ ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಮಕರತೋರಣದಲ್ಲಿ ಬ್ರಹ್ಮ, ಶಿವ-ನಂದಿ, ವಿಷ್ಣು-ಗರುಡನ ಶಿಲ್ಪಗಳಿವೆ. ಬಲಕ್ಕೆ ದ್ವಾರಪಾಲಕನ ಕೈಯಲ್ಲಿ ತ್ರಿಶೂಲ, ಡಮರು, ಗದಾ ಮತ್ತು ಅಭಯಹಸ್ತವಿದೆ. ಎಡಕ್ಕಿರುವ ದ್ವಾರಪಾಲಕನ ಕೈಯಲ್ಲಿ ಡಮರು, ಸರ್ಪ, ಗದೆ

ಮತ್ತು ಅಭಯಹಸ್ತವಿದೆ. ಸುಕನಾಸಿ, ಕಕ್ಷಾಸನ, ನವರಂಗ, ಅಂತರಾಳ ಮತ್ತು ಗರ್ಭಗುಡಿಗಳಿವೆ. ಅಧಿಷ್ಠಾನ ಭಾಗದಲ್ಲಿ ಚತುರ್ದಳ, ಸಂಗೀತ, ನೃತ್ಯ ಮತ್ತು ವಾದ್ಯ ಬಾರಿಸುವವರ ಇಕ್ಕೆಲಲ್ಲಿ ಕೂಡ್ಯಸ್ತಂಭಗಳ, ಸಿಂಹವೆಯ್ಯಾವಳಿಗಳ ಕೆತ್ತನೆಗಳಿವೆ. ಕಂಬಗಳು ಚೌಕ, ತಟ್ಟೆಯಾಕಾರ, ಚಪ್ಪಟೆ ಮತ್ತು ಬೋದಿಗೆಗಳಿಂದ ಕೂಡಿವೆ. ಭಿತ್ತಿಭಾಗಗಳು ರೇಖಾ ಮಾದರಿಯಲ್ಲಿ ಕೊರೆದಿದಂತೆ ಕೆತ್ತಲಾಗಿದ್ದು, ಅವುಗಳಲ್ಲಿ ಜೋಡಿ ನವಿಲಿನ ಕೆತ್ತನೆ ಮಾಡಲಾಗಿದೆ. ಗರ್ಭಗುಡಿಯ ಬಾಗಿಲವಾಡಕ್ಕೆ ತಾಮ್ರದ ತಗಡು ಬಡಿಯಲಾಗಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಅಂತರಾಳದಲ್ಲಿ ನಂದಿ ಶಿಲ್ಪವಿದೆ. ಅಂತರಾಳದ ಬಾಗಿಲವಾಡ ಕೂಡ್ಯ ಸ್ತಂಭ, ಜಾಲಾಂಧ್ರಗಳ ಮತ್ತು ಮಕರ ತೋರಣಗಳಿವೆ. ದುಂಡನೆಯ ವೃತ್ತಾಕಾರದ ಕಂಬಗಳು ಹೊಯ್ಸಳ ಶೈಲಿಯಲ್ಲಿವೆ. ಕಂಬಗಳಿಗೆ ಬೋದಿಗೆಗಳಿವೆ. ಕಕ್ಷಾಸನದಲ್ಲಿ ಒಂದು ಶಾಸನವಿರಿಸಲಾಗಿದೆ. ನವರಂಗದಲ್ಲಿ ನಕ್ಷತ್ರಾಕಾರದ ಭುವನೇಶ್ವರಿ ಮತ್ತು ಪತ್ನಿಸಮೇತ ವಾಹನರೂಢರಾದ ಅಷ್ಟದಿಕ್ಪಾಲಕರ ಶಿಲ್ಪಗಳಿವೆ. ಮೂರು ಕಡೆ ಮುಖಮಂಟಪಗಳಿವೆ. ದ್ವಿಬಾಹು ಗಣಪತಿಯ ರೇಖಾ ಕೊರೆತವಿದೆ. ಇನ್ನೆರಡು ಶಿಲಾಶಾಸನಗಳು, ಶಿವಲಿಂಗ, ತ್ರುಟಿತ ಬಟ್ಟಲಿನಾಕಾರದ ಕಲ್ಲಿನ ಕೆತ್ತನೆಯಲ್ಲಿ ವ್ಯಾಯಾಮ ಮಾಡುತ್ತಿರುವ? ಕೆತ್ತನೆಗಳಿವೆ. ವಾದ್ಯ ನುಡಿಸುವವನ ಶಿಲ್ಪ, ತಬಲ ಬಾರಿಸುವವನ ಶಿಲ್ಪವಿದೆ.

ವಿಶಾಲವಾದ ಪ್ರಾಕಾರದೊಳಗಿದ್ದು ಗರ್ಭಗೃಹ, ಅಂತರಾಳ, ನವರಂಗ ಮತ್ತು ಅಷ್ಟಕೋನಾಕಾರದ ಸಭಾಮಂಟಪಗಳಿವೆ. ಎತ್ತರವಾದ ಅಧಿಷ್ಠಾನವಿದೆ. ಗರ್ಭಗೃಹದಲ್ಲಿ ಬಲಹರಿ ಪೀಠದ ಮೇಲೆ ಶಿವಲಿಂಗವಿದೆ. ಅಂತರಾಳದ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದೆ. ನವರಂಗದ ನಡುವಣ ಛತ್ ಕಮಲಾಕಾರವಾಗಿದೆ. ನವರಂಗದ ಬಾಗಿಲವಾಡದಲ್ಲಿ ಮಕರ ತೋರಣ ಕೆತ್ತನೆಯಿದೆ. ತೆರೆದ ಸಭಾಮಂಟಪ ಕಕ್ಷಾಸನವನ್ನೊಳಗೊಂಡಿದೆ. ಕಂಬಗಳು ವೈವಿಧ್ಯಮಯವಾಗಿದೆ. ಗುಡಿಯ ಆವರಣದಲ್ಲಿ ಪ್ರಾಕಾರಕ್ಕೆ ಹೊಂದಿಕೊಂಡಂತೆ ಕಿರಿದಾದ ಈಶ್ವರ ಗುಡಿ ಹಾಗೂ ಕಳ್ಳನ ಗುಡಿಗಳಿದ್ದು ಒಂದರಲ್ಲಿ ಶಿವಲಿಂಗವಿದೆ. ಇನ್ನೊಂದರಲ್ಲಿ ವಿಷ್ಣು ಮತ್ತು ನಾಗೇಂದ್ರರ ಶಿಲ್ಪಗಳಿವೆ.[೨೫]

ಮಲ್ಲಿಕಾರ್ಜುನ ದೇವಾಲಯವು ಪೂರ್ವಾಭಿಮುಖವಾಗಿದೆ. ಗರ್ಭಗೃಹದ ಪ್ರವೇಶದ್ವಾರಕ್ಕೆ ತಾಮ್ರದ ತಗಡನ್ನು ಹೊದಿಸಿರುವುದರಿಂದ ಕೆತ್ತನೆಗಳ ಸ್ಪಷ್ಟತೆ ತಿಳಿಯುವುದಿಲ್ಲ. ಮಂಟಪಕ್ಕೆ ಉತ್ತರ ಮತ್ತು ದಕ್ಷಿಣದಲ್ಲಿ ಮುಖಮಂಟಪಗಳಿವೆ. ಅವುಗಳಲ್ಲಿ ಸುತ್ತಲೂ ಕಿರಿದಾದ ಕಂಬಗಳಿಂದ ಕೂಡಿದ ಕಕ್ಷಾಸನಗಳಿವೆ. ಪ್ರವೇಶದಲ್ಲಿ ಸೋಪಾನಗಳಿವೆ.[೨೬]

ಸ್ಥಳ: ಟಾಕಳಿ **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಈಶ್ವರಲಿಂಗ

ಸ್ಥಿತಿ: ಕನಿಷ್ಠ **ಕಾಲ:** ಸು.೧೧ನೆಯ ಶತಮಾನ

ಪೂರ್ವಾಭಿಮುಖವಾಗಿರುವ ಗರ್ಭಗೃಹ, ಅಂತರಾಳ, ತೆರೆದ ನವರಂಗವಿದೆ.

ಸ್ಥಳ: ಟಾಕಳಿ **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಈಶ್ವರಲಿಂಗ

ಸ್ಥಿತಿ: ಕನಿಷ್ಠ **ಕಾಲ:** ಸು.೧೦ನೆಯ ಶತಮಾನ

ಇನ್ನೊಂದು ಉತ್ತರಾಭಿಮುಖ ಈಶ್ವರ ದೇವಾಲಯ ತ್ರಿಕೂಟ ದೇವಾಲಯ, ಶಿವಲಿಂಗಗಳಿವೆ. ಬಾಗಿಲವಾಡಗಳು ತ್ರಿಶಾಖಾಲಂಕೃತವಾಗಿವೆ. ಲಲಾಟದಲ್ಲಿ ಗಜಲಕ್ಷ್ಮಿಗಳಿವೆ. ಇಲ್ಲಿನ ಪ್ರಾಂಗಣದಲ್ಲಿ ಆಸೀನ ಭೈರವ ಮತ್ತು ಭೈರವ ಶಿಲ್ಪಗಳಿವೆ.[೩೭]

ಸ್ಥಳ: ಧನೂರು **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಶಂಕರಲಿಂಗ

ಸ್ಥಿತಿ: ಕನಿಷ್ಠ **ಕಾಲ:** ಸು.೧೦ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯದ ಗರ್ಭಗೃಹ ಮಾತ್ರ ಉಳಿದಿದೆ. ಶಿವಲಿಂಗ, ವಿಷ್ಣು ಶಿಲ್ಪಗಳಿವೆ. ಸಭಾಮಂಟಪದಲ್ಲಿ ದ್ವಾರಪಾಲಕರು, ವೀರಗಲ್ಲು, ಗಣೇಶ, ನಾಗಶಿಲ್ಪಗಳಲ್ಲದೆ ದೇವಾಲಯದ ಅವಶೇಷಗಳು ಹರಡಿಕೊಂಡಿವೆ.[೩೮]

ಸ್ಥಳ: ನಂದರಗಿ **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಕಲ್ಲಾಲಿಂಗ

ಸ್ಥಿತಿ: ಕನಿಷ್ಠ **ಕಾಲ:** ಸು.೧೦ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯ ಸಂಪೂರ್ಣ ಹಾಳಾಗಿದೆ. ಗರ್ಭಗೃಹದಲ್ಲಿರುವ ಶಿವಲಿಂಗ ಅಂತರಾಳದಲ್ಲಿ ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಪ್ರವೇಶ ದ್ವಾರಕ್ಕೆ ಇಕ್ಕೆಲಗಳಲ್ಲಿ ತ್ರಿಶೂಲ–ಡಮರು–ಗದಾ ಹಿಡಿದುನಿಂತ ದ್ವಾರಪಾಲಕರು ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಅಂತರಾಳದ ಪ್ರವೇಶದಲ್ಲಿರುವ ಅರ್ಧಗಂಬಗಳ ಮೇಲೆ ಚಾಮರಧಾರಿಯರ ಶಿಲ್ಪಗಳಿವೆ. ಗೋಡೆಗೆ ವೀರಗಲ್ಲು, ನಾಗ, ನಂದಿ ಶಿಲ್ಪಗಳಿವೆ.[೩೯]

ಸ್ಥಳ: ಬಡದಾಳ **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಈಶ್ವರ

ಸ್ಥಿತಿ: ಕನಿಷ್ಠ **ಕಾಲ:** ಸು.೧೨ನೆಯ ಶತಮಾನ

ದಕ್ಷಿಣಾಭಿಮುಖವಾಗಿರುವ ದೇವಾಲಯವು ಎತ್ತರ ಜಗತಿಯ ಮೇಲೆ ರಚಿತವಾಗಿದೆ. ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದ ಪ್ರವೇಶ ದ್ವಾರಕ್ಕೆ ಪದ್ಮ, ಹೂವಿನ ಎಸಳಿನಲ್ಲಿ ಚಿಕ್ಕ ಚಿಕ್ಕ ಶಿಲ್ಪಗಳು, ಅರ್ಧಗಂಬ, ಸಿಂಹಯಾಳಿ, ವಜ್ರಾಕೃತಿ ಕೆತ್ತನೆಯಿವೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ, ಇಕ್ಕೆಲಲ್ಲಿ ತ್ರಿಶೂಲ–ಡಮರು–ಗದಾ ಹಿಡಿದ ದ್ವಾರಪಾಲಕರು ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಹೊಸ್ತಿಲಿಗೆ ಎರಡು ಆನೆಗಳು,

ಮುಂಭಾಗ ಚಂದ್ರಶಿಲೆಯನ್ನು ರಚಿಸಲಾಗಿದೆ. ಒಳಗೆ ಶಿವಲಿಂಗವಿದೆ. ಅಂತರಾಳದ ಪ್ರವೇಶದಲ್ಲಿ ಎರಡು ಅಲಂಕೃತ ಕಂಬಗಳ ಮೇಲೆ ಚಾಮರಧಾರಿಯರ ಶಿಲ್ಪಗಳಿವೆ. ಅಧಿಷ್ಠಾನದ ಮೇಲೆ ಉಪಾನ, ಜಗತಿ, ದ್ವಿಪಟ್ಟ ಕುಮುದ ಮತ್ತು ಪಟ್ಟಿಕೆಯ ಭಾಗಗಳಿವೆ. ವೇಸರ ಮತ್ತು ದ್ರಾವಿಡ ಶಿಖರ ಪಟ್ಟಿಕೆಗಳು, ಕಪೋತ ಭಾಗದಲ್ಲಿ ಹಂಸ ಬಂಧ, ನೃತ್ಯ-ಸಂಗೀತಗಾರರ ಶಿಲ್ಪಗಳಿವೆ.[೮೦]

ಸ್ಥಳ: ಬೆಣ್ಣೆಸೂಗೂರು	**ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ	**ದೇವಾಲಯ:** ಶಿವ ದೇವಾಲಯ
ಸ್ಥಿತಿ: ಕನಿಷ್ಠ	**ಕಾಲ:** ಸು.೧೨ನೆಯ ಶತಮಾನ

ಪೂರ್ವಾಭೀಮುಖವಾಗಿರುವ ದೇವಾಲಯದ ಸಭಾಮಂಟಪ ಮತ್ತು ಮುಖಮಂಟಪ ಮಾತ್ರ ಉಳಿದಿವೆ. ಸಭಾಮಂಟಪದಲ್ಲಿ ಮೂರು ಅಡಿ ಎತ್ತರದ ತ್ರಿಶೂಲ-ಡಮರು-ಖಡ್ಗ-ಕಪಾಲ ಹಿಡಿದ ಕುಳಿತಿರುವ ಭೈರವ ಮತ್ತು ಭೈರವಿ ಶಿಲ್ಪಗಳಿವೆ.[೮೧]

ಸ್ಥಳ: ಭೋಗನಹಳ್ಳಿ	**ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ	**ದೇವಾಲಯ:** ಭೋಗಲಿಂಗೇಶ್ವರ
ಸ್ಥಿತಿ: ಕನಿಷ್ಠ	**ಕಾಲ:** ಸು.೧೨ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯ ಎತ್ತರ ಜಗತಿಯ ಮೇಲೆ ನಿರ್ಮಾಣವಾದ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿವೆ. ಶಿವಲಿಂಗ ಗರ್ಭಗುಡಿಯಲ್ಲಿದೆ. ಎರಡು ದೇವಕೋಷ್ಠಕಗಳಿದ್ದು ಒಂದರಲ್ಲಿ ಪದ್ಮಾಸನ, ಯೋಗಮುದ್ರೆಯಲ್ಲಿ ಕುಳಿತ ಭಕ್ತ, ಇನ್ನೊಂದರಲ್ಲಿ ಸುಮಾರು ಮೂರು ಅಡಿ ಎತ್ತರದ ವಿಷ್ಣು ಶಿಲ್ಪವಿದೆ. ಮುಂಭಾಗ ಗಜಲಕ್ಷ್ಮಿ, ನಾಗ, ಪಾಣಿ ಪೀಠ ಮತ್ತು ಭಕ್ತರ ಶಿಲ್ಪಗಳಿವೆ.[೮೨]

ಸ್ಥಳ: ಮದರಾ(ಬಿ)	**ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ	**ದೇವಾಲಯ:** ಶಂಕರಲಿಂಗ
ಸ್ಥಿತಿ: ಕನಿಷ್ಠ	**ಕಾಲ:** ಸು.೧೨ನೆಯ ಶತಮಾನ

ಪೂರ್ವಾಭಿಮುಖವಾಗಿರುವ ಇದು ತ್ರಿಕೂಟ ದೇವಾಲಯವಿದೆ. ಮೂರು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿವೆ. ಪಶ್ಚಿಮ ಗರ್ಭಗೃಹಕ್ಕೆ ಪದ್ಮ, ಅರ್ಧಗಂಬ, ಮೇಲ್ಭಾಗ ಪಟ್ಟಿಕೆ, ರೇಖಾನಾಗರ ಶಿಖರ ಪಟ್ಟಿಕೆಗಳ ನಡುವೆ ಕಾಲೆತ್ತಿ ನಿಂತಿರುವ ಸಿಂಹ ಇಕ್ಕೆಲಗಳಲ್ಲಿ ತ್ರಿಶೂಲ-ಡಮರು-ಗದಾ ಹಿಡಿದು ನಿಂತಿರುವ ದ್ವಾರಪಾಲಕರು ಮತ್ತು ಚಾಮರಧಾರಿಗಳ ಶಿಲ್ಪಗಳಿವೆ. ದಕ್ಷಿಣ ಗರ್ಭಗೃಹದ ಪ್ರವೇಶ ದ್ವಾರಕ್ಕೆ ಅರ್ಧಗಂಬ, ಮೇಲ್ಭಾಗ ಪಟ್ಟಿಕೆ, ರೇಖಾನಾಗರ ಶಿಖರ ಪಟ್ಟಿಕೆಗಳ ನಡುವೆ ಕಾಲೆತ್ತಿ ನಿಂತಿರುವ ಸಿಂಹಗಳು ಇಕ್ಕೆಲಗಳಲ್ಲಿ ತ್ರಿಶೂಲ-ಡಮರು-ಗದಾ ಹಿಡಿದು ನಿಂತಿರುವ ದ್ವಾರಪಾಲಕರು ಮತ್ತು ಚಾಮರಧಾರಿಗಳ ಶಿಲ್ಪಗಳಿವೆ. ದಕ್ಷಿಣ ಗರ್ಭಗೃಹದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಅದರೊಂದಿಗೆ ಪದ್ಮಪೀಠದ ಮೇಲೆ ಸುಮಾರು ನಾಲ್ಕು

ಅಡಿ ಎತ್ತರದ ವಿಷ್ಣುಶಿಲ್ಪವಿದೆ. ಕೈಗಳಲ್ಲಿ ಶಂಖ-ಚಕ್ರ, ವರದ ಮತ್ತು ಗದಾ ಹಿಡಿದು ಸಮಭಂಗಿಯಲ್ಲಿದೆ. ಇಕ್ಕೆಲಗಳಲ್ಲಿ ಶ್ರೀದೇವಿ-ಭೂದೇವಿಯರಿದ್ದಾರೆ.[೪೩]

ಸ್ಥಳ: ಮಾಶಾಳ　　**ಶೈಲಿ:** ಕಲ್ಯಾಣ ಚಾಲುಕ್ಯ,

ಶಿಲೆ: ಕಪ್ಪುಶಿಲೆ　　**ದೇವಾಲಯ:** ಶಿವಲಿಂಗೇಶ್ವರ

ಸ್ಥಿತಿ: ಕನಿಷ್ಠ　　**ಕಾಲ:** ಸು.೧೨ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪ ಗಳಿಂದ ಕೂಡಿದೆ. ಗರ್ಭಗೃಹದ ಪ್ರವೇಶ ದ್ವಾರಕ್ಕೆ ಪದ್ಮ, ಅರ್ಧಗಂಬ, ವಜ್ರಾಕಾರ ಕೆತ್ತನೆ, ಲಲಾಟದಲ್ಲಿ ಗಜಲಕ್ಷ್ಮಿ, ಮೇಲ್ಭಾಗ ಮುಂಚಾಚಿದ ಪಟ್ಟಿಕೆಗಳಿವೆ. ಒಳಗೆ ಸುಮಾರು ಮೂರು ಅಡಿ ಎತ್ತರದ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದಲ್ಲಿ ಭುವನೇಶ್ವರಿ, ಕಕ್ಷಾಸನವಿದೆ. ಸಭಾಮಂಟಪಕ್ಕೆ ಹೊಂದಿಕೊಂಡು ಪೂರ್ವ, ದಕ್ಷಿಣ ಮತ್ತು ಉತ್ತರ ಭಾಗಗಳಲ್ಲಿ ಮುಖಮಂಟಪಗಳಿವೆ.[೪೪]

ಸ್ಥಳ: ಮಾಶಾಳ　　**ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ　　**ದೇವಾಲಯ:** ಮಹಾದೇವ ದೇವಾಲಯ

ಸ್ಥಿತಿ: ಕನಿಷ್ಠ　　**ಕಾಲ:** ಸು.೧೨ನೆಯ ಶತಮಾನ

ಉತ್ತರಾಭಿಮುಖವಾಗಿರುವ ತ್ರಿಕೂಟ ದೇವಾಲಯದಲ್ಲಿ ಎರಡು ಗರ್ಭಗೃಹ ಮಾತ್ರ ಉಳಿದಿದ್ದು ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳಿವೆ. ಪೂರ್ವ ಗರ್ಭಗೃಹದ ಪ್ರವೇಶದ್ವಾರಕ್ಕೆ ಪದ್ಮ, ಅರ್ಧಗಂಬ, ಲಲಾಟಬಿಂಬದಲ್ಲಿ ಗಜಲಕ್ಷ್ಮಿ, ಶೈವ ದ್ವಾರಪಾಲಕರ ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಅಂತರಾಳದಲ್ಲಿ ನಂದಿಶಿಲ್ಪ, ಗೋಡೆಗೆ ಸಪ್ತಮಾತೃಕೆ ಶಿಲ್ಪವಿದೆ.

ಪಶ್ಚಿಮ ಗರ್ಭಗೃಹದ ಪ್ರವೇಶ ದ್ವಾರದಲ್ಲಿ ವೈಷ್ಣವ ದ್ವಾರಪಾಲಕರ ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ದಕ್ಷಿಣ ಗರ್ಭಗುಡಿ ಹಾಳಾಗಿದೆ. ಮುಖಮಂಟಪದ ಇಕ್ಕೆಲಗಳಲ್ಲಿ ಕಕ್ಷಾಸನಗಳಿವೆ.[೪೫]

ಸ್ಥಳ: ಮಾಶಾಳ　　**ಶೈಲಿ:** ಕಲ್ಯಾಣ ಚಾಲುಕ್ಯ,

ಶಿಲೆ: ಕಪ್ಪುಶಿಲೆ　　**ದೇವಾಲಯ:** ಮಲ್ಲಿಕಾರ್ಜುನ

ಸ್ಥಿತಿ: ಕನಿಷ್ಠ　　**ಕಾಲ:** ಸು.೧೨ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯವು ಪ್ರಸ್ತುತ ಜೀರ್ಣಗೊಂಡಿದೆ. ಸಭಾಮಂಟಪ ಮಾತ್ರ ಉಳಿದಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಸಭಾಮಂಟಪದಲ್ಲಿ ನಂದಿಶಿಲ್ಪವಿದೆ.[೪೬]

ಸ್ಥಳ: ಮಾಶಾಳ　　**ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ　　**ದೇವಾಲಯ:** ಈಶ್ವರ

ಸ್ಥಿತಿ: ಕನಿಷ್ಠ　　**ಕಾಲ:** ಸು.೧೨ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿಂದ ಕೂಡಿದೆ. ಗರ್ಭಗುಡಿ ಬಾಗಿಲವಾಡ ತ್ರಿಶಾಖಾಲಂಕೃತವಾಗಿದೆ. ಕೂಡ್ಯಸ್ತಂಬದ ಇಕ್ಕೆಲಗಳಲ್ಲಿ

ಹೂವಿನ ದಳ ಮತ್ತು ಚತುರ್ದಳದ ಕೆತ್ತನೆಯಿದೆ. ಶೈವ ದ್ವಾರಪಾಲಕರ ಶಿಲ್ಪ ಮತ್ತು ಚಾಮರ ಹಿಡಿದು ನಿಂತಿರುವ ಶಿಲ್ಪಗಳ ಕೆತ್ತನೆಯಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಕಕ್ಷಾಸನವಿದೆ. ಸಪ್ತಮಾತೃಕೆ ಹಾಗೂ ಶಿಲಾಶಾಸನಗಳಿವೆ.

ಗರ್ಭಗೃಹದ ಪ್ರವೇಶದ್ವಾರಕ್ಕೆ ಪದ್ಮ, ಅರ್ಧಗಂಬ, ವಜ್ರಾಕಾರ ಕೆತ್ತನೆ, ಲಲಾಟದಲ್ಲಿ ಗಜಲಕ್ಷ್ಮಿ, ಮೇಲ್ಭಾಗ ಮುಂಚಾಚಿದ ಪಟ್ಟಿಕೆ ಮತ್ತು ರೇಖಾನಾಗರ ಶಿಖರ ಪಟ್ಟಿಕೆಗಳಿವೆ. ಇಕ್ಕೆಲಗಳಲ್ಲಿ ತ್ರಿಶೂಲ-ಡಮರು-ಗದಾ ಹಿಡಿದು ನಿಂತಿರುವ ದ್ವಾರಪಾಲಕರ ಮತ್ತು ಚಾಮರಧಾರಿಯರ ಶಿಲ್ಪಗಳಿವೆ.[೪೭]

ಸ್ಥಳ: ಮಾಶಾಳ
ಶೈಲಿ: ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ
ದೇವಾಲಯ: ಮಹಾದೇವಾಲಯ
ಸ್ಥಿತಿ: ಕನಿಷ್ಠ
ಕಾಲ: ಸು.೧೨ನೆಯ ಶತಮಾನ

ಪೂರ್ವಾಭಿಮುಖವಾಗಿರುವ ತ್ರಿಕೂಟ ದೇವಾಲಯದಲ್ಲಿ ಮೂರು ಗರ್ಭಗೃಹಗಳು, ಅಂತರಾಳಗಳು, ಸಭಾಮಂಟಪ ಮತ್ತು ಮುಖಮಂಟಪಗಳಿವೆ. ಒಂದು ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಉಳಿದೆರಡು ಗರ್ಭಗುಡಿ ಖಾಲಿಯಿವೆ. ಶಿವಲಿಂಗವಿರುವ ಗರ್ಭಗುಡಿಗೆ ಶೈವ ದ್ವಾರಪಾಲಕರ ಕೆತ್ತನೆಯಿದೆ. ಎದುರಿಗೆ ಬೃಹತ್ ನಂದಿ ಶಿಲ್ಪವಿದೆ. ಉಳಿದ ಗರ್ಭಗುಡಿಯಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ. ನವರಂಗದಲ್ಲಿ ಭುವನೇಶ್ವರಿ ಕೆತ್ತನೆಯಿದೆ. ಕಂಬಗಳು ಚೌಕ, ಅಷ್ಟಕೋನಾಕೃತಿ, ವೃತ್ತಾಕಾರ ಮತ್ತು ತಟ್ಟೆಯಾಕಾರದ ಕೆತ್ತನೆ ಮತ್ತು ಬೋದಿಗೆಗಳಿವೆ.

ಪಶ್ಚಿಮ ಗರ್ಭಗೃಹದ ಪ್ರವೇಶದ್ವಾರಕ್ಕೆ ಪದ್ಮ, ಅರ್ಧಗಂಬ, ವಜ್ರಾಕಾರ ಕೆತ್ತನೆ, ಲಲಾಟದಲ್ಲಿ ಗಜಲಕ್ಷ್ಮಿ, ಇಕ್ಕೆಲಗಳಲ್ಲಿ ಶಂಖ-ಚಕ್ರ-ಗದಾ ಹಿಡಿದು ನಿಂತಿರುವ ದ್ವಾರಪಾಲಕರ ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಗರ್ಭಗುಡಿ ಖಾಲಿಯಿದೆ. ದಕ್ಷಿಣ ಗರ್ಭಗೃಹದ ಪ್ರವೇಶದ್ವಾರಕ್ಕೆ ಪದ್ಮ, ಅರ್ಧಗಂಬ, ವಜ್ರಾಕಾರ ಕೆತ್ತನೆಯಿವೆ. ಒಳಗೆ ಶಿವಲಿಂಗವಿದೆ. ಇಕ್ಕೆಲಗಳಲ್ಲಿ ತ್ರಿಶೂಲ-ಡಮರು-ಗದಾ ಹಿಡಿದು ನಿಂತಿರುವ ದ್ವಾರಪಾಲಕರ ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಉತ್ತರ ಗರ್ಭಗೃಹದ ಪ್ರವೇಶದ್ವಾರ ಇವುಗಳ ಮಾದರಿಯಲ್ಲಿವೆ. ಒಳಗೆ ಯಾವುದೇ ಶಿಲ್ಪವಿಲ್ಲ.[೪೮]

ಸ್ಥಳ: ಚೂಡಾಪುರ
ಶೈಲಿ: ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ
ದೇವಾಲಯ: ಶಿವಲಿಂಗ
ಸ್ಥಿತಿ: ಕನಿಷ್ಠ
ಕಾಲ: ಸು.೧೦ನೆಯ ಶತಮಾನ

ಪ್ರವೇಶದ್ವಾರ ಮತ್ತು ಭಿತ್ತಿ ಈಗಿನ ಕಟ್ಟಡದಂತಿವೆ. ಒಳಪ್ರಾಂಗಣದಲ್ಲಿ ಶಿವಲಿಂಗ ಮತ್ತು ನಂದಿಶಿಲ್ಪವಿದೆ. ಪ್ರಸ್ತುತ ಅವಸಾನಗೊಂಡಿದೆ.

ಸ್ಥಳ: ಆಳಂದ ಶೈಲಿ: ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ ದೇವಾಲಯ: ಈಶ್ವರಲಿಂಗ

ಸ್ಥಿತಿ: ಕನಿಷ್ಠ ಕಾಲ: ಸು.೧೧ನೆಯ ಶತಮಾನ

ಗರ್ಭಗುಡಿ ಮಾತ್ರ ಉಳಿದಿದೆ. ಗರ್ಭಗುಡಿಯಲ್ಲಿ ಮೂರು ಶಿವಲಿಂಗಗಳಿವೆ. ಗುಡಿಯ ಪ್ರಾಂಗಣದಲ್ಲಿ ಒಂದು ಶಿವಲಿಂಗವಿದೆ. ಕಪ್ಪುಶಿಲೆಯ ದ್ವಿಪಾದುಕೆಗಳಿವೆ. ಆಳಂದದ ಸುತ್ತ-ಮುತ್ತಲೂ ಬಿದ್ದ ಅವಶೇಷಗಳು ಕಲ್ಯಾಣ ಚಾಲುಕ್ಯರ ಕಾಲದವು. ಊರಲ್ಲಿ ೧೬ನೆಯ ಶತಮಾನದ ಕೋಟೆ ಮತ್ತು ಮಸೀದಿಯಿದೆ.

ಸ್ಥಳ: ಕವಲಗಾ ಶೈಲಿ: ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ ದೇವಾಲಯ: ಭೋಗಲಿಂಗೇಶ್ವರ

ಸ್ಥಿತಿ: ಕನಿಷ್ಠ ಕಾಲ: ಸು.೧೦ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯ ಎತ್ತರದ ಜಗತಿಯ ಮೇಲೆ ಗರ್ಭಗೃಹ, ಅಂತರಾಳಗಳು ಮಾತ್ರ ಉಳಿದಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯಿದೆ. ದ್ವಾರಪಾಲಕರು ಮತ್ತು ಚಾಮರಧಾರಿಯರ ಶಿಲ್ಪಗಳಿವೆ.

ಅಂತರಾಳದ ಪ್ರವೇಶದಲ್ಲಿ ಎರಡು ಚೌಕಾಕಾರದ ಕಂಬಗಳ ಮೇಲೆ ಚಾಮರಧಾರಿಯರ ಶಿಲ್ಪಗಳಿವೆ. ಮೇಲ್ಭಾಗದ ಗಜ ತೋರಣವನ್ನು ನಂತರ ಸೇರಿಸಲಾಗಿದೆ. ಅದರಲ್ಲಿ ಬ್ರಹ್ಮ, ವಿಷ್ಣು, ಮಧ್ಯ ನಟರಾಜನ ಶಿಲ್ಪಗಳಿವೆ. ಹೊರಗಡೆ ಜೀರ್ಣಗೊಂಡ ಸಭಾಮಂಟಪವಿದೆ.[೪೯]

ಸ್ಥಳ: ಕೋತಾಜಂಬಗಿ ಶೈಲಿ: ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ ದೇವಾಲಯ: ಮಹಾದೇವ

ಸ್ಥಿತಿ: ಕನಿಷ್ಠ ಕಾಲ: ಸು.೧೦ನೆಯ ಶತಮಾನ

ಉತ್ತರಾಭಿಮುಖವಾಗಿರುವ ಗುಡಿಯ ಗರ್ಭಗೃಹ ಮತ್ತು ಸಭಾಮಂಟಪ ಮಾತ್ರ ಉಳಿದಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ತೆರೆದ ಸಭಾಮಂಟಪದಲ್ಲಿ ಎರಡು ಶಿವಲಿಂಗಗಳಿವೆ. ಉಳಿದ ಭಾಗ ಜೀರ್ಣಗೊಂಡಿದೆ.

ಸ್ಥಳ: ಖಜೂರಿ ಶೈಲಿ: ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ ದೇವಾಲಯ: ಮಲ್ಲಿಕಾರ್ಜುನ

ಸ್ಥಿತಿ: ಕನಿಷ್ಠ ಕಾಲ: ಸು.೧೦ನೆಯ ಶತಮಾನ

ಗರ್ಭಗುಡಿಯಿರುವ ದೇವಾಲಯದ ಲಲಾಟದ ಮೇಲೆ ಹಿಂದಿ ಭಾಷೆಯ ಅಪ್ರಕಟಿತ ಶಾಸನವಿದೆ? ಗುಡಿಯಲ್ಲಿ ಶಿವಲಿಂಗವಿದೆ. ಹೊರಭಾಗದಲ್ಲಿ ತ್ರುಟಿತ ನಂದಿ ಮತ್ತು ವಿಷ್ಣುವಿನ ಮೂರ್ತಿಯಿದೆ.

ಮಾಹೇಶ್ವರ ಗುಡಿಯ ಅಂತರಾಳದ ಇಕ್ಕೆಲಗಳಲ್ಲಿರುವ ಎರಡು ಕಂಬಗಳ ಮೇಲಿರುವ ೧೩೮೦ರ ಶಾಸನವು ಬ್ರಹ್ಮೇಶ್ವರ ದೇವರಿಗೆ ಮಾಯಣ್ಣನು ದತ್ತಿ ಬಿಟ್ಟ ವಿಷಯವನ್ನು ಹಾಗೂ ಅವನ ಮಗ ಗಂಗಾಧರನ ಕಾವ್ಯ ಪ್ರತಿಭೆಯನ್ನು ಪ್ರಶಂಸಿಸುತ್ತದೆ.

ಊರ ಮಧ್ಯೆ ಇರುವ ಮಾಹೇಶ್ವರ ಗುಡಿಯೇ ಶಾಸನೋಕ್ತ ಬ್ರಹ್ಮೇಶ್ವರ ದೇವಾಲಯವಾಗಿದ್ದು, ಇಂದು ಅದರ ನವರಂಗ ಭಾಗ ಪೂರ್ಣ ನಶಿಸಿ ಹೋಗಿದ್ದರೂ ಉಳಿದಿರುವ ಗರ್ಭಗೃಹ ಹಾಗೂ ಅಂತರಾಳಗಳ ಮೇಲಿರುವ ಸುಂದರ ಉಬ್ಬು ಕೆತ್ತನೆಗಳಿಂದಾಗಿ ಗಮನಾರ್ಹವಾಗಿದೆ. ಎತ್ತರವಾದ ಜಗಲಿಯ ಮೇಲೆ ಪೂರ್ವಾಭಿಮುಖವಾಗಿ ನಿಂತಿರುವ ಈ ದೇವಾಲಯದ ಗರ್ಭಗೃಹದಲ್ಲಿ ಬೃಹತ್ತಾದ ಶಿವಲಿಂಗವಿದ್ದು ಇದರ ಬಾಗಿಲವಾಡವು ಚತುರ್ ಶಾಖಾಲಂಕೃತವಾಗಿದೆ. ಅಂತರಾಳದಲ್ಲಿ ಆಕರ್ಷಕವಾದ ಚಂದ್ರಶಿಲೆಯಿದೆ. ತೆರೆದ ಅಂತರಾಳ ಹಾಳಾಗಿದೆ. ಭಿತ್ತಿಯನ್ನು ಅಲಂಕರಿಸಿರುವ ಉಬ್ಬುಶಿಲ್ಪಗಳು, ಗರ್ಭಗೃಹದ ಹೊರ ಭಿತ್ತಿಯಲ್ಲಿ ಮೂರು ದಿಕ್ಕಲ್ಲೂ ಮೂರು ದೇವಕೋಷ್ಠಕಗಳಿದ್ದು ಅವುಗಳಲ್ಲಿ ಭದ್ರಕಾಳಿ ಹಾಗೂ ಭೈರವನ ಉಗ್ರ ಶಿಲ್ಪವಿದ್ದು, ಇನ್ನೊಂದರಲ್ಲಿ ಗಣಪತಿಯೊಂದಿಗೆ ಸಿದ್ಧಿ ಬುದ್ಧಿಯರ ಶಿಲ್ಪಗಳಿವೆ. ಭಿತ್ತಿಯನ್ನು ಹಂಸಾವಳಿ, ಕಿರುಮಂಟಪ, ಕಿರುಸ್ತಂಭ ಹಾಗೂ ಹೂಬಳ್ಳಿಗಳಿಂದ ಅಲಂಕರಿಸಲಾಗಿದ್ದು, ಭಿತ್ತಿಯ ತುಂಬ ಭೈರವ, ಭೈರವಿ, ಗಣಪತಿ, ವಿವಿಧ ವಾದ್ಯ ನುಡಿಸುತ್ತಿರುವ ಸುಂದರಿಯರು, ರತಿ–ಮನ್ಮಥ ಮುಂತಾದ ಕೆತ್ತನೆಗಳಿವೆ. ಕಮಲ ಫಲಕವನ್ನು ಎಡಗೈಲಿ ಮೇಲೆತ್ತಿ ಹಿಡಿದು ಬಲಗೈಯಲ್ಲಿರುವ ಲೇಖನಿಯಿಂದ ಕಾವ್ಯ ಬರೆಯಲು ವೈಯ್ಯಾರದಿಂದ ನಿಂತಿರುವ ಸುಂದರಿಯ ಶಿಲ್ಪವಿದೆ.[೫೦]

ದೇವಾಲಯದ ಅಂತರಾಳದ ಎರಡು ಮಗ್ಗುಲಗಳಲ್ಲಿ ಎರಡು ಗೂಡುಗಳಿದ್ದವು. ಹೊರಗೋಡೆ ಹಿಂಸರಿತ–ಮುಂಸರಿತಗಳಿಂದ ಕೂಡಿದೆ. ಅಧಿಷ್ಠಾನವು ಉಪಾನ, ಜಗತಿ, ತ್ರಿಪಟ್ಟಕುಮುದ, ಅಲಂಕೃತ ಪಟ್ಟಿಕೆಗಳಿಂದ ಕೂಡಿದೆ. ಗೋಡೆಯ ಮೇಲೆ ಅರ್ಧಗಂಬ, ಅವುಗಳ ಮೇಲೆ ತೋರಣವುಳ್ಳ ಕೋಷ್ಠಕದಲ್ಲಿ ಚಿಕ್ಕ ಚಿಕ್ಕ ಶಿಲ್ಪಗಳಿವೆ. ಹುಲಿಬೇಟೆ ವೀರಗಲ್ಲಿದೆ. ಅಂತರಾಳ ಮತ್ತು ಗರ್ಭಗೃಹದ ಪ್ರವೇಶದಲ್ಲಿರುವ ಕಂಬಗಳ ಮೇಲೆ ಎರಡು ಶಾಸನಗಳಿವೆ. ಮಕರತೋರಣದ ಅವಶೇಷಗಳಿವೆ.[೫೧]

ಸ್ಥಳ: ಚಿಂಚೋಳಿ(ಬಿ)	ಶೈಲಿ: ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ,	ದೇವಾಲಯ: ಮಲ್ಲಿಕಾರ್ಜುನ
ಸ್ಥಿತಿ: ಕನಿಷ್ಠ	ಕಾಲ: ಸು.೧೨ನೆಯ ಶತಮಾನ

ದಕ್ಷಿಣಾಭಿಮುಖವಾಗಿರುವ ತ್ರಿಕೂಟ ದೇವಾಲಯದ ಮೂರು ಗರ್ಭಗುಡಿಗಳು, ಅಂತರಾಳಗಳು ಮತ್ತು ಸಭಾಮಂಟಪಗಳಿಂದ ಕೂಡಿದೆ. ಉತ್ತರ ಗರ್ಭಗೃಹದ ಪ್ರವೇಶದ್ವಾರಕ್ಕೆ ಪದ್ಮ, ಅರ್ಧಗಂಬ, ವಜ್ರಾಕಾರ ಕೆತ್ತನೆ, ಲಲಾಟಬಿಂಬ ಹಾಳಾಗಿದ್ದು, ಮೇಲ್ಭಾಗ ಪಟ್ಟಿಕೆ, ಇಕ್ಕೆಲಗಳಲ್ಲಿ ತ್ರಿಶೂಲ–ಡಮರು– ಗದಾ, ತ್ರಿಶೂಲ–ನಾಗ–ಗದಾ, ಹಿಡಿದು ನಿಂತಿರುವ ದ್ವಾರಪಾಲಕರು ಮತ್ತು

ಚಾಮರಧಾರಿಯರ ಶಿಲ್ಪಗಳಿವೆ. ಒಳಗೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಪೂರ್ವ ಮತ್ತು ಪಶ್ಚಿಮ ಗರ್ಭಗೃಹಗಳ ಪ್ರವೇಶದ್ವಾರಗಳೂ ಇದೇ ಮಾದರಿಯಲ್ಲಿವೆ. ಎಲ್ಲ ಗರ್ಭಗೃಹಗಳ ಮುಂಭಾಗ ಪ್ರವೇಶದಲ್ಲಿ ಎರಡು ಕಂಬಗಳಿಂದ ಕೂಡಿದ ತೆರದ ಅಂತರಾಳಗಳಿವೆ. ಸಭಾಮಂಟಪದಲ್ಲಿ ಪದ್ಮ ಭುವನೇಶ್ವರಿ, ಮುಂಭಾಗ ಕಿರಿದಾದ ಕಂಬಗಳಿಂದ ಕೂಡಿದ ಕಕ್ಷಾಸನವಿದೆ.[೨೨]

ಸ್ಥಳ: ಝುಳಕಿ(ಬಿ) **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ, **ದೇವಾಲಯ:** ಮಲ್ಲಿಕಾರ್ಜುನ

ಸ್ಥಿತಿ: ಕನಿಷ್ಠ **ಕಾಲ:** ಸು.೧೨ನೆಯ ಶತಮಾನ

ಗರ್ಭಗುಡಿ ಮತ್ತು ನವರಂಗ ಉಳಿದಿದೆ. ಗುಡಿಯ ಎದುರಿಗೆ ತ್ರುಟಿತ ಕಪ್ಪುಶಿಲೆಯ ಪದ್ಮಾಸೀನ ಶಿಲ್ಪವಿದೆ. ದೇವಾಲಯದ ಒಳಭಾಗದ ಅಧಿಷ್ಠಾನದ ಭಾಗದಲ್ಲಿ ತ್ರುಟಿತ ಸ್ಥಾನಿಕ ವಿಷ್ಣು ಶಿಲ್ಪ ದ್ವಿಬಾಹುವಾಗಿದೆ. ಬಲಕ್ಕೆ ಅಭಯಹಸ್ತದಲ್ಲಿ ಪದ್ಮವಿದೆ. ಎಡಕ್ಕೆ ಗದೆಯಿದೆ. ಕಿರೀಟ, ಕೊರಳಿನಹಾರ, ಕೈಗಡಗ, ಯಜ್ಞೋಪವೀತ, ಸೊಂಟಪಟ್ಟಿ, ಇಳಿಬಟ್ಟೆ, ಕಾಲ್ಗಡಗ ಧರಿಸಿದೆ. ಏಳು ಹೆಡೆಯ ನಾಗಶಿಲ್ಪ ಮತ್ತು ವೀರಗಲ್ಲಿನ ತ್ರುಟಿತ ಲಲಾಟ, ಗಜಲಕ್ಷ್ಮಿ ಲಲಾಟ, ತ್ರುಟಿತ? ಶಿಲ್ಪಗಳಿವೆ. ನವರಂಗ ಭಾಗದಲ್ಲಿ ಭುವನೇಶ್ವರಿಯಿದೆ. ಗರ್ಭಗುಡಿಯಲ್ಲಿ ಮಲ್ಲಿಕಾರ್ಜುನನ ಮೂರ್ತಿಯಿದೆ. ಇಲ್ಲಿ ಒಂದು ಅಪ್ರಕಟಿತ ಶಾಸನವಿದೆ.

ಸ್ಥಳ: ತೆಲ್ಲೂರು **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ರಾಮಲಿಂಗ

ಸ್ಥಿತಿ: ಕನಿಷ್ಠ **ಕಾಲ:** ಸು.೧೨ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯದ ಗರ್ಭಗೃಹ ಮತ್ತು ಅಂತರಾಳ ಮಾತ್ರ ಉಳಿದಿವೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ದೇವಾಲಯದ ಮುಂಭಾಗದಲ್ಲಿ ಭೈರವ, ನಂದಿ, ನಾಗ ಶಿಲ್ಪಗಳಿವೆ.[೨೩]

ಸ್ಥಳ: ದರ್ಗಾಸಿರೂರ **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಭೋಗೇಶ್ವರ

ಸ್ಥಿತಿ: ಕನಿಷ್ಠ **ಕಾಲ:** ಸು.೧೦ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯ ಎತ್ತರದ ಜಗತಿಯ ಮೇಲೆ ನಿರ್ಮಾಣವಾಗಿದೆ. ಗರ್ಭಗುಡಿ ಮತ್ತು ಅಂತರಾಳಗಳು ಮಾತ್ರ ಉಳಿದಿದೆ. ಗರ್ಭಗೃಹದ ಪ್ರವೇಶದ್ವಾರಕ್ಕೆ ಅರ್ಧಗಂಬ, ಸಿಂಹಯಾಳಿ, ವಜ್ರಾಕಾರ ಕೆತ್ತನೆ, ಲಲಾಟದಲ್ಲಿ ಗಣೇಶ ಮತ್ತು ಮೇಲ್ಭಾಗದಲ್ಲಿ ಶಿವಲಿಂಗವಿದೆ. ಅಂತರಾಳದ ಪ್ರವೇಶಕ್ಕೆ ಕೂಡ್ಯಸ್ತಂಭ, ಇಕ್ಕೆಲಗಳಲ್ಲಿ ಪದ್ಮ ಮತ್ತು ಚಾಮರಧಾರಿಯರ ಶಿಲ್ಪಗಳಿವೆ.

ಅಂತರಾಳದ ಇಕ್ಕೆಲಗಳಲ್ಲಿ ದೇವಕೋಷ್ಠಕಗಳಿವೆ. ಪ್ರಾಚೀನ ಸಭಾಮಂಟಪ ಸಂಪೂರ್ಣವಾಗಿ ಹಾಳಾಗಿದ್ದು ಇತ್ತೀಚೆಗೆ ಹೊಸದಾಗಿ ನಿರ್ಮಿಸಲಾಗಿದೆ. ಕಪೋತ ಭಾಗದಲ್ಲಿ ಮುಂಚಾಚಿದ ಪಟ್ಟಿಕೆಯಿದೆ.[೫೪]

ಸ್ಥಳ: ಧುತ್ತರಗಾಂವ ಶಿಲೆ: ಕಪ್ಪುಶಿಲೆ

ಶಿಲೆ: ಕಪ್ಪುಶಿಲೆ ದೇವಾಲಯ: ಈಶ್ವರ

ಸ್ಥಿತಿ: ಕನಿಷ್ಠ ಕಾಲ: ಸು.೧೧ನೆಯ ಶತಮಾನ

ಪಶ್ಚಿಮಾಭಿಮುಖವಾಗಿರುವ ದೇವಾಲಯದ ಗರ್ಭಗುಡಿ, ಅಂತರಾಳ ಮತ್ತು ನವರಂಗ ಮಾತ್ರ ಉಳಿದಿವೆ. ಗರ್ಭಗುಡಿಯ ಪ್ರವೇಶದ್ವಾರ ಪದ್ಮ, ಅರ್ಧಗಂಬ, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಹೊಸ್ತಿಲಲ್ಲಿ ಪದ್ಮದ ಕೆತ್ತನೆಯಿದೆ. ಶೈವ ದ್ವಾರಪಾಲಕರ ಶಿಲ್ಪಗಳಿವೆ. ನವರಂಗದಲ್ಲಿ ನಂದಿಶಿಲ್ಪವಿದೆ.

ಸಭಾಮಂಟಪದ ಮಧ್ಯದ ಕಂಬಗಳು ಕೆಳಗೆ ಮೇಲೆ ಚೌಕ ಮಧ್ಯ ವೃತ್ತಾಕಾರ–ಅಷ್ಟಮುಖ–ವೃತ್ತಾಕಾರ, ಮೇಲಿನ ಚೌಕು ಮುಖಗಳಲ್ಲಿ ಕೀರ್ತಿಮುಖ, ಹಾರ, ಮೇಲ್ಭಾಗ ವೃತ್ತಾಕಾರದ ಮುಚ್ಚಳ, ಚೌಕಾಕಾರದ ಫಲಕ ಮತ್ತು ಬೋದಿಗೆಗಳಿಂದ ಕೂಡಿದೆ. ಮಂಟಪದ ಮಧ್ಯ ನಂದಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ.[೫೫]

ಸ್ಥಳ: ಧುತ್ತರಗಾಂವ ಶೈಲಿ: ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ ದೇವಾಲಯ: ಸಿದ್ದಾಯಪ್ಪನ ಗುಡಿ

ಸ್ಥಿತಿ: ಕನಿಷ್ಠ ಕಾಲ: ಸು.೧೧ನೆಯ ಶತಮಾನ

ಸಿದ್ದಾಯಪ್ಪನ ಗುಡಿ ಪ್ರಾಚೀನ ಗುಡಿಯಾಗಿದೆ. ಗರ್ಭಗೃಹ, ಅಂತರಾಳ, ನವರಂಗಗಳನ್ನು ಹೊಂದಿರುವ ದೇವಾಲಯ ಪೂರ್ವಾಭಿಮುಖವಾಗಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಬಾಗಿಲವಾಡ ತ್ರಿಶಾಖಾಲಂಕೃತವಾಗಿದೆ. ಲಲಾಟದಲ್ಲಿ ಗಜಲಕ್ಷ್ಮಿಯಿದೆ. ನವರಂಗದ ಕಂಬಗಳು ರೇಖಾ ವಿನ್ಯಾಸಗಳಿಂದ ಅಲಂಕೃತಗೊಂಡಿದೆ.[೫೬]

ಸ್ಥಳ: ದರ್ಗಾಶಿರೂರರು ಶೈಲಿ: ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ ದೇವಾಲಯ: ಮಲ್ಲಿಕಾರ್ಜುನ

ಸ್ಥಿತಿ: ಕನಿಷ್ಠ ಕಾಲ: ಸು.೧೦ನೆಯ ಶತಮಾನ

ತ್ರಿಶಾಖಾಲಂಕೃತವಾಗಿರುವ ಬಾಗಿಲವಾಡ ಸರಳ, ಕೂಡ್ಯಸ್ತಂಭ ಮತ್ತು ಚತುರ್ದಳದ ಕೆತ್ತನೆಯಿವೆ. ಹೊಸ್ತಿಲಿಗೆ ಹೂವಿನ ಕೆತ್ತನೆಯಿದೆ. ಇಲ್ಲಿ ರಾಷ್ಟ್ರಕೂಟ ಶೈಲಿಯ ಕಂಬಗಳ ಕೆತ್ತನೆ ದೊರಕಿವೆ. ಭುವನೇಶ್ವರಿಯ ಕೆತ್ತನೆಯಿದೆ.

ಸ್ಥಳ: ನಿಂಬರಗಿ　　　　ಶೈಲಿ: ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ　　　　ದೇವಾಲಯ: ಶಂಕರಲಿಂಗ

ಸ್ಥಿತಿ: ಕನಿಷ್ಠ　　　　ಕಾಲ: ಸು.೧೧ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯ ಎತ್ತರದ ನಕ್ಷತ್ರಾಕಾರದ ಜಗತಿಯ ಮೇಲೆ ನಿರ್ಮಿತವಾಗಿದೆ. ಶಂಕರಲಿಂಗ ದೇವಾಲಯದಲ್ಲಿ ನವರಂಗ, ಅಂತರಂಗ ಮತ್ತು ಗರ್ಭಗುಡಿಯಿವೆ. ಅಂತರಾಳದ ಬಾಗಿಲವಾಡಕ್ಕೆ ಸ್ತ್ರೀ ಚಾಮರಧಾರಿಯರ ಶಿಲ್ಪಗಳಿವೆ ಮತ್ತು ಅದರ ಪಕ್ಕದಲ್ಲಿ ಜಾಲಾಂಧ್ರಗಳಿವೆ. ಚಾಮರಧಾರಿಯು ಒಂದು ಕೈಯಲ್ಲಿ ಚಾಮರ ಮತ್ತು ಒಂದು ಕೈಯಲ್ಲಿ ಬೀಜಪೂರ ಹಿಡಿದಂತಿದೆ. ಎರಡು ಸುತ್ತಿನ ತುರುಬು, ಕಿವಿಓಲೆ, ಬಾಹುವಲ್ಯ, ಕೈಬಳೆ, ಕೊರಳಿನ ಹಾರ, ಸೊಂಟಪಟ್ಟಿ, ತೊಡೆಗೆ ಹಾಕುವ ಆಭರಣ, ಕಾಲ್ಗೆಜ್ಜೆ ಮತ್ತು ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ. ಅಂತರಾಳದ ಮಕರ ತೋರಣದಲ್ಲಿ ನಾಟ್ಯ ಶಿವನ ಕೆತ್ತನೆಯಿದೆ. ಡಮರು ಬಾರಿಸುತ್ತಾ ಶಿವನು ಅಪಸ್ಮಾರನನ್ನು ತುಳಿಯುತ್ತಿರುವನು. ಇಕ್ಕೆಲಗಳಲ್ಲಿ ನೃತ್ಯ ಮತ್ತು ವಾದ್ಯ ಬಾರಿಸುವವರ ಶಿಲ್ಪಗಳಿವೆ. ಲಲಾಟದಲ್ಲಿ ನಂದಿ ಶಿಲ್ಪವಿದೆ. ಇಕ್ಕೆಲಲ್ಲಿ ಹೂವಿನ ಕೆತ್ತನೆಯಿವೆ. ಗರ್ಭಗುಡಿಯ ಬಾಗಿಲವಾಡ ಪಂಚಶಾಖಲಂಕೃತವಾಗಿದೆ. ಚತುರ್ದಳ, ಬಳ್ಳಿ, ಕೂಡ್ಯಸ್ತಂಭ, ಕನಕದಳದ ಕೆತ್ತನೆಗಳಿವೆ. ಲಲಾಟದಲ್ಲಿ ಗಣಪತಿ ಶಿಲ್ಪವಿದೆ. ಶೈವ ದ್ವಾರಪಾಲಕರ ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಗರ್ಭಗುಡಿಯ ನಾಲ್ಕು ಮೂಲೆಗಳಲ್ಲಿ ಕೂಡ್ಯಸ್ತಂಭಗಳಿವೆ. ಶಿವಲಿಂಗವಿದೆ. ತ್ರಿಶೂಲ, ಡಮರು, ಗದಾ ಮತ್ತು ಅಭಯಹಸ್ತಗಳು ಶೈವ ದ್ವಾರಪಾಲಕರ ಕೆತ್ತನೆಯಿವೆ. ಕಿರೀಟ, ಕರ್ಣಕುಂಡಲ, ಬಾಹುವಲ್ಯ, ಕೈಗಡಗ, ಕೊರಳಿನ ಹಾರ, ಸೊಂಟಪಟ್ಟಿ ಮತ್ತು ಕಾಲ್ಗಡಗ ಧರಿಸಿದೆ. ಗದೆ ಹಿಡಿದು, ಮುಡಿ ಕಟ್ಟಿರುವ ಕೆತ್ತನೆ ಬಾಗಿಲವಾಡದಲ್ಲಿದೆ. ಹೊಸ್ತಿಲಲ್ಲಿ ನೃತ್ಯ ಮತ್ತು ಸಂಗೀತ ವಾದ್ಯ ಬಾರಿಸುವವರ ಕೆತ್ತನೆಗಳಿವೆ. ನವರಂಗದಲ್ಲಿ ಭುವನೇಶ್ವರಿ ಕೆತ್ತನೆ ಮತ್ತು ಕಕ್ಷಾಸನವಿದೆ.

ತೆರೆದ ಸಭಾಮಂಟಪದ ಸುತ್ತಲೂ ಅರ್ಧಮುಚ್ಚಿದ ಗೋಡೆ ಮತ್ತು ಚಿಕ್ಕ ಕಂಬಳನ್ನೊಳಗೊಂಡ ಕಕ್ಷಾಸನವಿದೆ. ಅದರ ಮೇಲೆ ಚಿಕ್ಕ ಕಂಬಗಳಿವೆ. ಮಧ್ಯದ ನಾಲ್ಕು ಕಂಬಗಳು ಕೆಳಗೆ ಮೇಲೆ ಚೌಕ, ಮಧ್ಯ ವೃತ್ತಾಕಾರ–ಅಷ್ಟಭಾಗದ ಪಟ್ಟಿಕೆ(ಅದರಲ್ಲಿ ಪದ್ಮಸಾಲು) ಮೇಲಿನ ಚೌಕು ಮುಖಗಳಲ್ಲಿ ಹೂಬಳ್ಳಿ, ಹಾರ, ಮೇಲ್ಭಾಗ ಅಲಂಕೃತ ಕುಂಭ, ಹಗ್ಗದಾಕಾರದ ಮುಚ್ಚಳ, ಚೌಕಾಕಾರದ ಫಲಕ ಮತ್ತು ಬೋದಿಗೆಗಳಿಂದ ಕೂಡಿವೆ. ಮುಂಚಾಚಿದ ಮುಖಮಂಟಪದಲ್ಲಿ ಎರಡು ಕಂಬಗಳಿವೆ. ಪ್ರವೇಶದಲ್ಲಿ ಸೋಪಾನ ಮತ್ತು ಗಜಶಿಲ್ಪಗಳಿವೆ.[೫೬]

ಸ್ಥಳ: ಭೂಸನೂರು　　　　ಶೈಲಿ: ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ　　　　ದೇವಾಲಯ: ರಾಮಲಿಂಗ

ಸ್ಥಿತಿ: ಕನಿಷ್ಠ　　　　ಕಾಲ: ಸು.೧೦ನೆಯ ಶತಮಾನ

ಉತ್ತರಾಭಿಮುಖವಾಗಿರುವ ದೇವಾಲಯ ಎತ್ತರ ಜಗತಿಯ ಮೇಲೆ ನಿರ್ಮಿತವಾಗಿದ್ದು, ಸಭಾಮಂಟಪ ಮಾತ್ರ ಉಳಿದಿದೆ. ಸಭಾಮಂಟಪದ ಮಧ್ಯದ ಕಂಬಗಳು ಕೆಳಗೆ ಮೇಲೆ ಚೌಕ,

ಮಧ್ಯ ಅಷ್ಟಭಾಗದ ಪಟ್ಟಿಕೆ, ವೃತ್ತಾಕಾರದ ಮುಚ್ಚಳ, ಚೌಕಾಕಾರದ ಫಲಕ ಮತ್ತು ಬೋದಿಗೆಗಳಿಂದ ಕೂಡಿವೆ. ಎತ್ತರದ ಕಟ್ಟೆಯ ಮೇಲೆ ಶಿವಲಿಂಗವಿದೆ.[೫೮]

ಸ್ಥಳ: ಭೂಸನೂರು **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಭೋಗಲಿಂಗೇಶ್ವರ
ಸ್ಥಿತಿ: ಕನಿಷ್ಠ **ಕಾಲ:** ಸು.೧೨ನೆಯ ಶತಮಾನ

ಸಂಪೂರ್ಣ ನವೀಕರಣಗೊಂಡ ದೇವಾಲಯದಲ್ಲಿ ಶಿವಲಿಂಗ ಮತ್ತು ಸಭಾಮಂಟಪದ ಗೂಡುಗಳಲ್ಲಿರುವ ಎರಡು ವಿಷ್ಣು ಶಿಲ್ಪಗಳು ಪ್ರಾಚೀನ ಕಾಲಕ್ಕೆ ಸೇರಿವೆ. ಗ್ರಾಮದಲ್ಲಿ ಮಹಾಸತಿಗಲ್ಲಿದೆ.[೫೯]

ಸ್ಥಳ: ಮೋಗಾ(ಬಿ) **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಸೋಮಲಿಂಗೇಶ್ವರ
ಸ್ಥಿತಿ: ಕನಿಷ್ಠ **ಕಾಲ:** ಸು.೧೧ನೆಯ ಶತಮಾನ

ಪೂರ್ವಾಭಿಮುಖವಾಗಿರುವ ತ್ರಿಕೂಟವಾಗಿರುವ ದೇವಾಲಯದ ಎರಡು ಗರ್ಭಗುಡಿ ಖಾಲಿಯಿವೆ. ಪ್ರಮುಖ ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಲಲಾಟದಲ್ಲಿ ಗಣಪತಿ ಶಿಲ್ಪವಿದೆ. ನವರಂಗ ಮತ್ತು ಅಂತರಾಳಗಳಿವೆ. ಸರಳ ಬಾಗಿಲವಾಡಕ್ಕೆ ಕೂಡ್ಯ ಸ್ತಂಭಗಳಿವೆ ಕಕ್ಷಾಸನ ಮತ್ತು ಅದಕ್ಕೆ ಚಿಕ್ಕ ಕಂಬಗಳಿವೆ. ಚಾಲುಕ್ಯ ಶೈಲಿಯಲ್ಲಿ ಕಂಬಗಳನ್ನು ಕೆತ್ತಲಾಗಿದೆ.

೧೨ನೆಯ ಶತಮಾನದಲ್ಲಿ ನಿರ್ಮಿತವಾಗಿದೆ. ಎತ್ತರದ ಜಗತಿಯ ಮೇಲೆ ನಿರ್ಮಾಣವಾದ ದೇವಾಲಯವು ತ್ರಿಕೂಟ ದೇವಾಲಯವಾಗಿದೆ. ಮೂರು ಗರ್ಭಗುಡಿ, ಅವುಗಳಿಗೆ ತೆರೆದ ಅಂತರಾಳ ಮತ್ತು ಸಭಾಮಂಟಪ, ಮುಖಮಂಟಪವಿದೆ. ಮೂರು ಗರ್ಭಗುಡಿ ಪ್ರವೇಶದ್ವಾರಗಳಿಗೆ ಅರ್ಧಗಂಬ, ಲಲಾಟಬಿಂಬದಲ್ಲಿ ಗಣೇಶ ಶಿಲ್ಪಗಳಿವೆ. ಒಳಗೆ ಶಿವಲಿಂಗಗಳಿವೆ.[೬೦]

ಸ್ಥಳ: ಮಾಡಿಹಾಳ **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಮಲ್ಲಯ್ಯ
ಸ್ಥಿತಿ: ಕನಿಷ್ಠ **ಕಾಲ:** ಸು.೧೧ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯ ಎತ್ತರದ ಜಗತಿಯ ಮೇಲೆ ನಿರ್ಮಿತವಾಗಿದೆ. ಗರ್ಭಗೃಹ ಮತ್ತು ಸಭಾಮಂಟಪವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಸಭಾಮಂಟಪದಲ್ಲಿ ಪ್ರಾಚೀನ ಕಾಲದ ಕಂಬಗಳ ಮೇಲೆ ಕಮಾನುಗಳನ್ನು ರಚಿಸಲಾಗಿದೆ. ಪ್ರವೇಶದ್ವಾರದಲ್ಲಿ ಒಂದು ಶಿಲಾಶಾಸನವಿದೆ.[೬೧]

ಸ್ಥಳ: ರುದ್ರವಾಡಿ **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಮಲ್ಲಿಕಾರ್ಜುನ
ಸ್ಥಿತಿ: ಕನಿಷ್ಠ **ಕಾಲ:** ಸು.೧೦ನೆಯ ಶತಮಾನ

ಪಶ್ಚಿಮಾಭಿಮುಖವಾಗಿರುವ ತ್ರಿಕೂಟ ದೇವಾಲಯದ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿಂದ ಕೂಡಿದೆ. ಪೂರ್ವ ಗರ್ಭಗೃಹದ ಪ್ರವೇಶ ದ್ವಾರಕ್ಕೆ ಪದ್ಮ, ವೃತ್ತಾಕಾರದ

ಅರ್ಧಗಂಬ, ಚಾಮರಧಾರೆಯರ ಶಿಲ್ಪಗಳಿವೆ. ಒಳಗೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಅಂತರಾಳದ ಇಕ್ಕೆಲಗಳಲ್ಲಿ ಕೆಳಗೆ ಚೌಕ, ಮೇಲೆ ವೃತ್ತಾಕಾರದ ಎರಡು ಕಂಬಗಳಿವೆ. ದಕ್ಷಿಣ ಗರ್ಭಗುಡಿ ಪ್ರವೇಶ ದ್ವಾರಕ್ಕೆ ಪದ್ಮ, ಅರ್ಧಗಂಬ, ಲಲಾಟದಲ್ಲಿ ಗಜಲಕ್ಷ್ಮಿ, ಇಕ್ಕೆಲಗಳಲ್ಲಿ ಶಂಖ–ಚಕ್ರ–ಗದಾ, ಮೃಗ–ಶಂಖ–ಗದಾ ಹಿಡಿದ ದ್ವಾರಪಾಲಕರು ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ತೆರೆದ ಅಂತರಾಳವಿದೆ. ಉತ್ತರ ಭಾಗದ ಗರ್ಭಗೃಹದ ಪ್ರವೇಶದ್ವಾರಕ್ಕೆ ಪದ್ಮ, ಅರ್ಧಗಂಬ, ಲಲಾಟದಲ್ಲಿ ಗಜಲಕ್ಷ್ಮಿ, ಇಕ್ಕೆಲಗಳಲ್ಲಿ ಶಂಖ–ಚಕ್ರ–ಗದಾ ಹಿಡಿದ ದ್ವಾರಪಾಲಕರು ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಒಳಗೆ ಶಂಖ–ಚಕ್ರ ಹಿಡಿದಿರುವ ನಾಲ್ಕು ಅಡಿ ಎತ್ತರದ ವಿಷ್ಣು ವಿಗ್ರಹವಿದೆ. ಪಕ್ಕದಲ್ಲಿ ಒಂದು ಗಣೇಶ ಶಿಲ್ಪವಿದೆ. ಸಭಾಮಂಟಪದಲ್ಲಿ ನಂದಿ ಶಿಲ್ಪವಿದೆ. ದೇವಾಲಯದ ಪಕ್ಕದಲ್ಲಿ ಕಾರ್ತಿಕೇಯ, ಎರಡು ವಿಷ್ಣು, ಗಣೇಶ ಶಿಲ್ಪಗಳಿವೆ.[೨]

ಸ್ಥಳ: ಲಾಡಚಿಂಚೋಳಿ **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಸಿದ್ದೇಶ್ವರ
ಸ್ಥಿತಿ: ಕನಿಷ್ಠ **ಕಾಲ:** ಸು.೧೦ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯ ಎತ್ತರದ ಜಗತಿಯ ಮೇಲೆ ನಿರ್ಮಾಣವಾಗಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳಿಂದ ಕೂಡಿದೆ. ಗರ್ಭಗೃಹದ ಪ್ರವೇಶ ದ್ವಾರಕ್ಕೆ ಪದ್ಮ, ಚಿಕ್ಕ ಚಿಕ್ಕ ಶಿಲ್ಪಗಳು, ಅಲಂಕೃತ ಅರ್ಧಗಂಬ, ಯಾಳಿ, ಲಲಾಟದಲ್ಲಿ ಗಜಲಕ್ಷ್ಮಿ, ತ್ರಿಶೂಲ–ಡಮರು–ಗದಾ ಹಿಡಿದಿರುವ ದ್ವಾರಪಾಲಕರು ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಒಳಗೆ ಶಿವಲಿಂಗವಿದೆ. ಪೂರ್ವ–ಉತ್ತರ–ದಕ್ಷಿಣ ಭಾಗಗಳಲ್ಲಿ ಮುಖಮಂಟಪಗಳ ಸುತ್ತಲೂ ಕಕ್ಷಾಸನವಿದೆ. ಮಂಟಪದಲ್ಲಿ ನಂದಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಕೈಗಳಲ್ಲಿ ಶಂಖ–ಚಕ್ರ–ಗದಾ ಹಿಡಿದಿರುವ ವಿಷ್ಣುಶಿಲ್ಪವಿದೆ.[೬]

ಸ್ಥಳ: ಲೆಂಗಟಿ **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ರಾಮಲಿಂಗೇಶ್ವರ
ಸ್ಥಿತಿ: ಕನಿಷ್ಠ **ಕಾಲ:** ಸು.೧೧ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯ ಸಂಪೂರ್ಣ ಹಾಳಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಹೊಸ್ತಿಲಲ್ಲಿ ಪದ್ಮ, ಸಿಂಹಮುಖ, ಆನೆಗಳಿವೆ. ತ್ರುಟಿತವಾಗಿ ಬಿದ್ದಿರುವ ಪ್ರವೇಶದ್ವಾರಕ್ಕೆ ಅರ್ಧಗಂಬ ತ್ರಿಶೂಲ–ಡಮರು–ಗದಾ ಹಿಡಿದಿರುವ ದ್ವಾರಪಾಲಕರು ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಸಪ್ತಮಾತೃಕೆ, ನಂದಿ, ಎರಡು ವೀರಗಲ್ಲು ಶಿಲ್ಪಾವಶೇಷಗಳಿವೆ.[೬೪]

ಸ್ಥಳ: ಹೊಡಲ **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ರಾಮಲಿಂಗೇಶ್ವರ
ಸ್ಥಿತಿ: ಕನಿಷ್ಠ **ಕಾಲ:** ಸು.೧೦ನೆಯ ಶತಮಾನ

ಪೂರ್ವಾಭಿಮುಖವಾದ ದೇವಾಲಯ ಎತ್ತರದ ದಿಬ್ಬದ ಮೇಲೆ ನಿರ್ಮಾಣವಾಗಿದೆ. ತ್ರಿಕೂಟ ದೇವಾಲಯ ಮೂರು ಗರ್ಭಗೃಹಗಳಲ್ಲಿ ಶಿವಲಿಂಗ, ಅಂತರಾಳ, ಸಭಾಮಂಟಪ

ಮತ್ತು ಮುಖಮಂಟಪಗಳಿಂದ ಕೂಡಿದೆ. ಪಶ್ಚಿಮ ಗರ್ಭಗೃಹದ ಪ್ರವೇಶದ್ವಾರಕ್ಕೆ ಪದ್ಮ, ಚಿಕ್ಕಚಿಕ್ಕ ಶಿಲ್ಪಗಳು, ಅರ್ಧಗಂಬ, ಸಿಂಹಯಾಳಿ, ಲಲಾಟದಲ್ಲಿ ಗಜಲಕ್ಷ್ಮಿ ಅದರ ಮೇಲ್ಭಾಗ ಪಟ್ಟಿಕೆ ಮತ್ತು ದ್ರಾವಿಡ ಶಿಖರ ಪಟ್ಟಿಕೆ ಅವುಗಳ ಮಧ್ಯ ಚಾಮರಧಾರಿಯರ ಶಿಲ್ಪಗಳನ್ನು ನಿರ್ಮಿಸಲಾಗಿದೆ. ಇಕ್ಕೆಲಗಳಲ್ಲಿ ನಾಗ–ಡಮರು–ಗದಾ ಹಿಡಿದು ನಿಂತಿರುವ ದ್ವಾರಪಾಲಕರು ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಹೊಸ್ತಿಲ ಮುಂಭಾಗ ಚಂದ್ರಶಿಲೆಯನ್ನು ರಚಿಸಲಾಗಿದೆ. ಒಳಗೆ ಶಿವಲಿಂಗವಿದೆ. ಅಂತರಾಳದ ಪ್ರವೇಶದ್ವಾರವು ಪದ್ಮಜಾಲಂಧ್ರ, ಮೇಲ್ಭಾಗದ ಪಟ್ಟಿಕೆಯಲ್ಲಿ ನಟರಾಜ, ನೃತ್ಯ-ಸಂಗೀತಗಾರರ ಶಿಲ್ಪಗಳು ಮತ್ತು ಇಕ್ಕೆಲಗಳಲ್ಲಿ ನಾಗ–ಡಮರು–ಗದಾ ಹಿಡಿದು ನಿಂತಿರುವ ದ್ವಾರಪಾಲಕರ ವಿಗ್ರಹಗಳಿವೆ. ಉತ್ತರ–ದಕ್ಷಿಣ ಗರ್ಭಗೃಹಗಳ ಪ್ರವೇಶದ್ವಾರಗಳು ಪಶ್ಚಿಮ ದ್ವಾರದಂತಿವೆ. ಶಿವಲಿಂಗಗಳಿವೆ. ತೆರೆದ ಅಂತರಾಳಗಳನ್ನು ನಿರ್ಮಿಸಲಾಗಿದೆ. ಸಭಾಮಂಟಪದ ಕಂಬಗಳ ಮೇಲೆ ಹೂಬಳ್ಳಿ, ಕುಂಭ, ಮೇಲ್ಭಾಗ ವೃತ್ತಕಾರದ ಮುಚ್ಚಳ, ಚೌಕಾಕಾರದ ಫಲಕ ಮತ್ತು ಸುರುಳಿಯಾಕಾರದ ಬೋದಿಗೆಗಳಿಂದ ಕೂಡಿವೆ. ಭುವನೇಶ್ವರಿಯಲ್ಲಿ ಪದ್ಮವಿದೆ. ಸುತ್ತಲೂ ಅಷ್ಟದಿಕ್ಪಾಲಕರ ಶಿಲ್ಪಗಳಿವೆ. ನಾಗ, ಸಪ್ತಮಾತೃಕೆ, ಉಮಾ–ಮಹೇಶ್ವರ, ಮಹಿಷಾಸುರಮರ್ದಿನಿ ಮತ್ತು ಕಾರ್ತಿಕೇಯ ಶಿಲ್ಪಗಳಿವೆ. ಸಭಾಮಂಟಪದ ಪ್ರವೇಶದ್ವಾರಕ್ಕೆ ಪದ್ಮ, ಶಿಲ್ಪಬಂಧ, ಅಲಂಕೃತ ಅರ್ಧಗಂಬ, ಯಾಳಿಸಾಲು, ಲಲಾಟದಲ್ಲಿ ಗಜಲಕ್ಷ್ಮಿ, ಮೇಲ್ಭಾಗ ವೇಸರ ಮಾದರಿಯ ಶಿಖರ ಪಟ್ಟಿಕೆ, ಅವುಗಳ ಮಧ್ಯ ಕಾಲೆತ್ತಿನಿಂತ ಸಿಂಹಗಳನ್ನು ಬಿಡಿಸಲಾಗಿದೆ. ಇಕ್ಕೆಲಗಳಲ್ಲಿ ಕಟ್ವಾಂಗ–ಡಮರು–ಗದಾ, ಕಟ್ವಾಂಗ–ನಾಗ–ಗದಾ ಹಿಡಿದು ನಿಂತಿರುವ ದ್ವಾರಪಾಲಕರು ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಮುಖಮಂಟಪದಲ್ಲಿ ಕಕ್ಷಾಸನವಿದೆ. ದಕ್ಷಿಣ ಗುಡಿಯ ಪ್ರವೇಶದಲ್ಲಿ ನಂದಿಯ ಮೇಲೆ ಕುಳಿತ ಶಿವ, ಶಿವ–ಗಂಗೆ–ಗೌರಿ ಮತ್ತು ಇಕ್ಕೆಲಗಳಲ್ಲಿ ಡಮರು–ನಾಗ ಹಿಡಿದು ನಿಂತಿರುವ ದ್ವಾರಪಾಲಕ ವಿಗ್ರಹಗಳಿವೆ. ಉತ್ತರ ಭಾಗದ ಪರಿವಾರ ಗುಡಿಯ ಪ್ರವೇಶದ್ವಾರಕ್ಕೆ ತ್ರಿಶೂಲ–ಡಮರು–ಹಿಡಿದು ನಿಂತಿರುವ ದ್ವಾರಪಾಲಕರು ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಇವುಗಳ ಕೆಳಭಾಗ ಆನೆಸಾಲುಗಳನ್ನು ರಚಿಸಲಾಗಿದೆ.[೬೫]

ಸ್ಥಳ: ಬೋಧನ — **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ — **ದೇವಾಲಯ:** ಮಲ್ಲಿಕಾರ್ಜುನ

ಸ್ಥಿತಿ: ಕನಿಷ್ಠ — **ಕಾಲ:** ಸು.೧೨ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯ ಎತ್ತರ ಜಗತಿಯ ಮೇಲೆ ನಿರ್ಮಾಣವಾಗಿದೆ. ತ್ರಿಕೂಟ ದೇವಾಲಯದಲ್ಲಿ ಮೂರು ಗರ್ಭಗೃಹಗಳು, ಅಂತರಾಳ ಮತ್ತು ನವರಂಗಗಳಿವೆ.

ಶಾಸನವಿರುವ ಮಲ್ಲಿಕಾರ್ಜುನ ದೇವಾಲಯವೇ ಶಾಸನೋಕ್ತ ತ್ರಿಕೂಟ ದೇವಾಲಯವಾಗಿದೆ. ಪ್ರತ್ಯೇಕವಾದ ಮೂರು ಗರ್ಭಗೃಹ, ಅಂತರಾಳಗಳನ್ನು ಹೊಂದಿದೆ. ನವರಂಗವಿದೆ. ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದೆ. ಉತ್ತರಾಂಗದಲ್ಲಿ

ಪಂಚಶಿಖರಗಳಿವೆ. ನವರಂಗದಲ್ಲಿ ಎಂಟು ದೇವಕೋಷ್ಠಕಗಳಿದ್ದು, ಕೆಲವದರಲ್ಲಿ ಸು. ಎರಡೂವರೆ ಅಡಿ ಎತ್ತರದ ಬ್ರಹ್ಮ, ಭೈರವ ಹಾಗೂ ಗಣಪತಿಯ ಶಿಲ್ಪಗಳಿವೆ. ನವರಂಗದ ಬಾಗಿಲವಾಡವು ಚತುರ್ ಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಗುಡಿಯ ಮುಂದೆ ಸು. ೧೩ನೆಯ ಶತಮಾನದ ವೀರಗಲ್ಲಿದೆ.[೬೬] ಪಶ್ಚಿಮ ಗರ್ಭಗೃಹದ ಪ್ರವೇಶದ್ವಾರಕ್ಕೆ ಪದ್ಮ, ಹೂಬಳ್ಳಿ, ಅರ್ಧಗಂಬ, ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಒಳಗೆ ಶಿವಲಿಂಗವಿದೆ. ತೆರೆದ ಅಂತರಾಳ ಪ್ರವೇಶದಲ್ಲಿ ಗೂಡುಗಳಿವೆ. ಉತ್ತರ ಮತ್ತು ದಕ್ಷಿಣ ಗರ್ಭಗೃಹಗಳ ಪ್ರವೇಶದ್ವಾರಕ್ಕೆ ಪದ್ಮ, ಅರ್ಧಗಂಬ, ಲಲಾಟದಲ್ಲಿ ಗಜಲಕ್ಷ್ಮಿ ಮತ್ತು ದ್ವಾರಪಾಲಕರ ಶಿಲ್ಪಗಳಿವೆ. ಗರ್ಭಗೃಹಗಳಲ್ಲಿ ಶಿವಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಸಭಾಮಂಟಪದ ಗೋಡೆಗಿರುವ ನಾಲ್ಕು ಗೂಡುಗಳು ಅರ್ಧಗಂಬ ಮತ್ತು ಪಟ್ಟಿಕೆಗಳಿವೆ. ಅವುಗಳಲ್ಲಿ ಭೈರವ, ಕಾಳಿಯ ಶಿಲ್ಪಗಳನ್ನಿಡಲಾಗಿದೆ. ಶಿಲಾಶಾಸನ, ಮುಂಭಾಗ ತ್ರುಟಿತ ವೀರಗಲ್ಲು, ನಂದಿ, ನಾಗಶಿಲ್ಪಗಳಿವೆ.[೬೭]

ಸ್ಥಳ: ಮಾಡಿಹಾಳ **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಶಂಕರಲಿಂಗ

ಸ್ಥಿತಿ: ಕನಿಷ್ಠ **ಕಾಲ:** ಸು.೧೧೦ನೆಯ ಶತಮಾನ

ಪೂರ್ವಾಭಿಮುಖವಾದ ದೇವಾಲಯ ಎತ್ತರ ಜಗತಿಯ ಮೇಲೆ ನಿರ್ಮಾಣವಾಗಿದೆ. ದೇವಾಲಯ ಗರ್ಭಗುಡಿ, ಅಂತರಾಳ, ಸಭಾಮಂಟಪ ಮತ್ತು ಮಹಾ ಮಂಟಪಗಳಿವೆ. ಗರ್ಭಗೃಹದ ಪ್ರವೇಶದ್ವಾರಕ್ಕೆ ಪದ್ಮ, ಹೂಬಳ್ಳಿ, ಚಿಕ್ಕ ಚಿಕ್ಕ ಶಿಲ್ಪಗಳು, ವೃತ್ತಾಕಾರ ಅರ್ಧಗಂಬ, ಯಾಳಿ, ಲಲಾಟದಲ್ಲಿ ಗಜಲಕ್ಷ್ಮಿ, ಇಕ್ಕೆಲುಗಳಲ್ಲಿ ಶೈವ ದ್ವಾರಪಾಲಕರ, ಚಾಮರಧಾರಿಯರ ಶಿಲ್ಪಗಳಿವೆ. ಹೊಸ್ತಿಲಲ್ಲಿ ಆನೆ, ಮುಂಭಾಗ ಚಂದ್ರಶಿಲೆಯಿವೆ. ಒಳಗೆ ಶಿವಲಿಂಗವಿದೆ. ಸಭಾಮಂಟಪದಲ್ಲಿ ಪದ್ಮದಳದ ಭುವನೇಶ್ವರಿಯಿದೆ. ದೇವಾಲಯದ ಮುಂಭಾಗದಲ್ಲಿ ನಂದಿಶಿಲ್ಪವಿದೆ.[೬೮]

ಸ್ಥಳ: ಪಡಸಾವಳಗಿ **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಕಲ್ಲೇಶ್ವರ

ಸ್ಥಿತಿ: ಕನಿಷ್ಠ **ಕಾಲ:** ಸು.೧೧ನೆಯ ಶತಮಾನ

ಪ್ರಾಚೀನ ಶಾಸನಗಳಲ್ಲಿ ಪಟ್ಟಸಾವಳಿಗೆ ಎಂದು ಉಲ್ಲೇಖಿತವಾಗಿದೆ. ಕಲ್ಲೇಶ್ವರ ಗುಡಿಯ ಮುಂದಿದ್ದ ಒಂದು ಶಾಸನ ಕಲ್ಯಾಣ ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿದೆ. ಶಾಸನವು ಕ್ರಿ.ಶ.೧೧೧೦ರಲ್ಲಿ ವಿವಿಧ ಅಧಿಕಾರಿಗಳು ಪಟ್ಟ ಸಾವಳಿಗೆಯ ಕಲಿದೇವೇಶ್ವರ, ಸಿಂಗೇಶ್ವರ ಹಾಗೂ ಸೋಮೇಶ್ವರ ದೇವರುಗಳಿಗೆ ದಾನ ಬಿಟ್ಟ ವಿಷಯವನ್ನು ದಾಖಲಿಸಿವೆ. ಊರಲ್ಲಿ ಕುಂಬಾರ ಓಣಿಯಲ್ಲಿರುವ ಕಲ್ಲೇಶ್ವರ ಗುಡಿಯು ಶಾಸನೋಕ್ತ ತ್ರಿಕೂಟ ದೇವಾಲಯವಾಗಿದ್ದು, ಮೂರು ಪ್ರತ್ಯೇಕ ಗರ್ಭಗೃಹ ಹಾಗೂ ತೆರೆದ ಅಂತರಾಳಗಳಿವೆ. ನವರಂಗವಿದೆ. ಪ್ರಧಾನ ಗರ್ಭಗೃಹ ಹಾಗೂ ದಕ್ಷಿಣದ ಗರ್ಭಗೃಹಗಳಲ್ಲಿ ಶಿವಲಿಂಗಗಳಿದ್ದು, ಉಳಿದೊಂದು ಖಾಲಿಯಿದೆ.

ಇವುಗಳ ಬಾಗಿಲವಾಡಗಳೆಲ್ಲ ತ್ರಿಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಗಳಿವೆ. ದೇವಕೋಷ್ಠಕಗಳಿದ್ದು, ಅವುಗಳಲ್ಲಿ ಕೇಶವ ಹಾಗೂ ನಾಗಶಿಲ್ಪಗಳಿವೆ. ನವರಂಗದ ಮುಂಭಾಗದಲ್ಲಿ ಕಕ್ಷಾಸನವಿದೆ. ಗುಡಿಯ ಭಿತ್ತಿಯು ನಿರಾಡಂಬರವಾಗಿದೆ. ಅದರ ಬಳಿಯಲ್ಲೇ ವೀರಗಲ್ಲೊಂದಿದೆ.[೪]

ಸ್ಥಳ: ಚಿಂಚನ್‌ಸೂರು | **ಶೈಲಿ:** ರಾಷ್ಟ್ರಕೂಟ

ಶಿಲೆ: ಕಪ್ಪು ಕಲ್ಲು | **ದೇವಾಲಯ:** ಮಹೇಶ್ವರ

ಸ್ಥಿತಿ: ಮಧ್ಯಮ | **ಕಾಲ:** ಸು.೮-೯ನೆಯ ಶತಮಾನ

ಆಳಂದ ತಾಲೂಕಿನ ಗ್ರಾಮವಾದ ಚಿಂಚನ್‌ಸೂರನಲ್ಲಿ ಮಹೇಶ್ವರನ ದೇವಾಲಯವಿದೆ. ಪೂರ್ವಾಭಿಮುಖವಾಗಿದೆ. ಎತ್ತರದ ಜಗತಿಯ ಮೇಲೆ ನಿರ್ಮಿತವಾಗಿದೆ. ಪ್ರವೇಶವಾಗುವಾಗಲೇ ಅಲ್ಲಿ ಅನೇಕ ತ್ರುಟಿತ ಸು.೮ನೆಯ ಶತಮಾನದ ಕಂಬಗಳು, ಮಕರ ಲಲಾಟ, ದ್ವಾರಪಾಲಕನ ಮೂರ್ತಿ, ಬೃಹತ್ ಗಣಪತಿ ಶಿಲ್ಪ, ತ್ರುಟಿತ ನಂದಿ, ಶಂಖ ಹಿಡಿದ ತ್ರುಟಿತ ಶಿಲ್ಪಗಳನ್ನು ಹೊಂದಿಸಿ ದೇವಾಲಯದ ಜಗತಿಯ ಮೇಲಿಡಲಾಗಿದೆ. ಪ್ರಸ್ತುತ ದೇವಾಲಯ ಅವಸಾನದ ಹಂತದಲ್ಲಿದೆ. ಗರ್ಭಗುಡಿ, ಅಂತರಾಳ ಮಾತ್ರ ಉಳಿದಿದೆ. ಅಂತರಾಳದ ಇಕ್ಕೆಲಗಳಲ್ಲಿ ಅರ್ಧ ಕಂಬಗಳ ಮೇಲೆ ಶಾಸನಗಳಿವೆ. ಗರ್ಭಗುಡಿಯ ಬಾಗಿಲವಾಡ ಕಂಬದ ಮೇಲೂ ಶಾಸನವಿದೆ.

ಪ್ರಸ್ತುತ ಅವುಗಳ ಮೇಲೆ ಬಣ್ಣ ಬಳಿದ ಕಾರಣ ಅಸ್ಪಷ್ಟವಾಗಿವೆ. ಗರ್ಭಗುಡಿಯಲ್ಲಿ ತ್ರಿಪೀಠದ ಮತ್ತು ಬ್ರಹ್ಮ ಸೂತ್ರವಿರುವ ಬೃಹತ್ ಶಿವಲಿಂಗವಿದೆ. ಎತ್ತರದ ಜಗತಿಯ ಮೇಲೆ ಶಿವಲಿಂಗ ಮತ್ತು ಹನುಮಂತನ ತ್ರುಟಿತ ಶಿಲ್ಪವಿದೆ. ಗರ್ಭಗುಡಿಗೆ ಪಂಚಶಾಖ ಬಾಗಿಲವಾಡವಿದೆ. ಬಳ್ಳಿಗಳು, ಸರಳ, ಕಮಲದ ಬಳ್ಳಿಗಳು, ರಾಷ್ಟ್ರಕೂಟ ಮಾದರಿಯ ಅರ್ಧಗಂಬಗಳು, ಸಿಂಹವ್ಯಾಳಿ ಬಾಗಿಲವಾಡದಲ್ಲಿ ಕೆತ್ತಲಾಗಿದೆ. ಬಾಗಿಲವಾಡಕ್ಕೆ ಹತ್ತಿಕೊಂಡ ಅರ್ಧಗಂಬಗಳು ಬೋದಿಗೆ, ಚೌಕ ಪಟ್ಟಿಕೆ, ವೆಯ್ಯಾವಳಿ, ಚೌಕ ಹೂವುಗಳ ಮಧ್ಯ ಉದ್ದನೆಯ ಚಿಕ್ಕ, ಚಿಕ್ಕ ಪಟ್ಟಿಕೆಗಳು ನಂತರ ಕಮಲದ ಹೂವಿನ ಕೆತ್ತನೆಯಿದೆ. ಗರ್ಭಗುಡಿಯ ಎದುರಿಗೆ ನಂದಿ ಮತ್ತು ಪಾದಗಳ ಶಿಲ್ಪಗಳಿವೆ.

ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪ ಅದಕ್ಕೆ ಒಂದು ಅಲಂಕಾರಿಕ ಭುವನೇಶ್ವರಿಯಿದೆ. ಕದಂಬ ದ್ರಾವಿಡ ಮಾದರಿಯ ಲಲಾಟದ ಶಿಖರ ಪಟ್ಟಿಕೆಯಿದೆ. ಗರ್ಭಗುಡಿಯ ಎಡಭಾಗದ ದ್ವಾರಪಾಲಕರು ತಬಲ ಬಾರಿಸುವ, ನೃತ್ಯ ಮಾಡುತ್ತಿರುವ, ಗದೆ, ಸರ್ಪಾಯುಧ ಹಿಡಿದ ದ್ವಾರಪಾಲಕ ಮತ್ತು ಚಾಮರಧಾರಿ, ಗಜವು ನೀರಿನ ಬಿಂದಿಗೆ ಹಿಡಿದು ನಿಂತಿರುವ, ವೆಯ್ಯಾವಳಿ ಹೂ-ಬಳ್ಳಿಗಳ ಕೆತ್ತನೆಯಿದೆ. ಬಲಕ್ಕೆ ತ್ರಿಶೂಲ-ಡಮರು-ಗದಾಧಾರಿ ದ್ವಾರಪಾಲಕ, ಚಾಮರಧಾರಿ, ಪದ್ಮ, ಕಾಯಿ ಹಿಡಿದಿರುವ ಮತ್ತು ನೃತ್ಯ ಮಾಡುತ್ತಿರುವ ಶಿಲ್ಪಗಳು ಬಲಭಾಗದಲ್ಲಿವೆ. ಬಾಗಿಲ ಕೆಳಗೆ ಕದಂಬ ದ್ರಾವಿಡ ಶೈಲಿಯ ಮಂಟಪವೊಂದಿದ್ದು, ಅದರಲ್ಲಿ ನಮಸ್ಕರಿಸುತ್ತಿರುವ ಭಕ್ತನ ಶಿಲ್ಪ ಮತ್ತು ಅದರ ಪಕ್ಕಕ್ಕೆ ಸಿಂಹ ವೆಯ್ಯಾವಳಿಗಳನ್ನು ಕೆತ್ತಲಾಗಿದೆ. ಅಂತರಾಳದ ದೇವಕೋಷ್ಠಕ ಖಾಲಿಯಿದೆ.

ಗರ್ಭಗುಡಿಯ ಭುವನೇಶ್ವರಿ ಅಷ್ಟ-ಷಷ್ಟಿ-ಚೌಕಾಕಾರವಾಗಿ ಚಿಕ್ಕ, ಚಿಕ್ಕ ಕುಸುರಿ ಕೆಲಸಗಳಿಂದ ಮಾಡಲಾಗಿದೆ. ಚೌಕಾಕಾರದ ಮಧ್ಯದಲ್ಲಿ ಭುವನೇಶ್ವರಿ ಕೆತ್ತನೆಯಿದೆ. ಗುಡಿಯ ಶಿಖರವು ಕದಂಬ ಮಾದರಿಯಲ್ಲಿದೆ. ಶಿಖರವು ನಕ್ಷತ್ರಾಕಾರದಲ್ಲಿದ್ದು, ಕಮಲದ ದಳಗಳ ಮೇಲೆ ಕಳಶವಿದೆ. ದೇವಾಲಯದ ಅಧಿಷ್ಠಾನದಲ್ಲಿ ಚತುರ್ದಳದ ಪುಷ್ಪಗಳ ಕೆತ್ತನೆಯಿದೆ.

ಎತ್ತರದ ನಕ್ಷತ್ರಾಕಾರದ ಅಧಿಷ್ಠಾನ, ಅದರ ಭಿತ್ತಿಭಾಗದಲ್ಲಿ ಶಿಲಾಬಾಲಿಕೆಯರ ಶಿಲ್ಪ ನೃತ್ಯ ಮಾಡುವ ಭಂಗಿಯಲ್ಲಿವೆ. ತಬಲ ಬಾರಿಸುವ, ನೃತ್ಯ ಮಾಡುವ ಶಿಲ್ಪಗಳ ಮಧ್ಯ ಚಿಕ್ಕ ದೇವಕೋಷ್ಠಕದಲ್ಲಿ ಗಣಪತಿಯನ್ನು ಕೆತ್ತಲಾಗಿದೆ. ನಾಗರಶೈಲಿಯ ದೇವಕೋಷ್ಠಕದಲ್ಲಿ ತ್ರಿಶೂಲ, ಡಮರು, ರುಂಡ ಮಾಲೆ ಧರಿಸಿರುವ ಸ್ಥಾನಿಕ ಶಿವನ ಶಿಲ್ಪವಿದೆ. ಅದರ ಇಕ್ಕೆಲಗಳಲ್ಲಿ ನೃತ್ಯ ಭಂಗಿಯಲ್ಲಿರುವ ಶಿಲ್ಪಗಳಿವೆ. ಭಿತ್ತಿ ಭಾಗದಲ್ಲಿ ಚೌಕಾಕಾರದ ಹೂವಿನ ಕೆತ್ತನೆಗಳಿವೆ. ಉದ್ದನೆಯ ಕಬ್ಬು ಮತ್ತು ಅಂಕುಶ ಹಿಡಿದ ಶಿಲಾಬಾಲಕ, ಡಮರು ಬಾರಿಸುತ್ತಾ ನೃತ್ಯ ಮಾಡುವ ಶಿಲಾಬಾಲಿಕೆಯರ ಮಧ್ಯದಲ್ಲಿ ಕಿರೀಟಧಾರಿ, ರುಂಡವಿರುವ ಭಲ್ಲೆ, ಸರ್ಪ (ಎಡಕ್ಕೆ), ಗಂಟೆ, ಡಮರು (ಬಲಕ್ಕೆ) ಹಿಡಿದು ರುಂಡ ಮಾಲೆಯ ಯಜ್ಞೋಪವಿತ, ಸೊಂಟಪಟ್ಟಿ, ಬಾಹುವಲ್ಯ, ಎದೆಪಟ್ಟಿ, ಕೈಗಡಗ, ಕಾಲ್ಗಡಗ, ಪೈಜಾಮಗಳನ್ನು ಧರಿಸಿ ನೃತ್ಯ ಭಂಗಿಯಲ್ಲಿ ನಿಂತಿರುವ ಶಿಲಾಬಾಲಕನ ಶಿಲ್ಪವಿದೆ. ಅವುಗಳ ಮೇಲ್ಭಾಗದ ಪಟ್ಟಿಕೆಗಳಲ್ಲಿ ನೃತ್ಯ ಮಾಡುವ ನವಿಲುಗಳ ಕೆತ್ತನೆಯಿದೆ.

ಡಮರು ಬಾರಿಸುತ್ತಾ ನೃತ್ಯ ಮಾಡುತ್ತಿರುವ ಮತ್ತು ನಿಂತ ಶಿಲಾಬಾಲಿಕೆಯ ಮಧ್ಯೆದಲ್ಲಿ ಚಿಕ್ಕ ದೇವಕೋಷ್ಠಕ ಕಲ್ಲಿನೊಳಗೆ ಕೆತ್ತಲಾಗಿದೆ. ಅದರಲ್ಲಿ ಭೈರವ ದಂಡ, ಡಮರು ಮತ್ತು ಅಂಕುಶ? ಹಿಡಿದು ಸ್ಥಾನಿಕ ಭಂಗಿಯಲ್ಲಿರುವ ಶಿಲ್ಪವಿದೆ. ಕೈಯಲ್ಲಿರುವ ರುಂಡವನ್ನು ನಾಯಿಯು ತಿನ್ನಲೆತ್ನಿಸುತ್ತಿರುವ ಶಿಲ್ಪವಿದೆ. ಇದರ ನಂತರದ ಚಿಕ್ಕ ದೇವಕೋಷ್ಠಕದಲ್ಲಿ ಅಭಯಹಸ್ತ, ಗದಾಧಾರಿ, ತ್ರಿಶೂಲ, ಡಮರ? ಹಿಡಿದ ಸ್ಥಾನಿಕ ಭಂಗಿಯ ಶಿವನ ಶಿಲ್ಪವಿದೆ. ಅದರ ಪಕ್ಕದಲ್ಲಿ ಕಮಂಡಲ, ಬೀಜಪುರ? ಹಿಡಿದಿರುವ ಶಿಲಾಬಾಲಿಕೆಯ ಶಿಲ್ಪವಿದೆ.

ದೇವಾಲಯದ ಹಿಂದಿನ ಭಾಗದ ದೇವಕೋಷ್ಠಕದಲ್ಲಿ ನಾಟ್ಯಭೈರವಿಯ ಶಿಲ್ಪವಿದೆ. ಕಾಲಿನ ಕೆಳಗೆ ಅಪಸ್ಮಾರನಿಗೆ ತುಳಿಯುತ್ತಾ ನೃತ್ಯ ಮಾಡುವ ಭಂಗಿಯಲ್ಲಿದೆ. ಇಕ್ಕೆಲಗಳಲ್ಲಿ ಭೂತ-ಪ್ರೇತಗಳು ನೃತ್ಯ ಮಾಡುತ್ತಿವೆ. ಬಲಗೈ ಖಡ್ಗದಿಂದ ಭೂತವನ್ನು ಇರಿಯಲು ಮುಂದಾದಂತೆ ಮತ್ತು ಎಡಗೈ ಕಿರಿಬೆರಳು ಕಚ್ಚುತ್ತಿರುವಂತೆ ಕೆತ್ತಲಾಗಿದೆ. ಅಷ್ಟ ಕೈಗಳನ್ನು ಹೊಂದಿರುವ ಶಿಲ್ಪದ ಹಿಂದಿನ ಕೈಯಲ್ಲಿ ಡಮರು, ಚಕ್ರ, ಮಧ್ಯದ ಎಡಗೈಯಲ್ಲಿ ರುಂಡ ಮತ್ತು ಆರೋಪ್ಯಮಾಲಾ ಸುತ್ತಿಕೊಂಡಂತೆ ಕೆತ್ತಲಾಗಿದೆ. ಉಳಿದ ಕೈಗಳು ತ್ರುಟಿತವಾಗಿವೆ. ಎರಡು ಕಾಲುಗಳಿಗೆ ನಾಗರಹಾವು ಸುತ್ತಿಕೊಂಡಿದೆ. ಕಿರೀಟಧಾರಿ, ಬಾಹುವಲ್ಯ, ತೋಳ್ಬಂದಿ, ಕೈಬಳೆ, ಕುತ್ತಿಗೆಹಾರ, ಕೊರಳಿನ ಹಾರ, ರುಂಡ ಮಾಲಾ, ಸ್ತನ ಪಟ್ಟಿ, ಸೊಂಟಪಟ್ಟಿ, ಕಾಲ್ಗಡಗದ ಕೆತ್ತನೆಯಿದೆ.

ನೃತ್ಯ ಮಾಡುವ ಮತ್ತು ನಿಂತಿರುವ ಶಿಲಾಬಾಲಿಕೆಯರ ಮಧ್ಯದಲ್ಲಿ ಚಿಕ್ಕ ಕೋಷ್ಠಕದಲ್ಲಿ ಗಣಪತಿಯ ಶಿಲ್ಪವಿದೆ. ಪಕ್ಕದ ಕೋಷ್ಠಕದಲ್ಲಿ ಅಸ್ಪಷ್ಟ ನೃತ್ಯ ಭಂಗಿಯ ನಟರಾಜನ? ಕೆತ್ತನೆಯಿದೆ. ಸ್ಥಾನಿಕ ಭಂಗಿಯಲ್ಲಿರುವ ಭೈರವ ಶಿಲ್ಪವಿದೆ. ಚತುರ್ಭುಜಧಾರಿ ಮುಂದಿನ ಬಲಗೈ ತ್ರುಟಿತ. ಎಡಗೈಯಲ್ಲಿ ರುಂಡ ಅದನ್ನು ನೆಕ್ಕುತ್ತಿರುವ ನಾಯಿ, ಹಿಂದಿನ ಕೈಗಳಲ್ಲಿ ಡಮರು-ತ್ರಿಶೂಲಗಳ ಕೆತ್ತನೆಯಿದೆ. ಕೊರಳಿನಹಾರ, ರುಂಡ ಮಾಲೆ, ಕೈಗಡಗ, ಕಾಲ್ಗಡಗ, ಕರ್ಣಕುಂಡಲ, ಬಾಹುವಲ್ಯ, ಕುಚಹಾರ, ತೋಳಿಗೆ ರುದ್ರಾಕ್ಷಿ? ಉದ್ದನೆಯ ಹಾರದಲ್ಲಿ ಗಂಟೆಗಳ ಕೆತ್ತನೆಯಿದೆ.

ಭಿತ್ತಿಯ ದೇವಕೋಷ್ಠಕದಲ್ಲಿ ಚತುರ್ಭುಜಧಾರಿ ಭಿಕ್ಷಾಟನೆ ಶಿವನ ಶಿಲ್ಪವಿದೆ. ಮುಂದಿನ ಕೈಗಳಲ್ಲಿ ಚೂರಿ, ಮೇಲೆ ಕಪೋತ ಅದೇ ಕೈಯಲ್ಲಿ ಕೆಳಗೆ ರುಂಡ ಹಿಡಿದಿದೆ. ಹಿಂದಿನ ಕೈಗಳಲ್ಲಿ ಡಮರು ಮತ್ತು ತ್ರಿಶೂಲ ಹಿಡಿದಿದೆ. ಹಿಂದಿನಿಂದ ನಾಯಿ ರುಂಡದಿಂದ ಬರುತ್ತಿರುವ ರಕ್ತ ನೆಕ್ಕಲೆತ್ನಿಸುತ್ತಿದೆ. ರುಂಡಮಾಲೆ, ಯಜ್ಞೋಪವೀತ, ಕೊರಳಿನಹಾರ, ಕರ್ಣಕುಂಡಲ, ಸೊಂಟಪಟ್ಟಿ, ಕೈಗಡಗ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಶಿಲ್ಪ ಚತುರ್ಭುಜಧಾರಿಯಾಗಿದೆ. ಕುಳಿತ ಭಂಗಿಯಲ್ಲಿರುವ ಗಣಪತಿ ಕಿರೀಟಧಾರಿ, ಕೈಗಡಗ, ಕಾಲ್ಗಡಗ, ಸರ್ಪವನ್ನು ಸೊಂಟಕ್ಕೆ ಸುತ್ತಿಕೊಂಡಿದೆ.

ಮದನ/ ಮದನಿಕೆಯರ ಶಿಲ್ಪ:- ತಬಲ, ವಾದ್ಯ ಬಾರಿಸುತ್ತಾ ನೃತ್ಯ ಮಾಡುವ ಭಂಗಿಯಲ್ಲಿದೆ. ಶಿಲ್ಪದಲ್ಲಿ ತುರುಬ ಮತ್ತು ಸ್ವಲ್ಪ ಕೂದಲು ಕೆಳಗೆ ಬಿಟ್ಟಿದೆ. ಕಿವಿ ಓಲೆ, ಕುತ್ತಿಗೆ ಹಾರ, ಕೊರಳ್ ಹಾರ, ತೋಳ್ಬಂದಿ, ಸೊಂಟಪಟ್ಟಿ, ಕೈಬಳೆ, ಕಾಲ್ಗೆಜ್ಜೆ, ಪೈಜಾಮ ಧರಿಸಿದೆ.

* ಉದ್ದನೆಯ ಕಬ್ಬು ಮತ್ತು ಅಂಕುಶ ಹಿಡಿದ ಶಿಲಾಬಾಲಕ, ಯಜ್ಞೋಪವೀತ, ಕೊರಳ್ ಹಾರ, ಕಂಠ ಹಾರ, ಬಾಹುವಲ್ಯ, ಕರ್ಣಕುಂಡಲ, ಮುಕುಟ ಕಿರೀಟ, ಕಾಲ್ಗಡಗ, ಕಟಿವಸ್ತ್ರ, ಕುಚಹಾರ, ವಕ್ಷಬಂಧ, ಕಾಲ್ಗಡಗ, ಧರಿಸಿದ ಶಿಲ್ಪವಿದೆ.
* ದಪ್ಪನೆಯ ತುರುಬು, ಕಿವಿಓಲೆ, ಸ್ತನಪಟ್ಟಿ, ಬಾಹುವಲ್ಯ, ತೋಳ್ಬಂದಿ, ಕೈಬಳೆ, ಕುಚಹಾರ, ಕಟಿವಸ್ತ್ರ ಕಾಲ್ಗಡಗ, ಪೈಜಾಮ ಧರಿಸಿ ನೃತ್ಯ ಭಂಗಿಯಲ್ಲಿರುವ ಶಿಲಾಬಾಲಿಕೆಯ ಶಿಲ್ಪವಿದೆ.
* ತುರುಬದಂಥ ಶೈಲಿಯ ಕೂದಲ ವಿನ್ಯಾಸಗೊಳಿಸಲಾಗಿದೆ. ತೋಳ್ಬಂದಿ, ಕೈಬಳೆ, ಕಂಠಹಾರ, ಎದೆಹಾರ, ಕೊರಳಹಾರ, ಕುಚಹಾರ, ಸೊಂಟಪಟ್ಟಿ, ಕಾಲ್ಗೆಜ್ಜೆ, ಪೈಜಾಮ ಧರಿಸಿದ ಶಿಲ್ಪವಿದೆ. ಇದರ ಬಲಗೈಯಲ್ಲಿ ಕಮಂಡಲ ಎಡಗೈಯಲ್ಲಿ ಬೀಜಮರ ಹಿಡಿದಂತೆ ಕೆತ್ತಲಾಗಿದೆ.
* ತಲೆಭಾಗದ ಪ್ರಭಾವಳಿಯಲ್ಲಿ ವೃತ್ತಾಕಾರದ ಪ್ರಭೆಯಂತೆ ಕೂದಲುಗಳನ್ನು ವಿನ್ಯಾಸ ಮಾಡಲಾಗಿದೆ. ಕೇಶಾಲಂಕಾರಿಕ ಆಭರಣ, ತೋಳ್ಬಂದಿ, ಕೈಬಳೆ, ಕಂಠಹಾರ, ಎದೆ ಹಾರ, ಕೊರಳಹಾರ, ಕುಚಹಾರ, ಸೊಂಟಪಟ್ಟಿ, ಕಾಲ್ಗೆಜ್ಜೆ, ಪೈಜಾಮ ಬಲಗೈ- ಬಲಗಾಲು ಮೇಲೆತ್ತಿ ಎಡಗೈ ಕಮಲಹಸ್ತದಲ್ಲಿದ್ದು ನೃತ್ಯ ಮಾಡುತ್ತಿರುವಂತೆ ಕೆತ್ತಲಾಗಿದೆ.

* ಕೈಬಳೆ, ಕಂಠಹಾರ, ಎದೆಹಾರ, ಕೊರಳ್‌ಹಾರ, ಕುಚಹಾರ, ಸೊಂಟಪಟ್ಟಿ, ಕಾಲ್ಗೆಜ್ಜೆ, ಪೈಜಾಮ, ಕಟಿವಸ್ತ್ರ, ತಲೆಗೆ ಪ್ರಭಾವಳಿಯಂತೆ ಕೇಶಾಲಂಕಾರ ಮಾಡಿ ನಾಚಿಕೊಂಡು ನಿಂತಂತೆ ಮದನಿಕೆಯ ಶಿಲ್ಪ ಕೆತ್ತಲಾಗಿದೆ. ಪ್ರಸ್ತುತ ತ್ರುಟಿತವಾಗಿದೆ.

* ಎರಡು ಕೈಗಳನ್ನು ಮೇಲೆತ್ತಿ ಸರ್ಪವನ್ನು ಹಿಡಿದು, ತಲೆ ಸ್ವಲ್ಪ ಓರೆಗೈದು ಮೊಳಕಾಲ ಕೆಳಗೆ ಸರ್ಪ ಕಟ್ಟಿಕೊಂಡು ಸ್ಥಾನಿಕ ಭಂಗಿಯಲ್ಲಿರುವ ಮದನಿಕೆಯ ಶಿಲ್ಪವಿದೆ. ಕೈಬಳೆ, ಕಂಠಹಾರ, ಕಿವಿಓಲೆ, ತುರುಬದ ಕೇಶಾಲಂಕಾರ, ಕಾಲ್ಗಡಗ, ಪೈಜಾಮ ಮತ್ತು ಸರ್ಪವನ್ನೇ ಕೊರಳಿಗೆ ಹಾರ ಮಾಡಿಕೊಂಡಿರುವ ಶಿಲ್ಪವಾಗಿದೆ.

* ತಲೆ ಬಾಗಿಸಿ ತಬಲ ಬಾರಿಸುತ್ತಾ ನೃತ್ಯ ಮಾಡುವ ಭಂಗಿಯ ಇನ್ನೊಂದು ಮದನಿಕೆ ಶಿಲ್ಪ ತ್ರುಟಿತವಾಗಿದೆ. ಕೇಶಾಲಂಕಾರದ ಆಭರಣದಿಂದ ಗುಂಡಗೆ ಕಟ್ಟಿದ ಕೂದಲಿಗೆ ಕಟ್ಟಿದಂತೆ ಕೆತ್ತಲಾಗಿದೆ. ಕೈಬಳೆ, ಕಂಠಹಾರ, ಎದೆಹಾರ, ಕೊರಳಹಾರ, ಕುಚಹಾರ, ಸೊಂಟಪಟ್ಟಿ, ಕಾಲ್ಗೆಜ್ಜೆ, ಪೈಜಾಮ, ಕಟಿವಸ್ತ್ರ, ತೊಡೆಪಟ್ಟಿ ಧರಿಸಿದಂತೆ ಕೆತ್ತಲಾಗಿದೆ.

* ತ್ರುಟಿತ ಮದನಿಕೆಯ ಶಿಲ್ಪ ಸುತ್ತಿದ ಕೇಶ ವಿನ್ಯಾಸವಿದೆ. ಯಜ್ಞೋಪವೀತ, ಬಾಹುವಲ್ಯ, ಕೈಬಳೆ, ಕಂಠಹಾರ, ಎದೆಹಾರ, ಕೊರಳ್‌ಹಾರ, ಕುಚಹಾರ, ಸೊಂಟಪಟ್ಟಿ, ಕಾಲ್ಗೆಜ್ಜೆ, ಪೈಜಾಮ ಧರಿಸಿದೆ. ಎಡಗಾಲನ್ನು ಎತ್ತಿ ನೃತ್ಯಭಂಗಿಯಲ್ಲಿರುವ ಮದನಿಕೆಯ ಆ ಕಾಲನ್ನು ಕುಬ್ಜನು ಹಿಡಿದಂತೆ ಕೆತ್ತಲಾಗಿದೆ.

* ಕಿರೀಟ ಮುಕುಟ, ಕಿವಿಓಲೆ, ಕಂಠಹಾರ, ಕೊರಳಿನ ಹಾರ, ಕೈಬಳೆ, ಕಂಠಹಾರ, ಎದೆಹಾರ, ಕುಚಹಾರ, ಸೊಂಟಪಟ್ಟಿ, ಕಾಲ್ಗೆಜ್ಜೆ, ಪೈಜಾಮ, ಕಟಿವಸ್ತ್ರ ಧರಿಸಿದೆ. ಎಡಕ್ಕೆ ತಲೆ ಓಲೈಸಿದ್ದು, ಎಡಗೈ ಎದೆ ಭಾಗದಲ್ಲಿದೆ. ಬಲಗೈ ತ್ರುಟಿತವಾಗಿದೆ.

ಸ್ಥಳ: ಕೋತಾ ಜಂಬಗಿ — **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ — **ದೇವಾಲಯ:** ಮಹಾದೇವನ ಗುಡಿ

ಸ್ಥಿತಿ: ಕನಿಷ್ಠ — **ಕಾಲ:** ಸು.೧೧ನೆಯ ಶತಮಾನ

ಉತ್ತರಾಭಿಮುಖ ಪ್ರಸ್ತುತ ತ್ರುಟಿತವಾಗಿರುವ ದೇವಾಲಯದ ಗರ್ಭಗುಡಿ ಮಾತ್ರ ಉಳಿದಿದೆ. ಶಿವಲಿಂಗ ಗುಡಿಯೊಳಗಿದೆ. ಕಲ್ಯಾಣ ಚಾಲುಕ್ಯ ಶೈಲಿಯ ಕಂಬಗಳ ವಿನ್ಯಾಸವಿದೆ.

ಸ್ಥಳ: ಬೆಳಗುಂಪಾ(ಕೆ) — **ಶೈಲಿ:** ರಾಷ್ಟ್ರಕೂಟ

ಶಿಲೆ: ಕಪ್ಪು ಕಲ್ಲು — **ದೇವಾಲಯ:** ಶಂಕರಲಿಂಗ ಗುಡಿ

ಸ್ಥಿತಿ: ಕನಿಷ್ಠ — **ಕಾಲ:** ಸು.೯ನೆಯ ಶತಮಾನ

ಶಂಕರಲಿಂಗ ಗುಡಿ ತ್ರಿಕೂಟ ದೇವಾಲಯವಾಗಿದೆ. ಇಲ್ಲಿ ಎರಡು ಅಪ್ರಕಟಿತ ಶಾಸನಗಳು ದೊರಕಿವೆ. ಎತ್ತರದ ಜಗತಿಯ ಮೇಲಿರುವ ಈ ದೇವಾಲಯವು ಹೊರ ಪ್ರಾಂಗಣ ಮತ್ತು

ಒಳಪ್ರಾಂಗಣ, ಕಕ್ಷಾಸನ, ಕಪೋತ, ಛಾವಣಿ, ದೀಪಸ್ತಂಭ, ರಂಗಭೋಗ, ನವರಂಗ, ಅಂತರಾಳ, ಮೂರು ಗರ್ಭಗುಡಿಯನ್ನೊಳಗೊಂಡಿವೆ. ಅಂತರಾಳದ ಬಾಗಿಲವಾಡದ ಮೇಲೆ ಮತ್ತು ನವರಂಗದ ಎಡಕ್ಕೆ ಶಾಸನವಿದೆ. ಶಾಸನ ಶಾಹಬಾದಿ ಕಲ್ಲಿನ ಮೇಲೆ ಕೆತ್ತಲಾಗಿದೆ. ಇದರ ಲಲಾಟದ ಮೇಲೆ ಸೂರ್ಯ, ಚಂದ್ರ, ಲಿಂಗ, ನಂದಿ ಶಿಲ್ಪಗಳಿವೆ. ಶಂಕರಲಿಂಗ ಗುಡಿಯ ಅಂತರಾಳದ ಬಾಗಿಲವಾಡವು ತ್ರಿಶಾಖ ಬಾಗಿಲವಾಡವಾಗಿದೆ. ಜಾಲಾಂದ್ರದ ಇಕ್ಕೆಲಗಳಲ್ಲಿ ಕೂಡ್ಯ ಸ್ತಂಭಗಳಿವೆ.

ನವರಂಗದಲ್ಲಿ ಗಿಡ್ಡನೆಯ ಸ್ತಂಭಗಳಿವೆ. ರಾಷ್ಟ್ರಕೂಟರ ಕಾಲದ ಶೈಲಿಯಲ್ಲಿವೆ. ನವರಂಗದ ಮುಂದಿನ ಕಂಬದ ಬಳಿ ನಂದಿಯಿದೆ. ನವರಂಗದಲ್ಲಿ ಶಿವ-ಪಾರ್ವತಿಯರ ಶಿಲ್ಪವನ್ನು ಲಿಂಗ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಅದರ ಮುಂದೆ ಶಿವಲಿಂಗವಿದೆ. ಅಂತರಾಳದ ದೇವಕೋಷ್ಠಕಗಳೆರಡಿವೆ. ಬಲಕ್ಕೆ ಗಣಪತಿಯಿದೆ. ಒಂದು ದೇವಕೋಷ್ಠಕ ಖಾಲಿಯಿದೆ. ಗರ್ಭಗುಡಿಯ ಬಲಕ್ಕೆ ಮತ್ತು ಎಡಕ್ಕೆ ಗರ್ಭಗುಡಿಗಳಿವೆ. ಮೂರು ಗರ್ಭಗುಡಿಗಳಲ್ಲಿ ಶಿವಲಿಂಗಗಳಿವೆ. ಫೀಡಾದೇಉಲ್ ಶೈಲಿಯಲ್ಲಿ ಶಿಖರವಿದೆ. ಗೋಪುರವು ಫೇಡಾದಿ ವಿನ್ಯಾಸದಲ್ಲಿದೆ.

ಗುಡಿಯ ಪ್ರಾಂಗಣದಲ್ಲಿ ತ್ರುಟಿತ ಭೈರವ ಶಿಲ್ಪವಿದೆ. ಪ್ರಾಂಗಣದ ಪ್ರವೇಶ ದ್ವಾರದಲ್ಲಿ ಒಂದು ಕೋಣೆಯಿದೆ. ಗರ್ಭಗುಡಿಗೆ ಹತ್ತಿಕೊಂಡಿರುವ ನಾಲ್ಕು ಕಂಬಗಳುಳ್ಳ ಒಂದು ಮಂಟಪವಿದೆ. ಇಲ್ಲಿ ಸಂಗೀತ, ವಾದ್ಯಗಳು ನುಡಿಸುತ್ತಿರುವ ಕೋಣೆಯಾಗಿರಬಹುದು? ಆ ಕೋಣೆಗೆ ತಾಕಿರುವ ದೇವಕೋಷ್ಠಕದಲ್ಲಿ ನಿಂತ ಶಿಲಾಬಾಲಿಕೆಯ ಕೆತ್ತನೆಯಿದೆ. ಬಲಗೈಯಲ್ಲಿ ಬೀಜಪುರ, ಎಡಗೈಯ ಬಳಿ ನೀಳವಾದ ಕೇಶ ತಾಕುವ ರೀತಿಯಲ್ಲಿ ಕೆತ್ತನೆ ಮಾಡಲಾಗಿದೆ. ಕಂಠಹಾರ, ಕೊರಳಿನಾಭರಣ, ಎದೆಹಾರ, ಕಟಿವಸ್ತ್ರ, ತೋಳ್ಬಂದಿ, ಕೈಬಳೆಗಳು, ನಡುಬಂದಿ, ಕುಚಹಾರ, ಇಳಿಬಟ್ಟೆ, ಕಾಲ್ಗಡಗ, ಕಾಲಿಗೆ ಪೈಜಾಮ ಧರಿಸಿದಂತೆ ಕೆತ್ತಲಾಗಿದೆ. ಅದರ ಬಲಕ್ಕೆ ನಮಸ್ಕರಿಸುವ ಭಂಗಿಯಲ್ಲಿ ಕುಳಿತ ಚಿಕ್ಕ ಶಿಲ್ಪ ಕೆತ್ತಲಾಗಿದೆ.

ಸ್ಥಳ: ಬೆಳಗುಂಪಾ(ಕೆ) **ಶೈಲಿ:** ರಾಷ್ಟ್ರಕೂಟ

ಶಿಲೆ: ಕಪ್ಪು ಕಲ್ಲು. **ದೇವಾಲಯ:** ಕೊತ್ತುಲರಾಯ ಗುಡಿ

ಸ್ಥಿತಿ: ಕನಿಷ್ಠ **ಕಾಲ:** ಸು.೮ನೆಯ ಶತಮಾನ

ದ್ವಿಕೂಟ ದೇವಾಲಯವು ಎತ್ತರದ ಜಗತಿಯ ಮೇಲಿದೆ. ಉಪಾನ, ಅಧಿಷ್ಠಾನ, ಭಿತ್ತಿಭಾಗ ಮತ್ತು ಭಿತ್ತಿಭಾಗದಲ್ಲಿ ದೇವಕೋಷ್ಠಕಗಳಿವೆ. ದೇವಾಲಯವು ನಕ್ಷತ್ರಾಕಾರದಲ್ಲಿ ಅಧಿಷ್ಠಾನ ಮತ್ತು ಭಿತ್ತಿಭಾಗ ಕಟ್ಟಲಾಗಿದೆ. ಭಿತ್ತಿಭಾಗದಲ್ಲಿ ಸರಳರೇಖಾಕೃತಿಯಲ್ಲಿ ಕಟ್ಟಿದ್ದು ದೇವಕೋಷ್ಠಕಗಳು ಪ್ರಸ್ತುತ ಖಾಲಿಯಿವೆ. ಮೇಲಿನ ಶಿಖರ ನಾಶವಾಗಿದೆ. ಪ್ರಮುಖ ಗರ್ಭಗುಡಿಯ ಬಾಗಿಲವಾಡ ಪಂಚಶಾಖಾಲಂಕೃತವಾಗಿದೆ. ಲಲಾಟದ ಮೇಲೆ ಗಣಪತಿ ಶಿಲ್ಪವಿದೆ. ಪ್ರಸ್ತುತ ಗರ್ಭಗುಡಿಗಳೆರಡು ಪರಸ್ಪರ ಎದುರುಬದುರಾಗಿದ್ದು ಪ್ರಮುಖ ಗರ್ಭಗುಡಿ ಖಾಲಿಯಿದೆ ಇನ್ನೊಂದು ಗರ್ಭಗುಡಿಯ ಬಾಗಿಲವಾಡ ದ್ವಿಶಾಖಾಲಂಕೃತವಾಗಿದೆ. ಕುಡ್ಯಸ್ತಂಭ, ಚತುರ್ದಳದ ಹೂವು ಮತ್ತು ಅದರ ಪಕ್ಕದ ಭಿತ್ತಿಭಾಗದಲ್ಲಿ ಕುಡ್ಯಸ್ತಂಭ ಶಿಲ್ಪವಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ.

ಸ್ಥಳ: ಇಟಗಾ(ಬಿ) ಶೈಲಿ: ರಾಷ್ಟ್ರಕೂಟ

ಶಿಲೆ: ಕಪ್ಪು ಕಲ್ಲು ದೇವಾಲಯ: ಈಶ್ವರ ದೇವಾಲಯ

ಸ್ಥಿತಿ: ಅವಸಾನ ಕಾಲ: ಸು.೯-೧೦ನೆಯ ಶತಮಾನ

ತ್ರಿಶಾಖ ಬಾಗಿಲವಾಡ ಪ್ರವೇಶದ್ವಾರಕ್ಕಿದೆ. ಎರಡು ಸಾದಾ ಇನ್ನೊಂದು ಕನಕದಳಗಳಿಂದ ಕೂಡಿದೆ. ಬಾಗಿಲವಾಡದ ಕೆಳಗೆ ದ್ವಾರಪಾಲಕನ ಶಿಲ್ಪಕೆತ್ತನೆಯಿದೆ. ಗರ್ಭಗುಡಿಯ ಬಲಭಾಗದಲ್ಲಿ ಮಾತ್ರ ಬಲಗೈ ತ್ರುಟಿತ ಮತ್ತು ಗದಾಹಸ್ತವಿರುವ ದ್ವಾರಪಾಲಕನ ಶಿಲ್ಪವಿದೆ. ಲಲಾಟದ ಮೇಲೆ ಸಪ್ತಮಾತೃಕೆಯರ ಶಿಲ್ಪ ಮತ್ತು ಇದರ ಇಕ್ಕೆಲಗಳಲ್ಲಿ ನವಿಲಿನ ಕೆತ್ತನೆಯಿದೆ. ಗರ್ಭಗುಡಿ, ಅಂತರಾಳ, ನವರಂಗವಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಅಂತರಾಳದ ಕಂಬಗಳು ರಾಷ್ಟ್ರಕೂಟರ ಕಾಲಕ್ಕೆ ನಿರ್ಮಿತವಾದಂತೆ ತೋರುತ್ತವೆ. ನವರಂಗದ ಕಂಬಗಳು ಗಿಡ್ಡಕ್ಕಿದ್ದು, ಸಾದಾ ಕೆತ್ತನೆಗಳಿವೆ.

ನವರಂಗದ ಭಿತ್ತಿಭಾಗಗಳಲ್ಲಿ ಮೂರು ವೀರಗಲ್ಲು ಶಿಲ್ಪ, ಆಯುಧ ಹಿಡಿದ ನಾಗಶಿಲ್ಪ, ನಾಗಶಿಲ್ಪಗಳು, ಮಹಿಷಾಸುರಮರ್ದಿನಿ ಶಿಲ್ಪ, ವಿಷ್ಣುವಿನ ಶಿಲ್ಪಗಳಿವೆ. ಹೊರ ಪ್ರಾಂಗಣದಲ್ಲಿ ಜನ್ಮರಾಶಿ ಫಲಕವು ಭುವನೇಶ್ವರಿಯಲ್ಲಿದ್ದು ತ್ರುಟಿತವಾಗಿದೆ. ಹಲವು ತ್ರುಟಿತ ಶಿಲ್ಪಗಳು ಪ್ರಾಂಗಣದಲ್ಲಿ ಬಿದ್ದಿವೆ. ಅವುಗಳಲ್ಲಿ ದೇವಾಲಯದ ಪದ್ಮದಳವಿರುವ ಅಧಿಷ್ಠಾನಭಾಗ, ಸಿಂಹ ಮತ್ತಿತರ ಪ್ರಾಣಿಪಟ್ಟಿಕೆ, ಸೂರ್ಯ, ಚಂದ್ರವಿರುವ ಜಿನಬಿಂಬ-ಸಲ್ಲೇಖನ ವ್ರತ?ದಲ್ಲಿ ಯತಿ ಧ್ಯಾನಕ್ಕೆ ಕುಳಿತಂತೆ ಕೆತ್ತಲಾಗಿದೆ. ಎರಡು ನಾಗ ಸುತ್ತಿಕೊಂಡಂತಿರುವ ಶಿಲ್ಪವಿದೆ ಮತ್ತು ತ್ರುಟಿತ ಅಧಿದೇವತೆಯರ ಮೂರ್ತಿ ಶಿಲ್ಪಗಳು ಇಲ್ಲಿ ದೊರಕಿವೆ. ಅಲ್ಲದೆ ದೇವಾಲಯದ ಪ್ರವೇಶಕ್ಕೆ ಒಂದು ಮಾಸ್ತಿಗಲ್ಲು ನೆಡಲಾಗಿದೆ.

ಸ್ಥಳ: ಬೋಳೆವಾಡ **ಶೈಲಿ:** ರಾಷ್ಟ್ರಕೂಟ

ಶಿಲೆ: ಕಪ್ಪು ಕಲ್ಲು **ದೇವಾಲಯ:** ಭೋಗಲಿಂಗೇಶ್ವರ

ಸ್ಥಿತಿ: ಮಧ್ಯಮ **ಕಾಲ:** ಸು.೮-೯ನೆಯ ಶತಮಾನ

ಭೋಗಲಿಂಗೇಶ್ವರ ದೇವಸ್ಥಾನದ ಪುಷ್ಕರಣಿ ಚೌಕ ಮುಂದೆ ಆಯತಾಕಾರದಲ್ಲಿದೆ. ಆಯತಾಕಾರದ ಭಾಗದಲ್ಲಿ ಹತ್ತಲು ಮೆಟ್ಟಿಲುಗಳನ್ನು ಮಾಡಲಾಗಿದೆ. ಅದರ ಮುಂದಿನ ಭಾಗದ ಚೌಕದಲ್ಲಿ ಎರಡು ಬೋದಿಗೆಗಳಿವೆ.

ದೇವಾಲಯ ಸುಕನಾಸಿ, ಕಕ್ಷಾಸನ ನವರಂಗ, ಅಂತರಾಳ ಮೂರು ಗರ್ಭಗುಡಿಗಳಿಂದ ಕೂಡಿದೆ. ನವರಂಗದಲ್ಲಿ ನಂದಿಶಿಲ್ಪವಿದೆ. ಸ್ತಂಭಗಳು ಗಿಡ್ಡಗಿವೆ. ರಾಷ್ಟ್ರಕೂಟರ ಕಾಲದ ಕಂಬಗಳಾಗಿವೆ. ಇಳಿಜಾರು ರೀತಿಯ ಕಪೋತವಿದೆ. ಕಂಬಗಳು ಬೋದಿಗೆ, ಚೌಕಾದ ನಂತರ ವೃತ್ತಾಕಾರದ ಪಟ್ಟಿಕೆಗಳಿಂದ ನಿರ್ಮಿತವಾಗಿವೆ. ಗಳ ಭಾಗದಲ್ಲಿ ಚಿಕ್ಕ ವೃತ್ತಾಕಾರ ಅದರ ಬದಿಯಲ್ಲಿ ಎಲೆಯಾಕಾರ ಅಲಂಕಾರಗಳಿವೆ. ಚೌಕಾಕಾರದ ಸ್ತಂಭ ಮತ್ತು ಅಷ್ಟಕೋನಾಕಾರದ ಪಟ್ಟಿಕೆಗಳಿವೆ. ಅಷ್ಟಕೋನಾಕಾರದ ಪಟ್ಟಿಕೆಗಳು, ಗಳ, ಅಷ್ಟಕೋನಾಕಾರದ ಹೂವಿನಂತೆ ಬಂದಿವೆ. ಮತ್ತೆ ಚೌಕ ಪಟ್ಟಿಕೆ, ಗಳ, ಚೌಕಾಕಾರದ ಸ್ತಂಭ ಕೆತ್ತಲಾಗಿದೆ.

ತ್ರಿಕೂಟೇಶ್ವರ ದೇವಾಲಯವಿದೆ. ಮೂರು ಲಿಂಗಗಳಿರುವ ಗರ್ಭ ಗುಡಿಗಳಿವೆ. ಗುಡಿಯ ದೇವಕೋಷ್ಠಕಗಳಲ್ಲಿ ಶಿವ-ಪಾರ್ವತಿಯ ಮೂರ್ತಿ, ಮಹಿಷಾಸುರಮರ್ದಿನಿ, ಗೋಡೆಯಲ್ಲಿ ಸಪ್ತಮಾತೃಕೆಯ ಮೂರ್ತಿ ಗರ್ಭಗುಡಿಯ ಅಕ್ಕ-ಪಕ್ಕದಲ್ಲಿವೆ. ಮೊದಲ ಗರ್ಭಗುಡಿ ಭೋಗಲಿಂಗ-ಗಜಲಕ್ಷ್ಮಿ ಲಲಾಟ ಮತ್ತು ಆದರ ಮೇಲ್ಭಾವಣಿಯ ಲಲಾಟದ ಮೇಲೆ ಗಣಪತಿ ಶಿಲ್ಪವಿದೆ. ಅದರ ಮೇಲೆ ನಾಗರ ಶೈಲಿಯ ಗೋಪುರಗಳ ಕೆತ್ತನೆಯಿದೆ.

ಗರ್ಭಗುಡಿಯಲ್ಲಿ ನುಣುಪಾದ ಕಪ್ಪು ಶಿಲೆಯಲ್ಲಿ ಶಿವಲಿಂಗವಿದೆ. ಗರ್ಭಗುಡಿಗೆ ಪಂಚಶಾಖಾಲಂಕೃತ ಬಾಗಿಲವಾಡವಿದೆ. ಪಂಚಶಾಖಾಲಂಕೃತ ಬಾಗಿಲವಾಡದಲ್ಲಿ ಚತುರ್ದಳ ಹೂವು, ಕಂಬದಂಥಾ ಪಟ್ಟಿಕೆಗಳು(ಗಳಭಾಗ), ಹೂಬಳ್ಳಿಗಳ ಕೆತ್ತನೆ, ಸಪಾಟಾದ ಕೆತ್ತನೆ(ಗಳಭಾಗ) ಮತ್ತು ಅಲಂಕೃತ ಕುಡ್ಯಸ್ತಂಭಗಳ ಭಾಗ ನಂತರ ಗಜಪಟ್ಟಿಕೆಯ ಕೆತ್ತನೆಯಿದೆ. ಬಾಗಿಲವಾಡದ ದ್ವಾರಪಾಲಕರು, ಚಾಮರಧಾರಿ, ಗಂಗೆ, ಯಮುನೆಯರ(ನೀರಿನ ಕುಂಡಲ ಹಿಡಿದವರು) ಶಿಲ್ಪಗಳಿವೆ.

ಬಾಗಿಲವಾಡದ ಚತುರ್ಬಾಹು ದ್ವಾರಪಾಲಕರು ಸರ್ಪ, ಚಕ್ರ, ಗದೆ, ಖಡ್ಗ? ಹಿಡಿದಿದೆ. ದಂಡ, ಗದೆ, ತ್ರಿಶೂಲ, ಹಿಡಿದಿದೆ. ಕಿರೀಟ, ಯಜ್ಞೋಪವೀತ, ಕೊರಳಹಾರ, ಮಣಿಕಂಠಕೆ, ಕರ್ಣಕುಂಡಲ, ಭುಜಬಂಧ, ವಕ್ಷಬಂಧ, ಕೈಗಡಗ, ಉರದಾಮ, ಕಟಿಬಂಧ, ಸೊಂಟಪಟ್ಟಿ, ವೈಜಯಂತಿ, ಪಾದಕಟಕ, ಪಾದರಸ ಧರಿಸಿದಂತೆ ಕೊರೆಯಲಾಗಿದೆ. ಚಾಮರಧಾರಿಯರು ಮತ್ತು ಗಂಗೆ, ಯಮುನೆಯರ ಶಿಲ್ಪಗಳಿಗೆ ಕಿರೀಟ, ಕಿವಿಓಲೆ, ಕೊರಳ ಹಾರ, ಮಣಿಕಂಠಿಕೆ, ಭುಜಬಂಧ, ಸ್ತನಬಂಧ, ಕೈಬಳೆ, ಉರದಾಮ, ಕಟಿಬಂಧ, ಕಾಲ್ಗೆಜ್ಜೆ, ಪಾದರಸ ಧರಿಸಿವೆ. ಬಾಗಿಲಿಗೆ ಚತುರ್ದಳದ ಹೂವಿನ ಮತ್ತು ವೆಯ್ಯಾವಳಿ ಕೆತ್ತನೆಗಳಿವೆ.

ಹೊರಗಿನ ಅಂತರಾಳದ ತ್ರಿಶಾಖ ದ್ವಾರ ಅಲಂಕೃತ ಕುಡ್ಯಸ್ತಂಭದ, ಹೂಬಳ್ಳಿ ಮತ್ತು ಕೂಡ್ಯ ಸ್ತಂಭ ಬಾಗಿಲವಾಡವಾಗಿದೆ. ಚಾಮರಧಾರಿಯರ ಶಿಲ್ಪ ಇಕ್ಕೆಲಗಳಲ್ಲಿವೆ. ಕಿರೀಟ ಮುಕುಟ, ಕಿವಿಓಲೆ, ಕೊರಳಹಾರ, ಮಣಿಕಂಠಿಕೆ, ಭುಜಬಂಧ, ಸ್ತನಬಂಧ, ಕೈಬಳೆ, ಉರದಾಮ, ಕಟಿಬಂಧ, ಕಾಲ್ಗೆಜ್ಜೆ, ಪಾದರಸ ಧರಿಸಿವೆ. ಗರ್ಭಗುಡಿಯ ಅಂತರಾಳದ ಲಲಾಟದ ಮೇಲೆ ನಟರಾಜ ನೃತ್ಯ ಮಾಡುವ ಶಿಲ್ಪವಿದೆ. ಲಲಾಟದ ಮೇಲಿನ ತೋರಣ ಶಿಲ್ಪದಲ್ಲಿ ಕಳಶ ಮಾತ್ರ ಫೀಡಾ ದೇಉಲ್ ಮಾದರಿಯಲ್ಲಿದೆ. ಶಿಖರಗಳ ಮತ್ತು ಕಳಶಗಳ ಮೇಲೆ ಗಂಧರ್ವರು ಹಾರುತ್ತಿರುವಂತೆ ಕೆತ್ತಲಾಗಿದೆ. ಅದರಲ್ಲಿ ಮಕರತೋರಣ, ಶಹನಾಯ್ ಊದುವವರು, ತಬಲವಾದಕರು, ಚಳ್ಳಂ, ನೃತ್ಯಗಾರರ ಮಧ್ಯೆದಲ್ಲಿ ನಟರಾಜ ನಾಟ್ಯ ಮಾಡುತ್ತಿರುವಂತೆ ಕೆತ್ತಲಾಗಿದೆ.

ಗರ್ಭಗುಡಿಯ ಎಡಕ್ಕಿರುವ ಮತ್ತೊಂದು ಗರ್ಭಗುಡಿಯಲ್ಲಿ ಶಿವಲಿಂಗ ಪೀಠ ಅಡ್ಡವಾಗಿರಿಸಲಾಗಿದೆ. ಬಾಗಿಲವಾಡ ಅಲಂಕೃತ ಕೂಡ್ಯ ಸ್ತಂಭದ ಕೆತ್ತನೆಯಿದೆ. ಲಲಾಟದ ಮೇಲಿನ ಭಾಗ ನಾಗರಶೈಲಿಯಲ್ಲಿ ಎಲೆಯಾಕಾರದ ಹೂವನ್ನು ಕೆತ್ತಲಾಗಿದೆ.

ಗರ್ಭಗುಡಿಯ ಬಲಕ್ಕಿರುವ ಗುಡಿಯ ಶಿವಲಿಂಗದ ಪೀಠದಲ್ಲಿ ಎರಡು ಲಿಂಗಗಳಿವೆ. ಬಾಗಿಲವಾಡ ಅಲಂಕೃತ ಕೂಡ್ಯ ಸ್ತಂಭದ ಕೆತ್ತನೆಯಿದೆ. ಲಲಾಟದಲ್ಲಿ ನಾಗರಶೈಲಿಯಲ್ಲಿ ಕೆತ್ತಲಾಗಿದ್ದು ಮಧ್ಯೆದಲ್ಲಿ ಚತುರ್ದಳ ಹೂವಿನ ಶಿಲ್ಪಗಳಿವೆ.

ದೇವಾಲಯದ ಮುಂಬದಿಯಲ್ಲಿ ಒಂದು ವೀರಗಲ್ಲಿದೆ. ಮತ್ತು ಗುಡಿಯ ಹೊರ ಬಲಬದಿಯ ಗೋಡೆಗೆ ಅಂಟಿಕೊಂಡಿರುವ ಹಾಗೆ ಹತ್ತು ವೀರಗಲ್ಲುಗಳು, ಸಿಂಹದೊಂದಿಗೆ ಹೋರಾಡುವ ವೀರಗಲ್ಲೊಂದಿದೆ. ಲಿಂಗ, ನಂದಿ, ತ್ರುಟಿತ ಆಯುಧಧಾರಿ ಸ್ತ್ರೀ ವಿಗ್ರಹ, ನಾಗಶಿಲ್ಪಗಳು, ಸಪ್ತ ಮಾತೃಕೆಯರು, ಎರಡು ಶಿವಲಿಂಗಗಳು, ಕಲ್ಲಿನ ಕೊಡದ ಶಿಲ್ಪವಿದೆ.

ಸ್ಥಳ: ಗರೂರು **ಶೈಲಿ:** ರಾಷ್ಟ್ರಕೂಟ

ಶಿಲೆ: ಕಪ್ಪು ಕಲ್ಲು **ದೇವಾಲಯ:** ಸೋಮಲಿಂಗೇಶ್ವರ

ಸ್ಥಿತಿ: ಮಧ್ಯಮ **ಕಾಲ:** ಸು.೮–೯ನೆಯ ಶತಮಾನ

ಪಶ್ಚಿಮಾಭಿಮುಖವಾಗಿರುವ ದೇವಾಲಯ ಗರ್ಭಗುಡಿ, ಅಂತರಾಳ, ನವರಂಗವನ್ನೊಳಗೊಂಡಿದೆ. ಗರ್ಭಗುಡಿಯಲ್ಲಿ ಈಶ್ವರ ಲಿಂಗವಿದೆ. ಗರ್ಭಗುಡಿಯ ಲಲಾಟ ಸಾದಾಯಿದೆ. ಬಾಗಿಲವಾಡ ತ್ರಿಶಾಖಾವಿದ್ದು ಸಾದಾಯಿದೆ. ಅಂತರಾಳ ಕುಡ್ಯಸ್ತಂಭಗಳಿಂದ ಕೂಡಿದೆ. ತ್ರುಟಿತ ಶಿವನ ತೊಡೆಯ ಮೇಲೆ ಕುಳಿತ ಪಾರ್ವತಿಯ ಶಿಲ್ಪವಿದೆ. ನವರಂಗದ ಕಂಬಗಳು ಸಾದಾ ಕೆತ್ತನೆಯಿಂದ ಕೂಡಿವೆ. ನವರಂಗದ ಭುವನೇಶ್ವರಿ ಚೌಕಗಳಿಂದ ಕೂಡಿದ್ದು ಅದರ ಮಧ್ಯ ದ್ವಿದಳ ಹೂವಿನ ಕೆತ್ತನೆಯಿದೆ. ನವರಂಗದ ಹಿಂದೆ ನಂದಿ ಶಿಲ್ಪವಿದೆ. ಪ್ರವೇಶದ್ವಾರ ತೀರಾ ಚಿಕ್ಕದಾಗಿದೆ ಮತ್ತು ಸಾದಾ ಬಾಗಿಲವಾಡವಿದೆ.

ಸ್ಥಳ: ಹಂಗರಗಾ **ಶೈಲಿ:** ರಾಷ್ಟ್ರಕೂಟ

ಶಿಲೆ: ಕಪ್ಪು ಕಲ್ಲು **ದೇವಾಲಯ:** ವೀರಭದ್ರೇಶ್ವರ

ಸ್ಥಿತಿ: ಮಧ್ಯಮ **ಕಾಲ:** ಸು.೧೧ನೆಯ ಶತಮಾನ

ವೀರಭದ್ರೇಶ್ವರ ದೇವಾಲಯ ಉತ್ತರಾಭಿಮುಖವಾಗಿದೆ. ಕರವೀರಭದ್ರೇಶ್ವರ ಎಂದು ಕರೆಯುವ ಈ ದೇವಾಲಯ ಮೊದಲು ತ್ರಿಕೂಟ ದೇವಾಲಯವಾಗಿತ್ತು. ಪ್ರಸ್ತುತ ಒಂದು ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಮತ್ತೊಂದರಲ್ಲಿ ವೀರಭದ್ರೇಶ್ವರ ಮೂರ್ತಿ, ಖಡ್ಗ ಹಸ್ತ ಮುಂದಿನ ಬಲಗೈ, ಕಟಕ ಹಸ್ತ ಮುಂದಿನ ಎಡಗೈ, ಡಮರು ಹಿಡಿದ ಹಿಂದಿನ ಬಲಗೈ, ಹಿಂದಿನ ಎಡಗೈಯಲ್ಲಿ ರುಂಡ ಮಾಲಾಧಾರಿ ಬಲಕ್ಕೆ ಯತಿ, ಎಡಕ್ಕೆ ಭಕ್ತೆಯ ಶಿಲ್ಪವಿದೆ. ಈ ಮೂರ್ತಿಯ ವಿಶೇಷವೆಂದರೆ ಕುಳಿತ ವೀರಭದ್ರೇಶ್ವರ ಶಿಲ್ಪವಿದೆ? ಅದರ ಎದುರಿನ ಗುಡಿಯಲ್ಲಿ ನಂದಿ ಶಿಲ್ಪವಿದೆ.

ತ್ರುಟಿತ ಭೈರವ ಶಿಲ್ಪವಿದೆ. ಎಡಗೈಯಲ್ಲಿ ದಂಡ, ಬಲಗೈಯಲ್ಲಿ ಡಮರು, ಚತುರ್ಭುಜ ಶಿಲ್ಪ. ವೈಜಯಂತಿ ಮಾಲೆ, ರುಂಡಮಾಲ, ಬಾಹುವಲ್ಯ, ತೋಳ್ಬಂದಿ, ಪೈಜಾಮಾ ಧರಿಸಿದೆ. ಶಿಲ್ಪದ ಎಡಕ್ಕೆ ನಾಯಿ, ಬಲಕ್ಕೆ ರಾಕ್ಷಸರು? ಮುಂದಿನ ಎರಡು ಕೈ ತ್ರುಟಿತವಾಗಿವೆ. ಜೈನ

ಅಧಿದೇವತೆ? ಶಿಲ್ಪವಿದೆ. ಅಧಿದೇವತೆಯ ಬಲಗೈ ಅಭಯ ಹಸ್ತ, ಎಡಗೈ ಮೋದಕ? ಹಿಡಿದಂತಿದೆ. ಕೊರಳಹಾರ, ಕುತ್ತಿಗೆಹಾರ, ಕರ್ಣಕುಂಡಲ, ತೋಳ್ಬಂದಿ, ಕೈಬಳೆ, ಕಾಲ್ಗೆಜ್ಜೆ, ಸೊಂಟಪಟ್ಟಿ ಧರಿಸಿದೆ.

ಸ್ಥಳ: ಹುಂಗರಗಾ **ಶೈಲಿ:** ರಾಷ್ಟ್ರಕೂಟ
ಶಿಲೆ: ಕಪ್ಪು ಕಲ್ಲು **ದೇವಾಲಯ:** ಈಶ್ವರಲಿಂಗ
ಸ್ಥಿತಿ: ಅವಸಾನ **ಕಾಲ:** ಸು.೮–೯ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯದ ಗರ್ಭಗುಡಿ ಸಂಪೂರ್ಣ ನಾಶವಾಗಿದೆ. ಲಿಂಗ ಗರ್ಭಗುಡಿಯಲ್ಲಿದೆ. ಬಾಗಿಲವಾಡಕ್ಕೆ ಯಾವುದೇ ಕೆತ್ತನೆಯಿಲ್ಲ. ಅಲಂಕೃತವಿಲ್ಲದ ನಾಲ್ಕು ಕಂಬಗಳು, ಪ್ರಾಂಗಣದಲ್ಲಿ ಐದು ಹೆಡೆಯ ಮತ್ತೊಂದು ಏಳು ಹೆಡೆಯ ಒಂದು ಹೆಡೆಯ ನಾಗಕ್ಕೆ ಸುತ್ತಿಕೊಂಡಿವೆ. ತ್ರುಟಿತ ಲಿಂಗ, ರಾಮನ ಪಾದಗಳು? ವಿಷ್ಣುವಿನ ತ್ರುಟಿತ ಶಿಲ್ಪ, ಅರ್ಧ ಮಂಟಪ ಮಾತ್ರ ಗರ್ಭಗುಡಿಯ ಎದುರಿಗೆ ನಾಲ್ಕು ಕಂಬಗಳ ಮೇಲ್ಚಾವಣಿಯಿಂದ ಕೂಡಿದೆ.

ಸ್ಥಳ: ಹಾಗರಗ ಗುಂಡಗಿ **ಶೈಲಿ:** ರಾಷ್ಟ್ರಕೂಟ
ಶಿಲೆ: ಕಪ್ಪು ಕಲ್ಲು **ದೇವಾಲಯ:** ಮಲ್ಕಣ್ಣನ ಗುಡಿ
ಸ್ಥಿತಿ: ಅವಸಾನ **ಕಾಲ:** ಸು.೧೧ನೆಯ ಶತಮಾನ

ಮಲ್ಕಣ್ಣನ ಗುಡಿಯಲ್ಲಿ ಸು.೧೧ನೆಯ ಶತಮಾನದ ಕೆತ್ತನೆಗಳು ಕಂಡುಬರುತ್ತವೆ. ದೇವಕೋಷ್ಠಕದಲ್ಲಿ ಒಂದು ಶಿವಲಿಂಗವಿದೆ ಮತ್ತು ಗಣಪತಿ ಶಿಲ್ಪವಿದೆ. ಪಾಶಾಂಕುಶ, ದಂತ ಮತ್ತು ಮೋದಕ ಹಸ್ತವಿದೆ. ಕೊರಳಿನಾಭರಣ, ಕೈಗಡಗ, ಕಾಲ್ಗಡಗ ಧರಿಸಿದೆ. ಮೂರು ಕಂಬಗಳು ಒಂತೇ ತೆರನಾದ(ರಾಷ್ಟ್ರಕೂಟ ಕಾಲದ) ಮತ್ತೊಂದು ತರಹದ ಕಂಬ(ಕಲ್ಯಾಣ ಚಾಲುಕ್ಯರ ಕಾಲದ) ನವರಂಗದಲ್ಲಿವೆ. ಬಹುಶಃ ಒಂದು ತ್ರುಟಿತವಾದ ಕಾರಣ ನಂತರದಲ್ಲಿ ನಿರ್ಮಿಸಿದಂತೆ ಕಾಣುತ್ತದೆ. ಕದಂಬ ನಾಗರಶೈಲಿ (ದ್ರಾವಿಡ?) ಮತ್ತು ಆಮಲಾಕಾರದ ಶಿಖರವಿದೆ.

ಸ್ಥಳ: ಹಾಗರ ಗುಂಡಗಿ **ಶೈಲಿ:** ರಾಷ್ಟ್ರಕೂಟ.
ಶಿಲೆ: ಕಪ್ಪು ಕಲ್ಲು **ದೇವಾಲಯ:** ಮೂರ್ತಿಲಿಂಗ
ಸ್ಥಿತಿ: ಅವಸಾನ **ಕಾಲ:** ಸು.೧೧ನೆಯ ಶತಮಾನ

ಉತ್ತರಾಭಿಮುಖವಾಗಿರುವ ಮೂರ್ತಿಲಿಂಗ ಗುಡಿಯು ಸು.೭ನೆಯ ಶತಮಾನದ್ದಾಗಿದೆ. ಹನ್ನೆರಡು ಕಂಬಗಳಿವೆ. ಕಂಬಗಳು ಸಾದಾಯಿವೆ. ಬೋದಿಗೆ, ಚರಿಗೆಯಾಕೃತಿಯಲ್ಲಿ? ಕೆತ್ತನೆ ಮತ್ತು ಸಾದಾ ಕಂಬದಲ್ಲಿ ಚೌಕ ಮತ್ತು ಆಯಾತಾಕಾರದ ಕಂಬದ ಕೊರೆತವಿದೆ. ಅಂತರಾಳದ ಬಾಗಿಲವಾಡ ಸಾದಾಯಿದೆ. ಅಂತರಾಳದಲ್ಲಿ ನಂದಿ ಶಿಲ್ಪವಿದೆ. ಗರ್ಭಗುಡಿಯ ಬಾಗಿಲವಾಡ ಸಾದಾ ಇದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ನವರಂಗ ಮತ್ತು ಅರ್ಧಮಂಟಪ ಒಟ್ಟಿಗೆ ಆಯಾತಾಕಾರದಲ್ಲಿ ಕಂಬಗಳ ಜೋಡಣೆ ಮಾಡಿ ಕಟ್ಟಿದಂತಿದೆ. ನವರಂಗದಲ್ಲಿ ಚತುರ್‌ಕೋನಗಳ

ಕೆತ್ತನೆಯಲ್ಲಿ ದ್ವಿದಳ ವೃತ್ತಾಕಾರ ಭುವನೇಶ್ವರಿ ಕೆತ್ತಲ್ಪಟ್ಟಿದೆ. ನವರಂಗದ ಭಾಗದಲ್ಲಿ ಸೂರ್ಯನು ಏಳು ಕುದುರೆ ಸವಾರಿ ಮಾಡುತ್ತಿರುವ ಮತ್ತು ಇಕ್ಕೆಲಗಳಲ್ಲಿ ದ್ವಾರಪಾಲಕರ ಶಿಲ್ಪವಿರುವ ಲಿಂಗ ಪೀಠವಿದೆ. ಅದರ ಮೇಲೆ ನುಣುಪಾದ ಶಿವಲಿಂಗವಿದೆ. ಅದರ ಪಕ್ಕದಲ್ಲಿ ಬೃಹತ್ ಚಾಮರಧಾರಿಯ ಶಿಲ್ಪವಿದೆ. ಕಿರೀಟ, ತಲೆಹಿಂದೆ ಪ್ರಭಾವಳಿ, ಎಡಗೈಯಲ್ಲಿ ಚಾಮರ, ಬಲಗೈಯಲ್ಲಿ ಬೀಜಪುರವನ್ನು ಹಿಡಿದ ಮೂರ್ತಿಯಿದೆ. ನುಣುಪಾಗಿ ಕಪ್ಪು ಕಲ್ಲಿನಲ್ಲಿ ಕೆತ್ತನೆ ಮೂಡಿಬಂದಿದೆ. ಬಾಹುವಲ್ಯ, ಕರ್ಣಕುಂಡಲ, ಮಣಿಕಂಠ, ಕೊರಳಾಭರಣ ಕೈಗಡಗ, ಯಜ್ಞೋಪವೀತ, ಉದರಬಂಧ, ಕಟಿವಸ್ತ್ರ ಮತ್ತು ಸೊಂಟಬಂಧ ಕುಚಹಾರದ ಕೆತ್ತನೆಯಿದೆ. ಅದರ ಕೆಳಭಾಗ ತ್ರುಟಿತವಾಗಿದೆ.

ಸ್ಥಳ: ಕವಲಗಾ(ಕೆ) **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಕಲ್ಲಾಲಿಂಗ ಗುಡಿ

ಸ್ಥಿತಿ: ಕನಿಷ್ಠ **ಕಾಲ:** ಸು.೧೧ನೆಯ ಶತಮಾನ

ತ್ರಿಕೂಟ ದೇವಾಲಯವಾಗಿದೆ. ಪೂರ್ವಾಭಿಮುಖವಾಗಿರುವ ಕಲ್ಲಾಲಿಂಗ ದೇವಸ್ಥಾನ ನವರಂಗ, ಅಂತರಾಳ, ಗರ್ಭಗುಡಿಯನ್ನೊಳಗೊಂಡಿದೆ. ಗರ್ಭಗುಡಿಯಲ್ಲಿ ಬೃಹತ್ ಶಿವಲಿಂಗವಿದೆ. ಅಂತರಾಳ ಸಾದಾ ಇದೆ. ಪ್ರವೇಶದ್ವಾರದ ಎಡಕ್ಕೆ ಪ್ರಮುಖ ಗರ್ಭಗುಡಿ ಬಲಕ್ಕೆ ಎರಡು ಗರ್ಭಗುಡಿಗಳಿವೆ. ದೇವಕೋಷ್ಠಕದಲ್ಲಿ ಗಣಪತಿ ಶಿಲ್ಪವಿದೆ. ಸಪ್ತಮಾತೃಕೆಯರ ಶಿಲ್ಪ ಭಿತ್ತಿಯಲ್ಲಿದೆ. ಅವುಗಳ ಮಧ್ಯ ನವರಂಗವಿದೆ. ಪ್ರವೇಶದ್ವಾರದ ಆರಂಭದ ಗರ್ಭಗುಡಿಯಲ್ಲಿ ಒಂದೆ ಲಿಂಗಪೀಠದಲ್ಲಿ ಮೂರು ಶಿವಲಿಂಗಗಳಿವೆ. ಎರಡು ವೀರಗಲ್ಲು ಗರ್ಭಗುಡಿಯ ಭಿತ್ತಿಯಲ್ಲಿವೆ. ಇದರ ದ್ವಾರದ ಬಳಿ ಮಹಿಷಾಸುರಮರ್ದಿನಿ ಮತ್ತು ವೀರಗಲ್ಲು ಶಿಲ್ಪವಿದೆ. ಮತ್ತೊಂದು ಗರ್ಭಗುಡಿಯಲ್ಲಿ ಒಂದೇ ಲಿಂಗ ಪೀಠದ ಮೇಲೆ ಎರಡು ಶಿವಲಿಂಗಗಳಿವೆ. ನವರಂಗದಲ್ಲಿ ಏಕದಳ ಭುವನೇಶ್ವರಿಯಿದೆ. ನವರಂಗದ ನಂತರ ನಂದಿ ಶಿಲ್ಪವಿದೆ. ಗುಡಿಗೆ ಮೂರು ಪ್ರವೇಶ ದ್ವಾರಗಳಿವೆ. ಫೇಡಾದೀ ಶಿಖರ(ಕದಂಬ ನಾಗರಶೈಲಿ) ಮಾದರಿಯಲ್ಲಿದೆ. ಗುಡಿಯ ಹಿಂದಿನ ಪ್ರಾಚೀನ ಬಾವಿಯ ಬಳಿ ನಾಗಶಿಲ್ಪ ಮತ್ತು ತ್ರುಟಿತ ವಿಷ್ಣು ಶಿಲ್ಪವಿದೆ.

ಸ್ಥಳ: ಕಲಬೆನ್ನೂರು **ಶೈಲಿ:** ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಈಶ್ವರ ಗುಡಿ

ಸ್ಥಿತಿ: ಕನಿಷ್ಠ ಕಾಲ: ಸು.೧೧ನೆಯ ಶತಮಾನ

ಈಶ್ವರ ಗುಡಿ ಬಲಬದಿಯಲ್ಲಿ ಎರಡು ವೀರಗಲ್ಲುಗಳಿವೆ. ತ್ರಿಕೂಟ ದೇವಾಲಯವಾಗಿದೆ. ಪ್ರವೇಶ ದ್ವಾರದ ಎದುರಿಗಿರುವ ಗರ್ಭಗುಡಿಯಲ್ಲಿ ಲಿಂಗವಿದೆ. ಇದರ ಬಲಕ್ಕಿರುವ ಗರ್ಭಗುಡಿ ಖಾಲಿಯಿದೆ. ಎಡಕ್ಕಿರುವ ಗರ್ಭಗುಡಿಯಲ್ಲಿ ಲಿಂಗವಿದೆ ಮತ್ತು ಅದರ ದೇವಕೋಷ್ಠಕದಲ್ಲಿ ಬಿಲ್ಲು ಹಿಡಿದ ವೀರಗಲ್ಲಿನ ಶಿಲ್ಪವಿದೆ.

ತ್ರಿಶಾಖ ಬಾಗಿಲವಾಡ ಪ್ರಮುಖ ಗರ್ಭಗುಡಿಗಿದೆ. ಚತುರ್ದಳದ ಹೂ, ಕೂಡ್ಯ ಸ್ತಂಭ, ಕನಕಾಂಬರಿ ಹೂಪಿನ ದಳದ ಕೆತ್ತನೆ ಇದೆ. ಗಜಲಕ್ಷ್ಮಿ ಲಲಾಟವಿದೆ. ಹೊಸ್ತಿಲಿಗೆ ಹೂಗಳ ಮಧ್ಯದಲ್ಲಿ "ಓಂ" ಬರಹವಿದೆ. ಬಾಗಿಲವಾಡಕ್ಕೆ ದ್ವಾರಪಾಲಕ ಪತಿ-ಪತ್ನಿಯರ ಜೋಡಿ ಶಿಲ್ಪಗಳ ಕೆತ್ತನೆಯಿದೆ. ಇಕ್ಕೆಲಗಳ ದ್ವಾರಪಾಲಕರು ಗದೆಯನ್ನು ಮತ್ತು ಬೀಜಪುರ ಹಿಡಿದಿರುವರು. ಯಜ್ಞೋಪವೀತ, ಕಿರೀಟ, ಮಣಿಕಂಠ, ಕರ್ಣಮಂಡಲ, ಕೈಗಡಗ, ಕಾಲ್ಗಡಗ, ಸೊಂಟಪಟ್ಟಿ, ಕಟಿವಸ್ತ್ರ, ಪಂಚೆ, ಕುಚಹಾರ ಧರಿಸಿದಂತೆ ಕೆತ್ತಲಾಗಿದೆ. ಸ್ತ್ರೀ ದ್ವಾರಪಾಲಕರ ಶಿಲ್ಪಗಳು ತುರುಬದಂತೆ ಕೇಶವಿನ್ಯಾಸ ಮಾಡಿ ಅದಕ್ಕೆ ಆಭರಣ ಹಾಕಿರುವುದು, ಗರ್ಭಗುಡಿಯ ಬಲಕ್ಕಿರುವ ದ್ವಾರಪಾಲಕಿ ಆಯುಧ ಹಿಡಿದಂತೆ ಕೆತ್ತಲಾಗಿದೆ. ಎಡಕ್ಕಿರುವ ಕುಂಡಲ ನೀರು ಹಿಡಿದಂತೆ? ಕೆತ್ತಲಾಗಿದೆ. ಕಿವಿಓಲೆ, ಬಾಹುವಲ್ಯ, ಕೈಬಳೆ, ಕೊರಳಹಾರ, ಸ್ತನಪಟ್ಟಿ, ಕಟಿವಸ್ತ್ರ, ಕಂಠಹಾರ, ಕುಚಹಾರ, ಕಟಿವಸ್ತ್ರ, ತೊಡೆಯಾಭರಣ, ಕಾಲ್ಗಡಗ, ಪೈಜಾಮ ಧರಿಸಿದಂತೆ ಕೆತ್ತಲಾಗಿದೆ.

ಬಾಗಿಲವಾಡ ಸಾದಾ ಇದೆ ಮತ್ತು ಉಬ್ಬುಶಿಲ್ಪ ದ್ವಾರಪಾಲಕನ ಕೆತ್ತನೆಯಿದೆ.[೮] ಸಾದಾ ಬಾಗಿಲವಾಡ ಮತ್ತು ಉಬ್ಬುಶಿಲ್ಪವಿರುವ ಗರ್ಭಗುಡಿ ಪೂರ್ವಾಭಿಮುಖವಾಗಿಲ್ಲ. ದಕ್ಷಿಣಾಭಿಮುಖವಾಗಿದ್ದು, ಅದು ಮುಖ್ಯ ಗರ್ಭಗುಡಿಯ ಎಡಕ್ಕಿದ್ದು ಶಿವಲಿಂಗ ಹೊಂದಿದೆ. ದೇವಕೋಷ್ಠಕದಲ್ಲಿ ವೀರಗಲ್ಲು ಇದೆ. ವೀರ ಬಿಲ್ಲು, ಬಾಣ ಹಿಡಿದು ನಿಂತಿರುವ ಶಿಲ್ಪವನ್ನು ಕೆತ್ತಿಸಿಡಲಾಗಿದೆ. ಬಲಕ್ಕೆ ಮಾತ್ರ ಒಬ್ಬ ದ್ವಾರಪಾಲಕನಿದ್ದಾನೆ. ಸಾದಾ ಬಾಗಿಲವಾಡವಿರುವುದು ಮತ್ತು ಗಜಲಲಾಟವಿದೆ. ತ್ರಿಕೂಟ ಗುಡಿಯ ಪ್ರತಿಯೊಂದು ಗರ್ಭಗುಡಿಯು ಅಂತರಾಳ ಹೊಂದಿವೆ.

ನವರಂಗ ನಾಲ್ಕು ಕಂಬಗಳಿಂದ ಕೂಡಿದ್ದು ಅದರ ಮಧ್ಯದಲ್ಲಿ ನಂದಿ ಶಿಲ್ಪವಿದೆ. ನವರಂಗದ ಸ್ತಂಭಗಳು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಿರ್ಮಾಣಗೊಂಡಿವೆ. ಬೋದಿಗೆಗಳು, ಚೌಕ, ತಟ್ಟೆಯಾಕಾರದ ಆಧಾರದ ಕೆಳಗೆ ಚೌಕ, ನಕ್ಷತ್ರ(ಅಷ್ಟಕಾರ) ಮತ್ತು ಆಯಾತಾಕಾರದ ಕಂಬದ ಕೆಳಭಾಗ ಕೆತ್ತನೆಯಿದೆ. ದಕ್ಷಿಣಾಭಿಮುಖ ಗರ್ಭಗುಡಿ ಮತ್ತು ಪೂರ್ವಾಭಿಮುಖ ಎರಡು ಗರ್ಭಗುಡಿಗಳು ಶಿವಲಿಂಗವನ್ನು ಹೊಂದಿವೆ. ಉತ್ತರಾಭಿಮುಖ ಗರ್ಭಗುಡಿಯು ಖಾಲಿಯಿದೆ. ಗರ್ಭಗುಡಿಯ ಬಾಗಿಲವಾಡ ತ್ರಿಶಾಖವಿದೆ. ಚತುರ್ದಳ ಹೂವಿನೊಳಗೆ ಕುಸುರಿ, ಕೂಡ್ಯ ಸ್ತಂಭ, ಕನಕದಳವಿರುವ ಕೆತ್ತನೆಗಳಿವೆ. ಬಾಗಿಲಲ್ಲಿ ಚತುರ್ದಳದ ಹೂವು ಮಧ್ಯದಲ್ಲಿ ಒಂದು ಶಿಲ್ಪ? ಕೆತ್ತನೆಯಿದೆ. ಗಜಲಕ್ಷ್ಮಿ ಲಲಾಟವಿದೆ. ಬಾಗಿಲವಾಡಗಳಲ್ಲಿ ಚಾಮರಧಾರಿ ಸ್ತ್ರೀಯರ ಶಿಲ್ಪಗಳಿವೆ. ಕಿವಿಓಲೆ, ಬಾಹುವಲ್ಯ, ಕೈಬಳೆ, ಕೊರಳಹಾರ, ಸ್ತನಪಟ್ಟಿ, ಕಟಿವಸ್ತ್ರ, ಕಂಠಹಾರ, ಕುಚಹಾರ, ಕಟಿವಸ್ತ್ರ, ತೊಡೆಯಾಭರಣ, ಕಾಲ್ಗಡಗ, ಪೈಜಾಮ ಧರಿಸಿದಂತೆ ಕೆತ್ತಲಾಗಿದೆ. ಚತುರ್ಬಾಹು ದ್ವಾರಪಾಲಕರು ಮುಂದಿನ ಕೈಗಳಲ್ಲಿ ಗದೆ, ಬೀಜಪುರ, ಹಿಂದಿನ ಕೈಗಳಲ್ಲಿ ಡಮರು, ತ್ರಿಶೂಲ? ಹಿಡಿದಂತೆ ಕೆತ್ತಲಾಗಿದೆ. ಯಜ್ಞೋಪವೀತ, ಕಿರೀಟ, ಮಣಿಕಂಠ, ಕರ್ಣಮಂಡಲ, ಕೈಗಡಗ, ಕಾಲ್ಗಡಗ, ಸೊಂಟಪಟ್ಟಿ, ಕಟಿವಸ್ತ್ರ, ಪಂಚೆ, ಕುಚಹಾರ ಧರಿಸಿದಂತೆ ಕೆತ್ತಲಾಗಿದೆ. ಸ್ತ್ರೀ

ದ್ವಾರಪಾಲಕಿಯನ್ನು ಶಿಲ್ಪ, ಕಿವಿಓಲೆ, ಬಾಹುವಲ್ಯ, ಕೈಬಳೆ, ಕೊರಳಹಾರ, ಸ್ತನಪಟ್ಟಿ, ಕಟವಸ್ತ್ರ, ಕಂಠಹಾರ, ಕುಚಹಾರ, ಕಟಿವಸ್ತ್ರ, ತೊಡೆಯಾಭರಣ, ಕಾಲ್ಗಡಗ, ಪೈಜಾಮ ಧರಿಸಿದಂತೆ ಕೆತ್ತಲಾಗಿದೆ. ಗರ್ಭಗುಡಿಯ ಎಡಕ್ಕಿರುವ ದ್ವಾರಪಾಲಕಿ ಖಡ್ಗ ಹಿಡಿದಂತಿದೆ. ಹಿಂದೆ ಕೇಶಾಲಂಕಾರ ವೃತ್ತಾಕಾರದ ಪ್ರಭಾವಳಿ ಹೊಂದಿದೆ. ಗರ್ಭಗುಡಿಯ ಬಲಕ್ಕೆ ದ್ವಾರಪಾಲಕ ಮತ್ತು ಚಾಮರಧಾರಿಯ ಶಿಲ್ಪ ಇದೆ.

ಅಂತರಾಳದಲ್ಲಿ ನಂದಿ ಶಿಲ್ಪವಿದೆ. ಗರ್ಭಗುಡಿಯ ದೇವಕೋಷ್ಠಕದಲ್ಲಿ ಒಂದು ವೀರಗಲ್ಲಿರುವುದು ಉಲ್ಲೇಖಿಸಿರುವುದಿಲ್ಲ.[೮]

ಸ್ಥಳ: ಕೇರಿ ಅಂಬಲಗಾ　　**ಶೈಲಿ:** ಚಾಲುಕ್ಯ

ಶಿಲೆ: ಕಪ್ಪುಕಲ್ಲು　　**ದೇವಾಲಯ:** ಮಲ್ಲಿಕಾರ್ಜುನ ಗುಡಿ

ಸ್ಥಿತಿ: ಕನಿಷ್ಠ　　**ಕಾಲ:** ಸು.೧೧ನೆಯ ಶತಮಾನ

ಗರ್ಭಗುಡಿ ಪೂರ್ವಾಭಿಮುಖವಾಗಿದೆ. ಹಿಂದಿ ಲಿಪಿಯಲ್ಲಿ ಊರ ಹೆಸರಿರುವ ಶಾಸನವಿದೆ (ತ್ರುಟಿತ). ಸು. ೧೮ನೆಯ ಶತಮಾನದ ಲಿಪಿಯಾಗಿದೆ. ಸಪ್ತಮಾತೃಕೆಯರ ಶಿಲ್ಪ, ಗಣೇಶ ಶಿಲ್ಪ ಎರಡು, ರಾಶಿಗಳ ಬಗ್ಗೆ ಕೆತ್ತಲ್ಪಟ್ಟ ಶಿಲ್ಪಗಳ ಮಧ್ಯದ ಭಿತ್ತಿ ಭಾಗದಲ್ಲಿ ಭುವನೇಶ್ವರಿ ಶಿಲ್ಪವಿದೆ. ಪ್ರಸ್ತುತ ಜೀರ್ಣಗೊಂಡಿದೆ. ಗರ್ಭಗುಡಿ ಮಾತ್ರ ಉಳಿದಿದ್ದು ಅದರೆದುರಿನಲ್ಲಿ ಕಪ್ಪುಶಿಲೆಯ ಆಮೆಯ ಶಿಲ್ಪವಿದೆ. ಮಲ್ಲಿಕಾರ್ಜುನ ಮೂರ್ತಿಯಿದೆ. ಹೊರವಲಯದ ಆವರಣದ ಭಿತ್ತಿ ಭಾಗದ ಸಪ್ತಮಾತೃಕೆಯರ ಶಿಲ್ಪದಲ್ಲಿ ಗಣೇಶ, ಸುಬ್ರಹ್ಮಣ್ಯರ ಶಿಲ್ಪಗಳ ಮಧ್ಯದಲ್ಲಿ ಸಪ್ತಮಾತೃಕೆಯರಿರುವ ಶಿಲ್ಪವಿದೆ.

ಎರಡು ಗಣಪತಿಯ ಶಿಲ್ಪಗಳು ಚತುರ್ಭುಜವಾಗಿವೆ. ಪಾಶಾಂಕುಶ, ದಂತ ಮತ್ತು ಮೋದಕ ಹಸ್ತಗಳಿವೆ. ಕುಳಿತ ಭಂಗಿಯಲ್ಲಿವೆ. ಕಿರೀಟ ಧರಿಸಿದ ಶಿಲ್ಪಗಳಿವೆ. ಕಾಲ್ಗಡಗ, ಕೈಗಡಗ ಮತ್ತು ಹೊಟ್ಟೆಗೆ ಸರ್ಪ ಸುತ್ತಿಕೊಂಡ ಕೆತ್ತನೆಯಿವೆ.

ಕಪ್ಪುಶಿಲೆಯ ನಂದಿ ಶಿಲ್ಪವಿದೆ. ಇದರ ವಿಶೇಷತೆ ಎಂದರೆ, ಮಾನವನಂತೆ ಮುಖ ಹೊಂದಿರುವ ಶಿಲ್ಪವಾಗಿದೆ. ಇದು ಸು. ೧೨ನೆಯ ಶತಮಾನದ್ದಾಗಿದೆ. ತಲೆಯ ಮೇಲೆ ಪೇಟ, ಉದ್ದನೆಯ ಮೀಸೆ, ದೊಡ್ಡ ಕಣ್ಣುಗಳು, ಉದ್ದನೆಯ ಹುಬ್ಬು, ನಗುಮುಖದಲ್ಲಿ ಕುಳಿತಿದೆ. ಕೊರಳಲ್ಲಿ ಗಂಟೆ ಮತ್ತು ಹಾರವಿದೆ. ಅದರ ಕುತ್ತಿಗೆ ನಂದಿಯಂತೆ ಕೆತ್ತಲಾಗಿದೆ.

ಜನ್ಮರಾಶಿಗಳ ಕೆತ್ತನೆಯುಳ್ಳ ಶಿಲ್ಪ-ಭುವನೇಶ್ವರಿಯ? ಸುತ್ತಲೂ ಮೇಷ-ಕುರಿ, ವೃಷಭ-ನಂದಿ, ಮಿಥುನದಲ್ಲಿ ಗಂಡು-ಹೆಣ್ಣಿನ ಜೋಡಿ, ಕರ್ಕ, ಸಿಂಹ, ಕನ್ಯಾ, ತುಲಾ-ತಕ್ಕಡಿ, ವೃಷ್ಚಿಕ-ಚೇಳು, ಧನು-ಬಿಲ್ಲು, ಮಕರ-ಮೊಸಳೆ, ಕುಂಭ-ತುಂಬಿದ ಬಿಂದಿಗೆ, ಮೀನಗಳ ಶಿಲ್ಪಗಳ ಕೆತ್ತನೆಯಿದೆ.

ಸ್ಥಳ: ಮೇಳಕುಂದಾ(ಬಿ) ಶೈಲಿ: ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ ದೇವಾಲಯ: ಭೋಗಲಿಂಗೇಶ್ವರ ಗುಡಿ
ಸ್ಥಿತಿ: ಕನಿಷ್ಠ ಕಾಲ: ಸು.೧೧ನೆಯ ಶತಮಾನ

ಕಲ್ಯಾಣ ಚಾಲುಕ್ಯರ ಕಾಲದಲ್ಲಿನ ತ್ರುಟಿತ ಕಂಬಗಳನ್ನು ದೇವಾಲಯದೆದುರಿಗೆ ನಿಲ್ಲಿಸಲಾಗಿದೆ. ದೇವಾಲಯದ ಪ್ರಾಂಗಣದಲ್ಲಿ ಆಲದ ಮರದ ಕೆಳಗೆ ನಂದಿ, ವೀರಗಲ್ಲು, ನಾಗಶಿಲ್ಪಗಳಿವೆ. ಗರ್ಭಗುಡಿಯ ಬಾಗಿಲವಾಡ ಸಾದಾಯಿದೆ. ಗಣಪತಿ ಲಲಾಟವಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಗರ್ಭಗುಡಿಯ ಹೊರಭಾಗದ ಭಿತ್ತಿ ಭಾಗದ ಮೂರು ದೇವಕೋಷ್ಠಕದಲ್ಲಿ ಮಾಸ್ತಿಗಲ್ಲು–ಪತಿ ಮತ್ತು ಪತ್ನಿ ನಮಸ್ಕರಿಸುವ ಭಂಗಿಯಲ್ಲಿರುವ ಶಿಲ್ಪವಿದೆ. ಶಿವಭಕ್ತ ವ್ರತ ಮಾಡಿ ಪ್ರಾಣತ್ಯಾಗ ಮಾಡಿದಂತಿರುವ? ಎರಡು ಸ್ತರದ ಶಿಲ್ಪವಿದೆ. ವೀರಗಲ್ಲು ಮೂರು ಸ್ತರದಲ್ಲಿದೆ.

ಸ್ಥಳ: ಮಿಣಜಗಿ ಶೈಲಿ: ಕದಂಬ ನಾಗರ
ಶಿಲೆ: ಕಪ್ಪುಶಿಲೆ ದೇವಾಲಯ: ಶಂಕರಲಿಂಗ
ಸ್ಥಿತಿ: ಕನಿಷ್ಠ ಕಾಲ: ಸು.೯ನೆಯ ಶತಮಾನ

ಆಮಲಕ ಶಿಖರವಿರುವ ದೇವಾಲಯವು ಗರ್ಭಗುಡಿ ಮಾತ್ರ ಒಳಗೊಂಡಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಚತುಷ್ಪಾದಗಳನ್ನು ಲಿಂಗದ ಮುಂದಿಡಲಾಗಿದೆ. ಸಾದಾ ಬಾಗಿಲವಾಡ, ಗಿಡ್ಡನೆಯ ಬಾಗಿಲಿದೆ.

ಸ್ಥಳ: ಸಿರನೂರು ಶೈಲಿ: ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ ದೇವಾಲಯ: ಈಶ್ವರಲಿಂಗ ಗುಡಿ
ಸ್ಥಿತಿ: ಕನಿಷ್ಠ ಕಾಲ: ಸು.೧೨ನೆಯ ಶತಮಾನ

ಈಶ್ವರ ಲಿಂಗ ಗುಡಿಯ ಪ್ರಾಂಗಣದಲ್ಲಿ ವೀರಗಲ್ಲುಗಳು, ನಾಗಶಿಲ್ಪಗಳು, ತ್ರುಟಿತ ಸ್ತ್ರೀ ಶಿಲ್ಪ, ತ್ರುಟಿತ ವಿಷ್ಣುಶಿಲ್ಪಗಳಿವೆ. ನವರಂಗದಲ್ಲಿ ಕಲ್ಯಾಣ ಚಾಲುಕ್ಯರ ಶೈಲಿಯ ಸಾದಾ ಕಂಬಗಳಿವೆ. ಅಂತರಾಳವಿದೆ. ಗರ್ಭಗುಡಿಯು ಆಳದಲ್ಲಿದ್ದು ಶಿವಲಿಂಗವಿದೆ. ಗರ್ಭಗುಡಿಯ ಬಾಗಿಲವಾಡ ಸಾದಾ ಇದೆ. ಅಂತರಾಳದಲ್ಲಿ ಮೂರು ಸ್ತರದ ವೀರಗಲ್ಲು ಗರ್ಭ ಗುಡಿಯ ಎಡಕ್ಕಿದೆ ಮತ್ತು ಒಂದು ಸ್ತರದ ವೀರಗಲ್ಲಿದೆ. ಸ್ಥಾನಿಕ ಶಂಖ, ಚಕ್ರ, ಗದೆ ಮತ್ತು ಅಭಯ ಹಸ್ತಗಳಿವೆ. ಕಿರೀಟಧಾರಿ, ಯಜ್ಞೋಪವೀತ, ಕೊರಳಹಾರ, ಕೈಗಡಗ, ಕಾಲ್ಗಡಗ, ಕರ್ಣಮಂಡಲ, ಸೊಂಟಪಟ್ಟಿ ಧರಿಸಿವೆ. ಬಹುಶಃ ಇದೊಂದು ನಾರಾಯಣಲಿಂಗ ಗುಡಿಯಾಗಿತ್ತು? ನವರಂಗದಲ್ಲಿ ತ್ರಿದಳದ ಭುವನೇಶ್ವರಿಯಿದೆ. ನವರಂಗದ ದೇವಕೋಷ್ಠಕದಲ್ಲಿ ಎಡಕ್ಕೆ ಉತ್ತಮಾವಸ್ಥೆಯಲ್ಲಿರುವ ಗಣಪತಿ ಶಿಲ್ಪವಿದೆ. ಬಲ ದೇವಕೋಷ್ಠಕದಲ್ಲಿ ತ್ರುಟಿತ ಗಣಪತಿ ಶಿಲ್ಪವಿದೆ. ನವರಂಗದಲ್ಲಿ ನಂದಿ ಶಿಲ್ಪವಿದೆ.

ಸ್ಥಳ: ಹಾಡತೆಗನೂರು ಶೈಲಿ: ಯಾದವ?
ಶಿಲೆ: ಕಪ್ಪುಶಿಲೆ ದೇವಾಲಯ: ಭಾವಲಿಂಗೇಶ್ವರ ಗುಡಿ
ಸ್ಥಿತಿ: ಕನಿಷ್ಠ ಕಾಲ: ಸು.೧೨ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯದ ಪ್ರಾಂಗಣ ಬೃಹತ್ತಾಗಿದೆ. ಅದರ ಎದುರಿಗೆ ಮಾಸ್ತಿಗಲ್ಲಿದೆ. ನವರಂಗ ನಾಲ್ಕು ಕಂಬಗಳಿಂದ ಕೂಡಿದೆ. ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿರುವ

ಸಾದಾ ಕಂಬಗಳಿವೆ. ಬಾಗಿಲವಾಡ ಸಾದಾಯಿರುವ ಅಂತರಾಳವಿದೆ. ಅದರ ಪಕ್ಕದಲ್ಲಿ ಚತುರ್ದಳ ಹೂಪಿನ ಕೆತ್ತನೆ ಜಾಲಂದ್ರಗಳಲ್ಲಿವೆ. ಗರ್ಭಗುಡಿಯ ಬಾಗಿಲವಾಡದ ಇಕ್ಕೆಲಗಳಲ್ಲಿ ಕೂಡ್ಯ ಸ್ತಂಭ ಮತ್ತು ದೇವಕೋಷ್ಠಕಗಳಿವೆ. ಅದರೊಳಗೆ ಒಂದು ಬರಿದಾಗಿದೆ. ಇನ್ನೊಂದರಲ್ಲಿ ಎರಡು ಕಡೆ ಕಮಲ ಹಿಡಿದಿರುವ ಸೂರ್ಯನ ತ್ರುಟಿತ ಶಿಲ್ಪವಿದೆ. ಸೂರ್ಯನು ಕಿರೀಟಧಾರಿ, ಕರ್ಣಕುಂಡಲ, ಯಜ್ಞೋಪವೀತ, ಕೊರಳಹಾರ ಧರಿಸಿದಂತೆ ಕೆತ್ತನೆಯಿದೆ. ಉಳಿದ ಭಾಗ ದೇವಕೋಷ್ಠದೊಳಗೆ ಹೂತುಹೋಗಿದೆ. ಗರ್ಭಗುಡಿಯ ಬಾಗಿಲವಾಡದ ಭಿತ್ತಿ ಭಾಗದಲ್ಲಿ ಕೂಡ್ಯಸ್ತಂಭಗಳಿವೆ ಮತ್ತು ಬಾಗಿಲವಾಡ ಸಾದಾ ಇವೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ನವರಂಗದ ಎಡಕ್ಕೆ ಇನ್ನೊಂದು ಬಾಗಿಲಿದೆ. ಎದುರಿಗೆ ಇನ್ನೊಂದು ಗರ್ಭಗುಡಿಯಿದ್ದು ಅದರಲ್ಲಿನ ಶಿವಲಿಂಗ ಕಳುವು ಮಾಡಿಕೊಂಡು ಹೋಗಿರುವುದಾಗಿ ಗ್ರಾಮಸ್ಥರ ಹೇಳಿಕೆ. ಗರ್ಭಗುಡಿಯ ನವರಂಗದಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯ ಸಾದಾ ಕಂಬಗಳಿವೆ. ಪ್ರಾಂಗಣದಲ್ಲಿ ತ್ರುಟಿತ ಲಿಂಗ ಪೀಠ, ನಾಗಶಿಲ್ಪ, ತ್ರುಟಿತ ಮೂರ್ತಿಶಿಲ್ಪಗಳಿವೆ.

ಸ್ಥಳ: ರುಮ್ಮನಗೂಡು　　**ಶೈಲಿ:** ರಾಷ್ಟ್ರಕೂಟ?

ಶಿಲೆ: ಕಪ್ಪುಶಿಲೆ　　**ದೇವಾಲಯ:** ಶಂಕರನಾರಾಯಣ

ಸ್ಥಿತಿ: ಅವಸಾನ　　**ಕಾಲ:** ಸು.೧೦-೧೧ನೇ ಶತಮಾನ

ಎತ್ತರದ ಜಗತಿಯ ಮೇಲೆ ನಿರ್ಮಿತ ದೇವಾಲಯ ಅಧಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟು ಕುಮುದ, ಶಿಲ್ಪಪಟ್ಟಿಕೆ ಮತ್ತು ಕಪೋತವನ್ನೊಳಗೊಂಡಿದೆ. ಭಿತ್ತಿಭಾಗದಲ್ಲಿ ಮದನಿಕೆಯರ ಶಿಲ್ಪಗಳಿವೆ. ಪ್ರಸ್ತುತ ಶಿಖರ ಹಾಳಾಗಿದೆ. ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಸ್ತ್ರೀ ಶಿಲ್ಪಗಳಿವೆ. ಶೈವ, ವೈಷ್ಣವ ದ್ವಾರಪಾಲಕರಿದ್ದಾರೆ. ಹೊರಭಿತ್ತಿಯಲ್ಲಿ ಮೂರು ದೇವಕೋಷ್ಠಕದಲ್ಲಿ ವಾಮನ, ಉಗ್ರನರಸಿಂಹರ ಶಿಲ್ಪಗಳಿವೆ.

ಪೀಠ, ದಂಡ, ದಂಡಾಗ್ರ, ಗಳ, ಫಲಕ ಮತ್ತು ವೃತ್ತಾಕಾರ ಬೋದಿಗೆಯನ್ನೊಳಗೊಂಡ ಕಂಬಗಳಿವೆ. ಪೀಠದಲ್ಲಿ ಪ್ರಭಾವಳಿ ಹೊಂದಿರುವ ಶಿಲ್ಪ ಮತ್ತು ಫಲಕಗಳ ಮೇಲೆ ಶಿಲ್ಪ ಮುತ್ತಿನ ಮಾಲೆಗಳು, ಹೂಬಳ್ಳಿ ಕೆತ್ತನೆಯನ್ನೊಳಗೊಂಡ ವೇಸರ ಶೈಲಿ ಸ್ತಂಭಗಳಿವೆ. ಪ್ರವೇಶದ ಭಾಗದಲ್ಲಿ ಚಿಕ್ಕ ಕಂಬಗಳಿವೆ. ಸ್ತಂಭಗಳ ಕೆಳಭಾಗದ ದೇವಕೋಷ್ಠಕಗಳಲ್ಲಿ ದೇವಶಿಲ್ಪಗಳು ಕೆತ್ತಲ್ಪಟ್ಟಿವೆ. ಸ್ತಂಭದ ಬೋದಿಗೆಗಳ ಮೇಲೆ ಶಿಲಾಭಂಜಿಕೆಯರ ಶಿಲ್ಪಗಳಿವೆ.

ಮೇಲ್ಛಾವಣಿ ಅಲ್ಪಸ್ವಲ್ಪ ಮಾತ್ರ ಉಳಿದಿದೆ. ಅವುಗಳ ಮೇಲೆ ಅಷ್ಟದಿಕ್ಪಾಲಕರನ್ನು ಕೆತ್ತಲ್ಪಟ್ಟಂತೆ ತೋರುತ್ತದೆ. ಮೂರು ಕಡೆಯಿಂದಲೂ ಪ್ರವೇಶದ್ವಾರಗಳಿವೆ. ಮುಖಮಂಟಪವಿದೆ. ಗರ್ಭಗುಡಿಯ ಬಾಗಿಲವಾಡ ಪಂಚ ಶಾಖಾಲಂಕೃತವಾಗಿದೆ. ಹೊಸ್ತಿಲ ಬಳಿ ಚಂದ್ರಶಿಲೆ ಇದೆ. ಅಂತರಾಳದ ತೋರಣ ಆಕರ್ಷಕವಾಗಿದೆ. ಉತ್ತರದಲ್ಲಿ ಕಿರುಮಂಟಪಗಳಿವೆ. ನವರಂಗ ಕಂಬದ ಮೇಲೆ ಮಿಥುನ ಶಿಲ್ಪಗಳು, ಶಿಲಾಭಂಜಿಕೆಯರ ಶಿಲ್ಪಗಳಿವೆ. ಕಕ್ಷಾಸನ ಭಾಗಗಳಲ್ಲಿ ಸೂಕ್ಷ್ಮ ಕೆತ್ತನೆಗಳಿವೆ.

ಉಗ್ರನರಸಿಂಹನ ಮತ್ತು ವಾಮನ ಶಿಲ್ಪಗಳಿವೆ. ಭುವನೇಶ್ವರಿ, ಐದಾರು ಮಾದರಿ ಸ್ತಂಭಗಳನ್ನೊಳಗೊಂಡಿದೆ. ನವರಂಗದ ಹೊರಗೆ ಅಧಿಷ್ಠಾನ ಭಾಗದಲ್ಲಿ ರಾಮಾಯಣದ ಕಥಾವಳಿ ಶಿಲ್ಪಗಳಿವೆ ಎಂದು ಉಲ್ಲೇಖಿಸಲಾಗಿದೆ.[೨] ಆದರೆ ಇದು ಚತುರ್ವಿಂಶತಿ ಶಿಲ್ಪಗಳನ್ನೊಳಗೊಂಡಿದೆ.

ಗರ್ಭಗುಡಿಯ ಪ್ರವೇಶದ್ವಾರದ ಲಲಾಟದ ಮೇಲೆ ಉಗ್ರನರಸಿಂಹನ ಶಿಲ್ಪವಿದೆ. ಒಳಗರ್ಭಗುಡಿಯ ಲಲಾಟದ ಮೇಲೆ ಗಣೇಶನ ಶಿಲ್ಪವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದರ ಹಿಂದಿನ ಭಾಗದಲ್ಲಿ ನಟರಾಜ (ಶಿವ) ಮತ್ತು ಕೇಶವ(ವಿಷ್ಣು)ವಿನ ಮೂರ್ತಿಶಿಲ್ಪಗಳಿವೆ. ಆದ್ದರಿಂದ ಈ ಶಿಲ್ಪಗಳು ಮತ್ತು ಲಲಾಟದ ಶಿಲ್ಪಗಳು ಮತ್ತು ದ್ವಾರಪಾಲಕ ಶಿಲ್ಪಗಳ ಕುರುಹುಗಳನ್ನಾಧರಿಸಿ ಶಂಕರನಾರಾಯಣ ಗುಡಿ ಎಂದು ಹೇಳಬಹುದು. ಕರ್ನಾಟಕ ಸರ್ಕಾರ ೧೯೭೭ರಲ್ಲಿ ಹೊರಡಿಸಿದ ಕಲ್ಬುರ್ಗಿ ಜಿಲ್ಲೆ ಗೆಜೆಟಿಯರ್‌ನಲ್ಲಿ ನೀಲಕಂಠೇಶ್ವರ ದೇವಾಲಯವೆಂದು ಹೇಳಲಾಗಿದೆ.

ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ೨೦೦೭ರ ಸಂಪಾದಿತ ಕೃತಿಯಲ್ಲಿ ಸಿ. ಮಹದೇವರವರ ಲೇಖನದಲ್ಲಿ ಲಲಾಟದಲ್ಲಿ ಉಗ್ರನರಸಿಂಹನ ಬಿಂಬವಿದ್ದು, ಇದು ವೈಷ್ಣವ ದೇವಾಲಯ ಎಂದು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಗರ್ಭಗುಡಿಯಲ್ಲಿರುವ ಶಿವ ಮತ್ತು ನಾರಾಯಣನ ಮೂರ್ತಿಗಳು ಹೊರ ಗರ್ಭಗುಡಿ ಲಲಾಟ ಮತ್ತು ಒಳಗರ್ಭಗುಡಿ ಲಲಾಟದ ಉಗ್ರನರಸಿಂಹ ಮತ್ತು ಗಣೇಶನ ಶಿಲ್ಪಗಳಿಂದ ಶೈವ ಮತ್ತು ವೈಷ್ಣವರ ಸಮ್ಮಿಳಿತಗೊಂಡ ಶಂಕರನಾರಾಯಣ ದೇವಾಲಯವಾಗಿದೆ ಎಂದು ತಿಳಿದುಬರುತ್ತದೆ. ಆರಂಭದಲ್ಲಿ ವೈಷ್ಣವ ದೇವಾಲಯವಾಗಿದ್ದು ನಂತರ ಶೈವ ಪ್ರಭಾವಕ್ಕೊಳಗಾಗಿದೆ.

ಸ್ಥಳ: ಮೋಘಾ **ಶೈಲಿ:** ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ರಾಮಲಿಂಗೇಶ್ವರ ದೇವಾಲಯ

ಸ್ಥಿತಿ: ಅವಸಾನ **ಕಾಲ:** ಸು.೧೧ನೇ ಶತಮಾನ

ದೇವಾಲಯ ಪೂರ್ವಾಭಿಮುಖವಾಗಿದೆ. ರಾಮಲಿಂಗೇಶ್ವರ ದೇವಾಲಯ ಶಾಸನೋಕ್ತ ದೇವಾಲಯವಾಗಿದೆ. ಈ ದೇವಾಲಯ ರೇಖಾ ಮಾದರಿ ನಾಗರಶೈಲಿಯಲ್ಲಿದೆ. ಭವ್ಯ ಶಿಲ್ಪಗಳನ್ನು ಹೊಂದಿದ ೨೮ ಕಂಬಗಳಿವೆ. ಈ ಸ್ತಂಭಗಳಲ್ಲಿ ಸಿಂಹ (ಕೀರ್ತಿ) ಮುಖಗಳಿವೆ. ಹೂ, ಬಳ್ಳಿ, ದೇವಶಿಲ್ಪಗಳಿವೆ. ನವರಂಗದ ಕಂಬಗಳಲ್ಲಿ ವಿವಿಧ ದೇವರ ಶಿಲ್ಪಗಳಿವೆ. ಶಿವ, ವಿಷ್ಣು, ಗಣಪತಿ, ಆದಿಶಕ್ತಿ ಶಿಲ್ಪಗಳಿವೆ. ನಟರಾಜ, ಭಿಕ್ಷಾಟನಮೂರ್ತಿ, ಸೂರ್ಯ, ಭೈರವಿ, ಸರಸ್ವತಿ, ನರ್ತಕಿಯರ ಶಿಲ್ಪಗಳಿವೆ.[೩] ನವರಂಗದ ಅಂಚಿನ ಉದ್ದಕ್ಕೂ ಕಕ್ಷಾಸನಗಳಿವೆ. ಮೂರು ಕಡೆಯಿಂದಲೂ ಪ್ರವೇಶ ದ್ವಾರಗಳಿವೆ. ದೇವಕೋಷ್ಠಕಗಳಲ್ಲಿ ಸಪ್ತಮಾತೃಕೆ ಮತ್ತು ಮಹಿಷಮರ್ದಿನಿ ಶಿಲ್ಪಗಳಿವೆ. ಒಳಭಿತ್ತಿಯಲ್ಲಿ ನಾಲ್ಕು ದೇವಕೋಷ್ಠಕಗಳಿವೆ. ಅಧಿಷ್ಠಾನ ಭಿತ್ತಿ, ಸುಕನಾಸಿ ಶಿಖರವನ್ನೊಳಗೊಂಡಿದೆ. ಪುಷ್ಕರಣಿಗಳಲ್ಲಿ ಅನಂತಪದ್ಮನಾಭ ಮತ್ತು ಲಕ್ಷ್ಮಿ ಶಿಲ್ಪಗಳಿವೆ. ವಿಷ್ಣುವಿನ ಎರಡು ಮತ್ತು ಆಸೀನ ವಿಷ್ಣುವಿನ ಶಿಲ್ಪ ಒಂದು ಇದೆ. ಹೊರಭಿತ್ತಿಯ ನಾಲ್ಕು ದೇವಕೋಷ್ಠಕಗಳಲ್ಲಿ ಈ ಶಿಲ್ಪಗಳಿವೆ.[೪]

ಪಂಚಶಾಖಾಲಂಕೃತ ಬಾಗಿಲವಾಡವಿದೆ. ಹೊಸ್ತಿಲ ಬಳಿ ಸುಂದರ ಚಂದ್ರಶಿಲೆ ಇದೆ. ಅಂತರಾಳದ ಎರಡು ದೇವಕೋಷ್ಠಕಗಳಲ್ಲಿ ಗಣಪತಿಗಳಿವೆ.

ಅಧಿಷ್ಠಾನ ಮತ್ತು ಭಿತ್ತಿ ಭಾಗಗಳು ಶಿಲ್ಪಗಳಿಂದ ಕೂಡಿವೆ. ಭಿತ್ತಿಯಲ್ಲಿ ಕುಡ್ಯಸ್ತಂಭಗಳಿವೆ. ದೇವಾಲಯದ ಹೊರಭಾಗವು ಮುಖಮಂಟಪ (ಸುಕನಾಸಿ), ಪ್ರಸ್ತರ, ಗ್ರೀವ, ಭೂಮಿಜ ಶೈಲಿಯ ಶಿಖರವನ್ನೊಳಗೊಂಡಿದೆ. ಶಿಖರ ವೃತ್ತಾಕಾರ ಹೂವಿನ ದಳದಂತೆ ಅಲಂಕೃತವಾಗಿದೆ.

ಕ್ರಿ.ಶ. ೯೧೮ರ ತ್ರುಟಿತ ಶಾಸನ ಇಲ್ಲಿದೆ. ಚಂಡಿಗನೆಂಬುವನು ಮೊರಘೆಯ ಆದಿತ್ಯ ದೇವರನ್ನು ಪ್ರತಿಷ್ಠಾಪಿಸಿದನೆಂದು ಉಲ್ಲೇಖವಿದೆ.[೭೫]

ಸ್ಥಳ: ದೇಗಲ್ಮಡಿ
ಶೈಲಿ: ಚಾಲುಕ್ಯ
ಶಿಲೆ: ಕಪ್ಪುಶಿಲೆ
ದೇವಾಲಯ: ಸಂಗಮೇಶ್ವರ ದೇವಾಲಯ
ಸ್ಥಿತಿ: ಅವಸಾನ
ಕಾಲ: ಸು.೧೧ನೇ ಶತಮಾನ

ದೇವಾಲಯ ಪೂರ್ವಾಭಿಮುಖವಾಗಿದ್ದು, ಎತ್ತರವಾದ ಜಗತಿಯ ಮೇಲೆ ಸಂಗಮೇಶ್ವರ ದೇವಾಲಯ ಕಟ್ಟಲ್ಪಟ್ಟಿದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಕಂಠ ಮತ್ತು ಶಿಖರವನ್ನೊಳಗೊಂಡಿದೆ. ಅಧಿಷ್ಠಾನದಲ್ಲಿ ಅಲಂಕಾರಿಕ ಕೆತ್ತನೆಗಳಿವೆ. ಪ್ರವೇಶದ್ವಾರದ ಎಡಕ್ಕೆ ಬ್ರಹ್ಮನ ಮೂರ್ತಿಶಿಲ್ಪ ಮತ್ತು ದ್ವಾರಪಾಲಕರ ಶಿಲ್ಪವಿದೆ.

ತ್ರಿಕೂಟ ದೇವಾಲಯದಲ್ಲಿ ಪ್ರತ್ಯೇಕ ಗರ್ಭಗುಡಿಗಳಿವೆ. ಒಂದು ಗರ್ಭಗುಡಿ ಶಿಥಿಲವಾಗಿದೆ. ಆ ಕಾರಣ ಪ್ರಸ್ತುತ ಒಂದು ಗರ್ಭಗುಡಿ ಮುಚ್ಚಿದೆ. ಗರ್ಭಗುಡಿಗಳಲ್ಲಿ ಬ್ರಹ್ಮಸೂತ್ರ ಲಿಂಗಗಳಿವೆ. ಒಳಭಾಗ ಗರ್ಭಗೃಹಗಳ ಅಂತರಾಳಗಳು ಮತ್ತು ನವರಂಗವನ್ನೊಳಗೊಂಡಿದೆ. ಬಾಗಿಲವಾಡ ಪಂಚಶಾಖಾಲಂಕೃತವಾಗಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಕಗಳಿವೆ. ಅವುಗಳಲ್ಲಿ ಸಪ್ತಮಾತೃಕಾ, ಮಹಿಷಮರ್ದಿನಿ ಹಾಗೂ ಬ್ರಹ್ಮನ ಶಿಲ್ಪಗಳಿವೆ. ನವರಂಗದ ಕಂಬಗಳು ಅಲಂಕೃತವಾಗಿವೆ.[೭೬] ಮೇಲ್ಛಾವಣಿಯಲ್ಲಿ ನಕ್ಷತ್ರಾಕಾರದ ಭುವನೇಶ್ವರಿಯಿದೆ. ಅಷ್ಟದಿಕ್ಪಾಲಕರ ಶಿಲ್ಪ ಮೇಲ್ಛಾವಣಿಯಲ್ಲಿವೆ. ಕರ್ನಾಟಕ ಸರ್ಕಾರ ಗೆಜೆಟಿಯರ್ ಕಲ್ಬುರ್ಗಿ ಜಿಲ್ಲೆ, ೧೯೯೭, ಪು. ೭೯ರಲ್ಲಿ ಸಪ್ತಮಾತೃಕೆ ಇದೆ ಎಂದು ಉಲ್ಲೇಖಿಸಲಾಗಿದೆ. ಆದರೆ ಇಲ್ಲಿ ಗಣಪತಿ ಮತ್ತು ಸ್ಕಂದರನ್ನೊಳಗೊಂಡ ನವಮಾತೃಕೆಯರ ಶಿಲ್ಪಗಳನ್ನೊಳಗೊಂಡಿದೆ.

ಸ್ಥಳ: ಸೋಮನಿಂಗದ ಹಳ್ಳಿ
ಶೈಲಿ: ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ
ದೇವಾಲಯ: ಸೋಮೇಶ್ವರ ದೇವಾಲಯ
ಸ್ಥಿತಿ: ಜೀರ್ಣ
ಕಾಲ: ಸು. ೧೧ನೇ ಶತಮಾನ

ಪೂರ್ವಾಭಿಮುಖವಾಗಿರುವ ಈ ದೇವಾಲಯ ಸೋಮೇಶ್ವರ ದೇವಾಲಯವಾಗಿದೆ. ಗರ್ಭಗುಡಿ, ಅಂತರಾಳಗಳಿವೆ. ಚಂದ್ರಶಿಲೆಯ ಲಿಂಗವಿದೆ. ಇದು ಎತ್ತರ ಜಗತಿಯ ಮೇಲೆ ನಿರ್ಮಾಣವಾಗಿದೆ.

ಸ್ಥಳ: ಚೇಂಗಟಾ ಶೈಲಿ: ರಾಷ್ಟ್ರಕೂಟ

ಶಿಲೆ: ಕಪ್ಪುಶಿಲೆ ದೇವಾಲಯ: ಸೋಮೇಶ್ವರ ದೇವಾಲಯ

ಸ್ಥಿತಿ: ಜೀರ್ಣ ಕಾಲ: ಸು.೧೧ನೇ ಶತಮಾನ

ಎತ್ತರವಾದ ಜಗತಿ ಮೇಲೆ ಅಧಿಷ್ಠಾನವಿದ್ದು ಇದು ಬಹುಕೋನಾಕೃತಿಯಲ್ಲಿ ನಿರ್ಮಾಣವಾಗಿದೆ. ದೇವಾಲಯ ನಕ್ಷತ್ರಾಕಾರದ ತಳವಿನ್ಯಾಸವನ್ನೊಳಗೊಂಡಿದೆ. ಅಧಿಷ್ಠಾನದಲ್ಲಿ ಚಿಕ್ಕ ಕೋಷ್ಠಕಗಳಿವೆ. ಭಿತ್ತಿ ಭಾಗದಲ್ಲಿ ಕುಡ್ಯ ಸ್ತಂಭಗಳಿವೆ ಮತ್ತು ದೇವಕೋಷ್ಠಕಗಳಿವೆ. ಅದರಲ್ಲಿ ಭೈರವಿ, ಭೈರವ, 'ತ್ರಿಪುರಾಂತರಕ ಶಿವ' ಎಂದು ವಿವರಿಸಲಾಗಿದೆ.[೬] ಆದರೆ ಅಲ್ಲಿ ಅಂಧಕಾಸುರ-ವಧಾ-ಮೂರ್ತಿ ಶಿಲ್ಪವಿದೆ. ಈ ದೇವಕೋಷ್ಠಕ ನಾಲ್ಕು ಕೂಡ್ಯ ಸ್ತಂಭ, ಶಾಲಾ ಮಾದರಿ ಶಿಖರ, ಕರ್ಣ, ಕಪೋತಬಂಧ ಒಳಗೊಂಡಿದೆ. ದೇವಾಲಯದ ಮೇಲ್ಛಾವಣಿ ಇಳಿಜಾರಾಗಿದೆ. ಪ್ರಸ್ತುತ ಶಿಖರ ಹಾಳಾಗಿದೆ.

ಎರಡು ಗರ್ಭಗುಡಿಯನ್ನೊಳಗೊಂಡ ಈ ದೇವಾಲಯ ಒಂದು ಚತುರ್ ಶಾಖಾಲಂಕೃತ. ಮತ್ತೊಂದು ಸಪ್ತ ಶಾಖಾಲಂಕೃತವಾಗಿದೆ. ಎರಡರಲ್ಲೂ ಲಿಂಗಗಳಿವೆ. ಭುವನೇಶ್ವರಿ ಇದೆ. ಲಲಾಟದ ಮೇಲೆ ನಟರಾಜನ ಶಿಲ್ಪವಿದೆ. ಸಪ್ತ ಶಾಖಾಲಂಕೃತ ಬಾಗಿಲವಾಡದ ಕೆಳ ಭಾಗದಲ್ಲಿ ಗಂಗೆ, ಯಮುನೆಯರ ಎತ್ತರ ಶಿಲ್ಪ, ಚಾಮರಧಾರಿ ದೇವತೆಯರ ಶಿಲ್ಪ, ಶೈವ ದ್ವಾರಪಾಲಕರು ಮತ್ತು ಸ್ತ್ರೀ ದೇವತೆಯ ಶಿಲ್ಪಗಳಿವೆ. ಲಲಾಟದ ಮೇಲೆ ದೇವಕೋಷ್ಠದಲ್ಲಿ ಮಹೇಶ್ವರನ ಶಿಲ್ಪಗಳಿವೆ. ಅವುಗಳ ಮೇಲೆ ಗಣಗಳ ಪಟ್ಟಿ ಇದೆ. ಬಾಗಿಲವಾಡವು ಹೂಬಳ್ಳಿಯ ಪಟ್ಟಿಕೆ ಮತ್ತು ದಂಪತಿ ಶಿಲ್ಪ, ಸುಂದರಿಯರು ನಿಂತ ಶಿಲ್ಪ ಪಟ್ಟಿಕೆ ಮತ್ತು ಕೂಡ್ಯ ಸ್ತಂಭವನ್ನೊಳಗೊಂಡಿದೆ. ಲಲಾಟದ ಮೇಲೆ ವಿಘ್ನೇಶ್ವರನ ಶಿಲ್ಪವಿದೆ. ಸುರಳಿ ಬಳ್ಳಿಗಳನ್ನೊಳಗೊಂಡಿದೆ. ಇನ್ನೊಂದು ಗರ್ಭಗುಡಿಯ ಬಾಗಿಲವಾಡದಲ್ಲಿ ಶೈವ ದ್ವಾರಪಾಲಕರಿರುವ ಸ್ತಂಭ (ಕುಡ್ಯಸ್ತಂಭ), ಹೂಗಳ ದ್ವಾರ ಪಟ್ಟಿಕೆಯನ್ನೊಳಗೊಂಡಿದೆ. ಅದರ ಮೇಲೆ ದೇವಕೋಷ್ಠಕಗಳಿವೆ.

ಸೋಮೇಶ್ವರ ದೇವಾಲಯದ ನವರಂಗದಲ್ಲಿ ತೊಲೆ ಮಕರತೋರಣದಿಂದ ಅಲಂಕೃತವಾಗಿದೆ. ದೇವಾಲಯ ಹೊರ ಆವರಣದಲ್ಲಿ ಗಜಪಟ್ಟಿಕೆ, ಬಾಗಿಲವಾಡ ಲಲಾಟಗಳ ಭಾಗಗಳು ಬಿದ್ದಿವೆ.

ಸ್ಥಳ: ಕೋಡ್ಲಿ **ಶೈಲಿ:** ರಾಷ್ಟ್ರಕೂಟರು

ಶಿಲೆ: ಕಪ್ಪುಶಿಲೆ **ದೇವಾಲಯ:** ರಾಮಲಿಂಗೇಶ್ವರ ದೇವಾಲಯ

ಸ್ಥಿತಿ: ಅವಸಾನ ಹಂತದಲ್ಲಿದೆ **ಕಾಲ:** ಸು.೧೨ನೆಯ ಶತಮಾನ

ದೇವಾಲಯವು ಪೂರ್ವಾಭಿಮುಖವಾಗಿದೆ. ಎತ್ತರದ ಜಗತಿಯ ಮೇಲೆ ನಿರ್ಮಾಣವಾದ ದೇವಾಲಯ ಚಾಲುಕ್ಯ ಶೈಲಿಯ ಸ್ತಂಭಗಳನ್ನೊಳಗೊಂಡಿದೆ. ದೇವಾಲಯದ ಒಳಭಾಗವು ಗರ್ಭಗುಡಿ, ಅಂತರಾಳ ಮತ್ತು ನವರಂಗವನ್ನೊಳಗೊಂಡಿದೆ. ದೇವಾಲಯದ ಮುಂದೆ ಪುಷ್ಕರಣಿ ಇದೆ. ಶಿವಲಿಂಗ ಗರ್ಭಗುಡಿಯಲ್ಲಿದೆ.

ಗಜಲಕ್ಷ್ಮಿ ಲಲಾಟವಿದೆ. ಬಾಗಿಲವಾಡವು ತ್ರಿಶಾಖಾಲಂಕೃತವಾಗಿದೆ. ಅಂತರಾಳದಲ್ಲಿ ಜಾಲಂಧ್ರ ಮತ್ತು ಮಕರ ತೋರಣಗಳಿವೆ. ತೆರೆದ ನವರಂಗದಲ್ಲಿ ಕಕ್ಷಾಸನವಿದೆ. ನವರಂಗವನ್ನು ಪ್ರವೇಶಿಸಲು ಮೂರು ಕಡೆಗಳಿಂದಲೂ ಮಾರ್ಗಗಳಿವೆ.[೭೮] ಕರಿಕಲ್ಲನ್ನು ದೇವಾಲಯದ ಸ್ತಂಭ, ಬಾಗಿಲು ಮತ್ತು ಛತ್‌ಗಾಗಿ, ಕಲ್ಲುಗಾರೆ ದೇವಾಲಯದ ನಿರ್ಮಾಣಕ್ಕೆ ಉಪಯೋಗಿಸಲಾಗಿದೆ. ದೇವಾಲಯವು ಅಧಿಷ್ಠಾನ, ಭಿತ್ತಿ ಮತ್ತು ಮೇಲ್ಛಾವಣಿಯನ್ನೊಳಗೊಂಡಿದೆ.

ಸ್ಥಳ: ಪಸ್ತಾಪೂರ | **ಶೈಲಿ:** ಚಾಲುಕ್ಯ
ಶಿಲೆ: ಕಪ್ಪುಶಿಲೆ | **ದೇವಾಲಯ:** ರಾಮಲಿಂಗೇಶ್ವರ ದೇವಾಲಯ
ಸ್ಥಿತಿ: ಜೀರ್ಣೋದ್ಧಾರಗೊಂಡಿದೆ. | **ಕಾಲ:** ಸು.೧೨ನೆಯ ಶತಮಾನ

ರಾಮಲಿಂಗೇಶ್ವರ ದೇವಾಲಯ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನೊಳಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗ ಮತ್ತು ಪಾರ್ಶ್ವದ್ವಾರವಿದೆ.[೭೯] ತ್ರಿಶಾಖಾಲಂಕೃತ ಬಾಗಿಲವಾಡವಿದೆ. ಲಲಾಟದಲ್ಲಿ ಗಣಪತಿ ಶಿಲ್ಪವಿದೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಕಗಳಿವೆ. ಅವುಗಳಲ್ಲಿ ಗಣಪತಿ, ನಾಗ ಮತ್ತು ಭೈರವ ಶಿಲ್ಪಗಳಿವೆ. ಚಾಲುಕ್ಯ ಶೈಲಿಯಲ್ಲಿ ನವರಂಗದ ಸ್ತಂಭಗಳಿವೆ. ಇದರ ಮೇಲ್ಛಾವಣಿಯಲ್ಲಿ ತ್ರಿದಳ ಭುವನೇಶ್ವರಿಯಿದೆ. ನವರಂಗದ ಪ್ರವೇಶ ಭಾಗದಲ್ಲಿ ಕಕ್ಷಾಸನವಿದೆ.[೮೦] ಸ್ತಂಭಗಳು ಹೂ, ಮುತ್ತಿನ ಸರ, ಬಳ್ಳಿಗಳಿಂದ ಅಲಂಕೃತವಾಗಿವೆ. ಸ್ತಂಭ ಭಾಗಗಳ ಮೇಲೆ ಬೋದಿಗೆಗಳಿವೆ. ಕುಬ್ಜ ಕಂಬಗಳಿವೆ. ದೇವಾಲಯವು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಕಂಠ, ಶಿಖರ, ಸ್ತೂಪಿ ಒಳಗೊಂಡಿದೆ. ಇದು ಷಡ್ವರ್ಗ ದೇವಾಲಯವಾಗಿದೆ.

ಸ್ಥಳ: ಕುಪನೂರು | **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ | **ದೇವಾಲಯ:** ಈಶ್ವರ ದೇವಾಲಯ
ಸ್ಥಿತಿ: ಜೀರ್ಣೋದ್ಧಾರಗೊಂಡಿದೆ | **ಕಾಲ:** ಸು.೧೨ನೆಯ ಶತಮಾನ

ದೇವಾಲಯದ ಬಾಗಿಲವಾಡ ಪಂಚಶಾಖಾಲಂಕೃತವಾಗಿದೆ. ಬಾಗಿಲವಾಡದ ಕೆಳಭಾಗದಲ್ಲಿ ದ್ವಾರಪಾಲಕಿಯರ ಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ ಬಿಂಬವಿದೆ. ಹೊರ ಬಾಗಿಲವಾಡ ತ್ರಿಶಾಖಾಲಂಕೃತವಾಗಿದೆ. ಶೈವ ದ್ವಾರಪಾಲಕರ ಶಿಲ್ಪಗಳಿವೆ. ಗಜತೋರಣ ಮತ್ತು ಗಜಸವಾರರ ಶಿಲ್ಪವಿದೆ. ತೋರಣದಲ್ಲಿ ಸಂಗೀತ ವಾದ್ಯಗಾರರ ಶಿಲ್ಪ, ಮಧ್ಯಭಾಗದಲ್ಲಿ ಮಹೇಶ್ವರನ ಶಿಲ್ಪವಿದೆ. ಕಲ್ಲು, ಗಚ್ಚು, ಗಾರೆ, ಕರಿಕಲ್ಲು ದೇವಾಲಯ ನಿರ್ಮಾಣಕ್ಕೆ ಬಳಸಿದ ವಸ್ತುಗಳಾಗಿವೆ.

ಸ್ಥಳ: ಕುಪನೂರು | **ಶೈಲಿ:** ಕಲ್ಯಾಣ ಚಾಲುಕ್ಯರು
ಶಿಲೆ: ಕಪ್ಪುಶಿಲೆ | **ದೇವಾಲಯ:** ಈಶ್ವರ ದೇವಾಲಯ
ಸ್ಥಿತಿ: ಹಾಳಾಗಿದೆ. | **ಕಾಲ:** ಸು.೧೦ನೇ ಶತಮಾನ

ಈಶ್ವರ ದೇವಾಲಯ ಪೂರ್ವಾಭಿಮುಖವಾಗಿದೆ. ದ್ವಿಕೂಟ ದೇವಾಲಯವಾಗಿತ್ತು. ಆದರೆ ಈಗ ಒಂದು ಗರ್ಭಗೃಹ ಮಾತ್ರವಿದ್ದು, ಅದು ಹಾಳಾಗಿದೆ. ಶಿವಲಿಂಗ ಮತ್ತು ಒಂದು

ವೀರಗಲ್ಲು ಮತ್ತು ನೇಗಿಲು ಹಿಡಿದು ನಿಂತ ವ್ಯಕ್ತಿ ಶಿಲ್ಪವಿದೆ. ನೇಗಿಲು ರಾಷ್ಟ್ರಕೂಟರ ಲಾಂಛನವಾಗಿದ್ದು ಈ ಶಿಲ್ಪ ರಾಷ್ಟ್ರಕೂಟರ ಕಾಲದ್ದಾಗಿದೆ. ಇನ್ನೊಂದು ಲಿಂಗ ತ್ರುಟಿತವಾಗಿದ್ದು, ಪಕ್ಕದ ಕಸದ ತೊಟ್ಟಿಯಲ್ಲಿದೆ. ಪೂರ್ವಕ್ಕೊಂದು ಮತ್ತು ಪಶ್ಚಿಮಕ್ಕೊಂದು ದ್ವಾರವಿದೆ. ಈ ದೇವಾಲಯ ನಿರ್ಮಾಣಕ್ಕೆ ಕಲ್ಲು, ಗಚ್ಚು, ಗಾರೆ, ಕರಿಕಲ್ಲುಗಳ ಉಪಯೋಗ ಮಾಡಲಾಗಿದೆ.

ಸ್ಥಳ: ಕೋಡ್ಲಿ **ಶೈಲಿ:** ಕಲ್ಯಾಣ ಚಾಲುಕ್ಯರು
ಶಿಲೆ: ಕಪ್ಪುಶಿಲೆ **ದೇವಾಲಯ:** ಮಲ್ಲಿಕಾರ್ಜುನ ದೇವಾಲಯ
ಸ್ಥಿತಿ: ಅವಸಾನ ಹಂತ **ಕಾಲ:** ಸು.೧೨ನೇ ಶತಮಾನ

ದೇವಾಲಯ ಉತ್ತರಾಭಿಮುಖವಾಗಿದ್ದು, ವಿಶಾಲವಾದ ಪ್ರಾಂಗಣವನ್ನೊಳಗೊಂಡಿದೆ. ಅಲ್ಲಿ ಅನೇಕ ತ್ರುಟಿತ ಕಲ್ಯಾಣ ಚಾಲುಕ್ಯರ ಕಾಲದ ವಾಸ್ತುಶಿಲ್ಪದ ಶಿಲ್ಪಗಳು ಬಾಗಿಲವಾಡ, ತೋರಣದ ಭಾಗ ಬಿದ್ದಿವೆ. ದೇವಾಲಯ ಗರ್ಭಗುಡಿ ಅಂತರಾಳ ಮತ್ತು ನವರಂಗವನ್ನೊಳಗೊಂಡಿದೆ. ನವರಂಗದಲ್ಲಿ ಒಂದು ವೀರಗಲ್ಲು ಮತ್ತು ಅಷ್ಟಭುಜ ಮಹಿಷಮರ್ದಿನಿಯ ಶಿಲ್ಪವಿದೆ. ದೇವಾಲಯ ಚಾಲುಕ್ಯ ಶೈಲಿಯದ್ದಾಗಿದೆ.[೮೧] ಗರ್ಭಗುಡಿಯೊಳಗೆ ಶಿವಲಿಂಗವಿದೆ. ದ್ವಾದಶ ಕೋನಕಂಬಗಳಿವೆ. ಕಲ್ಲು, ಗಚ್ಚು, ಗಾರೆಯಿಂದ ದೇವಾಲಯ ನಿರ್ಮಾಣವಾಗಿದೆ. ಗರ್ಭಗುಡಿ, ಸ್ತಂಭ, ಬಾಗಿಲು ಕರಿಕಲ್ಲಿನಿಂದ ಕೂಡಿವೆ. ದೇವಾಲಯವು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಕಂಠವನ್ನೊಳಗೊಂಡಿದೆ.

ಸ್ಥಳ: ಕೇಶಾವರ್ (ಗಡಿ) **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಮಲ್ಲಿಕಾರ್ಜುನ ದೇವಾಲಯ
ಸ್ಥಿತಿ: ಜೀರ್ಣೋದ್ಧಾರಗೊಂಡಿದೆ **ಕಾಲ:** ಸು.೧೧ನೇ ಶತಮಾನ

ದೇವಾಲಯವು ಪೂರ್ವಾಭಿಮುಖವಾಗಿದೆ. ಜೀರ್ಣಗೊಂಡ ಮಲ್ಲಿಕಾರ್ಜುನ ದೇವಾಲಯ ದ್ವಿಕೂಟ ದೇವಾಲಯವಾಗಿದ್ದಂತೆ ತೋರುತ್ತದೆ. ಗರ್ಭಗುಡಿಯಲ್ಲಿ ಎರಡು ಲಿಂಗಗಳಿವೆ. ಎತ್ತರದ ಜಗತಿಯ ಮೇಲೆ ಅಧಿಷ್ಠಾನ, ಭಿತ್ತಿ, ಶಿಖರವನ್ನೊಳಗೊಂಡಿದೆ.

ಗರ್ಭಗೃಹ ಮತ್ತು ತೆರೆದ ಅಂತರಾಳವನ್ನೊಳಗೊಂಡಿದೆ. ನಕ್ಷತ್ರಾಕಾರದ ಭುವನೇಶ್ವರಿಯ ಮಧ್ಯದಲ್ಲಿ ಕುಮುದ ಇಳಿಬಿಟ್ಟಂತಿದೆ. ಕೀರ್ತಿಮುಖ ಮತ್ತು ಆಯುಧ ಹಿಡಿದುನಿಂತ ದೇವತೆಗಳು, ಹೂಬಳ್ಳಿಗಳು ಮೇಲ್ಭಾವಣಿಯಲ್ಲಿವೆ. ಬಾಗಿಲವಾಡದ ಕೆಳಸ್ತರದಲ್ಲಿ ಶೈವ ದ್ವಾರಪಾಲಕರ ಮೂರ್ತಿಶಿಲ್ಪಗಳಿವೆ. ಲಲಾಟದ ಮೇಲೆ ಗಜಲಕ್ಷ್ಮಿ ಶಿಲ್ಪವಿದೆ. ಷಡ್ ಶಾಖಾಲಂಕೃತ ಬಾಗಿಲ ವಾಡವಿದೆ. ಗರ್ಭಗುಡಿಯಲ್ಲಿ ಬ್ರಹ್ಮಸೂತ್ರ ಶಿವಲಿಂಗವಿದೆ.[೮೨]

ಸ್ಥಳ: ಕೇಶಾವರ್ (ಗಡಿ) **ಶೈಲಿ:** ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಕರಿಸಿದ್ಧೇಶ್ವರ ದೇವಾಲಯ
ಸ್ಥಿತಿ: ಅವಸಾನ **ಕಾಲ:** ಸು.೧೧ನೇ ಶತಮಾನ

ದೇವಾಲಯವು ಉತ್ತರಾಭಿಮುಖವಾಗಿದೆ. ಸಿದ್ದೇಶ್ವರ ಗುಡಿ ಹಾಳು ಬಿದ್ದ ಕಾರಣ ಪಾಳು ಸಿದ್ದಪ್ಪನ ಗುಡಿ ಎಂದೇ ಇಲ್ಲಿನ ಜನ ಕರೆಯುತ್ತಾರೆ. ಈ ದೇವಾಲಯ ಗರ್ಭಗೃಹ ತೆರೆದ

ಅಂತರಾಳ, ನವರಂಗವನ್ನೊಳಗೊಂಡಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ನವರಂಗದ ಉತ್ತರಕ್ಕೆ ಒಂದಂಕಣದ ಮಂಟಪವಿದೆ. ಈ ಭಾಗದಿಂದಲೇ ಪ್ರವೇಶವಿದೆ.[೮೩] ಹೊರಭಾಗ ಭಿತ್ತಿ, ಅಧಿಷ್ಠಾನವನ್ನೊಳಗೊಂಡಿದೆ. ಪ್ರಸ್ತುತ ಶಿಖರ ನಾಶವಾಗಿ ಚಪ್ಪಟೆ ಮೇಲ್ಛಾವಣಿ ಮಾತ್ರ ಉಳಿದಿದೆ.

ಸ್ಥಳ: ಕೇಶಾವರ್ (ಗಡಿ) **ಶೈಲಿ:** ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಕರಿದೇವರ ಗುಡಿ

ಸ್ಥಿತಿ: ಅವಸಾನ **ಕಾಲ:** ಸು.೧೦-೧೧ನೇ ಶತಮಾನ

ದೇವಾಲಯವು ಉತ್ತರಾಭಿಮುಖವಾಗಿದೆ. ಕರಿದೇವರ ಗುಡಿ ದ್ವಿಕೂಟವಾಗಿದೆ. ಎದುರು ಬದುರಾಗಿ ಎರಡು ಗರ್ಭಗೃಹಗಳಿವೆ. ಅಂತರಾಳವಿದೆ.[೮೪] ನವರಂಗವಿದ್ದು, ಇದನ್ನು ಪ್ರವೇಶಿಸಲು ಉತ್ತರ ಮತ್ತು ದಕ್ಷಿಣಾಭಿಮುಖ ದ್ವಾರಗಳಿವೆ. ದೇವಾಲಯದ ಅಧಿಷ್ಠಾನ ಮತ್ತು ಭಿತ್ತಿ ಭಾಗ ಮಾತ್ರ ಉಳಿದಿವೆ. ಗರ್ಭಗುಡಿ ಬಾಗಿಲುಗಳು ಪೂರ್ವ ಮತ್ತು ಪಶ್ಚಿಮಾಭಿಮುಖವಾಗಿವೆ.

ಸ್ಥಳ: ಕೇಶಾವರ್ (ಗಡಿ) **ಶೈಲಿ:** ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಸಂಗಮನಾಥ ದೇವಾಲಯ

ಸ್ಥಿತಿ: ಅವಸಾನ **ಕಾಲ:** ಸು.೮-೯ನೇ ಶತಮಾನ

ಸಂಗಮನಾಥ ದೇವಾಲಯದಲ್ಲಿ ನಂದಿಯ ಮೂರ್ತಿಶಿಲ್ಪವಿದೆ ಮತ್ತು ಕದಂಬ ನಾಗರ ಶಿಖರವಿದೆ.[೮೫]

ಸ್ಥಳ: ರಾಮತೀರ್ಥ **ಶೈಲಿ:** ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ರಾಮಲಿಂಗೇಶ್ವರ ದೇವಾಲಯ

ಸ್ಥಿತಿ: ಜೀರ್ಣಾವಸ್ಥೆಯಲ್ಲಿದೆ. **ಕಾಲ:** ಸು.೧೧ನೇ ಶತಮಾನ

ದೇವಾಲಯವು ಉತ್ತರಾಭಿಮುಖವಾಗಿದೆ. ಪ್ರಾಚೀನವಾಗಿರುವ ರಾಮಲಿಂಗೇಶ್ವರ ದೇವಾಲಯ ದ್ವಿಕೂಟ ದೇವಾಲಯವಾಗಿದೆ. ಪೂರ್ವ ಪಶ್ಚಿಮಕ್ಕೆ ಎದುರುಬದುರಾಗಿ ಒಂದೊಂದು ಗರ್ಭಗೃಹ ಮತ್ತು ಅಂತರಾಳಗಳನ್ನೊಳಗೊಂಡಿದೆ. ಪ್ರಧಾನ ಗರ್ಭಗೃಹ ಪೂರ್ವಾಭಿಮುಖವಾಗಿದೆ. ಇದರಲ್ಲಿ ಶಿವಲಿಂಗವಿದೆ. ಇದರ ಎದುರಿನ ಗರ್ಭಗೃಹದಲ್ಲಿ ಕೇವಲ ಸೂರ್ಯ ಪೀಠವಷ್ಟೇ ಉಳಿದಿದೆ. ಹಿಂದೆ ಸೂರ್ಯ ಮೂರ್ತಿ ಇತ್ತು. ಗರ್ಭಗುಡಿಗಳ ಬಾಗಿಲುವಾಡಗಳು ಅಲಂಕಾರ ಇರದೆ ಮೂಲರೂಪದಲ್ಲಿವೆ. ಛತ್‌ನಲ್ಲಿ ತ್ರಿದಳ ಭುವನೇಶ್ವರಿ ಇದೆ. ನವರಂಗದ ಅಂಚಿನಲ್ಲಿ ಕಕ್ಷಾಸನಗಳಿವೆ. ಇದನ್ನು ಪ್ರವೇಶಿಸಲು ಉತ್ತರ ದಕ್ಷಿಣಗಳಿಂದ ಪ್ರವೇಶದ್ವಾರವಿದೆ.[೮೬] ದ್ವಿಶಾಖಾಲಂಕೃತ ಬಾಗಿಲವಾಡವು ಹೂದಳ ಮತ್ತು ಬಳ್ಳಿಗಳಿಂದ ಕೂಡಿದೆ.

ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ(ಕಂಠ)ಗಳನ್ನೊಳಗೊಂಡಿದೆ. ಶಿಖರ ಹಾಳಾಗಿದೆ. ಮಂಟಪ ಮೇಲ್ಛಾವಣಿ ಇಳಿಜಾರಾಗಿದ್ದು ಸಪಾಟಾಗಿದೆ.

ಸ್ಥಳ: ರಟ್ಕಲ್ **ಶೈಲಿ:** ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ರಾಮಲಿಂಗೇಶ್ವರ ದೇವಾಲಯ
ಸ್ಥಿತಿ: ಅವಸಾನ **ಕಾಲ:** ಸು.೧೨ನೇ ಶತಮಾನ

ದೇವಾಲಯವು ಉತ್ತರಾಭಿಮುಖವಾಗಿದೆ. ತ್ರಿಕೂಟ ದೇವಾಲಯವಾಗಿದೆ. ಗರ್ಭಗುಡಿಯಲ್ಲಿ ಶಿವಲಿಂಗಗಳಿವೆ. ನವರಂಗವಿದೆ. ಪ್ರವೇಶದ್ವಾರದಲ್ಲಿ ಉಬ್ಬುಶಿಲ್ಪಗಳಿವೆ.[೮೭] ದೇವಾಲಯವು ಗಾರೆ, ಕಲ್ಲುಗಳಿಂದ ನಿರ್ಮಾಣವಾಗಿದೆ. ನವರಂಗದಲ್ಲಿ ಒಂದು ವೀರಗಲ್ಲಿದೆ. ಪ್ರಸ್ತುತ ದೇವಾಲಯದ ಎತ್ತರ ಅಧಿಷ್ಠಾನ, ಭಿತ್ತಿ ಭಾಗ ಮಾತ್ರ ಉಳಿದಿವೆ. ಪ್ರಸ್ತರ, ಗ್ರೀವ ಮತ್ತು ಶಿಖರ ಹಾಳಾಗಿವೆ.

ಸ್ಥಳ: ಭೂತಪುರ **ಶೈಲಿ:** ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಈಶ್ವರ ದೇವಾಲಯ
ಸ್ಥಿತಿ: ಜೀರ್ಣೋದ್ಧಾರಗೊಂಡಿದೆ. **ಕಾಲ:** ಸು.೧೨ನೇ ಶತಮಾನ

ಈಶ್ವರ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನೊಳಗೊಂಡಿದೆ. ಶಿವಲಿಂಗವನ್ನು ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಲಾಗಿದೆ. ಇದರ ದ್ವಾರಬಂದವು ಸರಳ ತ್ರಿಶಾಖ ಪಟ್ಟಿಕೆಯನ್ನೊಳಗೊಂಡಿದೆ. ಅಂತರಾಳದಲ್ಲಿ ನಂದಿ ಇದೆ. ಛಾವಣಿ ಚಪ್ಪಟೆಯಾಗಿದೆ.[೮೯]

ಸ್ಥಳ: ಭೂತಪುರ **ಶೈಲಿ:** ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಮಲ್ಲಿಕಾರ್ಜುನ ದೇವಾಲಯ
ಸ್ಥಿತಿ: ಅವಸಾನ ಅಂಚಿನಲ್ಲಿದೆ. **ಕಾಲ:** ಸು.೧೧ನೇ ಶತಮಾನ

ಮಲ್ಲಿಕಾರ್ಜುನ ಗುಡಿಯ ಗರ್ಭಗುಡಿಯಲ್ಲಿ ಸಪ್ತಾಶ್ವ ಸಾರಥಿ ಮತ್ತು ಅರುಣರಿರುವ ಆದಿತ್ಯ ಪೀಠವಿದೆ. ತೊಲೆಯ ಮೇಲೆ ಸಪ್ತಮಾತೃಕೆಯರ ಶಿಲ್ಪವಿದೆ.[೯೦] ಪ್ರಾರಂಭದಲ್ಲಿ ಸೂರ್ಯ ದೇವಾಲಯವಾಗಿದ್ದಂತೆ ತೋರುತ್ತದೆ.

ಸ್ಥಳ: ನಿಡಗುಂದ **ಶೈಲಿ:** ರಾಷ್ಟ್ರಕೂಟ
ಶಿಲೆ: ಕಪ್ಪುಶಿಲೆ **ದೇವಾಲಯ:** ವೀರಭದ್ರೇಶ್ವರ ದೇವಾಲಯ
ಸ್ಥಿತಿ: ಜೀರ್ಣ **ಕಾಲ:** ಸು.೧೦ನೇ ಶತಮಾನ

ವೀರಭದ್ರೇಶ್ವರ ಗುಡಿ ಗರ್ಭಗುಡಿ ಮತ್ತು ನವರಂಗವನ್ನೊಳಗೊಂಡಿದೆ. ಶಿವಲಿಂಗವಿದೆ. ನವರಂಗದ ಮೇಲ್ಭಾಗದಲ್ಲಿ ಆಕರ್ಷಕವಾದ ಗಾರೆ ಶಿಲ್ಪಗಳಿದ್ದು, ಮಿಥುನ ಶಿಲ್ಪಗಳಿವೆ. ನವರಂಗದಲ್ಲಿ ನಂದಿ ಮೂರ್ತಿಶಿಲ್ಪವಿದೆ.[೯೦] ದ್ರಾವಿಡ ಶೈಲಿಯ ಶಿಖರ ಕಂಠ, ಪ್ರಸ್ತರ, ಭಿತ್ತಿ ಮತ್ತು ಅಧಿಷ್ಠಾನವನ್ನೊಳಗೊಂಡಿದೆ. ಭಿತ್ತಿಯಲ್ಲಿ ಕುಡ್ಯಸ್ತಂಭಗಳಿವೆ.

ಸ್ಥಳ: ರಟ್ಕಲ್ **ಶೈಲಿ:** ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಬಂಕನಾಥ ದೇವಾಲಯ
ಸ್ಥಿತಿ: ಮಧ್ಯಮ **ಕಾಲ:** ಸು.೧೧ನೇ ಶತಮಾನ

ದೇವಾಲಯವು ಪೂರ್ವಾಭಿಮುಖವಾಗಿದೆ. ದ್ವಿಕೂಟ ದೇವಾಲಯವಾಗಿದ್ದ ಈ ದೇವಾಲಯದ ಪ್ರವೇಶದ ಬಲಕ್ಕಿರುವ ಗುಡಿಯ ಶಿಖರ ಹಾಳಾಗಿದೆ. ಕೇವಲ ಗರ್ಭಗುಡಿ ಮಾತ್ರ ಉಳಿದಿದೆ.

ಎರಡು ಗರ್ಭಗೃಹಗಳ ದ್ವಾರ ಉತ್ತರಾಭಿಮುಖವಾಗಿವೆ. ಭಿತ್ತಿ, ಪ್ರಸ್ತರ, ಕಂಠ, ಶಿಖರ, ಸ್ತೂಪಿ ಹೊಂದಿದ ಷಡ್ವರ್ಗ ದೇವಾಲಯವಾಗಿದೆ. ಅಧಿಷ್ಠಾನವು ಉಪಾನ, ಜಗತಿ, ಪಟ್ಟಿಕೆ, ಕಪೋತವನ್ನೊಳಗೊಂಡಿದೆ. ಎತ್ತರದ ಬೀಟ್ (ಜಗತಿ) ಮೇಲೆ ನಿರ್ಮಿತ ಅಧಿಷ್ಠಾನ, ಭಿತ್ತಿಯಲ್ಲಿ ಪದ್ಮ, ಹೂಗಳು, ಹಂಸಗಳ ಪಟ್ಟಿಕೆಗಳಿಂದ ಅಲಂಕೃತವಾಗಿದೆ. ಶಿಖರ ಗಚ್ಚು, ಗಾರೆಯಿಂದ ನಿರ್ಮಿತವಾಗಿದ್ದು, ವೇಸರ ಶೈಲಿಯಲ್ಲಿದೆ. ಅಧಿಷ್ಠಾನ, ತ್ರಿಪಟ್ಟ ಕುಮುದ ಮತ್ತು ಪ್ರಸ್ತರ ಕಲ್ಲಿನಿಂದ ನಿರ್ಮಾಣ, ಶಿಖರಕ್ಕೆ ಮಾತ್ರ ಗಚ್ಚು ಗಾರೆ ಉಪಯೋಗ ಮಾಡಿದ್ದಾರೆ. ಪೂರ್ವ, ಪಶ್ಚಿಮ ಮತ್ತು ಉತ್ತರಕ್ಕೆ ಮೂರು ದಿಕ್ಕಿನಲ್ಲಿ ನವರಂಗಕ್ಕೆ ಹೋಗಲು ಮೂರು ದ್ವಾರಗಳಿವೆ.

ಗರ್ಭಗುಡಿ, ಅಂತರಾಳ, ನವರಂಗಗಳನ್ನೊಳಗೊಂಡಿದೆ. ಬಾಗಿಲವಾಡ ತ್ರಿಶಾಖಾಲಂಕೃತ ವಾಗಿದೆ. ಭುವನೇಶ್ವರಿ ಮತ್ತು ಅಷ್ಟದಿಕ್ಪಾಲಕರ ಫಲಕಗಳಿಂದ ಕೂಡಿದ ಮೇಲ್ಛಾವಣಿ ಇದೆ. ಮಕರ ತೋರಣ ಅಂತರಾಳದ ತೊಲೆಯಲ್ಲಿದೆ. ನವರಂಗದಲ್ಲಿ ಎರಡು ದೇವಕೋಷ್ಠಕಗಳಿವೆ. ಕಂಬಗಳು ಅಲಂಕೃತವಾಗಿವೆ. ದೇವಾಲಯದ ಹೊರಭಿತ್ತಿಯು ವಜ್ರಪಟ್ಟಿಕೆ ಫಲಕಗಳಿಂದ ಕೂಡಿದೆ ಮತ್ತು ನವರಂಗದಲ್ಲಿ ಕಕ್ಷಾಸನಗಳಿವೆ.[೯೧] ಗರ್ಭಗುಡಿಯಲ್ಲಿ ಎರಡು ಲಿಂಗಗಳಿವೆ. ಇನ್ನೊಂದು ಗರ್ಭಗುಡಿ ಪ್ರಸ್ತುತ ಖಾಲಿ ಇದೆ.

ಸ್ಥಳ: ನಿಡಗುಂದ
ಶೈಲಿ: ಚಾಲುಕ್ಯ
ಶಿಲೆ: ಕಪ್ಪುಶಿಲೆ
ದೇವಾಲಯ: ಮಲ್ಲಿಕಾರ್ಜುನ ದೇವಾಲಯ
ಸ್ಥಿತಿ: ಅವಸಾನ
ಕಾಲ: ಸು.೧೧ನೇ ಶತಮಾನ

ಕಪಾಳರ ಹೊಲದಲ್ಲಿರುವ ಕದಂಬನಾಗರ ಶಿಖರನ್ನೊಳಗೊಂಡಿದ್ದು, ಪ್ರಸ್ತುತ ದೇವಾಲಯದ ಗರ್ಭಗುಡಿ ಭಾಗ ಮಾತ್ರ ಉಳಿದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಬಾಗಿಲುವಾಡ ತ್ರಿಶಾಖಾ ಲಂಕೃತವಾಗಿದೆ. ಹಂಸಾವಳಿ ಕೆತ್ತನೆಯನ್ನೊಳಗೊಂಡಿರುವುದು ಇಲ್ಲಿನ ಇನ್ನೊಂದು ವೈಶಿಷ್ಟ್ಯತೆಯಾಗಿದೆ.[೯೨]

ಸ್ಥಳ: ಮಿರ್‍ಯಾಣ
ಶೈಲಿ: ಚಾಲುಕ್ಯ
ಶಿಲೆ: ಕಪ್ಪುಶಿಲೆ
ದೇವಾಲಯ: ಈಶ್ವರ ದೇವಾಲಯ
ಸ್ಥಿತಿ: ಅವಸಾನ
ಕಾಲ: ಸು.೧೧ನೇ ಶತಮಾನ

ಈಶ್ವರಲಿಂಗ ದೇವಾಲಯದ ಗರ್ಭಗುಡಿಯ ಬಾಗಿಲುವಾಡವು ಚತುರ್ ಶಾಖೆಯಲ್ಲಿದ್ದು ಹೂ ಬಳ್ಳಿಯಿಂದ ಅಲಂಕೃತಗೊಂಡಿದೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಈ ಲಲಾಟದ ಮೇಲ್ಭಾಗದಲ್ಲಿ ದಾನ ಶಾಸನವಿದೆ. ಅದರ ಮೇಲ್ಭಾಗದ ನಾಸಿ ಕೋಷ್ಠಗಳೆರಡರಲ್ಲಿ ಶಿಲ್ಪಗಳಿವೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ದೇವಾಲಯದ ಪ್ರವೇಶದ ಪ್ರಾಂಗಣದಲ್ಲಿ ಗಣಪತಿ ಮೂರ್ತಿಶಿಲ್ಪ ಮತ್ತು ಸಿಂಹ ಸ್ತಂಭ ಶಿಲ್ಪವಿದೆ.

ಸ್ಥಳ: ಶಿರೋಳ್ಳಿ **ಶೈಲಿ:** ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಹರಿಹರ/ನಾಗಲಿಂಗೇಶ್ವರ ದೇವಾಲಯ
ಸ್ಥಿತಿ: ಶಿಥಿಲ **ಕಾಲ:** ಸು.೧೧ನೇ ಶತಮಾನ

ಕಲ್ಯಾಣ ಚಾಲುಕ್ಯರ ೬ನೇ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಈ ದೇವಾಲಯವು ಶಾಸನೋಕ್ತ ಹರಿಹರ ದೇವಾಲಯವಾಗಿದೆ.[೯] ತ್ರಿಕೂಟ ದೇವಾಲಯವಾಗಿದ್ದು, ಇದರ ಎರಡು ಗರ್ಭಗುಡಿಗಳು ಎದುರುಬದುರಾಗಿ ಮತ್ತೊಂದು ಅವುಗಳ ಪಕ್ಕದಲ್ಲಿದೆ. ಪಂಚ ಶಾಖಾಲಂಕೃತ ಬಾಗಿಲವಾಡವಿದೆ. ಹೂಬಳ್ಳಿಗಳಿಂದ ಬಾಗಿಲವಾಡ ಅಲಂಕೃತವಾಗಿದೆ. ಅಂತರಾಳವನ್ನೊಳಗೊಂಡಿದೆ. ನವರಂಗ ಹಾಳಾಗಿದೆ. ಭುವನೇಶ್ವರಿ, ಮೇಲ್ಬಾವಣಿ ಶಿಲ್ಪಗಳು ದೇವಾಲಯ ಪಕ್ಕದಲ್ಲಿ ಮುರಿದು ಬಿದ್ದಿವೆ. ಗರ್ಭಗುಡಿ ಬಾಗಿಲ ಬಲಭಾಗದ ಬಳಿ ಒಂದು ಶಾಸನ ಶಿಲ್ಪವಿದೆ. ಇದು ಹರಿಹರ ದೇವಾಲಯಕ್ಕೆ ನೀಡಿದ ದಾನವನ್ನು ಸೂಚಿಸುತ್ತದೆ. ಉಳಿದೆರಡು ಗರ್ಭಗುಡಿ ಶಿಥಿಲವಾಗಿವೆ. ಅಧಿಷ್ಠಾನ, ಭಿತ್ತಿಯನ್ನೊಳಗೊಂಡಿದೆ.

ಸ್ಥಳ: ಸುಲೇಪೇಟೆ **ಶೈಲಿ:** ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಶಂಭುಲಿಂಗ ಗುಡಿ
ಸ್ಥಿತಿ: ಅವಸಾನ **ಕಾಲ:** ಸು.೧೧ನೇ ಶತಮಾನ

ದೇವಾಲಯವು ಉತ್ತರಾಭಿಮುಖವಾಗಿದೆ. ಅಧಿಷ್ಠಾನ, ಭಿತ್ತಿ, ಪ್ರಸ್ತರ, ಕಂಠ ಭಾಗಗಳಿದ್ದು ಶಿಖರ ಹಾಳಾಗಿದೆ. ಎತ್ತರವಾದ ಜಗತಿಯ ಮೇಲೆ ಈ ದೇವಾಲಯ ನಿರ್ಮಾಣವಾಗಿದೆ. ಇದು ತ್ರಿಕೂಟ ದೇವಾಲಯವಾಗಿದೆ. ಬಹು ಕೋನಾಕಾರ ತಳವಿನ್ಯಾಸವನ್ನೊಳಗೊಂಡಿದೆ.

ಮೂರು ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನೊಳಗೊಂಡಿದೆ. ಇದರ ಮುಂದಿನ ರಂಗಮಂಟಪ ಹಾಳಾಗಿದೆ. ಗರ್ಭಗೃಹಗಳು ಪ್ರಸ್ತುತ ಖಾಲಿಯಿವೆ. ಪ್ರಧಾನ ಗರ್ಭಗೃಹದ ತೀರ್ಥಂಕರ ಪೀಠ ಮಾತ್ರ ಉಳಿದಿದೆ. ಮತ್ತು ಇಲ್ಲಿ ಶಿವಲಿಂಗ ನಂತರ ಪ್ರತಿಷ್ಠಾಪಿಸಲಾಗಿದೆ. ಇಲ್ಲಿಯ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದೆ. ಲಲಾಟದಲ್ಲಿ ಜಿನಬಿಂಬಗಳ ಕಿರುಕೆತ್ತನೆಗಳಿವೆ. ನವರಂಗ ಕಂಬಗಳು ಅಲಂಕೃತವಾಗಿ ಕೆತ್ತಲ್ಪಟ್ಟಿವೆ. ನವರಂಗದಲ್ಲಿ ಪಾರ್ಶ್ವನಾಥ ತೀರ್ಥಂಕರನ ಮುಕ್ಕಾಗಿರುವ ಪದ್ಮಾಸೀನ ಶಿಲ್ಪವಿದೆ. ನವರಂಗಕ್ಕೆ ಹೋಗುವ ದ್ವಾರ ಪಂಚಶಾಖಾಲಂಕೃತವಾಗಿದೆ. ಜಿನ ಬಿಂಬ ಹೊಂದಿದ ಲಲಾಟವಿದೆ.[೯] ನವರಂಗದ ಮೇಲ್ಬಾವಣಿಯ ಮೇಲೆ ಭುವನೇಶ್ವರಿ ಕೆತ್ತಲ್ಪಟ್ಟಿದೆ. ಆರಂಭದಲ್ಲಿ ಜೈನ ದೇವಾಲಯವಾಗಿತ್ತು. ನಂತರ ಶೈವ ಪ್ರಭಾವದಿಂದ ಶೈವ ದೇವಾಲಯವಾಗಿ ಮಾರ್ಪಡಿಸಲ್ಪಟ್ಟಿದೆ. ಚಾಲುಕ್ಯ ಶೈಲಿ ಸ್ತಂಭಗಳನ್ನು ಹೊಂದಿದೆ. ಅದರ ಕೆಳಗೆ ನಂದಿ ಶಿಲ್ಪವಿದೆ. ಸ್ತಂಭಗಳು ವೃತ್ತಾಕಾರ ಮತ್ತು ತರಂಗಬೋದಿಗೆಗಳಿಂದ ಕೂಡಿವೆ. ಎತ್ತರದ ಜಗತಿಯ ಮೇಲೆ ದೇವಾಲಯ ಕಟ್ಟಲ್ಪಟ್ಟಿದೆ. ಹೊರಬಾಗಿಲು ಪಂಚ ಶಾಖಾಲಂಕೃತವಾಗಿದೆ. ಶೈವ ದ್ವಾರಪಾಲಕರು, ದೇವಕನ್ನೆಯರು ಮತ್ತು ಚಾಮರಧಾರಿಗಳಿದ್ದಾರೆ.

ಸ್ಥಳ: ಸುಲೇಪೇಟೆ **ಶೈಲಿ:** ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಈಶ್ವರ ಗುಡಿ

ಸ್ಥಿತಿ: ಶಿಥಿಲ **ಕಾಲ:** ಸು.೧೦ನೇ ಶತಮಾನ

ಎತ್ತರವಾದ ಜಗತಿ ಮೇಲೆ ಕಟ್ಟಲ್ಪಟ್ಟ ಈಶ್ವರ ದೇವಾಲಯದಲ್ಲಿ ಅಧಿಷ್ಠಾನ, ಭಿತ್ತಿ ಮಾತ್ರ ಪ್ರಸ್ತುತ ಉಳಿದಿವೆ. ಗರ್ಭಗೃಹ ಅಂತರಾಳ ಭಾಗ ಮಾತ್ರ ತಿರಸ್ಮುಖದಲ್ಲಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದೆ. ಪಂಚ ಶಾಖಾಲಂಕೃತ ಬಾಗಿಲವಾಡ ಹಂಸಾವಳಿಯ ಅಲಂಕರಣೆಯಿಂದ ಕೂಡಿದೆ.[೭೫]

ಅಂತರಾಳದ ಸ್ತಂಭಗಳಲ್ಲಿ ಒಂದೊಂದು ಮಾಲೆಯೊಳಗೆ ಒಂದೊಂದು ಉಬ್ಬುಶಿಲ್ಪಗಳಿವೆ. ಮಧ್ಯ ಸ್ತಂಭಗಳು ದಶಾಷ್ಟಕೋನ, ವಜ್ರಾಲಂಕರಣೆ, ವೃತ್ತಬೋದಿಗೆ, ಹೂ ಬಳ್ಳಿಗಳ ಅಲಂಕರಣೆಗಳಿಂದ ಕೂಡಿದೆ. ಸ್ತಂಭಗಳು ರಾಷ್ಟ್ರಕೂಟರ ಶೈಲಿಯಲ್ಲಿವೆ. ಬಾಗಿಲವಾಡದ ತಳಭಾಗದಲ್ಲಿ ಚಾಮರಧಾರಿಗಳು, ಭಕ್ತ ಮತ್ತು ಶೈವ ದ್ವಾರಪಾಲಕರ ಶಿಲ್ಪಗಳಿವೆ. ಚತುರ್ಷಾಶಾಖಲಂಕೃತ ಬಾಗಿಲವಾಡವಿದೆ. ಇದರಲ್ಲಿ ಗಂಧರ್ವ ಶಿಲ್ಪ, ಹೂದಳ, ಕುಡ್ಯಸ್ತಂಭ ಹೂಬಳ್ಳಿಗಳ ಶಿಲ್ಪಗಳಿವೆ.

ಶೈವ ದ್ವಾರಪಾಲಕರ ಶಿಲ್ಪ ಬಾಗಿಲವಾಡದ ತಳ ಭಾಗದಲ್ಲಿವೆ. ದೇವಾಲಯವು ಬಿಟ್, ಉಪಾನ, ಅಧಿಷ್ಠಾನದಲ್ಲಿ ಉಪಾನ, ಗಳ, ಕಪೋತ, ಕುಮುದಾಕಾರ ಕಪೋತಗಳನ್ನೊಳಗೊಂಡಿದೆ. ಭಿತ್ತಿಯಲ್ಲಿ ಕುಡ್ಯಸ್ತಂಭಗಳಿವೆ. ಗಳ ಭಾಗದಲ್ಲಿ ಅಲಂಕರಣೆ ಶಿಲ್ಪಗಳಿವೆ. ದೇವಾಲಯದ ಮೇಲ್ಭಾಗದಲ್ಲಿ ಪ್ರಸ್ತರ, ಕಪೋತ ಗಳ ಭಾಗದಲ್ಲಿ ಅಲಂಕರಣೆ ಮತ್ತು ಕಂಠ, ಪಂಜರಗಳನ್ನೊಳಗೊಂಡಿದೆ. ಪ್ರಸ್ತುತ ಶಿಖರ ಹಾಳಾಗಿದೆ. ಕಂಠದ ಕರ್ಣಭಾಗದಲ್ಲಿ ಸಿಂಹಮುಖವಿದೆ.

ಸ್ಥಳ: ಸುಲೇಪೇಟೆ **ಶೈಲಿ:** ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಶಂಕರಲಿಂಗ ಗುಡಿ

ಸ್ಥಿತಿ: ಶಿಥಿಲ **ಕಾಲ:** ಸು.೧೦ನೇ ಶತಮಾನ

ಅಧಿಷ್ಠಾನ ಭಿತ್ತಿಯನ್ನೊಳಗೊಂಡಿದೆ. ದಶಾಷ್ಟಕೋನಾಕೃತಿ ಸ್ತಂಭಗಳಿವೆ. ಸ್ತಂಭ ರಾಷ್ಟ್ರಕೂಟ ಶೈಲಿಯಲ್ಲಿದೆ. ಭಿತ್ತಿಯ ಭಾಗದಲ್ಲಿ ಕುಡ್ಯಸ್ತಂಭಗಳಿವೆ. ಕುಡ್ಯಸ್ತಂಭದ ಬೋದಿಗೆ ಮೇಲೆ ಪ್ರಸ್ತರವಿದೆ. ಮೇಲ್ಭಾವಣಿ ಮತ್ತು ಶಿಖರ ಹಾಳಾಗಿದೆ. ಅಂತರಾಳದಲ್ಲಿ ಬೃಹತ್ ನಂದಿಯ ಮೂರ್ತಿಶಿಲ್ಪವಿದೆ. ಬಾಗಿಲವಾಡದ ಕೆಳಸ್ತರದಲ್ಲಿ ಗಂಗೆ ಯಮುನೆ, ಭಕ್ತ, ಚಾಮರಧಾರಿ ಮತ್ತು ಶೈವ ದ್ವಾರಪಾಲಕರ ಶಿಲ್ಪಗಳಿವೆ.

ಸೋಮಸೂತ್ರ ಲಿಂಗವಿರುವ ಶಂಕರಲಿಂಗ ಗುಡಿ ಗರ್ಭಗೃಹ ಮತ್ತು ಅಂತರಾಳಗಳಷ್ಟೇ ಈಗ ಉಳಿದಿವೆ. ವಿಶಾಲ ಗರ್ಭಗೃಹವಿದೆ. ಷಡ್ ಶಾಖಾಲಂಕೃತ ಬಾಗಿಲವಾಡವಿದೆ. ಮೇಲೆ ಹಂಸಾವಳಿ ಅಲಂಕಾರಗಳಿವೆ. ಇದರ ಮೇಲೆ ಮಾವಿನ ತೋರಣ ಗಮನಾರ್ಹವಾಗಿದೆ. ತೆರೆದ ಅಂತರಾಳ ಮತ್ತು ಇದರ ತೊಲೆ ಮೇಲೆ ಮಕರ ತೋರಣಗಳ ಅಲಂಕರಣೆಯಿಂದ ಕೂಡಿದೆ. ಭಿತ್ತಿ ಭಾಗದಲ್ಲಿ ನವಿಲು, ಮಿಥುನ ಶಿಲ್ಪಗಳ ಕಿರುಕೆತ್ತನೆಗಳಿವೆ.[೭೬]

ಸ್ಥಳ: ರುಮ್ಮನಗೂಡು **ಶೈಲಿ:** ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ರಾಮಲಿಂಗೇಶ್ವರ ಗುಡಿ

ಸ್ಥಿತಿ: ಅವಸಾನ **ಕಾಲ:** ಸು.೧೨ನೇ ಶತಮಾನ

ರಾಮಲಿಂಗೇಶ್ವರ ಗುಡಿಯು ದ್ವಿಕೂಟವಾಗಿದ್ದು, ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಗರ್ಭಗೃಹಗಳಿವೆ. ತೆರೆದ ಅಂತರಾಳ ಮತ್ತು ನವರಂಗವಿದೆ. ಎರಡು ಗರ್ಭಗುಡಿಯಲ್ಲಿ ಶಿವಲಿಂಗಗಳಿವೆ. ಅವುಗಳಲ್ಲಿ ಒಂದು ಚಂದ್ರಶಿಲೆಯದ್ದಾಗಿದೆ. ನವರಂಗದಲ್ಲಿ ವಿಷ್ಣು ಹಾಗೂ ಕಾಳಿಯ ಶಿಲ್ಪಗಳಿವೆ.[೯೭] ಶೈವ ದ್ವಾರಪಾಲಕರ ಶಿಲ್ಪಗಳಿವೆ. ದೇವಾಲಯದ ಎಡಕ್ಕೆ ಪುಷ್ಕರಣಿಯಿದೆ. ಹೊರಭಿತ್ತಿ ಭಾಗದಲ್ಲಿ ಮಾಧವ, ವೈಷ್ಣವ ಶಿಲ್ಪಗಳಿವೆ.

ಸ್ಥಳ: ಕರಕ್‌ಮುಕ್ಲಿ **ಶೈಲಿ:** ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಮಲ್ಲಿಕಾರ್ಜುನ ದೇವಾಲಯ

ಸ್ಥಿತಿ: ಅವಸಾನ **ಕಾಲ:** ಸು.೧೧ನೇ ಶತಮಾನ

ಮಲ್ಲಿಕಾರ್ಜುನ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಿತವಾಗಿದೆ. ಪ್ರಸ್ತುತ ಗರ್ಭಗುಡಿ, ಅಂತರಾಳ, ದ್ವಿಶಾಖಾಲಂಕೃತ ಬಾಗಿಲವಾಡ ಮತ್ತು ನವರಂಗವನ್ನೊಳಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ.[೯೮] ದೇವಾಲಯವು ಅಧಿಷ್ಠಾನ, ಭಿತ್ತಿ ಭಾಗವನ್ನೊಳಗೊಂಡಿದೆ. ದ್ವಿಶಾಖಾಲಂಕೃತ ಬಾಗಿಲವಾಡದಲ್ಲಿ ಶೈವ ದ್ವಾರಪಾಲಕರ ಶಿಲ್ಪವಿದೆ ಮತ್ತು ವಜ್ರಾಲಂಕರಣೆಯಿದೆ. ಲಲಾಟದ ಮೇಲೆ ಗಜಲಕ್ಷ್ಮಿ ಬಿಂಬವಿದೆ. ಕದಂಬ ನಾಗರ ಶೈಲಿಯ ದೇವಾಲಯ ಇದಾಗಿದೆ.

ಸ್ಥಳ: ಹುಲುಸುಗೂಡು **ಶೈಲಿ:** ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಈಶ್ವರ ದೇವಾಲಯ

ಸ್ಥಿತಿ: ಅವಸಾನ **ಕಾಲ:** ಸು.೧೧–೧೨ನೇ ಶತಮಾನ

ಹುಲುಸುಗೂಡಿನ ಈಶ್ವರ ದೇವಾಲಯದಲ್ಲಿ ಗರ್ಭಗುಡಿ ಅಂತರಾಳ ಮಾತ್ರ ಉಳಿದಿವೆ. ದೇವಾಲಯ ಎತ್ತರದ ಜಗತಿಯ ಮೇಲೆ ನಿರ್ಮಾಣವಾಗಿದೆ. ಅಂತರಾಳದಲ್ಲಿ ಅಲಂಕೃತ ಕಂಬಗಳಿವೆ. ಭಿತ್ತಿ ಭಾಗವು ಕುಡ್ಯಸ್ತಂಭಗಳನ್ನೊಳಗೊಂಡಿದೆ. ಗರ್ಭಗುಡಿಯಲ್ಲಿ ಚಿಕ್ಕದಾದ ಶಿವಲಿಂಗವಿದೆ. ದೇವಾಲಯ ಅಧಿಷ್ಠಾನ, ಭಿತ್ತಿ, ಪ್ರಸ್ತರವನ್ನೊಳಗೊಂಡಿದೆ. ಇಲ್ಲಿನ ಗರ್ಭಗುಡಿಯ ಬಾಗಿಲವಾಡ ದ್ವಿಶಾಖಾಲಂಕೃತವಾಗಿದೆ. ಇದರ ಕೆಳಭಾಗದಲ್ಲಿ ಚಾಮರಧಾರಿ ಮತ್ತು ಶೈವ ದ್ವಾರಪಾಲಕರ ಶಿಲ್ಪವಿದೆ. ಹೂಬಳ್ಳಿ ಅಲಂಕೃತ ಬಾಗಿಲವಾಡವಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಬಿಂಬವಿದೆ. ಇದರ ಮೇಲ್ಭಾಗದ ತೊಲೆ ಮೇಲೆ ಕದಂಬ ನಾಗರಶೈಲಿಯ ಶಿಖರದ ಮಾದರಿಯಲ್ಲಿದೆ.

ಸ್ಥಳ: ಸುಲೇಪೇಟೆ **ಶೈಲಿ:** ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ವೀರಭದ್ರೇಶ್ವರ ಗುಡಿ

ಸ್ಥಿತಿ: ಜೀರ್ಣ **ಕಾಲ:** ಸು.೧೧ನೇ ಶತಮಾನ

ವೀರಭದ್ರೇಶ್ವರ ಗುಡಿ ದ್ವಿಕೂಟ ದೇವಾಲಯವಾಗಿದ್ದು ಗರ್ಭಗೃಹದ ಒಂದರಲ್ಲಿ ಶಿವಲಿಂಗ, ಇನ್ನೊಂದರಲ್ಲಿ ವೀರಭದ್ರೇಶ್ವರ ಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ ಬಿಂಬವಿದೆ. ನವರಂಗ

ದೇವಕೋಷ್ಠಗಳಲ್ಲಿ ಸರಸ್ವತಿ, ಮಹಿಷಮರ್ದಿನಿ ಶಿಲ್ಪಗಳಿವೆ.[೯೯] ಇಲ್ಲಿಯ ಕಂಬಗಳು ಅಲಂಕೃತ ಮತ್ತೆ ಕೆಲವು ನಿರಾಡಂಬರವಾಗಿವೆ. ಒಳಭಿತ್ತಿಯಲ್ಲಿ ಅರ್ಧ ಸ್ತಂಭ(ಕುಡ್ಯ ಸ್ತಂಭ)ಗಳು ಅಲಂಕೃತ ಶಿಲ್ಪಗಳಿಂದ ಕೂಡಿವೆ.

ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ, ಸ್ತೂಪಿ, ಒಳಭಾಗ ಗರ್ಭಗೃಹ, ಅಂತರಾಳ, ನವರಂಗವನ್ನೊಳಗೊಂಡಿದೆ. ವಿಶಾಲ ಪ್ರಾಂಗಣದಲ್ಲಿ ನಿರ್ಮಿಸಲ್ಪಟ್ಟಿದೆ. ನಕ್ಷತ್ರ ಭಿತ್ತಿಯಿಂದ ಕೂಡಿದ ದ್ರಾವಿಡ ಶೈಲಿಯ ದೇವಾಲಯವಾಗಿದೆ. ದುಂಡನೆಯ ಶಿಖರ ಮತ್ತು ಸ್ತೂಪಿ ಇದೆ. ವೃತ್ತಾಕಾರದಲ್ಲಿ ದೇವಾಲಯ ನಿರ್ಮಾಣಗೊಂಡಿದೆ. ಶಿಖರ, ಕಪೋತ, ಪ್ರಸ್ತರಗಳಲ್ಲಿ ಜಾಲಾಂಧ್ರಗಳಿವೆ.

ಸ್ಥಳ: ಮಿರ್‍ಯಾಣ **ಶೈಲಿ:** ?
ಶಿಲೆ: ಕಪ್ಪುಶಿಲೆ **ದೇವಾಲಯ:** ಪಾಪನಾಥ ದೇವಾಲಯ
ಸ್ಥಿತಿ: ಜೀರ್ಣ **ಕಾಲ:** ಸು.೧೧ನೇ ಶತಮಾನ

ದೇವಾಲಯವು ಪೂರ್ವಾಭಿಮುಖವಾಗಿದೆ. ಪಾಪನಾಥ ದೇವಾಲಯದಲ್ಲಿ ಗರ್ಭಗುಡಿ, ಅಂತರಾಳ, ತ್ರಿದಳ ತರಂಗ ಬೋದಿಗೆಯ ನವರಂಗದ ಸ್ತಂಭಗಳು ಇವೆ. ಕೀರ್ತಿಮುಖ, ನೃತ್ಯ ಮಾಡುತ್ತಿರುವ ಶಿಲ್ಪಗಳು, ಪಂಜರಗಳು, ಹೂಬಳ್ಳಿಗಳಿಂದ ಅಲಂಕೃತವಾಗಿವೆ. ಊರ್ಧ್ವಮುಖವು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಕಂಠ ಮತ್ತು ಶಿಖರವನ್ನೊಳಗೊಂಡಿದೆ. ದೇವಾಲಯ ಪ್ರಾಂಗಣದಲ್ಲಿ ನಾಗ ಶಿಲ್ಪಗಳು, ಕುಂಭ ಕಲಶವಿದೆ. ಚತುರ್ ಶಾಖಾಲಂಕೃತ ಬಾಗಿಲವಾಡವಿದೆ. ದೇವಕೋಷ್ಠಕಗಳಲ್ಲಿ ಸೂರ್ಯ, ಗಣಪತಿ ಮತ್ತು ಮಹಿಷ ಮರ್ದಿನಿಯ ಶಿಲ್ಪಗಳಿವೆ. ಪಂಚ ಶಾಖಾಲಂಕೃತ ಬಾಗಿಲವಾಡವಿದೆ.[೧೦೦]

ಸ್ಥಳ: ಮಿರ್‍ಯಾಣ **ಶೈಲಿ:** ಕದಂಬ ನಾಗರ
ಶಿಲೆ: ಕಪ್ಪುಶಿಲೆ **ದೇವಾಲಯ:** ಈಶ್ವರ ದೇವಾಲಯ
ಸ್ಥಿತಿ: ಅವಸಾನ **ಕಾಲ:** ಸು.೧೧ನೇ ಶತಮಾನ

ದೇವಾಲಯವು ಉತ್ತರಾಭಿಮುಖವಾಗಿದೆ. ಈಶ್ವರ ದೇವಾಲಯ ಪಂಚಶಾಖೆಯ ಬಾಗಿಲ ವಾಡವನ್ನೊಳಗೊಂಡಿದೆ.[೧೦೧] ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಅಂತರಾಳದ ಭಾಗದ ಭಿತ್ತಿಯಲ್ಲಿ ಕುಡ್ಯ ಸ್ತಂಭಗಳಿವೆ. ಅಂತರಾಳದ ಕಂಬಗಳು ಅಲಂಕೃತವಾಗಿದ್ದು ಮುತ್ತಿನ ಮಾಲೆಯಂತೆ ಕೆತ್ತಿದ್ದು ಅದರೊಳಗೆ ಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ತೆರೆದ ಅಂತರಾಳದ ತೊಲೆಯ ಮೇಲೆ ಮಕರ ತೋರಣವಿದೆ. ಕಮಲಗಳನ್ನು ಇಳಿಬಿಟ್ಟಂತಿದೆ. ಗಿರಿಜಾ ಕಲ್ಯಾಣದ ಶಿಲ್ಪಗಳು ಈ ತೋರಣದಲ್ಲಿವೆ. ಕೆಳ ತೋರಣ ಮಕರ ಮತ್ತು ಅದರ ನಾಲಿಗೆ ಮೇಲೆ ಎಡಭಾಗಕ್ಕೆ ವಾದ್ಯಗಾರರು, ಗಿರಿಜಾ ಕಲ್ಯಾಣ, ನಟರಾಜ, ಭೃಂಗಿ, ಅಂಧಕಾಸುರ ವಧಿಸುವ ಶಿಲ್ಪವಿದೆ. ಇದರ ಮೇಲಿನ ಪಟ್ಟಿಕೆಯಲ್ಲಿ ಗಣಗಳ ಸಾಲುಗಳಿವೆ. ಬಾಗಿಲವಾಡ ಪಂಚ ಶಾಖಾವಿದ್ದು ಅದರ ಮಧ್ಯಭಾಗದಲ್ಲಿ ಸ್ತಂಭಗಳಿವೆ.

ಸ್ಥಳ: ಮಿರ್ಜಾಣ   ಶೈಲಿ: ಕದಂಬ ನಾಗರ
ಶಿಲೆ: ಕಪ್ಪುಶಿಲೆ   ದೇವಾಲಯ: ತ್ರಿಕೂಟೇಶ್ವರ (ಮೂರು ದೇವರ ಗುಡಿ)
ಸ್ಥಿತಿ: ಅವಸಾನ   ಕಾಲ: ಸು.೧೦ನೇ ಶತಮಾನ

ದೇವಾಲಯವು ಉತ್ತರ ಮತ್ತು ದಕ್ಷಿಣಾಭಿಮುಖವಾಗಿದೆ. ಕದಂಬ ನಾಗರಶೈಲಿಯ ಶಿಖರ ಹೊಂದಿದ ತ್ರಿಕೂಟ ದೇವಾಲಯ ಶಿಖರವನ್ನೊಳಗೊಂಡಿದೆ. ಇವು ಮಂಟಪ ಶೈಲಿಯ ದೇವಾಲಯಗಳಾಗಿದ್ದು, ಮಧ್ಯದ ಗುಡಿ ಇಳಿಜಾರು ಛಾವಣಿಯಿಂದ ಕೂಡಿದೆ. ದೇವಾಲಯವು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗಳ, ಗ್ರೀವ ಮತ್ತು ಶಿಖರವನ್ನೊಳಗೊಂಡಿರುವುದು ವಿಶೇಷ ಲಕ್ಷಣಗಳಾಗಿವೆ.

ಮೂರು ಗರ್ಭಗುಡಿ ಪ್ರತ್ಯೇಕವಾಗಿ ಕಟ್ಟಲ್ಪಟ್ಟಿವೆ. ಎರಡು ಗರ್ಭಗುಡಿಗಳು ಪಶ್ಚಿಮಾಭಿಮುಖ ಮತ್ತೊಂದು ಪೂರ್ವಾಭಿಮುಖವಾಗಿದೆ ಎಂದು ಗೆಜೆಟಿಯರ್‌ನಲ್ಲಿದೆ.[೧೦೨] ಆದರೆ ಒಂದು ದಕ್ಷಿಣಾಭಿಮುಖ ಮತ್ತು ಉಳಿದೆರಡು ಉತ್ತರಾಭಿಮುಖವಾಗಿವೆ. ಒಂದು ಗರ್ಭಗುಡಿಯ ಎದುರುಗಡೆ ನಂದಿ ಶಿಲ್ಪವಿದೆ. ಅದರ ಬಾಗಿಲವಾಡಕ್ಕೆ ಗಂಗೆ ಮತ್ತು ಯಮುನೆಯರ ಎತ್ತರವಾದ ಶಿಲ್ಪಗಳಿವೆ. ತ್ರಿಶಾಖೆಯ ಬಾಗಿಲವಾಡವಿದೆ. ಬಾಗಿಲ ಇಕ್ಕೆಲಗಳಲ್ಲಿ ತ್ರುಟಿತ ಎರಡು ವೀರಗಲ್ಲುಗಳಿದ್ದು, ಬ್ರಹ್ಮಸೂತ್ರ ಲಿಂಗವಿದೆ. ಇದು ಅಧಿಷ್ಠಾನ, ಭಿತ್ತಿ, ವೇದಿ, ಘಂಟಾ, ಗಳ, ಶಿಖರವನ್ನೊಳಗೊಂಡಿದೆ. ಮೇಲ್ಗಡೆಯ ಕಪೋತದಲ್ಲಿ ಹಂಸಗಳ ಸಾಲಿದೆ.[೧೦೩] ಈ ದೇವಾಲಯದ ಪಕ್ಕಕ್ಕೆ ಇನ್ನೆರಡು ಗರ್ಭಗುಡಿಗಳಿವೆ.

ಗರ್ಭಗುಡಿ ಉತ್ತರಾಭಿಮುಖವಾಗಿದ್ದು, ನವರಂಗ, ಅಂತರಾಳ ಮತ್ತು ಗರ್ಭಗುಡಿಯನ್ನೊಳಗೊಂಡಿದೆ. ಅಂತರಾಳದ ಕಂಬಗಳ ಮೇಲೆ ಮಕರತೋರಣವಿದೆ. ದಕ್ಷಿಣಾಭಿಮುಖ ದ್ವಾರ ಹೊಂದಿರುವ ಮತ್ತೊಂದು ಗರ್ಭಗುಡಿ ಬಾಗಿಲ ಬಳಿ ನಾಗದೇವತೆ ಶಿಲ್ಪವಿದೆ. ಎದುರುಗಡೆ ತ್ರುಟಿತ ನಂದಿ ಶಿಲ್ಪಗಳಿವೆ. ಇದು ಕದಂಬ ನಾಗರ ಶೈಲಿಯಲ್ಲಿದೆ.

೪.೪.೨. ವೈಷ್ಣವ ದೇವಾಲಯಗಳು

ಸ್ಥಳ: ಬಿದನೂರು   ಶೈಲಿ: ರಾಷ್ಟ್ರಕೂಟ
ಶಿಲೆ: ಕಪ್ಪು ಕಲ್ಲು   ದೇವಾಲಯ: ಹನುಮಾನ್ ಗುಡಿ
ಸ್ಥಿತಿ: ಕನಿಷ್ಠ   ಕಾಲ: ಸು.೯ನೆಯ ಶತಮಾನ

ಗರ್ಭಗುಡಿಯ ಮುಂಭಾಗದ ಬಲಕ್ಕೆ ಗಣೇಶನ ಶಿಲ್ಪ, ಎಡಕ್ಕೆ ಹನುಮಾನ ಶಿಲ್ಪ, ತ್ರುಟಿತ ನಂದಿಶಿಲ್ಪ ಮತ್ತು ಚತುರ್ಮುಖ ಬ್ರಹ್ಮನ ಶಿಲ್ಪವಿದೆ. ಗರ್ಭಗುಡಿಯ ಬಾಗಿಲವಾಡ ಕುಡ್ಯ ಸ್ತಂಭಗಳು, ಜಾಲಂದ್ರಗಳಲ್ಲಿ ಹೂ, ಬಳ್ಳಿಯ ಕೆತ್ತನೆಯಿದೆ. ಲಲಾಟದ ಮೇಲೆ ಗಣೇಶನ ಕೆತ್ತನೆ ಮತ್ತು ಅದರ ಮೇಲೆ ಕಪೋತವಿದೆ. ಗರ್ಭಗುಡಿಯಲ್ಲಿ ಹನುಮಂತನ ಶಿಲ್ಪವಿದೆ. ಗುಡಿಯ ಎದುರಿಗೆ ನಂದಿ ಶಿಲ್ಪವಿದೆ. ಆಧುನಿಕ ಶಿಖರವಿದ್ದು ಇದನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ಪ್ರಾಂಗಣದಲ್ಲಿ

ಚತುರ್ಮುಖ ಬ್ರಹ್ಮನ ಶಿಲ್ಪವು ಕಿರೀಟ, ಕರ್ಣಕುಂಡಲ, ಕೊರಳಿನಾಭರಣ ಧರಿಸಿದೆ. ಗಣೇಶನ ಶಿಲ್ಪವು ಚತುರ್ಬಾಹುವಿನದ್ದಾಗಿದೆ. ಪಾಶಾಂಕುಶ, ದಂತ ಮತ್ತು ಮೋದಕ ಹಸ್ತವಾಗಿದೆ. ಕಿರೀಟ, ಕಾಲ್ಗಡಗ ಧರಿಸಿದ ಸಾದಾ ಕೆತ್ತನೆಯಿದೆ.

ಸ್ಥಳ: ಇಟಗಾ(ಕೆ) **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಹನುಮಾನ್ ಗುಡಿ

ಸ್ಥಿತಿ: ಕನಿಷ್ಠ, **ಕಾಲ:** ಸು.೧೨ನೆಯ ಶತಮಾನ

ಎತ್ತರದ ಜಗತಿಯ ಮೇಲಿರುವ ದೇವಾಲಯದ ಪ್ರಾಂಗಣದಲ್ಲಿ ನಂದಿ ಶಿಲ್ಪವಿದೆ. ಹೊರ ಗೋಡೆಯ ಭಿತ್ತಿ ಭಾಗದಲ್ಲಿ ಗಣಪತಿ, ನಾಗಶಿಲ್ಪಗಳಿವೆ. ಹೊರಗಿನ ಅಧಿಷ್ಠಾನದ ಭಾಗದಲ್ಲಿ ಗಜಪಟ್ಟಿಕೆ ಮತ್ತು ಚತುರ್ದಳ ಹೂವಿನ ಪಟ್ಟಿಕೆ ಕೆಲ ಭಾಗದಲ್ಲಿವೆ. ಹೊರ ಗೋಡೆಯ ಭಾಗದಲ್ಲಿ ಶಿವನು ತನ್ನ ತೋಡೆಯ ಮೇಲೆ ಪಾರ್ವತಿಯನ್ನು ಕೂಡಿಸಿಕೊಂಡಿರುವ ತ್ರುಟಿತ ಶಿಲ್ಪವಿದೆ. ನವರಂಗದ ಕಂಬಗಳು ಬೇರೆ ಬೇರೆ ಶೈಲಿಯಲ್ಲಿ ವೈವಿಧ್ಯಮಯವಾಗಿ ಕೆತ್ತಲಾಗಿದೆ. ಬೋದಿಗೆ, ಚೌಕ, ಅಷ್ಟಕೋನಾಕಾರ, ಆಯತಾಕಾರದಲ್ಲಿ ಪ್ರವೇಶದ್ವಾರದ ಆರಂಭದ ಕಂಬಗಳನ್ನು ಕೆತ್ತಲಾಗಿದೆ. ಮುಂದಿನ ಕಂಬಗಳು ಎಡಕ್ಕಿರುವ ಬೋದಿಗೆ, ಚಪ್ಪಟೆಯಾದ ಚೌಕ, ಗಳ ಭಾಗ, ಚಿಕ್ಕ ಅಷ್ಟಕೋನಾಕೃತಿಯ ಹೂವಿನಂತೆ, ಚೌಕ, ಗಳ ಭಾಗವು ಅಷ್ಟಕೋನದಲ್ಲಿದೆ. ಕೆಳಭಾಗ ಕಂಬವು ಆಯತಾಕಾರದಲ್ಲಿದೆ. ಬಲಕ್ಕಿರುವ ಕಂಬದ ಬೋದಿಗೆ, ಗಳ ಭಾಗದಲ್ಲಿ ದುಂಡಗೆ ಮತ್ತು ಚೌಕ ಮತ್ತು ಎಲೆಯಾಕಾರದ ಕೆತ್ತನೆಗಳಿಂದ ಕೂಡಿದೆ. ಚೌಕ ಅದರ ಕೆಳಗೆ ಅಷ್ಟ ಕೋನಾಕೃತಿಯ ಹೂವಿನ ದಳದಂತೆ ಕೆತ್ತಲಾಗಿದೆ. ದುಂಡಗೆ ಕಂಬ ಕೆತ್ತಲಾಗಿದ್ದು ಅದರ ಮಧ್ಯೆ ಅಷ್ಟ ಕೋನಾಕೃತಿಯ ಹೂವಿನ ದಳವಿದೆ. ಅಷ್ಟ ಕೋನಾಕೃತಿ ಮತ್ತು ಚೌಕದ ಕಂಬದ ಕೆತ್ತನೆಯಿದೆ. ತ್ರಿಶಾಖ ಬಾಗಿಲವಾಡ ಅದರ ಲಲಾಟದ ಮೇಲೆ ಗಜಲಕ್ಷ್ಮಿ ಶಿಲ್ಪವಿದೆ. ಬಾಗಿಲವಾಡದ ಕೆಳ ಭಾಗದಲ್ಲಿ ಚತುರ್ದಳ ಹೂವಿನ ಕೆತ್ತನೆಯಿದೆ. ಗರ್ಭಗುಡಿಯಲ್ಲಿ ಹನುಮಾನ್ ಶಿಲ್ಪವಿದೆ.

ಸ್ಥಳ: ಕಡಣಿ **ಶೈಲಿ:** ಇಂಡೋ ಸಾರ್ಸೇನಿಕ್

ಶಿಲೆ: ಕಪ್ಪುಕಲ್ಲು **ದೇವಾಲಯ:** ಹನುಮಾನ್ ಗುಡಿ

ಸ್ಥಿತಿ: ಕನಿಷ್ಠ **ಕಾಲ:** ಸು.೧೭ನೆಯ ಶತಮಾನ

ಹನುಮಾನ್ ಮಂದಿರದ ಪ್ರವೇಶದ್ವಾರದ ಹೊರಗೋಡೆಯು ಕಮಾನುಗಳಿಂದ ಕೂಡಿದೆ. ಗುಡಿಯಲ್ಲಿ ಅಂತರಾಳ ಮತ್ತು ಗರ್ಭಗುಡಿಯಿದೆ. ಭಿತ್ತಿ ಭಾಗದಲ್ಲಿ ನಾಗಶಿಲ್ಪಗಳ ಕೆತ್ತನೆಯಿದೆ. ಅದರ ಪಕ್ಕದಲ್ಲಿ ಪದ್ಮಾಸನದಲ್ಲಿ ಕುಳಿತ ಚಿಕ್ಕ ಸ್ತ್ರೀ ಶಿಲ್ಪ, ವರದ ಮತ್ತು ಅಭಯಹಸ್ತದಲ್ಲಿದೆ. ಕೊರಳಿಗೆ ಮಂಗಳಸೂತ್ರದಂತೆ ಕಾಣುವ ಆಭರಣವಿದೆ. ಬಾಗಿಲವಾಡಕ್ಕೆ ಹಿತ್ತಾಳೆಯನ್ನು ಪ್ರಸ್ತುತ ಕೂಡಿಸಲಾಗಿದೆ. ಗರ್ಭಗುಡಿಯಲ್ಲಿ ಹನುಮಾನ್ ಶಿಲ್ಪವಿದೆ. ಪ್ರದಕ್ಷಿಣಾಪಥವಿದೆ. ಇದರ ಎದುರಿಗೆ

ವೀರಗಲ್ಲು, ಚತುರ್ಮುಖ ಶಿಲ್ಪ, ನಾಗಶಿಲ್ಪ, ಗಣೇಶನ ಶಿಲ್ಪ, ಸ್ಥಾನಿಕ ತ್ರುಟಿತ ಸೂರ್ಯ? ಶಿಲ್ಪಗಳಿವೆ. ಎದುರಿಗೆ ದೀಪಸ್ತಂಭವಿದೆ.

ಸ್ಥಳ: ಕೇರಿ ಅಂಬಲಗಾ　　**ಶೈಲಿ:** ಚಾಲುಕ್ಯ

ಶಿಲೆ: ಕಪ್ಪುಕಲ್ಲು　　**ದೇವಾಲಯ:** ಹನುಮಾನ್ ಗುಡಿ

ಸ್ಥಿತಿ: ಕನಿಷ್ಠ　　**ಕಾಲ:** ಸು.೧೨ನೆಯ ಶತಮಾನ

ಒರಟಾದ ಕಪ್ಪುಶಿಲೆಯಲ್ಲಿರುವ ಚೌಕಾಕಾರದ ಲಿಂಗ ಪೀಠದಲ್ಲಿ ಶಿವಲಿಂಗವಿದೆ. ಹನುಮಾನ್ ಮಂದಿರದ ಪ್ರಾಂಗಣದಲ್ಲಿದೆ. ಹನುಮಾನ್ ಗುಡಿಯ ಗರ್ಭಗುಡಿ ಮಾತ್ರ ಉಳಿದಿದ್ದು, ಬಾಗಿಲವಾಡ ಸಾದಾ ಇದೆ. ಗಣಪತಿಯ ಶಿಲ್ಪ ಲಲಾಟದಲ್ಲಿ ಕೆತ್ತಲಾಗಿದೆ. ಪ್ರಾಂಗಣದಲ್ಲಿ ಪ್ರದ್ಯುಮ್ನ, ವಾಸುದೇವ ಮತ್ತು ಗಣಪತಿ ಶಿಲ್ಪಗಳಿವೆ. ಪ್ರಾಂಗಣದ ಕೆಳಭಾಗದಲ್ಲಿ ಶಿವಲಿಂಗ, ನಂದಿ, ನಾಗಶಿಲ್ಪಗಳಿವೆ. ಭುವನೇಶ್ವರಿ ಚೌಕಗಳಿಂದ ಕೂಡಿದೆ. ಗರ್ಭಗುಡಿಯ ಶಿಖರ ಫೇಡಾದೀ ಶೈಲಿ(ಕದಂಬ ನಾಗರ ಶೈಲಿ)ಯಲ್ಲಿದೆ.

ಸ್ಥಳ: ನಿಡಗುಂದ　　**ಶೈಲಿ:** ರಾಷ್ಟ್ರಕೂಟ

ಶಿಲೆ: ಕಪ್ಪುಕಲು　　**ದೇವಾಲಯ:** ನವಕೋಟಿ ನಾರಾಯಣನ ಗುಡಿ

ಸ್ಥಿತಿ: ಜೀರ್ಣಾವಸ್ಥೆ　　**ಕಾಲ:** ಸು.೧೦ನೇ ಶತಮಾನ

ನವಕೋಟಿ ನಾರಾಯಣ ದೇವಾಲಯದ ಮುಖ್ಯ ದ್ವಾರದ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಎಡಭಾಗಕ್ಕೆ ಪಾರ್ಶ್ವನಾಥ, ಲಕ್ಷ್ಮಿನರಸಿಂಹ, ಸೂರ್ಯನ ಮೂರ್ತಿಶಿಲ್ಪಗಳಿವೆ. ಹೊರ ಪ್ರವೇಶ ದ್ವಾರದ ಗೋಡೆಗಳ ಭಿತ್ತಿ ಭಾಗದಲ್ಲಿ ಕುಡ್ಯಸ್ತಂಭಗಳಿವೆ. ನಂತರ ಪ್ರವೇಶದ ಒಳಭಾಗದ ಪ್ರಾಂಗಣದ ಬಲಕ್ಕೆ ನವಕೋಟಿ ನಾರಾಯಣನ ಗುಡಿ ಇದೆ. ಹಿಂದೆ ಇದು ಸೂರ್ಯ ದೇವಾಲಯವಾಗಿತ್ತು.[೧೦೪] ಇದು ದ್ವಿಕೂಟ ದೇವಾಲಯವಾಗಿದೆ. ದೇವಾಲಯವು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ ಮತ್ತು ಸ್ತೂಪಿ ಭಾಗಗಳನ್ನು ಒಳಗೊಂಡಿದ್ದು, ದ್ರಾವಿಡ ವಿಮಾನ ಮಾದರಿ ಶೈಲಿಯಲ್ಲಿ ಕೆತ್ತಲ್ಪಟ್ಟಿದೆ. ಇದೊಂದು ಷಡ್ವರ್ಗ ದೇವಾಲಯವಾಗಿದೆ.

ಅಧಿಷ್ಠಾನವು ಉಪಾನ, ಜಗತಿಯಿಂದ ಕೂಡಿದೆ. ಭಿತ್ತಿ ಭಾಗವು ಕುಡ್ಯಸ್ತಂಭ ಮತ್ತು ಅದರ ಮೇಲೆ ವೃತ್ತಾಕಾರ ಬೋದಿಗೆಗಳನ್ನೊಳಗೊಂಡಿದೆ. ಪ್ರಸ್ತರವು ಉತ್ತರ ವಾಜನ ಮತ್ತು ವಲ್ಲಭವನ್ನೊಳಗೊಂಡಿದೆ. ಗ್ರೀವ ಅಥವಾ ಕಂಠ ಭಾಗದ ಮೇಲೆ ಆಮಲಕ ಮಾದರಿಯ ಶಿಖರವಿದೆ. ಇದು ಮುಚ್ಚಿದ ಬೋಗಣಿಯಾಕಾರದಲ್ಲಿದ್ದು ಅದರ ಮೇಲೆ ಸ್ತೂಪವಿದೆ. ದೇವಾಲಯದ ಮುಖ್ಯ ದ್ವಾರದ ಎದುರುಗಡೆ ಹಾಳಾದ ದೇಗುಲವಿದೆ. ಇದು ಎಂಟು ಸ್ತಂಭಗಳ ಮೇಲೆ ಸೂಕ್ಷ್ಮ ಶಿಲ್ಪಗಳ ಕೆತ್ತನೆಯಿವೆ.

ವೀರಭದ್ರೇಶ್ವರ ಗುಡಿಯ ಪಕ್ಕದಲ್ಲಿರುವ ಈ ದೇವಾಲಯ ಮುಖ ಮಂಟಪ, ನವರಂಗ, ಅಂತರಾಳ (ಅರ್ಧಮಂಟಪ) ಮತ್ತು ಗರ್ಭಗುಡಿಯನ್ನೊಳಗೊಂಡಿದೆ. ಈ ಗರ್ಭಗುಡಿಯ ಎದುರಿಗೆ ಇನ್ನೊಂದು ಗರ್ಭಗುಡಿ ಇದೆ. ಮುಖಮಂಟಪ ಕಂಬಗಳು ಸರಳವಾಗಿವೆ. ನವರಂಗಕ್ಕೆ

ಹೋಗುವ ಪ್ರವೇಶ ದ್ವಾರದ ಬಾಗಿಲವಾಡ ಪಂಚ ಶಾಖಾಲಂಕೃತವಾಗಿದೆ. ಲಲಾಟ ಗಜಲಕ್ಷ್ಮಿಯಿಂದ ಕೂಡಿದೆ. ನವರಂಗದಲ್ಲಿ ಎರಡು ದೇವಕೋಷ್ಠಕಗಳಿದ್ದು ಶಿವಲಿಂಗ ಮತ್ತು ಭೈರವರ ಶಿಲ್ಪಗಳಿವೆ.[೧೦೫] ನವರಂಗದ ಮೊದಲ ಕಂಬದ ಮೇಲೆ ಅಕಾಲವರ್ಷನ ಕ್ರಿ.ಶ. ೯೩೯ರ ಅಪೂರ್ಣ ಶಾಸನವಿದೆ. ಅಂತರಾಳದ (ಅರ್ಧಮಂಟಪ) ಎರಡು ಸ್ತಂಭಗಳ ಮೇಲೆ ಮಕರ ತೋರಣವಿದೆ. ಈ ಸ್ತಂಭಗಳು ರಾಷ್ಟ್ರಕೂಟರ ಶೈಲಿಯದ್ದಾಗಿದೆ. ಗರ್ಭಗುಡಿಯ ಬಾಗಿಲವಾಡ ಚತುರ್ ಶಾಖಾಲಂಕೃತವಾಗಿದೆ. ಇದು ಜೋಡಿ ಹಂಸಾವಳಿ ಪಟ್ಟಿಕೆಯನ್ನೊಳಗೊಂಡಿದೆ.[೧೦೬] ಅಲ್ಲದೆ, ಹೂಬಳ್ಳಿಯಿಂದ ಅಲಂಕೃತವಾಗಿದೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಬಾಗಿಲವಾಡದ ತಳದಲ್ಲಿ ವೈಷ್ಣವ ದ್ವಾರಪಾಲಕರು (ಜಯ, ವಿಜಯ) ಮೂರ್ತಿಶಿಲ್ಪಗಳಿವೆ. ಗರ್ಭಗುಡಿಯೊಳಗೆ ನಾರಾಯಣನ ಮೂರ್ತಿ ಇದೆ. ಇನ್ನೊಂದು ಗರ್ಭಗುಡಿಯಲ್ಲಿ ಶಿವಲಿಂಗವಿದೆ.

ನವರಂಗದಲ್ಲಿ ಸೂರ್ಯನ ಮೂರ್ತಿಶಿಲ್ಪ ಮತ್ತು ಮುಖಮಂಟಪದಲ್ಲಿ ಪ್ರಸ್ತುತ ಹಾಳಾಗಿರುವ ನಂದಿ ಶಿಲ್ಪವಿದೆ. ಕಲ್ಲು, ಗಾರೆಗಳಿಂದ ದೇವಾಲಯ ನಿರ್ಮಾಣವಾಗಿದೆ. ಶಿಖರವು ಕಲ್ಲಿನಿಂದ ರಚಿತವಾಗಿದೆ. ಮುಖಮಂಟಪದ ದೇವಕೋಷ್ಠಕದಲ್ಲಿ ವಿಷ್ಣುವಿನ ಶಿಲ್ಪವಿದೆ.

ಸ್ಥಳ: ರಾಣಾಪುರ — **ಶೈಲಿ:** ಇಂಡೋ ಸಾರ್ಸೇನಿಕ್

ಶಿಲೆ: ಕಪ್ಪುಕಲು — **ದೇವಾಲಯ:** ವೆಂಕಟೇಶ್ವರ ದೇವಾಲಯ

ಸ್ಥಿತಿ: ಜೀರ್ಣ — **ಕಾಲ:** ಸು.೧೮–೧೯ನೇ ಶತಮಾನ

ವೆಂಕಟೇಶ್ವರ ಮೂರ್ತಿ ಗರ್ಭಗುಡಿಯಲ್ಲಿದೆ. ದೇವಾಲಯ ದ್ರಾವಿಡ ಮಾದರಿ ಶಿಖರ ಹೊಂದಿದೆ. ಮುಖಮಂಟಪ, ನವರಂಗ, ಕಂಬಗಳು ಮತ್ತು ಕಮಾನುಗಳನ್ನೊಳಗೊಂಡಿದೆ.

ಸ್ಥಳ: ಚಿಂಚೋಳಿ — **ಶೈಲಿ:** ಇಂಡೋ ಸಾರ್ಸೇನಿಕ್

ಶಿಲೆ: ಕಪ್ಪುಕಲು — **ದೇವಾಲಯ:** ವೆಂಕಟೇಶ್ವರ ದೇವಾಲಯ

ಸ್ಥಿತಿ: ಉತ್ತಮ — **ಕಾಲ:** ಸು.೧೮–೧೯ನೇ ಶತಮಾನ

ದೇವಾಲಯವು ದಕ್ಷಿಣಾಭಿಮುಖವಾಗಿದೆ. ಲಕ್ಷ್ಮೀಬಾಯಿ ವಾಡೆಯ (ರಾಣಿ ಮಹಲ್) ಪಕ್ಕದಲ್ಲಿ ವೆಂಕಟೇಶ್ವರ ದೇವಾಲಯವಿದೆ.[೧೦೭] ಗರ್ಭಗೃಹ, ಅಂತರಾಳ ಹಾಗೂ ನವರಂಗ ಒಳಗೊಂಡಿದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಜಾಲಂದ್ರ, ಕಂಠ, ಶಿಖರವನ್ನೊಳಗೊಂಡಿದೆ. ಅಧಿಷ್ಠಾನ ವಿವಿಧ ಶಿಲ್ಪಗಳಿಂದ ಹೂವುಗಳಿಂದ ಅಲಂಕೃತವಾಗಿದೆ. ಭಿತ್ತಿಯಲ್ಲಿ ಯಾವುದೇ ಅಲಂಕರಣೆಗೆ ಪ್ರಾಧಾನ್ಯತೆ ನೀಡಿಲ್ಲ. ವೆಂಕಟೇಶ್ವರನ ಮೂರ್ತಿ ಗರ್ಭಗೃಹದಲ್ಲಿದ್ದು, ಇಕ್ಕೆಲಲ್ಲಿ ಪದ್ಮಾವತಿ ಮತ್ತು ಲಕ್ಷ್ಮಿಯರ ಶಿಲ್ಪಗಳಿವೆ. ಗರ್ಭಗುಡಿ ಪೂರ್ವಾಭಿಮುಖವಾಗಿದೆ. ಗರ್ಭಗುಡಿ ಎದುರು ಮೂರು ಚಿಕ್ಕ ಮಂಟಪಗಳನ್ನೊಳಗೊಂಡಿದೆ. ಅದರೊಳಗೆ ಲಿಂಗಗಳಿವೆ. ಗರ್ಭಗುಡಿ ಎದುರಿನ ಪ್ರಾಂಗಣದಲ್ಲಿ ದೀಪಮಾಲಾ ಸ್ತಂಭ ಮತ್ತು ಗರುಡ ಸ್ತಂಭಗಳಿವೆ.

ಸ್ಥಳ: ಕೇಶಾವರ್(ಗಡಿ) ಶೈಲಿ: ?

ಶಿಲೆ: ಕಪ್ಪುಕಲು ದೇವಾಲಯ: ಕೇಶವ ನಾರಾಯಣನ ಗುಡಿ

ಸ್ಥಿತಿ: ಅವಸಾನ ಕಾಲ: ಸು.೧೧ನೇ ಶತಮಾನ

ಕೇಶವ ನಾರಾಯಣ ಗುಡಿಯ ಗರ್ಭಗೃಹವು ನವರಂಗದಲ್ಲಿಯೇ ಇದೆ. ಇದು ಅಂತರಾಳ ಮತ್ತು ಮುಖಮಂಟಪದಿಂದ ಕೂಡಿದೆ. ಎತ್ತರದ ಜಗತಿಯ ಮೇಲೆ ಕಟ್ಟಲ್ಪಟ್ಟ ಈ ದೇವಾಲಯ ಬಿಟ್, ಉಪಾನವನ್ನು ಹೊಂದಿದ ಅಧಿಷ್ಠಾನವನ್ನು ಒಳಗೊಂಡಿದೆ. ಕಕ್ಷಾಸನಗಳಿವೆ. ಭಿತ್ತಿ, ಪ್ರಸ್ತಾರವನ್ನೊಳಗೊಂಡಿದೆ ಮತ್ತು ಪ್ರಸ್ತುತ ಶಿಖರ ಹಾಳಾಗಿದೆ. ಗರ್ಭಗೃಹದಲ್ಲಿ ಕೇಶವನ ಮೂರ್ತಿಗಳಿವೆ.

ಸ್ಥಳ: ಮಾಲಗತ್ತಿ ಶೈಲಿ: ಆಧುನಿಕ

ಶಿಲೆ: ಕಪ್ಪುಕಲ್ಲು. ದೇವಾಲಯ: ಹನುಮಾನ್ ಗುಡಿ

ಸ್ಥಿತಿ: ತ್ರುಟಿತ ಕಾಲ: ಸು.೧೦ನೆಯ ಶತಮಾನ

ಅಗಸಿಯ ಸಮೀಪವಿರುವ ಹನುಮಾನ್ ಮಂದಿರ ಪೂರ್ವಾಭಿಮುಖವಾಗಿದೆ. ನಾಗಶಿಲ್ಪಗಳು ಗೋಡೆಗಳಲ್ಲಿವೆ. ಮೂರು ಸ್ತರದ ಎತ್ತರವಾದ ಕಪ್ಪು ಶಿಲೆಯಲ್ಲಿ ಕೆತ್ತಲ್ಪಟ್ಟ ಶಿವಲಿಂಗವಿದೆ. ನಂದಿಶಿಲ್ಪವು ಹೂ ಬಳ್ಳಿ ಮತ್ತು ಗಂಟೆಗಳಿಂದ ಅಲಂಕೃತಗೊಂಡಿದೆ. ಪ್ರಸ್ತುತ ತ್ರುಟಿತಗೊಂಡಿದೆ.

ಸ್ಥಳ: ಮೇಳಕುಂದಾ(ಕೆ) ಶೈಲಿ: ಇಂಡೋ ಸಾರ್ಸೇನಿಕ್

ಶಿಲೆ: ಕಪ್ಪುಶಿಲೆ ದೇವಾಲಯ: ಹನುಮಾನ್ ಮಂದಿರ

ಸ್ಥಿತಿ: ಕನಿಷ್ಠ ಕಾಲ: ಸು.೧೭ನೆಯ ಶತಮಾನ

ಹನುಮಾನ್ ಮಂದಿರದ ಪ್ರಾಂಗಣದಲ್ಲಿ ಅನೇಕ ಶಿಲ್ಪಗಳಿವೆ. ಜೈನಶಿಲ್ಪ, ವೀರಗಲ್ಲು, ನಾಗಶಿಲ್ಪ, ತ್ರುಟಿತ ಬಾಗಿಲವಾಡದ ದ್ವಾರಪಾಲಕ ಶಿಲ್ಪ, ಗಜಲಕ್ಷ್ಮಿ ಲಲಾಟ, ಚತುರ್ಮುಖ ಬ್ರಹ್ಮ ಶಿಲ್ಪ, ಬಲಿಪೀಠ?, ಚಾಲುಕ್ಯ ಶೈಲಿಯ ಕಂಬಗಳಿವೆ. ಗರ್ಭಗುಡಿಯ ಬಲಭಾಗಕ್ಕೆ ಪತಿ–ಪತ್ನಿಯರು ಒಬ್ಬರ ಮೇಲೊಬ್ಬರು ಹೆಗಲ ಮೇಲೆ ಕೈ ಹಾಕಿಕೊಂಡು ಮತ್ತು ಟೊಂಕದ ಮೇಲೆ ಕೈ ಇಟ್ಟುಕೊಂಡು ನಿಂತ ಶಿಲ್ಪವಿದೆ. ಗರ್ಭಗುಡಿಯ ಬಾಗಿಲ ಬಳಿ ಶಿವಲಿಂಗ (ಬಲ), ಎಡಕ್ಕೆ ನಂದಿ ಶಿಲ್ಪವಿದೆ. ಗರ್ಭಗುಡಿಯಲ್ಲಿ ಹನುಮಾನ್ ಶಿಲ್ಪವಿದೆ. ಬಾಗಿಲವಾಡದಲ್ಲಿ ವೃತ್ತಗಳ ಮಧ್ಯೆ ಚತುರ್ದಳ ಹೂವಿನ ಕೆತ್ತನೆಯಿದೆ. ಅದರ ಪಕ್ಕದಲ್ಲಿ ಕುಡ್ಯಸ್ತಂಭ ಕೆತ್ತನೆಯಿದೆ. ಗುಡಿಯ ಕೆಳ ಭಾಗದಲ್ಲಿ ಒಂದು ನಿಂತ ಗಜ ಶಿಲ್ಪವಿದೆ.

ಸ್ಥಳ: ಮೇಳಕುಂದಾ(ಬಿ) ಶೈಲಿ: ಇಂಡೋ ಸಾರ್ಸೇನಿಕ್

ಶಿಲೆ: ಕಪ್ಪುಶಿಲೆ ದೇವಾಲಯ: ಹನುಮಾನ್ ಮಂದಿರ

ಸ್ಥಿತಿ: ಕನಿಷ್ಠ ಕಾಲ: ಸು.೧೭ನೆಯ ಶತಮಾನ

ಕಮಾನಿನಾಕಾರದ ಕೆತ್ತನೆ ಹೊರಗೋಡೆಗೆ ಕೆತ್ತಲ್ಪಟ್ಟಿದೆ. ಗೋಡೆಯ ಇಕ್ಕೆಲಲ್ಲಿ ನಕ್ಷತ್ರಾಕಾರದ ಹೂವು. ಅಂತರಾಳ, ಒಳಗೋಡೆಯ ಭಿತ್ತಿ ಭಾಗದಲ್ಲಿ ತ್ರುಟಿತ ವೀರಗಲ್ಲು, ನಾಗಶಿಲ್ಪ, ಗಣೇಶ

ಶಿಲ್ಪಗಳಿವೆ. ಗರ್ಭಗುಡಿಯ ಬಲಕ್ಕೆ ಶಿವ ಲಿಂಗವಿಡಲಾಗಿದೆ. ಎಡಕ್ಕಿರುವ ಭಿತ್ತಿ ಭಾಗದಲ್ಲಿ ಗಜ ಲಲಾಟದಲ್ಲಿ ಸೂರ್ಯ ಶಿಲ್ಪವಿದೆ. ಎರಡು ಕೈಗಳಲ್ಲಿ ಕಮಲದ ಹೂವು ಹಿಡಿದಿದೆ. ಸೂರ್ಯ ಶಿಲ್ಪವು ಕಿರೀಟ, ಕೊರಳಾಭರಣ ಧರಿಸಿದೆ. ಗರ್ಭಗುಡಿಯ ಬಾಗಿಲವಾಡ ಸಾದಾ ಕೆತ್ತನೆಯಿದೆ. ಗರ್ಭಗುಡಿಯಲ್ಲಿ ಹನುಮಾನ್ ಶಿಲ್ಪವಿದೆ. ನಕ್ಷತ್ರಾಕಾರದ ಶಿಖರ, ಉದ್ದನೆಯ ಕಂಬದಂತೆ ಕಮಲದ ಕೆತ್ತನೆ ಮೇಲೆ ದುಂಡನೆಯ ಕೆತ್ತನೆಯಿದೆ.

ಸ್ಥಳ: ಯಳವಂತಿ(ಕೆ) **ಶೈಲಿ:** ಕದಂಬ ನಾಗರಿ
ಶಿಲೆ: ಕಪ್ಪುಶಿಲೆ **ದೇವಾಲಯ:** ಹನುಮಾನ್ ಗುಡಿ
ಸ್ಥಿತಿ: ಕನಿಷ್ಠ **ಕಾಲ:** ಸು.೧೬ನೆಯ ಶತಮಾನ

ದಕ್ಷಿಣಾಭಿಮುಖವಾಗಿರುವ ದೇವಾಲಯ ಇಂಡೋ ಸಾರ್ಸೇನಿಕ್ ಶೈಲಿಯ ಕಮಾನುಗಳು ಪ್ರಾಂಗಣದ ಪ್ರವೇಶದಲ್ಲಿ ಕೆತ್ತಲಾಗಿದೆ. ಗರ್ಭಗುಡಿ ಮಾತ್ರ ಉಳಿದಿದೆ. ಬಾಗಿಲವಾಡ ಸಾದಾ ಕೆತ್ತನೆಯಿಂದ ಕೂಡಿದೆ. ಗರ್ಭಗುಡಿಯ ಎಡಕ್ಕೆ ಅನೇಕ ಶೈವ ತ್ರುಟಿತ ಶಿಲ್ಪಗಳಿವೆ. ಶಂಕರಿ, ಗಜಲಕ್ಷ್ಮಿ ಲಲಾಟ, ಗಣೇಶನ ಶಿಲ್ಪ, ಇತರೆ ಶಿಲ್ಪಗಳು ಇಲ್ಲಿ ಶಂಕರಲಿಂಗೇಶ್ವರ ಗುಡಿಯಿತ್ತು ಎನ್ನುವುದಕ್ಕೆ ಪ್ರಮುಖ ಆಧಾರವಾಗಿವೆ

ಸ್ಥಳ: ಸೈಯದ್‌ಚಿಂಚೋಳಿ **ಶೈಲಿ:** ಆಧುನಿಕ
ಶಿಲೆ: ಕಪ್ಪುಶಿಲೆ **ದೇವಾಲಯ:** ಹನುಮಾನ್ ಗುಡಿ
ಸ್ಥಿತಿ: ಕನಿಷ್ಠ **ಕಾಲ:** ಸು.೧೭ನೆಯ ಶತಮಾನ

ಹಳೆಯ ಹನುಮಾನ್ ಮಂದಿರ ಎದುರಿಗೆ ಒಂದು ಶಾಸನವಿದೆ. ಅದರ ಲಲಾಟದ ಮೇಲೆ ವೃಷಭ, ಯತಿ, ಲಿಂಗ, ಸೂರ್ಯ, ಚಂದ್ರ, ಆಕಳು ಮತ್ತು ಕರುವಿನ ಶಿಲ್ಪ ಕೆತ್ತಲ್ಪಟ್ಟಿದೆ.

ಊರಿನ ಹೊರವಲಯದಲ್ಲಿ ಹನುಮಾನ್ ಮಂದಿರ ತ್ರುಟಿತ. ಪೂರ್ವಾಭಿಮುಖವಾಗಿದೆ. ಸು.೧೪ನೆಯ ಶತಮಾನದ್ದಾಗಿದೆ. ಕಮಾನಿನಾಕರದಲ್ಲಿ ಗೋಡೆಗಳನ್ನು ಕಟ್ಟಲಾಗಿದೆ. ಸೂರ್ಯ? ಇಕ್ಕೆಲು ಭಿತ್ತಿಗಳ ಮೇಲೆ ಐದು ಕುದುರೆಗಳ ಮೇಲೆ ನಿಂತ ಮೂರ್ತಿ ಶಿಲ್ಪವಿದೆ. ಕರ್ಣ ಕುಂಡಲ, ಕಿರೀಟಧಾರಿ, ಕಾಲ್ಗಡಗ ಮತ್ತು ಎರಡು ಕೈಗಳಲ್ಲಿ ಆಯುಧ? ಕಮಲ ಹಸ್ತ? ಹಿಡಿದಿರುವ ಪ್ರಸ್ತುತ ಲಿಂಗ ಪೀಠದ ಮೇಲೆ ಪ್ರತಿಷ್ಠಾಪಿಸಲ್ಪಟ್ಟಿದೆ. ಆ ಲಿಂಗ ಪೀಠವೂ ಐದು ಕುದುರೆಗಳಿಂದ ಕೆತ್ತಲ್ಪಟ್ಟಿದೆ. ಜೋಡಿ ನಾಗರಶಿಲ್ಪ ಮಂದಿರದ ಎಡ ಭಾಗದ ಭಿತ್ತಿಯಲ್ಲಿದೆ.

ಸ್ಥಳ: ಮಣ್ಣೂರು **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಚೆನ್ನಕೇಶವ
ಸ್ಥಿತಿ: ಕನಿಷ್ಠ, **ಕಾಲ:** ಸು.೧೨ನೆಯ ಶತಮಾನ

ಊರ ಮಧ್ಯದಲ್ಲಿರುವ ಎಲ್ಲಮ್ಮನ ಗುಡಿ ಪ್ರಾಚೀನಕಾಲದ ಚೆನ್ನಕೇಶವನ ಗುಡಿಯಾಗಿದೆ. ಎತ್ತರವಾದ ಜಗತಿ ಬಹುಕೋನಾಕೃತಿಯಲ್ಲಿ ತಳವಿನ್ಯಾಸವಿದೆ. ಗರ್ಭಗೃಹ, ಅಂತರಾಳ ಹಾಗೂ

ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಎಲ್ಲಮ್ಮನ ಜಗುಲಿಯಿದ್ದು ಪಂಚಶಾಖಾಲಂಕೃತವಾದ ಬಾಗಿಲವಾಡವಿದೆ. ಅಂತರಾಳದ ಶಿರೋಭಾಗವನ್ನು ಸುಂದರವಾದ ಮಕರತೋರಣದಿಂದ ಅಲಂಕರಿಸಲಾಗಿದೆ. ಇಕ್ಕೆಲದಲ್ಲಿ ದ್ವಾರಪಾಲಕಿಯರ ಶಿಲ್ಪಗಳಿವೆ. ನವರಂಗದ ನಡುವಣ ಛತ್ತನ್ನು ತಾಂಡವ ನೃತ್ಯ ಶಿವನನ್ನು ಒಳಗೊಂಡ ಅಷ್ಟದಿಕ್ಪಾಲಕರ ಫಲಕದಿಂದ ಅಲಂಕರಿಸಲಾಗಿದೆ. ಗರ್ಭಗೃಹದ ಹೊರಭಿತ್ತಿಯಲ್ಲಿ ಮೂರು ದೇವಕೋಷ್ಠಕಗಳಿವೆ. ಅವುಗಳಲ್ಲಿ ದುರ್ಗಾ, ಉಗ್ರ ನರಸಿಂಹ ಹಾಗೂ ವರಹ ಶಿಲ್ಪಗಳಿವೆ (ತ್ರುಟಿತ). ಗರ್ಭಗೃಹ ಹಾಗೂ ಅಂತರಾಳದ ಭಿತ್ತಿಗಳನ್ನು ಸುಮಾರು ನಾಲ್ಕುವರೆ ಅಡಿ ಎತ್ತರವಾದ ವೇಣುಗೋಪಾಲ, ಚಾಮುಂಡಿ, ಪದ್ಮಾಸೀನ ವಿಷ್ಣು, ಭೈರವಿ ಇತ್ಯಾದಿ ದೇವತೆಗಳ, ಶುಕ, ದರ್ಪಣ ಸುಂದರಿಯರ, ವಿವಿಧ ವಾದ್ಯ ನುಡಿಸುತ್ತಿರುವ ವಾದ್ಯಗಾರ್ತಿಯರ ಮತ್ತು ನರ್ತಕಿಯರ ಉಬ್ಬುಶಿಲ್ಪಗಳಿವೆ. ಇವೆಲ್ಲವೂ ಹಿಂದೆ ಇದು ವೈಷ್ಣವ ದೇವಾಲಯವಾಗಿತ್ತೆಂಬ ಅಂಶವನ್ನು ಖಚಿತಪಡಿಸುತ್ತವೆ.[೧೦೮]

ಸ್ಥಳ: ಬಂದರವಾಡ **ಶೈಲಿ:** ಕಲ್ಯಾಣ ಚಾಲುಕ್ಯ,

ಶಿಲೆ: ಕಪ್ಪುಶಿಲೆ **ದೇವಾಲಯ:** ಬಸವ ದೇಗುಲ

ಸ್ಥಿತಿ: ಕನಿಷ್ಠ **ಕಾಲ:** ಸು.೧೧ನೆಯ ಶತಮಾನ

ಬೃಹತ್ ಎತ್ತರದ ಜಗತಿಯ ಮೇಲೆ ನಿರ್ಮಿತ ದೇವಾಲಯ ಪಶ್ಚಿಮಾಭಿಮುಖವಾಗಿದೆ. ಪ್ರಸುತ ಸಂಪೂರ್ಣ ಅವಸಾನಗೊಂಡಿದೆ. ದೇವಾಲಯದ ಹೊರ ಭಿತ್ತಿಭಾಗ ಉಳಿದಿದ್ದು ಅದರಲ್ಲಿ ಮದನಿಕೆಯರು ವಿವಿಧ ಭಂಗಿಯಲ್ಲಿ ನಿಂತಿರುವ ಕೆತ್ತನೆಗಳಿವೆ. ದೇವಕೋಷ್ಠಕಗಳಲ್ಲಿ ವಿಷ್ಣು ಶಿಲ್ಪಗಳು, ನರಸಿಂಹನ ಶಿಲ್ಪಗಳಿವೆ. ಊರ ಜನ ಇದನ್ನು ಬಸವ ದೇಗುಲವೆನ್ನುವರು. ಆದರೆ ಇದೊಂದು ವಿಷ್ಣುವಿನ ಮಂದಿರವಾಗಿತ್ತು ಎನ್ನುವುದಕ್ಕೆ ಹಲವು ಕುರುಹುಗಳಿವೆ. ನಕ್ಷತ್ರಾಕಾರದ ಜಗತಿಯ ಮೇಲೆ ರಚಿತವಾಗಿರುವ ಈ ದೇಗುಲದ ಭಿತ್ತಿ ರೇಖಾ ಮಾದರಿಯಲ್ಲಿದ್ದು, ಅದರಲ್ಲಿ ಮದನಿಕೆಯರು ನೃತ್ಯ ಭಂಗಿಯಲ್ಲಿರುವರು. ಸರ್ಪ ಸುಂದರಿ, ತಲೆಯ ಮೇಲೆ ತೆನೆ ಮತ್ತು ಸೊಂಟದಲ್ಲಿ ಮಗುವನ್ನು ಎತ್ತಿಕೊಂಡ ಮದನಿಕೆ, ಮಾವಿನ ಗೊಂಚಲು ಹಿಡಿದ ಮದನಿಕೆ, ನೀರಿನ ಕುಂಡಲ ಹಿಡಿದಿದೆ. ಅಭಯಹಸ್ತವಿರುವ ಮದನಿಕೆ ಮತ್ತು ಬಲಗೈಯಲ್ಲಿ ಬೀಜಪುರ–ಎಡಗೈಯಲ್ಲಿ ಕಮಲ ಹಿಡಿದ ಮದನಿಕೆಯರ ಮಧ್ಯ ಭೈರವನ ಶಿಲ್ಪವಿದೆ. ಭೈರವನ ಹಿಂದಿನ ಕೈಗಳಲ್ಲಿ ಡಮರು, ತ್ರಿಶೂಲ, ಮುಂದಿನ ಕೈಗಳು ಖಡ್ಗ ಮತ್ತು ರುಂಡ ಹಿಡಿದು ನಿಂತಿರುವ, ಇಕ್ಕೆಲಲ್ಲಿ ರುಂಡ ನೆಕ್ಕುತ್ತಿರುವ ರಾಕ್ಷಸನ ಕೆತ್ತನೆಯಿದೆ. ಕರ್ಣಕುಂಡಲ, ಕೈಗಡಗ, ಕೊರಳಿಗೆ ಹಾರ, ಉದರ ಪಟ್ಟಿ, ಸೊಂಟಪಟ್ಟಿ, ಯಜ್ಞೋಪವೀತ, ಕಾಲ್ಗಡಗ ಮತ್ತು ಕಾಲಲ್ಲಿ ಪಾದರಕ್ಷೆ ಧರಿಸಿರುವಂತೆ ಕೆತ್ತನೆಯಿದೆ. ಅದರಲ್ಲಿ ಹಲವು ತ್ರುಟಿತವಾಗಿವೆ. ಹೊರ ಭಿತ್ತಿಯ ದೇವಕೋಷ್ಠಕದಲ್ಲಿ ಶಂಖ, ಚಕ್ರ ಹಿಡಿದ ಹಿಂದಿನ ಕೈ ಮಾತ್ರ ಉಳಿದಿದ್ದು ಮುಂದಿನ ಕೈ ತ್ರುಟಿತವಾಗಿರುವ ವಿಷ್ಣುವಿನ ಶಿಲ್ಪವಿದೆ. ಕಿರೀಟ, ಕರ್ಣಕುಂಡಲ, ಬಾಹುವಲ್ಯ, ಕೈಗಡಗ, ಕೊರಳಿನಾಭರಣ, ವಕ್ಷಬಂಧ, ಯಜ್ಞೋಪವೀತ, ಸೊಂಟಪಟ್ಟಿ, ಇಳಿಬಟ್ಟೆ, ಕಾಲ್ಗಡಗ ಧರಿಸಿದ

ಕೆತ್ತನೆಯಿದೆ. ಇಕ್ಕೆಲಲ್ಲಿ ಭಕ್ತರ ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಸ್ಥಾನಿಕ ವಿಷ್ಣುವಿನ ಶಿಲ್ಪದಲ್ಲಿ ಹಿಂದಿನ ಕೈಗಳು ಶಂಖ, ಚಕ್ರ ಮುಂದಿನ ಕೈಗಳಲ್ಲಿ ಕಮಲ ಮತ್ತು ಗದೆಯಿದೆ. ಕಿರೀಟ, ಕರ್ಣಕುಂಡಲ, ಬಾಹುವಲ್ಯ, ಕೈಗಡಗ, ಕೊರಳಿನಾಭರಣ, ವಕ್ಷಬಂಧ, ಯಜ್ಞೋಪವೀತ, ಸೊಂಟಪಟ್ಟಿ, ಇಳಿಬಟ್ಟೆ, ಕಾಲ್ಗಡಗ ಧರಿಸಿದ ಕೆತ್ತನೆಯಿದೆ. ದೇವಾಲಯದ ಆವರಣದಲ್ಲಿ ಬಿದ್ದಿರುವ ತ್ರುಟಿತ ಚತುರ್ಬಾಹು ಉಗ್ರ ನರಸಿಂಹನ ಶಿಲ್ಪವು ತೊಡೆಯ ಮೇಲೆ ಹಿರಣ್ಯಕಶ್ಯಪನ ಕರುಳು ಕಿತ್ತುತ್ತಿರುವ ದೃಶ್ಯಾವಳಿಯಿದೆ. ಕಿರೀಟ, ಕರ್ಣಕುಂಡಲ, ಬಾಹುವಲ್ಯ, ಕೈಗಡಗ, ಕೊರಳಿನಾಭರಣ, ವಕ್ಷಬಂಧ, ಯಜ್ಞೋಪವೀತ, ಸೊಂಟಪಟ್ಟಿ, ಇಳಿಬಟ್ಟೆ, ಕಾಲ್ಗಡಗ ಧರಿಸಿದ ಕೆತ್ತನೆಯಿದೆ.

ಬಂದರವಾಡದ ಶಾಲಾ ಆವರಣದಲ್ಲಿ ದೊರೆತ ವೈಷ್ಣವ (ಬಸವ ದೇಗುಲ) ದೇವಾಲಯದ ಅವಶೇಷಗಳು ಸು.೧೧ನೆಯ ಶತಮಾನದ್ದಾಗಿವೆ. ಕಪ್ಪು ಶಿಲೆಯಲ್ಲಿವೆ. ನೆಲದಲ್ಲಿ ಹೂತುಹೋದ ಅಂಜಲಿ ಮುದ್ರೆಯಲ್ಲಿರುವ ಒಂದು ಶಿಲ್ಪಾವಶೇಷವಿದೆ. ತ್ರುಟಿತ ಬಾಗಿಲವಾಡದಲ್ಲಿ ದ್ವಾರಪಾಲಕ, ಚಾಮರಧಾರಿ ಮತ್ತು ಕಲ್ಲಿನ ಗುಂಡು ಎತ್ತಿಹಿಡಿದು ನಿಂತಿರುವ ಕೆತ್ತನೆಯಿದೆ. ಕಮಲದ ಮೊಗ್ಗು ಹಿಡಿದು ನಿಂತಿರುವ, ನೃತ್ಯ ಭಂಗಿಯಲ್ಲಿರುವ ಮದನಿಕೆಯರ ಶಿಲ್ಪಗಳಿವೆ. ಶಂಖ, ಚಕ್ರ, ಗದಾ ಹಿಡಿದಿರುವ ಸ್ಥಾನಿಕ ವಿಷ್ಣು ಶಿಲ್ಪವಿದೆ. ಕಿರೀಟ, ಕರ್ಣಕುಂಡಲ, ಬಾಹುವಲ್ಯ, ಕೈಗಡಗ, ಕೊರಳಿನಾಭರಣ, ವಕ್ಷಬಂಧ, ಯಜ್ಞೋಪವೀತ, ಸೊಂಟಪಟ್ಟಿ, ಇಳಿಬಟ್ಟೆ, ಕಾಲ್ಗಡಗ ಧರಿಸಿದ ಕೆತ್ತನೆಯಿದೆ. ತ್ರುಟಿತ ಬಾಗಿಲವಾಡದಲ್ಲಿ ವೈಷ್ಣವ ದ್ವಾರಪಾಲಕ–ಶಂಖ, ಚಕ್ರ, ಗದೆ ಹಿಡಿದಿರುವ, ಚಾಮರಧಾರಿ ಮತ್ತು ತ್ರುಟಿತ ಫಲಹಾರಿ ಸ್ತ್ರೀ ನಿಂತಿರುವ ಕೆತ್ತನೆಯಿದೆ. ಬಂದರವಾಡ, ಕಲ್ಯಾಣ ಚಾಲುಕ್ಯ, ವೈಷ್ಣವ ದೇವಾಲಯ ಪಶ್ಚಿಮಾಭಿಮುಖವಿದೆ. ಕ್ರಿ.ಶ.೧೨ನೆಯ ಶತಮಾನದ್ದಾಗಿದೆ. ಸಂಪೂರ್ಣ ಅವಸಾನ ಹೊಂದಿರುವ ದೇವಾಲಯದ ವೇದಿಕೆ, ಎತ್ತರದ ಅಧಿಷ್ಠಾನ ಭಾಗದಲ್ಲಿ ಉಪಾನ, ಜಗತಿ, ಪಟ್ಟಿಕೆಗಳಿವೆ. ಗೋಡೆಯಲ್ಲಿ ಅಲಂಕೃತ ಅರ್ಧಗಂಬ, ಉದ್ದ–ಅಡ್ಡ ಪಟ್ಟಿಕೆಗಳು, ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಶಿಲಾಬಾಲಕಿಯರ ಶಿಲ್ಪಗಳಿವೆ. ಗರ್ಭಗೃಹದ ಗೋಡೆಗೆ ಅರ್ಧಗಂಬ ಮತ್ತು ಪಟ್ಟಿಕೆಗಳಿಂದ ಕೂಡಿದ ಒಂದು ಗೂಡು ಉಳಿದಿದೆ.[೧೯]

ಸ್ಥಳ: ಮಾಶಾಳ **ಶೈಲಿ:** ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ **ದೇವಾಲಯ:** ಆಂಜನೇಯ

ಸ್ಥಿತಿ: ಕನಿಷ್ಠ, **ಕಾಲ:** ಸು.೧೨ನೆಯ ಶತಮಾನ

ದಕ್ಷಿಣಾಭಿಮುಖವಾಗಿರುವ ದೇವಾಲಯದಲ್ಲಿ ಎತ್ತರ ಜಗತಿಯ ಮೇಲೆ ನಿರ್ಮಾಣವಾಗಿದೆ. ದೇವಾಲಯದಲ್ಲಿ ಗರ್ಭಗೃಹ ಮತ್ತು ಸಭಾಮಂಟಪಗಳಿವೆ. ಗರ್ಭಗೃಹದ ಪ್ರವೇಶದ್ವಾರಕ್ಕೆ ಪದ್ಮ, ಅರ್ಧಗಂಬಗಳು ಹಾಗೂ ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಸುಮಾರು ನಾಲ್ಕು ಅಡಿ ಎತ್ತರದ ಆಂಜನೇಯನ ಮೂರ್ತಿ ಗರ್ಭಗುಡಿಯಲ್ಲಿದೆ. ಕೈಪಿಡಿ ಗೋಡೆಯಲ್ಲಿ ಪದ್ಮ ದಳ, ಗರ್ಭಗೃಹದ ಮೇಲೆ ಗುಮ್ಮಟಾಕಾರದ ಶಿಖರವಿದೆ. ದೇವಾಲಯದ ಆವರಣದಲ್ಲಿ ಸಪ್ತಮಾತೃಕೆ, ಗಣೇಶ, ಚತುರ್ಮುಖ ಬ್ರಹ್ಮ, ಆಂಜನೇಯ ಎರಡು ನಾಗಶಿಲ್ಪಗಳಿವೆ.[೧೦೦]

೪.೪.೩. ಜೈನ ದೇವಾಲಯಗಳು

ಸ್ಥಳ: ಹುಣಸಿ ಹಡಗಲಿ   **ಶೈಲಿ:** ಕಲ್ಯಾಣ ಚಾಲುಕ್ಯ,

ಶಿಲೆ: ಕಪ್ಪು ಕಲ್ಲು.   **ದೇವಾಲಯ:** ಧರಣೇಂದ್ರ ಪದ್ಮಾವತಿದೇವಿ

ಸ್ಥಿತಿ: ಮಧ್ಯಮ,   **ಕಾಲ:** ಸು.೯ನೆಯ ಶತಮಾನ

ಇಲ್ಲಿ ಧರಣೇಂದ್ರ ಪದ್ಮಾವತಿದೇವಿ ದಿಗಂಬರ ಜೈನ ಬಸದಿಯಲ್ಲಿ ಎರಡು ಶಾಸನಗಳಿದ್ದು ಒಂದು ಪ್ರಕಟಿತ ಇನ್ನೊಂದು ಅಪ್ರಕಟಿತವಿದೆ. ವಿ.ಕೆ. ಶಿವಾನಂದರ ಹೈದ್ರಾಬಾದ್ ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು ಎಂಬ ಪ್ರಕಟಿತ ಪುಸ್ತಕದಲ್ಲಿ ಪುಟ ಸಂಖ್ಯೆ-೫೮೮ರಲ್ಲಿ ಹುಣಸಿಹಡಗಲಿಯ ಶಾಸನ ಪ್ರಕಟಿತವಾಗಿದೆ. ಇನ್ನೊಂದರ ಪ್ರಕಟಣೆಯ ಬಗ್ಗೆ ತಿಳಿದುಬಂದಿಲ್ಲ.

ಬಸದಿಯ ಪ್ರಾಂಗಣದಲ್ಲಿ ಮೂರು ಸ್ಥಾನಿಕ ಮತ್ತು ಒಂದು ಪದ್ಮಾಸನ ಭಂಗಿಯಲ್ಲಿದೆ. ಸಲ್ಲೇಖನ ವ್ರತ ಮಾಡಿ ಐಕ್ಯ ಹೊಂದಿದ ಶಿಲ್ಪದ ಕೆತ್ತನೆಯಿದೆ. ತ್ರುಟಿತ ಜೈನ ಶಿಲ್ಪದ ಶಿರವಿದೆ. ತ್ರುಟಿತ ವಿಷ್ಣು ಶಿಲ್ಪವಿದೆ. ಹಿಂದೆ ಚಕ್ರ, ಶಂಖ, ಮುಂದಿನ ಕೈಗಳಲ್ಲಿ ಬಲಕ್ಕೆ ಪತಾಕ ಎಡಕ್ಕೆ ಗದೆಯಿದೆ. ನಾಗಶಿಲ್ಪದ ಕೆಳಗೆ ಜೈನಯತಿ ಧ್ಯಾನಕ್ಕೆ ಕುಳಿತಂತೆ ಚಿಕ್ಕದಾಗಿ ಕೆತ್ತಲಾಗಿದೆ. ಇವುಗಳನ್ನು ಗಾಜಿಪುರದಿಂದ ತರಲಾಗಿದೆ ಎಂದು ಇಲ್ಲಿನ ಪೂಜಾರಿಯ ಹೇಳಿಕೆಯಾಗಿದೆ. ಗರ್ಭಗುಡಿಯ ಅರ್ಧಮಂಟಪದ ಎಡಕ್ಕೆ ಬೃಹತ್ ಪ್ರಕಟಿತ ಶಾಸನವಿದೆ. ವ್ಹಿ.ಕೆ. ಶಿವಾನಂದರ ಹೈದ್ರಾಬಾದ್ ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು ಎಂಬ ಪ್ರಕಟಿತ ಪುಸ್ತಕದಲ್ಲಿ ಪುಟ ಸಂಖ್ಯೆ-೫೮೮ರಲ್ಲಿ ಹುಣಸಿಹಡಗಲಿಯ ಶಾಸನ ಪ್ರಕಟಿತವಾಗಿದೆ.

ಬಸದಿಯ ಹೊರಬಾಗಿಲು ತ್ರಿಶಾಖ ಬಾಗಿಲವಾಡವಿದೆ. ಬಾಗಿಲ(ಕೆಳ) ಚತುರ್ದಳ ಹೂವಿದೆ. ಬಾಗಿಲಿಗೆ ಸ್ತ್ರಿ-ಪುರುಷ ದ್ವಾರಪಾಲಕರ ಶಿಲ್ಪಗಳಿವೆ. ಹೊರಭಾಗದಲ್ಲಿ ಅರ್ಧಮಂಟಪವಿದೆ. ಅಲ್ಲಿಯೇ ಅಪ್ರಕಟಿತ ಒಂದು ಶಾಸನ ಬಾಗಿಲಿನ ಕೆಳಭಾಗದಲ್ಲಿದೆ. ॥ಇಬಸ್ತಿ ಬಂಜ್ಯಪಂಯ್ದ? (ಧೂಪಂಯ್ದ?)॥ ॥ಪೋದಲ್ಲಿ ಇವನೆ ಯೊನ್ನ॥. ಇಜಾನನಂ ಬಂದಃವೆಂದು॥ ॥ಮಾಡಿನೊಪುಮನಿಸುನಾಣು॥? ಎಂದಿದೆ. ನವರಂಗವಿದೆ. ದೇವಕೋಷ್ಠಕಗಳಲ್ಲಿ ಜೈನಶಿಲ್ಪಗಳಿವೆ. ಪದ್ಮಾವತಿ ಮತ್ತು ಧರಣೇಂದ್ರ? ಶಿಲ್ಪ ಅಂತರಾಳದಲ್ಲಿ ಸ್ಥಾನಿಕ ಜೈನ ಶಿಲ್ಪವಿದೆ. ಗರ್ಭಗುಡಿಯ ಬಾಗಿಲವಾಡಕ್ಕೆ ಕುಡ್ಯಸ್ತಂಭದ ಕೆತ್ತನೆಯಿದೆ. ಕ್ಷೇತ್ರಪಾಲನ ಶಿಲ್ಪವಿದೆ. ನವರಂಗ ಭುವನೇಶ್ವರಿ ತ್ರಿದಳ ದುಂಡಾಗಿ ಕೆತ್ತಲ್ಪಟ್ಟಿವೆ. ಗರ್ಭಗುಡಿಯ ಹೊರಪ್ರಾಂಗಣದಲ್ಲಿ ಗಣೇಶನ ಶಿಲ್ಪವಿದೆ. ತ್ರುಟಿತ ನಾಗಶಿಲ್ಪಗಳಿವೆ. ಗರ್ಭಗುಡಿಯ ಬಲಪ್ರದಕ್ಷಿಣಾಪಥದಲ್ಲಿ ಜೈನಪೀಠ, ಸಲ್ಲೇಖವ್ರತ ಮಾಡಿದ ಶಿಲ್ಪ ಮತ್ತೊಂದರಲ್ಲಿ ಇಬ್ಬರು ಜೋಡಿ ಸಲ್ಲೇಖನವ್ರತ ಮಾಡಿದ? ಶಿಲ್ಪವಿದೆ. ಹೊರ ಬಾಗಿಲವಾಡ ತ್ರಿಶಾಖಾಲಂಕೃತವಾಗಿದೆ. ಚತುರ್ದಳ ಹೂವು, ಕುಡ್ಯಸ್ತಂಭ, ಹೂದಳ ಕೆತ್ತನೆಯಿದೆ. ಲಲಾಟದ ಮೇಲೆ ಜಿನಬಿಂಬವಿದೆ. ಬಾಗಿಲವಾಡ ದ್ವಾರಪಾಲಕರಲ್ಲಿ ಮೊದಲಿಗೆ ಇಕ್ಕೆಲಗಳಲ್ಲಿ ಕಟಿಹಸ್ತ-ಆಯುಧಧಾರಿ ದ್ವಾರಪಾಲಕಿಯರು, ಕೇಶಾಲಂಕೃತ ಆಭರಣ, ಬಾಹುವಲ್ಯ, ಕೈಬಳೆ, ಕಂಠಹಾರ, ಕೊರಳಿನಾಭರಣ, ಸೊಂಟಪಟ್ಟಿ,

ಇಳಿಬಟ್ಟೆ, ಕಾಲ್ಗಡಗ ಧರಿಸಿದೆ. ನಂತರದ ಇಕ್ಕೆಲಗಳ ದ್ವಾರಪಾಲಕರ ಹಿಂದಿನ ಕೈಗಳಲ್ಲಿ ಚಕ್ರ, ತ್ರಿಶೂಲ? ಮುಂದಿನ ಕೈಗಳಲ್ಲಿ ಅಭಯ ಮತ್ತು ಗದೆಯಿದೆ. ಕಿರೀಟ, ಕರ್ಣಕುಂಡಲ, ವಕ್ಷಬಂಧ, ಕೈಗಡಗ, ಎದೆಯಾಭರಣ, ಸೊಂಟಪಟ್ಟಿ, ಇಳಿಬಟ್ಟೆ, ಕುಚಹಾರ, ಕಾಲ್ಗಡಗ ಧರಿಸಿದೆ. ಅದರ ಪಕ್ಕದಲ್ಲಿರುವ ಸ್ತ್ರೀ ಶಿಲ್ಪಗಳು ಕಟಿಹಸ್ತದಲ್ಲಿ ನೀರು ಮತ್ತು ಹೂವು ಹಿಡಿದಂತೆ? ಕೆತ್ತಲಾಗಿದೆ. ಕೇಶಾಲಂಕೃತ, ಬಾಹುವಲ್ಯ, ಕೈಬಳೆ, ಕಂಠಹಾರ, ಕೊರಳಿನಾಭರಣ, ಸೊಂಟಪಟ್ಟಿ, ಇಳಿಬಟ್ಟೆ, ಕಾಲ್ಗಡಗ ಧರಿಸಿದೆ. ರಾಷ್ಟ್ರಕೂಟರ ಶೈಲಿಯ ಎರಡು ಕಂಬಗಳು ಹೊರಬಾಗಿಲದ ಬಳಿಯಿವೆ. ಬೋದಿಗೆ, ಬಟ್ಟಲಾಕಾರದ ಮತ್ತು ವೃತ್ತ, ಗಳ, ವೃತ್ತಗಳು ಎಲೆಯಾಕಾರದ ಕೆತ್ತನೆ ಅವುಗಳ ಮಧ್ಯದಲ್ಲಿದೆ. ಚೌಕ ಮತ್ತು ಅಷ್ಟಕೋನಾಕೃತಿ ಕೆಳಭಾಗದಲ್ಲಿ ಚೌಕದ ಕೆತ್ತನೆಯಿದೆ. ನವರಂಗದ ಕಂಬಗಳು ಇದೇ ಮಾದರಿಯದ್ದಾಗಿವೆ. ನವರಂಗದ ಎಡಕ್ಕೆ ಕ್ಷೇತ್ರಪಾಲರ ಮತ್ತು ಸ್ಥಾನಿಕ ಜೈನ ತೀರ್ಥಂಕರನ ಶಿಲ್ಪವಿದೆ. ನೀಳ ಕಿವಿ ಮತ್ತು ಗುಂಗುರು ಕೂದಲಿನ ಕೆತ್ತನೆಯಿದೆ. ಅದರ ಕೆಳಗೆ ಸ್ತ್ರೀಯರು ಅಂಜಲಿ ಮುದ್ರೆಯಲ್ಲಿ ಕುಳಿತಿರುವರು. ನವರಂಗದಲ್ಲಿ ಜಾಗಟೆಯಿಡಲಾಗಿದೆ. ಭುವನೇಶ್ವರಿ ತ್ರಿದಳ ಹೂವಿನಿಂದ ಕೂಡಿದೆ. ಗರ್ಭಗುಡಿಯ ಬಾಗಿಲವಾಡದಲ್ಲಿ ಕುಉಡ್ಯಸ್ತಂಭವಿದೆ. ಲಲಾಟದ ಮೇಲೆ ಜೈನ ಬಿಂಬವಿದೆ. ಗರ್ಭಗುಡಿಯಲ್ಲಿ ಸ್ಥಾನಿಕ ಏಳು ಹೆಡೆಯ ನಾಗ ಮುಕ್ಕೊಡೆ, ಗುಂಗುರು ಕೂದಲಿನಿಂದ ಕೆತ್ತಲ್ಪಟ್ಟ ಮಹಾವೀರನ ಶಿಲ್ಪವಿದೆ. ಇಕ್ಕೆಲಲ್ಲಿ ಕುಡ್ಯಸ್ತಂಭ, ಸಿಂಹವೆಯ್ಯಾವಳಿಗಳ ಕೆತ್ತನೆಯಿದೆ.

ಸ್ಥಳ: ಹುಣಸಿ ಹಡಗಲಿ   **ಶೈಲಿ:** ರಾಷ್ಟ್ರಕೂಟ

ಶಿಲೆ: ಕಪ್ಪು ಕಲ್ಲು   **ದೇವಾಲಯ:** ಬಸದಿ

ಸ್ಥಿತಿ: ಅವಸಾನ   **ಕಾಲ:** ಸು.೭–೮ನೆಯ ಶತಮಾನ

ಊರೊಳಗೆ ಇನ್ನೊಂದು ತೀರ ಅವಸಾನದ ಹಂತದಲ್ಲಿರುವ ಬಸದಿಯಿದೆ. ತ್ರಿಕೂಟ ಗರ್ಭಗುಡಿಯಲ್ಲಿ ಒಂದು ಗುಡಿ ಗರ್ಭಗುಡಿಯ ಬಲಕ್ಕಿರುವ ಗರ್ಭಗುಡಿ ನಾಶವಾಗಿದೆ. ಎಡಕ್ಕಿರುವ ಗರ್ಭಗುಡಿಯ ಮೇಲಿನ ಛತ್ ಬಿದ್ದಿದೆ. ಪ್ರಮುಖ ಗರ್ಭಗುಡಿಯು ಪ್ರಸ್ತುತ ಖಾಲಿಯಿದೆ. ರಾಷ್ಟ್ರಕೂಟ ಶೈಲಿಯ ಕಂಬಗಳಿವೆ. ಉತ್ತರಾಭಿಮುಖವಾಗಿರುವ ಈ ಬಸದಿ ಸ್ಥಳೀಯರ ಹೇಳಿಕೆ ಪ್ರಕಾರ ಈಶ್ವರಲಿಂಗ ಗುಡಿಯಾಗಿತ್ತೆಂದು ತಿಳಿಸಲಾಗಿದೆ. ದ್ವಾರಬಾಗಿಲು ಸಾದಾ ಇವೆ. ಗರ್ಭಗುಡಿಯ ಬಾಗಿಲವಾಡ ಸಾದಾ ಇವೆ.

ಸ್ಥಳ: ಜಿವಣಗಿ   **ಶೈಲಿ:** ರಾಷ್ಟ್ರಕೂಟ

ಶಿಲೆ: ಕಪ್ಪುಕಲ್ಲು   **ದೇವಾಲಯ:** ಬಿಬ್ಬಲಿಂಗೇಶ್ವರ ಗುಡಿ

ಸ್ಥಿತಿ: ಕನಿಷ್ಠ   **ಕಾಲ:** ಸು.೮ನೆಯ ಶತಮಾನ

ಗರ್ಭಗುಡಿ, ಅಂತರಾಳ, ನವರಂಗ, ಮಂಟಪ, ಗುಡಿಯ ಪ್ರಾಂಗಣವಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ದ್ವಿದಳ ಭುವನೇಶ್ವರಿಯಿದೆ. ಕುಡ್ಯಸ್ತಂಭಗಳು ಮತ್ತು ಮೂರುಸ್ತರದ ಒರಟುಕಲ್ಲಿನ

ಲ್ಲಿರುವ ಶಿವಲಿಂಗ? ಗರ್ಭಗುಡಿಯ ಭಿತ್ತಿಭಾಗದಲ್ಲಿವೆ. ಗರ್ಭಗುಡಿಯ ಪಂಚಶಾಖ ಬಾಗಿಲವಾಡ ಸಾದಾಯಿದ್ದು ಕೆಳಭಾಗದಲ್ಲಿ ಹೂವಿನ ಕೊರೆತಗಳಿವೆ. ಲಲಾಟದಲ್ಲಿ ಹೂವಿನಬಿಂಬವಿದೆ. ಅಂತರಾಳವಿದ್ದು ಅದರ ಬಾಗಿಲವಾಡ ತ್ರುಟಿತವಾಗಿದೆ. ತ್ರಿಶಾಖಾಲಂಕೃತ ಬಾಗಿಲವಾಡದಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ಸಾದಾ ಕೆತ್ತನೆ, ಕುಡ್ಯಸ್ತಂಭ, ಸಿಂಹಪಟ್ಟಿಕೆಯ ಕೆತ್ತನೆಯಿವೆ. ಬಾಗಿಲವಾಡದ ದ್ವಾರಪಾಲಕ ಆಯುಧಧಾರಿಯಾಗಿರುವನು. ಕಟಿಹಸ್ತದಲ್ಲಿ ಎಡಗೈಯಲ್ಲಿ ಭರ್ಚಿ ಹಿಡಿದು ನಿಂತಿರುವ ಕೆತ್ತನೆಯಿದೆ. ಕಿರೀಟ, ಕರ್ಣಕುಂಡಲ, ಬಾಹುವಲ್ಯ, ಕೈಗಡಗ, ಕೊರಳಾಭರಣ, ಎದೆಯಾಭರಣ, ವಕ್ಷಬಂಧ, ಯಜ್ಞೋಪವೀತ, ಉಪವೀತ, ಸೊಂಟಬಂಧ, ಕುಚಹಾರ ಇಳಿವಸ್ತ್ರ ಧರಿಸಿದೆ. ಪತಿ-ಪತ್ನಿಯರ ಶಿಲ್ಪಗಳಿವೆ. ಪುರುಷ ಶಿಲ್ಪ ಕಿರೀಟ, ಕರ್ಣಕುಂಡಲ, ಬಾಹುವಲ್ಯ, ಕೈಗಡಗ, ಕೊರಳಾಭರಣ, ಎದೆಯಾಭರಣ, ವಕ್ಷಬಂಧ, ಯಜ್ಞೋಪವೀತ, ಉಪವೀತ, ಸೊಂಟಬಂಧ, ಕುಚಹಾರ ಇಳಿವಸ್ತ್ರ ಧರಿಸಿದೆ. ಸ್ತ್ರೀ ಶಿಲ್ಪ ಕಿರೀಟ, ತಲೆಹಿಂದೆ ವೃತ್ತಾಕಾರ ಕೇಶಾಲಂಕಾರ, ಕಿವಿಓಲೆ, ಕೈಬಳೆ, ಕೈಗಡಗ, ಕೊರಳಾಭರಣ, ಎದೆಯಾಭರಣ, ಸೊಂಟಬಂಧ, ಕುಚಹಾರ, ಕಾಲ್ಗಡಗ ಧರಿಸಿದೆ. ಅಂತರಾಳದ ಬಲಕ್ಕೆ ಬಾಗಿಲವಾಡದಲ್ಲಿ ಕನಕದಳ, ಹೂವಿನ ಮೊಗ್ಗಿನ ಕೆತ್ತನೆಯಿದೆ. ಕೆಳಭಾಗದಲ್ಲಿ ಜೈನ ತೀರ್ಥಂಕರ ಹಿಂದಿನ ಪ್ರಭಾವಳಿಯ ಕಂಬ ಮತ್ತು ಹೂ ಬಳ್ಳಿಯ ಕೆತ್ತನೆಯಿದೆ.

ನವರಂಗದ ಭಿತ್ತಿಭಾಗದಲ್ಲಿ ನಾಗಶಿಲ್ಪಗಳು, ಭಿಕ್ಷಾಟನೆ ಶಿವನ ಶಿಲ್ಪ, ಗಣೇಶನ ಶಿಲ್ಪ, ಮಹಿಷಾಸುರಮರ್ದಿನಿ ಶಿಲ್ಪ, ಇತರೆ ಶಿಲ್ಪಗಳಿವೆ. ನವರಂಗದಲ್ಲಿ ಒಂದು ಸಾಲಿನ ಅಪ್ರಕಟಿತ ಶಾಸನವಿದೆ. ನವರಂಗದ ಕಂಬಗಳು ರಾಷ್ಟ್ರಕೂಟ ಶೈಲಿಯಲ್ಲಿವೆ. ನವರಂಗದ ಎಡಕಂಬ ಚೌಕ ಪಟ್ಟಿಕೆ, ದುಂಡನೆಯ ಕಂಬಗಳು ಅದಕ್ಕೆ ಕೆತ್ತನೆಯಿದೆ. ಕೆಳಗೆ ಆಯಾತಾಕಾರದ ಕಂಬವಿದೆ ಮತ್ತು ಕೆಳಗೆ ಕಂಬ ಪೀಠವಿದೆ. ಬಲಕಂಬವು ಕಂಬಪೀಠ, ಹೂವಿನ ಕೆತ್ತನೆಯ ಚೌಕ, ದುಂಡನೆಯ ಕಂಬದ ಮಧ್ಯೆ ಅಷ್ಟಕೋನದಳ, ಚೌಕ ಮತ್ತು ವೃತ್ತದಂತಿರುವ ಮೇಲಿನ ಕಂಬಕ್ಕೆ ಎಲೆಯಾಕಾರ ಮತ್ತು ಚೌಕ ಪಟ್ಟಿಕೆ ಛತ್ತಿಗೆ ಆಧಾರವಾಗಿದೆ.

ಮಂಟಪಭಾಗದ ಬಲಕ್ಕೆ ಜೈನ ಶಾಸನವಿದೆ. ಪ್ರಾಂಗಣದಲ್ಲಿ ತ್ರುಟಿತ ಜೈನಶಿಲ್ಪಗಳು, ಮುಕ್ಕೋಡೆ, ಚಿಕ್ಕ ಗೂಡು(ಪಿಂಜರ)ಗಳಲ್ಲಿ ಮಿಥುನ ಶಿಲ್ಪ, ತ್ರುಟಿತ ವೈವಿಧ್ಯಮಯ ಕಂಬಗಳು, ಅಲ್ಲದೆ ಪ್ರಾಂಗಣದಲ್ಲಿರುವ ಗೋಡೆಗಳಲ್ಲಿ ಅನೇಕ ತ್ರುಟಿತ ಶಿಲ್ಪಗಳನ್ನಿಟ್ಟು ಕಟ್ಟಲಾಗಿದೆ. ಹೊರ ಆವರಣದಲ್ಲಿ ದೀಪಸ್ತಂಭ ಮತ್ತು ನಂದಿ ಶಿಲ್ಪವಿದೆ.

ದೇವಾಲಯದ ಆವರಣದಲ್ಲಿ ಜೈನ ಶಿಲ್ಪಗಳ ತ್ರುಟಿತ ಭಾಗಗಳು, ಕಂಬಗಳು ಮತ್ತು ದೇವಾಲಯದ ಪಕ್ಕದಲ್ಲಿ ದೊರೆತ ಭುವನೇಶ್ವರಿ, ಕಂಬ, ದೇವಾಲಯದ ಬಾಗಿಲವಾಡ, ಶಿಖರದ ಭಾಗಗಳು ನಾಟ್ಯಗಣೇಶನ ಶಿಲ್ಪ, ಅಲ್ಲಿಯೇ ಇರುವ ಬೃಹತ್ ನಂದಿಶಿಲ್ಪ ಗುಡಿಗಳೆಲ್ಲವೂ ಶೈವ ಮತ್ತು ಜೈನ ದೇವಾಲಯಗಳಿರುವುದಕ್ಕೆ ಸಾಕ್ಷಿಯಾಗಿ ನಿಂತಿವೆ.

ಸ್ಥಳ: ಸುಲೇಪೇಟೆ **ಶೈಲಿ:** ಕಲ್ಯಾಣ ಚಾಲುಕ್ಯರು
ಶಿಲೆ: ಕಪ್ಪುಕಲು **ದೇವಾಲಯ:** ಜೈನ ದೇವಾಲಯ
ಸ್ಥಿತಿ: ಅವಸಾನ **ಕಾಲ:** ಸು.೧೧ನೇ ಶತಮಾನ

ದೇವಾಲಯವು ಪೂರ್ವಾಭಿಮುಖವಾಗಿದೆ. ನವರಂಗದಲ್ಲಿಯೇ ಗರ್ಭಪೀಠವಿದ್ದು ಮೂರು ದೇವಕೋಷ್ಠಕಗಳನ್ನು ಒಳಗೊಂಡಿದೆ. ಜೈನ ದೇವಾಲಯ ಸರಳವಾಗಿ ನಿರ್ಮಿತವಾಗಿದೆ. ಆದರೆ ಗರ್ಭದ ಮೂರು ಮೂರ್ತಿಗಳ ಕೆತ್ತನೆ ಭವ್ಯವಾಗಿವೆ. ಭಿತ್ತಿ ಮತ್ತು ಇಳಿಜಾರ ಮೇಲ್ಛಾವಣಿ ಯನ್ನೊಳಗೊಂಡಿದೆ. ಮೂರು ದೇವಕೋಷ್ಠಕದಲ್ಲಿ ಒಂದು ಪ್ರಸ್ತುತ ಖಾಲಿ ಇದೆ. ಇನ್ನೆರಡು ನಿಂತ ಭಂಗಿಯಲ್ಲಿರುವ ಶಿಲ್ಪಗಳನ್ನು ಒಳಗೊಂಡಿದೆ. ಗರ್ಭಪೀಠದಲ್ಲಿ ಪಾರ್ಶ್ವನಾಥ ಶಿಲ್ಪವಿದೆ.

ಸ್ಥಳ: ಮಿರ್ಯಾಣ **ಶೈಲಿ:** ಕಲ್ಯಾಣ ಚಾಲುಕ್ಯರು
ಶಿಲೆ: ಕಪ್ಪುಕಲು **ದೇವಾಲಯ:** ಜೈನ ದೇವಾಲಯ
ಸ್ಥಿತಿ: ಅವಸಾನ **ಕಾಲ:** ಸು.೧೦ನೇ ಶತಮಾನ

ಉತ್ತರಾಭಿಮುಖ ಜೈನ ದೇವಾಲಯವು ಗರ್ಭಗುಡಿ ಮತ್ತು ಅಂತರಾಳವನ್ನೊಳಗೊಂಡಿದೆ. ಎತ್ತರದ ಜಗತಿಯ ಮೇಲೆ ಈ ಬಸದಿ ನಿರ್ಮಾಣವಾಗಿದೆ. ಅಧಿಷ್ಠಾನ, ಭಿತ್ತಿ, ಪ್ರಸ್ತರ ವನ್ನೊಳಗೊಂಡಿದೆ. ಗರ್ಭಗುಡಿಯೊಳಗೆ ಪಾರ್ಶ್ವನಾಥ ಮೂರ್ತಿ ಇದೆ. ನವರಂಗ ಭಾಗ ನಶಿಸಿದೆ. ಎತ್ತರವಾದ ಸಿಂಹ ಪೀಠದ ಮೇಲೆ ಪದ್ಮಾಸೀನ ಮತ್ತು ಧ್ಯಾನ ಭಂಗಿಯಲ್ಲಿರುವ ತೀರ್ಥಂಕರನ ಶಿಲ್ಪವಿದೆ. ಇದು ಸು.೧೦ ಅಡಿ ಎತ್ತರದ ಶಿಲ್ಪವಾಗಿದೆ. ಪ್ರಭಾವಳಿಯಲ್ಲಿ ಜಿನಬಿಂಬಗಳಿವೆ.[೧೧೧] ಕೇಶವ ನಾರಾಯಣ ಗುಡಿಯ ಗರ್ಭಗೃಹವು ನವರಂಗದಲ್ಲಿಯೇ ಇದೆ. ಇದು ಅಂತರಾಳ ಮತ್ತು ಮುಖಮಂಟಪದಿಂದ ಕೂಡಿದೆ. ಎತ್ತರದ ಜಗತಿಯ ಮೇಲೆ ಕಟ್ಟಲ್ಪಟ್ಟ ಈ ದೇವಾಲಯ ಬಿಟ್, ಉಪಾನವನ್ನು ಹೊಂದಿದ ಅಧಿಷ್ಠಾನವನ್ನು ಒಳಗೊಂಡಿದೆ. ಕಕ್ಷಾಸನಗಳಿವೆ. ಭಿತ್ತಿ, ಪ್ರಸ್ತಾರವನ್ನೊಳಗೊಂಡಿದೆ. ಮತ್ತು ಪ್ರಸ್ತುತ ಶಿಖರ ಹಾಳಾಗಿದೆ. ಗರ್ಭಗೃಹದಲ್ಲಿ ಕೇಶವನ ಮೂರ್ತಿಗಳಿವೆ.

ಸ್ಥಳ: ದೇಗಲ್ಮಡಿ **ಶೈಲಿ:** ಕಲ್ಯಾಣ ಚಾಲುಕ್ಯರು
ಶಿಲೆ: ಕಪ್ಪುಕಲು **ದೇವಾಲಯ:** ಜೈನ ದೇವಾಲಯ
ಸ್ಥಿತಿ: ಅವಸಾನ **ಕಾಲ:** ಸು.೧೦ನೇ ಶತಮಾನ

ದೇವಾಲಯ ಪೂರ್ವಾಭಿಮುಖವಾಗಿದೆ. ದೇಗಲ್ಮಡಿ ಜೈನ ದೇವಾಲಯದಲ್ಲಿ ತ್ರಿಶಾಖ ಬಾಗಿಲವಾಡವಿದೆ. ಅದರ ಕೆಳಗಿನ ಭಾಗದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಲಲಾಟದ ಮೇಲೆ ಜಿನಬಿಂಬವಿದೆ. ಸ್ತಂಭ ಸರಳವಾಗಿವೆ. ಗರ್ಭಗುಡಿಯ ಪಾರ್ಶ್ವನಾಥ ನುಣುಪಾದ ಶಿಲೆಯಲ್ಲಿದೆ. ಈ ಶಿಲ್ಪ ಪದ್ಮಾಸೀನ ಮತ್ತು ಧ್ಯಾನ ಭಂಗಿಯಲ್ಲಿದೆ. ಉಳಿದ ಜೈನ ತೀರ್ಥಂಕರರ ಮೂರ್ತಿಶಿಲ್ಪಗಳು ಬಿಳಿ ಅಮೃತಶಿಲೆಯಲ್ಲಿವೆ. ತಲೆಭಾಗ ಗುಂಗುರು ಕೂದಲುಗಳನ್ನು ಹೊಂದಿದ್ದು ಗಾಂಧಾರ ಮತ್ತು ಮಥುರಾ ಶೈಲಿಯ ಪ್ರಭಾವವನ್ನು ನಾವು ಈ ಶಿಲ್ಪಗಳಲ್ಲಿ ಕಾಣಬಹುದು.

ಗರ್ಭಗುಡಿಯ ಲಲಾಟದ ಮೇಲೆ ಜಿನಬಿಂಬವಿದೆ. ಗರ್ಭಗುಡಿಯಲ್ಲಿ ಪದ್ಮಾವತಿ ಶಿಲ್ಪ ಮತ್ತು ಕಂಚು, ಹಿತ್ತಾಳೆ ಜಿನಬಿಂಬಗಳು ಇವೆ.[೧೧೨] ದೇವಾಲಯದ ಹೊರಭಾಗದಲ್ಲಿ ಜೈನ ಯಕ್ಷ ಧರಣೇಂದ್ರನ ಶಿಲ್ಪವಿದೆ. ಜೈನ ಪಾದಗಳು, ಹನುಮಂತನ ಮೂರ್ತಿ ಶಿಲ್ಪಗಳಿವೆ. ದೇವಾಲಯದೊಳಗೆ ವೃಷಭನಾಥ, ಪಾರ್ಶ್ವನಾಥರ ಶಿಲ್ಪಗಳಿವೆ.

ಸ್ಥಳ: ಗಡಿ ಕೇಶಾವರ್ **ಶೈಲಿ:** ಕಲ್ಯಾಣ ಚಾಲುಕ್ಯರು

ಶಿಲೆ: ಕಪ್ಪುಕಲು **ದೇವಾಲಯ:** ಪಾರ್ಶ್ವನಾಥ ಜೈನ ಬಸದಿ

ಸ್ಥಿತಿ: ಅವಸಾನ **ಕಾಲ:** ಸು.೧೦ನೇ ಶತಮಾನ

ಬಸದಿಯು ಗರ್ಭಗುಡಿ, ಅಂತರಾಳ, ನವರಂಗ ಮತ್ತು ಮುಖಮಂಟಪವನ್ನೊಳಗೊಂಡಿದೆ. ಮುಖಮಂಟಪದಲ್ಲಿ ಶಾಸನವಿದೆ. ಅಧಿಷ್ಠಾನ, ಭಿತ್ತಿ, ಪ್ರಸ್ತರ ಒಳಗೊಂಡಿದೆ. ಶಿಖರ ಪ್ರಸ್ತುತ ಹಾಳಾಗಿದೆ. ದೇವಾಲಯದ ಸ್ತಂಭಗಳು ಬಾದಾಮಿ ಚಾಲುಕ್ಯರ ಕಾಲದ ಶೈಲಿಯಲ್ಲಿವೆ. ಕಪೋತಬಂಧದ ಅಧಿಷ್ಠಾನದ ಮೇಲೆ ರಾಷ್ಟ್ರಕೂಟರ ಕಾಲದ ವಾಸ್ತುವನ್ನೊಳಗೊಂಡಿದೆ.[೧೧೩] ಗರ್ಭಗುಡಿಯಲ್ಲಿ ಪದ್ಮಾಸೀನ ಭಂಗಿಯಲ್ಲಿ ಸಿಂಹ ಪೀಠದ ಮೇಲೆ ಧ್ಯಾನಸಕ್ತ ಪಾರ್ಶ್ವನಾಥನ ಮೂರ್ತಿ ಇದೆ. ಈ ದೇವಾಲಯವನ್ನು ಮಾಘನಂದಿಯ ಶಿಷ್ಯನಾದ ಮತಿಸೆಟ್ಟಿಯಿಂದ ಜೀರ್ಣೋದ್ಧಾರ ಮಾಡಿದ ವಿಷಯವನ್ನು ಇಲ್ಲಿನ ಶಾಸನ ಉಲ್ಲೇಖಿಸುತ್ತದೆ.[೧೧೪]

ಸ್ಥಳ: ಆತನೂರು **ಶೈಲಿ:** ಕಲ್ಯಾಣ ಚಾಲುಕ್ಯ.

ಶಿಲೆ: ಕಪ್ಪುಶಿಲೆ **ದೇವಾಲಯ:** ಬಸ್ತಿಬೊಮ್ಮಣ್ಣನ ಗುಡಿ

ಸ್ಥಿತಿ: ಕನಿಷ್ಠ **ಕಾಲ:** ಸು.೧೨ನೆಯ ಶತಮಾನ

ದೇವಾಲಯವು ಎತ್ತರದ ಜಗತಿಯ ಮೇಲಿದೆ. ಪ್ರವೇಶದ ಇಕ್ಕೆಲಗಳಲ್ಲಿ ತ್ರುಟಿತ ಕಂಬಗಳಿವೆ. ನವರಂಗ ಮತ್ತು ಗರ್ಭಗುಡಿಯಿದೆ. ಇಪ್ಪತ್ತಾನ್ನಲ್ಕು ತೀರ್ಥಂಕರರ ಶಿಲ್ಪ ಮತ್ತು ಪಾರ್ಶ್ವನಾಥರ ಶಿಲ್ಪಗಳಿವೆ. ಗುಡಿಯ ಪ್ರಾಂಗಣದಲ್ಲಿ ಬಲಿಗಲ್ಲು? ಶಿಲ್ಪಗಳ ಕೆತ್ತನೆ ಎತ್ತರದ ಕಂಬದಲ್ಲಿದೆ. ಕಂಬದ ಕೆಳಪೀಠಭಾಗದಲ್ಲಿ ವೀರ ಹೋರಾಡುತ್ತಿರುವ ಕೆತ್ತನೆ ನಾಲ್ಕು ಭಾಗಗಳಲ್ಲಿವೆ. ಪ್ರಾಂಗಣದ ಕಟ್ಟೆಯ ಕೆಳಗೆ ಮದನಿಕೆಯರ ಶಿಲ್ಪಗಳು, ಸಪ್ತಮಾತೃಕೆಯರ ಶಿಲ್ಪಗಳು, ಮಿಥುನ ಶಿಲ್ಪಗಳು, ವಿಷ್ಣುವಿನ ತೊಡೆಯ ಮೇಲೆ ಕುಳಿತ ಲಕ್ಷ್ಮಿ ಶಿಲ್ಪ, ಉದ್ದನೆಯ ಕೂದಲು ಬಿಟ್ಟು ಕೈಮುಗಿದು ನಿಂತ ಯತಿಯ ಶಿಲ್ಪ, ಚತುರ್ಭುಜಧಾರಿ ವಿಷ್ಣುವಿನ ಶಿಲ್ಪಗಳು, ಗಜಲಕ್ಷ್ಮಿ ಲಲಾಟ ಶಿಲ್ಪ ಮತ್ತು ವಿವಿಧ ಭಂಗಿಯ ಮದನಿಕೆಯರು ಸಂಗೀತ, ನೃತ್ಯ, ತಬಲ, ವಾದ್ಯ ಮತ್ತು ನಾಗ ಹಿಡಿದು ನಿಂತಿರುವಂತೆ ಶಿಲ್ಪಗಳನ್ನು ಕೆತ್ತನೆ ಮಾಡಲಾಗಿದೆ.

ಬಸ್ತಿ ಬೊಮ್ಮನ ಗುಡಿ (ತ್ರಿಕೂಟ) ಪೂರ್ಣ ಜೀರ್ಣೋದ್ಧಾರವಾಗಿದೆ. ಪ್ರಸ್ತುತ ಎರಡು ಗರ್ಭಗುಡಿ, ಒಂದು ನವರಂಗವಿದೆ. ಇದರಲ್ಲಿ ಚೌವಿಶ್ವಸ್ತೀರ್ಥಂಕರ ಪಾರ್ಶ್ವನಾಥ ಪದ್ಮಾಸೀನ ತೀರ್ಥಂಕರ ಎರಡು ಶಿಲ್ಪ ಮತ್ತು ಅಮೃತಶಿಲೆಯಲ್ಲಿರುವ ಸ್ಥಾನಿಕ ಜೀನ ಬಿಂಬಗಳು ಸು.೧೧ನೇ

ಶತಮಾನದ್ದಾಗಿದೆ. ಆದಿನಾಥ ಮತ್ತು ಧರಣೇಂದ್ರ ಯಕ್ಷನ ಶಿಲ್ಪಗಳು ಪತ್ತೆಯಾಗಿವೆ. ಗುಡಿಯ ಮುಂಭಾಗದಲ್ಲಿ ಚೌಕಾಕಾರದ ಸ್ತಂಭದ ನಾಲ್ಕು ಮುಖಗಳಲ್ಲೂ ಹೋರಾಟದಲ್ಲಿ ಮಡಿದ ಯೋಧ ಕೈಲಾಸ ಸೇರಿದ ಅಂಶವನ್ನು ದಾಖಲಿಸುವ ಕೆತ್ತನೆಯಿರುವುದು ವಿಶಿಷ್ಟ. ಇಲ್ಲಿ ಮೂರು ಜೈನ ಶಾಸನಗಳಿವೆ.[೧೧೫]

ಸ್ಥಳ: ಮಣ್ಣೂರು **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಜೈನ ಮಂದಿರ
ಸ್ಥಿತಿ: ಕನಿಷ್ಠ **ಕಾಲ:** ಸು.೧೨ನೆಯ ಶತಮಾನ

ಪದ್ಮಾವತಿ ಯಕ್ಷಿಯ ಗುಡಿ ಎಂದೇ ಕರೆಯಲ್ಪಡುವ ಪಾರ್ಶನಾಥ ತೀರ್ಥಂಕರನ ಜೈನ ಮಂದಿರವಿದೆ. ಮಹಾವೀರ, ಪಾರ್ಶ್ವನಾಥ, ಪದ್ಮಾವತಿ ಹಾಗೂ ಜ್ವಾಲಾಮಾಲಿನಿಯರ ಶಿಲ್ಪಗಳು ಮತ್ತು ಕಂಚಿನ ಮೂರ್ತಿಗಳಿವೆ.[೧೧೬]

೪.೪.೪. ಶಾಕ್ತ ದೇವಾಲಯಗಳು

ಸ್ಥಳ: ಬಿದನೂರು **ಶೈಲಿ:** ರಾಷ್ಟ್ರಕೂಟ
ಶಿಲೆ: ಕಪ್ಪು ಕಲ್ಲು **ದೇವಾಲಯ:** ಯಲ್ಲಮ್ಮಾ ದೇವರಗುಡಿ
ಸ್ಥಿತಿ: ಕನಿಷ್ಠ, **ಕಾಲ:** ಸು.೧೦ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯ ನವರಂಗ, ಅಂತರಾಳ ಮತ್ತು ಗರ್ಭಗುಡಿಯನ್ನು ಹೊಂದಿದೆ. ಗರ್ಭಗುಡಿಯಲ್ಲಿ ಕಲ್ಲಿನ ಗುಂಡುಗಳಿವೆ. ಸಾದಾ ಬಾಗಿಲವಾಡ, ಲಲಾಟ ಖಾಲಿಯಿದೆ. ೧೭ನೆಯ ಶತಮಾನದ ಕಟ್ಟಡ ಇದಾಗಿದೆ. ಕಂಬಗಳ ತಳಭಾಗ ಸಾದಾ ಆಯತಾಕಾರವಾಗಿ ಬಂದಿವೆ. ಕಮಾನಾಕಾರದಲ್ಲಿ ಗುಡಿಯ ಬಾಗಿಲಿನ ಹೊರ ಭಾಗಗಳನ್ನು ಕಟ್ಟಲಾಗಿದೆ.

ಸ್ಥಳ: ಪಡಸಾವಳಗಿ **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ಸರಸ್ವತಿ
ಸ್ಥಿತಿ: ಕನಿಷ್ಠ **ಕಾಲ:** ಸು.೧೧ನೆಯ ಶತಮಾನ

ಗುಡಿಯ ಬಲಭಾಗದಲ್ಲಿ ಸರಸ್ವತಿ ಗುಡಿಯಿದೆ. ಗರ್ಭಗೃಹದಲ್ಲಿ ಪದ್ಮಾಸೀನ ಸರಸ್ವತಿಯ ಸುಂದರ ಶಿಲ್ಪವಿದೆ. ಇದರ ಬಾಗಿಲವಾಡವು ಚತುರ್ ಶಾಖಾಲಂಕೃತವಾಗಿದೆ. ಲಲಾಟದಲ್ಲಿ ಗಣಪತಿ ಕೆತ್ತನೆಯಿದೆ. ಅರ್ಧ ಮಂಟಪದ ಗೋಡೆಯ ಮೇಲೆ ನಾಟ್ಯ ಗಣಪನ ಶಿಲ್ಪವಿದೆ. ಇದು ಹಿಂದೆ ಶಾಲೆಯಾಗಿದ್ದಂತೆ ತೋರುತ್ತದೆ. ಊರಲ್ಲಿ ಶಿಥಿಲವಾಗಿರುವ ಸೋಮೇಶ್ವರ, ಶಂಭುಲಿಂಗೇಶ್ವರ ದೇವಾಲಯಗಳಿವೆ. ಚನ್ನಕೇಶವ ದೇವಾಲಯವು ಅಂತರ್ಗತ ಗುಡಿಯಾಗಿದ್ದು ನೆಲಮಾಳಿಗೆಯಲ್ಲಿ ಸು.೧೨ನೆಯ ಶತಮಾನಕ್ಕೆ ಸೇರಿದ. ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಚನ್ನಕೇಶವನ ಆಳೆತ್ತರದ ಭವ್ಯ ಶಿಲ್ಪವಿದೆ.[೧೧೭]

ಸ್ಥಳ: ಬೆಳಂಬಗಿ   ಶೈಲಿ: ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ   ದೇವಾಲಯ: ವಕ್ರತಾಯಮ್ಮನ,
ಸ್ಥಿತಿ: ಕನಿಷ್ಠ,   ಕಾಲ: ಸು.೧೧ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯವು ಸಂಪೂರ್ಣ ಹಾಳಾಗಿದೆ. ಗರ್ಭಗೃಹದಲ್ಲಿ ಸುಮಾರು ಎರಡು ಅಡಿ ಎತ್ತರದ ೧೬ನೆಯ ಶತಮಾನಕ್ಕೆ ಸೇರಿದ ಮಹಿಷಾಸುರಮರ್ದಿನಿ ವಿಗ್ರಹವಿದೆ. ಸಭಾಮಂಟಪದಲ್ಲಿರುವ ನಾಲ್ಕು ಕಂಬಗಳ ಕೆಳಗೆ, ಮೇಲೆ, ಚೌಕ, ಮಧ್ಯ ೮-೧೬-೮ ಭಾಗದ ಪಟ್ಟಿಕೆ ವೃತ್ತಾಕಾರದ ಮುಚ್ಚಳ ಚೌಕಾಕಾರದ ಫಲಕ, ಬೋದಿಗೆಗಳಿಂದ ಕೂಡಿವೆ.[೧೧೮]

ಸ್ಥಳ: ಮಣ್ಣೂರು   ಶೈಲಿ: ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ   ದೇವಾಲಯ: ಯಲ್ಲಮ್ಮ
ಸ್ಥಿತಿ: ಕನಿಷ್ಠ   ಕಾಲ: ಸು.೧೨ನೆಯ ಶತಮಾನ

ಉತ್ತರಾಭಿಮುಖವಾಗಿರುವ ದೇವಾಲಯ ಎತ್ತರ ಜಗತಿಯ ಮೇಲೆ ನಿರ್ಮಾಣವಾಗಿದೆ. ದೇವಾಲಯ ಗರ್ಭಗುಡಿ, ಅಂತರಾಳ ಮತ್ತು ಸಭಾಮಂಟಪಗಳಿವೆ. ಗರ್ಭಗೃಹದ ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಪದ್ಮ, ಹೂ, ಬಳ್ಳಿಯ ಅಲಂಕೃತ ಅರ್ಧಗಂಬ, ಯಾಳಿಯ ಕೆತ್ತನೆಯಿವೆ. ದ್ರಾವಿಡ, ನಾಗರ ಶಿಖರ ಪಟ್ಟಿಕೆಗಳ ನಡುವೆ ಕಾಲೆತ್ತಿ ನಿಂತ ಸಿಂಹಗಳಿವೆ. ಇಕ್ಕೆಲಗಳಲ್ಲಿ ಪದ್ಮ-ಗದಾ ಹಿಡಿದು ನಿಂತಿರುವ ದ್ವಾರಪಾಲಕರ ಮತ್ತು ಚಾಮರಧಾರಿಯರ ಶಿಲ್ಪಗಳಿವೆ. ಗರ್ಭ ಗುಡಿಯಲ್ಲಿ ಕಪಾಲ ಹಿಡಿದು ಅಭಯಹಸ್ತದಲ್ಲಿರುವ, ಯಲ್ಲಮ್ಮನ ಶಿಲ್ಪ ಸು.೧೭ನೆಯ ಶತಮಾನಕ್ಕೆ ಸೇರಿದ್ದಾಗಿದೆ. ಸಭಾಮಂಟಪದ ಭುವನೇಶ್ವರಿಯಲ್ಲಿ ನಟರಾಜ, ಸುತ್ತಲೂ ಅಷ್ಟದಿಕ್ಪಾಲಕರ ಪತ್ನಿ ಸಮೇತರಾಗಿ ತಮ್ಮ ವಾಹನಗಳ ಮೇಲೆ ಕುಳಿತಿದ್ದಾರೆ. ಹಿಂದ್ಸರಿತಗಳಲ್ಲಿ ಸು.೪ ಅಡಿ ಎತ್ತರದ ನೃತ್ಯ, ಸಂಗೀತಕಾರರು ಮತ್ತು ವಿವಿಧ ಭಂಗಿಯಲ್ಲಿರುವ ಮದನಿಕೆಯರು, ಗಣೇಶ, ಶಿವ ಮತ್ತಿತರೆ ಶಿಲ್ಪಗಳಿವೆ.[೧೧೯]

ಸ್ಥಳ: ಚಿನಮಗೇರಿ   ಶೈಲಿ: ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ   ದೇವಾಲಯ: ಅಂಬಾಭವಾನಿ
ಸ್ಥಿತಿ: ಕನಿಷ್ಠ   ಕಾಲ: ಸು೧೨ನೆಯ ಶತಮಾನ

ಪೂರ್ವಾಭಿಮುಖವಾಗಿರುವ ದೇವಾಲಯದಲ್ಲಿ ಗರ್ಭಗೃಹ ಮತ್ತು ಅಂತರಾಳಗಳಿವೆ. ಗರ್ಭಗುಡಿಯೊಳಗೆ ಶಿವಲಿಂಗ, ಸೂರ್ಯ, ಮಹಿಷಾಸುರಮರ್ದಿನಿ, ಕುದುರೆ ಮೇಲೆ ಕುಳಿತ ವೀರನ ಶಿಲ್ಪಗಳಿವೆ.[೧೨೦]

ಸ್ಥಳ: ಚಿನ್ನಳ್ಳಿ ಶೈಲಿ: ಕಲ್ಯಾಣ ಚಾಲುಕ್ಯ

ಶಿಲೆ: ಕಪ್ಪುಶಿಲೆ ದೇವಾಲಯ: ಭ್ರಮರಾಂಬಿಕಾದೇವಿ

ಸ್ಥಿತಿ: ಕನಿಷ್ಠ ಕಾಲ: ಸು.೧೨ನೆಯ ಶತಮಾನ

ದಕ್ಷಿಣಾಭಿಮುಖವಾಗಿರುವ ದೇವಾಲಯದ ನವರಂಗದಲ್ಲಿ ಸಿಂಹ ಶಿಲ್ಪವಿದೆ. ಗರ್ಭಗುಡಿಯ ಬಾಗಿಲವಾಡಕ್ಕೆ ಚತುರ್ದಳ, ಕುಡ್ಯಸ್ತಂಭ ಮತ್ತು ಕನಕ ದಳದ ಕೆತ್ತನೆಗಳಿವೆ. ಅಧಿಷ್ಠಾನ ಭಾಗದಲ್ಲಿ ಚತುರ್ದಳ, ಸಂಗೀತ, ನೃತ್ಯ ಮತ್ತು ವಾದ್ಯ ಬಾರಿಸುವವರ ಇಕ್ಕೆಲಗಳಲ್ಲಿ ಕುಡ್ಯಸ್ತಂಭಗಳ, ಸಿಂಹವೆಯ್ಯಾವಳಿಗಳ ಕೆತ್ತನೆಗಳಿವೆ. ಗುಡಿಯ ಹೊರ ಭಿತ್ತಿ ಭಾಗದಲ್ಲಿ ಮದನಿಕೆಯರು, ಮಿಥುನ ಶಿಲ್ಪಗಳು, ಸಂಗೀತಗಾರರ, ನೃತ್ಯ ಮಾಡುವವರ ಕೆತ್ತನೆಗಳು ದೇವಾಲಯದ ಹೊರ ಭಾಗದಲ್ಲಿದೆ.

ಗರ್ಭಗುಡಿಯ ಪ್ರವೇಶದ್ವಾರಕ್ಕೆ ಪದ್ಮಸಾಲು, ಅರ್ಧಗಂಬ, ಮೇಲ್ಭಾಗ ಪಟ್ಟಿಕೆಗಳ ಕೆತ್ತನೆಯಿವೆ. ಒಳಗೆ ಶಂಖ, ಚಕ್ರ, ಕಮಲ ಹಿಡಿದಿರುವ ಇತ್ತೀಚಿನ ಶಿಲ್ಪವಿದೆ. ಅಂತರಾಳದ ಗೋಡೆ ಜೀರ್ಣೋದ್ಧಾರಗೊಳಿಸಿದ್ದು, ಮುಖ ಮಂಟಪದ ಪ್ರವೇಶದಲ್ಲಿ ಆನೆಗಳಿಂದ ಬಂಧಿತವಾಗಿರುವ ಸೋಪಾನಗಳನ್ನು ರಚಿಸಲಾಗಿದೆ.[೨೦]

ಸ್ಥಳ: ನಿಡಗುಂದ ಶೈಲಿ: ಶಾಲಾ

ಶಿಲೆ: ಕಪ್ಪುಶಿಲೆ ದೇವಾಲಯ: ಕಾಳಮ್ಮನ ಗುಡಿ

ಸ್ಥಿತಿ: ಅವಸಾನ ಕಾಲ: ಸು.೧೦ನೇ ಶತಮಾನ

ಶಾಲಾ ಮಾದರಿ ಶಿಖರವುಳ್ಳ ಈ ದೇವಾಲಯ ಒಂದೇ ಸಾಲಿನಲ್ಲಿ ಎರಡು ಗರ್ಭಗೃಹಗಳಿವೆ. ಎರಡು ಪ್ರವೇಶ ದ್ವಾರಗಳನ್ನೊಳಗೊಂಡಿದೆ. ಆದರೆ ಪ್ರಸ್ತುತ ಒಂದೇ ದ್ವಾರ ತೆರೆದಿದ್ದು, ದಕ್ಷಿಣಾಭಿಮುಖ ದ್ವಾರ ಮುಚ್ಚಲ್ಪಟ್ಟಿದೆ. ದೇವಾಲಯದ ಭಿತ್ತಿಭಾಗ ಕಿಟಕಿಗಳಿಂದ ಕೂಡಿದೆ. ಶಿಖರವು ಸುಣ್ಣದ ಕಲ್ಲಿನಿಂದ ರಚಿಸಲ್ಪಟ್ಟಿದೆ.

ಕಾಳಮ್ಮ ದೇವಿಯ ಗುಡಿ ತಳಭಾಗದಲ್ಲಿದೆ. ಸುಂದರವಾದ ಶಿಲ್ಪಗಳುಳ್ಳ ನವರಂಗದ ೨೪ ಕಂಬಗಳು ಮೂರು ಸಾಲಿನಲ್ಲಿವೆ. ಆಯತಾಕಾರದ ನವರಂಗದ ಕಂಬಗಳಲ್ಲಿ ರಾಮಾಯಣ, ಮಹಾಭಾರತದ ಕಿರಾತಾರ್ಜುನ ವಿಜಯ ಕಥಾವಳಿ ಪ್ರಸಂಗ, ಸಮುದ್ರ ಮಂಥನ ಶಿಲ್ಪ ಲಕ್ಷ್ಮಿ ಉದ್ಭವ, ಲಕ್ಷ್ಮಿ ಮತ್ತು ವಿಷ್ಣುವಿನ ಕಲ್ಯಾಣ ತೋರಿಸುವ ಶಿಲ್ಪಗಳಿವೆ. ಪಂಚತಂತ್ರ ಕಥೆಗಳು ಮತ್ತು ಮಿಥುನ ಶಿಲ್ಪಗಳು ಕುಡ್ಯಸ್ತಂಭದಲ್ಲಿವೆ. ಅಲ್ಲದೆ ಕಮಲದ ಮೇಲೆ ಹಂಸದ ಮತ್ತು ಮೀನಿನ ಕೆತ್ತನೆಗಳಿವೆ. ಪ್ರವೇಶ ದ್ವಾರದಲ್ಲಿ ನವರಂಗದ ಬಲಕಂಬದ ಕೆಳಭಾಗದಲ್ಲಿ ಒಂದು ಶಾಸನವಿದೆ. ಈ ಶಾಸನ ದತ್ತಿ ನೀಡಿದ ಬಗ್ಗೆ ತಿಳಿಸುತ್ತವೆ.[೧೨೨] ಕಂಬಗಳ ಮೇಲೆ ಮುತ್ತಿನ ಮಾಲೆ, ಹೂ, ಬಳ್ಳಿ, ದೇವರ ಮತ್ತು ಕಥಾವಳಿ ಶಿಲ್ಪಗಳಿವೆ. ಅಲ್ಲದೆ ಗರುಡ, ಆನೆ, ಸ್ತ್ರೀ ದೇವಕನ್ಯೆಯರ, ದುರ್ಗಾಮಾತೆ, ರಾಮಲಕ್ಷ್ಮಣ, ಸುಗ್ರೀವರೊಂದಿಗಿನ ಭೇಟಿ, ರಾಮ ಬಾಣ

ಹಿಡಿದು ನಿಂತಂತೆ, ಪಕ್ಕದ ಮಾಲೆಯ ಹತ್ತು ಕೈಗಳ ರಾವಣ ತಲೆ ಕೆಳಗಾಗಿ ಬೀಳುತ್ತಿರುವಂತಿದೆ. ರಾಮಸೀತೆಯರಿಗೆ ನಮಸ್ಕರಿಸುತ್ತಿರುವ ಹನುಮಂತ ಕೆತ್ತನೆ ಹೀಗೆ ನವರಂಗದ ಕಂಬಗಳಲ್ಲಿ ಕಥಾವಳಿ ಶಿಲ್ಪಗಳಿವೆ. ಎರಡು ಗರ್ಭಗುಡಿಯೊಳಗೆ ಒಂದರಲ್ಲಿ ಕಾಳಿಕಾಮೂರ್ತಿ ಮತ್ತೊಂದರಲ್ಲಿ ಶಿವಲಿಂಗವಿದೆ. ಕಾಳಮ್ಮನ ಗರ್ಭಗುಡಿಯ ಬಾಗಿಲವಾಡ, ಚತುರ್ಶಾಖೆಯಿಂದ ಕೂಡಿದೆ. ನವರಂಗದಲ್ಲಿ ಒಂದು ಪೀಠ ಮತ್ತು ಜೈನ ತೀರ್ಥಂಕರ ಶಿಲ್ಪವಿದೆ. ಇಲ್ಲಿ ದುರ್ಗಾ, ಸಪ್ತಮಾತೃಕಾ ಮತ್ತು ಸೂರ್ಯ ಶಿಲ್ಪಗಳಿವೆ.[೨೨]

೪.೪.೫. ಇತರೆ ದೇವಾಲಯಗಳು

ಸ್ಥಳ: ಇಟಗಾ(ಕೆ)	**ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ	**ದೇವಾಲಯ:** ಶಂಕರ ನಾರಾಯಣ ಗುಡಿ
ಸ್ಥಿತಿ: ಕನಿಷ್ಠ	**ಕಾಲ:** ಸು.೧೧ನೆಯ ಶತಮಾನ

ದೇವಾಲಯದ ಅಂತರಾಳದ ಕಂಬಗಳು ಕಲ್ಯಾಣ ಚಾಲುಕ್ಯರ ಕಾಲದ ಶೈಲಿಯಲ್ಲಿವೆ. ಗರ್ಭಗುಡಿಯ ಬಾಗಿಲವಾಡ ಬೃಹತ್ತಾದ ಅರಗಲ್ಲಿನಿಂದ ನಿಲ್ಲಿಸಿದೆ. ಗರ್ಭಗುಡಿಯಲ್ಲಿ ಚತುರ್ಬಾಹು ಶಂಕರ ಮತ್ತು ಶಂಕರಿಯ ಮೂರ್ತಿ ಉಪಸ್ಥಿತಿಯಲ್ಲಿದ್ದು ನಾರಾಯಣನ ಮೂರ್ತಿಯ ಇಕ್ಕೆಲಗಳಲ್ಲಿವೆ. ಶಂಕರನ ಹಿಂದಿನ ಕೈಗಳು ತ್ರಿಶೂಲ, ಡಮರು ಹಿಡಿದಿವೆ. ಮುಂದಿನ ಕೈಗಳು ಕಪೋತ(ಎಡಕ್ಕೆ), ಬಲಕ್ಕೆ ಖಡ್ಗ? ಹಿಡಿದಿವೆ. ಅದರ ಪೀಠ ಭಾಗದಲ್ಲಿ ಟಗರಿನ ಮುಖ ಕೆತ್ತಲಾಗಿದೆ. ಶಂಕರಿಯ ಶಿಲ್ಪ ನಾರಾಯಣನ ಎಡಕ್ಕಿದೆ. ಹಿಂದಿನ ಕೈಗಳು ಪರಶು, ತ್ರಿಶೂಲ, ಹಿಡಿದಿವೆ. ಮುಂದಿನ ಕೈಗಳು ಕಪೋತ(ಎಡಕ್ಕೆ), ಬಲಕ್ಕೆ ಖಡ್ಗ? ಹಿಡಿದಂತೆ ಕೆತ್ತಲಾಗಿದೆ. ಸ್ಥಾನಿಕ ನಾರಾಯಣ ಶಿಲ್ಪದ ಹಿಂದಿನ ಕೈಯಲ್ಲಿ ಶಂಖ, ಚಕ್ರ, ಮುಂದಿನ ಕೈ ಅಭಯಹಸ್ತ ಮತ್ತು ಗದಾಧಾರಿಯಾಗಿದೆ. ಬಲಕ್ಕೆ ಗರುಡ ಶಿಲ್ಪವಿದೆ.

ಸ್ಥಳ: ಪಟ್ಟಣಾ	**ಶೈಲಿ:** ಇಂಡೋ ಸಾರ್ಸೇನಿಕ್
ಶಿಲೆ: ಕಪ್ಪುಶಿಲೆ	**ದೇವಾಲಯ:** ನಂದಿ ಗುಡಿ
ಸ್ಥಿತಿ: ಕನಿಷ್ಠ	**ಕಾಲ:** ಸು.೧೬ನೆಯ ಶತಮಾನ,

ಊರ ಹೊರಗಿರುವ ನಂದಿ ದೇವಾಲಯದ ಶಿಖರ ನಕ್ಷತ್ರಾಕಾರವಾಗಿದ್ದು ತ್ರುಟಿತವಾಗಿದೆ. ಗೋಡೆಯ ಮೇಲ್ಭಾಗವು ಕಮಲ ದಳದ ಅಲಂಕಾರಿಕೆಯಿಂದ ಕೂಡಿದೆ. ಗರ್ಭಗುಡಿ ಮಾತ್ರ ಉಳಿದಿದ್ದು ಅದರಲ್ಲಿ ಚಿಕ್ಕದಾದ ನಂದಿ ಶಿಲ್ಪವಿದೆ. ಗರ್ಭಗುಡಿಯ ಬಾಗಿಲವಾಡ ಸಾದಾಯಿದೆ. ಅದರ ಮುಂದೆ ಶೈವ ದ್ವಾರಪಾಲಕರ ತ್ರುಟಿತ ಶಿಲ್ಪವಿದೆ. ತ್ರುಟಿತ ನಂದಿಗಳ, ಲಿಂಗ ಪೀಠ, ನಾಗಶಿಲ್ಪ, ತ್ರುಟಿತ ಕಂಬಗಳು ಮತ್ತು ಶಿವಲಿಂಗ ಇದೆ. ಪವೇಶದ್ವಾರದ ಇಕ್ಕೆಲಗಳಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ತ್ರುಟಿತ ಕಂಬಗಳಿವೆ. ಗರ್ಭಗುಡಿಯ ಎಡಕ್ಕೆ ಅಧಿಷ್ಠಾನದಲ್ಲಿ ಗಣಪತಿ ಶಿಲ್ಪವಿದೆ. ಶೈವ ದೇವಾಲಯ ನಾಶವಾಗಿದೆ ಎಂಬುದಕ್ಕೆ ಅಲ್ಲಲ್ಲಿ ಬಿದ್ದ ಅವಶೇಷಗಳೇ ಸಾಕ್ಷಿಯಾಗಿವೆ.

ಊರೊಳಗೆ ದೊರೆತ ತ್ರುಟಿತ ಕಂಬಗಳು, ಕಂಬ ಪೀಠ, ಶಂಕರಲಿಂಗೇಶ್ವರ ಮಠದಲ್ಲಿ ದೊರೆತ ಸಿಂಹ ವೆಯ್ಯಾವಳಿ, ಬೃಹತ್ ಲಿಂಗ (ಬಿಳಿ ಮಿಶ್ರಿತ ನೀಲಿ ಕಲ್ಲಿನ) ಗಜ ಪಟ್ಟಿಕೆ, ಸುತ್ತಲೂ ಹೂವಿನ ಮಧ್ಯೆದಲ್ಲಿ ಶಿವಲಿಂಗ, ಪ್ರಾಚೀನ ಶೈವ ದೇವಾಲಯವಿತ್ತು ಎನ್ನುವುದಕ್ಕೆ ಪ್ರಮುಖ ಕುರುಹುಗಳಾಗಿವೆ.

ಸ್ಥಳ: ಸಣ್ಣೂರು **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ನಂದಿ ಗುಡಿ
ಸ್ಥಿತಿ: ಕನಿಷ್ಠ, **ಕಾಲ:** ಸು.೧೨ನೆಯ ಶತಮಾನ

ರಾಮಲಿಂಗೇಶ್ವರ ದೇವಸ್ಥಾನದ ಪ್ರವೇಶದಲ್ಲಿ ಪುಷ್ಕರಣಿಯಿದೆ. ಹಿಂದೆ ಚೌಕ ಮುಂದಿನ ಪ್ರವೇಶದ ಪುಷ್ಕರಣಿ ಆಯತಾಕಾರದಲ್ಲಿದೆ. ದೀಪ ಸ್ತಂಭದ ಬಳಿಯಲ್ಲಿ ಎರಡು ವೀರಗಲ್ಲುಗಳೂ, ಎರಡು ಗಣಪತಿಯ ಶಿಲ್ಪಗಳು, ನಾಗಶಿಲ್ಪವಿದೆ. ಕೆಂಪು ಕುಸರಿಕಲ್ಲುಗಳಲ್ಲಿ ಶಿಲ್ಪಗಳು ಕೆತ್ತಲಾಗಿದೆ. ನಂದಿ ಶಿಲ್ಪವೂ ಕಪ್ಪು ಮೃದುಕಲ್ಲಿನಲ್ಲಿ ಕೆತ್ತಲಾಗಿದೆ. ದೇವಾಲಯದ ನವರಂಗ ಭಾಗದಲ್ಲಿ ಹಿಂದಿ ಭಾಷೆಯ ಒಂದು ಶಾಸನವು ಸು.೧೭-೧೮ನೆಯ ಶತಮಾನದ್ದಾಗಿದೆ. ಅದು ನೆಲದ ಮೇಲಿದೆ. ನವರಂಗವು ನಾಲ್ಕು ಕಂಬಗಳಿಂದ ಕೂಡಿದೆ. ಸಾದಾ ಚಾಲುಕ್ಯ ಶೈಲಿಯ ಕಂಬಗಳ ಮೇಲಿನ ಭಾಗದಲ್ಲಿ ಬೋದಿಗೆಗಳಿವೆ. ನಂತರ ಚೌಕ ಪಟ್ಟಿಕೆ, ದುಂಡಾದ ಪಟ್ಟಿಕೆಯಿದೆ. ಅದರ ಕೆಳಭಾಗ ಆಯತ, ಚೌಕ ಕೆತ್ತನೆಗಳಿಂದ ಕಂಬ ನಿರ್ಮಾಣಗೊಂಡಿವೆ.

ಗರ್ಭಗುಡಿಯ ಪ್ರವೇಶದ್ವಾರದ ಲಲಾಟದ ಮೇಲ್ಭಾಗದಲ್ಲಿ ಎರಡು ನಂದಿಗಳ ಮಧ್ಯೆ ಶಿವಲಿಂಗವಿದೆ. ಲಲಾಟ ಮತ್ತು ಬಾಗಿಲವಾಡಗಳು, ಬಾಗಿಲು ಯಾವ ಕೆತ್ತನೆಯಿಲ್ಲದೆ ಸಾದಾ ಇವೆ. ಗರ್ಭಗುಡಿಯಲ್ಲಿ ಶಿವಲಿಂಗ ಮತ್ತು ಅದರ ಹಿಂದೆ ಸಪ್ತಮಾತೃಕೆಯರ ಕಪ್ಪುಶಿಲೆಯ ಇದೆ. ಗರ್ಭಗುಡಿಯ ದ್ವಾರದ ಬಾಗಿಲವಾಡಗಳ ಪಕ್ಕದಲ್ಲಿ ಅರ್ಧಕಂಬಗಳಿವೆ. ಭುವನೇಶ್ವರಿ ಅಷ್ಟಾಕೃತಿಯಲ್ಲಿ ಸಾದಾ ಇವೆ. ದೇವಾಲಯದ ಪ್ರವೇಶದ್ವಾರದ ಲಲಾಟದ ಮೇಲೆ ಸು.೧೫-೧೬ನೆಯ ಶತಮಾನದಲ್ಲಿ ಕೆತ್ತಲಾಗಿರುವ ಶಿಲ್ಪಗಳಿವೆ. ಲಲಾಟದ ಬಲಭಾಗಕ್ಕೆ ಯತಿಯು ಶಿವಲಿಂಗವನ್ನು ಪೂಜಿಸುತ್ತಿರುವ ಅದರ ಪಕ್ಕದಲ್ಲಿ ಭಕ್ತನು ಹೂವಿನಹಾರ ಹಾಕುತ್ತಿರುವ, ತಟ್ಟೆಯಲ್ಲಿ ಹೂವು, ಹಣ್ಣು ಹಿಡಿದಿರುವ ಸ್ತ್ರೀ, ನೃತ್ಯ ಮಾಡುತ್ತಿರುವ ಸ್ತ್ರೀ ಶಿಲ್ಪ ಕೆತ್ತನೆಯಿದೆ. ವೀಣೆ ನುಡಿಸುತ್ತಿರುವ ಸಂಗೀತ ವಾದ್ಯ, ಹಾಡುವವ, ಸಿಂಹಾಸನದ ಮೇಲೆ ಕುಳಿತ ಸುಬ್ರಹ್ಮಣ್ಯ, ಶಿವ-ಪಾರ್ವತಿ?, ಸ್ಥಾನಿಕ ಗಣೇಶನ ಶಿಲ್ಪಗಳ ಕೆತ್ತನೆಯಿದೆ.

ಸ್ಥಳ: ಮಾಶಾಳ **ಶೈಲಿ:** ಕಲ್ಯಾಣ ಚಾಲುಕ್ಯ
ಶಿಲೆ: ಕಪ್ಪುಶಿಲೆ **ದೇವಾಲಯ:** ನರಸಿಂಹೇಶ್ವರ
ಸ್ಥಿತಿ: ಕನಿಷ್ಠ **ಕಾಲ:** ಸು.೧೧ನೆಯ ಶತಮಾನ

ನರಸಿಂಹ-ಈಶ್ವರ ದೇವಾಲಯ ಇದೊಂದು ದ್ವಿಕೂಟ ದೇವಾಲಯವಾಗಿದೆ. ಇದರ ಗರ್ಭಗೃಹಗಳಲ್ಲಿ ನರಸಿಂಹ ಹಾಗೂ ಶಿವಲಿಂಗಗಳಿದ್ದು ಇವುಗಳ ಬಾಗಿಲವಾಡಗಳು

ತ್ರಿಶಾಖಾಲಂಕೃತವಾಗಿವೆ. ಲಲಾಟದಲ್ಲಿ ಗಣಪತಿ ಶಿಲ್ಪವಿದೆ. ನವರಂಗವನ್ನು ಪ್ರವೇಶಿಸಲು ದಕ್ಷಿಣದಲ್ಲಿ ಪ್ರವೇಶದ್ವಾರವಿದೆ. ನವರಂಗ ಸಂಪೂರ್ಣ ನಾಶವಾಗಿದೆ. ದೇಗುಲದ ಗರ್ಭಗೃಹಗಳಿಗೆ ಕದಂಬನಾಗರ ಶಿಖರಗಳಿದ್ದು, ಜೀರ್ಣಾವಸ್ಥೆಯಲ್ಲಿವೆ. ಗುಡಿಯ ಆವರಣದಲ್ಲಿ ಕೇಶವ ಹಾಗೂ ಗಣಪತಿಯ ಶಿಲ್ಪಗಳಿವೆ.[೧೨೪] ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಗರ್ಭಗೃಹಗಳು ಮತ್ತು ಅಂತರಾಳಗಳಿದ್ದು ಅವುಗಳಿಗೆ ಹೊಂದಿಕೊಂಡಂತೆ ಸಭಾಮಂಟಪವಿದೆ. ಪೂರ್ವ ಗರ್ಭಗೃಹದ ಲಲಾಟದಲ್ಲಿ ಗಣೇಶ ಮತ್ತು ಶೈವದ್ವಾರಪಾಲಕರು, ಚಾಮರಧಾರಿಯರ ಶಿಲ್ಪಗಳಿವೆ. ಒಳಗೆ ಸು. ನಾಲ್ಕು ಅಡಿ ಎತ್ತರದ ನರಸಿಂಹನ ಮೂರ್ತಿಯಿದೆ. ಕುಳಿತ ಭಂಗಿಯಲ್ಲಿರುವ ನರಸಿಂಹನ ಕೈಗಳು ಹಾಳಾಗಿದ್ದು, ತೊಡೆಯ ಮೇಲೆ ಪ್ರಹ್ಲಾದನನ್ನು ಮಲಗಿಸಿಕೊಂಡು ಹೊಟ್ಟೆ ಬಗಿಯುತ್ತಿದ್ದಾನೆ.[೧೨೫]

ದೇವಾಲಯಗಳು ಶಿಕ್ಷಣ, ಆರ್ಥಿಕ ಕೇಂದ್ರಗಳ ಮೂಲಗಳಾಗಿದ್ದವು. ಅವುಗಳ ಹುಟ್ಟು ಮತ್ತು ಬೆಳವಣಿಗೆ ದೇವಾಲಯದಲ್ಲಾಯಿತು. ಸಾಮಾಜಿಕ ವ್ಯವಸ್ಥೆಯಲ್ಲಿ, ಸಾರ್ವಜನಿಕರು, ಕುಟುಂಬಗಳು ಮತ್ತು ಪತಿ–ಪತ್ನಿಯರು ಹೇಗಿರಬೇಕು? ಎಂಬುದರ ಬಗ್ಗೆ ತಿಳಿಸುತ್ತಿದ್ದವು. ಸಮಾಜ, ರಾಜ್ಯಾಡಳಿತ ನಿಯಂತ್ರಿಸುವ ಕಾರ್ಯವನ್ನು ದೇವಾಲಯಗಳು ಮಾಡುತ್ತಿದ್ದವು. ಜನರ ಜೀವನ ಮಟ್ಟ, ಸಾಮಾಜಿಕ ವ್ಯವಸ್ಥೆಯ ಬಗ್ಗೆ, ಸಾಂಸ್ಕೃತಿಕ ಅಧ್ಯಯನಕ್ಕೆ ಇವು ಪೂರಕವಾಗಿವೆ. ದೇವಾಲಯಗಳ ಭಿತ್ತಿ, ಅಧಿಷ್ಠಾನಗಳಲ್ಲಿ ಕೆತ್ತಲ್ಪಟ್ಟ ಶಿಲ್ಪಗಳಿಂದ ನಮಗೆ ವಿವಿಧ್ಯೋನ್ಮುಖ ಅಧ್ಯಯನಕ್ಕೆ ಸಹಾಯಕವಾಗಿವೆ. ಪ್ರಾಥಮಿಕ ಹಂತದ ಶಿಕ್ಷಣವು ಆರಂಭದಲ್ಲಿ ದೇವಾಲಯ ಮತ್ತು ಮಠಗಳಲ್ಲಿ ಕಂಡು ಬರುತ್ತಿದ್ದವು. ನಂತರ ಶಿಕ್ಷಣ ಕೇಂದ್ರಗಳಾಗಿ ಬ್ರಹ್ಮಪುರಿ, ಅಗ್ರಹಾರ, ಮಠಗಳು, ಘಟಿಕಸ್ಥಾನಗಳು ಬೆಳೆದು ಬಂದವು. ಹೀಗೆ ದೇವಾಲಯಗಳು ಶಿಕ್ಷಣದ ಮೂಲ ಕೇಂದ್ರಗಳಾದವು. ಸಾಮಾಜಿಕ ಅಂಧ ಶ್ರದ್ಧೆಗಳ ಮೂಲ ಕೇಂದ್ರವೂ ದೇವಾಲಯಗಳೇ, ಅಂದರೆ ದೇವದಾಸಿ ಪದ್ಧತಿ, ಕಂಬದ ಸೂಳೆಯರ ಹುಟ್ಟು ಸಹ ಇಲ್ಲಿಯೇ ಆಗಿತ್ತು. ದೇವಾಲಯಗಳು ಹೊಸ ಕಾರ್ಮಿಕ ವರ್ಗ ಅಥವಾ ಜಾತಿಗಳ ಹುಟ್ಟಿಗೂ ಕಾರಣವಾಗಿದೆ. ಹೂಗಾರರು, ಬಾಜಿಸುವವರು, ಶಂಖ, ವಾದ್ಯ, ಜಾಗಟೆ ಬಾರಿಸುವವರು ಇತ್ಯಾದಿ.

ಸ್ಥಳ: ಹೇರೂರು(ಬಿ) **ಶೈಲಿ:** ಕಲ್ಯಾಣ ಚಾಲುಕ್ಯ,

ಶಿಲೆ: ಕಪ್ಪುಶಿಲೆ **ದೇವಾಲಯ:** ರಾಮಲಿಂಗ ಗುಡಿ

ಸ್ಥಿತಿ: ಕನಿಷ್ಠ **ಕಾಲ:** ಸು೧೧ನೆಯ ಶತಮಾನ

ಪ್ರವೇಶದಲ್ಲಿ ಎತ್ತರದ ನಾಗಶಿಲ್ಪವಿದೆ. ನವರಂಗದ ಮೂರು ಕಂಬ ಮಾತ್ರ ಚೆನ್ನಾಗಿವೆ. ಇನ್ನೊಂದು ನವೀಕರಿಸಲಾದ ಗೋಡೆಯಿದೆ. ನಕ್ಷತ್ರಾಕಾರದ ಛಾವಣಿಯಲ್ಲಿ ತ್ರಿದಳ ಭುವನೇಶ್ವರಿಯಿದೆ. ಗರ್ಭಗುಡಿ ಎಡಕ್ಕೆ ಗಜ ಲಲಾಟವಿದೆ. ದ್ವಿಶಾಖ ಬಾಗಿಲವಾಡ ಅಂತರಾಳಕ್ಕಿದೆ. ಗರ್ಭಗುಡಿ ಖಾಲಿಯಿದೆ. ದ್ವಾರಪಾಲಕ, ಗಂಗೆಯರ ಶಿಲ್ಪಗಳಿವೆ. ಗರ್ಭಗುಡಿಗೆ ದ್ವಿಶಾಖ ಬಾಗಿಲವಾಡ, ತ್ರಿದಳ ಭುವನೇಶ್ವರಿ ಮತ್ತು ಕುಡ್ಯಸ್ತಂಭವಿದೆ. ಗರ್ಭಗುಡಿ ಬಲಕ್ಕೆ ಅಂತರಾಳ, ಗಜ ಲಲಾಟ, ದ್ವಿಶಾಖ, ಹೂವಿನ ಚತುರ್ದಳ, ಕುಡ್ಯಸ್ತಂಭ ಮತ್ತು ದ್ವಾರಪಾಲಕರು, ಸಂಗೀತ, ವಾದ್ಯ

ಸುಡಿಸುವವರ ಕೆತ್ತನೆಯಿವೆ. ಗರ್ಭಗುಡಿಯೂ ಖಾಲಿಯಾಗಿದೆ. ಗರ್ಭಗುಡಿ ರಾಷ್ಟ್ರಕೂಟ ಮತ್ತು ಚಾಲುಕ್ಯ ಮಿಶ್ರಿತ ಕಂಬಗಳಿವೆ. ಅಂತರಾಳ, ಗಜ ಲಲಾಟ, ತ್ರಿಶಾಖ, ಚತುರ್ದಳ, ಕುಡ್ಯಸ್ತಂಭ ಕನಕಾಂಬರಿದಳದ ಕೆತ್ತನೆ ಮತ್ತು ದ್ವಾರಪಾಲಕರ ಶಿಲ್ಪ ಗರ್ಭಗುಡಿಯಲ್ಲಿ ಶಿವಲಿಂಗ ಅದರೆದುರು ನಂದಿ, ಚಿಕ್ಕಲಿಂಗ, ಪೀಠದಲ್ಲಿ ಜಡೆ ಬಿಟ್ಟು ನಮಸ್ಕರಿಸುತ್ತಿರುವ ಶಿಲ್ಪ, ಭಿತ್ತಿಯಲ್ಲಿ ಚಿಕ್ಕ ಒಂದೊಂದು ಗಜ, ಹೂವಿನ ಶಿಲ್ಪ ಮತ್ತು ವೀರಗಲ್ಲು ದೇವಾಲಯದ ಆವರಣದಲ್ಲಿದೆ. ಇದರ ಬಳಿಯ ಅಗಸಿಯಲ್ಲಿ ಒಂದು ವೀರಗಲ್ಲಿದೆ-ತ್ರಿವಳಿಯಲ್ಲಿದೆ.

ಶಾಸನೋಕ್ತ ದೇವಾಲಯಗಳು

ಮಲ್ಲಿಕಾರ್ಜುನ ದೇವಾಲಯ ಕಡಗಂಚಿಯ ಗೋವಿಂಜಿಯರ ಅಧೀನದಲ್ಲಿತ್ತು (ಕಡಗಂಚಿ ಕ್ರಿ.ಶ. ೧೧೧೮). ತ್ರಿಕೂಟ ದೇವಾಲಯ-ಲಕ್ಷ್ಮೀಶರಾವಾಸಮಂ, ಚೆನ್ನಕೇಶವ ದೇವಾಲಯ ಮತ್ತು ಚತುರ್ವಿಂಶತಿ ಮೂರ್ತಿಯ ಉಲ್ಲೇಖ (ರುದ್ರವಾಡಿ ಕ್ರಿ.ಶ. ೧೧೦೩). ಕೇಶವ ಪುರದ ಪಾರ್ಶ್ವನಾಥನ ಚೈತ್ಯಾಲಯ (ಗಡಿ ಕೇಶಾವರ್ ಕ್ರಿ.ಶ. ೧೪ನೆಯ ಶತಮಾನ). ಧರ್ಮ ಕ್ಷೇತ್ರವಾದ ಭಾಗಲದೇವಿ ಮತ್ತು ಬಿಬ್ಬರ ದೇವರ ಉಲ್ಲೇಖ(ಮೋಘಾ ಕ್ರಿ.ಶ. ೧೧೭೦). ರಾಮತೀರ್ಥ ಪರಿಛತ್ರದ ಉಲ್ಲೇಖ(ಮೋಘಾ ಕ್ರಿ.ಶ. ೧೧೭೦). ಸಿರವಳ್ಳಿಯ ಪಶ್ಚಿಮ ದಿಕ್ಕಿಗೆ 'ಹರಿಹರ ಭವನ ತ್ರಯಮಲ'(ತ್ರಿಕೂಟ ದೇವಾಲಯ), ವಜ್ರಘಟಿತ ಪ್ರಾಕಾರ ಮತ್ತು ನಿರ್ಮಲ ತೀರ್ಥ ಚಂದ್ರಾದಿತ್ಯ ಕಟ್ಟಿಸಿದನು(ಶಿರೋಳ್ಳಿ ಕ್ರಿ.ಶ. ೧೧೫೪). ಸರಸ್ವತೀವರಹಸ್ತಿಮುಖಿ ಎಂದು ಪ್ರಾರ್ಥನೆಯೊಂದಿಗೆ ಹರಸೂರು ಕ್ರಿ.ಶ. ೧೯೭೭ರ ಶಾಸನದಲ್ಲಿ ಉಲ್ಲೇಖವಾಗಿದೆ.

ಕೊನೆ ಟಿಪ್ಪಣಿಗಳು

೧. ಚಿದಾನಂದಮೂರ್ತಿ ಎಂ., ಕ.ಶಾ.ಸಾಂ.ಅ., ೧೯೬೬, ಪು. ೧೭೫.

೨. ತಿಪ್ಪೇರುದ್ರಸ್ವಾಮಿ ಎಚ್.ಕ.ಸಂ.ಸ., ೨೦೦೧, ಪು. ೫೩೩.

೩. ಪೂರ್ವೋಕ್ತ, ಪು. ೫೩೬

೪. ಗೋಪಾಲ್ ಆರ್(ಸಂ).ಗು.ಜಿ.ಇ ಮತ್ತು ಪು-೨೦೦೭, ಪು. ೩೨೩.

೫. ಪ್ರಭಾಕರ ಎನ್. ದೇ.ವಾ.ಚ., ೨೦೦೦, ಪು.ಸಂ-೧೮

೬. ಗೋಪಾಲ್ ಆರ್(ಸಂ)., ಗು.ಜಿ.ಇ ಮತ್ತು ಪು-೨೦೦೭, ಪು. ೩೨೨.

೭. ಪೂರ್ವೋಕ್ತ, ಪು. ೩೨೫.

೮. ಪ್ರಭಾಕರ್. ಎಂ.ಎನ್., ದೇ.ವಾ.ಚ., ೨೦೦೦, ಪು. ೩.

೯. ಪೂರ್ವೋಕ್ತ, ಪು.ಸಂ.೮.

೧೦. ಗೋಪಾಲ್ ಆರ್(ಸಂ), .ಗು.ಜಿ.ಇ ಮತ್ತು ಪು.೨೦೦೭, ಪು. ೩೨೩.

೧೧. ಪೂರ್ವೋಕ್ತ, ಪು. ೩೨೨.

೧೨. ಪೂರ್ವೋಕ್ತ, ಪು. ೩೦೪.

೧೩. ಪಾಟೀಲ್.ಎಂ.ಬಿ(ಸಂ)-ಕ.ಸ.ಗೆ.ಕ.ಜಿ.-೧೯೯೭. ಪು.ಸಂ. ೬೭೮-೬೭೯

೧೪. ಮಹದೇವ.ಸಿ. (ಸಂ) ಕ.ದೇ.ಕೋ.ಕ.ಜಿ.,೨೦೧೬ ಪು.ಸಂ-೩-೪

೧೫. ಪೂರ್ವೋಕ್ತ.-.ಪು.ಸಂ.೧೨

೧೬. ಪಾಟೀಲ್.ಎಂ.ಬಿ(ಸಂ), ಕ.ಸ.ಗೆ.ಕ.ಜಿ., ೧೯೯೭, ಪು. ೭೪೪.

೧೭. ಪೂರ್ವೋಕ್ತ, ಪು. ೭೪೪.

೧೮. ಮಹದೇವ.ಸಿ(ಸಂ), ಕ.ದೇ.ಕೋ.ಕ.ಜಿ., ೨೦೧೬, ಪು. ೧೩

೧೯. ಪಾಟೀಲ್.ಎಂ.ಬಿ(ಸಂ), ಕ.ಸ.ಗೆ.ಕ.ಜಿ, ೧೯೯೭, ಪು. ೭೪೮.

೨೦. ಪೂರ್ವೋಕ್ತ, ಪು. ೭೪೮.

೨೧. ಮಹದೇವ.ಸಿ.(ಸಂ), ಕ.ದೇ.ಕೋ.ಕ.ಜಿ., ೨೦೧೬, ಪು. ೧೭.

೨೨. ಪಾಟೀಲ್.ಎಂ.ಬಿ(ಸಂ), ಕ.ಸ.ಗೆ.ಕ.ಜಿ., ೧೯೯೭, ಪು. ೭೫೬.

೨೩. ಪೂರ್ವೋಕ್ತ, ಪು. ೭೫೬

೨೪. ಪೂರ್ವೋಕ್ತ, ಪು. ೭೫೭

೨೫. ಮಹದೇವ.ಸಿ.(ಸಂ), ಕ.ದೇ.ಕೋ.ಕ.ಜಿ, ೨೦೧೬ ಪು. ೨೬

೨೬. ಪಾಟೀಲ್.ಎಂ.ಬಿ(ಸಂ), ಕ.ಸ.ಗೆ.ಕ.ಜಿ., ೧೯೯೭, ಪು. ೭೭೨.

೨೭. ಪೂರ್ವೋಕ್ತ, ಪು. ೭೭೯.

೨೮. ಪೂರ್ವೋಕ್ತ, ಪು. ೭೦೬

೨೯. ಮಹದೇವ.ಸಿ.(ಸಂ), ಕ.ದೇ.ಕೋ.ಕ.ಜಿ., ೨೦೧೬, ಪು. ೪.

೩೦. ಪಾಟೀಲ್.ಎಂ.ಬಿ.(ಸಂ)–ಕ.ಸ.ಗೆ.ಕ.ಜಿ., ೧೯೯೭, ಪು. ೭೧೫.

೩೧. ಮಹದೇವ.ಸಿ.(ಸಂ), ಕ.ದೇ.ಕೋ.ಕ.ಜಿ., ೨೦೧೬, ಪು. ೦೬–೦೭.

೩೨. ಪೂರ್ವೋಕ್ತ, ಪು. ೬–೭.

೩೩. ಪೂರ್ವೋಕ್ತ, ಪು. ೮.

೩೪. ಪಾಟೀಲ್ ಎಂ.ಬಿ.ಕ.ಸ.ಗೆ.ಕ.ಜಿ., ೧೯೯೭, ಪು. ೭೨೦–೭೨೧.

೩೫. ಪೂರ್ವೋಕ್ತ, ಪು. ೭೨೧–೭೨೨.

೩೬. ಮಹದೇವ.ಸಿ.(ಸಂ), ಕ.ದೇ.ಕೋ.ಕ.ಜಿ., ೨೦೧೬, ಪು. ೯.

೩೭. ಪಾಟೀಲ್.ಎಂ.ಬಿ., ಕ.ಸ.ಗೆ.ಕ.ಜಿ., ೧೯೯೭, ಪು. ೭೨೪.

೩೮. ಮಹದೇವ.ಸಿ.(ಸಂ), ಕ.ದೇ.ಕೋ.ಕ.ಜಿ., ೨೦೧೬, ಪು. ೧೧.

೩೯. ಪೂರ್ವೋಕ್ತ, ಪು. ೧೧

೪೦. ಪೂರ್ವೋಕ್ತ, ಪು. ೧೪.

೪೧. ಪೂರ್ವೋಕ್ತ, ಪು. ೧೫–೧೬.

೪೨. ಪೂರ್ವೋಕ್ತ, ಪು. ೧೬.

೪೩. ಪೂರ್ವೋಕ್ತ, ಪು. ೧೬.

೪೪. ಪೂರ್ವೋಕ್ತ, ಪು. ೨೪–೨೫.

೪೫. ಪೂರ್ವೋಕ್ತ, ಪು. ೨೨–೨೩.

೪೬. ಪೂರ್ವೋಕ್ತ, ಪು. ೨೨.

೪೭. ಪೂರ್ವೋಕ್ತ, ಪು. ೨೦.

೪೮. ಪೂರ್ವೋಕ್ತ, ಪು. ೨೧.

೪೯. ಪೂರ್ವೋಕ್ತ, ಪು. ೩೦.

೫೦. ಪಾಟೀಲ್.ಎಂ.ಬಿ., ಕ.ಸ.ಗೆ.ಕ.ಜಿ., ೧೯೯೭, ಪು. ೭೧೮–೭೧೯.

೫೧. ಮಹದೇವ.ಸಿ.(ಸಂ), ಕ.ದೇ.ಕೋ.ಕ.ಜಿ., ೨೦೧೬, ಪು. ೩೧.

೫೨. ಪೂರ್ವೋಕ್ತ, ಪು. ೩೨

೫೩. ಪೂರ್ವೋಕ್ತ, ಪು. ೩೪.

೫೪. ಪೂರ್ವೋಕ್ತ, ಪು. ೩೪.

೫೫. ಪೂರ್ವೋಕ್ತ, ಪು. ೩೫.

೫೬. ಪಾಟೀಲ್.ಎಂ.ಬಿ.(ಸಂ), ಕ.ಸ.ಗೆ.ಕ.ಜಿ.ಸಂ., ೧೯೯೭, ಪು. ೭೩೩.

೫೭. ಮಹದೇವ.ಸಿ.(ಸಂ), ಕ.ದೇ.ಕೋ.ಕ.ಜಿ., ೨೦೧೬, ಪು. ೩೬.

೫೮. ಪೂರ್ವೋಕ್ತ, ಪು. ೪೧-೪೨.

೫೯. ಪೂರ್ವೋಕ್ತ, ಪು. ೪೨.

೬೦. ಪೂರ್ವೋಕ್ತ, ಪು. ೪೪.

೬೧. ಪೂರ್ವೋಕ್ತ, ಪು. ೪೪.

೬೨. ಪೂರ್ವೋಕ್ತ, ಪು. ೪೫-೪೬

೬೩. ಪೂರ್ವೋಕ್ತ, ಪು. ೪೬-೪೭

೬೪. ಪೂರ್ವೋಕ್ತ ಪು. ೪೮.

೬೫. ಪೂರ್ವೋಕ್ತ, ಪು. ೪೯-೫೦

೬೬. ಪಾಟೀಲ್.ಎಂ.ಬಿ.(ಸಂ), ಕ.ಸ.ಗೆ.ಕ.ಜಿ., ೧೯೯೭, ಪು. ೭೪೬.

೬೭. ಮಹದೇವ.ಸಿ.(ಸಂ), ಕ.ದೇ.ಕೋ.ಕ.ಜಿ., ೨೦೧೬. ಪು. ೪೯-೫೦.

೬೮. ಪೂರ್ವೋಕ್ತ, ಪು. ೪೩

೬೯. ಪಾಟೀಲ್.ಎಂ.ಬಿ.(ಸಂ), ಕ.ಸ.ಗೆ.ಕ.ಜಿ, ೧೯೯೭, ಪು. ೭೪೧

೭೦. ಮಹದೇವ.ಸಿ.(ಸಂ), ಕ.ದೇ.ಕೋ.ಕ.ಜಿ., ೨೦೧೬, ಪು. ೫೮.

೭೧. ಪೂರ್ವೋಕ್ತ, ಪು.ಸಂ೫೮.

೭೨. ಪಾಟೀಲ್.ಎಂ.ಬಿ.(ಸಂ), ಕ.ಸ.ಗೆ.ಕ.ಜಿ. ೧೯೯೭, ಪು. ೭೭೧.

೭೩. ಪೂರ್ವೋಕ್ತ, ಪು. ೭೬೩.

೭೪. ಪೂರ್ವೋಕ್ತ, ಪು. ೭೬೩.

೭೫. ಗೋಪಾಲ್.ಆರ್.ಗು.ಜಿ.ಇ. ಮತ್ತು ಪು. ೨೦೦೭, ಪು. ೩೫೦.

೭೬. ಪೂರ್ವೋಕ್ತ, ಪು. ೩೫೦.

೭೭. ಪಾಟೀಲ್.ಎಂ.ಬಿ.(ಸಂ). ಕರ್ನಾಟಕ ಸರ್ಕಾರದ ಗೆಜೆಟಿಯರ್(ಕಲ್ಬುರ್ಗಿ ಜಿಲ್ಲೆ), ೧೯೯೭. ಪು. ೭೨೨.

೭೮. ಪೂರ್ವೋಕ್ತ, ಪು. ೭೦೬.

೭೯. ಪೂರ್ವೋಕ್ತ, ಪು. ೭೪೧.

೮೦. ಪೂರ್ವೋಕ್ತ, ಪು. ೭೪೧.

೮೧. ಪೂರ್ವೋಕ್ತ, ಪು.ಸಂ.೭೦೬

೮೨. ಪೂರ್ವೋಕ್ತ, ಪು. ೭೦೨.

೮೩. ಪೂರ್ವೋಕ್ತ ಪು. ೭೦೨.

೮೪. ಪೂರ್ವೋಕ್ತ ಪು. ೭೦೨.

೮೫. ಪೂರ್ವೋಕ್ತ, ಪು. ೭೦೨.

೮೬. ಪೂರ್ವೋಕ್ತ, ಪು.೭೭೦.

೮೭. ಪೂರ್ವೋಕ್ತ, ಪು. ೭೬೯.

೮೮. ಪೂರ್ವೋಕ್ತ, ಪು. ೭೪೭.

೮೯. ಪೂರ್ವೋಕ್ತ ಪು. ೭೪೭.

೯೦. ಪೂರ್ವೋಕ್ತ, ಪು. ೭೮೯.

೯೧. ಪೂರ್ವೋಕ್ತ, ಪು. ೭೬೯.

೯೨. ಪೂರ್ವೋಕ್ತ, ಪು. ೭೩೯.

೯೩. ಪೂರ್ವೋಕ್ತ, ಪು. ೭೮೦.

೯೪. ಪೂರ್ವೋಕ್ತ, ಪು. ೭೮೯.

೯೫. ಪೂರ್ವೋಕ್ತ, ಪು. ೭೮೯.

೯೬. ಪೂರ್ವೋಕ್ತ, ಪು. ಸಂ೭೮೯.

೯೭. ಪೂರ್ವೋಕ್ತ, ಪು. ಸಂ.೭೭೧.

೯೮. ಪೂರ್ವೋಕ್ತ, ಪು. ಸಂ೬೯೭

೯೯. ಪೂರ್ವೋಕ್ತ ಪು. ಸಂ೭೮೯.

೧೦೦. ಪೂರ್ವೋಕ್ತ, ಪು. ೭೫೭.

೧೦೧. ಪೂರ್ವೋಕ್ತ, ಪು. ೭೫೭

೧೦೨. ಪೂರ್ವೋಕ್ತ, ಪು. ಸಂ೭೫೭

೧೦೩. ಗೋಪಾಲ್.ಆರ್.ಗು.ಜಿ.ಇ.ಮತ್ತು ಪು.ಸಂ. ೨೦೦೭, ಪು. ೩೫೦.

೧೦೪. ಪಾಟೀಲ್.ಎಂ.ಬಿ(ಸಂ), ಕ.ಸ.ಗೆ.ಕ.ಜಿ., ೧೯೯೭, ಪು. ೭೩೯.

೧೦೫. ಗೋಪಾಲ್.ಆರ್.ಗು.ಜಿ.ಇ., ಮತ್ತು ಪು, ೨೦೦೭, ಪು. ೩೭೬

೧೦೬. ಪಾಟೀಲ್.ಎಂ.ಬಿ(ಸಂ), ಕ.ಸ.ಗೆ.ಕ.ಜಿ., ೧೯೯೭, ಪು. ೭೩೯.

೧೦೭. ಪೂರ್ವೋಕ್ತ, ಪು. ೭೧೯.

೧೦೮. ಪೂರ್ವೋಕ್ತ, ಪು. ೭೪೮.

೧೦೯. ಮಹದೇವ.ಸಿ.(ಸಂ), ಕ.ದೇ.ಕೋ.ಕ.ಜಿ., ೨೦೧೬, ಪು. ೧೪

೧೧೦. ಪೂರ್ವೋಕ್ತ, ೨೦೧೬, ಪು.ಸಂ.೨೦

೧೧೧. ಪಾಟೀಲ್.ಎಂ.ಬಿ(ಸಂ), ಕ.ಸ.ಗೆ.ಕ.ಜಿ., ೧೯೯೭, ಪು. ೭೫೭

೧೧೨. ಪೂರ್ವೋಕ್ತ ಪು.ಸಂ೭೨೯.

೧೧೩. ಗೋಪಾಲ್.ಆರ್.ಗು.ಜಿ.ಇ.ಮತ್ತು ಪು.ಸಂ, ೨೦೦೭, ಪು. ೩೦೭

೧೧೪. ಪಾಟೀಲ್.ಎಂ.ಬಿ(ಸಂ)–ಕ.ಸ.ಗೆ.ಕ.ಜಿ.,೧೯೯೭, ಪು. ೭೦೨

೧೧೫. ಪೂರ್ವೋಕ್ತ, ಪು. ೬೭೮–೬೭೯.

೧೧೬. ಪೂರ್ವೋಕ್ತ, ೧೯೯೭ ಪು. ೭೪೯.

೧೧೭. ಪಾಟೀಲ್.ಎಂ.ಬಿ.(ಸಂ), ಕ.ಸ.ಗೆ.ಕ.ಜಿ, ೧೯೯೭, ಪು. ೭೪೧.

೧೧೮. ಮಹದೇವ.ಸಿ.(ಸಂ), ಕ.ದೇ.ಕೋ.ಕ.ಜಿ., ೨೦೧೬. ಪು. ೪೧.

೧೧೯. ಪೂರ್ವೋಕ್ತ, ಪು. ೧೮.

೧೨೦. ಪೂರ್ವೋಕ್ತ ಪು.ಸಂ.೯

೧೨೧. ಪೂರ್ವೋಕ್ತ, ಪು. ೧೦.

೧೨೨. ಪಾಟೀಲ್.ಎಂ.ಬಿ.(ಸಂ), ಕ.ಸ.ಗೆ.ಕ.ಜಿ., ೧೯೯೭, ಪು. ೭೩೯.

೧೨೩. ಪೂರ್ವೋಕ್ತ, ಪು. ೭೩೯

೧೨೪. ಪೂರ್ವೋಕ್ತ, ೧೯೯೭ ಪು. ೭೫೬.

೧೨೫. ಮಹದೇವ .ಸಿ.(ಸಂ), ಕ.ದೇ.ಕೋ.ಕ.ಜಿ., ೨೦೧೬ ಪು. ೨೩–೨೪.

♦♦♦

ಅಧ್ಯಾಯ : ಐದು

ಮೂರ್ತಿಶಿಲ್ಪಗಳು

ಅಧ್ಯಾಯ : ಐದು

ಮೂರ್ತಿಶಿಲ್ಪಗಳು

೫.೧. ಮೂರ್ತಿಶಿಲ್ಪಗಳ ಮಹತ್ವ

ಶಿಲ್ಪ ಎಂಬ ಪದವು ಬಹು ಪ್ರಾಚೀನ ಕಾಲದಿಂದ ಬಂದಿದೆ. ಶೀಲಸಮೂಧೌ ಎಂಬ ಧಾತುವಿನಿಂದ ಬಂದಿದೆ. ಶಿಲ್ಪ ಎಂಬ ಪದಕ್ಕೆ ಪರ್ಯಾಯ ಪದವಾದ ಬಿಂಬ, ಪ್ರತಿಬಿಂಬ, ವಿಗ್ರಹ, ಮೂರ್ತಿ ಈ ಎಲ್ಲ ಪದಗಳನ್ನು ಹೊಂದಿ, ಮೂರ್ತಿಶಿಲ್ಪ ವಿಜ್ಞಾನದಲ್ಲಿ ಬಹು ವ್ಯಾಪಕವಾದ ವೈಶಾಲ್ಯವನ್ನು ಪಡೆದ ಜ್ಞಾನದ ಶಾಖೆಯಾಗಿದೆ. ಮೂರ್ತಿಶಿಲ್ಪಗಳು ತನ್ನದೇಯಾದ ಪ್ರತಿಮಾ ಲಕ್ಷಣಗಳು, ಶೈಲಿ, ಭಂಗಿ, ಆಯುಧ ಮತ್ತು ಲಾಂಛನಗಳನ್ನೊಳಗೊಂಡಿರುತ್ತವೆ. ಇವುಗಳನ್ನು ಶೈವ, ವೈಷ್ಣವ, ಜೈನ, ಶಾಕ್ತ ಮತ್ತು ಇತರೆ ಶಿಲ್ಪಗಳೆಂದು ವಿಂಗಡಿಸಲಾಗಿದೆ.

ಮೂರ್ತಿ ಎಂದರೆ, ಕಣ್ಣಿಗೆ ಕಾಣುವ ಅಥವಾ ಪಾರದರ್ಶಕವಾದ ಶರೀರ, ರೂಪವಾಗಿದೆ. ಮೂರ್ತಿಗಳು ಮಾನವನ ಭಾವನೆ ಮತ್ತು ಕಲ್ಪನೆಗಳಿಂದ ಬೆಳೆದು ಬಂದವುಗಳಾಗಿವೆ. ಇವುಗಳು ಪ್ರಕೃತಿ ಪ್ರೇರಿತವಾಗಿವೆ. ಸಿಂಧೂ ನಾಗರಿಕತೆಯ ಪಶುಪತಿ ಶಿಲ್ಪ, ನೃತ್ಯ ಭಂಗಿಯಲ್ಲಿರುವ ಕಂಚಿನ ಮೂರ್ತಿ, ಮುದ್ರೆಗಳಲ್ಲಿರುವ ಕೆತ್ತನೆಗಳು ನಮ್ಮ ಪ್ರಾಚೀನ ಮೂರ್ತಿಶಿಲ್ಪದ ಕುರುಹುಗಳಾಗಿವೆ.

ಸಿಂಧೂ ನಾಗರಿಕತೆಯಲ್ಲಿ ದೊರೆತ ಲಿಂಗವು ಶಿವಲಿಂಗದ ಪ್ರಾಚೀನತೆ ಮತ್ತು ಅದರ ಬೆಳವಣಿಗೆಯನ್ನು ಸೂಚಿಸುತ್ತದೆ. ಕ್ರಿಪೂ. ೨ನೆಯ ಶತಮಾನದಲ್ಲಿ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಗುಡಿಮಲ್ಲಮ್ ಎಂಬಲ್ಲಿ ಪ್ರಾಚೀನ ಶಿವನ ಶಿಲ್ಪ ದೊರಕಿದೆ. ವೇದಗಳ ಕಾಲದಲ್ಲಿ ಕ್ರಮೇಣ ವಿವಿಧ ಆಯುಧ ಹಿಡಿದ ವೈವಿಧ್ಯಮಯ ಮೂರ್ತಿಶಿಲ್ಪಗಳು ಬೆಳೆದು ಬಂದವು. ನಿಸರ್ಗದಲ್ಲಿರುವ ಪ್ರಾಣಿ, ಪಕ್ಷಿ, ಸರಿಸೃಪಗಳು, ಅಗ್ನಿ, ವಾಯು, ಜಲ, ಗಿಡ–ಮರಗಳನ್ನು ದೇವರನ್ನಾಗಿ ಪೂಜಿಸುತ್ತಿದ್ದರು. ಮುಂದೆ ಇವುಗಳ ಮೂರ್ತಿ ರೂಪ ತಳೆದವು.

೫.೨. ಮೂರ್ತಿಶಿಲ್ಪಗಳ ವೈವಿಧ್ಯತೆ

ಮೂರ್ತಿಶಿಲ್ಪಗಳನ್ನು ಶೈವ, ವೈಷ್ಣವ, ಶಾಕ್ತ, ಜೈನ ಮತ್ತು ಇತರೆ ಎಂದು ವಿಂಗಡಿಸಿಕೊಳ್ಳಲಾಗಿದೆ. ಬ್ರಹ್ಮನನ್ನು ಸೃಷ್ಟಿಕರ್ತನನ್ನಾಗಿ, ವಿಷ್ಣುವನ್ನು ರಕ್ಷಕನನ್ನಾಗಿ, ಶಿವನನ್ನು ಲಯಕಾರನನ್ನಾಗಿ ಸೃಷ್ಟಿಯ ಹುಟ್ಟು, ಬೆಳವಣಿಗೆ ಮತ್ತು ನಾಶದ ಮೂರು ಸ್ತರದಲ್ಲಿ ದೈವೀಶಕ್ತಿಯನ್ನು ಪ್ರತಿಮೆಯನ್ನಾಗಿ

ಪೂಜಿಸಲಾರಂಭಿಸಿದರು. ಹೀಗೆ ಜನಾಂಗಗಳು ತಮ್ಮ ಇಷ್ಟ ದೇವತೆಯನ್ನು ಇತರ ದೇವತೆಗಳಿಗಿಂತ ಹೆಚ್ಚು ಶಕ್ತಿಶಾಲಿ, ಪ್ರಭಾವಿ ಎಂದು ತೋರಿಸಲು ಮೂರ್ತಿಗಳಲ್ಲಿ ಅತ್ಯಧಿಕ ಪ್ರಭಾವಿ ಪ್ರಾಣಿಗಳ ಶಿಲ್ಪವನ್ನಾಗಿ, ಇಲ್ಲವೆ ಮಾನವನ ನಾಲ್ಕು ತಲೆ, ನಾಲ್ಕು ಭುಜವನ್ನಾಗಿಸಿ ಮುಂದೆ ಅವುಗಳನ್ನು ದ್ವಿಗುಣ, ತ್ರಿಗುಣವಾಗಿ ಬೆಳೆಸುತ್ತಾ ಬಂದವು. ಈ ರೀತಿಯಾಗಿ ಮಾನವ ತನ್ನದೇಯಾದ ಕಲ್ಪನೆ, ವೈಚಾರಿಕತೆಗೊಳಪಡಿಸಿ, ಕಥೆಗಳನ್ನು ಕಟ್ಟಿ ಆ ಮೂಲಕ ಶಿಲ್ಪದಲ್ಲಿ ಮೂರ್ತಿ ಕೆತ್ತಲಾರಂಭಿಸಿದನು. ಕರ್ನಾಟಕದ ಅತಿ ಪ್ರಾಚೀನವಾದ ವಿಷ್ಣು ಶಿಲ್ಪವು ಚತುರ್ವಿಂಶತಿಯ ರೂಪಗಳಲ್ಲಿ ಹದಿನಾಲ್ಕನೆಯ ರೂಪವಾದ ವಾಸುದೇವನ ಮಾನುಷ ರೂಪದ ಅತ್ಯಂತ ಪ್ರಾಚೀನ ಶಿಲ್ಪ ಕೊಂತಪಾಲದಲ್ಲಿ ಸಿಕ್ಕಿದೆ.

ನಾರದ ಪಂಚರಾತ್ರಾಗಮವು ವಿಷ್ಣುವಿನ ಕೆಲ ಚತುರ್ವಿಂಶತಿ ರೂಪಗಳ ಜೊತೆಗೆ ಶಕ್ತಿಗಳನ್ನು ಗುರ್ತಿಸಿದೆ. ಕೇಶವ–ಕೀರ್ತಿ, ನಾರಾಯಣ–ಕಾಂತಿ, ಮಾಧವ–ತುಷ್ಟಿ, ತ್ರಿವಿಕ್ರಮ–ಶಾಂತಿ, ವಾಮನ–ಕ್ರಿಯಾ, ಅಚ್ಯುತ್–ದಯ, ಶ್ರೀಧರ–ಮೇಧ, ಹೃಷಿಕೇಶ–ಹರ್ಷ, ದಾಮೋದರ–ಲಜ್ಜಾ, ವಾಸುದೇವ–ಲಕ್ಷ್ಮಿ, ಸಂಕರ್ಷನ–ಸರಸ್ವತಿ, ಪ್ರದ್ಯುಮ್ನ–ಪ್ರೀತಿ, ಅನಿರುದ್ಧ–ರತಿ[೧] ಗೋವಿಂದ, ವಿಷ್ಣು, ಮಧುಸೂಧನ, ಪದ್ಮನಾಭ, ಪುರುಷೋತ್ತಮ, ಅಧೋಕ್ಷಜ, ನರಸಿಂಹ, ಜನಾರ್ಧನ, ಉಪೇಂದ್ರ, ಹರಿ, ಶ್ರೀಕೃಷ್ಣ[೨] ಇವು ವಿಷ್ಣುವಿನ ಚತುರ್ವಿಂಶತಿ ರೂಪಗಳಾಗಿವೆ. ಇದೇ ರೀತಿಯಾಗಿ, ಶಕ್ತಿ ರೂಪ ಸಹ ಮಾನವ ಭಕ್ತಿ, ಭಯ ಮತ್ತು ಕಲ್ಪನೆಗಳೊಂದಿಗೆ ತಮ್ಮ ಧರ್ಮಕ್ಕನುಸಾರವಾಗಿ ಶಕ್ತಿಯ ಶಿಲ್ಪಾವಳಿಗಳನ್ನು ಬೆಳವಣಿಗೆಗೆ ತಂದರು. ಮೂರ್ತಿಶಿಲ್ಪಗಳ ಆಧಾರದ ಮೇಲೆ ಪ್ರಸ್ತುತ ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದಲ್ಲಿರುವ ಮೂರ್ತಿಶಿಲ್ಪಗಳ ವಿವರಣೆ ನೀಡುವ ಪ್ರಯತ್ನ ಇದಾಗಿದೆ.

೫.೨.೧. ಶೈವ ಮೂರ್ತಿಶಿಲ್ಪಗಳು

ಸ್ಥಳ: ಬೆಳಗುಂಪಾ(ಕೆ) **ಶಿಲ್ಪ:** ಶಿವಪಾರ್ವತಿ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೯ನೆಯ ಶತಮಾನ

ಸ್ಥಿತಿ: ಉತ್ತಮ **ದೊರೆತ ಸ್ಥಳ:** ಶಂಕರಲಿಂಗ ಗುಡಿ

ಶಿವನ ತೊಡೆಯ ಮೇಲೆ ಕುಳಿತ ಪಾರ್ವತಿಯ ಶಿಲ್ಪವನ್ನು ಅದ್ಭುತವಾಗಿ ಕೆತ್ತಲಾಗಿದೆ. ಶಿವನ ಮುಂದಿನ ಬಲಗೈ ಅಭಯಹಸ್ತವಿದ್ದು ಅದರಲ್ಲಿ ರುದ್ರಾಕ್ಷಿಯಂತಹ ಬಳೆಯನ್ನು ಕೊರೆಯಲಾಗಿದೆ. ಎಡಗೈ ಪಾರ್ವತಿಯನ್ನು ಬಳಸಿದೆ. ಹಿಂದಿನ ಕೈಗಳಲ್ಲಿ ಡಮರು, ತ್ರಿಶೂಲವಿದೆ. ಪಾರ್ವತಿಯ ಬಲಗೈ ಶಿವನನ್ನು ಬಳಸಿಕೊಂಡಿದೆ ಮತ್ತು ಎಡಗೈಯಲ್ಲಿ? ಶಿವನು ಕಿರೀಟ, ಕರ್ಣಕುಂಡಲ, ಕೈಗಡಗ, ಬಾಹುವಲ್ಯ, ಎದೆಯಾಭರಣ, ಯಜ್ಞೋಪವೀತ, ಸೊಂಟಪಟ್ಟಿ, ಕುಚಹಾರ, ಕಾಲ್ಗಡಗ, ತಲೆಯ ಹಿಂದೆ ಪ್ರಭಾವಳಿಯಿದೆ. ಪಾರ್ವತಿಯ ಕೆತ್ತನೆಯ ತಲೆಯ ಹಿಂದೆ ಪ್ರಭೆಯಿದೆ. ವೃತ್ತಾಕಾರದ ಕೇಶಾಲಂಕಾರ, ಕಿವಿಓಲೆ, ಕೈಬಳೆ, ಬಾಹುವಲ್ಯ, ಕಂಠಾಭರಣ, ಎದೆಯಾಭರಣ, ಯಜ್ಞೋಪವೀತ, ಸೊಂಟಪಟ್ಟಿ, ಕುಚಹಾರ, ಕಾಲ್ಗಡಗ, ಪೈಜಾಮ ಧರಿಸಿದಂತೆ

ಕೆತ್ತಲಾಗಿದೆ. ಏಳು ಕುದುರೆ ಸವಾರಿ ಮಾಡಿದ ಸೂರ್ಯನ ಶಿಲ್ಪವಿರುವ ಲಿಂಗಪೀಠದ ಮೇಲೆ ಶಿವಪಾರ್ವತಿಯರ ಶಿಲ್ಪವಿದೆ.

ಸ್ಥಳ: ಶ್ರೀನಿವಾಸ ಸರಡಗಿ **ಶಿಲ್ಪ:** ಶಿವಪಾರ್ವತಿ
ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೆಯ ಶತಮಾನ
ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಮಂದಿರ

ಕೆಳ ಅಗಸಿಯ ಗೋಡೆಯ ಅಧಿಷ್ಠಾನದಲ್ಲಿ, ಸಿಂಹವೆಯ್ಯಾವಳಿ, ಚತುರ್ಭುಜ ಶಿವನ ತೊಡೆಯ ಮೇಲೆ ಕುಳಿತಿರುವ ಪಾರ್ವತಿಯ ಶಿಲ್ಪವಿದೆ. ಶಿವನ ಹಿಂದಿನ ಒಂದು ಕೈ ಡಮರು ಹಿಡಿದಿದೆ. ಇನ್ನೊಂದು ಕೈ ಪಾರ್ವತಿಯನ್ನು ಆವರಿಸಿದೆ. ಮುಂದಿನ ಕೈ ಅಭಯ ಹಸ್ತವಾಗಿದೆ. ಸಾಲು ಸಾಲಾಗಿ ಚತುರ್ದಳದ ಹೂವಿನ ಕೆತ್ತನೆಗಳಿವೆ. ಕಪ್ಪು ಶಿಲೆಯಲ್ಲಿವೆ. ಸು.೧೧ನೆಯ ಶತಮಾನದವುಗಳಾಗಿವೆ

ಸ್ಥಳ: ಗರೂರು **ಶಿಲ್ಪ:** ಭಿಕ್ಷಾಟನೆ ಶಿವ
ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೨ನೆಯ ಶತಮಾನ
ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಕಪ್ಪುಶಿಲೆಯ ಭಿಕ್ಷಾಟನೆ ಶಿವನ ಶಿಲ್ಪವನ್ನು ಹಿಂದಿನ ಕೈಗಳಲ್ಲಿ ಡಮರು ಮತ್ತು ತ್ರಿಶೂಲ ಹಿಡಿದಂತೆ ಕೆತ್ತಲಾಗಿದೆ. ಮುಂದಿನ ಬಲಗೈ ಖಡ್ಗ? ಎಡಗೈಯಲ್ಲಿ ಕಪೋಲ? ಹಿಡಿದಂತೆ ಕೆತ್ತಲಾಗಿದೆ. ನಗ್ನ ಮತ್ತು ಸ್ಥಾನಿಕ ಭಂಗಿಯಲ್ಲಿದೆ. ಕಿರೀಟ, ಸೊಂಟಬಂಧ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಕೇರಿಅಂಬಲಗಾ **ಶಿಲ್ಪ:** ಭೈರವ
ಶಿಲೆ: ಕಪ್ಪುಕಲ್ಲು. **ಕಾಲ:** ಸು.೮ನೆಯ ಶತಮಾನ
ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಬಿಂಬಲಿಂಗೇಶ್ವರ ಗುಡಿ

ಬಿಂಬಲಿಂಗೇಶ್ವರ ಗುಡಿ ಸಂಪೂರ್ಣ ತ್ರುಟಿತವಾಗಿದೆ. ಇದರ ಬಳಿ ಭೈರವಶಿಲ್ಪವಿದೆ. ಶಿಲ್ಪವು ಕಪ್ಪುಶಿಲೆಯಿಂದ ಕೆತ್ತಲ್ಪಟ್ಟಿದೆ. ಚತುರ್ಬಾಹುವಿನ ಶಿಲ್ಪದ ಹಿಂದಿನ ಕೈಗಳು ಡಮರುಗ ಮತ್ತು ತ್ರಿಶೂಲಧಾರಿಯಾಗಿವೆ. ಮುಂದಿನ ಎಡಗೈಯಲ್ಲಿ ರುಂಡವಿದ್ದು ಅದನ್ನು ನಾಯಿ ಬಾಯಲ್ಲಿ ಹಿಡಿಯಲು ನಿಂತಂತಿದೆ. ಬಲಗೈಯಲ್ಲಿ ಖಡ್ಗವಿದೆ. ಭೃಂಗಿ ಮತ್ತು ನಿಂತ ನಾಗ ಕೆತ್ತನೆಯಿದೆ. ಹದಿನೆಂಟು ಹೆಡೆಯ ನಾಗ ತಲೆಯ ಮೇಲಿದೆ. ಕೊರಳ್ಹಾರ, ಎದೆಪಟ್ಟಿ, ತೋಳ್ಬಂದಿ, ಬಾಹುವಲ್ಯ, ಕೈಕಡಗ, ಕಾಲ್ಗಡಗ, ಪೈಜಾಮ, ಯಜ್ಞೋಪವೀತ, ಸೊಂಟಪಟ್ಟಿ ಕೆತ್ತನೆಯಿದೆ.

ಸ್ಥಳ: ಕಡಣಿ(ಕಣ್ಣಿ) **ಶಿಲ್ಪ:** ಭೈರವ
ಶಿಲೆ: ಕಪ್ಪುಶಿಲೆ, **ಕಾಲ:** ಸು.೧೦ನೆಯ ಶತಮಾನ,
ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಶಂಕರಲಿಂಗೇಶ್ವರ ಗುಡಿ

ಶಂಕರಲಿಂಗೇಶ್ವರ ಗುಡಿಯ ಎದುರಿನ ದೀಪಸ್ತಂಭಕ್ಕೆ ತಾಕಿದಂತಿಡಲಾದ ಭೈರವ ಶಿಲ್ಪದಲ್ಲಿ ಚತುರ್ಬಾಹುವಿದೆ. ಹಿಂದಿನ ಕೈಗಳು ತ್ರಿಶೂಲ, ಅಂಕುಶ? ಮುಂದಿನ ಕೈಗಳು ಖಡ್ಗ, ರುಂಡ

ಹಿಡಿದಿವೆ. ರುಂಡವನ್ನು ನೆಕ್ಕುತ್ತಿರುವ ನಾಯಿ, ಬಲಕ್ಕೆ ಭೃಂಗಿಯಿದೆ. ಹಿಂದೆ ಪ್ರಭಾವಳಿ, ಕರ್ಣಕುಂಡಲ, ಕೊರಳಾಭರಣ, ವಕ್ಷಬಂಧ, ಯಜ್ಞೋಪವೀತ, ಕೈಗಡಗ, ಸೊಂಟಬಂಧ, ಬಾಹುವಲ್ಯ, ರುಂಡಮಾಲೆ, ಕಾಲ್ಗಡಗ, ಪಾದರಕ್ಷೆ ಧರಿಸಿದ ಶಿಲ್ಪವಿದೆ.

ಸ್ಥಳ: ಕಡಣಿ(ಕಣ್ಣಿ) **ಶಿಲ್ಪ:** ಶಿವಲಿಂಗ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಅನ್ನದಾನೇಶ್ವರ ಮಠ

ಅನ್ನದಾನೇಶ್ವರ ಮಠದ ಆವರಣದಲ್ಲಿ ಶಿವಲಿಂಗವಿದೆ. ನುಣುಪಾದ ಲಿಂಗ, ಒರಟು ಲಿಂಗ ಪೀಠದಲ್ಲಿ ಸ್ಥಾಪಿಸಲಾಗಿದೆ.

ಸ್ಥಳ: ಜೀವಣಗಿ **ಶಿಲ್ಪ:** ಭಿಕ್ಷಾಟನೆಯ ಶಿವ

ಶಿಲೆ: ಕಪ್ಪುಕಲ್ಲು. **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಬಿಬ್ಬಲಿಂಗೇಶ್ವರ ಗುಡಿ

ನವರಂಗದ ಅಧಿಷ್ಠಾನ ಭಾಗದಲ್ಲಿ ಚತುರ್ಬಾಹು ಭಿಕ್ಷಾಟನೆಯ ಶಿವನ ಶಿಲ್ಪವಿದೆ. ಮುಂದಿನ ಕೈಗಳೆರಡು ತ್ರುಟಿತ, ಹಿಂದಿನ ಕೈಗಳಲ್ಲಿ ಡಮರು ಮತ್ತು ತ್ರಿಶೂಲವಿದೆ. ತ್ರಿಮುಖವಿರುವ ಶಿಲ್ಪ ನಗ್ನ ಮತ್ತು ಸ್ಥಾನಿಕ ಭಂಗಿಯಲ್ಲಿರುವುದು. ಕಿರೀಟ, ಕರ್ಣಕುಂಡಲ, ಬಾಹುವಲ್ಯ, ಕೈಗಡಗ, ಕೊರಳಾಭರಣ, ಎದೆಯಾಭರಣ, ವಕ್ಷಬಂಧ, ಯಜ್ಞೋಪವೀತ, ಉಪವೀತ, ಸೊಂಟಬಂಧ, ಕುಚಹಾರ ಧರಿಸಿದೆ.

ಸ್ಥಳ: ಪಾಳಾ **ಶಿಲ್ಪ:** ಪೋಟಮಿಯಾ?

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ಉತ್ತಮ **ದೊರೆತ ಸ್ಥಳ:** ಮಲ್ಲಯ್ಯನ ಗುಡಿ

ಮಲ್ಲಯ್ಯನ ಗುಡಿಯಲ್ಲಿ ಶಿವಲಿಂಗವಿದೆ. ಕಪ್ಪು ಶಿಲೆಯಲ್ಲಿದೆ. ಪೋಟಮಿಯಾ ಮೂರ್ತಿ ಎಂದು ಪೂಜಿಸುವ ಕೆಂಪು-ಬಿಳಿ ಮಿಶ್ರಿತ ಶಿಲ್ಪ ಫಲಕದ ಮೇಲೆ ಕೊರೆಯಲಾಗಿದೆ. ಪೋಟಮಿಯಾ ಎಂದು ಬಹುಶಃ ಪಾರ್ವತಿಗೆ ಕರೆಯಲಾಗುತ್ತದೆ?

ಸ್ಥಳ: ಕೋಡ್ಲಿ **ಶಿಲ್ಪ:** ಭೈರವ

ಶಿಲೆ: ಕಪ್ಪು ಕಲ್ಲು **ಕಾಲ:** ಸು. ೧೧ನೇ ಶತಮಾನ

ಸ್ಥಿತಿ: ಉತ್ತಮ **ದೊರೆತ ಸ್ಥಳ:** ರಾಮಲಿಂಗೇಶ್ವರ ದೇವಾಲಯ

ಗರ್ಭಗುಡಿಯ ಶಿವನ ಶಿಲ್ಪ ನೃತ್ಯ ಭಂಗಿಯಲ್ಲಿದೆ. ಚತುರ್ಭುಜಧಾರಿಯಾದ ಭೈರವನ ಹಿಂದಿನ ಕೈಗಳಲ್ಲಿ ಡಮರು ಮತ್ತು ತ್ರಿಶೂಲ ಹಿಡಿದಿದೆ. ಮುಂದಿನ ಕೈಗಳು ಮತ್ತು ಕಾಲುಗಳು ತ್ರಿಭಂಗಿಯಲ್ಲಿದೆ. ಜಟಾಮುಕುಟದಾರಿ, ತೋಳ್ಬಂದಿ, ಮಣಿಕಂಠ, ಕರ್ಣಕುಂಡಲ, ಯಜ್ಞೋಪವೀತ, ಆರೋಪ್ಯಮಾಲ, ಕಟಿವಸ್ತ್ರ, ಕಾಲ್ಗಡಗ ಧರಿಸಿದೆ.

ಸ್ಥಳ: ಚೇಂಗಟಾ **ಶಿಲ್ಪ:** ಅಂಧಕಾಸುರ-ವಧಾ-ಮೂರ್ತಿ

ಶಿಲೆ: ಕಪ್ಪು ಕಲು **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ಉತ್ತಮ **ದೊರೆತ ಸ್ಥಳ:** ಸೋಮೇಶ್ವರ ದೇವಾಲಯ

ಕಲಬುರ್ಗಿ ಜಿಲ್ಲೆ ಗೆಜೆಟಿಯರ್‌ನಲ್ಲಿ ತ್ರಿಪುರಾಂತಕನನ್ನು ಕೊಲ್ಲುತ್ತಿರುವ ಮೂರ್ತಿ ಇದೆ ಎಂದು ಪು. ೭೨೨ರಲ್ಲಿದೆ. ಆದರೆ ಇದು ಅಂಧಕಾಸುರ-ವಧಾ-ಮೂರ್ತಿಯಾಗಿದೆ. ಸೋಮೇಶ್ವರ ದೇವಾಲಯದ ಭಿತ್ತಿ ಭಾಗದ ದೇವಕೋಷ್ಠದಲ್ಲಿ ಅಂಧಕಾಸುರನನ್ನು ವಧೆ ಮಾಡುತ್ತಿರುವಂತೆ ಬಿಂಬಿಸಲಾಗಿದೆ. ಹಿಂದಿನ ಕೈಗಳಲ್ಲಿ ಡಮರು ಇದೆ. ಎಡಕ್ಕೆ ಯೋಗೇಶ್ವರಿಯ ಚಿಕ್ಕ ಶಿಲ್ಪವಿದೆ. ಮುಂದಿನ ಬಲಗೈ ತ್ರಿಶೂಲ ದಂಡದ ಕೆಳಭಾಗ ಮತ್ತು ಎಡಗೈ ಮೇಲಿನ ತ್ರಿಶೂಲ ಭಾಗವನ್ನು ಹಿಡಿದು ಅಂಧಕಾಸುರನ ಹೊಟ್ಟೆಗೆ ತಿವಿಯುತ್ತಿರುವನು. ಶಿವನ ಹಿಂದಿನ ಎಡಗೈಯಲ್ಲಿ ಕಪಾಲ ಹಿಡಿದು ರಕ್ತ ಸಂಗ್ರಹಿಸಿರುವಂತೆ ತೋರುತ್ತದೆ.

ಸ್ಥಳ: ಚೇಂಗಟಾ **ಶಿಲ್ಪ:** ಭಿಕ್ಷಾಟನಾ ಶಿವ

ಶಿಲೆ: ಕಪ್ಪು ಕಲ್ಲು. **ಕಾಲ:** ಸು. ೧೧ನೇ ಶತಮಾನ

ಸ್ಥಿತಿ: ಉತ್ತಮ **ದೊರೆತ ಸ್ಥಳ:** ಸೋಮೇಶ್ವರ ದೇವಾಲಯ

ಕರ್ನಾಟಕ ಸರ್ಕಾರ ಗೆಜೆಟಿಯರ್(ಕಲಬುರ್ಗಿ ಜಿಲ್ಲೆ)ನಲ್ಲಿ ಭೈರವ ಶಿಲ್ಪ ಎಂದು (ಪು. ೭೨೨) ಗುರುತಿಸಲಾಗಿದೆ. ಆದರೆ ಇದು ಭಿಕ್ಷಾಟನಾ ಶಿವನ ಮೂರ್ತಿಯಾಗಿದೆ. ಸೋಮೇಶ್ವರ ಗುಡಿಯ ಹೊರ ಭಿತ್ತಿ ಭಾಗ ದೇವಕೋಷ್ಠಕದಲ್ಲಿ ಚತುರ್ಭುಜಧಾರಿ ಭಿಕ್ಷಾಟನಾ ಶಿವ ಹಿಂದಿನ ಕೈಯಲ್ಲಿ ಡಮರು ಮತ್ತು ತ್ರಿಶೂಲ ಮುಂದಿನ ಬಲಗೈ ಅಭಯಹಸ್ತ, ಎಡಗೈಯಲ್ಲಿ ರುಂಡವಿದೆ. ಹಿಂದೆ ನಾಯಿ ಶಿಲ್ಪವಿದೆ. ಭೈರವ ಶಿಲ್ಪದ ಇಕ್ಕೆಲಗಳಲ್ಲಿ ನೃತ್ಯ ಮಾಡುತ್ತಿರುವ ಪ್ರೇತ ಶಿಲ್ಪಗಳಿವೆ. ಮುಕುಟ, ತಲೆಯ ಹಿಂದೆ ವೃತ್ತಾಕಾರ ಚಕ್ರ, ಮಣಿಕಂಠ, ಉಪವೀತ, ಸೊಂಟಪಟ್ಟಿ, ಆರೋಪ್ಯಮಾಲಾ, ಕಾಲ್ಗಡಗ, ಪಾದರಕ್ಷೆ ಧರಿಸಿದೆ. ನಗ್ನ ಮತ್ತು ಸ್ಥಾನಿಕ ಭೈರವ ಶಿಲ್ಪ ಇದಾಗಿದೆ.

ಸ್ಥಳ: ಗೊಟ್ಟಂಗೊಟ್ಟಿ **ಶಿಲ್ಪ:** ಭೈರವ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೦ನೇ ಶತಮಾನ

ಸ್ಥಿತಿ: ಉತ್ತಮ **ದೊರೆತ ಸ್ಥಳ:** ಗೊಟ್ಟಂಗೊಟ್ಟಿ ಗುಡ್ಡ

ಚತುರ್ಭುಜಧಾರಿ ಭೈರವ ಕಪ್ಪುಶಿಲೆಯಲ್ಲಿದೆ. ಹಿಂದಿನ ಕೈಯಲ್ಲಿ ಡಮರು, ತ್ರಿಶೂಲ ಹಿಡಿದಿದೆ. ಮುಂದಿನ ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ರುಂಡ? (ತ್ರುಟಿತ), ಸೊಂಟಕ್ಕೆ ಗೆಜ್ಜೆ ಪಟ್ಟಿ, ಮೊಣಕಾಲಿಗೆ ಸರ್ಪಬಂಧ, ಮಣಿಕಂಠ, ಕಾಲ್ಗಡಗ, ಮುಕುಟ, ಎದೆಹಾರ, ಬಾಹುವಲ್ಯ, ಪಾದರಕ್ಷೆ ಧರಿಸಿದೆ. ಇಕ್ಕೆಲಗಳಲ್ಲಿ ಪ್ರೇತಗಳ ಶಿಲ್ಪಗಳಿವೆ.

ಸ್ಥಳ: ಮೋಘಾ ಶಿಲ್ಪ: ಭೈರವ

ಶಿಲೆ: ಕಪ್ಪು ಕಲ್ಲು. ಕಾಲ: ಸು.೧೧ನೇ ಶತಮಾನ

ಸ್ಥಿತಿ: ಉತ್ತಮ ದೊರೆತ ಸ್ಥಳ: ರಾಮಲಿಂಗೇಶ್ವರ ದೇವಾಲಯ

ಚತುರ್ಭುಜಧಾರಿ ಮೂರು ಮುಖಗಳುಳ್ಳ ಭೈರವ ಶಿಲ್ಪದಲ್ಲಿ ಹಿಂದಿನ ಕೈಗಳಲ್ಲಿ ತ್ರಿಶೂಲ ಮತ್ತು ಸರ್ಪಾಯುಧವಿದೆ. ಮುಂದಿನ ಬಲಗೈ ಅಭಯ ಮುದ್ರೆಯಲ್ಲಿದೆ. ಎಡಗೈಯಲ್ಲಿ ರುಂಡ ಹಿಡಿದಿದೆ. ಎಡಕ್ಕೆ ನಾಯಿ ಕುಳಿತಿದೆ (ಪ್ರಸ್ತುತ ತ್ರುಟಿತ). ಬಲಕ್ಕೆ ಚಾಮರಧಾರಿಯಿದೆ. ಜಟಾ ಮುಕುಟಧಾರಿ, ಕಂಠಹಾರ, ಕರ್ಣಕುಂಡಲ, ಕೊರಳಹಾರ, ಮಣಿಕಂಠ, ತೋಳ್ಬಂದಿ, ವಕ್ಷಬಂಧ, ಯಜ್ಞೋಪವೀತ, ಆರೋಪ್ಯಮಾಲ, ಕುಚಹಾರ, ಕಟಿವಸ್ತ್ರ ಧರಿಸಿದೆ.

ಸ್ಥಳ: ಮೋಘಾ ಶಿಲ್ಪ: ಶಿವ

ಶಿಲೆ: ಕಪ್ಪು ಕಲ್ಲು ಕಾಲ: ಸು.೧೧ನೇ ಶತಮಾನ

ಸ್ಥಿತಿ: ಉತ್ತಮ ದೊರೆತ ಸ್ಥಳ: ರಾಮಲಿಂಗೇಶ್ವರ ದೇವಾಲಯ

ಶಿವನ ಮೂರ್ತಿಶಿಲ್ಪದ ಹಿಂದಿನ ಕೈಗಳಲ್ಲಿ ಡಮರು ಮತ್ತು ತ್ರಿಶೂಲವನ್ನು ಹಿಡಿದಿದೆ. ಮುಂದಿನ ಎಡಗೈಯಲ್ಲಿ ಬೀಜಪುರ, ಬಲಗೈ ಅಭಯ ಮುದ್ರೆಯಲ್ಲಿದೆ. ಶಿವನ ಬಲಕ್ಕೆ ನಂದಿ ಶಿಲ್ಪವಿದೆ. ಎಡಕ್ಕೆ ಚಾಮರಧಾರಿ ದೇವಕನ್ಯೆಯರ ಶಿಲ್ಪಗಳಿವೆ.

ಸ್ಥಳ: ಚಿಂಚನ್‌ಸೂರು ಶಿಲ್ಪ: ಭಿಕ್ಷಾಟನೆಯ ಶಿವ

ಶಿಲೆ: ಕಪ್ಪು ಕಲ್ಲು ಕಾಲ: ಸು.೧೦ನೆಯ ಶತಮಾನ

ಸ್ಥಿತಿ: ಉತ್ತಮ ದೊರೆತ ಸ್ಥಳ: ಮಹೇಶ್ವರನ ಗುಡಿ

ಭಿತ್ತಿಯ ದೇವಕೋಷ್ಠಕದಲ್ಲಿ ಚತುರ್ಭುಜಧಾರಿ ಭಿಕ್ಷಾಟನೆ ಶಿವನ ಶಿಲ್ಪವಿದೆ. ಮುಂದಿನ ಕೈಗಳಲ್ಲಿ ಚೂರಿ, ಮೇಲೆ ಕಪೋತ ಅದೇ ಕೈಯಲ್ಲಿ ಕೆಳಗೆ ರುಂಡ ಹಿಡಿದಿದೆ. ಹಿಂದಿನ ಕೈಗಳಲ್ಲಿ ಡಮರು ಮತ್ತು ತ್ರಿಶೂಲ ಹಿಡಿದಿದೆ. ಹಿಂದಿನಿಂದ ನಾಯಿ ರುಂಡದಿಂದ ಬರುತ್ತಿರುವ ರಕ್ತ ನೆಕ್ಕಲೆತ್ನಿಸುತ್ತಿದೆ. ರುಂಡ ಮಾಲೆ, ಯಜ್ಞೋಪವೀತ, ಕೊರಳಿನ ಹಾರ, ಕರ್ಣಕುಂಡಲ, ಸೊಂಟಪಟ್ಟಿ, ಕೈಗಡಗ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಭೋಗಲಿಂಗ ಹಳ್ಳಿ ಶಿಲ್ಪ: ವೀರಭದ್ರೇಶ್ವರ

ಶಿಲೆ: ಕಪ್ಪು ಕಲ್ಲು. ಕಾಲ: ಸು.೧೧ನೇ ಶತಮಾನ

ಸ್ಥಿತಿ: ಉತ್ತಮ ದೊರೆತ ಸ್ಥಳ: ಭೋಗಲಿಂಗೇಶ್ವರ ಗುಡ್ಡ

ವೀರಭದ್ರ ಶಿಲ್ಪವು ಕಿರೀಟಮುಕುಟ ಧರಿಸಿದೆ. ಹಿಂದಿನ ಬಲಗೈಯಲ್ಲಿ ತ್ರಿಶೂಲವಿದೆ. ಡಮರು ಎಡಗೈಯ ಕರ್ತರಿ ಬೆರಳಲ್ಲಿದೆ. ಕೊರಳಹಾರ, ಕಂಠಹಾರ, ಸೊಂಟಪಟ್ಟಿ, ಕಟಿವಸ್ತ್ರ, ಮಣಿಕಂಠ, ತೋಳ್ಬಂದಿ, ಕಾಲ್ಗಡಗ ಧರಿಸಿದೆ. ಚತುರ್ಭುಜಧಾರಿಯ ಮುಂದಿನ ಕೈಗಳಲ್ಲಿ ಬಲಕ್ಕೆ ಖಡ್ಗ, ಎಡಗೈಯಲ್ಲಿ ಖೇಟಕ ಹಿಡಿದಂತಿದೆ. ಕೆಳಭಾಗದ ಬಲಕ್ಕೆ ಸ್ಥಾನಿಕ ಟಗರು(ದಕ್ಷ) ಅಂಜಲಿ ಮುದ್ರೆಯಲ್ಲಿದೆ.

ಸ್ಥಳ: ದೇಗಲ್ಮಡಿ　　**ಶಿಲ್ಪ:** ವೀರಭದ್ರೇಶ್ವರ

ಶಿಲೆ: ಕಪ್ಪು ಕಲ್ಲು　　**ಕಾಲ:** ಸು.೧೨ನೇ ಶತಮಾನ

ಸ್ಥಿತಿ: ಉತ್ತಮ　　**ದೊರೆತ ಸ್ಥಳ:** ಊರ ಪ್ರವೇಶದ ಗುಡಿ

ದೇಗಲ್ಮಡಿಯಲ್ಲಿ ವೀರಭದ್ರೇಶ್ವರ ಮೂರ್ತಿಶಿಲ್ಪವಿದೆ. ಇದರ ಕೆಳಬದಿಯ ಬಲಕ್ಕೆ ಟಗರು ಅಂಜಲಿ ಮುದ್ರೆಯಲ್ಲಿದೆ. ಬಲಗೈ ಖಡ್ಗಧಾರಿ, ಎಡಗೈಯಲ್ಲಿ ಖೇಟಕವಿದೆ. ಷಡ್ಭುಜಧಾರಿಯ ಈ ಶಿಲ್ಪ ತ್ರುಟಿತವಾಗಿದೆ. ಮಣಿಕಂಠ, ಕಿರೀಟಧಾರಿ, ಕೊರಳಹಾರ, ಯಜ್ಞೋಪವೀತ ಮತ್ತು ಕಾಲ್ಗಡಗ ಧರಿಸಿದೆ.

ಸ್ಥಳ: ಸುಲೇಪೇಟೆ　　**ಶಿಲ್ಪ:** ವೀರಭದ್ರೇಶ್ವರ

ಶಿಲೆ: ಕಪ್ಪು ಕಲ್ಲು.　　**ಕಾಲ:** ಸು. ೧೧ನೇ ಶತಮಾನ

ಸ್ಥಿತಿ: ಉತ್ತಮ　　**ದೊರೆತ ಸ್ಥಳ:** ವೀರಭದ್ರೇಶ್ವರ ದೇವಾಲಯ

ಈ ಮೂರ್ತಿಶಿಲ್ಪದ ಹಿಂದಿನ ಕೈಯಲ್ಲಿ ತ್ರಿಶೂಲ, ಡಮರು ಮುಂದಿನ ಕೈಯಲ್ಲಿ ಖಡ್ಗ ಮತ್ತು ಎಡಗೈಯಲ್ಲಿ ಖೇಟಕ ಇದೆ. ಕಿರೀಟಧಾರಿ ಶಿಲ್ಪದ ಪ್ರಭಾವಳಿಯಲ್ಲಿ ಸೂರ್ಯ ಮತ್ತು ಚಂದ್ರರ ಚಿನ್ಹೆಯಿದೆ. ಕರ್ಣಕುಂಡಲ, ತೊಳ್ಬಂದಿ, ಮಣಿಕಂಠ, ಎದೆಹಾರ, ಯಜ್ಞೋಪವೀತ, ಬಾಹುವಲ್ಯ, ಆರೋಪ್ಯಮಾಲಾ, ಕಾಲ್ಗಡಗ, ಕಟಿವಸ್ತ್ರವನ್ನೊಳಗೊಂಡಿದೆ.

ಗ್ರಾಮ: ಮೇಳಕುಂದಾ(ಕೆ)　　**ಶೈಲಿ:** ಶಿವಲಿಂಗ

ಶಿಲೆ: ಕಪ್ಪುಶಿಲೆ　　**ಕಾಲ:** ಸು.೧೭ನೆಯ ಶತಮಾನ,

ಸ್ಥಿತಿ: ಕನಿಷ್ಠ,　　**ದೊರೆತ ಸ್ಥಳ:** ಹನುಮಾನ್ ಮಂದಿರ

ಹನುಮಾನ್ ಗರ್ಭಗುಡಿಯ ಎಡಕ್ಕೆ ಲಿಂಗ ಪೀಠ ಮತ್ತು ಶಿವಲಿಂಗವಿದೆ.

ರುಮ್ಮನಗೂಡುನಲ್ಲಿ ಶಂಕರನಾರಾಯಣ ದೇವಾಲಯದ ಪ್ರವೇಶ ದ್ವಾರದ ಗೋಡೆಯ ಮೇಲೆ ಅಷ್ಟಭುಜದಾರಿ ನಾಟ್ಯ ಶಿವನ ಶಿಲ್ಪವಿದೆ. ರಟ್ಕಲ್‌ನ ಗೌರಿಶಂಕರ ಗುಡ್ಡದಲ್ಲಿರುವ ವೀರಭದ್ರೇಶ್ವರ ಶಿಲ್ಪ ಖಡ್ಗ, ಬಿಲ್ಲು ಬಾಣ, ಖೇಟಕ ಹಿಡಿದಿದೆ. ಬಲಕ್ಕೆ ನಿಂತ ಟಗರು (ದಕ್ಷ) ಅಂಜಲಿ ಮುದ್ರೆಯಲ್ಲಿದೆ.

ಶಿವಲಿಂಗಗಳು : ಚಿಂಚೋಳಿಯಲ್ಲಿ ಪುರಾತನ ಪಂಚಲಿಂಗೇಶ್ವರ ದೇವಾಲಯವಿದೆ. ನೀರಿನ ಚಿಲುಮೆಯಿಲ್ಲಿವೆ. ಐದು ಲಿಂಗಗಳು ಐದು ಸ್ತರ ನೀರಿನ ಮಟ್ಟ ಸೂಚಿಸುವಂತಿದೆ. ನಂದಿಯೊಂದನ್ನೊಳಗೊಂಡಿದೆ. ಭೋಗಲಿಂಗದ ಗುಡ್ಡದಲ್ಲಿ ಶಿವಲಿಂಗಗಳು ಇವೆ. ಹಲವು ಚಿಕ್ಕ ಚಿಕ್ಕ ಲಿಂಗಗಳು ಮತ್ತು ಕೆಲ ದೊಡ್ಡ ಲಿಂಗಗಳಿವೆ. ಇಲ್ಲಿ ಹಲವು ನಂದಿಶಿಲ್ಪ ಮತ್ತು ಒಂದು ಯಜ್ಞಕುಂಡವನ್ನೊಳಗೊಂಡಿದೆ.

ಇಲ್ಲಿ ಅಧಿಕವಾಗಿ ಬ್ರಹ್ಮಸೂತ್ರ ಲಿಂಗಗಳು ದೇವಾಲಯಗಳಲ್ಲಿವೆ. ಅವುಗಳೆಂದರೆ ಮಿರ್‍ಯಾಣದ ಈಶ್ವರ ದೇವಾಲಯ, ರಾಮತೀರ್ಥ, ಮೋಘ, ರಟ್ಕಲ್, ಸುಲೇಪೇಟೆಗಳಲ್ಲಿವೆ. ಸಾಮಾನ್ಯವಾಗಿ ಶಿವಲಿಂಗಗಳು ಬ್ರಹ್ಮಪೀಠ, ವಿಷ್ಣುಪೀಠ, ರುದ್ರಪೀಠ ಎಂದು ಮೂರು ಸ್ತರದಲ್ಲಿ ಕೆತ್ತಲ್ಪಟ್ಟಿರುತ್ತವೆ. ಹೆಚ್ಚಾಗಿ ವಿಷ್ಣು ಪೀಠದಲ್ಲಿ ಲಿಂಗ ಪ್ರತಿಷ್ಠಾಪಿಸಲಾಗಿರುತ್ತದೆ.

ಸ್ಥಳ: ಜೀವಣಗಿ **ಶಿಲ್ಪ:** ಸುಬ್ರಹ್ಮಣ್ಯ
ಶಿಲೆ: ಕಪ್ಪುಕಲ್ಲು. **ಕಾಲ:** ಸು.೮ನೆಯ ಶತಮಾನ
ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಬಿಬ್ಬಲಿಂಗೇಶ್ವರ ಗುಡಿ

ಸುಬ್ರಹ್ಮಣ್ಯನ ಶಿಲ್ಪವು ಕಟಿಹಸ್ತ(ಬಲಕ್ಕೆ) ಎಡಗೈಯಲ್ಲಿ ಭಲ್ಲೆ ಹಿಡಿದ ಶಿಲ್ಪ ಸ್ಥಾನಿಕ ಭಂಗಿಯಲ್ಲಿದೆ. ಕಿರೀಟ, ಕರ್ಣಕುಂಡಲ, ಬಾಹುವಲ್ಯ, ಕೈಗಡಗ, ಕೊರಳಾಭರಣ, ಎದೆಯಾಭರಣ, ವಕ್ಷಬಂಧ, ಯಜ್ಞೋಪವೀತ, ಉಪವೀತ, ಸೊಂಟಬಂಧ, ಕುಚಹಾರ ಇಳಿವಸ್ತ್ರ ಧರಿಸಿದೆ.

ಇತರೆ ಶೈವ ಮೂರ್ತಿಶಿಲ್ಪಗಳು

*** ನಂದಿಶಿಲ್ಪ**

ಸ್ಥಳ: ಬೋಳೆವಾಡ, **ಶಿಲ್ಪ:** ಶಿವಲಿಂಗ-ನಂದಿ,
ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧-೧೨ನೆಯ ಶತಮಾನ
ಸ್ಥಿತಿ: ತ್ರುಟಿತ. **ದೊರೆತ ಸ್ಥಳ:** ಭೋಗಲಿಂಗೇಶ್ವರ ಗುಡಿ

ಗುಡಿಯ ಎಡ ಪ್ರಾಂಗಣದಲ್ಲಿ ಎರಡು ಶಿವಲಿಂಗ ಮತ್ತು ಎರಡು ನಂದಿಶಿಲ್ಪಗಳು ದೊರೆತಿವೆ. ನಂದಿಯ ಕೊರಳಿಗೆ ಗಂಟೆ, ಕೊರಳಹಾರ ಧರಿಸಿದ ಕೆತ್ತನೆಯಿವೆ.

ಸ್ಥಳ: ಹಾತಿಗುಂದಾ **ಶಿಲ್ಪ:** ನಂದಿ
ಶಿಲೆ: ಕಪ್ಪುಶಿಲೆ **ಕಾಲ:** ಸು.೧೨ನೆಯ ಶತಮಾನ
ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ನಂದಿಶಿಲ್ಪವು ಸಾದಾ ಕೆತ್ತನೆಯಿಂದ ಕೂಡಿದೆ. ಕೊರಳಲ್ಲಿ ಗಂಟೆಯಿದೆ.

ಸ್ಥಳ: ಮೇಳಕುಂದಾ(ಕೆ) **ಶಿಲ್ಪ:** ನಂದಿ
ಶಿಲೆ: ಕಪ್ಪುಶಿಲೆ **ಕಾಲ:** ಸು.೧೦ನೆಯ ಶತಮಾನ
ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಭೋಗಲಿಂಗೇಶ್ವರ ಗುಡಿ

ಆಲದ ಮರದ ಕೆಳಗೆ ನಂದಿ ಶಿಲ್ಪದ ಅರ್ಧಭಾಗ ಮಣ್ಣಿನಲ್ಲಿ ಹೂತುಹೋಗಿದೆ.

ಸ್ಥಳ: ಕಡಣಿ(ಕಣ್ಣಿ) **ಶಿಲ್ಪ:** ನಂದಿ
ಶಿಲೆ: ಕಪ್ಪುಶಿಲೆ **ಕಾಲ:** ಸು.೧೦ನೆಯ ಶತಮಾನ
ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಮಂದಿರದ ಪಕ್ಕದಲ್ಲಿ

ಆಲದ ಮರದ ಕೆಳಗೆ ನಂದಿಶಿಲ್ಪವಿದೆ. ಕೊರಳಲ್ಲಿ ಅಲಂಕಾರಿಕ ಗೆಜ್ಜೆಯ ಹಾರ, ಬಲಗಾಲು ಸ್ವಲ್ಪ ಮುಂದೆ ಚಾಚಿದಂತಿದೆ. ಹಿಂದಿನ ಮತ್ತು ಎಡಗಾಲು ಮಡಚಿಕೊಂಡಿದೆ.

ಸ್ಥಳ: ಕೇರಿಅಂಬಲಗಾ **ಶಿಲ್ಪ:** ನಂದಿ

ಶಿಲೆ: ಕಪ್ಪುಕಲ್ಲು **ಕಾಲ:** ಸು.೮ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಮಲ್ಲಿಕಾರ್ಜುನ ಗುಡಿ

ಕಪ್ಪು ಶಿಲೆಯ ನಂದಿ ಶಿಲ್ಪವಿದೆ. ಇದರ ವಿಶೇಷತೆ ಎಂದರೆ, ಮಾನವನಂತೆ ಮುಖ ಹೊಂದಿರುವ ಶಿಲ್ಪವಾಗಿದೆ. ಇದು ಸು.೧೨ನೇಯ ಶತಮಾನದ್ದಾಗಿದೆ. ತಲೆಯ ಮೇಲೆ ಪೇಟ, ಉದ್ದನೆಯ ಮೀಸೆ, ದೊಡ್ಡ ಕಣ್ಣುಗಳು, ಉದ್ದನೆಯ ಹುಬ್ಬು, ನಗುಮುಖದಲ್ಲಿ ಕುಳಿತಿದೆ. ಕೋರಳಲ್ಲಿ ಗಂಟೆ ಮತ್ತು ಹಾರವಿದೆ. ಅದರ ಕುತ್ತಿಗೆಯನ್ನು ನಂದಿಯಂತೆ ಕೆತ್ತಲಾಗಿದೆ.

ಭೋಗಲಿಂಗೇಶ್ವರ ಗುಡ್ಡದಲ್ಲಿ ಹಲವು ನಂದಿ ಮೂರ್ತಿಶಿಲ್ಪಗಳು ಕುಳಿತ ಭಂಗಿಯಲ್ಲಿವೆ. ಅದರಲ್ಲಿ ಚಿಕ್ಕ ಮತ್ತು ದೊಡ್ಡ ನಂದಿಮೂರ್ತಿಶಿಲ್ಪಗಳಿವೆ. ಗೆಜ್ಜೆ ಹಾರ, ಡುಬ್ಬದ ಹಾರ, ಡುಬ್ಬದಿಂದ ಕೊರಳವರೆಗೆ ಗೆಜ್ಜೆಹಾರದಿಂದ ಅಲಂಕರಣೆ ಮಾಡಿದ ಶಿಲ್ಪಗಳಿವೆ. ದೇಗಲ್ಮಡಿಯ ಬಕ್ಕಪ್ರಭು ಗುಡಿಯ ಬಳಿ ಕಪ್ಪುಶಿಲೆಯ ಬೃಹದಾಕಾರ ನಂದಿ ಮೂರ್ತಿ ಶಿಲ್ಪವಿದೆ. ಸುಮಾರು ನಾಲ್ಕು ಅಡಿ ಎತ್ತರವಿರುವ ಈ ಶಿಲ್ಪದಲ್ಲಿ ಹಣೆಪಟ್ಟಿ, ಕೊರಳಿಗೆ ಗಂಟೆಯ ಹಾರವಿದೆ.

ಮೋಘಾದ ರಾಮಲಿಂಗೇಶ್ವರ ಗುಡಿಯ ಅಭಂಗ ಮುದ್ರೆ (ಕುಳಿತ ಭಂಗಿಯ) ನಂದಿಶಿಲ್ಪವು ಹಣೆಪಟ್ಟಿ, ಡುಬ್ಬದಿಂದ ಕೊರಳವರೆಗೆ ಗೆಜ್ಜೆಹಾರ, ಕೊರಳಿಗೆ ಗಂಟೆಹಾರ, ಬೆನ್ನುಪಟ್ಟಿ, ಡುಬ್ಬದ ಅಲಂಕರಣೆಯನ್ನೊಳಗೊಂಡಿದೆ. ಹೀಗೆ ನಂದಿ ಮೂರ್ತಿಶಿಲ್ಪಗಳು ನಿಡಗುಂದ, ಸುಲೇಪೇಟೆ, ಶಿರೋಳ್ಳಿ, ಸೋಮಲಿಂಗದಹಳ್ಳಿ, ರುಮ್ಮನಗೂಡು, ಪಸ್ತಾಪುರ, ಚಿಂಚೋಳಿ, ಮಿರ್ಯಾಣದ ಶೈವ ದೇವಾಲಯಗಳಲ್ಲಿವೆ.

ಶೈವ ದ್ವಾರಪಾಲಕರು: ಶಿವನ ಗುಡಿಗಳ ಪ್ರವೇಶ ದ್ವಾರದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳು ಕಾವಲಿಗಾಗಿ ನಿಲ್ಲಿಸಿದಂತೆ ಇರುತ್ತವೆ. ಶಿವನ ಆಯುಧ ಹಿಡಿದಿವೆ. ಚೇಂಗಟಾದ ಬಾಗಿಲವಾಡಗಳಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ರುಮ್ಮನಗೂಡ ರಾಮಲಿಂಗೇಶ್ವರ ಬಾಗಿಲವಾಡದ ಶೈವ ದ್ವಾರಪಾಲಕರ ಹಿಂದಿನ ಕೈಯಲ್ಲಿ ಚಿಕ್ಕ ಭರ್ಚಿ ಮತ್ತು ಸರ್ಪದಂಡ, ಮುಂದಿನ ಬಲಗೈ ಅಭಯಮುದ್ರೆಯಲ್ಲಿದೆ. ಮತ್ತು ಎಡಗೈಯಲ್ಲಿ ಗದೆ ಇದೆ. ಕಿರೀಟ, ಆರೋಪ್ಯಮಾಲಾ, ಕೊರಳಹಾರ, ಕಂಠಹಾರ, ಎದೆಪಟ್ಟಿ, ಸೊಂಟಪಟ್ಟಿ ಧರಿಸಿದ್ದಾರೆ. ನಿಂತ ದೇವಕನ್ಯೆಯರು ಫಲ, ಕಾಯಿ, ಹಾರವನ್ನು ಹಿಡಿದಿವೆ. ಮತ್ತು ದೇವಪುರುಷರು ಚಂದ್ರಕೋನಾಕಾರದ ದಂಡ ಹಿಡಿದಿದ್ದಾರೆ.

ದೇಗಲ್ಮಡಿಯ ಸಂಗಮೇಶ್ವರ ದೇವಾಲಯದ ಚತುರ್ಭುಜಧಾರಿ ಶೈವ ದ್ವಾರಪಾಲಕರು ದಂಡ, ಗಧಾ, ಡಮರು ಹಿಡಿದಿದ್ದಾರೆ. ಎಡಗೈ ಪ್ರಸ್ತುತ ತ್ರುಟಿತವಾಗಿದೆ. ಕಿರೀಟಧಾರಿ, ವಕ್ಷಬಂಧ, ಕೊರಳಹಾರ, ಕಾಲ್ಗಡಗ, ಕರ್ಣಕುಂಡಲ ಧರಿಸಿವೆ. ಮಲ್ಲಿಕಾರ್ಜುನ ಗುಡಿಯ ಬಾಗಿಲವಾಡ ಕರಕಮುಕ್ತಿ ಮತ್ತು ಭೋಗಲಿಂಗ ಗುಡ್ಡದ ಪ್ರಸ್ತುತ ತ್ರುಟಿತ ಬಾಗಿಲವಾಡಗಳಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ರುಮ್ಮನಗೂಡು, ಮೋಘಾ, ಮತ್ತು ಹುಲುಸುಗೂಡಿನ ರಾಮಲಿಂಗೇಶ್ವರ ದೇವಾಲಯಗಳ

ಬಾಗಿಲವಾಡಗಳಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಸುಲೇಪೇಟೆಯ ಈಶ್ವರ ದೇವಾಲಯದ ಬಾಗಿವಾಡದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಮತ್ತು ವೀರಭದ್ರೇಶ್ವರ ಗರ್ಭಗುಡಿಯ ಬಾಗಿಲವಾಡದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಕೆಲವು ಕಡೆ ಡಮರು, ತ್ರಿಶೂಲ ಮುಂದಿನ ಎಡಗೈಯಲ್ಲಿ ಗದೆ ಇದೆ. ಬಲಗೈ ಅಭಯಮುದ್ರೆಯಲ್ಲಿದೆ. ಮುಕುಲ ಹಸ್ತ ಹೊಂದಿರುವಂತೆ ಕೆತ್ತಲ್ಪಟ್ಟವೆ. ನಿಡಗುಂದದ ಶೈವ ದ್ವಾರಪಾಲಕರ ಶಿಲ್ಪ ಸೊಂಟದಿಂದ ಕಿರೀಟದವರೆಗೆ ಸು.೫ ಅಡಿ ಎತ್ತರವಾಗಿದೆ. ಕೆಳಭಾಗ ಪ್ರಸ್ತುತ ಭೂಮಿಯಲ್ಲಿ ಮುಚ್ಚಿದೆ. ಹಿಂದಿನ ಕೈಗಳು ಡಮರು, ತ್ರಿಶೂಲ, ಮುಂದಿನ ಬಲಗೈ ಅಭಯಮುದ್ರೆ, ಎಡಗೈಯಲ್ಲಿ ಗದೆ ಇದೆ. ಎಡಕ್ಕಿರುವ ಹಿಂದಿನ ಬಲಗೈ ಪ್ರಸ್ತುತ ತ್ರುಟಿತ ಎಡಗೈಯಲ್ಲಿ ಅಂಕುಶ ಬಲಗೈ ಕುಮುದ ಮುದ್ರೆಯಲ್ಲಿದೆ. ಜಟಾಮುಕುಟ, ವಕ್ಷಬಂಧ, ಯಜ್ಞೋಪವೀತ, ಎದೆಹಾರ, ಬಾಹುವಲ್ಯ, ತೋಳ್ಬಂದಿ, ಮಣಿಕಂಠ, ಹೆಬ್ಬೆರೆಳುಂಗುರ, ಕಿರಿಬೆರಳುಂಗುರ, ಕಟಿವಸ್ತ್ರ, ಕರ್ಣಕುಂಡಲ ಧರಿಸಿವೆ.

ಗಂಗೆ ಯಮುನೆಯರ ಶಿಲ್ಪ: ಸಾಮಾನ್ಯವಾಗಿ ಶೈವ ದ್ವಾರಗಳ ಬಾಗಿಲುವಾಡದ ಮೇಲೆ ಇಬ್ಬರು ಸ್ತ್ರೀಯರು ಬಿಂದಿಗೆಯಲ್ಲಿ ನೀರು ಹಿಡಿದು ನಿಂತಿರುವ ಶಿಲ್ಪ ಇರುತ್ತವೆ.

ರುಮ್ಮನಗೂಡಿನ ರಾಮಲಿಂಗೇಶ್ವರ ದೇವಾಲಯದಲ್ಲಿ ಕರ್ಣಕುಂಡಲ, ತಲೆಗೂದಲಿನ ಅಲಂಕರಣೆ, ಎದೆಹಾರ, ಕೊರಳಹಾರ, ಸೊಂಟದಪಟ್ಟಿ, ಕಟಿವಸ್ತ್ರ, ಕಾಲ್ಗಡಗ, ಕೈಬಳೆ, ತೋಳ್ಬಂದಿ, ಆಭರಣಗಳನ್ನು ಧರಿಸಿವೆ. ಕೈಯಲ್ಲಿ ಬಿಂದಿಗೆ ಹಿಡಿದು ನಿಂತಿರುವ ಭಂಗಿಯಲ್ಲಿವೆ.

ಮಿರ್ಯಾಣದ ಮೂರು ದೇವರ ಗುಡಿಯ ಒಂದು ಗರ್ಭಗುಡಿ ಬಾಗಿಲವಾಡದ ಮೇಲೆ ಗಂಗೆ, ಯಮುನೆಯರ ಶಿಲ್ಪಗಳು ಪ್ರಧಾನವಾಗಿದೆ. ನೀರಿನ ಬಿಂದಿಗೆ ಹಿಡಿದು ಕೈಬಳೆ, ತೋಳ್ಬಂದಿ, ಹಾರ, ಕಟಿವಸ್ತ್ರ, ಸೊಂಟಪಟ್ಟಿ, ಕಾಲ್ಗಡಗ, ಧಮ್ಮಿಲ, ಮಕರ ಕುಂಡಲ ಧರಿಸಿದೆ. ಎಡಗೈಯಲ್ಲಿ ಕಮಲ ಹಿಡಿದಿದೆ. ಇಳಿಬಿಟ್ಟ ಲಂಗದ ವಸ್ತ್ರವಿದೆ. ಚೇಂಗಟಾದ ಸೋಮೇಶ್ವರ ಗುಡಿಯಲ್ಲಿ ಈ ರೀತಿಯ ಗಂಗೆ ಯಮುನೆಯರ ಶಿಲ್ಪಗಳಿವೆ.

ಚಾಮರಧಾರಿಗಳ ಶಿಲ್ಪ: ಭೋಗಲಿಂಗ, ಕರಕಮುಕ್ಕಿ, ಚೇಂಗಟಾ, ರುಮ್ಮನಗೂಡು, ಮೋಘಾ, ಪಸ್ತಾಪೂರು, ಸುಲೇಪೇಟೆ, ನಿಡಗುಂದ, ಶಿರೊಳ್ಳಿಯ ಶೈವ ದೇವಾಲಯಗಳಲ್ಲಿ ಸ್ತ್ರೀ ಚಾಮರಧಾರಿಗಳಿವೆ. ಈ ಚಾಮರಧಾರಿಗಳಲ್ಲಿ ಬಲ ಭಾಗಕ್ಕಿರುವವಳು ಬಲಗೈಯಲ್ಲಿ, ಎಡಭಾಗಕ್ಕಿರುವವಳು ಎಡಗೈಯಲ್ಲಿ ಚಾಮರ ಹಿಡಿದು ನಿಂತಿರುತ್ತಾರೆ. ಅವರ ಇನ್ನೊಂದು ಕೈ ಕಟಿಹಸ್ತ ಇಲ್ಲವೆ ಕಮಲ ಹಿಡಿದಿವೆ. ಮುಕುಟ, ಬಳೆ, ಸೊಂಟಪಟ್ಟಿ, ಕುಚಹಾರ, ಕಟಿವಸ್ತ್ರ, ಕಾಲ್ಗಡಗ, ಯಜ್ಞೋಪವೀತ, ಆರೋಪ್ಯಮಾಲಾ ಧರಿಸಿರುತ್ತಾರೆ.

ದೇವಕನ್ಯೆಯರು, ದೇವಪುರುಷ ಮತ್ತು ಭಕ್ತರ ಶಿಲ್ಪಗಳು: ಚೇಂಗಟಾ, ರುಮ್ಮನಗೂಡು, ಮೋಘಾ, ಶೈವ ದೇವಾಲಯಗಳಲ್ಲಿ ಹೆಚ್ಚಾಗಿ ಈ ರೀತಿಯ ದೇವಪುರುಷ ಮತ್ತು ದೇವಕನ್ಯೆಯರ ಮತ್ತು ಭಕ್ತರ ಶಿಲ್ಪಗಳಿವೆ. ಕೆಲ ಗುಡಿಗಳ ಬಾಗಿಲವಾಡದ ಮುಂದೆ ಅಂಜಲಿ ಹಸ್ತದಲ್ಲಿ ನಿಂತ

ಭಕ್ತರ ಶಿಲ್ಪಗಳಿವೆ. ಚಾಮರಧಾರಿಗಳ ಹಿಂದೆ ಹಣ್ಣಿನ ಗೊಂಚಲು, ಹೂ, ಕಾಯಿ ಹಿಡಿದ ದೇವ ಸ್ತ್ರೀಯರು ಕುಂತಲ ಮುಕುಟ, ಬಾಹುವಲ್ಯ, ತೋಳ್ಬಂದಿ, ಸ್ತನಹಾರ, ಕೊರಳಹಾರ, ಕೈಬಳೆ, ಕಾಲ್ಗಡಗ, ಆಭರಣಗಳ ಅಲಂಕರಣೆ ಮಾಡಿಕೊಂಡು ನಿಂತಿರುತ್ತಾರೆ. ಅವರ ಹಿಂದೆ ನಿಂತ ದೇವಪುರುಷ ಚಂದ್ರಾಕೃತಿಯ ದಂಡವೊಂದನ್ನು ಎರಡು ಕೈಯಲ್ಲಿ ಅದರ ಕೊನೆಯ ಎರಡೂ ತುದಿಗಳನ್ನು ಹಿಡಿದು ನಿಂತಿರುತ್ತಾನೆ. ಪುರುಷ ಮಣಿಕಂಠ, ಮುಂಗೈಪಟ್ಟಿ, ತೋಳ್ಬಂದಿ, ಬಾಹುವಲ್ಯ, ಎದೆಹಾರ, ಯಜ್ಞೋಪವೀತ, ಆರೋಪ್ಯಮಾಲಾ, ಕಟಿವಸ್ತ್ರ, ಕಾಲ್ಗಡಗ, ಕಿರೀಟ ಧರಿಸಿರುತ್ತಾರೆ.

೫.೨.೨. ವೈಷ್ಣವ ಶಿಲ್ಪಗಳು

ಸ್ಥಳ: ಹುಣಸಿ ಹಡಗಲಿ **ಶಿಲ್ಪ:** ಹೃಷಿಕೇಶ

ಶಿಲೆ: ಒರಟಾದ ಕಪ್ಪು ಕಲ್ಲು **ಕಾಲ:** ಸು.೯ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಧರಣೇಂದ್ರ ಪದ್ಮಾವತಿದೇವಿ ಜೈನ ಬಸದಿ

ತ್ರುಟಿತ ಹೃಷಿಕೇಶನ ಶಿಲ್ಪವಿದೆ. ಹಿಂದಿನ ಕೈಗಳು ಚಕ್ರ, ಶಂಖ, ಮುಂದಿನ ಕೈಗಳು ಗದೆ ಮತ್ತು ಎಡಗೈ ತ್ರುಟಿತ(ಪದ್ಮ ಪುರಾಣ). ಕಿರೀಟ, ಕರ್ಣಕುಂಡಲ, ಬಾಹುವಲ್ಯ, ಭುಜಬಂಧ, ಕೊರಳಾಭರಣ, ವಕ್ಷಬಂಧ, ಯಜ್ಞೋಪವೀತ, ಕೈಗಡಗ, ಸೊಂಟಬಂಧ, ಸೊಂಟಪಟ್ಟಿ, ಇಳಿಬಟ್ಟೆ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ. ಬಲಕ್ಕೆ ಗರುಡ ಅಂಜಲಿ ಮುದ್ರೆಯಲ್ಲಿ ಕುಳಿತಿದೆ. ಇಕ್ಕೆಲಗಳಲ್ಲಿ ಚಾಮರಧಾರಿಯರ? ಶಿಲ್ಪ ಕೆತ್ತನೆಯಿದೆ.

ಸ್ಥಳ: ಗರೂರು **ಶಿಲ್ಪ:** ವಿಷ್ಣು

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೨ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ತ್ರುಟಿತ ಚತುರ್ಬಾಹು ವಿಷ್ಣುವಿನ ಅವತಾರವಾದ ವಾಸುದೇವನ ಶಿಲ್ಪವಿದೆ. ಹಿಂದಿನ ಎಡಗೈ ಶಂಖ, ಬಲಗೈ ಚಕ್ರ, ಮುಂದಿನ ಎಡಗೈ ಗದೆ ಮತ್ತು ಬಲಗೈ ತ್ರುಟಿತವಾಗಿದೆ. ಕಿರೀಟ, ಕರ್ಣಕುಂಡಲ, ಕೊರಳಾಭರಣ, ಕೈಗಡಗ, ಇಳಿಬಟ್ಟೆ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.[೩]

ಸ್ಥಳ: ಬಿದನೂರು **ಶಿಲ್ಪ:** ಕೇಶವ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಅಗಸಿ

ಸ್ಥಾನಿಕ ಕೇಶವನ ಶಿಲ್ಪವಿದೆ. ಹಿಂದಿನ ಕೈಗಳು ಶಂಖ, ಚಕ್ರ, ಮುಂದಿನ ಕೈಗಳು ಪದ್ಮ ಮತ್ತು ಗದೆ ಹಿಡಿದಂತೆ ಕೆತ್ತಿದೆ. ಬಲಕ್ಕೆ ಅಂಜಲಿ ಹಸ್ತದಲ್ಲಿ ಭಕ್ತ ಗರುಡ? ಶಿಲ್ಪವಿದೆ. ಕಿರೀಟ, ಕರ್ಣಕುಂಡಲ, ಬಾಹುವಲ್ಯ, ಯಜ್ಞೋಪವೀತ, ಕೈಗಡಗ, ಮಣಿಕಂಠ, ಕೊರಳಿನಾಭರಣ, ಸೊಂಟಬಂಧ, ಕುಚಹಾರ, ಎದೆಬಂಧ, ಕಾಲ್ಗಡಗವನ್ನು ಧರಿಸಿದೆ.

ಸ್ಥಳ: ಇಟಗಾ(ಬಿ) ಶಿಲ್ಪ: ವಿಷ್ಣು

ಶಿಲೆ: ಕಪ್ಪು ಕಲ್ಲು. ಕಾಲ: ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಈಶ್ವರ ಗುಡಿ

ಭಿತ್ತಿ ಭಾಗದಲ್ಲಿರುವ ವಿಷ್ಣುವಿನ ಶಿಲ್ಪ ಚತುರ್ಬಾಹುವಾಗಿದೆ. ಮುಂದಿನ ಕೈಗಳಲ್ಲಿ ಎಡಗೈ-ಗದೆ, ಹಿಂದಿನ ಕೈಗಳಲ್ಲಿ ಚಕ್ರ, ಶಂಖವಿದೆ. ವಾಸುದೇವನ ಶಿಲ್ಪವಾಗಿದೆ. ಕಿರೀಟಧಾರಿ, ಕರ್ಣಕುಂಡಲ, ಬಾಹುವಲ್ಯ, ಮಣಿಕಂಠ, ಎದೆಹಾರ, ವಕ್ಷಬಂಧ, ಕೊರಳಿನಹಾರ, ಯಜ್ಞೋಪವೀತ, ಕೈಗಡಗ ಕುಚಹಾರ, ಇಳಿಬಟ್ಟೆ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ. ಬಲಕ್ಕೆ ಗರುಡ ಅಂಜಲಿ ಮುದ್ರೆಯಲ್ಲಿದೆ

ಸ್ಥಳ: ಕೊಲ್ಲೂರು ಶಿಲ್ಪ: ವಿಷ್ಣು

ಶಿಲೆ: ಕಪ್ಪು ಕಲ್ಲು ಕಾಲ: ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಗುಡಿ

ಹನುಮಾನ್ ಗುಡಿಯ ಪ್ರಾಂಗಣದಲ್ಲಿ ಗರ್ಭಗುಡಿಯ ಬಲಕ್ಕೆ ಎತ್ತರದ ವಿಷ್ಣುವಿನ ಶಿಲ್ಪ ಕಪ್ಪುಶಿಲೆಯಲ್ಲಿದೆ. ಮುಂದಿನ ಕೈಗಳಲ್ಲಿ ಪದ್ಮ(ಬಲ), ಎಡಗೈಯಲ್ಲಿ ಗದೆ, ಹಿಂದಿನ ಬಲಗೈಯಲ್ಲಿ ಶಂಖ, ಎಡಗೈಯಲ್ಲಿ ಚಕ್ರವಿರುವ ಪ್ರದ್ಯುಮ್ನನ ಸ್ಥಾನಿಕ ಶಿಲ್ಪವಿದೆ. ಕಿರೀಟಧಾರಿ, ಕರ್ಣಕುಂಡಲ, ಬಾಹುವಲ್ಯ, ಕೈಗಡಗ, ಮಣಿಕಂಠ, ಕೊರಳಾಭರಣ, ಎದೆಹಾರ, ಉದರಬಂಧ, ಯಜ್ಞೋಪವೀತ, ಸೊಂಟಬಂಧ, ಇಳಿಬಟ್ಟೆ ಮತ್ತು ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಕೊಲ್ಲೂರು ಶಿಲ್ಪ: ವಿಷ್ಣು

ಶಿಲೆ: ಕಪ್ಪು ಕಲ್ಲು ಕಾಲ: ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಗುಡಿ

ಕಪ್ಪು ಒರಟಾದ ಶಿಲೆಯ ಪ್ರದ್ಯುಮ್ನನ ಇನ್ನೊಂದು ಶಿಲ್ಪ ಹನುಮಾನ್ ಗುಡಿಯ ಪ್ರಾಂಗಣದಲ್ಲಿ ಗುಡಿಯ ಎಡಕ್ಕಿದೆ. ಮುಂದಿನ ಕೈಗಳು ಪದ್ಮ, ಗದೆ, ಹಿಂದಿನ ಕೈಗಳು ಶಂಖ, ಚಕ್ರ ಹಿಡಿದಂತೆ ಕೆತ್ತಲಾಗಿದೆ. ಕಿರೀಟಧಾರಿ, ಕರ್ಣಕುಂಡಲ, ಸೊಂಟಬಂಧ, ಇಳಿಬಟ್ಟೆ ಮತ್ತು ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ. ಇಕ್ಕೆಲಗಳಲ್ಲಿ ಭಕ್ತರ ಶಿಲ್ಪಗಳಿವೆ.

ಸ್ಥಳ: ಕೊಲ್ಲೂರು ಶಿಲ್ಪ: ವಾಸುದೇವ

ಶಿಲೆ: ಕಪ್ಪು ಕಲ್ಲು ಕಾಲ: ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಗುಡಿ

ಕಪ್ಪುಶಿಲೆಯಲ್ಲಿ ಕೆತ್ತಲಾದ ವಾಸುದೇವನ ಶಿಲ್ಪದಲ್ಲಿ ಮುಂದಿನ ಬಲಗೈಯಲ್ಲಿ ಪದ್ಮ, ಎಡಗೈಯಲ್ಲಿ ಗದೆ, ಹಿಂದಿನ ಬಲಗೈಯಲ್ಲಿ ಚಕ್ರ, ಎಡಗೈಯಲ್ಲಿ ಶಂಖ ಹಿಡಿದಿರುವ ಸ್ಥಾನಿಕ ಶಿಲ್ಪವಾಗಿದೆ. ಹನುಮಾನ್ ಗುಡಿಯ ಪ್ರಾಂಗಣದಲ್ಲಿದೆ. ಕಿರೀಟಧಾರಿ, ಕರ್ಣಕುಂಡಲ, ಬಾಹುವಲ್ಯ, ತೋಳ್ಬಂದಿ, ಕೈಗಡಗ, ಮಣಿಕಂಠ, ಕೊರಳಾಭರಣ, ಎದೆಹಾರ, ಉದರಬಂಧ, ಯಜ್ಞೋಪವೀತ,

ಸೊಂಟಬಂಧ, ಇಳಿಬಟ್ಟೆ, ಕುಚಹಾರ ಮತ್ತು ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ. ಇಕ್ಕೆಲಗಳಲ್ಲಿ ಭಕ್ತರ ಶಿಲ್ಪಗಳಿವೆ.

ಸ್ಥಳ: ಮಳಿನಿ **ಶಿಲ್ಪ:** ಹನುಮಾನ್

ಶಿಲೆ: ಕಪ್ಪುಕಲ್ಲು **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಸೊಂಟದ ಮೇಲೆ ಎರಡು ಕೈಗಳನ್ನು ಹಿಡಿದು ನಿಂತಿರುವ ಹನುಮಾನನ ಶಿಲ್ಪವಿದೆ. ಯಜ್ಞೋಪವೀತ, ಹನುಮಾನ್ ತೊಡೆಯವರೆಗೆ ವಸ್ತ್ರ ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಖಣದಾಳ **ಶಿಲ್ಪ:** ಅನಂತಶಯನ

ಶಿಲೆ: ಬಿಳಿಕಲ್ಲು **ಕಾಲ:** ಸು.೮ನೆಯ ಶತಮಾನ

ಸ್ಥಿತಿ: ಉತ್ತಮ **ದೊರೆತ ಸ್ಥಳ:** ಹನುಮಾನ್ ಗುಡಿ

ಅನಂತಶಯನನ ಶಿಲ್ಪವು ಗುಡಿಯ ಭಿತ್ತಿ ಭಾಗದಲ್ಲಿದೆ. ಅನಂತಶಯನನು ಮುಂದಿನ ಕೈಗಳಲ್ಲಿ ಬಲಗೈಯು ವಕ್ಷ ಸ್ಥಳದಲ್ಲಿಟ್ಟಂತಿದೆ. ಎಡಗೈ ತೊಡೆಯ ಭಾಗದಲ್ಲಿದೆ. ಅದರ ಕೈಯಲ್ಲಿರುವ ಗದೆ ಪಕ್ಕಕ್ಕಿಡಲಾಗಿದೆ. ಉದರ ಭಾಗದಿಂದ ಕಮಲದ ಬಳ್ಳಿ ಹುಟ್ಟಿ ಕಮಲದ ಹೂ ಅರಳಿದೆ. ಹಿಂದಿನ ಬಲಗೈ ತಲೆಗೆ ಆರಾಮದಾಯಕವಾಗಿ ಹಿಡಿದಂತಿದೆ. ಆ ಕೈಯಲ್ಲಿರುವ ಶಂಖವನ್ನು ಕೆಳಗಿಡಲಾಗಿದೆ. ಎಡಗೈಯಲ್ಲಿ ಚಕ್ರವಿದೆ. ಎಡಗಾಲನ್ನು ಲಕ್ಷ್ಮಿಯು ಒತ್ತುತ್ತಿರುವಂತೆ ಕೆತ್ತಲಾಗಿದೆ. ಲಕ್ಷ್ಮಿಯ ಪಕ್ಕದಲ್ಲಿ ಗರುಡನು ಅಂಜಲಿ ಹಸ್ತದಲ್ಲಿರುವಂತೆ ಕೆತ್ತಲಾಗಿದೆ. ಅನಂತಶಯನನ ತಲೆಯ ಭಾಗದಲ್ಲಿ ಹನ್ನೊಂದು ಹೆಡೆಯ ನಾಗ ತಲೆಯೆತ್ತಿ ಕುಳಿತಂತಿದೆ. ಮೇಲ್ಭಾಗದಲ್ಲಿ ದೇವತೆಗಳು ನಂದಿಯ ಮೇಲೆ ಕುಳಿತಿರುವ ಶಿವ-ಪಾರ್ವತಿಯರ ಶಿಲ್ಪ ಮತ್ತು ಒಬ್ಬ ಯತಿ?-ಬಾಲಬ್ರಹ್ಮನ ಕುಳಿತಂತೆ ಕೆತ್ತಲಾಗಿದೆ. ಕಿರೀಟಧಾರಿ, ಕರ್ಣಕುಂಡಲ, ಕೊರಳಾಭರಣ, ಬಾಹುವಲ್ಯ ಕೈಗಡಗ, ಯಜ್ಞೋಪವೀತ, ಸೊಂಟಪಟ್ಟಿ, ಇಳಿವಸ್ತ್ರ, ಕುಚಹಾರ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ. ಲಕ್ಷ್ಮಿಯ ಶಿಲ್ಪವು ಕಿರೀಟ, ಕಿವಿಓಲೆ, ಕೈಬಳೆ, ಬಾಹುವಲ್ಯ, ಕೊರಳಾಭರಣ, ಸೊಂಟಪಟ್ಟಿ, ಇಳಿವಸ್ತ್ರ, ಕಾಲ್ಗಡಗ, ಪೈಜಾಮವನ್ನು ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಖಣದಾಳ **ಶಿಲ್ಪ:** ವಿಷ್ಣು

ಶಿಲೆ: ಕಪ್ಪುಕಲ್ಲು **ಕಾಲ:** ಸು.೮ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಚತುರ್ಭುಜಧಾರಿಯಾದ ವಿಷ್ಣುವಿನ ಶಿಲ್ಪದಲ್ಲಿ ಹಿಂದಿನ ಕೈಗಳು ಚಕ್ರ ಮತ್ತು ಪದ್ಮ, ಮುಂದಿನ ಕೈಗಳು ಗದೆ ಮತ್ತು ಶಂಖ ಹಿಡಿದ ಶ್ರೀಧರನ ಶಿಲ್ಪವಾಗಿದೆ.[೯] ಕಿರೀಟ, ಕರ್ಣಕುಂಡಲ, ತೋಳ್ಬಂದಿ, ಬಾಹುವಲ್ಯ, ಕೈಗಡಗ, ಉಪವೀತ, ಯಜ್ಞೋಪವೀತ, ಕೊರಳಾಭರಣ, ಸೊಂಟಪಟ್ಟಿ, ಕುಚಹಾರ, ಇಳಿವಸ್ತ್ರ ಮತ್ತು ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಕೇರಿಅಂಬಲಗಾ **ಶಿಲ್ಪ:** ರಾಮಸೀತೆ

ಶಿಲೆ: ಕಪ್ಪುಕಲ್ಲು **ಕಾಲ:** ಸು.೮ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಬಿಂಬಲಿಂಗೇಶ್ವರ ಗುಡಿ

ಬಿಲ್ಲುಧಾರಿ ರಾಮ(ಬಲಕ್ಕೆ), ಎಡಗೈಯಲ್ಲಿ ಗದೆ, ಪಕ್ಕದಲ್ಲಿ ಸೀತೆ ನಿಂತಿರುವ ಶಿಲ್ಪವಿದೆ. ಕಿರೀಟಧಾರಿ ರಾಮನ ಶಿಲ್ಪ ಕೊರಳಹಾರ, ಎದೆ ಪಟ್ಟಿ, ತೋಳ್ಬಂದಿ, ಬಾಹುವಲ್ಯ, ಕೈಕಡಗ, ಕಾಲ್ಗಡಗ, ಪೈಜಾಮ, ಯಜ್ಞೋಪವೀತ, ಸೊಂಟಪಟ್ಟಿಯ ಕೆತ್ತನೆಯಿದೆ. ಸೀತೆಯ ಶಿಲ್ಪಕ್ಕೆ ಕಿವಿ ಓಲೆ, ತುರುಬುಗೆ ಹಾಕುವ ಆಭರಣ, ಕೊರಳಹಾರ, ಸೊಂಟಪಟ್ಟಿ, ಕಾಲ್ಗಡಗ, ಪೈಜಾಮ ಧರಿಸಿದ ಕೆತ್ತನೆಯಿದೆ. ಕೈ ತ್ರುಟಿತಗೊಂಡಿವೆ. ಕಪ್ಪುಶಿಲೆಯಲ್ಲಿದೆ.

ಸ್ಥಳ: ಕೇರಿಅಂಬಲಗಾ **ಶಿಲ್ಪ:** ವಿಷ್ಣು

ಶಿಲೆ: ಕಪ್ಪುಕಲ್ಲು **ಕಾಲ:** ಸು.೮ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಬಿಂಬಲಿಂಗೇಶ್ವರ ಗುಡಿ

ವಿಷ್ಣುವಿನ ಶಿಲ್ಪ ಕಪ್ಪುಶಿಲೆಯಲ್ಲಿ ಕೆತ್ತಲಾಗಿದೆ. ಹಿಂದಿನ ಕೈಗಳು ಶಂಖ, ಚಕ್ರ, ಮುಂದಿನ ಕೈಗಳು ಒಂದು ತ್ರುಟಿತ, ಗದಾಹಸ್ತವಿದೆ. ಇಕ್ಕೆಲಗಳಲ್ಲಿ ಬಲಕ್ಕೆ ಗರುಡ ಮತ್ತು ಎಡಕ್ಕೆ ಭಕ್ತನ ಶಿಲ್ಪದ ಕೆತ್ತನೆಯಿವೆ. ಕಿರೀಟಧಾರಿ ವಿಷ್ಣು ಶಿಲ್ಪ ಕೊರಳಹಾರ, ಎದೆಪಟ್ಟಿ, ತೋಳ್ಬಂದಿ, ಬಾಹುವಲ್ಯ, ಕೈಕಡಗ, ಕಾಲ್ಗಡಗ, ಪೈಜಾಮ, ಯಜ್ಞೋಪವೀತ, ಸೊಂಟಪಟ್ಟಿಯ ಕೆತ್ತನೆಯಿದೆ.

ಸ್ಥಳ: ಕಲಬೆನ್ನೂರು **ಶಿಲ್ಪ:** ಹನುಮಾನ್

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ಉತ್ತಮ **ದೊರೆತ ಸ್ಥಳ:** .....

ಗದೆಯನ್ನು ಬಲಗೈಯಲ್ಲಿ ಕೆಳಗೆ ತೊಡೆ ಹತ್ತಿರ ಹಿಡಿದು ನಿಂತಿರುವ ಶಿಲ್ಪವಿದೆ. ಕೊರಳಹಾರ, ಬಾಹುವಲ್ಯ, ಕೈಗಡಗ, ಕಾಲ್ಗಡಗ, ಸೊಂಟಪಟ್ಟಿ, ಕಿರೀಟ, ಸೊಂಟಕ್ಕೆ ಒಂದು ಬಟ್ಟೆ ಸುತ್ತಿಕೊಂಡಂತಿದೆ.

ಸ್ಥಳ: ಕಡಣಿ(ಕಣ್ಣಿ) **ಶಿಲ್ಪ:** ಕೇಶವ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಮಂದಿರದ ಪಕ್ಕದಲ್ಲಿ

ಸ್ಥಾನಿಕ ಕೇಶವ ಶಿಲ್ಪವು ಆಲದ ಮರದ ಕೆಳಗಿರಿಸಲಾಗಿದೆ. ಹಿಂದಿನ ಕೈಗಳು ಶಂಖ, ಚಕ್ರ, (ಬಲ ಮತ್ತು ಎಡಗೈ), ಮುಂದಿನ ಕೈಗಳು ಎಡಗೈ ಗದಾಹಸ್ತ, ಬಲಗೈ ಪತಾಕ ಹಸ್ತವಿದೆ. ಕಿರೀಟಧಾರಿ, ಕೊರಳಹಾರ, ಯಜ್ಞೋಪವೀತ, ನಡುಬಂಧ, ಇಳಿಬಟ್ಟೆ, ಇಕ್ಕೆಲಗಳಲ್ಲಿ ಭಕ್ತರ (ಕುಳಿತ ಮತ್ತು ಸ್ಥಾನಿಕ) ಶಿಲ್ಪಗಳಿವೆ.

ಸ್ಥಳ: ಬಿದನೂರು **ಶಿಲ್ಪ:** ವಿಷ್ಣು

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ವಿಷ್ಣುವಿನ ಸ್ಥಾನಿಕ ಶಿಲ್ಪವಿದೆ. ಹಿಂದಿನ ಕೈಗಳು ಚಕ್ರ, ಶಂಖ, ಮುಂದಿನ ಕೈಗಳು ಪತಾಕ ಮತ್ತು ಗದಾಹಸ್ತವಿದೆ. ಪದ್ಮ ಪುರಾಣದ ಪ್ರಕಾರ–ವಾಸುದೇವನ ಶಿಲ್ಪವಾಗಿದೆ. ಹಿಂದೆ ಪ್ರಭಾವಳಿಯ ಕೆತ್ತನೆಯಿದೆ. ಕಿರೀಟ, ಕರ್ಣಕುಂಡಲ, ಕೈಗಡಗ, ಮಣಿಕಂಠ, ಕೊರಳಹಾರ, ವಕ್ಷಬಂಧ, ಯಜ್ಞೋಪವೀತ, ಸೊಂಟಪಟ್ಟಿ, ಇಳಿಬಟ್ಟೆ ಮತ್ತು ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಕೇಶಾವರ್ (ಗಡಿ) **ಶಿಲ್ಪ:** ಕೇಶವ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಕೇಶವ ನಾರಾಯಣ ಗುಡಿ

ಸ್ಥಾನಿಕ ಭಂಗಿಯಲ್ಲಿರುವ ಕೇಶವ ಮೂರ್ತಿಯ ಹಣೆ ಮೇಲೆ ನಾಮವಿದೆ. ಚತುರ್ಭುಜಧಾರಿಯಾದ ಕೇಶವನ ಹಿಂದಿನ ಕೈಗಳಲ್ಲಿ ಶಂಖ, ವೃತ್ತಾಕಾರ ಪ್ರಯೋಗ ಚಕ್ರವನ್ನು ಕರ್ತರಿ ಬೆರಳಲ್ಲಿ ಹಿಡಿದಿರುವಂತೆ ಕೆತ್ತಿದೆ. ಮುಂದಿನ ಬಲಗೈ ಅಭಯಹಸ್ತ, ಎಡಗೈಯನ್ನು ಗದೆಯ ಮೇಲಿಟ್ಟಿದೆ. ಬಲಭಾಗಕ್ಕೆ ಕೆಳಸ್ತರ ಪ್ರಭಾವಳಿಯಲ್ಲಿ ಗರುಡ ಅಂಜಲಿ ಹಸ್ತದಲ್ಲಿ ಕುಳಿತಿದೆ. ಇಕ್ಕೆಲಲ್ಲಿ ಚಾಮರಧಾರಿಗಳಿದ್ದಾರೆ. ಕೇಶವ ಧರಿಸಿದ ಆಭರಣಗಳು–ಮುಕುಟ ಕಿರೀಟ, ಕರ್ಣಕುಂಡಲ, ಕಂಠಹಾರ, ಎದೆಹಾರ, ಯಜ್ಞೋಪವೀತ, ತೋಳ್ಬಂದಿ, ಕಡಗ (ಕೈ), ವೈಜಯಂತಿ ಹಾರ, ಕಾಲ್ಗಡಗಗಳಾಗಿವೆ. ಶಿಲ್ಪದ ಪ್ರಭಾವಳಿಯಲ್ಲಿ ಮುತ್ತಿನ ಸರದ ಅಲಂಕರಣೆ ಇದೆ. ಅಭಯ ಹಸ್ತದಲ್ಲಿ ಕಮಲವನ್ನು ಹಿಡಿದಂತಿದೆ.

ಸ್ಥಳ: ಕೇಶಾವರ್ (ಗಡಿ) **ಶಿಲ್ಪ:** ಕೇಶವ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತ್ರುಟಿತ **ಸ್ಥಳ:** ಕೇಶವ ನಾರಾಯಣ ಗುಡಿ

ಕೇಶವನ ತ್ರುಟಿತ ಮೂರ್ತಿಯು ಚತುರ್ಭುಜಧಾರಿ ಸ್ಥಾನಿಕ ಭಂಗಿಯಲ್ಲಿದೆ. ಹಿಂದಿನ ಕೈಯಲ್ಲಿ ಶಂಖ, ಪ್ರಯೋಗ ಚಕ್ರ ಮುಂದಿನ ಬಲಗೈ ಅಭಯ ಹಸ್ತ ಎಡಗೈಯನ್ನು ಗದೆಯ ತುದಿಯ ಮೇಲೆ ಇಟ್ಟಂತಿದೆ. ಕೆಳಭಾಗದಲ್ಲಿ ಬಲಕ್ಕೆ ಗರುಡ ಅಂಜಲಿ ಹಸ್ತದಲ್ಲಿ ಕುಳಿತಿದೆ. ಮತ್ತು ಇಕ್ಕೆಲಗಳಲ್ಲಿ ಚಾಮರಧಾರಿಗಳ ಶಿಲ್ಪವಿದೆ.

ಮುಕುಟ ಕಿರೀಟ, ಕರ್ಣಕುಂಡಲ, ಕೊರಳಹಾರ, ಬಾಹುವಲ್ಯ, ತೋಳ್ಬಂದಿ, ಕಂಕಣ (ಕೈಗಡಗ), ಯಜ್ಞೋಪವೀತ, ವೈಜಯಂತಿ ಹಾರ, ಕಟಿವಸ್ತ್ರ, ಕಾಲ್ಗಡಗ ಧರಿಸಿದೆ. ಅಭಯ ಹಸ್ತದಲ್ಲಿ ಪದ್ಮ ಹಿಡಿದಂತಿದೆ. ಪ್ರಸ್ತುತ ತ್ರುಟಿತವಾಗಿದೆ.

ಸ್ಥಳ: ಹಲಚೇರಾ **ಶಿಲ್ಪ:** ಕೇಶವ (ವಿಷ್ಣು)

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಈಶ್ವರ ದೇವಾಲಯ

ಚತುರ್ಭುಜಧಾರಿ ವಿಷ್ಣುವಿನ ಶಿಲ್ಪ ಹಿಂದಿನ ಕೈಯಲ್ಲಿ ಶಂಖ, ಮುಂದಿನ ಕೈ ಅಭಯ ಹಸ್ತ, ಎಡಗೈಯಲ್ಲಿ ಗದೆಯನ್ನು ಹಿಡಿದಂತಿದೆ. ಮುಕುಟ ಕಿರೀಟಧಾರಣೆ, ಮುಂಗೈ ಕಂಕಣ, ತೋಳ್ಬಂದಿ, ಎದೆಪಟ್ಟಿ, ಕೊರಳಹಾರ, ಸೊಂಟಪಟ್ಟಿ, ಯಜ್ಞೋಪವೀತ, ಕಾಲ್ಗಡಗ ಆಭರಣಗಳನ್ನು ಧರಿಸಿದ್ದಾನೆ.

ಸ್ಥಳ: ಮೋಘಾ **ಶಿಲ್ಪ:** ವಿಷ್ಣು

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ರಾಮಲಿಂಗೇಶ್ವರ

ಪುಷ್ಕರಣಿಯೊಂದರ ದೇವಕೋಷ್ಠಕದಲ್ಲಿ ವಿಷ್ಣುವಿನ ಶಿಲ್ಪ ಸ್ಥಾನಿಕ ಭಂಗಿಯಲ್ಲಿದೆ. ಕೈಯಲ್ಲಿ ಶಂಖ, ಪದ್ಮ ಹಿಡಿದ ದ್ವಿಭುಜಧಾರಿಯ ಶಿಲ್ಪವಿದೆ. ವೈಜಯಂತಿ ಹಾರ, ಯಜ್ಞೋಪವೀತ, ಕಿರೀಟ, ಕಟಿವಸ್ತ್ರ, ಕಾಲ್ಗಡಗ, ಮುಂಗೈ ಕಂಕಣ (ಮಣಿಕಂಠ) ಧರಿಸಿರುವ ಶಿಲ್ಪ ಕೆತ್ತಲಾಗಿದ್ದು, ಬಲಭಾಗಕ್ಕೆ ಅಂಜಲಿ ಹಸ್ತದ ಗರುಡ ಕುಳಿತಿರುವ ಶಿಲ್ಪ ಕೆಳಭಾಗದ ಪ್ರಭಾವಳಿಯಲ್ಲಿದೆ.

ಸ್ಥಳ: ಮೋಘಾ **ಶಿಲ್ಪ:** ಅನಂತ ಪದ್ಮನಾಭ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತೃಟಿತ **ದೊರೆತ ಸ್ಥಳ:** ರಾಮಲಿಂಗೇಶ್ವರ

ಪುಷ್ಕರಣಿಯೊಂದರ ದೇವಕೋಷ್ಠದಲ್ಲಿ ಅನಂತ ಪದ್ಮನಾಭನ ಶಿಲ್ಪವಿದೆ. ಶಯನಾಸನ ಭಂಗಿಯಲ್ಲಿರುವ ವಿಷ್ಣು ಐದು ಹೆಡೆಯ ನಾಗನ ಮೇಲೆ ಮಲಗಿದ ಶಿಲ್ಪವಿದೆ. ಕಮಲದಲ್ಲಿ ಕುಳಿತ ಬ್ರಹ್ಮ ಶಿಲ್ಪ ವಿಷ್ಣುವಿನ ನಾಭಿಯಿಂದ ಹೊರಬಂದಂತಿದೆ. ಹಿಂದಿನ ಬಲಗೈ ಮಡಚಿ ಮುಂಗೈಯನ್ನು ತಲೆಗೆ ಆಧಾರವಾಗಿಟ್ಟು ಧ್ಯಾನದಲ್ಲಿ ಮಗ್ನನಾಗಿರುವಂತೆ ಕೆತ್ತಲಾಗಿದೆ. ಮುಂದಿನ ಬಲಗೈ ಅಭಯ ಹಸ್ತ, ಮುಂದಿನ ಎಡಗೈ ಉದ್ದನೆಯಾಗಿದ್ದು, ತೊಡೆಯವರೆಗೆ ಚಾಚಲ್ಪಟ್ಟಿದೆ. ಹಿಂದಿನ ಎಡಗೈಯಲ್ಲಿ ಶಂಖ ವೈಜಯಂತಿ ಹಾರ ಹಿಡಿದಂತಿದೆ. ತೋಳ್ಬಂದಿ, ಮುಂಗೈಪಟ್ಟಿ, ಕಿರೀಟಧಾರಣೆ, ಎಡಗಾಲು ಉದ್ದಗೆ ಚಾಚಿದ್ದು ಲಕ್ಷ್ಮಿ ಕುಳಿತ ಭಂಗಿಯಲ್ಲಿ ಆ ಪಾದವನ್ನು ಹಿಡಿದು ಒತ್ತುವಂತೆ ಕೆತ್ತಲಾಗಿದೆ. ವೃತ್ತಾಕಾರ ಕುಂಡಲ, ಕಿರೀಟ, ಬಾಹುವಲ್ಯ, ತೋಳ್ಬಂದಿ, ಎದೆಹಾರ, ಕಾಲ್ಗಡಗ, ಕೊರಳಹಾರ ಲಕ್ಷ್ಮಿಯು ಧರಿಸಿರುವಂತಿದೆ. ಲಕ್ಷ್ಮಿಯ ಹಿಂದೆ ಅನಂತಪದ್ಮನ ಕಾಲ ಬಳಿ ಸ್ಥಾನಿಕ ಗರುಡ ಅಂಜಲಿ ಹಸ್ತದಲ್ಲಿದ್ದಾನೆ.

ಸ್ಥಳ: ಕೋಡ್ಲಿ **ಶಿಲ್ಪ:** ವಿಷ್ಣು

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೦ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ರಾಮಲಿಂಗೇಶ್ವರ

ಚತುರ್ಭುಜಧಾರಿ ವಿಷ್ಣುವಿನ ಹಿಂದಿನ ಕೈಗಳಲ್ಲಿ ಶಂಖ ಮತ್ತು ಚಕ್ರಗಳಿವೆ. ಮುಂದಿನ ಬಲಗೈ ಅಭಯಹಸ್ತ, ಎಡಗೈ ಗದೆಯ ಮೇಲೆ ಇಟ್ಟಂತಿದೆ. ಬಲಭಾಗದ ಪ್ರಭಾವಳಿಯಲ್ಲಿ ಅಂಜಲಿ ಹಸ್ತದ ಗರುಡನ ಶಿಲ್ಪ ಕುಳಿತ ಭಂಗಿಯಲ್ಲಿದೆ. ಇಕ್ಕೆಲಗಳಲ್ಲಿ ಚಾಮರಧಾರಿ ದೇವ ಕನ್ಯೆಯರ ಶಿಲ್ಪವಿದೆ. ಮುಕುಟ ಕಿರೀಟ, ಮಣಿಕಂಠ, ಕಂಠಹಾರ, ಯಜ್ಞೋಪವೀತ, ಕರ್ಣ ಕುಂಡಲ, ವೈಜಯಂತಿ ಹಾರ, ಕುಚಹಾರ, ಕಟಿವಸ್ತ್ರ, ಕಾಲ್ಗಡಗ ಧರಿಸಿದೆ. ಶಿಲ್ಪದ ಪ್ರಭಾವಳಿಯಲ್ಲಿ ಮಕರತೋರಣವಿದೆ.

ಸ್ಥಳ: ಹಲ್‌ಚೇರಾ **ಶಿಲ್ಪ:** ವಿಷ್ಣು

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತೃಟಿತ **ದೊರೆತ ಸ್ಥಳ:** ಈಶ್ವರ ದೇವಾಲಯ

ವಿಷ್ಣುವಿನ ಶಿಲ್ಪದ ಹಿಂದಿನ ಎಡಗೈಯಲ್ಲಿ ಶಂಖ, ಬಲಗೈ ಪ್ರಸ್ತುತ ತ್ರುಟಿತವಾಗಿದೆ. ಮುಂದಿನ ಬಲಗೈ ಅಭಯಹಸ್ತ, ಎಡಗೈಯನ್ನು ಗದೆಯ ಮೇಲಿಟ್ಟಿರುವಂತೆ ಕೆತ್ತಲ್ಪಟ್ಟಿದೆ. ಕಿರೀಟ ಮುಕುಟಧಾರಿ, ತೋಳ್ಬಂದಿ, ಮಣಿಕಂಠ, ಕಾಲ್ಗಡಗ, ಕೊರಳಹಾರ, ಸೊಂಟಪಟ್ಟಿ, ಯಜ್ಞೋಪವೀತ, ವೈಜಯಂತಿ ಹಾರ ಧರಿಸಿದೆ.

ಸ್ಥಳ: ನಿಡಗುಂದ **ಶಿಲ್ಪ:** ಲಕ್ಷ್ಮೀ ನರಸಿಂಹ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೦ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ನವಕೋಟಿ ನಾರಾಯಣ ಗುಡಿ

ನವಕೋಟಿ ನಾರಾಯಣ ಗುಡಿ ಎಡಭಾಗಕ್ಕೆ ಲಕ್ಷ್ಮೀ ನರಸಿಂಹ ಶಿಲ್ಪವಿದೆ. ಎರಡೂ ಮೂರ್ತಿಶಿಲ್ಪಗಳು ನಿಂತಿದ್ದು, ಲಕ್ಷ್ಮಿಯ ಕಟಿಯ ಮೇಲೆ ನರಸಿಂಹನ ಎಡಗಾಲು ಆವರಿಸಿದೆ. ನರಸಿಂಹ ಚತುರ್ಭುಜಧಾರಿಯಂತೆ ತೋರುವ ಈ ಶಿಲ್ಪ ಬಹಳ ತ್ರುಟಿತವಾಗಿದೆ.

ಸ್ಥಳ: ನಿಡಗುಂದ **ಶಿಲ್ಪ:** ಕೇಶವ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೦ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ನವಕೋಟಿ ನಾರಾಯಣ ಗುಡಿ

ಗರ್ಭಗುಡಿಯ ಕೇಶವ ಶಿಲ್ಪ ಚತುರ್ಭುಜಧಾರಿಯಾಗಿದ್ದು ಮುಂದಿನ ಬಲಗೈ ಅಭಯ ಹಸ್ತದಲ್ಲಿದೆ. ಎಡಗೈಯನ್ನು ಗದೆಯ ಮೇಲಿಟ್ಟಿದೆ. ಹಿಂದಿನ ಕೈಗಳಲ್ಲಿ ಶಂಖ, ಚಕ್ರಗಳು ಹಿಡಿದಿದೆ. ಮುಕುಟಧಾರಿ, ಕೊರಳಹಾರ, ಎದೆಹಾರ, ಸೊಂಟಪಟ್ಟಿ, ಕಟಿವಸ್ತ್ರ, ಮಣಿಕಂಠ,

ತೋಳ್ಬಂದಿ, ಕಾಲ್ಗಡಗ ಧರಿಸಿದಂತಿದೆ. ಯಜ್ಞೋಪವೀತ ಮತ್ತು ವೈಜಯಂತಿ ಹಾರ ಧರಿಸಿದಂತೆ ಶಿಲ್ಪಾವಳಿಯಲ್ಲಿ ಮೂಡಿದೆ.

ಸ್ಥಳ: ರುಮ್ಮನಗೂಡು **ಶಿಲ್ಪ:** ಮಾಧವ
ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧ನೇ ಶತಮಾನ
ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಶಂಕರ ನಾರಾಯಣ ದೇವಾಲಯ

ಚತುರ್ಭುಜಧಾರಿ ಮಾಧವನ ಶಿಲ್ಪ ದೇವಾಲಯದ ಗರ್ಭಗುಡಿಯಲ್ಲಿದೆ. ಹಿಂದಿನ ಕೈಗಳಲ್ಲಿ ದಂಡವುಳ್ಳ ವೃತ್ತಾಕಾರ ಚಕ್ರ ಮತ್ತು ಶಂಖ ಮುಂದಿನ ಬಲಗೈಯಲ್ಲಿ ಗದೆ, ಎಡಗೈ ವರದ ಮುದ್ರೆಯಲ್ಲಿದೆ. ಕಿರೀಟ ಮುಕುಟ, ಬಾಹುವಲ್ಯ, ತೋಳ್ಬಂದಿ, ಎದೆಪಟ್ಟಿ, ಕೊರಳಹಾರ, ಕರ್ಣಕುಂಡಲ, ಯಜ್ಞೋಪವೀತ, ವೈಜಯಂತಿ ಹಾರ, ಕಾಲ್ಗಡಗ, ಕಟಿವಸ್ತ್ರ, ಸೊಂಟಪಟ್ಟಿಯ ಕೆತ್ತನೆಯಿದೆ.

ಮೋಘಾದ ರಾಮಲಿಂಗೇಶ್ವರ ಗುಡಿಯ ಸು.೧೧ನೆಯ ಶತಮಾನದ ಪೀಠದ ಮೇಲೆ ಆಸೀನ ವಿಷ್ಣು ಶಿಲ್ಪ ಮತ್ತು ಸ್ಥಾನಿಕ ವಿಷ್ಣು ಶಿಲ್ಪವಿದೆ.[೫] ರುಮ್ಮನಗೂಡು ರಾಮಲಿಂಗೇಶ್ವರ ಸು.೧೧ನೆಯ ಶತಮಾನದ ವಿಷ್ಣು ಶಿಲ್ಪವಿದೆ.[೬] ಕರಕ್‌ಮುಕ್ಲಿಯ ಮಲ್ಲಿಕಾರ್ಜುನ ಗುಡಿಯಲ್ಲಿ ಸು.೧೧ನೆಯ ಶತಮಾನದ ವಿಷ್ಣು ಮತ್ತು ಕೇಶವ ಶಿಲ್ಪಗಳು ನವರಂಗದಲ್ಲಿವೆ.[೭]

ಶಿರೋಳ್ಳಿ ಹರಿಹರ ದೇವಾಲಯ ಗುಡಿಯ ನಾರಾಯಣ ಶಿಲ್ಪ ಶಾಸನದ ಮೇಲಿದೆ. ರುಮ್ಮನಗೂಡದ ಶಂಕರನಾರಾಯಣ ದೇವಾಲಯದಲ್ಲಿನ ವಿಷ್ಣು, ಕೇಶವ, ಉಗ್ರನರಸಿಂಹ, ವಾಮನ ಶಿಲ್ಪಗಳಿವೆ. ಇಲ್ಲಿಯ ಅಧಿಷ್ಠಾನದಲ್ಲಿರುವ ಚತುರ್ವಿಂಶತಿ ವಿಷ್ಣು ರೂಪಗಳು ಲಕ್ಷ್ಮಿ ಶಿಲ್ಪಸಹಿತ ಪಟ್ಟಿಕೆಯಲ್ಲಿದೆ. ಚಕ್ರ ಹಿಡಿದು ಲಕ್ಷ್ಮಿಯನ್ನು ಎಡಗೈಯಿಂದ ಬಳಸಿ ಆಕೆಯ ಬಲಭುಜದ ಮೇಲೆ ಹಾಕಿರುವಂತಿದೆ. ಗದೆಯ ಮೇಲೆ ತನ್ನ ಎಡಗೈಯನ್ನು ಇಟ್ಟಂತಿದೆ. ಎತ್ತರದ ಕಿರೀಟ, ಎದೆಹಾರ, ಯಜ್ಞೋಪವೀತ, ಸೊಂಟಪಟ್ಟಿ, ವೈಜಯಂತಿ ಹಾರ, ಕಾಲ್ಗಡಗ, ಕಟಿವಸ್ತ್ರ, ಕಂಠಾಭರಣ ಧರಿಸಿದೆ. ಲಕ್ಷ್ಮಿ ಎಡಕ್ಕೆ ತ್ರಿಭಂಗಿ ಸ್ಥಿತಿಯಲ್ಲಿ ನಿಂತಿದೆ. ಅವಳ ಬಲಗೈಯನ್ನು ವಿಷ್ಣುವಿನ ಭುಜಕ್ಕೆ ಆವರಿಸಿದಂತೆ ಎಡಗೈಯಲ್ಲಿ ಕಮಲ ಹಿಡಿದಿದೆ. ಕುಂತಲ ಕಿರೀಟ ಧರಿಸಿದೆ. ಹೀಗೆ ಅಧಿಷ್ಠಾನ ಪಟ್ಟಿಯಲ್ಲಿ ವಿಷ್ಣು ಮತ್ತು ಲಕ್ಷ್ಮಿಯ ಶಿಲ್ಪಗಳು ಮೂಡಿಬಂದಿವೆ. ಪ್ರಭಾವಳಿಯಲ್ಲಿ ಕೀರ್ತಿಮುಖ, ಹೂಬಳ್ಳಿ ಮತ್ತು ಮಕರತೋರಣವಿದೆ. ವಿಷ್ಣು, ಲಕ್ಷ್ಮಿ ಶಿಲ್ಪದ ನಂತರ ಕುಡ್ಯಸ್ತಂಭ ಮತ್ತೆ ವಿಷ್ಣು ಲಕ್ಷ್ಮಿ ಶಿಲ್ಪವಿದೆ. ಅಗಸಿಯ ಗೋಡೆಯ ಮೇಲಿನ ಶಿಲ್ಪದಲ್ಲಿ ಲಕ್ಷ್ಮಿಯ ಎಡಕ್ಕೆ ವಿಷ್ಣುವಿನ ಶಿಲ್ಪ ತೋರಿಸಿರುವುದು ವಿಶೇಷವಾಗಿದೆ.

ರುಮ್ಮನಗೂಡಿನ ಶಂಕರನಾರಾಯಣ ದೇವಾಲಯದ ಸ್ತಂಭಗಳ ಮೇಲೆ ಹೂಬಳ್ಳಿ ಅಲಂಕರಣೆಯಲ್ಲದೆ, ವಿಷ್ಣುವಿನ ಅಷ್ಟಭುಜಧಾರಿ ಶಿಲ್ಪವಿದೆ. ಉಗ್ರನರಸಿಂಹನ ಶಿಲ್ಪಗಳು, ವಾಮನ ಮತ್ತು ವಿಷ್ಣುವಿನ ಶಿಲ್ಪಗಳಿವೆ. ಒಂದು ಸ್ತಂಭದಲ್ಲಿ ನೃತ್ಯ ಮಾಡುತ್ತಿರುವ ವಿಷ್ಣುವಿನ ಶಿಲ್ಪವಿದೆ.

ತೋಳ್ಬಂದಿ, ಕಾಲ್ಗಡಗ ಧರಿಸಿದಂತಿದೆ. ಯಜ್ಞೋಪವೀತ ಮತ್ತು ವೈಜಯಂತಿ ಹಾರ ಧರಿಸಿದಂತೆ ಶಿಲ್ಪಾವಳಿಯಲ್ಲಿ ಮೂಡಿದೆ.

ಸ್ಥಳ: ರುಮ್ಮನಗೂಡು **ಶಿಲ್ಪ:** ಮಾಧವ
ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧ನೇ ಶತಮಾನ
ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಶಂಕರ ನಾರಾಯಣ ದೇವಾಲಯ

ಚತುರ್ಭುಜಧಾರಿ ಮಾಧವನ ಶಿಲ್ಪ ದೇವಾಲಯದ ಗರ್ಭಗುಡಿಯಲ್ಲಿದೆ. ಹಿಂದಿನ ಕೈಗಳಲ್ಲಿ ದಂಡವುಳ್ಳ ವೃತ್ತಾಕಾರ ಚಕ್ರ ಮತ್ತು ಶಂಖ ಮುಂದಿನ ಬಲಗೈಯಲ್ಲಿ ಗದೆ, ಎಡಗೈ ವರದ ಮುದ್ರೆಯಲ್ಲಿದೆ. ಕಿರೀಟ ಮುಕುಟ, ಬಾಹುವಲ್ಯ, ತೋಳ್ಬಂದಿ, ಎದೆಪಟ್ಟಿ, ಕೊರಳಹಾರ, ಕರ್ಣಕುಂಡಲ, ಯಜ್ಞೋಪವೀತ, ವೈಜಯಂತಿ ಹಾರ, ಕಾಲ್ಗಡಗ, ಕಟಿವಸ್ತ್ರ, ಸೊಂಟಪಟ್ಟಿಯ ಕೆತ್ತನೆಯಿದೆ.

ಮೋಘಾದ ರಾಮಲಿಂಗೇಶ್ವರ ಗುಡಿಯ ಸು.೧೧ನೆಯ ಶತಮಾನದ ಪೀಠದ ಮೇಲೆ ಆಸೀನ ವಿಷ್ಣು ಶಿಲ್ಪ ಮತ್ತು ಸ್ಥಾನಿಕ ವಿಷ್ಣು ಶಿಲ್ಪವಿದೆ[೫] ರುಮ್ಮನಗೂಡು ರಾಮಲಿಂಗೇಶ್ವರ ಸು.೧೧ನೆಯ ಶತಮಾನದ ವಿಷ್ಣು ಶಿಲ್ಪವಿದೆ.[೬] ಕರಕ್‌ಮುಕ್ಲಿಯ ಮಲ್ಲಿಕಾರ್ಜುನ ಗುಡಿಯಲ್ಲಿ ಸು.೧೧ನೆಯ ಶತಮಾನದ ವಿಷ್ಣು ಮತ್ತು ಕೇಶವ ಶಿಲ್ಪಗಳು ನವರಂಗದಲ್ಲಿವೆ.[೭]

ಶಿರೋಳ್ಳಿ ಹರಿಹರ ದೇವಾಲಯ ಗುಡಿಯ ನಾರಾಯಣ ಶಿಲ್ಪ ಶಾಸನದ ಮೇಲಿದೆ. ರುಮ್ಮನಗೂಡದ ಶಂಕರನಾರಾಯಣ ದೇವಾಲಯದಲ್ಲಿನ ವಿಷ್ಣು, ಕೇಶವ, ಉಗ್ರನರಸಿಂಹ, ವಾಮನ ಶಿಲ್ಪಗಳಿವೆ. ಇಲ್ಲಿಯ ಅಧಿಷ್ಠಾನದಲ್ಲಿರುವ ಚತುರ್ವಿಂಶತಿ ವಿಷ್ಣು ರೂಪಗಳು ಲಕ್ಷ್ಮಿ ಶಿಲ್ಪಸಹಿತ ಪಟ್ಟಿಕೆಯಲ್ಲಿದೆ. ಚಕ್ರ ಹಿಡಿದು ಲಕ್ಷ್ಮಿಯನ್ನು ಎಡಗೈಯಿಂದ ಬಳಸಿ ಆಕೆಯ ಬಲಭುಜದ ಮೇಲೆ ಹಾಕಿರುವಂತಿದೆ. ಗದೆಯ ಮೇಲೆ ತನ್ನ ಎಡಗೈಯನ್ನು ಇಟ್ಟಂತಿದೆ. ಎತ್ತರದ ಕಿರೀಟ, ಎದೆಹಾರ, ಯಜ್ಞೋಪವೀತ, ಸೊಂಟಪಟ್ಟಿ, ವೈಜಯಂತಿ ಹಾರ, ಕಾಲ್ಗಡಗ, ಕಟಿವಸ್ತ್ರ, ಕಂಠಾಭರಣ ಧರಿಸಿದೆ. ಲಕ್ಷ್ಮಿ ಎಡಕ್ಕೆ ತ್ರಿಭಂಗಿ ಸ್ಥಿತಿಯಲ್ಲಿ ನಿಂತಿದೆ. ಅವಳ ಬಲಗೈಯನ್ನು ವಿಷ್ಣುವಿನ ಭುಜಕ್ಕೆ ಆವರಿಸಿದಂತೆ ಎಡಗೈಯಲ್ಲಿ ಕಮಲ ಹಿಡಿದಿದೆ. ಕುಂತಲ ಕಿರೀಟ ಧರಿಸಿದೆ. ಹೀಗೆ ಅಧಿಷ್ಠಾನ ಪಟ್ಟಿಯಲ್ಲಿ ವಿಷ್ಣು ಮತ್ತು ಲಕ್ಷ್ಮಿಯ ಶಿಲ್ಪಗಳು ಮೂಡಿಬಂದಿವೆ. ಪ್ರಭಾವಳಿಯಲ್ಲಿ ಕೀರ್ತಿಮುಖ, ಹೂಬಳ್ಳಿ ಮತ್ತು ಮಕರತೋರಣವಿದೆ. ವಿಷ್ಣು, ಲಕ್ಷ್ಮಿ ಶಿಲ್ಪದ ನಂತರ ಕುಡ್ಯಸ್ತಂಭ ಮತ್ತೆ ವಿಷ್ಣು ಲಕ್ಷ್ಮಿ ಶಿಲ್ಪವಿದೆ. ಅಗಸಿಯ ಗೋಡೆಯ ಮೇಲಿನ ಶಿಲ್ಪದಲ್ಲಿ ಲಕ್ಷ್ಮಿಯ ಎಡಕ್ಕೆ ವಿಷ್ಣುವಿನ ಶಿಲ್ಪ ತೋರಿಸಿರುವುದು ವಿಶೇಷವಾಗಿದೆ.

ರುಮ್ಮನಗೂಡಿನ ಶಂಕರನಾರಾಯಣ ದೇವಾಲಯದ ಸ್ತಂಭಗಳ ಮೇಲೆ ಹೂಬಳ್ಳಿ ಅಲಂಕರಣೆಯಲ್ಲದೆ, ವಿಷ್ಣುವಿನ ಅಷ್ಟಭುಜಧಾರಿ ಶಿಲ್ಪವಿದೆ. ಉಗ್ರನರಸಿಂಹನ ಶಿಲ್ಪಗಳು, ವಾಮನ ಮತ್ತು ವಿಷ್ಣುವಿನ ಶಿಲ್ಪಗಳಿವೆ. ಒಂದು ಸ್ತಂಭದಲ್ಲಿ ನೃತ್ಯ ಮಾಡುತ್ತಿರುವ ವಿಷ್ಣುವಿನ ಶಿಲ್ಪವಿದೆ.

ತೋಳ್ಬಂದಿ, ಕಾಲ್ಗಡಗ ಧರಿಸಿದಂತಿದೆ. ಯಜ್ಞೋಪವೀತ ಮತ್ತು ವೈಜಯಂತಿ ಹಾರ ಧರಿಸಿದಂತೆ ಶಿಲ್ಪಾವಳಿಯಲ್ಲಿ ಮೂಡಿದೆ.

ಸ್ಥಳ: ರುಮ್ಮನಗೂಡು	**ಶಿಲ್ಪ:** ಮಾಧವ
ಶಿಲೆ: ಕಪ್ಪು ಕಲ್ಲು	**ಕಾಲ:** ಸು.೧೧ನೇ ಶತಮಾನ
ಸ್ಥಿತಿ: ತ್ರುಟಿತ	**ದೊರೆತ ಸ್ಥಳ:** ಶಂಕರ ನಾರಾಯಣ ದೇವಾಲಯ

ಚತುರ್ಭುಜಧಾರಿ ಮಾಧವನ ಶಿಲ್ಪ ದೇವಾಲಯದ ಗರ್ಭಗುಡಿಯಲ್ಲಿದೆ. ಹಿಂದಿನ ಕೈಗಳಲ್ಲಿ ದಂಡವುಳ್ಳ ವೃತ್ತಾಕಾರ ಚಕ್ರ ಮತ್ತು ಶಂಖ ಮುಂದಿನ ಬಲಗೈಯಲ್ಲಿ ಗದೆ, ಎಡಗೈ ವರದ ಮುದ್ರೆಯಲ್ಲಿದೆ. ಕಿರೀಟ ಮುಕುಟ, ಬಾಹುವಲ್ಯ, ತೋಳ್ಬಂದಿ, ಎದೆಪಟ್ಟಿ, ಕೊರಳಹಾರ, ಕರ್ಣಕುಂಡಲ, ಯಜ್ಞೋಪವೀತ, ವೈಜಯಂತಿ ಹಾರ, ಕಾಲ್ಗಡಗ, ಕಟಿವಸ್ತ್ರ, ಸೊಂಟಪಟ್ಟಿಯ ಕೆತ್ತನೆಯಿದೆ.

ಮೋಘಾದ ರಾಮಲಿಂಗೇಶ್ವರ ಗುಡಿಯ ಸು.೧೧ನೆಯ ಶತಮಾನದ ಪೀಠದ ಮೇಲೆ ಆಸೀನ ವಿಷ್ಣು ಶಿಲ್ಪ ಮತ್ತು ಸ್ಥಾನಿಕ ವಿಷ್ಣು ಶಿಲ್ಪವಿದೆ.[೫] ರುಮ್ಮನಗೂಡು ರಾಮಲಿಂಗೇಶ್ವರ ಸು.೧೧ನೆಯ ಶತಮಾನದ ವಿಷ್ಣು ಶಿಲ್ಪವಿದೆ.[೬] ಕರಕ್‌ಮುಕ್ಲಿಯ ಮಲ್ಲಿಕಾರ್ಜುನ ಗುಡಿಯಲ್ಲಿ ಸು.೧೧ನೆಯ ಶತಮಾನದ ವಿಷ್ಣು ಮತ್ತು ಕೇಶವ ಶಿಲ್ಪಗಳು ನವರಂಗದಲ್ಲಿವೆ.[೭]

ಶಿರೋಳ್ಳಿ ಹರಿಹರ ದೇವಾಲಯ ಗುಡಿಯ ನಾರಾಯಣ ಶಿಲ್ಪ ಶಾಸನದ ಮೇಲಿದೆ. ರುಮ್ಮನಗೂಡದ ಶಂಕರನಾರಾಯಣ ದೇವಾಲಯದಲ್ಲಿನ ವಿಷ್ಣು, ಕೇಶವ, ಉಗ್ರನರಸಿಂಹ, ವಾಮನ ಶಿಲ್ಪಗಳಿವೆ. ಇಲ್ಲಿಯ ಅಧಿಷ್ಠಾನದಲ್ಲಿರುವ ಚತುರ್ವಿಂಶತಿ ವಿಷ್ಣು ರೂಪಗಳು ಲಕ್ಷ್ಮಿ ಶಿಲ್ಪಸಹಿತ ಪಟ್ಟಿಕೆಯಲ್ಲಿದೆ. ಚಕ್ರ ಹಿಡಿದು ಲಕ್ಷ್ಮಿಯನ್ನು ಎಡಗೈಯಿಂದ ಬಳಸಿ ಆಕೆಯ ಬಲಭುಜದ ಮೇಲೆ ಹಾಕಿರುವಂತಿದೆ. ಗದೆಯ ಮೇಲೆ ತನ್ನ ಎಡಗೈಯನ್ನು ಇಟ್ಟಂತಿದೆ. ಎತ್ತರದ ಕಿರೀಟ, ಎದೆಹಾರ, ಯಜ್ಞೋಪವೀತ, ಸೊಂಟಪಟ್ಟಿ, ವೈಜಯಂತಿ ಹಾರ, ಕಾಲ್ಗಡಗ, ಕಟಿವಸ್ತ್ರ, ಕಂಠಾಭರಣ ಧರಿಸಿದೆ. ಲಕ್ಷ್ಮಿ ಎಡಕ್ಕೆ ತ್ರಿಭಂಗಿ ಸ್ಥಿತಿಯಲ್ಲಿ ನಿಂತಿದೆ. ಅವಳ ಬಲಗೈಯನ್ನು ವಿಷ್ಣುವಿನ ಭುಜಕ್ಕೆ ಆವರಿಸಿದಂತೆ ಎಡಗೈಯಲ್ಲಿ ಕಮಲ ಹಿಡಿದಿದೆ. ಕುಂತಲ ಕಿರೀಟ ಧರಿಸಿದೆ. ಹೀಗೆ ಅಧಿಷ್ಠಾನ ಪಟ್ಟಿಯಲ್ಲಿ ವಿಷ್ಣು ಮತ್ತು ಲಕ್ಷ್ಮಿಯ ಶಿಲ್ಪಗಳು ಮೂಡಿಬಂದಿವೆ. ಪ್ರಭಾವಳಿಯಲ್ಲಿ ಕೀರ್ತಿಮುಖ, ಹೂಬಳ್ಳಿ ಮತ್ತು ಮಕರತೋರಣವಿದೆ. ವಿಷ್ಣು, ಲಕ್ಷ್ಮಿ ಶಿಲ್ಪದ ನಂತರ ಕುಡ್ಯಸ್ತಂಭ ಮತ್ತೆ ವಿಷ್ಣು ಲಕ್ಷ್ಮಿ ಶಿಲ್ಪವಿದೆ. ಅಗಸಿಯ ಗೋಡೆಯ ಮೇಲಿನ ಶಿಲ್ಪದಲ್ಲಿ ಲಕ್ಷ್ಮಿಯ ಎಡಕ್ಕೆ ವಿಷ್ಣುವಿನ ಶಿಲ್ಪ ತೋರಿಸಿರುವುದು ವಿಶೇಷವಾಗಿದೆ.

ರುಮ್ಮನಗೂಡಿನ ಶಂಕರನಾರಾಯಣ ದೇವಾಲಯದ ಸ್ತಂಭಗಳ ಮೇಲೆ ಹೂಬಳ್ಳಿ ಅಲಂಕರಣೆಯಲ್ಲದೆ, ವಿಷ್ಣುವಿನ ಅಷ್ಟಭುಜಧಾರಿ ಶಿಲ್ಪವಿದೆ. ಉಗ್ರನರಸಿಂಹನ ಶಿಲ್ಪಗಳು, ವಾಮನ ಮತ್ತು ವಿಷ್ಣುವಿನ ಶಿಲ್ಪಗಳಿವೆ. ಒಂದು ಸ್ತಂಭದಲ್ಲಿ ನೃತ್ಯ ಮಾಡುತ್ತಿರುವ ವಿಷ್ಣುವಿನ ಶಿಲ್ಪವಿದೆ.

ತೋಳ್ಬಂದಿ, ಕಾಲ್ಗಡಗ ಧರಿಸಿದಂತಿದೆ. ಯಜ್ಞೋಪವೀತ ಮತ್ತು ವೈಜಯಂತಿ ಹಾರ ಧರಿಸಿದಂತೆ ಶಿಲ್ಪಾವಳಿಯಲ್ಲಿ ಮೂಡಿದೆ.

ಸ್ಥಳ: ರುಮ್ಮನಗೂಡು **ಶಿಲ್ಪ:** ಮಾಧವ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಶಂಕರ ನಾರಾಯಣ ದೇವಾಲಯ

ಚತುರ್ಭುಜಧಾರಿ ಮಾಧವನ ಶಿಲ್ಪ ದೇವಾಲಯದ ಗರ್ಭಗುಡಿಯಲ್ಲಿದೆ. ಹಿಂದಿನ ಕೈಗಳಲ್ಲಿ ದಂಡವುಳ್ಳ ವೃತ್ತಾಕಾರ ಚಕ್ರ ಮತ್ತು ಶಂಖ ಮುಂದಿನ ಬಲಗೈಯಲ್ಲಿ ಗದೆ, ಎಡಗೈ ವರದ ಮುದ್ರೆಯಲ್ಲಿದೆ. ಕಿರೀಟ ಮುಕುಟ, ಬಾಹುವಲ್ಯ, ತೋಳ್ಬಂದಿ, ಎದೆಪಟ್ಟಿ, ಕೊರಳಹಾರ, ಕರ್ಣಕುಂಡಲ, ಯಜ್ಞೋಪವೀತ, ವೈಜಯಂತಿ ಹಾರ, ಕಾಲ್ಗಡಗ, ಕಟಿವಸ್ತ್ರ, ಸೊಂಟಪಟ್ಟಿಯ ಕೆತ್ತನೆಯಿದೆ.

ಮೋಘಾದ ರಾಮಲಿಂಗೇಶ್ವರ ಗುಡಿಯ ಸು.೧೧ನೆಯ ಶತಮಾನದ ಪೀಠದ ಮೇಲೆ ಆಸೀನ ವಿಷ್ಣು ಶಿಲ್ಪ ಮತ್ತು ಸ್ಥಾನಿಕ ವಿಷ್ಣು ಶಿಲ್ಪವಿದೆ.[೫] ರುಮ್ಮನಗೂಡು ರಾಮಲಿಂಗೇಶ್ವರ ಸು.೧೧ನೆಯ ಶತಮಾನದ ವಿಷ್ಣು ಶಿಲ್ಪವಿದೆ.[೬] ಕರಕ್‌ಮುಕ್ಕಿಯ ಮಲ್ಲಿಕಾರ್ಜುನ ಗುಡಿಯಲ್ಲಿ ಸು.೧೧ನೆಯ ಶತಮಾನದ ವಿಷ್ಣು ಮತ್ತು ಕೇಶವ ಶಿಲ್ಪಗಳು ನವರಂಗದಲ್ಲಿವೆ.[೬]

ಶಿರೋಳ್ಳಿ ಹರಿಹರ ದೇವಾಲಯ ಗುಡಿಯ ನಾರಾಯಣ ಶಿಲ್ಪ ಶಾಸನದ ಮೇಲಿದೆ. ರುಮ್ಮನಗೂಡದ ಶಂಕರನಾರಾಯಣ ದೇವಾಲಯದಲ್ಲಿನ ವಿಷ್ಣು, ಕೇಶವ, ಉಗ್ರನರಸಿಂಹ, ವಾಮನ ಶಿಲ್ಪಗಳಿವೆ. ಇಲ್ಲಿಯ ಅಧಿಷ್ಠಾನದಲ್ಲಿರುವ ಚತುರ್ವಿಂಶತಿ ವಿಷ್ಣು ರೂಪಗಳು ಲಕ್ಷ್ಮಿ ಶಿಲ್ಪಸಹಿತ ಪಟ್ಟಿಕೆಯಲ್ಲಿದೆ. ಚಕ್ರ ಹಿಡಿದು ಲಕ್ಷ್ಮಿಯನ್ನು ಎಡಗೈಯಿಂದ ಬಳಸಿ ಆಕೆಯ ಬಲಭುಜದ ಮೇಲೆ ಹಾಕಿರುವಂತಿದೆ. ಗದೆಯ ಮೇಲೆ ತನ್ನ ಎಡಗೈಯನ್ನು ಇಟ್ಟಂತಿದೆ. ಎತ್ತರದ ಕಿರೀಟ, ಎದೆಹಾರ, ಯಜ್ಞೋಪವೀತ, ಸೊಂಟಪಟ್ಟಿ, ವೈಜಯಂತಿ ಹಾರ, ಕಾಲ್ಗಡಗ, ಕಟಿವಸ್ತ್ರ, ಕಂಠಾಭರಣ ಧರಿಸಿದೆ. ಲಕ್ಷ್ಮಿ ಎಡಕ್ಕೆ ತ್ರಿಭಂಗಿ ಸ್ಥಿತಿಯಲ್ಲಿ ನಿಂತಿದೆ. ಅವಳ ಬಲಗೈಯನ್ನು ವಿಷ್ಣುವಿನ ಭುಜಕ್ಕೆ ಆವರಿಸಿದಂತೆ ಎಡಗೈಯಲ್ಲಿ ಕಮಲ ಹಿಡಿದಿದೆ. ಕುಂತಲ ಕಿರೀಟ ಧರಿಸಿದೆ. ಹೀಗೆ ಅಧಿಷ್ಠಾನ ಪಟ್ಟಿಯಲ್ಲಿ ವಿಷ್ಣು ಮತ್ತು ಲಕ್ಷ್ಮಿಯ ಶಿಲ್ಪಗಳು ಮೂಡಿಬಂದಿವೆ. ಪ್ರಭಾವಳಿಯಲ್ಲಿ ಕೀರ್ತಿಮುಖ, ಹೂಬಳ್ಳಿ ಮತ್ತು ಮಕರತೋರಣವಿದೆ. ವಿಷ್ಣು, ಲಕ್ಷ್ಮಿ ಶಿಲ್ಪದ ನಂತರ ಕುಡ್ಯಸ್ತಂಭ ಮತ್ತೆ ವಿಷ್ಣು ಲಕ್ಷ್ಮಿ ಶಿಲ್ಪವಿದೆ. ಅಗಸಿಯ ಗೋಡೆಯ ಮೇಲಿನ ಶಿಲ್ಪದಲ್ಲಿ ಲಕ್ಷ್ಮಿಯ ಎಡಕ್ಕೆ ವಿಷ್ಣುವಿನ ಶಿಲ್ಪ ತೋರಿಸಿರುವುದು ವಿಶೇಷವಾಗಿದೆ.

ರುಮ್ಮನಗೂಡಿನ ಶಂಕರನಾರಾಯಣ ದೇವಾಲಯದ ಸ್ತಂಭಗಳ ಮೇಲೆ ಹೂಬಳ್ಳಿ ಅಲಂಕರಣೆಯಲ್ಲದೆ. ವಿಷ್ಣುವಿನ ಅಷ್ಟಭುಜಧಾರಿ ಶಿಲ್ಪವಿದೆ. ಉಗ್ರನರಸಿಂಹನ ಶಿಲ್ಪಗಳು, ವಾಮನ ಮತ್ತು ವಿಷ್ಣುವಿನ ಶಿಲ್ಪಗಳಿವೆ. ಒಂದು ಸ್ತಂಭದಲ್ಲಿ ನೃತ್ಯ ಮಾಡುತ್ತಿರುವ ವಿಷ್ಣುವಿನ ಶಿಲ್ಪವಿದೆ.

ಇನ್ನೊಂದು ಸ್ತಂಭ ಶಿಲ್ಪದಲ್ಲಿ ಅಷ್ಟಭುಜಧಾರಿ ಉಗ್ರನರಸಿಂಹ ತನ್ನ ತೊಡೆಯ ಮೇಲೆ ಹಿರಣ್ಯಕಶ್ಯಪನನ್ನು ಮಲಗಿಸಿ ಉದ್ದನೆ ಉಗುರುಗಳಿಂದ ಹೊಟ್ಟೆ ಸೀಳುವ ಶಿಲ್ಪವಿದೆ. ಭಕ್ತಪ್ರಹ್ಲಾದ ಮತ್ತು ಲಕ್ಷ್ಮಿ ಶಿಲ್ಪದ ಮಧ್ಯದಲ್ಲಿ ನರಸಿಂಹನ ಶಿಲ್ಪವಿದೆ. ಮತ್ತೊಂದು ಸ್ತಂಭದಲ್ಲಿ ಕೀರ್ತಿಮುಖ ಮಾಲೆಯೊಳಗೆ ಪೀಠಸ್ಥ ಮೂರು ವಿಷ್ಣುವಿನ ಶಿಲ್ಪಗಳಿವೆ. ಹೊರ ಗರ್ಭಗುಡಿ ಲಲಾಟದ ಮೇಲೆ ಚತುರ್ಭುಜಧಾರಿ ಉಗ್ರನರಸಿಂಹ ಹಿರಣ್ಯಕಶ್ಯಪನ ಹೊಟ್ಟೆ ಬಗೆಯುವ ಕಥಾನಕ ದೃಶ್ಯವಿದೆ.

ನಿಡಗುಂದದ ಕಾಳಮ್ಮ ದೇವಾಲಯದಲ್ಲಿ ವಿಷ್ಣುವಿನ ದಶಾವತಾರಗಳ ಶಿಲ್ಪವಿದೆ. ವಿಷ್ಣುವಿನ ನಾಭಿಯಿಂದ ಬ್ರಹ್ಮನ ಉದ್ಭವ, ಸಮುದ್ರ ಮಂಥನದಲ್ಲಿ ಲಕ್ಷ್ಮಿ ಉದ್ಭವ, ಕೂರ್ಮಾವತಾರ, ವಾಮನ ಅವತಾರ, ರಾಮನ, ಕೃಷ್ಣನ, ಹೈಗ್ರೀವನ, ಬಲರಾಮನ ಅವತಾರಗಳ ಶಿಲ್ಪಗಳು ಹೀಗೆ ನವರಂಗದ ಸ್ತಂಭಗಳ ಮೇಲಿವೆ.

ಸ್ಥಳ: ದೇಗಲ್ಮಡಿ **ಶಿಲ್ಪ:** ಹನುಮಾನ
ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧ನೇ ಶತಮಾನ
ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಜೈನ ದೇವಾಲಯ

ಹನುಮಾನ್ ಶಿಲ್ಪ ಸು.೧.೫ ಅಡಿ ಎತ್ತರ ಇದ್ದು, ಈ ಶಿಲ್ಪ ಪೀಠದಲ್ಲಿದೆ. ಅಭಯಹಸ್ತ, ಸೊಂಟದ ಮೇಲೆ ಎಡಗೈಯನ್ನು ಅದರೊಳಗೆ ಗದೆ ಹಿಡಿದು ನಿಂತ ಭಂಗಿಯಲ್ಲಿದೆ.

ಗ್ರಾಮ: ಕಲಬೆನ್ನೂರು **ಶಿಲ್ಪ:** ಹನುಮಾನ್
ಶಿಲೆ: ಕಪ್ಪು ಕಲ್ಲು. **ಕಾಲ:** ಸು.೯ನೆಯ ಶತಮಾನ
ಸ್ಥಿತಿ: ಉತ್ತಮ **ದೊರೆತ ಸ್ಥಳ:** ಅಗಸಿ

ಗದೆಯನ್ನು ಬಲಗೈಯಲ್ಲಿ ಕೆಳಗೆ ತೊಡೆ ಹತ್ತಿರ ಹಿಡಿದು ನಿಂತಿರುವ ಎತ್ತರದ ಶಿಲ್ಪವಿದೆ. ಕೊರಳಹಾರ, ಕಿರೀಟ ಮತ್ತು ಸೊಂಟಕ್ಕೆ ಒಂದು ಬಟ್ಟೆ ಸುತ್ತಿಕೊಂಡಂತಿದೆ.

ಸ್ಥಳ: ಕರಕ್‌ಮುಕ್ಲಿ **ಶಿಲ್ಪ:** ಹನುಮಾನ್
ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೯ನೇ ಶತಮಾನ
ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಮಂದಿರ

ಶಿಲ್ಪ ಸು.೫.೮ ಅಡಿ ಎತ್ತರವಾಗಿದೆ. ಕಪ್ಪುಶಿಲೆಯಲ್ಲಿದೆ. ಎತ್ತರ ಪಾದವನ್ನುಳ್ಳ ಶಿಲ್ಪದಲ್ಲಿ ಗದೆಯನ್ನು ಎಡಗೈಯಲ್ಲಿ ಹಿಡಿದುಕೊಂಡ ಕಟಿ ಹಸ್ತವಿದೆ. ಬಲಗೈ ಅಭಯ ಮುದ್ರೆಯಲ್ಲಿದೆ.

ಸ್ಥಳ: ಗೊಟ್ಟಂಗೊಟ್ಟೆ **ಶಿಲ್ಪ:** ಹನುಮಾನ
ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೦ನೇ ಶತಮಾನ
ಸ್ಥಿತಿ: ತೃಟಿತ **ದೊರೆತ ಸ್ಥಳ:** ಗೊಟ್ಟಂಗೊಟ್ಟೆ ಗುಡ್ಡ

ಪುರಾತನ ಹನುಮಂತ ತ್ರುಟಿತವಾಗಿದೆ. ಬಲಗೈ ಅಭಯಹಸ್ತ, ಎಡಗೈಯಲ್ಲಿ ಗದೆ ಹಿಡಿದು ಸೊಂಟದ ಮೇಲೆ ಇಟ್ಟುಕೊಂಡಂತಿದೆ. ಕಿರೀಟಧಾರಿ, ಯಜ್ಞೋಪವೀತ, ಕಾಲ್ಗಡಗ, ಮಣಿಕಂಠ, ಕಂಠಹಾರ ಧರಿಸಿದಂತಿದೆ.

ಸ್ಥಳ: ಗೊಟ್ಟಂಗೊಟ್ಟಿ **ಶಿಲ್ಪ:** ಹನುಮಾನ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತೃಟಿತ **ದೊರೆತ ಸ್ಥಳ:** ಗೊಟ್ಟಂಗೊಟ್ಟಿ ಗುಡ್ಡ

ಗುಡ್ಡದ ಮೇಲಿರುವ ಇನ್ನೊಂದು ಪುರಾತನ ಹನುಮಾನ್ ಶಿಲ್ಪ ಬ್ರಾಹ್ಮಣ ವೇಷದಲ್ಲಿದೆ. ಅಂಜಲಿ ಹಸ್ತದಲ್ಲಿದೆ. ಅದರ ಎದುರು ಜೋಡಿ ಪಾದುಕೆಗಳಿವೆ. ಮುಡಿ ಕಟ್ಟನಿಂತಂತೆ ಶಿಲ್ಪಾವಳಿಯಲ್ಲಿ ಮೂಡಿಬಂದಿದೆ. ರುದ್ರಾಕ್ಷಿ ಮಾಲೆಗಳು, ಮಣಿಕಂಠ, ತೋಳ್ಬಂದಿ, ಕರ್ಣಕುಂಡಲ ಧರಿಸಿದೆ.

ದೇಗಲ್ಮಡಿ ಊರ ಹೊರಗಿನ ಗುಡಿಯ ಪ್ರಾಂಗಣದಲ್ಲಿ ತ್ರುಟಿತ ಹನುಮಾನ್ ಶಿಲ್ಪವಿದೆ. ಮೂರು ಪಟ್ಟಿಯ ಕಂಠಮಾಲೆ ಧರಿಸಿದೆ. ಕರ್ಣಕುಂಡಲ, ಅಭಯಹಸ್ತ?(ತ್ರುಟಿತ), ಎಡಗೈಯಲ್ಲಿ ಗದೆ, ಮಣಿಕಂಠಧಾರಿ ಹಣೆಪಟ್ಟಿಕೆ? (ತ್ರುಟಿತ), ಕಾಲ್ಗಡಗ, ಪೈಜಾಮ ಧರಿಸಿದೆ. ಕಾಲ ಕೆಳಗೆ ಶನಿಯು ಬೋರಲು ಬಿದ್ದಂತೆ ಕೆತ್ತಿದೆ. ಶನಿಯ ತಲೆಯ ಮೇಲೆ ಹನುಮಂತ ತನ್ನ ಎಡಗಾಲು ಇಟ್ಟಿದ್ದಾನೆ. ಶನಿಯು ಚಾಕು ಮತ್ತು ಗುರಾಣಿ ಹಿಡಿದಂತೆ ಕೆತ್ತಿದೆ. ಚಿಂಚೋಳಿಯ ವೆಂಕಟೇಶ್ವರ ದೇವಾಲಯದಲ್ಲಿ ವೆಂಕಟೇಶ್ವರ ಮೂರ್ತಿ ಮತ್ತು ರಾಣಾಪುರದಲ್ಲಿ ವೆಂಕಟೇಶ್ವರನ ಮೂರ್ತಿಶಿಲ್ಪಗಳಿವೆ.

ಇತರೆ ವೈಷ್ಣವ ಶಿಲ್ಪಗಳು:

* **ವೈಷ್ಣವ ದ್ವಾರಪಾಲಕರು:** ವೈಷ್ಣವ ದ್ವಾರಪಾಲಕರಾದ ಜಯ, ವಿಜಯರ ಶಿಲ್ಪ ಸಾಮಾನ್ಯವಾಗಿ ವೈಷ್ಣವ ದೇವಾಲಯಗಳಲ್ಲಿರುತ್ತವೆ. ಉದಾ: ರುಮ್ಮನಗೂಡಿನ ಶಂಕರ ನಾರಾಯಣ ಗುಡಿಯಲ್ಲಿ ವೈಷ್ಣವ ದ್ವಾರಪಾಲಕರ ಸು.೪ ಅಡಿ ಎತ್ತರದ ಶಿಲ್ಪವಿದೆ.[೮] ಆದರೆ ಈಗ ತ್ರುಟಿತವಾಗಿದೆ. ಈ ದೇವಾಲಯದ ಮೊದಲ ಗರ್ಭಗುಡಿ ಪ್ರವೇಶ ದ್ವಾರದಲ್ಲಿ ವೈಷ್ಣವ ದ್ವಾರಪಾಲಕರಾದ ಜಯ ವಿಜಯರ ಶಿಲ್ಪಗಳಿವೆ. ರುಮ್ಮನಗೂಡಿನ ಶಂಕರ ನಾರಾಯಣ ದೇವಾಲಯದಲ್ಲಿ ಚತುರ್ಭುಜಧಾರಿಗಳು ಹಿಂದಿನ ಕೈಯಲ್ಲಿ ವೃತ್ತಾಕಾರ ದಂಡವುಳ್ಳ ಚಕ್ರ, ಶಂಖ, ಗದೆ ಮತ್ತು ವರದ ಮುದ್ರೆಯಿದೆ. ಎದೆಪಟ್ಟಿ, ಕೊರಳಹಾರ, ಸೊಂಟಪಟ್ಟಿ, ಕಟಿವಸ್ತ್ರ, ಯಜ್ಞೋಪವೀತ, ವೈಜಯಂತಿ ಹಾರ, ಕಾಲ್ಗಡಗ, ಕಿರೀಟ ಧರಿಸಿರುವುದು ಈ ಶಿಲ್ಪದ ಲಕ್ಷಣಗಳಾಗಿವೆ.

* **ಚಾಮರಧಾರಿಗಳು:** ಹೆಚ್ಚಾಗಿ ದೇವಕನ್ಯೆಯರನ್ನು ಚಾಮರಧಾರಿಗಳಾಗಿ ತೋರಿಸಿದೆ. ಕುಂತಲ, ತೋಳ್ಬಂದಿ, ಮಣಿಕಂಠ, ಕಾಲ್ಗಡಗ, ಕುಚಹಾರ, ಕಂಠಹಾರ, ಕೊರಳಹಾರ, ಯಜ್ಞೋಪವೀತ, ಕಟಿವಸ್ತ್ರ ಧರಿಸಿದಂತಿದೆ. ಚಾಮರ ಹಿಡಿದು ದೇವಕನ್ಯೆಯರು ತ್ರಿಭಂಗಿಯಲ್ಲಿ ನಿಂತಂತಿದೆ. ಉದಾ: ರುಮ್ಮನಗೂಡಿನ ಶಂಕರ ನಾರಾಯಣ ಗುಡಿ.

* **ಗರುಡ:** ವಿಷ್ಣುವಿನ ಬಲಭಾಗಕ್ಕೆ ಕೆಳಬದಿಯಲ್ಲಿ ಆತನ ವಾಹನವಾದ ಗರುಡ ಶಿಲ್ಪವಿದೆ. ಮಾನವ ರೂಪದಲ್ಲಿ ಹೆಚ್ಚಾಗಿ ಈ ಶಿಲ್ಪವಿದ್ದು ಅಂಜಲಿ ಹಸ್ತದಲ್ಲಿ ಕುಳಿತಿದೆ. ಉದಾ: ಗಡಿ ಕೇಶವಾರದ ಕೇಶವ ನಾರಾಯಣ ಗುಡಿ. ಸಾಮಾನ್ಯವಾಗಿ ದೇವಾಲಯದ ಗರ್ಭಗುಡಿ ಎದುರಿನ ಪ್ರಾಂಗಣದಲ್ಲಿ ಗರುಡ ಕೆತ್ತನೆ ಇರುವ ಗರುಡ ಸ್ತಂಭ ಸ್ಥಾಪಿತವಾಗಿರುತ್ತದೆ. ಉದಾ: ಚಿಂಚೋಳಿ ವೆಂಕಟೇಶ್ವರ ದೇವಾಲಯ.

೫.೨.೩. ಜೈನ ಮೂರ್ತಿಶಿಲ್ಪಗಳು

ಗ್ರಾಮ: ಖಣದಾಳ **ಶಿಲ್ಪ:** ಜೈನ ಯಕ್ಷಿಣಿ
ಶಿಲೆ: ಕಪ್ಪು ಕಲ್ಲು **ಕಾಲ:** ಸು.೮ನೆಯ ಶತಮಾನ
ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಚತುರ್ಭುಜಧಾರಿಯಾಗಿರುವ ಶಿಲ್ಪದ ಮುಂದಿನ ಕೈಗಳು ಖಡ್ಗ ಮತ್ತು ಬೀಜಪುರ ಹಿಡಿದಿದೆ. ಹಿಂದಿನ ಕೈಗಳು ತ್ರಿಶೂಲ? ಮತ್ತು ಡಮರು ಹಿಡಿದಿವೆ. ಕಿರೀಟ, ಕಿವಿಓಲೆ, ಕೈಬಳೆ, ಬಾಹುವಲ್ಯ, ಕೊರಳಾಭರಣ, ಸೊಂಟಪಟ್ಟಿ, ಕುಚಹಾರ, ಇಳಿವಸ್ತ್ರ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಗ್ರಾಮ: ಕಲಬೆನ್ನೂರು **ಶಿಲ್ಪ:** ಜೈನ ಮೂರ್ತಿ
ಶಿಲೆ: ಒರಟಾದ ಕಪ್ಪು ಕಲ್ಲು **ಕಾಲ:** ಸು.೧೧ನೆಯ ಶತಮಾನ
ಸ್ಥಿತಿ: ಉತ್ತಮ **ದೊರೆತ ಸ್ಥಳ:** ಅಗಸಿ

ಮುಕ್ಕೊಡೆಯಿರುವ ಜೈನ ಶಿಲ್ಪವಿದೆ. ಹಿಂದೆ ಪ್ರಭಾವಳಿ ಕೆತ್ತನೆಯಿದೆ. ಇಕ್ಕೆಲಗಳಲ್ಲಿ ಚಾಮರಧಾರಿಗಳ ಶಿಲ್ಪಗಳಿವೆ. ಕಂಬದ ಮೇಲೆ ನಿಂತಿರುವ ಚಾಮರ ಬೀಸುವರು-ಕರ್ಣ ಕುಂಡಲ, ಕಿರೀಟ, ಕೊರಳಹಾರ, ಸೊಂಟಪಟ್ಟಿ ಧರಿಸಿರುವರು.

ಗ್ರಾಮ: ಮೇಳಕುಂದಾ(ಕೆ), **ಶಿಲ್ಪ:** ಜೈನ
ಶಿಲೆ: ಕಪ್ಪುಶಿಲೆ **ಕಾಲ:** ಸು.೭ನೆಯ ಶತಮಾನ
ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಮಂದಿರ

ಮುಕ್ಕೊಡೆಯಿರುವ ಜೈನ ಶಿಲ್ಪವು ಚಾಮರಧಾರಿಯರು ಕಂಬದ ಮೇಲೆ ನಿಂತು ಚಾಮರ ಬೀಸುತ್ತಿರುವ ಶಿಲ್ಪವಿದೆ. ಉಪಸ್ಥಿತ ಧ್ಯಾನ ಭಂಗಿಯಲ್ಲಿರುವ ಶಿಲ್ಪದಲ್ಲಿ ಯಾವುದೇ ಅಲಂಕರಣೆ ಕಂಡುಬರುವುದಿಲ್ಲ. ತಲೆಯ ಹಿಂದೆ ಪ್ರಭಾವಳಿಯಿದೆ.

ಗ್ರಾಮ: ಹಾಗರಗುಂಡಿಗೆ **ಶಿಲ್ಪ:** ಜೈನ ಯಕ್ಷಿಣಿ
ಶಿಲೆ: ಕಪ್ಪು ಕಲ್ಲು **ಕಾಲ:** ಸು.೯ನೆಯ ಶತಮಾನ
ಸ್ಥಿತಿ: ಕನಿಷ್ಠ **ದೊರೆತ ಸ್ಥಳ:** ಅಗಸಿ

ಮುಂದಿನ ಕೈಗಳು ಅಭಯ? ಬೀಜಪುರ ಹಿಡಿದಿವೆ. ಹಿಂದಿನ ಕೈಗಳು ಆಯುಧಧಾರಿ ಡಮರು ಮತ್ತು ತ್ರಿಶೂಲವಿದೆ.

ಗ್ರಾಮ: ಹಾಗರಗುಂಡಿಗೆ **ಶಿಲ್ಪ:** ಚಾಮರಧಾರಿ
ಶಿಲೆ: ಕಪ್ಪು ಕಲ್ಲು. **ಕಾಲ:** ಸು.೯ನೆಯ ಶತಮಾನ
ಸ್ಥಿತಿ: ಕನಿಷ್ಠ **ದೊರೆತ ಸ್ಥಳ:** ಮೂರ್ತಿಲಿಂಗ ಗುಡಿ

ಬೃಹತ್ ಚಾಮರಧಾರಿಯ ಶಿಲ್ಪವಿದೆ. ಕಿರೀಟ, ತಲೆ ಹಿಂದೆ ಪ್ರಭಾವಳಿ, ಎಡಗೈಯಲ್ಲಿ ಚಾಮರ, ಬಲಗೈಯಲ್ಲಿ ಬೀಜಪುರವನ್ನು ಹಿಡಿದ ಮೂರ್ತಿಯಿದೆ. ನುಣುಪಾಗಿ ಕಪ್ಪು ಕಲ್ಲಿನಲ್ಲಿ

ಕೆತ್ತನೆ ಮೂಡಿಬಂದಿದೆ. ಬಾಹುವಲ್ಯ, ಕರ್ಣಕುಂಡಲ, ಮಣಿಕಂಠ, ಕೊರಳಾಭರಣ ಕೈಗಡಗ, ಯಜ್ಞೋಪವೀತ, ಉದರಬಂಧ, ಕಟಿವಸ್ತ್ರ ಮತ್ತು ಸೊಂಟಬಂಧ ಕುಚಹಾರದ ಕೆತ್ತನೆಯಿದೆ. ಆದರ ಕೆಳಭಾಗ ತ್ರುಟಿತವಾಗಿದೆ. ಬಹುಶಃ ಚಾಮರಧಾರಿ ಶಿಲ್ಪವು ಜೈನ ಬಸದಿಯ ಕುರುಹಾಗಿದೆ.

ಗ್ರಾಮ: ಹಾಗರಗುಂಡಿಗೆ **ಶಿಲ್ಪ:** ಚಾಮರಧಾರಿ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೯ನೆಯ ಶತಮಾನ

ಸ್ಥಿತಿ: ಕನಿಷ್ಠ **ದೊರೆತ ಸ್ಥಳ:** ಮೂರ್ತಿಲಿಂಗಗುಡಿ

ನವರಂಗದ ಭಾಗದಲ್ಲಿ ಸೂರ್ಯನು ಏಳು ಕುದುರೆ ಸವಾರಿ ಮಾಡುತ್ತಿರುವ ಮತ್ತು ಇಕ್ಕೆಲಗಳಲ್ಲಿ ದ್ವಾರಪಾಲಕರ ಶಿಲ್ಪವಿರುವ ಲಿಂಗ ಪೀಠವಿದೆ.

ಗ್ರಾಮ: ಹಾಗರಗುಂಡಿಗೆ **ಶಿಲ್ಪ:** ಜೈನ ತೀರ್ಥಂಕರ,

ಶಿಲೆ: ಕಪ್ಪು ಕಲ್ಲು **ಕಾಲ:** ಸು.೯ನೆಯ ಶತಮಾನ

ಸ್ಥಿತಿ: ಕನಿಷ್ಠ **ದೊರೆತ ಸ್ಥಳ:** ಲಕ್ಕಮ್ಮನಗುಡಿ

ಲಕ್ಕಮ್ಮನ ಗುಡಿಯ ಎದುರಿಗೆ ಜೈನ ಮೂರ್ತಿಯಿದೆ. ಜೈನ ತೀರ್ಥಂಕರನು ಧ್ಯಾನಭಂಗಿಯಲ್ಲಿ ಕುಳಿತಂತೆ ಕೆತ್ತಲಾಗಿದೆ. ಗುಂಗುರು ಕೂದಲು, ನೀಳವಾದ ಕಿವಿಯಿವೆ.

ಗ್ರಾಮ: ಜೀವಣಗಿ **ಶಿಲ್ಪ:** ಜೈನಶಿಲ್ಪ

ಶಿಲೆ: ಕಪ್ಪುಕಲ್ಲು. **ಕಾಲ:** ಸು.೭ನೆಯ ಶತಮಾನ

ಸ್ಥಿತಿ: ತೃಟಿತ **ದೊರೆತ ಸ್ಥಳ:** ಬಿಬ್ಬಲಿಂಗೇಶ್ವರ ಗುಡಿ

ಮುಕ್ಕೊಡೆಯನ್ನು ಹೊಂದಿರುವ ಜೈನ ಶಿಲ್ಪವು ಹಿಂದೆ ಪ್ರಭಾವಳಿಯನ್ನು ಹೊಂದಿದೆ. ಧ್ಯಾನ ಭಂಗಿಯಲ್ಲಿರುವ ಶಿಲ್ಪದ ಕೆತ್ತನೆ ಸಾದಾಯಿದೆ. ಬಿಬ್ಬಲಿಂಗೇಶ್ವರ ಗುಡಿಯೆಂದು ಪ್ರಸ್ತುತ ಕರೆಯಲಾಗುವ ಗುಡಿಯ ಪಕ್ಕದಲ್ಲಿರುವ ತ್ರುಟಿತ ದೇವಾಲಯದೊಳಗಿನ ಮೂರ್ತಿಶಿಲ್ಪವು ಇದಾಗಿದೆ? ಚಾಮರಧಾರಿಯರು ಜೈನ ತೀರ್ಥಂಕರನಿಗೆ ಚಾಮರ ಬೀಸುತ್ತಿರುವಂತೆ ಕೆತ್ತಲಾಗಿದೆ. ಕಿರೀಟ, ಕರ್ಣಕುಂಡಲ, ಬಾಹುವಲ್ಯ, ಕೈಗಡಗ, ಕೊರಳಾಭರಣ, ಎದೆಯಾಭರಣ, ವಕ್ಷಬಂಧ, ಯಜ್ಞೋಪವೀತ, ಉಪವೀತ, ಸೊಂಟಬಂಧ, ಕುಚಹಾರ ಧರಿಸಿದೆ. ಜೈನ ತೀರ್ಥಂಕರನ ಇಕ್ಕೆಲಗಳಲ್ಲಿ ಸಿಂಹಗಳ ಶಿಲ್ಪಯಿವೆ.

ಗ್ರಾಮ: ಹುಣಸಿ ಹಡಗಲಿ **ಶಿಲ್ಪ:** ಜೈನ ತೀರ್ಥಂಕರ

ಶಿಲೆ: ಒರಟಾದ ಕಪ್ಪು ಕಲ್ಲು. **ಕಾಲ:** ಸು.೯ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಧರಣೇಂದ್ರ ಪದ್ಮಾವತಿದೇವಿ ಜೈನ ಬಸದಿ

ಧರಣೇಂದ್ರ ಪದ್ಮಾವತಿದೇವಿ ದಿಗಂಬರ ಜೈನ ಬಸದಿಯ ಹೊರ ಪ್ರಾಂಗಣದಲ್ಲಿ ಸ್ಥಾನಿಕ ಜೈನ ಶಿಲ್ಪವಿದೆ. ಮುಕ್ಕೋಡೆ, ಐದು ಹೆಡೆಯ ನಾಗಶಿಲ್ಪವಿದೆ. ತಲೆಯ ಹಿಂದೆ ವೃತ್ತಾಕಾರದ ಪ್ರಭಾವಳಿಯಿದೆ. ಶಿಲ್ಪದ ಹಿಂದಿನ ಭಾಗದಲ್ಲಿ ಕಂಬದ ಮೇಲೆ ಹೂಬಳ್ಳಿಯ ಪ್ರಭೆ ಕೊರೆಯಲಾಗಿದೆ.

ಗ್ರಾಮ: ಹುಣಸಿ ಹಡಗಲಿ ಶಿಲ್ಪ: ಜೈನ ತೀರ್ಥಂಕರ

ಶಿಲೆ: ಒರಟಾದ ಕಪ್ಪು ಕಲ್ಲು ಕಾಲ: ಸು.೯ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಧರಣೇಂದ್ರ ಪದ್ಮಾವತಿದೇವಿ ಜೈನ ಬಸದಿ

ಪಾರ್ಶ್ವನಾಥನ ಶಿಲ್ಪವು ಪದ್ಮಾಸನ ಭಂಗಿಯಲ್ಲಿ ಧ್ಯಾನಕ್ಕೆ ಕುಳಿತಂತಿದೆ. ತಲೆಯ ಹಿಂದೆ ಪ್ರಭೆ, ಏಳು ಹೆಡೆಯ ನಾಗಶಿಲ್ಪ, ಮುಕ್ಕೊಡೆ ಅದರ ಮೇಲೆ ಸಿಂಹ ವೆಯ್ಯಾವಳಿ ಕೆತ್ತನೆಯಿದೆ. ಇಕ್ಕೆಲಗಳಲ್ಲಿ ಚಾಮರಧಾರಿಯರ ಶಿಲ್ಪಗಳಿವೆ. ಎತ್ತರವಾದ ಕಿರೀಟ, ಕರ್ಣಕುಂಡಲ, ಬಾಹುವಲ್ಯ, ಭುಜಬಂಧ, ಕೊರಳಾಭರಣ, ವಕ್ಷಬಂಧ, ಕೈಗಡಗ, ಸೊಂಟಬಂಧ, ಸೊಂಟಪಟ್ಟಿ, ಇಳಿಬಟ್ಟೆ ಧರಿಸಿದಂತೆ ಕೆತ್ತಲಾಗಿದೆ.

ಗ್ರಾಮ: ಹುಣಸಿ ಹಡಗಲಿ ಶಿಲ್ಪ: ಜೈನ ತೀರ್ಥಂಕರ

ಶಿಲೆ: ಒರಟಾದ ಕಪ್ಪು ಕಲ್ಲು ಕಾಲ: ಸು.೯ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಧರಣೇಂದ್ರ ಪದ್ಮಾವತಿದೇವಿ ಜೈನ ಬಸದಿ

ಸ್ಥಾನಿಕ ತ್ರುಟಿತ ಜೈನ ತೀರ್ಥಂಕರನ ಶಿಲ್ಪ ಗುಂಗುರು ಕೂದಲು, ನೀಳ ಕಿವಿಗಳಿರುವಂತೆ ಕೆತ್ತಲ್ಪಟ್ಟಿದೆ.

ಗ್ರಾಮ: ಹುಣಸಿ ಹಡಗಲಿ ಶಿಲ್ಪ: ಜೈನ ತೀರ್ಥಂಕರ

ಶಿಲೆ: ಒರಟಾದ ಕಪ್ಪು ಕಲ್ಲು ಕಾಲ: ಸು.೯ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಧರಣೇಂದ್ರ ಪದ್ಮಾವತಿದೇವಿ ಜೈನ ಬಸದಿ

ಸ್ಥಾನಿಕ ಜೈನ ತೀರ್ಥಂಕರನ ಶಿಲ್ಪವು ಮುಕ್ಕೊಡೆ, ವೃತ್ತಾಕಾರ ಪ್ರಭೆ, ಇಕ್ಕೆಲಗಳಲ್ಲಿ ಚಾಮರ ಮತ್ತು ಹೂಬಳ್ಳಿಯಲಂಕೃತ ಕೆತ್ತನೆಯಿದೆ. ನೀಳಕಿವಿ, ಗುಂಗುರು ಕೂದಲುಗಳ ಕೆತ್ತನೆಯಿದೆ. ತ್ರುಟಿತ ಜೈನ ತೀರ್ಥಂಕರನ ತಲೆಯ ಭಾಗ ಮಾತ್ರ ಉಳಿದಿದೆ. ಗುಂಗುರು ಕೂದಲು ಮತ್ತು ನೀಳಕಿವಿಯ ಕೆತ್ತನೆಯಿದೆ.

ಗ್ರಾಮ: ಹುಣಸಿ ಹಡಗಲಿ ಶಿಲ್ಪ: ಜೈನ ಯಕ್ಷಿಣಿ

ಶಿಲೆ: ಒರಟಾದ ಕಪ್ಪು ಕಲ್ಲು ಕಾಲ: ಸು.೯ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಧರಣೇಂದ್ರ ಪದ್ಮಾವತಿದೇವಿ ಜೈನ ಬಸದಿ

ಜೈನ ಯಕ್ಷಿಣಿಯ ಶಿಲ್ಪವಿದೆ. ಚತುರ್ಬಾಹುವಿರುವ ಶಿಲ್ಪದ ಹಿಂದಿನ ಕೈಗಳು ಪಾಶ ಮತ್ತು ಅಂಕುಶ? ಅಭಯ ಹಸ್ತ ಮತ್ತು ಎಡಗೈ ತ್ರುಟಿತ-ಬೀಜಪುರ?ದ ಕೆತ್ತನೆಯಿದೆ. ಕಿರೀಟ, ಕಿವಿ ಓಲೆ, ಕಂಠಹಾರ, ಕೊರಳಹಾರ, ಎದೆಹಾರ, ಕೈಬಳೆ, ಸೊಂಟಬಂಧ ಮತ್ತು ಇಳಿಬಟ್ಟೆ ಧರಿಸಿದಂತೆ ಕೆತ್ತಲಾಗಿದೆ. ಪದ್ಮಾಸನ ಭಂಗಿಯಲ್ಲಿದೆ.

ಗ್ರಾಮ: ಮಿರ್ರ್ಯಾಣ **ಶಿಲ್ಪ:** ಪಾರ್ಶ್ವನಾಥ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಊರ ಪ್ರವೇಶದಲ್ಲಿ

ಪಾರ್ಶ್ವನಾಥನ ಮೂರ್ತಿಶಿಲ್ಪವು ಕಪ್ಪುಶಿಲೆಯಲ್ಲಿದೆ. ಪೀಠದಲ್ಲಿ ಪದ್ಮಾಸನ ಭಂಗಿಯಲ್ಲಿ ಧ್ಯಾನಸ್ಥನಾಗಿದ್ದಾನೆ. ಗುಂಗುರು ಕೂದಲಿನ ಜಟಾ ತಲೆ ಮೇಲಿದೆ. ಹಿಂದೆ ಒಂಬತ್ತು ಹೆಡೆ ನಾಗಶಿಲ್ಪವಿದೆ. ಮೇಲೆ ಮುಕ್ಕೊಡೆ ಜೈನ ಪ್ರಭಾವನ್ನು ತೋರಿಸುತ್ತದೆ. ಈ ಶಿಲ್ಪದ ಇಕ್ಕೆಲಗಳಲ್ಲಿ ಯಕ್ಷ ಧರಣೇಂಧ್ರ ಮತ್ತು ಯಕ್ಷಿ ಪದ್ಮಾವತಿಯ ಶಿಲ್ಪಗಳಿವೆ. ಪ್ರಭಾವಳಿಯ ಸ್ತಂಭದ ಮೇಲೆ ನಿಂತು ಚಾಮರಧಾರಿಗಳು ಚಾಮರ ಬೀಸುತ್ತಿರುವ ಶಿಲ್ಪ ಪ್ರಭಾವಳಿಯಲ್ಲಿ ಲಲಾಟದ ಮೇಲೆ ಮತ್ತು ಸ್ತಂಭದಲ್ಲಿ ಚವ್ವೀಸ್ ತೀರ್ಥಂಕರರ ಬಿಂಬಗಳಿವೆ.

ಗ್ರಾಮ: ಕೇಶವಾರ್(ಗಡಿ) **ಶಿಲ್ಪ:** ಪಾರ್ಶ್ವನಾಥ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಊರ ಮಧ್ಯ (ಪಾರ್ಶ್ವನಾಥ ಬಸದಿ)

ಪದ್ಮಾಸೀನನಾದ ಪಾರ್ಶ್ವನಾಥ ಧ್ಯಾನದಲ್ಲಿ ತೊಡಗಿದಂತಿದೆ. ಗುಂಗುರು ಕೂದಲಿನ ಜಟೆ, ತಲೆ ಹಿಂದೆ ಏಳು ಹೆಡೆಯ ನಾಗಶಿಲ್ಪ ಮತ್ತು ಮೇಲ್ಭಾಗದಲ್ಲಿ ಮುಕ್ಕೊಡೆಗಳು ಇವೆ. ಕಪ್ಪುಶಿಲೆಯ ಈ ಶಿಲ್ಪದ ಪ್ರಭಾವಳಿ ಸರಳವಾಗಿದೆ. ಚಾಮರಧಾರಿಗಳು ಸ್ತಂಭದ ಮೇಲೆ ನಿಂತಿವೆ.

ಗ್ರಾಮ: ಕೇಶಾವರ್ (ಗಡಿ) **ಶಿಲ್ಪ:** ಪಾರ್ಶ್ವನಾಥ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಪಾರ್ಶ್ವನಾಥ ಬಸದಿ (ಊರ ಮಧ್ಯ)

ಗರ್ಭಗುಡಿಯ ಬಾಗಿಲ ಬಳಿ ಸ್ಥಾನಿಕ ಪಾರ್ಶ್ವನಾಥ ಶಿಲ್ಪವಿದೆ. ಏಳು ಹೆಡೆ ಅದರ ಮೇಲೆ ಮುಕ್ಕೊಡೆಯನ್ನು ಕೆತ್ತಲ್ಪಟ್ಟಿದೆ. ಗುಂಗುರು ಕೂದಲಿನ ಜಟೆ ಧರಿಸಿದೆ. ಪಾರ್ಶ್ವನಾಥನ ಹಿಂದೆ ಜೋಡಿ ನಾಗಗಳು ಸುರುಳಿಸುತ್ತಿ ತಲೆ ಮೇಲೆ ಹೆಡೆ ತೆಗೆದು ನಿಂತಿವೆ. ಇದು ಸು. ೫.೮ ಅಡಿ ಉದ್ದ ಎತ್ತರವಾಗಿದೆ.

ಗ್ರಾಮ: ಸುಲೇಪೇಟೆ **ಶಿಲ್ಪ:** ಪಾರ್ಶ್ವನಾಥ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಜೈನ ಬಸದಿ (ಊರ ಮಧ್ಯ)

ಈ ಶಿಲ್ಪದಲ್ಲಿ ಏಳು ಹೆಡೆಯ ನಾಗಶಿಲ್ಪ, ಪ್ರಭಾವಳಿಯಲ್ಲಿ ತೇಜಸ್ಸಿನ ವೃತ್ತಕಾರ ಚಕ್ರ, ಹೆಡೆಯ ಮೇಲೆ ಮುಕ್ಕೊಡೆ ಕೆತ್ತಲ್ಪಟ್ಟಿವೆ. ಪಾರ್ಶ್ವನಾಥ ಸ್ಥಾನಿಕ ಭಂಗಿಯಲ್ಲಿದ್ದು ಹಿಂದೆ ಸುರುಳಿ

ಸುತ್ತಿದ ಹಾವಿನ ಶಿಲ್ಪ ಕೆತ್ತಲ್ಪಟ್ಟಿದೆ. ಸು.೬ ಅಡಿ ಎತ್ತರವಾಗಿದೆ. ಶಿಲ್ಪದಲ್ಲಿ ಗುಂಗುರು ಇಳಿಬಿಟ್ಟ ಕೂದಲು, ತೀರ್ಥಂಕರರ ನಗುಮುಖವಿದೆ.

ಗ್ರಾಮ: ಸುಲೇಪೇಟ   **ಶಿಲ್ಪ:** ವೃಷಭನಾಥ
ಶಿಲೆ: ಕಪ್ಪು ಕಲ್ಲು   **ಕಾಲ:** ಸು.೧೧ನೇ ಶತಮಾನ
ಸ್ಥಿತಿ: ತ್ರುಟಿತ ದೊರೆತ   **ಸ್ಥಳ:** ಜೈನ ಬಸದಿ (ಊರ ಮಧ್ಯ)

ಇಲ್ಲಿ ಮತ್ತೊಂದು ಜೈನ ತೀರ್ಥಂಕರನಾದ ವೃಷಭನಾಥನ ಶಿಲ್ಪವಿದೆ. ಇದು ಸ್ಥಾನಿಕ ಭಂಗಿಯಲ್ಲಿ ಸು. ಆರು ಅಡಿ ಎತ್ತರವಾಗಿದೆ. ಗುಂಗುರು ಕೂದಲು, ಎದೆಯ ಮೇಲೆ ಶ್ರೀವತ್ಸ ಚಿಹ್ನೆ, ತಳಭಾಗದ ಇಕ್ಕೆಲಲ್ಲಿ ಪದ್ಮಾಸನ ಭಂಗಿಯಲ್ಲಿ ಕುಳಿತಿರುವ ಜೈನ ಬಿಂಬಗಳಿವೆ. ಇವು ಈ ಶಿಲ್ಪದ ವೈಶಿಷ್ಟ್ಯತೆಯಾಗಿದೆ. ಮುಕ್ಕೊಡೆ ಶಿಲ್ಪದ ಪ್ರಭಾವಳಿಯಲ್ಲಿದೆ. ಶಿಲ್ಪದ ಭುಜಗಳ ಬಳಿ ಪ್ರಭಾವಳಿಯಲ್ಲಿ (ಇಕ್ಕೆಲಲ್ಲಿ) ಚಾಮರಗಳನ್ನು ಕೆತ್ತಲ್ಪಟ್ಟಿದೆ. ಶಿಲ್ಪದ ಲಲಾಟದ ಮೇಲೆ ಎರಡು ಜೈನ ತೀರ್ಥಂಕರರು ಪದ್ಮಾಸೀನ ಮತ್ತು ಧ್ಯಾನಾವಸ್ಥೆಯಲ್ಲಿರುವಂತೆ ಕೊರೆಯಲ್ಪಟ್ಟಿದೆ.

ಗ್ರಾಮ: ಸುಲೇಪೇಟೆ   **ಶಿಲ್ಪ:** ಪಾರ್ಶ್ವನಾಥ
ಶಿಲೆ: ಕಪ್ಪು ಕಲ್ಲು   **ಕಾಲ:** ಸು.೧೧ನೇ ಶತಮಾನ
ಸ್ಥಿತಿ: ತೃಟಿತ   **ದೊರೆತ ಸ್ಥಳ:** ಜೈನ ಬಸದಿ (ಊರ ಮಧ್ಯ)

ಎರಡು ಸ್ಥಾನಿಕ ಜೈನ ತೀರ್ಥಂಕರರ ಮಧ್ಯದಲ್ಲಿ ಪದ್ಮಾಸೀನ ಮತ್ತು ಧ್ಯಾನಾಸಕ್ತ ಭಂಗಿಯಲ್ಲಿ ಕುಳಿತ ಪಾರ್ಶ್ವನಾಥ ಶಿಲ್ಪವಿದೆ. ಇದು ಕಪ್ಪುಶಿಲೆಯಲ್ಲಿದೆ. ಅತಿ ಹೆಚ್ಚು ಅಲಂಕರಣೆಯಿಂದ ಈ ಶಿಲ್ಪ ಕೂಡಿದೆ. ಎತ್ತರ ಪೀಠದ ಮೇಲೆ ಮೂರ್ತಿಶಿಲ್ಪವಿದೆ. ಮೂರ್ತಿಶಿಲ್ಪ ಗಾಂಧಾರ ಮತ್ತು ಮಥುರಾ ಶೈಲಿಗಳ ಸಮ್ಮಿಳಿತತೆಯನ್ನೊಳಗೊಂಡಿದೆ. ಗುಂಗುರು ಕೂದಲು, ಮೂರು ಪದರದ ಕಂಠಾಭರಣ, ಕರ್ಣಕುಂಡಲ ಮತ್ತು ಕಿವಿಯನ್ನು ಸಂಪೂರ್ಣ ಅಲಂಕರಣೆ ಮಾಡಿದ ಆಭರಣ? ಎದೆಯ ಭಾಗದಲ್ಲಿ ಶ್ರೀವತ್ಸ ಚಿಹ್ನೆ. ಹಿಂಭಾಗದಲ್ಲಿ ಏಳು ಹೆಡೆಯ ನಾಗ ಮತ್ತು ಅದರ ಮೇಲೆ ಮುಕ್ಕೊಡೆ ಇದೆ.

ಸುಲೇಪೇಟೆಯ ಪಾರ್ಶ್ವನಾಥನ ಶಿಲ್ಪ ಒಂದಕ್ಕೊಂದು ಸೇರಿದ ಹುಬ್ಬಿನಿಂದ ಮತ್ತು ನಗುಮುಖದಿಂದ ಕೂಡಿದೆ. ಅರ್ಧತೆರೆದ ಕಣ್ಣುಗಳು? (ನೀಮಲಿಪ್ತ) ತಲೆಹಿಂದೆ ಪ್ರಭಾ ತೇಜಸ್ಸನ್ನು ವೃತ್ತಾಕಾರವಾಗಿ ಕೆತ್ತಿದೆ. ಇಕ್ಕೆಲಗಳಲ್ಲಿ ಚಾಮರಧಾರಿಗಳ ಶಿಲ್ಪವಿದೆ. ಶಿಲ್ಪದಲ್ಲಿ ಮುಕ್ಕೊಡೆಯನ್ನು ಹಿಡಿದು ಅದರ ಮೇಲೆ ಎಡಕ್ಕಿರುವ ವ್ಯಕ್ತಿ ತನ್ನ ಬಲಗಾಲನ್ನು ಮತ್ತು ಬಲಕ್ಕಿರುವ ವ್ಯಕ್ತಿ ಶಿಲ್ಪ ತನ್ನ ಎಡಗಾಲನ್ನು ಇಟ್ಟು ನಿಂತಿರುವ ಶಿಲ್ಪಗಳಿವೆ. ಇವು ಕಿರೀಟಧಾರಿ, ಕಂಠಸರ, ಕಾಲ್ಗೆಜ್ಜೆ, ತೋಳ್ಬಂದಿ, ಕುಚಹಾರ ಧರಿಸಿವೆ.

ಮುಕ್ಕೊಡೆಯ ಈ ಶಿಲ್ಪಗಳ ಮೇಲೆ ಇಬ್ಬರು ಜೈನ ತೀರ್ಥಂಕರರು ಧ್ಯಾನಭಂಗಿಯಲ್ಲಿ ಕುಳಿತಂತೆ ಕೆತ್ತಲ್ಪಟ್ಟಿದೆ. ಈ ಶಿಲ್ಪದ ಲಲಾಟದ ಮೇಲೆ ಕೀರ್ತಿಮುಖ ತೋರಣವಿದೆ. ಇದರಲ್ಲಿ

ಮತ್ತು ಜೈನ ಪಾರ್ಶ್ವನಾಥ ಶಿಲ್ಪದ ಇಕ್ಕೆಲಗಳ ಪ್ರಭಾವಳಿಯಲ್ಲಿ ೨೪ ತೀರ್ಥಂಕರರ ಶಿಲ್ಪಗಳಿವೆ. ಸ್ತಂಭದ ಕೆಳಭಾಗದಲ್ಲಿ ಎರಡು ನಿಂತ ಶಿಲ್ಪಗಳಿವೆ. ಅವು ಪಾರ್ಶ್ವನಾಥ ಮತ್ತು ವೃಷಭನಾಥ ಶಿಲ್ಪಗಳಾಗಿವೆ. ಅವುಗಳ ಪಕ್ಕದಲ್ಲಿ ಅಂಜಲಿ ಹಸ್ತದಲ್ಲಿರುವ ಭಕ್ತರ ಶಿಲ್ಪವಿದೆ. ಧರಣೇಂದ್ರ ಮತ್ತು ಪದ್ಮಾವತಿಯರ ಶಿಲ್ಪಗಳು ಇಲ್ಲಿವೆ.

ಗ್ರಾಮ: ದೇಗಲ್ಮಡಿ **ಶಿಲ್ಪ:** ಪಾರ್ಶ್ವನಾಥ
ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೦ನೇ ಶತಮಾನ
ಸ್ಥಿತಿ: ತೃಟಿತ **ದೊರೆತ ಸ್ಥಳ:** ಜೈನ ದೇವಾಲಯ (ಊರ ಮಧ್ಯ)

ಗ್ರಾನೈಟ್ ಶಿಲೆಯಲ್ಲಿದೆ. ಧ್ಯಾನಾಸಕ್ತನಾಗಿರುವ ಪಾರ್ಶ್ವನಾಥನ ಶಿಲ್ಪ ಪದ್ಮಾಸನ ಭಂಗಿಯಲ್ಲಿದೆ. ಇಕ್ಕೆಲಗಳಲ್ಲಿ ಇಬ್ಬರು ತೀರ್ಥಂಕರರ ನಿಂತ ಶಿಲ್ಪವಿದೆ (ಪ್ರಭಾವಳಿಯಲ್ಲಿ). ಶಿಲ್ಪದ ಲಲಾಟದ ಮೇಲೆ ಮುಕ್ಕೊಡೆ ಮತ್ತು ಇಕ್ಕೆಲಗಳಲ್ಲಿ ಚಾಮರವಿದೆ. ಚಿಕ್ಕ ಜೈನ ಬಿಂಬಗಳಿವೆ. ಸ್ಥಾನಿಕ ಪಾರ್ಶ್ವನಾಥನ ಶಿಲ್ಪವಿದೆ. ಯಕ್ಷ ಯಕ್ಷಿಯರ ಶಿಲ್ಪಗಳಿವೆ.

ಗ್ರಾಮ: ದೇಗಲ್ಮಡಿ **ಶಿಲ್ಪ:** ತೀರ್ಥಂಕರ
ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೦ನೇ ಶತಮಾನ
ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಜೈನ ದೇವಾಲಯ (ಊರ ಮಧ್ಯ)

ಈ ದೇವಾಲಯದಲ್ಲಿ ಹಲವು ತೀರ್ಥಂಕರರ ಶಿಲ್ಪಗಳು ಅಮೃತಶಿಲೆಯಲ್ಲಿವೆ. ಸ್ತಂಭ ಪೀಠದಂತಿರುವ ಎತ್ತರ ಪೀಠದ ಮೇಲೆ ಜೈನ ತೀರ್ಥಂಕರನ ಶಿಲ್ಪ ಬಿಳಿ ಅಮೃತಶಿಲೆಯಲ್ಲಿದೆ. ತಲೆಗೂದಲು ಗುಂಗುರು, ಕಿವಿ ನೀಳವಾಗಿವೆ. ಧ್ಯಾನ ಮಾಡುತ್ತಿರುವ ತೀರ್ಥಂಕರನ ಶಿಲ್ಪ ಪದ್ಮಾಸನದಲ್ಲಿದೆ. ಇಲ್ಲಿಯ ಇನ್ನೊಂದು ಶಿಲ್ಪದ ತಲೆಯ ಹಿಂದೆ ಸೂರ್ಯನ ಪ್ರಭೆಯು ವೃತ್ತಾಕಾರವಾಗಿದೆ. ಪದ್ಮಾಸನ ಭಂಗಿ, ಗುಂಗುರು ಕೂದಲು, ನೀಳ ಕಿವಿಗಳು ಜೈನ ತೀರ್ಥಂಕರನ ವೈಶಿಷ್ಟ್ಯತೆಯಾಗಿದೆ. ಮತ್ತೊಂದು ತೀರ್ಥಂಕರನ ಶಿಲ್ಪ ಪದ್ಮಾಸೀನ ಧ್ಯಾನಭಂಗಿಯಲ್ಲಿದೆ. ಇನ್ನೊಂದು ಶಿಲ್ಪ ತಲೆ ಮೇಲೆ ಮುಕ್ಕೊಡೆ ಗುಂಗುರು ಕೂದಲು, ನೀಳ ಕಿವಿಯನ್ನೊಳಗೊಂಡಿದೆ. ಇಂತಹ ಚಿಕ್ಕ ಚಿಕ್ಕ ಮೂರ್ತಿಶಿಲ್ಪಗಳು ಅಮೃತಶಿಲೆಯಲ್ಲಿ ಕಡೆಯಲ್ಪಟ್ಟಿವೆ. ಈ ಶಿಲ್ಪಗಳೆಲ್ಲ ಗುಂಗುರು ಕೂದಲಿನ ಜಟೆ ಧರಿಸಿವೆ.

ಗ್ರಾಮ: ದೇಗಲ್ಮಡಿ **ಶಿಲ್ಪ:** ವೃಷಭನಾಥ
ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೦ನೇ ಶತಮಾನ
ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಜೈನ ದೇವಾಲಯ (ಊರ ಮಧ್ಯ)

ಅಮೃತಶಿಲೆಯಲ್ಲಿ ಕೆತ್ತಿದಂತಿರುವ ಈ ಶಿಲ್ಪಕ್ಕೆ ಕಪ್ಪು ಬಣ್ಣ ಲೇಪಿಸಿದಂತೆ ತೋರುತ್ತದೆ. ಮುಕ್ಕೊಡೆ ಹೊಂದಿದ ಈ ಶಿಲ್ಪ ಪದ್ಮಾಸನದಲ್ಲಿದೆ. ಧ್ಯಾನಾಸಕ್ತನಾಗಿರುವ ಭಂಗಿಯಲ್ಲಿ ಕೆತ್ತಿದೆ. ಗುಂಗುರು ಕೂದಲು, ನೀಳ ಕಿವಿ, ಪಾದದಡಿಯಲ್ಲಿ ಶಂಖದ ಶಿಲ್ಪವಿದೆ. ಇವು ಈ ಮೂರ್ತಿಯ ವಿಶೇಷತೆಯಾಗಿದೆ.

ಗ್ರಾಮ: ದೇಗಲ್ಮಡಿ **ಶಿಲ್ಪ:** ಜೈನ ಪಾದಗಳು

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೦ನೇ ಶತಮಾನ

ಸ್ಥಿತಿ: ಉತ್ತಮ **ದೊರೆತ ಸ್ಥಳ:** ಜೈನ ದೇವಾಲಯ (ಊರ ಮಧ್ಯ)

ದ್ವಾರದ ಎದುರುಗಡೆ ಕಪ್ಪುಶಿಲೆಯ ಪೀಠದಲ್ಲಿ ಎರಡು ಪಾದಗಳಿವೆ. ಇದರ ಇಕ್ಕೆಲುಗಳಲ್ಲಿ ಶಂಖ ಮತ್ತು ಪದ್ಮಗಳು ಕೆತ್ತಲ್ಪಟ್ಟಿದೆ.

ಗ್ರಾಮ: ದೇಗಲ್ಮಡಿ **ಶಿಲ್ಪ:** ಧರಣೇಂದ್ರ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೦ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಜೈನ ದೇವಾಲಯ (ಊರ ಮಧ್ಯ)

ಸವ್ಯ ಲಲಿತಾಸನದಲ್ಲಿ ಕುಳಿತ ಪಾರ್ಶ್ವನಾಥನ ಯಕ್ಷ ಧರಣೇಂದ್ರನ ಶಿಲ್ಪ ಈ ದೇವಾಲಯದ ಎದುರು ಗೋಡೆಯ ಬಳಿಯಿದೆ. ಚತುರ್ಭುಜಧಾರಿಯ ಈ ಶಿಲ್ಪದ ಹಿಂದಿನ ಕೈಗಳಲ್ಲಿ ಡಮರು ಮತ್ತು ತ್ರಿಶೂಲವಿದೆ. ಮುಂದಿನ ಬಲಗೈ ಅಭಯ ಹಸ್ತದಲ್ಲಿದ್ದು ಎಡಗೈಯಲ್ಲಿ ಬೀಜಪುರವಿದೆ. ಇದು ಕಪ್ಪುಶಿಲೆಯಲ್ಲಿದೆ. ಕೊರಳಹಾರ, ವಕ್ಷಬಂಧ, ಮುಂಗೈ ಕಟ್ಟು, ತೋಳ್ಬಂದಿ, ಕಿರೀಟ, ಕಾಲ್ಗಡಗ, ಯಜ್ಞೋಪವೀತ ಮತ್ತು ಕಟಿವಸ್ತ್ರ ಆಭರಣಗಳನ್ನು ಧರಿಸಿದಂತಿದೆ.

ಗ್ರಾಮ: ನಿಡಗುಂದ **ಶಿಲ್ಪ:** ಪಾರ್ಶ್ವನಾಥ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೮ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಕಾಳಮ್ಮನ ಗುಡಿ (ಊರ ಮಧ್ಯ)

ಕಾಳಮ್ಮನಗುಡಿ ನವರಂಗದಲ್ಲಿರುವ ಪಾರ್ಶ್ವನಾಥ ಪದ್ಮಾಸನದಲ್ಲಿದೆ. ಏಳು ಹೆಡೆಯ ಮೇಲೆ ಮುಕ್ಕೊಡೆ ಇದೆ. ಧ್ಯಾನಾಸಕ್ತನಾಗಿರುವ ಶಿಲ್ಪ ಕಪ್ಪುಶಿಲೆಯಲ್ಲಿದೆ.

ಗ್ರಾಮ: ದೇಗಲ್ಮಡಿ **ಶಿಲ್ಪ:** ಪದ್ಮಾವತಿ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೦ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಜೈನ ದೇವಾಲಯ (ಊರ ಮಧ್ಯ)

ಜೈನ ದೇವಾಲಯದಲ್ಲಿರುವ ಈ ಶಿಲ್ಪ ನುಣುಪಾದ ಕಪ್ಪುಶಿಲೆಯಲ್ಲಿದೆ. ಈಗ ಇದನ್ನು ಮಾತೃದೇವತೆಯಂತೆ ಪೂಜಿಸುತ್ತಾರೆ. ಪದ್ಮಾವತಿ ೨೩ನೇ ತೀರ್ಥಂಕರನಾದ ಪಾರ್ಶ್ವನಾಥನ ಯಕ್ಷಿಣಿಯಾಗಿದ್ದಾಳೆ. ವೈದಿಕ ಧರ್ಮದ ಲಕ್ಷ್ಮಿಯಂತೆ ಜೈನ ಧರ್ಮದಲ್ಲಿ ಪದ್ಮಾವತಿಯ ಸ್ಥಾನವಿದೆ.

ಗ್ರಾಮ: ನಿಡಗುಂದ **ಶಿಲ್ಪ:** ವೃಷಭನಾಥ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೮ನೇ ಶತಮಾನ

ಸ್ಥಿತಿ: ತೃಟಿತ **ದೊರೆತ ಸ್ಥಳ:** ವೀರಭದ್ರೇಶ್ವರ ದೇವಾಲಯ(ಊರ ಮಧ್ಯ)

ಎತ್ತರದ ಪೀಠದ ಮೇಲೆ ಸ್ಥಾನಿಕ ಜೈನ ತೀರ್ಥಂಕರ ಶಿಲ್ಪ ದೇವಾಲಯದ ಎಡಭಾಗಕ್ಕೆ ಇದೆ. ಇದು ಕಪ್ಪುಶಿಲೆಯಲ್ಲಿದೆ. ಈ ಶಿಲ್ಪದ ಹಿಂದೆ ಸೂರ್ಯಪ್ರಭೆ ವೃತ್ತಾಕಾರವಾಗಿದೆ. ಗುಂಗುರು

ಕೂದಲು ಇಳಿಬಿಟ್ಟಿದೆ. ಈ ಶಿಲ್ಪದ ಇಕ್ಕೆಲಲ್ಲಿ ಏಳು ಹೆಡೆಯನ್ನೊಳಗೊಂಡ ಸ್ಥಾನಿಕ ಪಾರ್ಶ್ವನಾಥರ ಶಿಲ್ಪ ಪೀಠದ ಮೇಲೆ ನಿಲ್ಲಿಸಲಾಗಿದೆ. ಪ್ರಭಾವಳಿಯ ಇಕ್ಕೆಲಲ್ಲಿ ಎರಡು ಚಾಮರಗಳನ್ನು ತೋರಿಸಲಾಗಿದೆ. ಲಲಾಟದ ಮೇಲೆ ಜೈನ ಪ್ರಭಾವ ಬೀರುವ ಮುಕ್ಕೊಡೆ ಮತ್ತು ಅದರ ಇಕ್ಕೆಲಲ್ಲಿ ಪೀಠದ ಮೇಲೆ ಪದ್ಮಾಸೀನ ಭಂಗಿಯಲ್ಲಿರುವ ಎರಡು ಜೈನ ತೀರ್ಥಂಕರರ ಶಿಲ್ಪವಿದೆ. ಸು.೪.೩ ಅಡಿ ಎತ್ತರವಾಗಿದೆ.

ಗ್ರಾಮ: ಕೋಡ್ಲಿ **ಶಿಲ್ಪ:** ಪಾರ್ಶ್ವನಾಥ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಬನಶಂಕರಿ ದೇವಾಲಯ(ಅಗಸಿಯ ಬಳಿ)

ಪಾರ್ಶ್ವನಾಥ ಶಿಲ್ಪ, ಮುಕ್ಕೊಡೆಯನ್ನೊಳಗೊಂಡಿದೆ.[೧೦]

ಗ್ರಾಮ: ಚಿಂಚೋಳಿ **ಶಿಲ್ಪ:** ಪಾರ್ಶ್ವನಾಥ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೦ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಊರ ಒಳಗೆ

ಚಿಂಚೋಳಿ ಊರ ಒಳಗೆ ಹೋಗುವ ದಾರಿಯಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಸಮೀಪ ಅಕ್ಕಸಾಲಿಗರ ಅಂಗಡಿಗಳ ಬಳಿ ಒಂದು ಎತ್ತರದ ಜಗತಿ ಇದೆ. ಇಲ್ಲಿ ಪಾರ್ಶ್ವನಾಥನ ಶಿಲ್ಪವಿದೆ. ಜೈನ ತೀರ್ಥಂಕರ ತಲೆಯ ಮೇಲೆ ಮುಕ್ಕೊಡೆ, ಹೆಡೆಯನ್ನೊಳಗೊಂಡ ನಾಗಶಿಲ್ಪವನ್ನುಳ್ಳ ಪಾರ್ಶ್ವನಾಥನ ಶಿಲ್ಪವಿದೆ.

*** ಇತರೆ ಜೈನ ಮೂರ್ತಿಶಿಲ್ಪಗಳು**

ಜೈನ ಚಾಮರಧಾರಿಗಳ ಶಿಲ್ಪಗಳು ಈ ಮೇಲಿನ ಎಲ್ಲ ಜೈನ ತೀರ್ಥಂಕರರ ಚಾಮರಧಾರಿಗಳು ಪುರುಷರೇ ಆಗಿದ್ದು ಅವರು ಹಾಕುತ್ತಿದ್ದ ಆಭರಣ ಹೀಗಿವೆ. ಕೇಶವಾರ್‌ದಲ್ಲಿಯ ಚಾಮರಧಾರಿಗಳು ಸ್ತಂಭದ ಮೇಲೆ ನಿಂತಿವೆ. ಯಜ್ಞೋಪವೀತ, ಆರೋಪ್ಯಮಾಲಾ, ಎದೆಪಟ್ಟಿ, ಕೊರಳಹಾರ, ಕಂಠಹಾರ, ಕಟಿವಸ್ತ್ರ, ಬಾಹುವಲ್ಯ, ಮುಂಗೈ ಪಟ್ಟಿ (ಮಣಿಕಂಠ) ಕಿರೀಟ ಧರಿಸಿರುವಂತಿದೆ.

ಸುಲೇಪೇಟೆಯ ಜೈನ ತೀರ್ಥಂಕರ ಹಿಂದಿರುವ ಚಾಮರಧಾರಿಗಳು ಕಿರೀಟಧಾರಿ, ಕಂಠಾಭರಣ, ಬಾಹುವಲ್ಯ, ಭುಜಬಂದಿ, ಎದೆಹಾರ, ಎದೆಪಟ್ಟಿ, ಯಜ್ಞೋಪವೀತ, ಆರೋಪ್ಯಮಾಲಾ, ಕಟಿವಸ್ತ್ರ ಕುಚಹಾರ, ಹಾಕಿಕೊಂಡಂತೆ ಕೆತ್ತಲ್ಪಟ್ಟಿವೆ. ಗಜ ಸ್ತಂಭದ ಮೇಲೆ ನಿಂತಿವೆ. ಎಡ ಚಾಮರಧಾರಿ ಎಡಗೈಯಲ್ಲಿ ಮತ್ತು ಬಲಚಾಮರಧಾರಿ ಬಲಗೈಯಲ್ಲಿ ಚಾಮರ ಹಿಡಿದಿವೆ. ಜೈನ ತೀರ್ಥಂಕರರು ಶಿಲ್ಪದಲ್ಲಿ ಕೆತ್ತಲ್ಪಟ್ಟಿವೆ. ಮುಗುಳ್ನಗೆಯಿಂದ ಚಾಮರ ಬೀಸುತ್ತಿರುವಂತೆ ಚಾಮರಧಾರಿಗಳ ಶಿಲ್ಪ ಮೂಡಿಬಂದಿವೆ.

೫.೨.೪. ಶಾಕ್ತ ಮೂರ್ತಿಶಿಲ್ಪಗಳು

ಗ್ರಾಮ: ಸಿರನೂರು **ಶಿಲ್ಪ:** ಗಜ ಲಲಾಟ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಮಂದಿರ

ಗಜಗಳೆರಡು ಮಧ್ಯದಲ್ಲಿ ಕುಳಿತ ಎರಡು ಕೈಯಲ್ಲಿ ಕಮಲವಿರುವ ಸೂರ್ಯ? ಶಿಲ್ಪಕ್ಕೆ ಚರಗಿಯಿಂದ ನೀರು ಸುರಿಯುತ್ತಿರುವಂತೆ ಕೆತ್ತಲಾಗಿದೆ.

ಗ್ರಾಮ: ಯಳವಂತಿ(ಕೆ) **ಶಿಲ್ಪ:** ಗಜಲಕ್ಷ್ಮಿ ಲಲಾಟ,

ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೆಯ ಶತಮಾನ,

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಗಜಲಕ್ಷ್ಮಿ ಲಲಾಟವು ಗುಡಿಯ ಭಿತ್ತಿಭಾಗದಲ್ಲಿ ಹಾಕಿ ಕಟ್ಟಲಾಗಿದೆ. ಬೃಹತ್ತಾದ ಲಲಾಟ ಇಲ್ಲೊಂದು ಶೈವ ದೇವಾಲಯಕ್ಕೆ ಕುರುಹಾಗಿದೆ.

ಗ್ರಾಮ: ಯಳವಂತಿ(ಕೆ) **ಶಿಲ್ಪ:** ಶಂಕರಿ?

ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಇದೇ ಗುಡಿಯಲ್ಲಿ ಶಂಕರಿಯ ಶಿಲ್ಪವಿದ್ದು ಹಿಂದಿನ ಕೈಗಳಲ್ಲಿ ಡಮರು ಮತ್ತು ಶಂಖ ಹಿಡಿದಿದೆ. ಮುಂದಿನ ಕೈಗಳಲ್ಲಿ ಖಡ್ಗ ಮತ್ತು ಕಪೋತ ಹಿಡಿದಂತೆ ಪದ್ಮಾಸನ ಭಂಗಿಯಲ್ಲಿ ಕೆತ್ತಲಾಗಿದೆ.

ಗ್ರಾಮ: ಖಣದಾಳ **ಶಿಲ್ಪ:** ಮಹಿಷಾಸುರ ಮರ್ದಿನಿ

ಶಿಲೆ: ಕಪ್ಪುಕಲ್ಲು **ಕಾಲ:** ಸು.೮ನೆಯ ಶತಮಾನ

ಸ್ಥಿತಿ: ಉತ್ತಮ **ದೊರೆತ ಸ್ಥಳ:** ಹನುಮಾನ್ ಗುಡಿ

ಮಹಿಷಾಸುರನನ್ನು ಎರಡು ಮುಂದಿನ ಕೈಗಳಲ್ಲಿನ ತ್ರಿಶೂಲದಿಂದ ಸಂಹಾರ ಮಾಡುತ್ತಿರುವ ಕೆತ್ತನೆಯಿದೆ. ಸಿಂಹ ಹಿಂದಿನಿಂದ ಮಹಿಷಾಸುರನನ್ನು ನೋಡುತ್ತಿರುವಂತೆ ಕೆತ್ತಲಾಗಿದೆ. ಅಷ್ಟಭುಜಾಧಾರಿ ಮಹಿಷಾಸುರ ಮರ್ದಿನಿಯ ಎರಡನೆಯ ಬಲಗೈ ಸೂಚಿ? ಎಡಗೈ ಶಂಖ ಹಸ್ತವಾಗಿವೆ. ಮೂರನೆಯ ಬಲಗೈಯಲ್ಲಿ ಚಕ್ರ, ಎಡಗೈ ಡಮರುವಿದೆ. ಹಿಂದಿನ ನಾಲ್ಕನೆಯ ಬಲಗೈ? ಎಡಗೈ ಚೂರಿಯಿಂದ ಹಿಂದಿರುವ ರಾಕ್ಷಸನಿಗೆ ಇರಿಯುತ್ತಿದೆ. ಕಿರೀಟ, ಕಿವಿಓಲೆ, ಕೈಬಳೆ, ಬಾಹುವಲ್ಯ, ಕೊರಳಾಭರಣ, ಸೊಂಟಪಟ್ಟಿ, ಕುಚಹಾರ, ಇಳಿವಸ್ತ್ರ, ಕಾಲ್ಗಡಗ, ಪೈಜಾಮವನ್ನು ಧರಿಸಿದಂತೆ ಕೆತ್ತಲಾಗಿದೆ.

ಗ್ರಾಮ: ಇಟಗಾ(ಬಿ) **ಶಿಲ್ಪ:** ಮಹಿಷಾಸುರ ಮರ್ದಿನಿ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಈಶ್ವರ ಗುಡಿ

ಮಹಿಷಾಸುರ ಮರ್ದಿನಿ ಶಿಲ್ಪವು ಮಹಿಷಾಸುರನನ್ನು ವಧೆ ಮಾಡುವ ಕೆತ್ತನೆ ಫಲಕದಲ್ಲಿ ಮೂಡಿಬಂದಿದೆ ಮತ್ತು ಫಲಕ ಭಿತ್ತಿಯಲ್ಲಿದೆ. ಚತುರ್ಬಾಹುವಾದ ಮಹಿಷಾಸುರ ಮರ್ದಿನಿ ಶಿಲ್ಪದ ಹಿಂದಿನ ಕೈಗಳು ಅಸ್ಪಷ್ಟವಾಗಿವೆ. ಮುಂದಿನ ಕೈಗಳು ತ್ರಿಶೂಲ ಹಿಡಿದು ಮಹೀಷನನ್ನು ವಧಿಸುವ ಕೆತ್ತನೆ ಮಾಡಲಾಗಿದೆ. ಕಿರೀಟ, ಕೈಬಳೆ, ಕೊರಳಿನಾಭರಣ, ಸೊಂಟಪಟ್ಟಿಕೆ, ಕುಚಹಾರ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಗ್ರಾಮ: ಬೆಳಗುಂಪಾ(ಕೆ) **ಶಿಲ್ಪ:** ಭೈರವಿ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೯ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಶಂಕರಲಿಂಗ ಗುಡಿ

ಶಿರಭಾಗ ತ್ರುಟಿತವಾಗಿ ಎದೆಯಿಂದ ಕೆಳಭಾಗ ಮಾತ್ರ ಉಳಿದಿರುವ ಭೈರವಿ ಶಿಲ್ಪವು ಒಳಪ್ರಾಂಗಣದಲ್ಲಿದೆ. ಮುಂದಿನ ಕೈಗಳಲ್ಲಿ ಚೂರಿ ಮತ್ತು ರುಂಡವಿದೆ. ರುಂಡವನ್ನು ನಾಯಿ ನೆಕ್ಕುತ್ತಿದೆ. ಇಕ್ಕೆಲಗಳಲ್ಲಿ ರಾಕ್ಷಸರು ಕುಣಿಯುವ ಕೆತ್ತನೆಯಿದೆ. ಕೈಬಳೆ, ಬಾಹುವಲ್ಯ, ಎದೆಯಾಭರಣ, ಯಜ್ಞೋಪವೀತ, ಸೊಂಟಪಟ್ಟಿ, ಕುಚಹಾರ, ತೊಡೆಯ ಭಾಗದಲ್ಲಿ ಸರ್ಪಕಟ್ಟಿದೆ ಮತ್ತು ಕಾಲ್ಗಡಗ, ಪೈಜಾಮ ಧರಿಸಿದೆ.

ಗ್ರಾಮ: ಕಡಣಿ(ಕಣ್ಣಿ) **ಶಿಲ್ಪ:** ಮಹಿಷಾಸುರ ಮರ್ದಿನಿ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಮಂದಿರ

ಹನುಮಾನ ಮಂದಿರದ ಎದುರಿನ ಪ್ರಾಂಗಣದಲ್ಲಿ ಮಹಿಷಾಸುರ ಮರ್ದಿನಿ ಶಿಲ್ಪವಿದೆ. ಅಷ್ಠ ಬಾಹುವಿರುವ ಶಿಲ್ಪ ಮಹಿಷನನ್ನು ತ್ರಿಶೂಲದಿಂದ ವಧಿಸುವ ಕೆತ್ತನೆಯಿದೆ. ಹಿಂದಿನ ಕೈಗಳಲ್ಲಿರುವ ಆಯುಧಗಳು ಅಸ್ಪಷ್ಟವಾಗಿವೆ. ಕಾಲ್ಗಡಗ, ಕುಚಹಾರ. ಕಿವಿಓಲೆಯ ಕೆತ್ತನೆಯಿದೆ.

ಗ್ರಾಮ: ಜೀವಣಗಿ **ಶಿಲ್ಪ:** ಮಹಿಷಾಸುರ ಮರ್ದಿನಿ

ಶಿಲೆ: ಕಪ್ಪುಕಲ್ಲು **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ತೃಟಿತ **ದೊರೆತ ಸ್ಥಳ:** ಬಿಬ್ಬಲಿಂಗೇಶ್ವರ ಗುಡಿ

ಅಷ್ಟಭುಜಧಾರಿ ಮಹಿಷಾಸುರ ಮರ್ದಿನಿ ಶಿಲ್ಪವು ಗುಡಿಯ ಅಧಿಷ್ಠಾನ ಭಾಗದಲ್ಲಿದೆ. ಮುಂದಿನ ಬಲಗೈಯಿಂದ ಮಹಿಷಾಸುರನನ್ನು ತ್ರಿಶೂಲದಿಂದ ಇರಿಯುತ್ತಿರುವುದು, ಎಡಗೈಯಲ್ಲಿ ಚೂರಿಯನ್ನು ರಾಕ್ಷಸನ ಜುಟ್ಟು ಹಿಡಿದಂತಿದೆ. ಎರಡನೆಯ ಕೈಗಳಲ್ಲಿ ಬಲಗೈ ಖಡ್ಗ, ಎಡಗೈಯಲ್ಲಿ ಚೂರಿಯಿದೆ. ಮೂರನೆಯ ಕೈಗಳಲ್ಲಿ ಅಂಕುಶ ಮತ್ತು ಚಂದ್ರಾಕಾರದ ಆಯುಧ?ಗಳಿವೆ. ನಾಲ್ಕನೆಯ

ಕೈಗಳು ನಾಟ್ಯಭಂಗಿಯಲ್ಲಿ ಆಯುಧಧಾರಿಯಾಗಿವೆ. ಹಿಂದೆ ಸಿಂಹ ನಿಂತಿದೆ. ಕಿರೀಟ, ಕಿವಿಓಲೆ, ಕೈಬಳೆ, ಬಾಹುವಲ್ಯ, ತೋಳ್ಬಂದಿ, ಕೈಬಳೆ, ಕೊರಳಾಭರಣ, ಎದೆಯಾಭರಣ, ಸೊಂಟಬಂಧ, ಕುಚಹಾರ, ಕಾಲ್ಗಡಗ ಧರಿಸಿದೆ.

ಗ್ರಾಮ: ಕಡಣಿ(ಕಣ್ಣಿ) **ಶಿಲ್ಪ:** ಗಜಲಕ್ಷ್ಮಿ ಲಲಾಟ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೆಯ ಶತಮಾನ,

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಮಂದಿರ

ಅರಳಿಮರದ ಕೆಳಗೆ ಗಜಲಕ್ಷ್ಮಿ ಲಲಾಟವು ಬೃಹದಾಕಾರವಾಗಿದೆ. ಗಜಗಳೆರಡು ದುಂಡನೆಯ ಚರಗಿಯಿಂದ ನೀರನ್ನು ಎರಡು ಕೈಗಳಲ್ಲಿ ಕಮಲ ಹಿಡಿದ ಲಕ್ಷ್ಮಿ ಪದ್ಮಾಸನದಲ್ಲಿದೆ. ಕಿರೀಟಧಾರಿ, ಕಿವಿಓಲೆ, ತಲೆಹಿಂದೆ ಪ್ರಭಾವಳಿ, ಕೊರಳಿಗೆ ಹಾರ, ಸೊಂಟಕ್ಕೆ ಬಟ್ಟೆ ಕಟ್ಟಿಕೊಂಡಂತೆ ಕೆತ್ತಲಾಗಿದೆ.

ಗ್ರಾಮ: ಮೇಳಕುಂದಾ(ಕೆ), **ಶಿಲ್ಪ:** ಗಜ ಲಲಾಟ,

ಶಿಲೆ: ಕಪ್ಪುಶಿಲೆ **ಕಾಲ:** ಸು.೧೦ನೆಯ ಶತಮಾನ,

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಮಂದಿರ

ಗಜಲಕ್ಷ್ಮಿ ಲಲಾಟದಲ್ಲಿ ಲಕ್ಷ್ಮಿ ಎರಡು ಕೈಯಲ್ಲಿ ಕಮಲ ಹಿಡಿದಂತೆ ಕೆತ್ತಲಾಗಿದೆ. ಇಕ್ಕೆಲಗಳಲ್ಲಿ ಗಜಶಿಲ್ಪಗಳಿವೆ.

ಗ್ರಾಮ: ಮಿಣಜಗಿ **ಶಿಲ್ಪ:** ಗಜ ಲಲಾಟ

ಶಿಲೆ: ಕಪ್ಪುಶಿಲೆ **ಕಾಲ:** ಸು.೯ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಊರಿನ ಮಧ್ಯೆ

ಗಜಲಲಾಟ ಬೃಹತ್ತಾಗಿರುವದು. ಬೃಹತ್ತ ಮಂದಿರವು ಇಲ್ಲಿ ನಿರ್ಮಿತವಿತ್ತು ಎನ್ನುವುದಕ್ಕೆ ಇದೊಂದು ಕುರುಹಾಗಿದೆ. ಎರಡು ಗಜಗಳ ಮಧ್ಯೆ ಲಕ್ಷ್ಮಿ ಉಪಸ್ಥಿತಳಾಗಿದ್ದಾಳೆ. ಕಮಲ ಹಸ್ತೆ, ಕಿರೀಟಧಾರಿಯಾಗಿದ್ದಾಳೆ.

ಗ್ರಾಮ: ಪಸ್ತಾಪೂರ **ಶಿಲ್ಪ:** ಭೈರವಿ

ಶಿಲೆ: ಕಪ್ಪುಶಿಲೆ, **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತ್ರುಟಿತ **ಸ್ಥಳ:** ರಾಮಲಿಂಗೇಶ್ವರ

ಗುಡಿಯ ಒಳಭಿತ್ತಿ ದೇವಕೋಷ್ಠದಲ್ಲಿ ಭೈರವಿ ಶಿಲ್ಪವಿದೆ. ಷಡ್ಭುಜಧಾರಿ ಭೈರವಿಯ ಶಿಲ್ಪದ ಬಲಕ್ಕೆ ಪ್ರೇತವೊಂದು ಕುಣಿಯುತ್ತಿದೆ. ಈ ಶಿಲ್ಪ ನಾಟ್ಯ ಭೈರವಿ ಶಿಲ್ಪವಾಗಿದ್ದು. ಹಿಂದಿನ ಕೈಗಳಲ್ಲಿ ಖಡ್ಗ, ಚಕ್ರದಂಡ ಮತ್ತು ಮಧ್ಯದ ಬಲಗೈಯಲ್ಲಿ ಡಮರು ಇನ್ನೊಂದು ಎಡಗೈ ಪ್ರಸ್ತುತ ತ್ರುಟಿತವಾಗಿದೆ. ಮುಂದಿನ ಎಡಗೈಯಲ್ಲಿ ರುಂಡವಿದ್ದು ಅದನ್ನು ನಾಯಿ ನೆಕ್ಕುತ್ತಿದೆ. ಎತ್ತರದ ಕಿರೀಟ, ಕಾಲ್ಗಡಗ, ಪೈಜಾಮ, ಮುಂಗೈಪಟ್ಟಿ, ತೋಳ್ಬಂದಿ, ಸೊಂಟಕ್ಕೆ ಸರ್ಪಬಂಧ ಧರಿಸಿದೆ.

ಗ್ರಾಮ: ರುಮ್ಮನಗೂಡು ಶಿಲ್ಪ: ಮಹಿಷಾಸುರ ಮರ್ದಿನಿ

ಶಿಲೆ: ಕಪ್ಪುಶಿಲೆ ಕಾಲ: ಸು.೧೧ನೇ ಶತಮಾನ

ಸ್ಥಿತಿ: ತ್ರುಟಿತ ಸ್ಥಳ: ಶಂಕರನಾರಾಯಣ ದೇವಾಲಯ

ಶಂಕರನಾರಾಯಣ ದೇವಾಲಯದ ಎತ್ತರದ ಜಗತಿಯ ಮೇಲೆ ಈ ಶಿಲ್ಪವಿದೆ. ಅಷ್ಟಭುಜಧಾರಿಣಿ ಮುಂದಿನ ಎರಡು ಕೈಯಲ್ಲಿ ತ್ರಿಶೂಲ ಹಿಡಿದು ಎಡಗಾಲಿನಿಂದ ಮಹಿಷನ ತಲೆ ಮೇಲಿಟ್ಟು ಕುತ್ತಿಗೆಗೆ ತ್ರಿಶೂಲದಿಂದ ಚುಚ್ಚುತ್ತಿರುವಂತೆ ಕೆತ್ತಲ್ಪಟ್ಟಿದೆ. ಮುಕುಟ ಕಿರೀಟ, ತೋಳ್ಬಂದಿ, ಕೊರಳಹಾರ, ಮಣಿಕಂಠ, ಉದರಬಂದ, ಕುಚಹಾರ, ಯಜ್ಞೋಪವೀತ ಧರಿಸಿದೆ.

ಗ್ರಾಮ: ರುಮ್ಮನಗೂಡು ಶಿಲ್ಪ: ವೈಷ್ಣವಿ

ಶಿಲೆ: ಕಪ್ಪುಶಿಲೆ ಕಾಲ: ಸು.೧೧ನೇ ಶತಮಾನ

ಸ್ಥಿತಿ: ತೃಟಿತ ಸ್ಥಳ: ಶಂಕರನಾರಾಯಣ ದೇವಾಲಯ

ಹೊರ ಜಗತಿಯ ದೇವಕೋಷ್ಠದಲ್ಲಿ ವೈಷ್ಣವಿ ಶಿಲ್ಪವಿದೆ. ಮೂರ್ತಿಶಿಲ್ಪದ ಇಕ್ಕೆಲಲ್ಲಿ ಚಾಮರಧಾರಿಯರ ಶಿಲ್ಪಗಳಿವೆ. ಚತುರ್ಭುಜಧಾರಿಣಿಯು ಗದೆ, ಚಕ್ರವನ್ನು ಹಿಂದಿನ ಕೈಗಳಲ್ಲಿ ಹಿಡಿದಿದ್ದಾಳೆ. ಆರೋಪ್ಯಮಾಲಾವನ್ನು ಮುಂದಿನ ಎರಡು ಕೈಗಳಿಗೆ ಸುತ್ತಿಕೊಂಡು ನಿಂತಿರುವಳು. ಉದರಬಂಧ, ಸೊಂಟಪಟ್ಟಿ, ಸ್ತನಹಾರ, ಮುಕುಟಧಾರಿ, ಕುಚಹಾರ ಧರಿಸಿದೆ. ಇಕ್ಕೆಲಲ್ಲಿ ಚಾಮಧಾರಿಗಳ ಚಿಕ್ಕದಾದ ಶಿಲ್ಪಗಳಿವೆ.

ಗ್ರಾಮ: ಭೋಗಲಿಂಗದ ಹಳ್ಳಿ ಶಿಲ್ಪ: ಶಕ್ತಿ ದೇವತೆ

ಶಿಲೆ: ಕಪ್ಪುಶಿಲೆ ಕಾಲ: ಸು.೧೦ನೇ ಶತಮಾನ

ಸ್ಥಿತಿ: ತೃಟಿತ ಸ್ಥಳ: ಭೋಗಲಿಂಗೇಶ್ವರ ಗುಡ್ಡ

ಸವ್ಯ ಲಲಿತಾಸನದ ಈ ಮಾತೃಕೆ ಶಿಲ್ಪ ಚತುರ್ಭಜಧಾರಿಯಾಗಿದೆ. ಎಡಗೈಯಲ್ಲಿ ಬೀಜಪುರ, ಬಲಗೈಯಲ್ಲಿ ಖಡ್ಗ, ಹಿಂದಿನ ಕೈಯಲ್ಲಿ ತ್ರಿಶೂಲ ಮತ್ತು ಡಮರು ಹಿಡಿದಿದೆ. ಕುಂತಲ ಕಿರೀಟ, ಕೊರಳಹಾರ, ಮಣಿಕಂಠ, ಕೈಬಳೆ, ತೋಳ್ಬಂದಿ, ಕಟಿವಸ್ತ್ರ, ಕಾಲ್ಗಡಗ ಮೂರ್ತಿಶಿಲ್ಪದಲ್ಲಿದೆ. ಶಿಲ್ಪದ ಬಲಕ್ಕೆ ತಬಲ ವಾದ್ಯ ಬಾರಿಸುತ್ತಿರುವ ಶಿಲ್ಪ ಇದೆ. ಪೀಠದ ಕೆಳಗೆ ಸಿಂಹ ನಿಂತಿದೆ.

ಗ್ರಾಮ: ದೇಗಲ್ಮಡಿ ಶಿಲ್ಪ: ನವಮಾತೃಕೆಯರು

ಶಿಲೆ: ಕಪ್ಪುಶಿಲೆ ಕಾಲ: ಸು.೧೧ನೇ ಶತಮಾನ

ಸ್ಥಿತಿ: ತ್ರುಟಿತ ಸ್ಥಳ: ಊರ ಪ್ರವೇಶದಲ್ಲಿ

ಊರ ಪ್ರವೇಶಕ್ಕಿರುವ ಗುಡಿಯೊಂದರಲ್ಲಿ ನವಮಾತೃಕೆಯರ ಶಿಲ್ಪ ಪುರಾತನದ್ದಾಗಿದೆ. ಬಾಗಿಲದ ಇಕ್ಕೆಲಗಳಲ್ಲಿ ಐದು ಮತ್ತು ನಾಲ್ಕು ಒಟ್ಟು ಒಂಬತ್ತು ಮಾತೃಕೆಯರ ಶಿಲ್ಪ ಗೋಡೆಯೊಳಗೆ ಇವೆ. ಆರಂಭದಲ್ಲಿ ಸುಬ್ರಹ್ಮಣ್ಯ, ಕೊನೆಗೆ ಗಣೇಶ ಮತ್ತು ಮಧ್ಯದಲ್ಲಿ ಸಪ್ತಮಾತೃಕೆಯರ ಶಿಲ್ಪಗಳಿವೆ. ಚತುರ್ಭುಜಧಾರಿಯರು ಅಭಯಹಸ್ತ ಮತ್ತು ಆಯುಧ ಹಿಡಿದಿವೆ. ವಾಹನಗಳು ಅಸ್ಪಷ್ಟವಾಗಿವೆ.

ಗ್ರಾಮ: ಚೇಂಗಟಾ | ಶಿಲ್ಪ: ಭೈರವಿ
ಶಿಲೆ: ಕಪ್ಪುಶಿಲೆ | ಕಾಲ: ಸು.೧೧ನೇ ಶತಮಾನ
ಸ್ಥಿತಿ: ತ್ರುಟಿತ | ಸ್ಥಳ: ಸೋಮೇಶ್ವರ ದೇವಾಲಯ

ನಾಟ್ಯ ಭೈರವಿಯ ಶಿಲ್ಪ ಸೋಮೇಶ್ವರ ದೇವಾಲಯದ ಭಿತ್ತಿಯ ದೇವಕೋಷ್ಠದಲ್ಲಿದೆ. ಈ ಭೈರವಿಯ ಇಕ್ಕೆಲಲ್ಲಿ ಪ್ರೇತ ಶಿಲ್ಪಗಳಿವೆ. ನಾಟ್ಯ ಮಾಡುತ್ತಾ ಬಲಕ್ಕಿರುವ ಪ್ರೇತ ತನ್ನ ಎಡಗೈಯ ಚೂರಿಯಿಂದ ಭೈರವಿಯ ಬಲಗೈಯ ಚೂರಿಯನ್ನು ತಡೆಹಿಡಿದಿದೆ. ಇದು ಬಲಸೊಂಟಕ್ಕೆ ಖಡ್ಗವಿಟ್ಟುಕೊಂಡಿದೆ. ಎಡಕ್ಕಿರುವ ಪ್ರೇತ ತನ್ನ ಚೂರಿಯಿಂದ ನಾಯಿಯ ಹಿಂಭಾಗಕ್ಕೆ ಚುಚ್ಚುತ್ತಿದೆ. ಆ ನಾಯಿ ಆರ್ತಮುಖದಿಂದ ಭೈರವಿ ಕಡೆ ತಲೆ ಮಾಡಿದೆ.

ಭೈರವಿ ತನ್ನ ಹಿಂದಿನ ಎಡಗೈ ಕಿರಿಬೆರಳು ಬಾಯಿಯಲ್ಲಿಟ್ಟಂತೆ ಮತ್ತು ನಾಚಿದ ನಗು ಮುಖವಿದೆ. ಹಿಂದಿನ ಕೈಗಳಲ್ಲಿ ಡಮರು ಮತ್ತು ಚಕ್ರ ಹಿಡಿದಿರುವಳು. ಮುಂದಿನ ಬಲಗೈಯ ಚಾಕುವಿನಿಂದ ಪ್ರೇತಕ್ಕೆ ಇರಿಯಲು ಮುಂಚಾಚಿದಂತಿದೆ. ಎಡಗೈಯಲ್ಲಿ ರುಂಡ ಹಿಡಿದುಕೊಂಡಿದ್ದಾಳೆ ಮತ್ತು ಆರೋಪ್ಯಮಾಲಾವನ್ನು ತನ್ನ ಎಡಗೈಗೆ ಸುತ್ತಿಕೊಂಡಿದೆ. ಕಾಲ್ಗಡಗ, ಕುಚಹಾರ, ಯಜ್ಞೋಪವೀತ, ಮಣಿಕಂಠ ಕೊರಳಹಾರ, ಮುಕುಟ ಕಿರೀಟ, ತೋಳ್ಬಂದಿ ಧರಿಸಿದೆ.

ಗ್ರಾಮ: ಮೋಘಾ | ಶಿಲ್ಪ: ಮಹಿಷ ಮರ್ದಿನಿ
ಶಿಲೆ: ಕಪ್ಪುಶಿಲೆ | ಕಾಲ: ಸು.೧೧ನೇ ಶತಮಾನ
ಸ್ಥಿತಿ: ತ್ರುಟಿತ | ಸ್ಥಳ: ರಾಮಲಿಂಗೇಶ್ವರ ಗುಡಿ(ಊರ ಮಧ್ಯೆ)

ರಾಮಲಿಂಗೇಶ್ವರ ಗುಡಿಯ ದೇವಕೋಷ್ಠದಲ್ಲಿ ಅಷ್ಟಭುಜಧಾರಿ ಮಹಿಷಮರ್ದಿನಿ ಶಿಲ್ಪವಿದೆ. ಮುಂದಿನ ಎರಡು ಕೈಗಳಲ್ಲಿ ತ್ರಿಶೂಲ ಹಿಡಿದು ಅದರಿಂದ ಮಹಿಷನ ಕುತ್ತಿಗೆಯನ್ನು ತಿವಿಯುತ್ತಿದೆ. ಬಲಗೈ ಭಾಗಗಳು ಪ್ರಸ್ತುತ ತ್ರುಟಿತವಾಗಿವೆ. ಒಂದು ಕೈ ವರದ ಮುದ್ರೆಯಲ್ಲಿದೆ. ಬಲಕ್ಕೆ ಸಿಂಹ ಕುಳಿತ ಶಿಲ್ಪವಿದೆ. ಎಡಗೈಗಳಲ್ಲಿ ರುಂಡ, ಬಿಲ್ಲು ಮತ್ತು ಶಂಖ? ಹಿಡಿದಂತೆ ಕೆತ್ತಲ್ಪಟ್ಟಿದೆ. ಕೀರಿಟ ಧಾರಿಣಿ, ಕೊರಳಹಾರ, ಕಾಲ್ಗಡಗ, ತೋಳ್ಬಂದಿ, ಬಳೆ, ಕಂಕಣ, ಕುಚಹಾರ, ಸೊಂಟಪಟ್ಟಿ ಧರಿಸಿದೆ. ತಲೆಭಾಗದ ಪ್ರಭಾವಳಿಯಲ್ಲಿ ವೃತ್ತಾಕಾರ ಪ್ರಭೆ ಇದೆ.

ಗ್ರಾಮ: ಮೋಘಾ | ಶಿಲ್ಪ: ನವಮಾತೃಕೆಯರು
ಶಿಲೆ: ಕಪ್ಪುಶಿಲೆ | ಕಾಲ: ಸು.೧೧ನೇ ಶತಮಾನ
ಸ್ಥಿತಿ: ತ್ರುಟಿತ | ಸ್ಥಳ: ರಾಮಲಿಂಗೇಶ್ವರ ಗುಡಿ

ಗುಡಿಯ ದೇವಕೋಷ್ಠದಲ್ಲಿ ನವಮಾತೃಕೆಯರ ಶಿಲ್ಪಗಳಿವೆ. ಆರಂಭದಲ್ಲಿ ಸ್ಕಂದ ಮತ್ತು ಕೊನೆಯಲ್ಲಿ ಗಣಪತಿ ಶಿಲ್ಪವಿದೆ. ಮಧ್ಯದಲ್ಲಿ ಸಪ್ತಮಾತೃಕೆಯರ ಶಿಲ್ಪಗಳಿವೆ. ಎಡಗಾಲು ಮಡಚಿ ಅದರ ಮೇಲಿಂದ ಬಲಗಾಲು ಇಳಿಬಿಟ್ಟು ಕುಳಿತಿದೆ. ಸ್ಕಂದನು ಉದ್ದನೆಯ ನವಿಲು ಗರಿಯ ದಂಡ ಹಿಡಿದಿರುವ? ಉಳಿದ ಎಂಟು ಮಾತೃಕೆಯರ ಬಲಗೈ ಅಭಯಹಸ್ತ, ಎಡಗೈಯಲ್ಲಿ

ಬೀಜಪುರ? ಮೋದಕವಿದ್ದಂತೆ ಕೆತ್ತಲ್ಪಟ್ಟಿದೆ. ಈ ನವಮಾತೃಕೆಯರು ಚತುರ್ಭುಜ ಹೊಂದಿದ್ದು ವಾಹನಗಳ ಸಮೇತ ಈ ಶಿಲ್ಪಗಳಿವೆ.

ಗ್ರಾಮ: ಗೊಟ್ಟಂಗೊಟ **ಶಿಲ್ಪ:** ಮಹಿಷಾಸುರ ಮರ್ದಿನಿ
ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೇ ಶತಮಾನ
ಸ್ಥಿತಿ: ತೃಟಿತ. **ಸ್ಥಳ:** ಗೊಟ್ಟಂಗೊಟಿ ಗುಡ್ಡ

ಗುಡ್ಡದೊಳಗಿನ ಒಂದು ಚಿಕ್ಕ ಗುಡಿಯ ಬಳಿ ದ್ವಾರದ ಬಲಕ್ಕೆ ಶಿಲ್ಪವಿದೆ. ಪ್ರಸ್ತುತ ತ್ರುಟಿತವಾಗಿದೆ. ಎಡಗಾಲು ಮಹಿಷನ ಮೇಲಿಟ್ಟು ಮುಂದಿನ ಎರಡು ಕೈಗಳಲ್ಲಿ ತ್ರಿಶೂಲ ಹಿಡಿದು ಇರಿಯುತ್ತಿದೆ. ಚತುರ್ಭುಜಾಂಗಿನಿ ಶಿಲ್ಪದಲ್ಲಿ ಹಿಂದಿನ ಕೈಗಳಲ್ಲಿ ಪದ್ಮ ಮತ್ತು ಖಡ್ಗ ಹಿಡಿದಿದೆ. ಕಿರೀಟ ಮುಕುಟ, ಕಂಠಹಾರ, ಕೊರಳಹಾರ, ತೋಳ್ಬಂದಿ, ಸೊಂಟಪಟ್ಟಿ ಧರಿಸಿದೆ. ಈ ಮೂರ್ತಿಯ ಬಲಕ್ಕೆ ಸಿಂಹದ ಶಿಲ್ಪವಿದೆ.

ಗ್ರಾಮ: ಗೊಟ್ಟಂಗೊಟ್ಟಿ **ಶಿಲ್ಪ:** ಶಾಕ್ತ ದೇವತೆ?
ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೇ ಶತಮಾನ
ಸ್ಥಿತಿ: ತ್ರುಟಿತ **ಸ್ಥಳ:** ಗೊಟ್ಟಂಗೊಟ್ಟಿ ಗುಡ್ಡ

ಸವ್ಯಲಲಿತಾಸನದಲ್ಲಿರುವ ಮಾತೃಕೆಯ ಶಿಲ್ಪವಿದೆ. ಚತುರ್ಭುಜಧಾರಿಣಿ ಬಲಗೈಯಲ್ಲಿ ಖಡ್ಗ, ಪದ್ಮ? ಎಡಗೈಯಲ್ಲಿ ತ್ರಿಶೂಲ ಮತ್ತು ಭರ್ಚಿ ಹಿಡಿದಿದೆ. ಕಿರೀಟಧಾರಿಣಿ ಈ ಮೂರ್ತಿಯ ಇಕ್ಕೆಲಲ್ಲಿ ಎರಡು ಉದ್ದನೆ ಕುತ್ತಿಗೆಯ ರುಂಡಗಳಿವೆ. ಇವುಗಳು ಮುಡಿ ಕಟ್ಟಿವೆ.

ಗ್ರಾಮ: ನಿಡಗುಂದ **ಶಿಲ್ಪ:** ಕಾಳಿಕಾ ದೇವಿ
ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೇ ಶತಮಾನ
ಸ್ಥಿತಿ: ತ್ರುಟಿತ **ಸ್ಥಳ:** ಕಾಳಿಕಾ ಗುಡಿ

ಕಾಳಿಕಾದೇವಿ ಮೂರ್ತಿ ಕಪ್ಪು ನುಣುಪಾದ ಶಿಲೆಯಲ್ಲಿದೆ. ಮುಕುಟ ಕಿರೀಟಧಾರಿಣಿ, ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಬಳೆಗಳನ್ನು ಮುಂದಿನ ಕೈಗಳಲ್ಲಿ ಹಿಡಿದಿವೆ. ಹಿಂದಿನ ಬಲಗೈ ಅಭಯಹಸ್ತ, ಎಡಗೈಯಲ್ಲಿ ಲಿಂಗವಿದೆ.

ಗ್ರಾಮ: ಕೋಡ್ಲಿ **ಶಿಲ್ಪ:** ಮಹಿಷಾಸುರ ಮರ್ದಿನಿ
ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೇ ಶತಮಾನ
ಸ್ಥಿತಿ: ತ್ರುಟಿತ **ಸ್ಥಳ:** ಮಲ್ಲಿಕಾರ್ಜುನ ಗುಡಿ

ಅಷ್ಟಭುಜಧಾರಿ ಮಹಿಷಾಸುರ ಮರ್ದಿನಿ ಶಿಲ್ಪವು ಕಪ್ಪುಶಿಲೆಯಲ್ಲಿದೆ. ಸಿಂಹವಾಹನ ಬಲಭಾಗಕ್ಕಿದೆ. ಎಡಗಾಲು ಮಹಿಷನ ಮೇಲಿಟ್ಟು ಎರಡು ಕೈಗಳಲ್ಲಿನ ತ್ರಿಶೂಲದಿಂದ ಇರಿಯುತ್ತಿದೆ. ಪ್ರಸ್ತುತ ತ್ರುಟಿತವಾಗಿದೆ.

* **ಇತರೆ ಶಾಕ್ತ ಮೂರ್ತಿಶಿಲ್ಪಗಳು**

ದೇಗಲ್ಮಡಿಯ ಪ್ರವೇಶಕ್ಕಿರುವ ಗುಡಿ ಎದುರು ಎರಡು ಮಾತೃಕೆಗಳ ಶಿಲ್ಪ ತ್ರುಟಿತವಾಗಿವೆ. ಸು.೧೧ನೆಯ ಶತಮಾನದ್ದಾಗಿವೆ. ಪ್ರಸ್ತುತ ರುಂಡ ಮುರಿದ ಮಾತೃಕೆ ಶಿಲ್ಪ?ದ ಎಡಗೈ ಮತ್ತು ಮೊಣಕಾಲ ಬಳಿ ಸಿಗಿಬಿದ್ದಂತಿರುವ ಒಂದು ಮಗುವಿನ ಶಿಲ್ಪವಿದೆ. ಎಡಗಾಲಿನ ಮೇಲೆ ಬಲಗಾಲು ಹಾಕಿ ಕುಳಿತಿರುವ ಭಂಗಿಯಲ್ಲಿದೆ. ಕಾಲ್ಗಡಗ ಮತ್ತು ಪೈಜಾಮ ಧರಿಸಿರುವ ಕೆತ್ತನೆ ಇದೆ. ಇಲ್ಲಿಯ ಇನ್ನೊಂದು ಮಾತೃಕೆ? ಸವ್ಯ ಲಲಿತಾಸನದಲ್ಲಿದೆ. ಹಿಂದೆ ಮಾವಿನ ಎಲೆಗಳ ಗೊಂಚಲು ಪ್ರಭಾವಳಿಯಲ್ಲಿವೆ. ಕಿರೀಟಧಾರಿ, ಕರ್ಣಕುಂಡಲ ಮತ್ತು ಕಾಲ್ಗಡಗ ಧರಿಸಿದೆ. ಇದು ಪ್ರಸ್ತುತ ತ್ರುಟಿತವಾಗಿದೆ. ಸುಲೇಪೇಟೆಯ ವೀರಭದ್ರೇಶ್ವರ ಗುಡಿಯ ದೇವಕೊಷ್ಠದಲ್ಲಿ ಸು.೧೧ನೆಯ ಶತಮಾನದ ಎರಡು ಮಾತೃಕೆಯರ ಶಿಲ್ಪವಿದೆ. ಒಂದು ಎತ್ತರದ ಕಿರೀಟಧಾರಿಣಿ, ಚತುರ್ಭುಜಧಾರಿ ದೇವಿಶಿಲ್ಪವಿದೆ. ಅದರ ಪಕ್ಕದಲ್ಲಿ ಜ್ವಾಲಾಮಾಲಿನಿ ಉದ್ದನೇ ದಂಡ ಹಿಡಿದಿದೆ. ಹಿಂದೆ ಪ್ರಭಾವಳಿಯಲ್ಲಿ ಕಮಲದ ದಳದಂಥ ಜ್ವಾಲೆಗಳಿವೆ. ಸಪ್ತಮಾತೃಕೆಯರ ಶಿಲ್ಪಗಳು ದೇಗಲ್ಮಡಿ, ಮೋಘಾ, ಕೋಡ್ಲಿಗಳಲ್ಲಿವೆ.

* **ಲಲಾಟದ ಗಜಲಕ್ಷ್ಮಿಯ ಶಿಲ್ಪ:** ಲಕ್ಷ್ಮಿಯ ಇಕ್ಕೆಲಲ್ಲಿರುವ ಗಜಗಳು ಸೊಂಡಿಲನ್ನು ತೋರಣದಂತೆ ಮಾಡಿ ವಂದಿಸುತ್ತಿವೆ. ಮಧ್ಯದಲ್ಲಿರುವ ಲಕ್ಷ್ಮಿ ಶಿಲ್ಪ ಕಮಲವನ್ನು ಹಿಡಿದಿದೆ. ಅಭಯಹಸ್ತ ಲಕ್ಷ್ಮಿಯ ಚತುರ್ಬಾಹು ಶಿಲ್ಪವಿದೆ. ಕಿರೀಟಧಾರಿ, ಸೀರೆ, ಕುಪ್ಪಸ, ತೋಳ್ಬಂದಿ, ಕೈಬಳೆ, ಕಂಠಮಾಲೆ, ಎದೆಹಾರ, ಬಾಹುವಲ್ಯ, ಯಜ್ಞೋಪವೀತ, ಆರೋಪ್ಯಮಾಲಾ ಧರಿಸಿ ಕಮಲದ ಮೇಲೆ ಕುಳಿತಿರುವ ಶಿಲ್ಪವಿದೆ.

೫.೨.೫. ಗಾಣಪತ್ಯ ಶಿಲ್ಪಗಳು

ಸ್ಥಳ: ಹುಣಸಿ ಹಡಗಲಿ **ಶಿಲ್ಪ:** ಗಣಪತಿ

ಶಿಲೆ: ಒರಟಾದ ಕಪ್ಪು ಕಲ್ಲು **ಕಾಲ:** ಸು.೯ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಬಸದಿ

ಹೊರ ಪ್ರಾಂಗಣದಲ್ಲಿರುವ ಗಣಪತಿ ಶಿಲ್ಪ ಚತುರ್ಬಾಹುವಾಗಿದೆ. ಪಾಶಾಂಕುಶ, ದಂತ ಮೋದಕ ಹಸ್ತವಿದೆ. ಕಿರೀಟ, ಕೈಗಡಗ, ಉದರ ಸರ್ಪಬಂಧ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಹುಣಸಿ ಹಡಗಲಿ **ಶಿಲ್ಪ:** ಗಣಪತಿ

ಶಿಲೆ: ಒರಟಾದ ಕಪ್ಪು ಕಲ್ಲು **ಕಾಲ:** ಸು.೯ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಹನುಮಾನ್ ಗುಡಿಯ ಬಸವನಕಟ್ಟೆಯಲ್ಲಿ ಎದುರಿಗೆ ಗಣಪತಿ ಶಿಲ್ಪ ಚತುರ್ಬಾಹುವಾಗಿದೆ. ಪಾಶಾಂಕುಶ, ದಂತ, ಮೋದಕ ಹಸ್ತವಿದೆ. ಕಿರೀಟ, ಕೈಗಡಗ, ಉದರ ಸರ್ಪಬಂಧ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಹೂಣಸಿ ಹಡಗಲಿ ಶಿಲ್ಪ: ಗಣಪತಿ
ಶಿಲೆ: ಕಪ್ಪು ಕಲ್ಲು ಕಾಲ: ಸು.೯ನೆಯ ಶತಮಾನ
ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಗುಡಿ

ನಂದಿಶಿಲ್ಪ, ಬೃಹತ್ ಲಿಂಗಪೀಠವಿದೆ. ಹನುಮಾನ್ ಗುಡಿಯ ಎದುರಿಗೆ ಹನುಮಾನನ ಮೂರ್ತಿಯಿದೆ ಮತ್ತು ನಾಗಶಿಲ್ಪ ಮೇಲ್ಭಾಗ ಮನುಷ್ಯನಾಕೃತಿ, ಕೆಳಭಾಗ ಹಾವಿನಾಕೃತಿಯಲ್ಲಿ ಕೆತ್ತಲಾಗಿದೆ.

ಗ್ರಾಮ: ಬೆಳಗುಂಪಾ(ಕೆ) ಶಿಲ್ಪ: ಗಣಪತಿ
ಶಿಲೆ: ಕಪ್ಪು ಕಲ್ಲು ಕಾಲ: ಸು.೯ನೆಯ ಶತಮಾನ
ಸ್ಥಿತಿ: ಉತ್ತಮ ದೊರೆತ ಸ್ಥಳ: ಶಂಕರಲಿಂಗ ಗುಡಿ

ಚತುರ್ಬಾಹು ಗಣಪತಿ ಶಿಲ್ಪವು ದೇವಕೋಷ್ಠದಲ್ಲಿದೆ. ಪಾಶಾಂಕುಶ, ದಂತ ಮತ್ತು ಮೋದಕ ಹಸ್ತವಿದೆ. ಕಿರೀಟ, ಕೈಗಡಗ, ಬಾಹುವಲ್ಯ, ಯಜ್ಞೋಪವೀತ, ಕಂಠಾಭರಣ, ಕೊರಳಾಭರಣ, ಉದರಕ್ಕೆ ಸರ್ಪಬಂಧ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಗ್ರಾಮ: ಗರೂರು ಶಿಲ್ಪ: ಗಣಪತಿ
ಶಿಲೆ: ಕಪ್ಪು ಕಲ್ಲು ಕಾಲ: ಸು.೧೨ನೆಯ ಶತಮಾನ
ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಗುಡಿ

ಚತುರ್ಬಾಹು ಗಣಪತಿಶಿಲ್ಪವು ಪಾಶಾಂಕುಶ, ದಂತ ಮತ್ತು ಮೋದಕ ಹಸ್ತಗಳಿಂದ ಕೂಡಿದೆ. ಕೈಗಡಗ, ಕಾಲ್ಗಡಗ, ಉದರ ಸರ್ಪಬಂಧದ ಕೆತ್ತನೆಯಿದೆ.

ಗ್ರಾಮ: ಗುಲ್ಬರ್ಗಾ ಶಿಲ್ಪ: ಗಣಪತಿ
ಶಿಲೆ: ಕಪ್ಪು ಕಲ್ಲು ಕಾಲ: ಸು.೧೨ನೆಯ ಶತಮಾನ
ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಗುಡಿ

ಬಿದ್ದಾಪುರ ಕಾಲೋನಿಯಲ್ಲಿರುವ ಹನುಮಾನ್ ಗುಡಿಯ ದೇವಕೋಷ್ಠಕದಲ್ಲಿ ತ್ರುಟಿತ ಚತುರ್ಬಾಹು ಗಣಪತಿ ಶಿಲ್ಪವು ಸು.೧೦ನೆಯ ಶತಮಾನದ್ದಾಗಿದೆ. ಪಾಶಾಂಕುಶ, ದಂತ ಮತ್ತು ಮೋದಕ ಹಸ್ತವಿರುವ ಸಾದಾ ಕೆತ್ತನೆಯ ಗಣಪತಿಯಿದೆ.

ಗ್ರಾಮ: ಇಟಗಾ(ಬಿ) ಶಿಲ್ಪ: ಗಣೇಶ
ಶಿಲೆ: ಕಪ್ಪು ಕಲ್ಲು. ಕಾಲ: ಸು.೧೦ನೆಯ ಶತಮಾನ
ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಗುಡಿ

ತ್ರುಟಿತ ಗಣಪತಿ ಶಿಲ್ಪ ದ್ವಿಬಾಹು?ವಿದೆ. ಕಿರೀಟ ಧರಿಸಿದೆ.

ಗ್ರಾಮ: ಹಾಗರಗುಂಡಿಗೆ	ಶಿಲ್ಪ: ಗಣಪತಿ

ಶಿಲೆ: ಕಪ್ಪು ಕಲ್ಲು	ಕಾಲ: ಸು.೯ನೆಯ ಶತಮಾನ

ಸ್ಥಿತಿ: ಕನಿಷ್ಠ	ದೊರೆತ ಸ್ಥಳ: ಲಕ್ಕಮ್ಮನಗುಡಿ

ಚತುರ್ಬಾಹು ಗಣಪತಿ ಶಿಲ್ಪವಿದೆ. ಪಾಶಾಂಕುಶ, ದಂತ ಮತ್ತು ಮೋದಕ ಹಸ್ತವಿದೆ. ಕಿರೀಟ, ಕೈಗಡಗ, ಕೊರಳಿನಹಾರ, ಸರ್ಪಬಂಧ, ಕಾಲ್ಗಡಗ ಇದರ ಹಿಂದಿನ ಫಲಕದಲ್ಲಿ ಹೂಬಳ್ಳಿಯ ಕೆತ್ತನೆಯಿದೆ.

ಗ್ರಾಮ: ಕಾಳನೂರು	ಶಿಲ್ಪ: ಗಣಪತಿ

ಶಿಲೆ: ಕಪ್ಪುಕಲ್ಲು.	ಕಾಲ: ಸು.೮ನೆಯ ಶತಮಾನ

ಸ್ಥಿತಿ: ತೃಟಿತ	ದೊರೆತ ಸ್ಥಳ: ಕಾಳಲಿಂಗೇಶ್ವರ ಗುಡಿ

ಬೃಹತ್ ಪ್ರಾಂಗಣದಲ್ಲಿರುವ ಗಣಪತಿ ಕಪ್ಪು ಶಿಲೆಯಲ್ಲಿದೆ. ಚತುರ್ಬಾಹು ಗಣಪತಿಯ ಮುಂದಿನ ಕೈಗಳಲ್ಲಿ ದಂತ ಮತ್ತು ಮೋದಕವಿದೆ. ಹಿಂದಿನ ಕೈಗಳಲ್ಲಿ ಪಾಶಾಂಕುಶಗಳಿವೆ. ಕಿರೀಟಧಾರಿ, ಮಣಿಕಂಠ, ಬಾಹುವಲ್ಯ, ಹಣೆಪಟ್ಟಿ, ಕೈಗಡಗ, ಯಜ್ಞೋಪವೀತ, ವಕ್ಷಬಂಧ, ಸರ್ಪಹೊಟ್ಟೆಗೆ ಕಟ್ಟಿಕೊಂಡಿರುವುದು, ಕಾಲ್ಗಡಗ, ಪೈಜಾಮ ಧರಿಸಿರುವಂತೆ ಕೆತ್ತಲಾಗಿದೆ

ಗ್ರಾಮ: ಖಣದಾಳ	ಶಿಲ್ಪ: ಗಣಪತಿ

ಶಿಲೆ: ಕಪ್ಪುಕಲ್ಲು	ಕಾಲ: ಸು.೧೦ನೆಯ ಶತಮಾನ

ಸ್ಥಿತಿ: ಉತ್ತಮ	ದೊರೆತ ಸ್ಥಳ: ಹನುಮಾನ್ ಗುಡಿ

ಚತುರ್ಬಾಹು ಗಣಪತಿ ಶಿಲ್ಪ ಭಿತ್ತಿಭಾಗದಲ್ಲಿದೆ. ಪಾಶಾಂಕುಶ, ದಂತ ಮತ್ತು ಮೋದಕ ಹಸ್ತವಿರುವ ಶಿಲ್ಪವು ಬೃಹತ್ತಾಗಿದೆ. ಕಿರೀಟ, ಕಿರೀಟಕ್ಕೆ ಮುತ್ತಿನ ಸರಪಳಿಯಂತೆ ಅಲಂಕಾರ ಮಾಡಲಾಗಿದೆ. ಉದರಕ್ಕೆ ಸರ್ಪಬಂಧವಿದೆ. ಕೊರಳಾಭರಣ, ಬಾಹುವಲ್ಯ ಕೈಗಡಗ, ಯಜ್ಞೋಪವೀತ, ಸೊಂಟಪಟ್ಟಿ, ಇಳಿವಸ್ತ್ರ, ಕುಚಹಾರ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಗ್ರಾಮ: ಮಳಿನಿ	ಶಿಲ್ಪ: ಗಣಪತಿ

ಶಿಲೆ: ಕಪ್ಪುಕಲ್ಲು	ಕಾಲ: ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ	ದೊರೆತ ಸ್ಥಳ: ಹನುಮಾನ್ ಗುಡಿ

ಹನುಮಾನ್ ಗುಡಿಯ ಎತ್ತರದ ಜಗತಿಯ ಮೇಲೆ ದ್ವಿಬಾಹು ಗಣಪತಿ ಶಿಲ್ಪವಿದೆ. ದಂತ, ಮೋದಕ ಹಸ್ತವಿರುವ ಶಿಲ್ಪವಿದೆ. ಕಿರೀಟಧಾರಿ, ಕೈಗಡಗ, ಕಾಲ್ಗಡಗ, ಕೊರಳಾಭರಣ ಧರಿಸಿದೆ.

ಗ್ರಾಮ: ಕೊಲ್ಲೂರು **ಶಿಲ್ಪ:** ಗಣೇಶ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಕಪ್ಪು ಒರಟಾದ ಶಿಲೆಯಲ್ಲಿ ಕೆತ್ತಲಾದ ಚತುರ್ಬಾಹು ಗಣಪತಿ ಹನುಮಾನ್ ಗುಡಿಯ ಪ್ರಾಂಗಣದಲ್ಲಿದೆ. ಪಾಶಾಂಕುಶ, ದಂತ ಮತ್ತು ಮೋದಕ ಹಸ್ತವಿದೆ. ಕಿರೀಟ, ಕೈಗಡಗ, ಉದರ ಸರ್ಪಬಂಧ, ಕಾಲ್ಗಡಗ ಧರಿಸಿದೆ.

ಗ್ರಾಮ: ತಡಕಲ್ಲು **ಶಿಲ್ಪ:** ಗಣೇಶ

ಶಿಲೆ: ಕಪ್ಪು ಕಲ್ಲು **ಕಾಲ:** ಸು೧೧ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ದ್ವಿಬಾಹು ಗಣೇಶನ ಶಿಲ್ಪವು ೮ನೆಯ ಶತಮಾನದ್ದಾಗಿದೆ. ಕಪ್ಪುಶಿಲೆಯಲ್ಲಿ ದೊಡ್ಡದಾದ ತಲೆಭಾಗ, ಉಳಿದ ಕೈಕಾಲು, ಹೊಟ್ಟೆ ಭಾಗ ಸಣ್ಣದಾಗಿ ಕೆತ್ತಲಾಗಿದೆ. ಯಾವುದೇ ಅಲಂಕಾರಿಕವಿಲ್ಲದ ಸರಳ ಶಿಲ್ಪವಾಗಿದೆ. ತಲೆಯ ಭಾಗ ದೊಡ್ಡದಾಗಿ ಕೆತ್ತಲ್ಪಟ್ಟು ಜ್ಞಾನದ ಪ್ರಾಮುಖ್ಯತೆಯನ್ನು ಎತ್ತಿಹಿಡಿಯಲಾಗಿದೆ.

ಗ್ರಾಮ: ಯಳವಂತಿ(ಕೆ) **ಶಿಲ್ಪ:** ಗಣೇಶ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ದ್ವಿಬಾಹು ಗಣೇಶನ ಶಿಲ್ಪವು ಫಲಕದ ಮೇಲೆ ಕೆತ್ತಲಾಗಿದೆ. ಕಿರೀಟಧಾರಿ, ದಂತಹಸ್ತ ಮತ್ತು ಮೋದಕ ಹಸ್ತವಾಗಿದೆ.

ಗ್ರಾಮ: ಸಿರನೂರು **ಶಿಲ್ಪ:** ಗಣಪತಿ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೦ನೆಯ ಶತಮಾನ

ಸ್ಥಿತಿ: ತೃಟಿತ **ದೊರೆತ ಸ್ಥಳ:** ಈಶ್ವರಲಿಂಗ ಮಂದಿರ

ನವರಂಗದ ಭಿತ್ತಿ ಭಾಗದ ದೇವಕೋಷ್ಟಕದಲ್ಲಿ (ಬಲ) ಗಣಪತಿ ಶಿಲ್ಪವಿದೆ. ಹಿಂದಿನ ಕೈಗಳು ಪಾಶಾಂಕುಶ, ದಂತಹಸ್ತ, ಮೋದಕ ಹಸ್ತವಿರುವ ಕೆತ್ತನೆಯಿದೆ. ಉದರ ಸರ್ಪಬಂಧ, ಯಜ್ಞೋಪವೀತ, ಕಿರೀಟಧಾರಿಯಾಗಿರುವ ಕೆತ್ತನೆಯಿದೆ. ಇನ್ನೊಂದು ದ್ವಿಬಾಹು ಗಣಪತಿ ಶಿಲ್ಪ ತ್ರುಟಿತವಾಗಿದೆ. ಇನ್ನೊಂದು ದೇವಕೋಷ್ಟಕದಲ್ಲಿರುವ ಗಣಪತಿ ಶಿಲ್ಪ ತೃಟಿತ ದ್ವಿಬಾಹುವಾಗಿದೆ.

ಗ್ರಾಮ: ಶ್ರೀನಿವಾಸ ಸರಡಗಿ **ಶಿಲ್ಪ:** ಗಣಪತಿ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಮಂದಿರ

ಚತುರ್ಭುಜ ಗಣಪತಿಯ ಶಿಲ್ಪವಿದೆ. ಪಾಶಾಂಕುಶ, ದಂತಹಸ್ತ, ಮೋದಕಹಸ್ತದ ಶಿಲ್ಪವಿದೆ. ಹೊಟ್ಟೆಗೆ ನಾಗವನ್ನು ಸುತ್ತಿಸಿ, ಕಾಲ್ಗಡಗ, ಪೈಜಾಮ, ತೋಳ್ಬಂದಿ, ಕೈಕಡಗ ಧರಿಸಿದೆ. ಸು.೧೧ನೆಯ ಶತಮಾನದ್ದಾಗಿವೆ.

ಗ್ರಾಮ: ಸಣ್ಣೂರು ಶಿಲ್ಪ: ಗಣಪತಿ

ಶಿಲೆ: ಕಪ್ಪುಶಿಲೆ ಕಾಲ: ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ರಾಮಲಿಂಗೇಶ್ವರ ಮಂದಿರ

ದೇವಾಲಯದ ಮುಂಭಾಗದಲ್ಲಿರುವ ದ್ವಿಬಾಹು ಗಾಣಪತ್ಯ ಶಿಲ್ಪಗಳೆರಡು ಕೆಂಪು-ಬಿಳುಪು ಮಿಶ್ರ ಕಲ್ಲಿನಲ್ಲಿ ಕೆತ್ತಲಾಗಿದೆ. ದಂತ ಹಸ್ತ, ಮೋದಕ ಹಿಡಿದಿರುವ ಎರಡು ಶಿಲ್ಪಗಳು ಒಂದು ಸಾದಾವಾಗಿದೆ. ಇನ್ನೊಂದು ಕಿರೀಟಧಾರಿ, ಮಣಿಕಂಠ, ಕಾಲ್ಗಡಗ, ಹೊಟ್ಟೆಗೆ ಹಾವನ್ನು ಸುತ್ತಿಕೊಂಡಂತೆ ಕೆತ್ತಲಾಗಿದೆ.

ಗ್ರಾಮ: ಸಣ್ಣೂರು ಶಿಲ್ಪ: ಗಣಪತಿ

ಶಿಲೆ: ಕಪ್ಪುಶಿಲೆ, ಕಾಲ: ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಮಂದಿರ

ಊರ ಅಗಸಿಯ ಹನುಮಾನ್ ಮಂದಿರದಲ್ಲಿರುವ ಚತುರ್ಬಾಹು ಗಣಪತಿಯ ಶಿಲ್ಪ ಸುಮಾರು ೧೧ನೆಯ ಶತಮಾನದ್ದಾಗಿದೆ. ಹಿಂದಿನ ಕೈಗಳು ಪಾಶಾಂಕುಶ ಹಿಡಿದಿವೆ. ಮುಂದಿನ ಕೈಗಳಲ್ಲಿ ದಂತ, ಮೋದಕ ಹಿಡಿದಂತೆ ಕೆತ್ತಲಾಗಿದೆ. ಕಿರೀಟಧಾರಿ, ಯಜ್ಞೋಪವೀತ, ಕಾಲ್ಗಡಗ, ಕೈಗಡಗ ಕೆತ್ತಲಾಗಿದೆ.

ಗ್ರಾಮ: ಮಿಣಜಗಿ ಶಿಲ್ಪ: ಗಣಪತಿ

ಶಿಲೆ: ಕಪ್ಪುಶಿಲೆ ಕಾಲ: ಸು.೯ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಮಂದಿರದ ಹತ್ತಿರ

ದ್ವಿಬಾಹು ಗಣಪತಿ ಶಿಲ್ಪವು ಮೋದಕ ಮತ್ತು ದಂತ ಹಸ್ತವಾಗಿದೆ. ಫಲಕದ ಮೇಲೆ ಕೊರೆಯಲಾಗಿದೆ. ಕಿರೀಟಧಾರಿ, ಹಣೆಪಟ್ಟಿಕೆ, ಬಾಹುವಲ್ಯ, ಕೈಗಡಗ, ವಕ್ಷಬಂಧ, ಉದರಕ್ಕೆ ಸರ್ಪಬಂಧ, ಕಾಲ್ಗಡಗದ ಕೆತ್ತನೆಯಿದೆ.

ಗ್ರಾಮ: ಮಿಣಜಗಿ ಶಿಲ್ಪ: ಗಣಪತಿ

ಶಿಲೆ: ಕಪ್ಪುಶಿಲೆ ಕಾಲ: ಸು.೮ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಮಂದಿರದ ಹತ್ತಿರ

ಫಲಕದ ಮೇಲೆ ಉಬ್ಬುಶಿಲ್ಪದಲ್ಲಿ ದ್ವಿಬಾಹು ಗಣಪತಿ ಶಿಲ್ಪವು ಮೋದಕ ಹಿಡಿದಿದೆ. ಬಲಗೈ ತ್ರುಟಿತವಾಗಿದೆ. ಕೈಗಡಗ, ಯಜ್ಞೋಪವೀತ, ಕಾಲ್ಗಡಗ ಧರಿಸಿದ ಸರಳ ಕೆತ್ತನೆಯಿದೆ.

ಗ್ರಾಮ: ಮೇಳಕುಂದಾ(ಕೆ) ಶೈಲಿ: ಗಣಪತಿ

ಶಿಲೆ: ಕಪ್ಪುಶಿಲೆ ಕಾಲ: ಸು.೧೭ನೆಯ ಶತಮಾನ

ಸ್ಥಿತಿ: ಕನಿಷ್ಠ, ದೊರೆತ ಸ್ಥಳ: ಹನುಮಾನ್ ಮಂದಿರ,

ದ್ವಿಬಾಹು ಶಿಲ್ಪ, ಕಿರೀಟ ಧರಿಸಿರುವ ಸಾದಾ ಕೆತ್ತನೆಯಿದೆ. ಉಳಿದ ಭಾಗ ಭಿತ್ತಿ ಭಾಗದಲ್ಲಿದೆ.

ಗ್ರಾಮ: ಕಲಬೆನ್ನೂರು **ಶಿಲ್ಪ:** ಗಣಪತಿ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ಉತ್ತಮ **ದೊರೆತ ಸ್ಥಳ:** ಹನುಮಾನ್ ಮಂದಿರ

ಗಣಪತಿ ಶಿಲ್ಪಗಳು: ಹನುಮಾನ್ ಮಂದಿರದಲ್ಲಿ ಎರಡು ಗಣಪತಿ ಶಿಲ್ಪಗಳಿವೆ. ದ್ವಿಬಾಹುಗಳಿರುವ ಒಂದು ಗಣಪತಿ ಸರಳವಾಗಿದೆ. ಮೋದಕ ಮತ್ತು ದಂತ ಹಸ್ತವಾಗಿದೆ. ಕೊರಳಹಾರ, ಕೈಗಡಗ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಗ್ರಾಮ: ಖಣದಾಳ **ಶಿಲ್ಪ:** ಗಣಪತಿ

ಶಿಲೆ: ಕಪ್ಪುಕಲ್ಲು. **ಕಾಲ:** ಸು.೮ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಚತುರ್ಬಾಹು ಗಣಪತಿ ಶಿಲ್ಪ ಭಿತ್ತಿಭಾಗದಲ್ಲಿದೆ. ಪಾಶಾಂಕುಶ, ದಂತ ಮತ್ತು ಮೋದಕ ಹಸ್ತವಿರುವ ಶಿಲ್ಪವು ಬೃಹತ್ತಾಗಿದೆ. ಕಿರೀಟ, ಕಿರೀಟಕ್ಕೆ ಮುತ್ತಿನ ಸರಪಳಿಯಂತೆ ಅಲಂಕಾರ ಮಾಡಲಾಗಿದೆ. ಉದರಕ್ಕೆ ಸರ್ಪಬಂಧವಿದೆ. ಕೊರಳಾಭರಣ, ಬಾಹುವಲ್ಯ, ಕೈಗಡಗ, ಯಜ್ಞೋಪವೀತ, ಸೊಂಟಪಟ್ಟಿ, ಇಳಿವಸ್ತ್ರ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಗ್ರಾಮ: ಕಡಣಿ(ಕಣ್ಣಿ) **ಶಿಲ್ಪ:** ಗಣಪತಿ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ಉತ್ತಮ **ದೊರೆತ ಸ್ಥಳ:** ಹನುಮಾನ್ ಮಂದಿರ

ಗುಡಿಯ ಎದುರಿಗೆ ಚತುರ್ಭುಜ ಗಣಪತಿ ಶಿಲ್ಪವಿದೆ. ಹಿಂದಿನ ಕೈಗಳು ಪರಶು ಮತ್ತು ಅಂಕುಶ ಹಿಡಿದಿವೆ. ಮುಂದಿನ ಕೈಗಳು ದಂತ ಮತ್ತು ಮೋದಕ ಹಿಡಿದಿವೆ. ಕಿರೀಟಧಾರಿ, ಕೊರಳಾಭರಣ, ಉದರಕ್ಕೆ ಸರ್ಪಬಂಧ, ಕಾಲ್ಗಡಗ ಧರಿಸಿದಂತೆ ಕೆತ್ತಲಾಗಿದೆ.

ಗ್ರಾಮ: ಕೇರಿಅಂಬಲಗಾ **ಶಿಲ್ಪ:** ಗಣಪತಿ

ಶಿಲೆ: ಕಪ್ಪುಕಲ್ಲು **ಕಾಲ:** ಸು.೮ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಮಲ್ಲಿಕಾರ್ಜುನ ಗುಡಿ

ಎರಡು ಗಣಪತಿಯ ಶಿಲ್ಪಗಳು ಚತುರ್ಭುಜವಾಗಿವೆ. ಪಾಶಾಂಕುಶ, ದಂತ ಮತ್ತು ಮೋದಕ ಹಸ್ತಗಳಿವೆ. ಕುಳಿತ ಭಂಗಿಯಲ್ಲಿವೆ. ಕಿರೀಟ ಧರಿಸಿದ ಶಿಲ್ಪಗಳಿವೆ. ಕಾಲ್ಗಡಗ, ಕೈಗಡಗ ಮತ್ತು ಹೊಟ್ಟೆಗೆ ಸರ್ಪ ಸುತ್ತಿಕೊಂಡ ಕೆತ್ತನೆಯಿವೆ.

ಗ್ರಾಮ: ಜೀವಣಗಿ **ಶಿಲ್ಪ:** ನಾಟ್ಯ ಗಣೇಶ

ಶಿಲೆ: ಕಪ್ಪುಕಲ್ಲು **ಕಾಲ:** ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಬಿಬ್ಬಲಿಂಗೇಶ್ವರ ಗುಡಿಯ ಪಕ್ಕದಲ್ಲಿ

ಲಲಾಟದ ಕಲ್ಲಿನಂತೆ ತೋರುವ ನಾಟ್ಯ ಗಣೇಶನ ಶಿಲ್ಪವು ಚತುರ್ಬಾಹುವಿನಿಂದ ಕೂಡಿದೆ. ಮುಂದಿನ ಕೈಗಳು ಚತುರ ನಾಟ್ಯ ಭಂಗಿಯಲ್ಲಿದೆ. ಹಿಂದಿನ ಕೈಗಳು ರೇಚಿತನಿಟ್ಟು?ನ ಭಂಗಿಯಲ್ಲಿವೆ. ಕಾಲುಗಳು ಒಂದು ಕಾಲು ಮೇಲೆ ಒಂದು ಕಾಲು ಕೆಳಗಿದ್ದು ನಾಟ್ಯಭಂಗಿಯಲ್ಲಿದೆ.

ಗ್ರಾಮ: ಜೀವಣಗಿ　　ಶಿಲ್ಪ: ಗಣಪತಿ

ಶಿಲೆ: ಕಪ್ಪುಕಲ್ಲು.　　ಕಾಲ: ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ　　ದೊರೆತ ಸ್ಥಳ: ಬಿಬ್ಬಲಿಂಗೇಶ್ವರ ಗುಡಿ

ಗುಡಿಯ ನವರಂಗದ ಅಧಿಷ್ಠಾನದಲ್ಲಿರುವ, ಸಾದಾ ಕೆತ್ತನೆಯ ಗಣಪತಿ ಶಿಲ್ಪದಲ್ಲಿ ಚತುರ್ಬಾಹುಗಳಿವೆ. ಪಾಶಾಂಕುಶ, ದಂತ, ಮೋದಕ ಹಸ್ತವಿದೆ.

ಗ್ರಾಮ: ಬಿದನೂರು　　ಶಿಲ್ಪ: ಗಣೇಶ

ಶಿಲೆ: ಕಪ್ಪು ಕಲ್ಲು　　ಕಾಲ: ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ　　ದೊರೆತ ಸ್ಥಳ: ಹನುಮಾನ್ ಗುಡಿ

ಗಣೇಶನಶಿಲ್ಪವು ಚತುರ್ಬಾಹುವಿನದ್ದಾಗಿದೆ. ಪಾಶಾಂಕುಶ, ದಂತ ಮತ್ತು ಮೋದಕ ಹಸ್ತವಾಗಿದೆ. ಕಿರೀಟ, ಕಾಲ್ಗಡಗ ಧರಿಸಿದ ಸಾದಾ ಕೆತ್ತನೆಯಿದೆ.

ಗ್ರಾಮ: ಕಡಣಿ(ಕಣ್ಣಿ)　　ಶಿಲ್ಪ: ಗಣೇಶ

ಸ್ಥಿತಿ: ತ್ರುಟಿತ　　ಕಾಲ: ಸು.೭ನೆಯ ಶತಮಾನ

ಶಿಲೆ: ಕಪ್ಪುಶಿಲೆ　　ದೊರೆತ ಸ್ಥಳ: ಶಂಕರಲಿಂಗೇಶ್ವರ ಗುಡಿ

ಶಂಕರಲಿಂಗೇಶ್ವರ ಗುಡಿಯ ಹೊರ ಪ್ರಾಂಗಣದಲ್ಲಿ ದ್ವಿಬಾಹು ಗಣೇಶನ ಶಿಲ್ಪ ದಂತ ಮತ್ತು ಮೋದಕ ಹಸ್ತವಾಗಿದೆ. ಕಿರೀಟಧಾರಿಯಾಗಿರುವ ಮತ್ತು ಅಲಂಕಾರಿಕ ಕೆತ್ತನೆಗಳಿಲ್ಲದ ಶಿಲ್ಪವಾಗಿದೆ.

ಗ್ರಾಮ: ಕಡಣಿ(ಕಣ್ಣಿ)　　ಶಿಲ್ಪ: ಗಣಪತಿ

ಶಿಲೆ: ಕಪ್ಪುಶಿಲೆ　　ಕಾಲ: ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ　　ದೊರೆತ ಸ್ಥಳ: ಹನುಮಾನ್ ಮಂದಿರದ ಪಕ್ಕದಲ್ಲಿ.

ಅರಳಿಮರದ ಕಟ್ಟೆ ಮೇಲೆ ಎರಡು ಗಣಪತಿ ಶಿಲ್ಪಗಳಿವೆ. ಒಂದು ದೊಡ್ಡದಾಗಿದ್ದು ದ್ವಿಬಾಹುವಿದೆ. ದಂತ, ಮೋದಕ ಹಸ್ತವಿರುವ ಸಾದಾ ಕೆತ್ತನೆಯಿದೆ.

ಚಿಕ್ಕದಾದ ಚತುರ್ಬಾಹು ಗಣಪತಿ ಶಿಲ್ಪ ಕಿರೀಟ, ಕೈಗಡಗ, ಕೊರಳಾಭರಣ, ಭುಜಬಂಧ, ಯಜ್ಞೋಪವೀತ, ಕಾಲ್ಗಡಗ ಧರಿಸಿದೆ. ಪಾಶಾಂಕುಶ, ಮೋದಕ ಮತ್ತು ದಂತ ಹಸ್ತಗಳಿವೆ.

ಗ್ರಾಮ: ಹಾತಿಗುಂದಾ　　ಶಿಲ್ಪ: ಗಣಪತಿ

ಶಿಲೆ: ಕಪ್ಪುಶಿಲ　　ಕಾಲ: ಸು.೯ನೆಯ ಶತಮಾನ,

ಸ್ಥಿತಿ: ತ್ರುಟಿತ　　ದೊರೆತ ಸ್ಥಳ: ಹನುಮಾನ್ ಗುಡಿ

ಪ್ರವೇಶ ದ್ವಾರದ ಗೋಡೆಯಲ್ಲಿರುವ ದ್ವಿಬಾಹು ಗಣಪತಿ ಶಿಲ್ಪವು ಕಿರೀಟಧಾರಿ, ದಂತ ಮತ್ತು ಮೋದಕ ಹಸ್ತವಾಗಿದೆ. ಉಳಿದದ್ದು ಗೋಡೆಯಲ್ಲಿ ಹೂತುಹೋಗಿದೆ.

ಗ್ರಾಮ: ಚಿಂಚನ್‌ಸೂರು **ಶಿಲ್ಪ:** ಗಣಪತಿ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೦ನೆಯ ಶತಮಾನ

ಸ್ಥಿತಿ: ಉತ್ತಮ **ದೊರೆತ ಸ್ಥಳ:** ಮಹೇಶ್ವರನ ಗುಡಿ

ಬೃಹತ್ ಗಣಪತಿ ಶಿಲ್ಪ ಇದು ಸು.೧೦ನೆಯ ಶತಮಾನದ್ದಾಗಿದೆ. ಪಾಶಾಂಕುಶ, ದಂತ, ಮೋದಕ ಹಸ್ತವಿರುವ ಶಿಲ್ಪ ಚತುರ್ಭುಜಧಾರಿಯಾಗಿದೆ. ಕುಳಿತ ಭಂಗಿಯಲ್ಲಿರುವ ಗಣಪತಿ ಕಿರೀಟಧಾರಿ, ಕೈಗಡಗ, ಕಾಲ್ಗಡಗ, ಸರ್ಪವನ್ನು ಸೊಂಟಕ್ಕೆ ಸುತ್ತಿಕೊಂಡಿದೆ.

ಗ್ರಾಮ: ಬೇಲೂರು **ಶಿಲ್ಪ:** ಗಣಪತಿ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೯ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಭೋಗಲಿಂಗೇಶ್ವರ ಗುಡಿ

ಚತುರ್ಬಾಹು ನಾಟ್ಯಗಣೇಶ ಶಿಲ್ಪವು ಕಪ್ಪು ಶಿಲೆಯಲ್ಲಿದೆ. ಹಿಂದಿನ ಕೈಗಳಲ್ಲಿ ಪರಶು ಮತ್ತು ನೃತ್ಯ ಭಂಗಿಯಲ್ಲಿದೆ. ಮುಂದಿನ ಕೈ ಒಂದು ನೃತ್ಯ ಭಂಗಿಯಲ್ಲಿದೆ ಮತ್ತೊಂದು ಕೈಯಲ್ಲಿ ಮೋದಕವಿದೆ. ಶಿಲ್ಪದ ವಿಶೇಷವೆಂದರೆ ಎರಡು ದಂತಗಳು ಮುರಿದಿಲ್ಲ ಮತ್ತು ಮುಖದ ಮೇಲೆ ಮೀಸೆಯಿದೆ. ಒಂದು ಕಾಲು ಮೇಲೆತ್ತಿ ನೃತ್ಯ ಮಾಡುವಂತೆ ಕೊರೆಯಲಾಗಿದೆ. ಗಣಪತಿ ಶಿಲ್ಪಕ್ಕೆ ಯಾವುದೇ ಅಲಂಕಾರದ ಆಭರಣಗಳು ಕೆತ್ತಲಾಗಿದೆ

ಗ್ರಾಮ: ಪಸ್ತಾಪೂರ **ಶಿಲ್ಪ:** ಗಣೇಶ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ರಾಮಲಿಂಗೇಶ್ವರ ಗುಡಿ

ರಾಮಲಿಂಗೇಶ್ವರ ಗುಡಿಯ ಒಳಭಿತ್ತಿ ದೇವಕೋಷ್ಠದಲ್ಲಿ ಗಣೇಶಮೂರ್ತಿ ಶಿಲ್ಪವಿದೆ. ಹಣೆಪಟ್ಟಿ ಹೊಂದಿದ ಚಿಕ್ಕ ಕಿರೀಟ, ಕರ್ಣಕುಂಡಲ, ಉದರಕ್ಕೆ ಸರ್ಪಬಂಧ, ತೋಳ್ಬಂದಿ, ಮಣಿಕಂಠ, ಕೊರಳಾಭರಣ ಯಜ್ಞೋಪವೀತಕ್ಕೆ ಸರ್ಪ ಸುತ್ತಿದೆ. ಏಕದಂತನ ಶಿಲ್ಪವು ಚತುರ್ಭುಜಧಾರಿಯಾಗಿದ್ದು, ಹಿಂದಿನ ಕೈಯಲ್ಲಿ ಪರಶು ಮತ್ತು ಕಮಲ ಮುಂದಿನ ಎಡಗೈಯಲ್ಲಿ ಪಾತ್ರೆ ಹಿಡಿದಂತೆ ಅದರೊಳಗಿನ ಮೋದಕಗಳು, ಸೊಂಡಿಲಿನಿಂದ ಮೋದಕವನ್ನು ತೆಗೆದುಕೊಳ್ಳುವಂತಿದೆ. ಮುಂದಿನ ಬಲಗೈಯಲ್ಲಿ ಮುರಿದ ದಂತವನ್ನು ಹಿಡಿದಿದೆ. ಸವ್ಯಲಲಿತಾಸನ ಭಂಗಿಯಲ್ಲಿ ಈ ಶಿಲ್ಪವಿದ್ದು, ಪ್ರಸ್ತುತ ತ್ರುಟಿತವಾಗಿದೆ.

ಗ್ರಾಮ: ಮೋಘಾ **ಶಿಲ್ಪ:** ಗಣೇಶ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ರಾಮಲಿಂಗೇಶ್ವರ

ಗುಡಿಯ ಒಳಭಾಗದ ದೇವಕೊಷ್ಠದಲ್ಲಿ ಗಣಪತಿಯ ಶಿಲ್ಪವಿದೆ. ಕಿರೀಟಧಾರಿ ಅಭಯ ಹಸ್ತ, ಮೋದಕ ಹಸ್ತ, ಮೋದಕದ ಮೇಲೆ ಸೊಂಡಿಲು ಇಟ್ಟಿದೆ. ಹಿಂದಿನ ಬಲಗೈ ಪ್ರಸ್ತುತ

ತ್ರುಟಿತ ಎಡಗೈಯಲ್ಲಿ ಕಮಲದಂತಿರುವ ಅಂಕುಶ ಸವ್ಯಲಲಿತಾಸನ ಭಂಗಿಯಲ್ಲಿದೆ. ಮಣಿಕಂಠ, ತೋಳ್ಬಂದಿ, ಉದರಲ್ಲಿ ಸರ್ಪ, ಕಾಲ್ಗಡಗ ಧರಿಸಿದೆ.

ಗ್ರಾಮ: ಮೋಘಾ **ಶಿಲ್ಪ:** ಗಣೇಶ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ರಾಮಲಿಂಗೇಶ್ವರ

ಗುಡಿಯ ಒಳಭಾಗದ ದೇವಕೋಷ್ಠದಲ್ಲಿ ಮುಕುಟ ಕಿರೀಟಧಾರಿ ಮುತ್ತಿನ ಮಣಿಯ ಹಣೆಪಟ್ಟಿಕೆ ಧರಿಸಿದಂತೆ ವಿಘ್ನೇಶ್ವರ ಶಿಲ್ಪವಿದೆ. ಹಿಂದಿನ ಕೈಯಲ್ಲಿ ಪರಶು ಮತ್ತು ಅಂಕುಶ, ಮುಂದಿನ ಎಡಗೈ ಪ್ರಸ್ತುತ ತ್ರುಟಿತ ಮೋದಕಹಸ್ತ ಬಲಗೈ ದಂತ ಹಸ್ತವಾಗಿದ್ದು ಬಲಗಾಲ ಮೇಲೆ ಇದೆ. ಬಾಹುವಲ್ಯ, ತೋಳ್ಬಂದಿ, ಮಣಿಕಂಠ, ಮೂರು ಪದರದ ಕೊರಳಹಾರ, ಸರ್ಪಬಂಧ, ಕಾಲ್ಗಡಗ ಧರಿಸಿದೆ. ಈ ಮೂರ್ತಿಶಿಲ್ಪ ಸವ್ಯಲಲಿತಾಸನ ಭಂಗಿಯಲ್ಲಿದೆ.

ಗ್ರಾಮ: ದೇಗಲ್ಮಡಿ **ಶಿಲ್ಪ:** ಗಣೇಶ

ಶಿಲೆ: ಕಪ್ಪು ಕಲ್ಲು **ಕಾಲ:** ಸು. ೧೦ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಊರ ಪ್ರವೇಶದ ಗುಡಿ

ಗಣೇಶನ ಶಿಲ್ಪ ಪ್ರಸ್ತುತ ತ್ರುಟಿತವಾಗಿದೆ. ಎಡಗೈ ಮೋದಕ ಹಸ್ತವಾಗಿದ್ದು ಬಲಗೈ ಪ್ರಸ್ತುತ ತ್ರುಟಿತವಾಗಿದೆ. ಕೊರಳಹಾರ, ಕರ್ಣಕುಂಡಲ, ಏಕದಂತ, ಕಿರೀಟಧಾರಿ, ಚತುರ್ಭುಜಧಾರಿಯಾಗಿದೆ. ಹಿಂದಿನ ಕೈಗಳಲ್ಲಿ ಶಂಖ ಮತ್ತು ಅಂಕುಶಗಳಿವೆ. ಸವ್ಯಲಲಿತಾಸನ ಭಂಗಿಯಲ್ಲಿದೆ.

ಗ್ರಾಮ: ರುಮ್ಮನಗೂಡು **ಶಿಲ್ಪ:** ಗಣಪತಿ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೯ನೇ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಅಗಸಿ ಬಳಿ

ದ್ವಿಬಾಹು ಗಣಪತಿ ಪುರಾತನವಾದ ಶಿಲ್ಪವಾಗಿದೆ. ಕಿರೀಟ ಮುಕುಟ, ಕುತ್ತಿಗೆಗೆ ಮುತ್ತಿನ ಹಾರ ಧರಿಸಿದೆ. ಎಡಗೈ–ಮೋದಕ ಹಸ್ತವಾಗಿದೆ. ಬಲಗೈಯಲ್ಲಿ ಭಗ್ನ ದಂತವಿದ್ದು, ಸುಖಾಸನದಲ್ಲಿದ್ದು ಕಾಲಿಗೆ ಕಾಲ್ಗಡಗ ಧರಿಸಿದೆ.

ಇಂತಹ ಶಿಲ್ಪಗಳು ರಾಯ್‌ಕೊಡ್, ಶಿರೋಳ್ಳಿ, ಸುಲೇಪೇಟೆ, ಕರಕ್‌ಮುಕ್ಲಿ ಭೂತಪೂರ ಮತ್ತು ಮಿರ್ಯಾಣದಲ್ಲಿವೆ. ರಾಯಕೋಡ್ ಹನುಮಾನ್ ಮಂದಿರದಲ್ಲಿ ದ್ವಿಬಾಹು ಗಣಪತಿ ಮೋದಕಹಸ್ತ, ದಂತಹಸ್ತವನ್ನೊಳಗೊಂಡಿದ್ದು ಸುಖಾಸನದಲ್ಲಿದೆ. ಅದರ ಕೆಳಭಾಗದಲ್ಲಿ ಲಿಪಿ ಇದೆ.

ಇತರೆ ಮೂರ್ತಿಶಿಲ್ಪಗಳು

ಸೂರ್ಯನ ಶಿಲ್ಪಗಳು

ಸ್ಥಳ: ಬಿದನೂರು **ಶಿಲ್ಪ:** ಸೂರ್ಯನಶಿಲ್ಪ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಸೂರ್ಯನ ಶಿಲ್ಪ: ಎರಡು ಕೈಯಲ್ಲಿ ಕಮಲವನ್ನು ಹಿಡಿದ ಸ್ಥಾನಿಕ ಸೂರ್ಯನ ಶಿಲ್ಪವಿದೆ. ತಲೆಯ ಹಿಂದೆ ಪ್ರಭಾವಳಿ ಕೊರೆಯಲಾಗಿದೆ. ಕಿರೀಟ, ಕರ್ಣಕುಂಡಲ, ಕೈಗಡಗ, ಮಣಿಕಂಠ, ಕೊರಳಹಾರ, ವಕ್ಷಬಂಧ, ಯಜ್ಞೋಪವೀತ, ಸೊಂಟಪಟ್ಟಿ, ಇಳಿಬಟ್ಟೆ ಧರಿಸಿದಂತೆ ಕೆತ್ತಲಾಗಿದೆ.

ಸ್ಥಳ: ಗರೂರು **ಶಿಲ್ಪ:** ಸೂರ್ಯ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೨ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಸೂರ್ಯನ ಶಿಲ್ಪ ಎರಡು ಕೈಯಲ್ಲಿ ಕಮಲವನ್ನು ಹಿಡಿದಂತೆ ಕೆತ್ತಲಾಗಿದೆ. ತಲೆ ಹಿಂದೆ ಪ್ರಭಾವಳಿಯಿದೆ. ಉಳಿದ ಭಾಗ ತ್ರುಟಿತವಾಗಿದೆ.

ಸ್ಥಳ: ಕಡಣಿ(ಕಣ್ಣಿ) **ಶಿಲ್ಪ:** ಸೂರ್ಯ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೦ನೆಯ ಶತಮಾನ.

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಶಂಕರಲಿಂಗೇಶ್ವರ ಗುಡಿ

ಗುಡಿಯ ಎದುರಿನ ದೀಪಸ್ತಂಭದ ಬಳಿಯಿರುವ ಸೂರ್ಯ ಶಿಲ್ಪವು ಎರಡು ಕೈಯಲ್ಲಿ ಕಮಲ ಹಿಡಿದು, ಸ್ಥಾನಿಕ ಭಂಗಿಯಲ್ಲಿದೆ. ಹಿಂದೆ ಪ್ರಭಾವಳಿ, ಕರ್ಣಕುಂಡಲ, ಕೊರಳಾಭರಣ, ವಕ್ಷಬಂಧ, ಯಜ್ಞೋಪವೀತ, ಕೈಗಡಗ, ಸೊಂಟಬಂಧ, ಬಾಹುವಲ್ಯ, ಕಟಿವಸ್ತ್ರ, ಕಾಲ್ಗಡಗ ಧರಿಸಿದ ಶಿಲ್ಪವಿದೆ.

ಸ್ಥಳ: ಕಡಣಿ(ಕಣ್ಣಿ) **ಶಿಲ್ಪ:** ಸೂರ್ಯ?

ಸ್ಥಿತಿ: ತ್ರುಟಿತ **ಕಾಲ:** ಸು.೧೦ನೆಯ ಶತಮಾನ

ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಹನುಮಾನ್ ಮಂದಿರ

ಸ್ಥಾನಿಕ ಶಿಲ್ಪದ ಬಲಗೈ ತೃಟಿತವಾಗಿದೆ. ಎಡಗೈಯಲ್ಲಿ ಕಮಲವಿರುವ ದ್ವಿಬಾಹು ಶಿಲ್ಪವಾಗಿದೆ. ಕಿರೀಟ, ಕರ್ಣಕುಂಡಲ, ಕೈಗಡಗ, ಕೊರಳಾಭರಣ, ಭುಜಬಂಧಿ, ಸೊಂಟಕ್ಕೆ ಬಟ್ಟೆ ಮತ್ತು ನಡುಬಂಧ, ಕಾಲ್ಗಡಗ ಧರಿಸಿರುವಂತೆ ಕೆತ್ತಲಾಗಿದೆ.

೫.೨.೬. ಇತರೆ ಶಿಲ್ಪಗಳು

ಚತುರ್ಮುಖ ಬ್ರಹ್ಮನ ಶಿಲ್ಪಗಳು

ಗ್ರಾಮ: ಮೇಳಕುಂದಾ(ಕೆ) **ಶಿಲ್ಪ:** ಚತುರ್ಮುಖ,

ಶಿಲೆ: ಕಪ್ಪುಶಿಲೆ **ಕಾಲ:** ಸು.೧೦ನೆಯ ಶತಮಾನ,

ಸ್ಥಿತಿ: ತ್ರುಟಿತ. **ದೊರೆತ ಸ್ಥಳ:** ಹನುಮಾನ್ ಮಂದಿರ

ಚತುರ್ಮುಖ ಬ್ರಹ್ಮನ ಶಿಲ್ಪವು ಕರ್ಣಕುಂಡಲ, ಕಿರೀಟಧಾರಿಯಾಗಿದೆ

ಗ್ರಾಮ: ಬೆಳಗುಂಪಾ(ಕೆ) **ಶಿಲ್ಪ:** ಚತುರ್ಮುಖ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೯ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಶಂಕರಲಿಂಗ ಗುಡಿ

ಚತುರ್ಮುಖ ಬ್ರಹ್ಮನ ಶಿಲ್ಪ ಗುಡಿಯ ಒಳಪ್ರಾಂಗಣದಲ್ಲಿದೆ. ಕಿರೀಟಧಾರಿ, ಕಿವಿಓಲೆ ಧರಿಸಿರುವ ಕೆತ್ತನೆಯಿದೆ.

ಗ್ರಾಮ: ಬಿದನೂರು **ಶಿಲ್ಪ:** ಚತುರ್ಮುಖ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಚತುರ್ಮುಖ ಬ್ರಹ್ಮನ ಶಿಲ್ಪವು ಕಿರೀಟ, ಕರ್ಣಕುಂಡಲ, ಕೊರಳಿನಾಭರಣ ಧರಿಸಿದೆ.

ಗ್ರಾಮ: ಕಡಣಿ(ಕಣ್ಣಿ) **ಶಿಲ್ಪ:** ಚತುರ್ಮುಖ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೦ನೆಯ ಶತಮಾನ

ಸ್ಥಿತಿ: ತೃಟಿತ **ದೊರೆತ ಸ್ಥಳ:** ಹನುಮಾನ್ ಮಂದಿರ

ಚತುರ್ಮುಖ ಬ್ರಹ್ಮನ ಶಿಲ್ಪದಂತಿರುವ ಶಿಲ್ಪ ಕಿರೀಟಧಾರಿಯಾಗಿದೆ. ಕರ್ಣಕುಂಡಲ ಧರಿಸಿದ್ದು ಕುತ್ತಿಗೆಯವರೆಗೆ ಮಾತ್ರ ಶಿಲ್ಪದ ಕೆತ್ತನೆಯಿದೆ.

ಗ್ರಾಮ: ಇಟಗಾ(ಬಿ) **ಶಿಲ್ಪ:** ಚತುರ್ಮುಖ ಬ್ರಹ್ಮ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಚತುರ್ಮುಖ ಬ್ರಹ್ಮನ ಶಿಲ್ಪವಿದೆ. ಕಿರೀಟ ಮತ್ತು ಕಿವಿಓಲೆಯ ಕೆತ್ತನೆಯಿದೆ.

ಗ್ರಾಮ: ಸಿರನೂರು **ಶಿಲ್ಪ:** ಚತುರ್ಮುಖ,

ಸ್ಥಿತಿ: ತ್ರುಟಿತ **ಕಾಲ:** ಸು.೧೧ನೆಯ ಶತಮಾನ

ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಹನುಮಾನ್ ಮಂದಿರ

ಚತುರ್ಮುಖ ಬ್ರಹ್ಮನ ಶಿಲ್ಪ ಹನುಮಾನ್ ಗುಡಿಯ ಬಳಿ ದೊರಕಿದೆ. ಕಿರೀಟ, ಕರ್ಣಕುಂಡಲ ಧರಿಸಿದಂತೆ ಕೆತ್ತಲಾಗಿದೆ.

ನಾಗ ಶಿಲ್ಪಗಳು

ಗ್ರಾಮ: ಮೇಳಕುಂದಾ(ಕೆ) **ಶಿಲ್ಪ:** ನಾಗಶಿಲ್ಪ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಭೋಗಲಿಂಗೇಶ್ವರ ಗುಡಿ

ಐದು ಹೆಡೆಯ ನಾಗಶಿಲ್ಪದ ಕೆತ್ತನೆ ಆಲದಮರದ ಕೆಳಗಿಡಲಾಗಿದೆ. ಪಕ್ಕದಲ್ಲಿಯೇ ಎರಡು ನಾಗಶಿಲ್ಪಗಳು ಐದು ಹೆಡೆಯ ಮತ್ತೊಂದು ಒಂದು ಹೆಡೆಯ ನಾಗ ಒಂದಕ್ಕೊಂದು ಸುತ್ತಿಕೊಂಡಂತೆ ಕೆತ್ತಲಾಗಿದೆ.

ಗ್ರಾಮ: ಬಿದನೂರು **ಶಿಲ್ಪ:** ನಾಗಶಿಲ್ಪ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಅಗಸಿ

ನಾಗಶಿಲ್ಪಗಳು: ಮೂರು ಹೆಡೆಯ ಎರಡು ನಾಗಶಿಲ್ಪ, ಒಂದು ಹೆಡೆಯ ನಾಗಶಿಲ್ಪ, ಒಂದು ಹೆಡೆಯ ಪರಸ್ಪರ ಸುತ್ತಿಕೊಂಡಂತಿರುವ ನಾಗಶಿಲ್ಪ, ರೇಖಾಕೃತಿಯಲ್ಲಿ ಕೊರೆದ ನಾಗಶಿಲ್ಪಗಳು ಕಪ್ಪುಶಿಲೆಯಲ್ಲಿವೆ. ಸು.೧೨-೧೩ನೆಯ ಶತಮಾನದ್ದಾಗಿವೆ.

ಗ್ರಾಮ: ಇಟಗಾ(ಬಿ) **ಶಿಲ್ಪ:** ನಾಗಶಿಲ್ಪ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಈಶ್ವರ ಗುಡಿ

ದೇವಾಲಯದ ಭಿತ್ತಿ ಭಾಗದಲ್ಲಿರುವ ಪುರುಷ ನಾಗಶಿಲ್ಪ ಭಲ್ಲೆ ಮತ್ತು ಖಡ್ಗ ಹಿಡಿದಿರುವ ಕೆತ್ತನೆಯಿದೆ. ಏಳು ಹೆಡೆಯ ನಾಗ ಪ್ರಭೆಯಾಗಿ ತಲೆಹಿಂದೆ ಕೆತ್ತಲ್ಪಟ್ಟಿದೆ. ಕಿರೀಟಧಾರಿ, ಕರ್ಣಕುಂಡಲ, ಕೊರಳಿನ ಹಾರ, ಯಜ್ಞೋಪವೀತ, ಕೈಗಡಗ ಧರಿಸಿದಂತೆ ಕೆತ್ತಲಾಗಿದೆ. ಕೆಳಭಾಗ ನಾಗ ಕೆತ್ತನೆ ಮೇಲ್ಭಾಗ ಮನುಷ್ಯನ ಕೆತ್ತನೆಯಿದೆ. ಭಿತ್ತಿಯಲ್ಲಿ ಐದು ಹೆಡೆಯ ಮತ್ತು ಒಂದು ಹೆಡೆಯ ನಾಗಶಿಲ್ಪವಿದೆ. ಐದು ಹೆಡೆಯ ಮತ್ತೊಂದು ಒಂದು ಹೆಡೆಯ ನಾಗಶಿಲ್ಪಗಳಿವೆ. ಗುಡಿಯ ಪ್ರಾಂಗಣದಲ್ಲಿ ಕಪ್ಪುಶಿಲೆಯಲ್ಲಿರುವ ಒಂದು ಹೆಡೆಯ ನಾಗಶಿಲ್ಪದ ಕೆತ್ತನೆ ಬಿದ್ದಿದೆ.

ಗ್ರಾಮ: ಬೆಳಗುಂಪಾ(ಕೆ) **ಶಿಲ್ಪ:** ನಾಗಶಿಲ್ಪ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೯ನೆಯ ಶತಮಾನ

ಸ್ಥಿತಿ: ತೃಟಿತ **ದೊರೆತ ಸ್ಥಳ:** ಶಂಕರಲಿಂಗ ಗುಡಿ

ಏಳು ಹೆಡೆಯ ಮತ್ತು ಐದು ಹೆಡೆಯ ನಾಗಶಿಲ್ಪಗಳ ಕೆತ್ತನೆ ಶಂಕರಲಿಂಗ ಗುಡಿ ಆವರಣದಲ್ಲಿದೆ.

ಗ್ರಾಮ: ತಡಕಲ್ಲು **ಶಿಲ್ಪ:** ನಾಗಶಿಲ್ಪ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಐದು ಹೆಡೆಯ ನಾಗ ಶಿಲ್ಪವು ಒಂದು ಹೆಡೆಯ ನಾಗಕ್ಕೆ ಸುತ್ತಿಕೊಂಡಿದೆ. ಇನ್ನೊಂದು ನಾಗವು ಐದು ಹೆಡೆಯದ್ದು ಮತ್ತೊಂದು ಐದು ಹೆಡೆಯ ನಾಗಶಿಲ್ಪಕ್ಕೆ ಸುತ್ತಿಕೊಂಡಿವೆ. ಮತ್ತೊಂದು ನಾಗ ಶಿಲ್ಪ ಐದು ಹೆಡೆಯದ್ದಾಗಿದೆ. ಕಪ್ಪುಶಿಲೆಯಲ್ಲಿ ಕೆತ್ತಲಾಗಿದೆ.

ಗ್ರಾಮ: ಸಿರನೂರು **ಶಿಲ್ಪ:** ನಾಗಶಿಲ್ಪ

ಸ್ಥಿತಿ: ತ್ರುಟಿತ **ಕಾಲ:** ಸು.೧೦ನೆಯ ಶತಮಾನ

ಶಿಲೆ: ಕಪ್ಪುಶಿಲೆ **ದೊರೆತ ಸ್ಥಳ:** ಈಶ್ವರಲಿಂಗ ಗುಡಿ

ನಾಗಶಿಲ್ಪ ಐದು ಹೆಡೆಯ ಶಿಲ್ಪಕ್ಕೆ ಮೂರು ಹೆಡೆಯ ನಾಗಶಿಲ್ಪ ಸುತ್ತಿಕೊಂಡಂತೆ ಕೆತ್ತಲಾಗಿದೆ. ಮತ್ತೊಂದು ತ್ರುಟಿತ ನಾಗಶಿಲ್ಪವಿದೆ.

ಗ್ರಾಮ: ಸಣ್ಣೂರು ಶಿಲ್ಪ: ನಾಗಶಿಲ್ಪ
ಶಿಲೆ: ಕಪ್ಪುಶಿಲೆ ಕಾಲ: ಸು.೧೧ನೆಯ ಶತಮಾನ
ಸ್ಥಿತಿ: ತ್ರುಟಿತ ದೊರೆತ ಸ್ಥಳ: ರಾಮಲಿಂಗೇಶ್ವರ ಮಂದಿರ

ದೇವಾಲಯದ ಮುಂಭಾಗದಲ್ಲಿರುವ ನಾಗಶಿಲ್ಪವು ಒಂದು ಹೆಡೆಯದಾಗಿದ್ದು ಎರಡು ಸುರುಳಿ ಸುತ್ತಿಕೊಂಡಿವೆ. ಕೆಂಪು-ಬಿಳುಪು ಮಿಶ್ರ ಕಲ್ಲಿನಲ್ಲಿ ಕೆತ್ತಲಾಗಿದೆ. ಊರ ಅಗಸಿಯ ಹನುಮಾನ್ ಮಂದಿರದ ಮುಂದಿರುವ ಕಪ್ಪು ಶಿಲೆಯ ನಾಗಶಿಲ್ಪವು ಏಳು ಹೆಡೆಯಲ್ಲಿದೆ. ಸು.೯ನೆಯ ಶತಮಾನದ್ದಾಗಿದೆ.

ಗ್ರಾಮ: ಮಳಿನಿ ಶಿಲ್ಪ: ನಾಗಶಿಲ್ಪಗಳು
ಶಿಲೆ: ಕಪ್ಪುಕಲ್ಲು ಕಾಲ: ಸು.೧೦ನೆಯ ಶತಮಾನ
ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಗುಡಿ

ನಾಗಶಿಲ್ಪಗಳು ಒಂದು ಹೆಡೆಯ, ಐದು ಹೆಡೆಯ ನಾಗಶಿಲ್ಪಗಳನ್ನು ಕೆತ್ತಲಾಗಿದೆ.

ಗ್ರಾಮ: ಹಾಗರಗುಂಡಿಗೆ ಶಿಲ್ಪ: ನಾಗಶಿಲ್ಪ
ಶಿಲೆ: ಕಪ್ಪು ಕಲ್ಲು ಕಾಲ: ಸು.೧೨ನೆಯ ಶತಮಾನ
ಸ್ಥಿತಿ: ಕನಿಷ್ಠ ದೊರೆತ ಸ್ಥಳ: ಹನುಮಾನ್ ಗುಡಿ

ನಾಗಶಿಲ್ಪವು ಏಳು ಹೆಡೆಯ ಮತ್ತು ಮೂರು ಹೆಡೆಯ ನಾಗಶಿಲ್ಪಗಳು ಒಂದಕ್ಕೊಂದು ಸುತ್ತಿಕೊಂಡಿವೆ. ಎತ್ತರವಾದ ಬೃಹತ್ ಕೆತ್ತನೆಯಿದೆ.

ಗ್ರಾಮ: ಹುಣಸಿ ಹಡಗಲಿ ಶಿಲ್ಪ: ನಾಗಶಿಲ್ಪ,
ಶಿಲೆ: ಒರಟಾದ ಕಪ್ಪು ಕಲ್ಲು ಕಾಲ: ಸು೯ನೆಯ ಶತಮಾನ
ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಗುಡಿ

ಆಯುಧಧಾರಿ, ಕಿರೀಟ ಮೇಲೆ ಒಂಭತ್ತು ಮತ್ತು ಐದು ಹೆಡೆಯುಳ್ಳ ಗಂಡು ಮತ್ತು ಹೆಣ್ಣು ನಾಗಗಳು ಪರಸ್ಪರ ಸುತ್ತಿಕೊಂಡಿವೆ.

ಗ್ರಾಮ: ಬೋಳೆವಾಡ ಶಿಲ್ಪ: ನಾಗಶಿಲ್ಪಗಳು,
ಶಿಲೆ: ಕಪ್ಪು ಕಲ್ಲು ಕಾಲ: ಸು.೧೧-೧೨ನೆಯ ಶತಮಾನ
ಸ್ಥಿತಿ: ತ್ರುಟಿತ ದೊರೆತ ಸ್ಥಳ: ಭೋಗಲಿಂಗೇಶ್ವರ ಗುಡಿ

ಒಂದಕ್ಕೊಂದು ಸುತ್ತಿಕೊಂಡ ಒಂದು ಹೆಡೆಯ ನಾಗಶಿಲ್ಪಗಳು, ಒಂಭತ್ತು ಹೆಡೆಯ ನಾಗಶಿಲ್ಪ, ಐದು ಹೆಡೆಯ ನಾಗಕ್ಕೆ ಒಂದು ಹೆಡೆಯ ನಾಗ ಸುತ್ತಿಕೊಂಡಂತಿರುವ ಶಿಲ್ಪವಿದೆ.

ಗ್ರಾಮ: ಹುಣಸಿ ಹಡಗಲಿ ಶಿಲ್ಪ: ನಾಗಶಿಲ್ಪ,

ಶಿಲೆ: ಒರಟಾದ ಕಪ್ಪು ಕಲ್ಲು ಕಾಲ: ಸು.೯ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಧರಣೇಂದ್ರ ಪದ್ಮಾವತಿದೇವಿ ಜೈನ ಬಸದಿ

ಏಳು ಹೆಡೆಯ ನಾಗಶಿಲ್ಪವಿದೆ. ಕಪ್ಪುಶಿಲೆಯಲ್ಲಿ ಕೆತ್ತಲಾಗಿದೆ. ಎಡಕ್ಕೆ ಒಂದು ಹೆಡೆಯ ನಾಗಶಿಲ್ಪವಿದೆ. ಬಲಕ್ಕೆ ಜೈನ ಯತಿಯೂ ಧ್ಯಾನಕ್ಕೆ ಕುಳಿತ ಭಂಗಿಯಲ್ಲಿ ತೀರಾ ಚಿಕ್ಕದಾಗಿ ಕೆತ್ತಲಾಗಿದೆ.

ಪಸ್ತಾಪೂರುದ ರಾಮಲಿಂಗದೇವ ಗುಡಿಯಲ್ಲಿ ಸುಮಾರು ೧೧ನೇ ಶತಮಾನದ ನಾಗ ಶಿಲ್ಪವಿದೆ. ಐದು ಹೆಡೆಯ ಒಂದು ನಾಗರ ಶಿಲ್ಪ ಬಾಲದ ಮೇಲೆ ಅಂಕು-ಡೊಂಕಾಗಿ ನಿಂತಿದೆ. ತಲೆಯ ಮೇಲೆ ಐದು ಚಿಕ್ಕ ವಜ್ರಗಳ ಕಿರೀಟಗಳಿವೆ.

ಕರಕಮುಕ್ಕಿಯ ಅರಳಿಗಿಡ ಕಟ್ಟೆಯ ಬಳಿ ಸುಮಾರು ೧೦ನೇ ಶತಮಾನದ ನಾಗಶಿಲ್ಪವಿದೆ. ದ್ವಿಪಾದುಕೆಗಳುಳ್ಳ ನಾಗಶಿಲ್ಪವಾಗಿದೆ.[೧೧] ಏಳು ಹೆಡೆಯ ಮತ್ತು ಒಂದು ಹೆಡೆಯ ಹಾವುಗಳು ಒಂದಕ್ಕೊಂದು ಸುರಳಿ ಸುತ್ತಿದಂತೆ, ಶಿರದಿಂದ ಸೊಂಟದವರೆಗೆ ಹಾವಿನ ರೂಪದಲ್ಲಿವೆ. ಸೊಂಟದಿಂದ ಪಾದಗಳವರೆಗೆ ಮಾನವ ರೂಪವಿದೆ. ಅದು ದ್ವಿಪಾದಗಳಲ್ಲಿದೆ. ಉದ್ದನೆಯ ಧೋತಿ, ಕಟಿವಸ್ತ್ರ, ಕುಚಹಾರ, ಕಾಲ್ಗಡಗ ಧರಿಸಿದೆ. ಇಕ್ಕೆಲಗಳಲ್ಲಿ ಚಿಕ್ಕ ನಾಗಶಿಲ್ಪಗಳಿವೆ. ರುಮ್ಮನಗೂಡಿನ ರಾಮಲಿಂಗೇಶ್ವರ ದೇವಾಲಯದ ಪುಷ್ಕರಣಿ ಕಟ್ಟೆಯ ಮೇಲೆ ಐದು ಹೆಡೆಯ ನಾಗಶಿಲ್ಪವಿದೆ. ಇದು ಕಪ್ಪು ಶಿಲೆಯಲ್ಲಿದೆ.

ರಟ್ಕಲ್‌ನ ಬಂಕೇಶ್ವರ ದೇವಾಲಯದೊಳಗೆ ಸುಮಾರು ೩.೫ ಅಡಿ ಎತ್ತರದ ಐದು ಹೆಡೆಯ ಮತ್ತು ಒಂದು ಹೆಡೆಯ ಹಾವು ಎರಡು ಒಂದಕ್ಕೊಂದು ಸರಪಳಿಯಂತೆ ಸುತ್ತಿಕೊಂಡಿದೆ. ಪಸ್ತಾಪುರದ ರಾಮಲಿಂಗೇಶ್ವರ ದೇವಾಲಯದ ದೇವಕೋಷ್ಠದ ಮೇಲ್ಭಾಗದಲ್ಲಿ ಅರ್ಧನಾರಿ ಸ್ವರೂಪ ಉಳಿದರ್ಧ ನಾಗ ಸ್ವರೂಪದಲ್ಲಿದೆ. ನಾಗಕನ್ಯೆ ಕಿರೀಟಧಾರಿಣಿ ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಚೂರಿ ಹಿಡಿದಂತೆ ತೋರುತ್ತದೆ. ಇದು ಸ್ವಲ್ಪ ತ್ರುಟಿತವಾಗಿದೆ. ಕೊರಳಹಾರ, ತೋಳ್ಬಂದಿ, ಕೈಬಳೆ ಧರಿಸಿದೆ. ಗೊಟ್ಟಂಗೊಟ್ಟಿಯ ನಾಗಶಿಲ್ಪ ರುಂಡ ಮಾತ್ರ ಉಳಿದಿದ್ದು ತ್ರುಟಿತವಾಗಿದೆ. ಚಿಕ್ಕ ಕಿರೀಟಧಾರಿ ನಾಗಶಿಲ್ಪವಿದೆ. ಇನ್ನೊಂದು ಅಲ್ಲಿಯೇ ಸುಮಾರು ಮೂರು ಅಡಿ ಎತ್ತರದ ಒಂದೇ ನಾಗಶಿಲ್ಪವಿದೆ. ಇದರ ಕಾಲ ಸುಮಾರು ೧೦ನೇ ಶತಮಾನವಾಗಿದೆ. ಚೇಂಗಟಾದ ಸೋಮೇಶ್ವರ ಗುಡಿಯ ಬಳಿ ಜೋಡಿ ನಾಗಶಿಲ್ಪವಿದೆ. ರಾಮತೀರ್ಥದ ಜೋಡಿ ನಾಗಶಿಲ್ಪ ಈಶ್ವರ ದೇವಾಲಯದ ಬಳಿ ಇದೆ. ಬೃಹತ್ ಆಕಾರವಾಗಿದೆ. ಈ ಶಿಲ್ಪ ಶಿರೋಮಣಿ ಕಿರೀಟ ಧರಿಸಿದಂತಿದೆ. ಸುಮಾರು ಎಂಟು ಅಡಿ ಎತ್ತರವಾಗಿದೆ.

ಕೇಶಾವರ್(ಗಡಿ) ಊರ ಹೊರಗಿನ ಸಿದ್ದಪ್ಪನ ಗುಡಿ ಬಳಿ ಏಳುಹೆಡೆಯ ನಾಗ ಮತ್ತು ಒಂದು ಹೆಡೆಯ ನಾಗದೊಂದಿಗೆ ಸೇರಿ ಸುತ್ತಿಕೊಂಡು ಬಾಲದ ಮೇಲೆ ನಿಂತಿದೆ. ಈ ಗುಡಿಯ

ಬಲಕ್ಕೆ ಇರುವ ಇನ್ನೊಂದು ಸು.೫ ಅಡಿ ಎತ್ತರದ ಏಳು ಹೆಡೆಯ ನಾಗಶಿಲ್ಪ ಬಾಲದ ಮೇಲೆ ನಿಂತಿದೆ. ಇವು ಕಪ್ಪು ಶಿಲೆಯಲ್ಲಿವೆ. ಮಿರ‍್ಯಾಣದ ತಾಂಡೂರು ರಸ್ತೆ ಬಳಿಯ ಪಾಪನಾಥ ಗುಡಿಯ ಪ್ರಾಂಗಣದಲ್ಲಿ ಏಳು ನಾಗಶಿಲ್ಪಗಳಿವೆ. ಅದರಲ್ಲಿ ಎರಡು ನಾಗಶಿಲ್ಪಗಳು ಸುರುಳಿ ಸುತ್ತಿಕೊಂಡಂತಿವೆ. ಇವುಗಳ ಪಕ್ಕದಲ್ಲಿರುವ ಇನ್ನೊಂದು ನಾಗಶಿಲ್ಪ ಆಯುಧಧಾರಿಣಿ ಬಲಗೈಯಲ್ಲಿ ಖಡ್ಗ ಎಡಗೈಯಲ್ಲಿ ಗುರಾಣಿ ಹಿಡಿದಿದೆ. ಮೇಲಿನ ಅರ್ಧಭಾಗ ನಾರಿ ಸ್ವರೂಪ ಕೆಳಗಿನ ಇನ್ನರ್ಧ ಭಾಗ ಹಾವಿನ ಸ್ವರೂಪವಿದೆ. ಹಿಂದೆ ಏಳು ಹೆಡೆಯ ಪ್ರಭಾವಳಿ(ತಲೆ ಮೇಲೆ) ಇದೆ. ಇದರ ಪಕ್ಕದ ಇನ್ನೊಂದು ನಾಗಶಿಲ್ಪ ಎಡಗೈಯಲ್ಲಿ ಗುರಾಣಿ ಬಲಗೈಯಲ್ಲಿ ಖಡ್ಗ ಹಿಡಿದಿದೆ. ಮೇಲಿನ ಅರ್ಧಭಾಗ ನಾರಿ ಸ್ವರೂಪ ಕೆಳಭಾಗ ನಾಗ ಸ್ವರೂಪದಲ್ಲಿದೆ. ತಲೆಯ ಪ್ರಭಾವಳಿಯಲ್ಲಿ ಏಳು ಹೆಡೆಯ ನಾಗವಿದೆ. ಇಂತಹ ಶಿಲ್ಪಗಳನ್ನು ಇಲ್ಲಿ ಜಲಕನ್ಯೆಯರೆಂದು ಕರೆಯುತ್ತಾರೆ. ಅದರ ಪಕ್ಕದಲ್ಲಿ ಇದೇ ಮಾದರಿಯ ನಾಗಶಿಲ್ಪವಿದೆ. ಮಿರ‍್ಯಾಣದ ಮೂರು ದೇವರ ಗುಡಿಯಲ್ಲಿ ಒಂದು ಗರ್ಭಗುಡಿಯ ಬಾಗಿಲ ಬಳಿ ನಾಗಶಿಲ್ಪವಿದೆ. ಅರ್ಧನಾರಿ ಇನ್ನರ್ಧ ಭಾಗದಲ್ಲಿ ಹಾವಿನ ಬಾಲವಿದೆ(ಜಲಕನ್ಯೆ). ಒಂದು ಕೈಯಲ್ಲಿ ಖಡ್ಗ, ಇನ್ನೊಂದು ಕೈಯಲ್ಲಿ ಗುರಾಣಿ ಹಿಡಿದಿದೆ. ಕಿರೀಟಧಾರಿ, ಕರ್ಣಕುಂಡಲ, ಕೊರಳಹಾರ, ತೋಳ್ಬಂದಿ, ಬಳೆ ಧರಿಸಿದೇ ತಲೆಯ ಮೇಲೆ ಮೂರು ಹೆಡೆ ಸರ್ಪ ಹೆಡೆಯೆತ್ತಿದೆ.

* ಕೂಡಹಳ್ಳಿಯಲ್ಲಿ ಹನುಮಾನ್ ಮಂದಿರದ ಬಳಿ ಅರ್ಧನಾರಿ ಇನ್ನರ್ಧ ಹಾವಿನ ಸ್ವರೂಪ ಹೊಂದಿದ ಆಯುಧಧಾರಿಣಿ ಶಿಲ್ಪವಿದೆ. ಹಲ್‌ಚೇರಾ ಈಶ್ವರ ಗುಡಿಯಲ್ಲಿ ಒಂದು ಹೆಡೆಯ ನಾಗಶಿಲ್ಪವಿದೆ. ಸುರುಳಿ ಜೋಡಿ ನಾಗಶಿಲ್ಪವು ವಜ್ರ ಮುಕುಟಧಾರಿಯಾಗಿದ್ದು, ಇಕ್ಕೆಲಲ್ಲಿ ಚಿಕ್ಕನಾಗಗಳ ಶಿಲ್ಪಗಳಿವೆ. ಮತ್ತೊಂದು ದ್ವಾರದ ಬಳಿ ವಜ್ರ ಕಿರೀಟಧಾರಿ ಏಳು ಹೆಡೆಯ ನಾಗಶಿಲ್ಪ ಬಾಲದ ಮೇಲೆ ನಿಂತಿದೆ. ಸುಲೇಪೇಟೆಯ ವೀರಭದ್ರೇಶ್ವರ ದೇವಾಲಯದ ದೇವಕೋಷ್ಠದಲ್ಲಿ ನಾಗದೇವ ಮತ್ತು ದೇವಿಯ ಮೇಲ್ಭಾಗ ಮಾನವ, ಸೊಂಟದಿಂದ ಕೆಳಭಾಗ ಸುರುಳಿ ಸುತ್ತಿದ ಹಾವಿನ ರೂಪ ಹೊಂದಿದ ನಾಗ ದಂಪತಿ ಶಿಲ್ಪವಿದೆ. ಹಿಂದಿನ ಪ್ರಭಾವಳಿಯಲ್ಲಿ ಏಳುಹೆಡೆ ನಾಗರ ಶಿಲ್ಪವಿದೆ. ಕಿರೀಟಧಾರಿ ನಾಗಿಣಿ ಸಂಕೋಚಧಾರಿ ಮುಖದಿಂದ ಕೂಡಿದೆ. ನಾಗನ ಬಲಗೈಯಲ್ಲಿ ಖಡ್ಗವಿದೆ ಮತ್ತು ಎಡಗೈಯಿಂದ ನಾಗಿಣಿಯ ಎಡಭುಜವನ್ನು ಬಳಸಿಕೊಂಡಿದೆ. ನಾಗಿಣಿ ಭಲ್ಯೆ? ಹಿಡಿದಂತೆ ತೋರುತ್ತದೆ. ಎದೆಹಾರ, ಕಂಠಹಾರ, ಸ್ತನಹಾರ, ಕರ್ಣಕುಂಡಲ, ನಾಗಿಣಿ ಕಿರೀಟ ಧರಿಸಿದಂತೆ ಕೆತ್ತಿದೆ.

ಗ್ರಾಮ: ಬೇಲೂರು **ಶಿಲ್ಪ:** ಇತರೆ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧-೧೨ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಭೋಗಲಿಂಗೇಶ್ವರ ಗುಡಿ

ಶಿವಲಿಂಗವು ಕಪ್ಪು ಶಿಲೆಯಲ್ಲಿದೆ. ಲಿಂಗ ಪೀಠವಿದೆ. ಅದರ ಮೇಲೆ ದುಂಡಗಿನ ಕಪ್ಪು ಶಿಲೆಯಿಡಲಾಗಿದೆ. ಕಪ್ಪು ಶಿಲೆಯ ನಂದಿ ಒಂದಕ್ಕೆ ಕೊಂಬುಗಳಿಲ್ಲ. ಕುತ್ತಿಗೆಗೆ ಗಂಟೆಯಿದೆ.

ಕುಳಿತ ನಂದಿಯ ಮುಂದೆ ಚಿಕ್ಕದಾದ ಶಿವಲಿಂಗವಿದೆ. ಇನ್ನೊಂದು ನಂದಿಗೆ ಕೊಂಬುಗಳಿವೆ. ಕುತ್ತಿಗೆ ಗಂಟೆಯಿದೆ. ಎರಡು ನಂದಿಗಳಿಗೆ ಯಾವ ಅಲಂಕಾರವಿಲ್ಲ. ಮೇಲಿನ ಕುರುಹುಗಳು ಈಶ್ವರ ದೇವಾಲಯವಿರುವುದಕ್ಕೆ ಕುರುಹುಗಳಾಗಿವೆ.

ಗ್ರಾಮ: ಅವರಾದ(ಕೆ) **ಶಿಲ್ಪ:** ಇತರೆ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಹನುಮಾನ್ ಗುಡಿಯ ಭಾಗದಲ್ಲಿ ಒಂದು ತ್ರುಟಿತ ಶಿಲ್ಪದ ತಲೆಭಾಗವಿದೆ. ಕಿರೀಟ, ಕರ್ಣಕುಂಡಲ, ಕೊರಳಾಭರಣ ಧರಿಸಿದೆ. ಮೂರು ಹೆಡೆಯ ನಾಗ ಒಂದು ಹೆಡೆಯ ನಾಗಕ್ಕೆ ಸುತ್ತಿಕೊಂಡಿದೆ. ಸಪ್ತಮಾತೃಕೆಯರ ತ್ರುಟಿತ ಶಿಲ್ಪ ಸು.೧೦ನೆಯ ಶತಮಾನದ್ದಾಗಿದ್ದು, ಕಪ್ಪು ಶಿಲೆಯಲ್ಲಿದೆ. ಗಣೇಶನ ಶಿಲ್ಪದೊಂದಿಗೆ ಸಪ್ತಮಾತೃಕೆಯರ ಶಿಲ್ಪ ಕೆತ್ತಲಾಗಿದೆ.

ಗ್ರಾಮ: ಬೋಳೆವಾಡ **ಶಿಲ್ಪ:** ಇತರೆ

ಶಿಲೆ: ಕಪ್ಪು ಕಲ್ಲು **ಕಾಲ:** ಸು.೧೧-೧೨ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಭೋಗಲಿಂಗೇಶ್ವರ ಗುಡಿ

ಸಪ್ತಮಾತೃಕೆಯರ ಶಿಲ್ಪಗಳು ತ್ರುಟಿತವಾಗಿ ಬಿದ್ದಿವೆ. ಅಧಿದೇವತೆಯ ಶಿಲ್ಪ, ಕಲ್ಲಿನ ಕೋಡ,

ಗ್ರಾಮ: ಕೇರಿಅಂಬಲಗಾ **ಶಿಲ್ಪ:** ?

ಶಿಲೆ: ಕಪ್ಪುಕಲ್ಲು **ಕಾಲ:** ಸು.೮ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಬಿಂಬಲಿಂಗೇಶ್ವರ ಗುಡಿ

ಒಂಬತ್ತು ಹೆಡೆಯ ತಲೆಯ ಮೇಲಿರುವ ಶಿಲ್ಪ? ಯಜ್ಞೋಪವೀತ, ಕರ್ಣಕುಂಡಲ, ಸೊಂಟಪಟ್ಟಿ, ಕಾಲಕಡಗ, ಕೈಕಡಗ, ಪೈಜಾಮ, ಬಾಹುವಲ್ಯ ಧರಿಸಿರುವ ಅಸ್ಪಷ್ಟ ಶಿಲ್ಪವಿದೆ. ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ. ಇಕ್ಕೆಲಗಳಲ್ಲಿ ಭಕ್ತರ ಶಿಲ್ಪಗಳಿವೆ.

ಗ್ರಾಮ: ಸೈಯದ್ ಚಿಂಚೋಳಿ **ಶಿಲ್ಪ:** ಇತರೆ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಮಂದಿರ

ಸೂರ್ಯ? ಇಕ್ಕೆಲ ಭಿತ್ತಿಗಳ ಮೇಲೆ ಐದು ಕುದುರೆಗಳ ಮೇಲೆ ನಿಂತ ಮೂರ್ತಿ ಶಿಲ್ಪವಿದೆ. ಕರ್ಣಕುಂಡಲ, ಕಿರೀಟಧಾರಿ, ಕಾಲ್ಗಡಗ ಮತ್ತು ಎರಡು ಕೈಗಳಲ್ಲಿ ಆಯುಧ? ಕಮಲ ಹಸ್ತ? ಹಿಡಿದಿರುವ ಪ್ರಸ್ತುತ ಲಿಂಗ ಪೀಠದ ಮೇಲೆ ಪ್ರತಿಷ್ಠಾಪಿಸಲ್ಪಟ್ಟಿದೆ. ಆ ಲಿಂಗ ಪೀಠವೂ ಐದು ಕುದುರೆಗಳಿಂದ ಕೆತ್ತಲ್ಪಟ್ಟಿದೆ. ಜೋಡಿ ನಾಗರಶಿಲ್ಪ ಮಂದಿರದ ಎಡಭಾಗದ ಭಿತ್ತಿಯಲ್ಲಿದೆ.

ಗ್ರಾಮ: ಶ್ರೀನಿವಾಸ ಸರಡಗಿ ಶಿಲ್ಪ: ಇತರೆ

ಶಿಲೆ: ಕಪ್ಪುಶಿಲೆ ಕಾಲ: ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಮಂದಿರ

ಇದರ ಇಕ್ಕೆಲಗಳಲ್ಲಿ ತ್ರುಟಿತ ನಂದಿ ಶಿಲ್ಪಗಳಿವೆ. ಎರಡು ಮುಕ್ಕೊಡೆಯ ತ್ರುಟಿತ ಶಿಲ್ಪಗಳ ಮಧ್ಯೆ ನೃತ್ಯ ಮಾಡುತ್ತಿರುವ ಶಿಲ್ಪವೊಂದು ಅಸ್ಪಷ್ಟವಾಗಿದೆ. ಹನುಮಾನ್ ಮಂದಿರದ ಹಿಂದಿನ ಭಾಗಕ್ಕೆ ತ್ರುಟಿತ ಗಣಪತಿ ಶಿಲ್ಪ, ತ್ರುಟಿತ ಚತುರ್ಭುಜ ಸ್ಥಾನಿಕ ಶಿಲ್ಪವಿದೆ. ಊರೊಳಗೆ ಒಂದು ಮನೆಯಲ್ಲಿ ಹಲವು ತ್ರುಟಿತ ಶಿಲ್ಪಗಳಿವೆ. ಭುವನೇಶ್ವರಿ, ತ್ರುಟಿತ ಪಾದಗಳು, ತಪಸ್ಸಿಗೆ ಕುಳಿತ ಯತಿ? ನಾಗಶಿಲ್ಪ, ಜೈನ ಮುಕ್ಕೊಡೆ ಧರಿಸಿದ ರುಂಡ(ತ್ರುಟಿತ), ಅಸ್ಪಷ್ಟ ತ್ರುಟಿತ ಖಡ್ಗ ಹಿಡಿದ ಕುಳಿತ ಭಂಗಿಯ ಶಿಲ್ಪ. ಇವುಗಳೆಲ್ಲವು ಕೆಂಪು ಮಿಶ್ರಿತ ಕಲ್ಲುಗಳಿಂದ ಕೆತ್ತಲ್ಪಟ್ಟಿವೆ. ಇವು ರಾಷ್ಟ್ರಕೂಟರ ಕಾಲದ್ದಾಗಿವೆ. ಸು.೯ನೆಯ ಶತಮಾನದ್ದಾಗಿವೆ. ಕಪ್ಪುಶಿಲೆಯ ವೀರಗಲ್ಲು ತ್ರುಟಿತವಾಗಿದೆ. ಕಪ್ಪುಶಿಲೆಯಲ್ಲಿ ಚಿಕ್ಕದಾದ ವೀರಭದ್ರೇಶ್ವರ ಮೂರ್ತಿಯಿದೆ. ಸು.೧೧ನೆಯ ಶತಮಾನದ್ದಾಗಿವೆ. ಕೆಳ ಅಗಸಿ ಎದುರು ಹನುಮಾನ ದೇವಾಲಯವಿದೆ. ಅದರಲ್ಲಿ ಶಿವಲಿಂಗವಿದೆ. ನಾಗಶಿಲ್ಪಗಳು, ಜೋಡಿ ಪಾದಗಳು, ಹನುಮಾನ್ ಶಿಲ್ಪ, ವೆಯ್ಯಾವಳಿ, ರಾಮಲಿಂಗೇಶ್ವರ ಗುಡಿ ಪ್ರಸ್ತುತ ಅವಸಾನವಾಗಿದೆ. ಅದರೋಳಗಿನ ಮೂರ್ತಿಗಳು ಮಾತ್ರ ಉಳಿದಿವೆ. ಶಿವಲಿಂಗವಿದೆ. ಪತಿ-ಪತ್ನಿಯರ ಶಿಲ್ಪ. ವೀರಭದ್ರೇಶ್ವರ ಮೂರ್ತಿ? ಕಪ್ಪುಶಿಲೆಯಲ್ಲಿ ಕೆತ್ತಿದೆ. ಅಭಯಹಸ್ತ, ವರದ ಹಸ್ತ, ಹಿಂದಿನ ಕೈಗಳು ಅಸ್ಪಷ್ಟವಾಗಿವೆ. ಸು.೧೧ನೆಯ ಶತಮಾನದವುಗಳಾಗಿವೆ

ಗ್ರಾಮ: ಸಿರನೂರು ಶಿಲ್ಪ: ಬಾಗಿಲವಾಡ ದ್ವಾರಪಾಲಕ

ಶಿಲೆ: ಕಪ್ಪುಶಿಲೆ ಕಾಲ: ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಮಂದಿರ

ಚತುರ್ಬಾಹು ದ್ವಾರಪಾಲಕನ ಶಿಲ್ಪ ಆಯುಧ ಹಿಡಿದು? ಗದೆ, ಶಂಖ? ಚಕ್ರ? ಕೆತ್ತನೆಯಿದೆ. ಕರ್ಣಕುಂಡಲ, ಕೊರಳಾಭರಣ, ವಕ್ಷಬಂಧ, ಬಾಹುವಲ್ಯ, ಸೊಂಟಬಂಧ, ಕುಚಹಾರ, ಯಜ್ಞೋಪವೀತ ಧರಿಸಿದಂತೆ ಕೆತ್ತಲಾಗಿದೆ.

ಗ್ರಾಮ: ಹಾಗರಗುಂಡಿಗೆ ಶಿಲ್ಪ: ಇತರೆ

ಶಿಲೆ: ಕಪ್ಪು ಕಲ್ಲು ಕಾಲ: ಸು.೯ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಊರೋಳಗೆ

ಲಕ್ಕಮ್ಮನ ಗುಡಿಯಲ್ಲಿ ಯಕ್ಷಿಣಿ?- ಲಕ್ಷ್ಮಿ? ಮೂರ್ತಿಯಿದೆ. ಊರಿನ ಕೆಲಭಾಗಗಳಲ್ಲಿ ತ್ರುಟಿತ ದೇವಾಲಯದ ಭಾವಣಿಯ ಫಲಕಗಳು, ಕಪ್ಪುಕಲ್ಲಿನ ಗೋಡೆಯ ಭಾಗಗಳು, ಅಷ್ಟದಿಕ್ಪಾಲಕರ ಕೆತ್ತನೆಗಳು, ವೆಯ್ಯಾವಳಿಗಳು ಶಿವ ಮತ್ತು ಪಾರ್ವತಿ ನಂದಿ ಸವಾರರಾಗಿರುವ ಸುತ್ತಲೂ ಮುತ್ತಿನ ಹಾರದ ಕೆತ್ತನೆಯಿರುವ ಶಿಲ್ಪಗಳು ದೊರಕಿವೆ. ತ್ರುಟಿತ ಕುರುಹುಗಳು ಹಾಗರಗುಂಡಗಿ

ಅತ್ಯಂತ ಪ್ರಾಚೀನ ಜೈನ ಮತ್ತು ಶೈವ ದೇವಾಲಯಗಳು ಹೊಂದಿರುವುದಕ್ಕೆ ಸಾಕ್ಷಿಯಾಗಿವೆ. ಅಗಸಿಯಲ್ಲಿ ಎತ್ತರದ ಕಲ್ಲಿನ ಬಾಗಿಲು ತ್ರುಟಿತವಾಗಿದೆ. ಯಕ್ಷಿಣಿಯ ಶಿಲ್ಪವಿದೆ ಮತ್ತು ವೆಯ್ಯಾವಳಿಯ ತ್ರುಟಿತ ಶಿಲ್ಪಗಳು ಅಗಸಿಯಲ್ಲಿ ಬಿದ್ದಿವೆ.

ಗ್ರಾಮ: ಹಸೀನಾಪುರ **ಶಿಲ್ಪ:** ಇತರೆ

ಶಿಲೆ: ಕಪ್ಪು ಕಲ್ಲು. **ಕಾಲ:** ಸು.೯ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಹನುಮಾನ್ ಗುಡಿ

ಭೀಮಾನದಿಯ ದಡದ ಮೇಲಿರುವ ಹಸೀನಾಪುರದ ಹನುಮಾನ್ ದೇವಾಲಯದ ಎದುರಿಗೆ ಸು.೧೧ನೆಯ ಶತಮಾನದ ತ್ರುಟಿತ ಕಂಬಗಳು ನಿಲ್ಲಿಸಲಾಗಿದೆ. ಕಂಬಗಳಲ್ಲಿ ಒಂದು ಚೌಕ ಮುತ್ತಿನ ಜೋಡಣೆಯಿಂದ ಅಲಂಕೃತಗೊಂಡಿದೆ. ಚೌಕ ಒಂದು ಕಂಬದ ಚೌಕ ಸಾದಾಯಿದೆ. ಅದರ ಮೇಲಿನ ಭಾಗಗಳು ವೃತ್ತಾಕಾರ ಅಲಂಕಾರಯುತ ಎಲೆಯ ಕೆತ್ತನೆಯಿಂದ ಕೂಡಿವೆ. ಕೆಳಭಾಗ ಅಷ್ಟಕೋನಾಕಾರದ ಹೂವಿನ ದಳದಂತೆ ವೃತ್ತಾಕಾರವಾಗಿ ಜೋಡಿಸಿದೆ. ಅದರ ಕೆಳಗೆ ಮತ್ತೆ ಚೌಕ ಭಾಗ ಕೆತ್ತಲಾಗಿದೆ.

ಗ್ರಾಮ: ಪಟ್ಟಣಾ **ಶಿಲ್ಪ:** ಇತರೆ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಊರಿನ ವಲಯದಲ್ಲಿ

ತೃಟಿತ ನಂದಿಗಳ, ಲಿಂಗಪೀಠ, ನಾಗಶಿಲ್ಪ, ತ್ರುಟಿತ ಕಂಬಗಳು ಮತ್ತು ಶಿವಲಿಂಗಯಿವೆ. ಪವೇಶ ದ್ವಾರದ ಇಕ್ಕೆಲಗಳಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ತ್ರುಟಿತ ಕಂಬಗಳಿವೆ. ಗರ್ಭಗುಡಿಯ ಎಡಕ್ಕೆ ಅಧಿಷ್ಠಾನದಲ್ಲಿ ಗಣಪತಿ ಶಿಲ್ಪವಿದೆ. ಶೈವ ದೇವಾಲಯ ನಾಶವಾಗಿದೆ ಎಂಬುದಕ್ಕೆ ಅಲ್ಲಲ್ಲಿ ಬಿದ್ದ ಅವಶೇಷಗಳೇ ಸಾಕ್ಷಿಯಾಗಿವೆ.

ಊರೊಳಗೆ ದೊರೆತ ತ್ರುಟಿತ ಕಂಬಗಳು, ಕಂಬ ಪೀಠ, ಶಂಕರಲಿಂಗೇಶ್ವರ ಮಠದಲ್ಲಿ ದೋರೆತ ಸಿಂಹ ವೆಯ್ಯಾವಳಿ, ಬೃಹತ್ ಲಿಂಗ (ಬಿಳಿ ಮಿಶ್ರಿತ ನೀಲಿ ಕಲ್ಲಿನ) ಗಜಪಟ್ಟಿಕೆ, ಸುತ್ತಲೂ ಹೂವಿನ ಮಧ್ಯೆದಲ್ಲಿ ಶಿವಲಿಂಗ, ಪ್ರಾಚೀನ ಶೈವ ದೇವಾಲಯವಿತ್ತು ಎನ್ನುವುದಕ್ಕೆ ಪ್ರಮುಖ ಕುರುಹುಗಳಾಗಿವೆ.

ಗ್ರಾಮ: ನಾವದಗಿ **ಶಿಲ್ಪ:** ಇತರೆ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ **ದೊರೆತ ಸ್ಥಳ:** ಊರಿನ ವಲಯದಲ್ಲಿ

ನಾವದಗಿಯಲ್ಲಿ ನಾಗಶಿಲ್ಪ, ತ್ರುಟಿತಶಿಲ್ಪ? ಎರಡು ಜೋಡಿ ಜೈನಪಾದಗಳು ದೊರಕಿವೆ.

ಗ್ರಾಮ: ನಾವದಗಿ ಶಿಲ್ಪ: ಇತರೆ

ಶಿಲೆ: ಕಪ್ಪುಶಿಲೆ ಕಾಲ: ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಊರಿನ ವಲಯದಲ್ಲಿ

ದ್ವಿಬಾಹು ಗಣಪತಿ ಶಿಲ್ಪ ತ್ರುಟಿತವಾಗಿದೆ. ದಂತ, ಮೋದಕ ಹಸ್ತವಿರುವ ಕೈಗಳಿವೆ. ಕಪ್ಪುಶಿಲೆಯಲ್ಲಿ ಕೆತ್ತಲ್ಪಟ್ಟಿದೆ.

ಗ್ರಾಮ: ಕೇರಿಅಂಬಲಗಾ ಶಿಲ್ಪ: ಇತರೆ

ಶಿಲೆ: ಕಪ್ಪುಕಲ್ಲು ಕಾಲ: ಸು.೮ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಮಲ್ಲಿಕಾರ್ಜುನ ಗುಡಿ

ಜನ್ಮ ರಾಶಿಗಳ ಕೆತ್ತನೆಯುಳ್ಳ ಶಿಲ್ಪ–ಭುವನೇಶ್ವರಿಯ? ಸುತ್ತಲೂ ಮೇಷ–ಕುರಿ, ವೃಷಭ–ನಂದಿ, ಮಿಥುನದಲ್ಲಿ ಗಂಡು–ಹೆಣ್ಣಿನ ಜೋಡಿ, ಕರ್ಕ, ಸಿಂಹ, ಕನ್ಯಾ, ತುಲಾ–ತಕ್ಕಡಿ, ವೃಶ್ಚಿಕ–ಚೇಳು, ಧನು–ಬಿಲ್ಲು, ಮಕರ–ಮೊಸಳೆ, ಕುಂಭ–ತುಂಬಿದ ಬಿಂದಿಗೆ, ಮೀನುಗಳ ಶಿಲ್ಪಗಳ ಕೆತ್ತನೆಯಿದೆ.

ಗ್ರಾಮ: ಬಿದನೂರು ಶಿಲ್ಪ: ಇತರೆ

ಶಿಲೆ: ಕಪ್ಪು ಕಲ್ಲು ಕಾಲ: ಸು.೧೦ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಗುಡಿ

ತ್ರುಟಿತ ಬಾಗಿಲವಾಡ ಮಲ್ಲಿಕಾರ್ಜುನ ಗುಡಿಯ ಮುಂದಿದೆ. ದ್ವಿಶಾಖಾಲಂಕೃತ ಕುಡ್ಯಸ್ತಂಭ, ಜಾಲಂದ್ರಗಳಲ್ಲಿ ಹೂಬಳ್ಳಿ ಮತ್ತು ನೃತ್ಯ ಮಾಡುವ ಶಿಲ್ಪಗಳ ಕೆತ್ತನೆಯಿದೆ. ಬಾಗಿಲವಾಡದ ಕುಡ್ಯಸ್ತಂಭದ ತಳಭಾಗದಲ್ಲಿ ದ್ವಾರಪಾಲಿಕೆಯ ಶಿಲ್ಪವಿದೆ. ದ್ವಾರಪಾಲಿಕೆ ಪ್ರಭಾವಳಿ, ಕೇಶಾಲಂಕಾರ, ಕಿವಿಓಲೆ, ಕೈಬಳೆ, ಕಂಠಹಾರ, ಕೊರಳಿನಾಭರಣ, ಸ್ತನಬಂಧ, ಸೊಂಟದ ಡಾಬು, ಕುಚಹಾರ, ಇಳಿಬಟ್ಟೆ, ಕಾಲ್ಗಡಗ ಮತ್ತು ಪೈಜಾಮ ಧರಿಸಿದಂತೆ ಕೆತ್ತಲಾಗಿದೆ.

ಗ್ರಾಮ: ಬೆಳಗುಂಪಾ(ಕೆ) ಶಿಲ್ಪ: ಶಿಲಾಬಾಲಿಕೆ

ಶಿಲೆ: ಕಪ್ಪು ಕಲ್ಲು. ಕಾಲ: ಸು.೯ನೆಯ ಶತಮಾನ

ಸ್ಥಿತಿ: ಉತ್ತಮ ದೊರೆತ ಸ್ಥಳ: ಶಂಕರಲಿಂಗ ಗುಡಿ

ದೇವಕೋಷ್ಠಕದಲ್ಲಿ ನಿಂತ ಶಿಲಾಬಾಲಿಕೆಯ ಕೆತ್ತನೆಯಿದೆ. ಬಲಗೈಯಲ್ಲಿ ಬೀಜಪುರ, ಎಡಗೈಯ ಬಳಿ ನೀಳವಾದ ಕೇಶ ತಾಕುವ ರೀತಿಯಲ್ಲಿ ಕೆತ್ತನೆ ಮಾಡಲಾಗಿದೆ. ಕಂಠಹಾರ, ಕೊರಳಿನಾಭರಣ, ಎದೆಹಾರ, ಕಟಿವಸ್ತ್ರ, ತೋಳ್ಬಂದಿ, ಕೈಬಳೆಗಳು, ನಡುಬಂಧ, ಕುಚಹಾರ, ಇಳಿಬಟ್ಟೆ, ಕಾಲ್ಗಡಗ, ಕಾಲಿಗೆ ಪೈಜಾಮ ಧರಿಸಿದಂತೆ ಕೆತ್ತಲಾಗಿದೆ. ಅದರ ಬಲಕ್ಕೆ ನಮಸ್ಕರಿಸುವ ಭಂಗಿಯಲ್ಲಿ ಕುಳಿತ ಚಿಕ್ಕ ಶಿಲ್ಪ ಕೆತ್ತಲಾಗಿದೆ.

ಗ್ರಾಮ: ಮಾಲಗತ್ತಿ ಶಿಲ್ಪ: ಇತರೆ

ಶಿಲೆ: ಕಪ್ಪುಕಲ್ಲು ಕಾಲ: ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಗುಡಿ

ಹನುಮಾನ್ ಮಂದಿರದಲ್ಲಿ ನಾಗಶಿಲ್ಪಗಳು ಗೋಡೆಗಳಲ್ಲಿವೆ. ಮೂರು ಸ್ತರದ ಎತ್ತರವಾದ ಕಪ್ಪುಶಿಲೆಯಲ್ಲಿ ಕೆತ್ತಲ್ಪಟ್ಟ ಶಿವಲಿಂಗವಿದೆ. ನಂದಿಶಿಲ್ಪವು ಹೂ ಬಳ್ಳಿ ಮತ್ತು ಗಂಟೆಗಳಿಂದ ಅಲಂಕೃತಗೊಂಡಿದೆ. ಪ್ರಸ್ತುತ ತ್ರುಟಿತಗೊಂಡಿದೆ. ಕಪ್ಪುಶಿಲೆಯಲ್ಲಿ ಕೆತ್ತಲಾಗಿವೆ.

ಗ್ರಾಮ: ಮೇಳಕುಂದಾ(ಕೆ) ಶಿಲ್ಪ: ದ್ವಾರಪಾಲಕ,

ಶಿಲೆ: ಕಪ್ಪುಶಿಲೆ ಕಾಲ: ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಮಂದಿರ,

ತ್ರುಟಿತ ಬಾಗಿಲವಾಡದ ದ್ವಾರಪಾಲಕನ ಶಿಲ್ಪವು ದ್ವಿಬಾಹುವಿದೆ. ಗದಾಧಾರಿ, ಡಮರು ಹಿಡಿದಿದೆ. ಕಿರೀಟ, ಕರ್ಣಕುಂಡಲ, ಉಪವೀತ, ಸೊಂಟಬಂಧ, ಕಾಲ್ಗಡಗ ಧರಿಸಿದೆ. ಪಕ್ಕದಲ್ಲಿ ಚಿಕ್ಕದಾಗಿರುವ ಶಿಲ್ಪ ಚಾಮರಧಾರಿಯದಾಗಿದೆ. ಅವುಗಳ ಮೇಲಿರುವ ಸ್ತ್ರೀಶಿಲ್ಪ ತ್ರುಟಿತ.

ಗ್ರಾಮ: ಮೇಳಕುಂದಾ(ಕೆ) ಶಿಲ್ಪ: ಭಕ್ತ?

ಶಿಲೆ: ಕಪ್ಪುಶಿಲೆ ಕಾಲ: ಸು.೧೧ನೆಯ ಶತಮಾನ

ಸ್ಥಿತಿ: ಮಧ್ಯಮ ದೊರೆತ ಸ್ಥಳ: ಭೋಗಲಿಂಗೇಶ್ವರ ಗುಡಿ

ಗರ್ಭಗುಡಿಯ ಹಿಂದಿನ ದೇವಕೋಷ್ಠಕದಲ್ಲಿ ಶಿವಭಕ್ತ ಯತಿ? ನಮಸ್ಕರಿಸುವ ಭಂಗಿಯಲ್ಲಿ ಕುಳಿತ ಶಿಲ್ಪ ಕೆಳಸ್ತರದಲ್ಲಿದೆ. ಮೇಲ್‌ಸ್ತರದಲ್ಲಿ ಶಿವಲಿಂಗವನ್ನು ನಮಸ್ಕರಿಸುವ ಶಿಲ್ಪವಿದೆ. ಯತಿ ಮುಡಿ ಧರಿಸಿರುವ, ಕರ್ಣಕುಂಡಲ, ಬಾಹುವಲ್ಯ, ಕೈಗಡಗ, ಸೊಂಟಪಟ್ಟಿ ಧರಿಸಿರುವಂತೆ ಕೆತ್ತಲಾಗಿದೆ. ಶಿವಭಕ್ತ ಯತಿಯು ವ್ರತವನ್ನು ಆಚರಿಸುತ್ತಾ ಮರಣ ಹೊಂದಿದಂತೆ ತೋರುತ್ತದೆ?

ಗ್ರಾಮ: ಮಳಿನಿ ಶಿಲ್ಪ: ಬಾಗಿಲವಾಡ ದ್ವಾರಪಾಲಕರು?

ಶಿಲೆ: ಕಪ್ಪುಕಲ್ಲು ಕಾಲ: ಸು.೧೧ನೆಯ ಶತಮಾನ

ಸ್ಥಿತಿ: ತ್ರುಟಿತ ದೊರೆತ ಸ್ಥಳ: ಹನುಮಾನ್ ಗುಡಿ

ಜೋಡಿ ಶಿಲ್ಪ? ಬಾಗಿಲವಾಡದ ದ್ವಾರಪಾಲಕರಲ್ಲಿ ಗಂಡ-ಹೆಂಡತಿಯರಂತೆ ಒಬ್ಬರ ಹೆಗಲ ಮೇಲೆ ಒಬ್ಬರು ಕೈ ಹಾಕಿಕೊಂಡು ನಿಂತಿರುವ ಶಿಲ್ಪವಿದೆ. ಪುರುಷ ಶಿಲ್ಪವು ಅರ್ಧ ಸುರುಳಿಯಾಕಾರದ ದಂಡ ಬಲಗೈಯಲ್ಲಿದೆ. ಸೊಂಟಬಂಧದಲ್ಲಿ ಚೂರಿ ಮತ್ತು ಸೊಂಟದಿಂದ ಮೊಳಕಾಲಿನವರೆಗೆ ಬಟ್ಟೆ ಧರಿಸಿದ ಕೆತ್ತನೆಯಿದೆ. ಕಿರೀಟ, ಕರ್ಣಕುಂಡಲ, ಬಾಹುವಲ್ಯ, ಕೈಗಡಗ, ಕೊರಳಾಭರಣ, ಎದೆಯಾಭರಣ, ವಕ್ಷಬಂಧ, ಯಜ್ಞೋಪವೀತ, ಉಪವೀತ, ಸೊಂಟಬಂಧ,

ಕುಚಹಾರ ಇಳಿವಸ್ತ್ರ ಧರಿಸಿದೆ. ಸ್ತ್ರೀ ಶಿಲ್ಪದಲ್ಲಿ ಎಡಗೈ ಕಟಿಹಸ್ತವಿದೆ. ಕಿರೀಟ, ವೃತ್ತಾಕಾರದ ಮೂರು ಸುರುಳಿಯ ಕೇಶಾಲಂಕಾರ ಕಿವಿಓಲೆ, ಕೈಬಳೆ, ಬಾಹುವಲ್ಯ, ತೋಳ್ಬಂದಿ, ಕೈಬಳೆ, ಕೊರಳಾಭರಣ, ಎದೆಯಾಭರಣ, ಸೊಂಟಬಂಧ, ಇಳಿವಸ್ತ್ರ, ಕಾಲ್ಗಡಗ ಧರಿಸಿದೆ.

ಗ್ರಾಮ: ಮೇಳಕುಂದಾ(ಕೆ) **ಶಿಲ್ಪ:** ಇತರೆ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೭ನೆಯ ಶತಮಾನ,

ಸ್ಥಿತಿ: ಕನಿಷ್ಠ **ದೊರೆತ ಸ್ಥಳ:** ಹನುಮಾನ್ ಮಂದಿರ

ಹನುಮಾನ್ ಮಂದಿರದ ಪ್ರಾಂಗಣದಲ್ಲಿ ಅನೇಕ ಶಿಲ್ಪಗಳಿವೆ. ಜೈನಶಿಲ್ಪ, ವೀರಗಲ್ಲು, ನಾಗಶಿಲ್ಪ, ತ್ರುಟಿತ ಬಾಗಿಲವಾಡದ ದ್ವಾರಪಾಲಕ ಶಿಲ್ಪ, ಗಜಲಕ್ಷ್ಮಿ ಲಲಾಟ, ಚತುರ್ಮುಖ ಬ್ರಹ್ಮ ಶಿಲ್ಪ, ಬಲಿಪೀಠ?, ಚಾಲುಕ್ಯ ಶೈಲಿಯ ಕಂಬಗಳಿವೆ. ಗರ್ಭಗುಡಿಯ ಬಲಭಾಗಕ್ಕೆ ಪತಿ–ಪತ್ನಿಯರು ಒಬ್ಬರ ಮೇಲೊಬ್ಬರು ಹೆಗಲ ಮೇಲೆ ಕೈ ಹಾಕಿಕೊಂಡು ಮತ್ತು ಟೊಂಕದ ಮೇಲೆ ಕೈ ಇಟ್ಟುಕೊಂಡು ನಿಂತ ಶಿಲ್ಪವಿದೆ. ಗರ್ಭಗುಡಿಯ ಬಾಗಿಲ ಬಳಿ ಶಿವಲಿಂಗ (ಬಲ), ಎಡಕ್ಕೆ ನಂದಿ ಶಿಲ್ಪವಿದೆ. ಗರ್ಭಗುಡಿಯಲ್ಲಿ ಹನುಮಾನ್ ಶಿಲ್ಪವಿದೆ. ಬಾಗಿಲವಾಡದಲ್ಲಿ ವೃತ್ತಗಳ ಮಧ್ಯೆ ಚತುರ್ದಳ ಹೂವಿನ ಕೆತ್ತನೆಯಿದೆ. ಅದರ ಪಕ್ಕದಲ್ಲಿ ಕುಡ್ಯಸ್ತಂಭ ಕೆತ್ತನೆಯಿದೆ. ಗುಡಿಯ ಕೆಳಭಾಗದಲ್ಲಿ ಒಂದು ನಿಂತ ಗಜ ಶಿಲ್ಪವಿದೆ.

ಗ್ರಾಮ: ಮೇಳಕುಂದಾ(ಕೆ) **ಶಿಲ್ಪ:** ಇತರೆ

ಶಿಲೆ: ಕಪ್ಪುಶಿಲೆ **ಕಾಲ:** ಸು.೧೭ನೆಯ ಶತಮಾನ

ಸ್ಥಿತಿ: ಕನಿಷ್ಠ, **ದೊರೆತ ಸ್ಥಳ:** ಹನುಮಾನ್ ಮಂದಿರ

ಕಮಾನಿನಾಕಾರದ ಕೆತ್ತನೆ ಹೊರಗೋಡೆಗೆ ಕೆತ್ತಲ್ಪಟ್ಟಿದೆ. ಗೋಡೆಯ ಇಕ್ಕೆಲಲ್ಲಿ ನಕ್ಷತ್ರಾಕಾರದ ಹೂವು, ಅಂತರಾಳ, ಒಳಗೋಡೆಯ ಭಿತ್ತಿ ಭಾಗದಲ್ಲಿ ತ್ರುಟಿತ ವೀರಗಲ್ಲು, ನಾಗಶಿಲ್ಪ, ಗಣೇಶ ಶಿಲ್ಪಗಳಿವೆ. ಗರ್ಭಗುಡಿಯ ಬಲಕ್ಕೆ ಶಿವಲಿಂಗವಿಡಲಾಗಿದೆ. ಎಡಕ್ಕಿರುವ ಭಿತ್ತಿ ಭಾಗದಲ್ಲಿ ಗಜ ಲಲಾಟದಲ್ಲಿ ಸೂರ್ಯ ಶಿಲ್ಪವಿದೆ. ಎರಡು ಕೈಗಳಲ್ಲಿ ಕಮಲದ ಹೂವು ಹಿಡಿದಿದೆ. ಸೂರ್ಯ ಶಿಲ್ಪವು ಕಿರೀಟ, ಕೊರಳಾಭರಣ ಧರಿಸಿದೆ. ಗರ್ಭಗುಡಿಯ ಬಾಗಿಲವಾಡ ಸಾದಾ ಕೆತ್ತನೆಯಿದೆ. ಗರ್ಭಗುಡಿಯಲ್ಲಿ ಹನುಮಾನ್ ಶಿಲ್ಪವಿದೆ. ನಕ್ಷತ್ರಾಕಾರದ ಶಿಖರ, ಉದ್ದನೆಯ ಕಂಬದಂತೆ ಕಮಲದ ಕೆತ್ತನೆ ಮೇಲೆ ದುಂಡನೆಯ ಕೆತ್ತನೆಯಿದೆ.

ದೀಪಸ್ತಂಭ

ಕೆಲ ದೇವಾಲಯಗಳ ಎದುರು ದೀಪಸ್ತಂಭಗಳು ನಿರ್ಮಿಸಲ್ಪಟ್ಟಿವೆ. ಕಲ್ಲಿನ ಸ್ತಂಭದಲ್ಲಿ ದೀಪವಿಡಲು ಕೋಮು(ಬೋಧಿಗೆ)ಗಳಿವೆ. ಕಾರ್ತೀಕ ಮಾಸದಲ್ಲಿ ಈ ದೀಪಸ್ತಂಭಗಳಲ್ಲಿ ದೀಪಹಚ್ಚಿ ದೇವಾಲಯ ಬೆಳಕಿನಿಂದ ಕೂಡಿರುವಂತೆ ಮಾಡುತ್ತಿದ್ದರು. ಕೆಲವು ವೈಷ್ಣವ ದೇವಾಲಯದ ಎದುರು ಗರುಡ ಸ್ತಂಭದಲ್ಲಿಯೇ ದೀಪ ಸ್ತಂಭ ಕೆತ್ತಲ್ಪಟ್ಟಿರುತ್ತವೆ. ಚಿಂಚೋಳಿಯ ದೀಪಸ್ತಂಭ

ಇಲ್ಲಿ ಉದಾಹರಿಸಬಹುದು. ಇದು ಸು.೧೫ನೇ ಶತಮಾನದ್ದಾಗಿದೆ. ಎತ್ತರದ ಜಗತಿ ಮೇಲೆ ಈ ದೀಪಸ್ತಂಭ ನಿರ್ಮಿಸಲ್ಪಟ್ಟಿದೆ. ಸುಲೇಪೇಟೆಯ ವೀರಭದ್ರೇಶ್ವರ ದೇವಾಲಯದಲ್ಲಿ ದೀಪಸ್ತಂಭವಿದೆ. ಹೂದಳದ ತಲವಿನ್ಯಾಸ ಮತ್ತು ದೀಪವಿಡಲು ಬೋದಿಗೆಯ ಕೋಮು ರಚಿಸಲ್ಪಟ್ಟಿವೆ. ಇಲ್ಲಿಯ ಈಶ್ವರ ದೇವಾಲಯದ ಗೋಡೆಗಳಲ್ಲಿಯೇ ಅರ್ಧ ಸ್ತಂಭಗಳಲ್ಲಿ ದೀಪಸ್ತಂಭ ನಿರ್ಮಿಸಿದ್ದಾರೆ. ರುದ್ನೂರು ಮಠದಲ್ಲಿರುವ ದೀಪಸ್ತಂಭ ಚೌಕಾಕಾರ ಜಗಲಿಯ ಮೇಲೆ ವೃತ್ತಾಕಾರದಲ್ಲಿ, ಹೂದಳಗಳನ್ನು ಕೆತ್ತಲ್ಪಟ್ಟಿದೆ. ಅದರ ಮೇಲೆ ಹೂಜಿಯಾಕಾರದ ಸ್ತಂಭವಿದೆ. ಎತ್ತರ ದೀಪಸ್ತಂಭ ಹಲವು ಕೋಮುಗಳಿಂದ ರಚಿತವಾಗಿದೆ.

ಮದನಿಕೆಯರ ಶಿಲ್ಪ

ಗ್ರಾಮ: ಚಿಂಚನ್‌ಸೂರು	**ಶಿಲ್ಪ:** ಮದನಿಕೆಯರು
ಶಿಲೆ: ಕಪ್ಪು ಕಲ್ಲು.	**ಕಾಲ:** ಸು.೧೧ನೆಯ ಶತಮಾನ
ಸ್ಥಿತಿ: ತ್ರುಟಿತ	**ದೊರೆತ ಸ್ಥಳ:** ಮಹೇಶ್ವರನ ಗುಡಿ

ಮದನ/ ಮದನಿಕೆಯರ ಶಿಲ್ಪ: ತಬಲ ವಾದ್ಯ ಬಾರಿಸುತ್ತಾ ನೃತ್ಯ ಮಾಡುವ ಭಂಗಿಯಲ್ಲಿದೆ. ಶಿಲ್ಪದಲ್ಲಿ ತುರುಬ ಮತ್ತು ಸ್ವಲ್ಪ ಕೂದಲು ಕೆಳಗೆ ಬಿಟ್ಟಿದೆ. ಕಿವಿ ಓಲೆ, ಕುತ್ತಿಗೆ ಹಾರ, ಕೊರಳ್ ಹಾರ, ತೋಳ್ಬಂದಿ, ಸೊಂಟಪಟ್ಟಿ, ಕೈಬಳೆ, ಕಾಲ್ಗೆಜ್ಜೆ, ಪೈಜಾಮ ಧರಿಸಿದೆ.

* ಉದ್ದನೆಯ ಕಬ್ಬು ಮತ್ತು ಅಂಕುಶ ಹಿಡಿದ ಶಿಲಾಬಾಲಕ, ಯಜ್ಞೋಪವೀತ, ಕೊರಳಹಾರ, ಕಂಠಹಾರ, ಬಾಹುವಲ್ಯ, ಕರ್ಣಕುಂಡಲ, ಮುಕುಟ ಕಿರೀಟ, ಕಾಲ್ಗಡಗ, ಕಟಿವಸ್ತ್ರ ಕುಚಹಾರ, ವಕ್ಷಬಂಧ, ಕಾಲ್ಗಡಗ, ಧರಿಸಿದ ಶಿಲ್ಪವಿದೆ.
* ದಪ್ಪನೆಯ ತುರುಬ, ಕಿವಿಓಲೆ, ಸ್ತನಪಟ್ಟಿ, ಬಾಹುವಲ್ಯ, ತೋಳ್ಬಂದಿ, ಕೈಬಳೆ, ಕುಚಹಾರ, ಕಟಿವಸ್ತ್ರ ಕಾಲ್ಗಡಗ, ಪೈಜಾಮ ಧರಿಸಿ ನೃತ್ಯ ಭಂಗಿಯಲ್ಲಿರುವ ಶಿಲಾಬಾಲಿಕೆಯ ಶಿಲ್ಪವಿದೆ.
* ತುರುಬದಂಥ ಶೈಲಿಯ ಕೂದಲ ವಿನ್ಯಾಸಗೊಳಿಸಲಾಗಿದೆ. ತೋಳ್ಬಂದಿ, ಕೈಬಳೆ, ಕಂಠಹಾರ, ಎದೆಹಾರ, ಕೊರಳಹಾರ, ಕುಚಹಾರ, ಸೊಂಟಪಟ್ಟಿ, ಕಾಲ್ಗೆಜ್ಜೆ, ಪೈಜಾಮ ಧರಿಸಿದ ಶಿಲ್ಪವಿದೆ. ಇದರ ಬಲಗೈಯಲ್ಲಿ ಕಮಂಡಲ ಎಡಗೈಯಲ್ಲಿ ಬೀಜಪುರ ಹಿಡಿದಂತೆ ಕೆತ್ತಲಾಗಿದೆ.
* ತಲೆಭಾಗದ ಪ್ರಭಾವಳಿಯಲ್ಲಿ ವೃತ್ತಾಕಾರದ ಪ್ರಭೆಯಂತೆ ಕೂದಲುಗಳನ್ನು ವಿನ್ಯಾಸ ಮಾಡಲಾಗಿದೆ. ಕೇಶಾಲಂಕಾರಿಕ ಆಭರಣ, ತೋಳ್ಬಂದಿ, ಕೈಬಳೆ, ಕಂಠಹಾರ, ಎದೆ ಹಾರ, ಕೋರಳಹಾರ, ಕುಚಹಾರ, ಸೊಂಟಪಟ್ಟಿ, ಕಾಲ್ಗೆಜ್ಜೆ, ಪಾಯಿಜಾಮ ಬಲಗೈ- ಬಲಗಾಲು ಮೇಲೆತ್ತಿ ಎಡಗೈ ಕಮಲಹಸ್ತದಲ್ಲಿದ್ದು ನೃತ್ಯ ಮಾಡುತ್ತಿರುವಂತೆ ಕೆತ್ತಲಾಗಿದೆ.
* ಕೈಬಳೆ, ಕಂಠಹಾರ, ಎದೆಹಾರ, ಕೋರಳಹಾರ, ಕುಚಹಾರ, ಸೊಂಟಪಟ್ಟಿ, ಕಾಲ್ಗೆಜ್ಜೆ, ಪೈಜಾಮ, ಕಟಿವಸ್ತ್ರ, ತಲೆಗೆ ಪ್ರಭಾವಳಿಯಂತೆ ಕೇಶಾಲಂಕಾರ ಮಾಡಿ ನಾಚಿಕೊಂಡು ನಿಂತಂತೆ ಮದನಿಕೆಯ ಶಿಲ್ಪ ಕೆತ್ತಲಾಗಿದೆ. ಪ್ರಸ್ತುತ ತ್ರುಟಿತವಾಗಿದೆ.

* ಎರಡು ಕೈಗಳನ್ನು ಮೇಲೆತ್ತಿ ಸರ್ಪವನ್ನು ಹಿಡಿದು, ತಲೆ ಸ್ವಲ್ಪ ಓರೆಗೈದು ಮೊಣಕಾಲ ಕೆಳಗೆ ಸರ್ಪ ಕಟ್ಟಿಕೊಂಡು ಸ್ಥಾನಿಕ ಭಂಗಿಯಲ್ಲಿರುವ ಮದನಿಕೆಯ ಶಿಲ್ಪವಿದೆ. ಕೈಬಳೆ, ಕಂಠಹಾರ, ಕಿವಿಓಲೆ, ತುರುಬಿನ ಕೇಶಾಲಂಕಾರ, ಕಾಲ್ಗಡಗ, ಪೈಜಾಮ ಮತ್ತು ಸರ್ಪವನ್ನೇ ಕೊರಳಿಗೆ ಹಾರ ಮಾಡಿಕೊಂಡಿರುವ ಶಿಲ್ಪವಾಗಿದೆ.

* ತಲೆ ಬಾಗಿಸಿ ತಬಲ ಬಾರಿಸುತ್ತಾ ನೃತ್ಯ ಮಾಡುವ ಭಂಗಿಯ ಇನ್ನೊಂದು ಮದನಿಕೆ ಶಿಲ್ಪ ತ್ರುಟಿತವಾಗಿದೆ. ಕೇಶಾಲಂಕಾರದ ಆಭರಣದಿಂದ ಗುಂಡಗೆ ಕಟ್ಟಿದ ಕೂದಲಿಗೆ ಕಟ್ಟಿದಂತೆ ಕೆತ್ತಲಾಗಿದೆ. ಕೈಬಳೆ, ಕಂಠಹಾರ, ಎದೆಹಾರ, ಕೊರಳಹಾರ, ಕುಚಹಾರ, ಸೊಂಟಪಟ್ಟಿ, ಕಾಲ್ಗೆಜ್ಜೆ, ಪೈಜಾಮ, ಕಟಿವಸ್ತ್ರ, ತೊಡೆಪಟ್ಟಿ ಧರಿಸಿದಂತೆ ಕೆತ್ತಲಾಗಿದೆ.

* ತ್ರುಟಿತ ಮದನಿಕೆಯ ಶಿಲ್ಪ ಸುತ್ತಿದ ಕೇಶ ವಿನ್ಯಾಸವಿದೆ. ಯಜ್ಞೋಪವೀತ, ಬಾಹುವಲ್ಯ, ಕೈಬಳೆ, ಕಂಠಹಾರ, ಎದೆಹಾರ, ಕೊರಳಹಾರ, ಕುಚಹಾರ, ಸೊಂಟಪಟ್ಟಿ, ಕಾಲ್ಗೆಜ್ಜೆ, ಪೈಜಾಮ ಧರಿಸಿದೆ. ಎಡಗಾಲನ್ನು ಎತ್ತಿ ನೃತ್ಯಭಂಗಿಯಲ್ಲಿರುವ ಮದನಿಕೆಯ ಆ ಕಾಲನ್ನು ಕುಬ್ಜನು ಹಿಡಿದಂತೆ ಕೆತ್ತಲಾಗಿದೆ.

* ಕಿರೀಟ ಮುಕುಟ, ಕಿವಿ ಓಲೆ, ಕಂಠಹಾರ, ಕೊರಳಿನಹಾರ, ಕೈಬಳೆ, ಕಂಠಹಾರ, ಎದೆಹಾರ, ಕುಚಹಾರ, ಸೊಂಟಪಟ್ಟಿ, ಕಾಲ್ಗೆಜ್ಜೆ, ಪೈಜಾಮ, ಕಟಿವಸ್ತ್ರ ಧರಿಸಿದೆ. ಎಡಕ್ಕೆ ತಲೆ ಓಲೈಸಿದ್ದು, ಎಡಗೈ ಎದೆಭಾಗದಲ್ಲಿದೆ. ಬಲಗೈ ತ್ರುಟಿತವಾಗಿದೆ.

ರುಮ್ಮನಗೂಡದ ಶಂಕರ ನಾರಾಯಣ ದೇವಾಲಯದ ಹೊರ ಭಿತ್ತಿಗಳಲ್ಲಿ ಮದನಿಕೆಯರ ಶಿಲ್ಪಗಳು ಕಾಣಬಹುದು. ಶುಕ ಸುಂದರಿಯರ ಶಿಲ್ಪಗಳಿವೆ. ಬೇಲೂರಿನ ಶಿಲಾಬಾಲಿಕೆಯಂತಿರುವ ಈ ಶಿಲ್ಪಗಳು ಕಪ್ಪು ಗ್ರಾನೈಟ್ ಶಿಲೆಯಲ್ಲಿ ಕೆತ್ತಿದೆ. ಒಂದು ಶಿಲ್ಪ ಬಲಗೈಯಲ್ಲಿ ಚಿಕ್ಕ ಗಿಳಿ ಹಿಡಿದ ಶಿಲ್ಪವಿದೆ. ಕುಂತಲಧಾರಿ (ತುರುಬಿನಾಕಾರ ಕೇಶಾಲಂಕರ) ಮತ್ತು ಅದಕ್ಕೆ ಆಭರಣಗಳನ್ನು ಹಾಕಲಾಗಿದೆ. ಕರ್ಣಲಂಕಾರ ಆಭರಣ ಧರಿಸಿರುವಂತೆ ಕೆತ್ತಿದೆ. ಕೊರಳಹಾರ, ಸ್ತನಹಾರ, ಕಂಠಹಾರ, ಸೊಂಟಪಟ್ಟಿ, ಕುಚಹಾರ, ಕಟಿಬಂಧ, ಕಾಲ್ಗಡಗದಿಂದ ಅಲಂಕೃತ ಈ ಶುಕ ಸುಂದರಿಯ ಶಿಲ್ಪವಿದೆ. ನಗುಮುಖ ಮತ್ತು ನಾಚಿಕೆಯಿಂದ ಕೂಡಿದೆ. ಪ್ರಸ್ತುತ ಈ ಶಿಲ್ಪ ತ್ರುಟಿತವಾಗಿದೆ. ಇಲ್ಲಿಯ ಇನ್ನೊಂದು ಶಿಲ್ಪ ಜಟಾಭಾರ ಧರಿಸಿದ ಶುಕ ಸುಂದರಿ ಶಿಲ್ಪವಿದೆ. ತೋಳ್ಬಂದಿ, ಬಾಹುವಲ್ಯ, ಮಣಿಕಂಠ, ಸ್ತನಹಾರ, ಕೊರಳಹಾರ, ಕಂಠಹಾರ, ಕರ್ಣಕುಂಡಲ, ಕಾಲ್ಗಡಗ, ಸೊಂಟಪಟ್ಟಿ, ಕುಚಹಾರ, ಯಜ್ಞೋಪವೀತ, ಆರೋಪ್ಯಮಾಲಾ ಧರಿಸಿದೆ. ಎಡಗೈಯಲ್ಲಿ ಗಿಳಿ ಹಿಡಿದಿದೆ. ಆದರೆ ಪ್ರಸ್ತುತ ತ್ರುಟಿತವಾಗಿದೆ. ಇಲ್ಲಿರುವ ಮತ್ತೊಂದು ಶುಕ ಸುಂದರಿ ಶಿಲ್ಪ ಬಲ ಮುಂಗೈ ಹತ್ತಿರ ಗಿಳಿ ಸುಂದರಿಯ ಕೆನ್ನೆಗೆ ಅದರ ಮುಖ ಮಾಡಿ ಕುಳಿತಿದೆ. ಕೇಶಾಲಂಕರಣೆಯ ಧಮ್ಮಿಲಧಾರಿಣಿ. ಸ್ತನಹಾರ, ಕೊರಳಹಾರ, ಬಳೆ, ಸೊಂಟಪಟ್ಟಿ, ಕುಚಹಾರ, ಯಜ್ಞೋಪವೀತ, ಕಾಲ್ಗಡಗ, ಪೈಜಾಮ ಆಭರಣಗಳು ಧರಿಸಿದೆ. ತ್ರಿಭಂಗಿಯಲ್ಲಿರುವ ಶಿಲ್ಪಗಳಿವೆ.

ಸಿಂಹಸ್ತಂಭ

ಮಿರ್ಯಾಣದ ಈ ಸಿಂಹಸ್ತಂಭ ಈಶ್ವರ ದೇವಾಲಯದ ಪ್ರಾಂಗಣದಲ್ಲಿದೆ. ಸುಮಾರು ೮ನೇ ಶತಮಾನದ್ದಾಗಿದ್ದು ವೃತ್ತಾಕಾರದಲ್ಲಿದೆ. ಸಿಂಹದ ಬಾಯಿಯ ಇಕ್ಕೆಲಲ್ಲಿ ದವಡೆ ಹಲ್ಲುಗಳಿವೆ. ಎದ್ದು ಕಾಣುವ ದೊಡ್ಡ ಕಣ್ಣುಗಳು, ತ್ರಿಕೋನಾಕಾರ ನಾಸಿಕವಿದೆ. ವೃತ್ತಾಕಾರದ ಮೂರು ಪದರಗಳ ಮೇಲೆ ಒಂದು ಕಳಸ ಮತ್ತು ಬೋದಿಗೆ ಸಿಂಹದ ಶಿರೋಭಾಗದಲ್ಲಿದೆ. ಬೆನ್ನಿನ ಭಾಗದಲ್ಲಿ, ಸಿಂಹದ ಬಾಲವನ್ನು ಸುತ್ತಿಕೊಂಡ ಕುಬ್ಜನ ಶಿಲ್ಪವಿದೆ. ಇದು ಸಿಂಹ ಸವಾರನಂತೆ ತೋರುತ್ತದೆ. ಸಿಂಹ ತನ್ನ ಮುಂಗಾಲುಗಳನ್ನು ಸಿಂಹ ಭಂಗಿಯಲ್ಲಿ ಕುಳಿತ ಕುಬ್ಜನ ಭುಜದ ಮೇಲಿಟ್ಟಿದೆ. ಕುಬ್ಜ ಶಿಲ್ಪವು ಗುಂಗುರು ಕೂದಲು, ಉದ್ದನೆ ಕಿವಿಯಿಂದ ಕೂಡಿದೆ. ಕಂಠಹಾರ, ಕೊರಳಹಾರ, ವಕ್ಷಬಂಧ, ಸೊಂಟಪಟ್ಟಿ, ಉದರಪಟ್ಟಿಯ ಅಲಂಕರಣೆಯನ್ನೊಳಗೊಂಡಿದೆ.

ಕೊನೆ ಟಿಪ್ಪಣಿಗಳು

೧. ಎ.ಆ.ಹಿ.ಐ., ೧೯೯೩, ಸಂ.೨, ಪು. ೨೩೩.

೨. ಪೂರ್ವೋಕ್ತ, ಪು. ೨೩೧-೨೩೨.

೩. ಪದ್ಮ ಪುರಾಣ ಪ್ರಕಾರ, ಪು. ೨೩೧-೨೩೨.

೪. ಪೂರ್ವೋಕ್ತ, ಪು. ೨೩೧-೨೩೨.

೫. ಪಾಟೀಲ್.ಎಂ.ಬಿ(ಸಂ), ಕ.ಸ.ಗೆ.ಕ.ಜಿ., ೧೯೯೭, ಪು. ೭೬೩.

೬. ಪೂರ್ವೋಕ್ತ, ಪು. ೭೭೧.

೭. ಪೂರ್ವೋಕ್ತ, ಪು. ೬೯೪.

೮. ಪೂರ್ವೋಕ್ತ, ಪು. ೭೭೧.

೯. ಪೂರ್ವೋಕ್ತ, ಪು. ೭೩೯.

೧೦. ಪೂರ್ವೋಕ್ತ, ಪು. ೭೦೬.

೧೧. ಪೂರ್ವೋಕ್ತ, ಪು. ೬೯೪.

◆◆◆

ಅಧ್ಯಾಯ : ಆರು

ರಾಜಕೀಯ ಮತ್ತು ಆಡಳಿತ ವ್ಯವಸ್ಥೆ

ಅಧ್ಯಾಯ : ಆರು

ರಾಜಕೀಯ ಮತ್ತು ಆಡಳಿತ ವ್ಯವಸ್ಥೆ

ಪ್ರಶಸ್ತಿ ಶಾಸನಗಳೆಂದರೆ, ರಾಜರ ಬಿರುದಾವಳಿಯುಳ್ಳ ಶಾಸನಗಳಾಗಿವೆ. ರಾಜರ ಹೊಗಳಿಕೆಯನ್ನು ತದನಂತರ ಯುವರಾಜರ, ಸಾಮಂತರ ಮತ್ತು ಅಧಿಕಾರಿವರ್ಗದವರ ಹೊಗಳಿಕೆಯನ್ನು ಮಾಡಿ, ದಾನ ಮಾಡುವವರು ತಮ್ಮ ದಾನದ ಉದ್ದೇಶ ತಿಳಿಸುತ್ತಿದ್ದರು. ಇವುಗಳು ಇತಿಹಾಸ ಅಧ್ಯಯನಕ್ಕೆ ಪೂರಕವಾಗಿವೆ. ಕಡಗಂಚಿ ಶಾಸನ ಕ್ರಿ.ಶ. ೧೧೧೮, ಹರಸೂರು ಕ್ರಿ.ಶ. ೧೯೬೭, ಅಫ್‌ಜಲ್‌ಪುರ ಕ್ರಿ.ಶ. ೧೧೦೭ ಶಾಸನಗಳು ಮಹಾಮಂಡಳೇಶ್ವರರು ಯಾರ ಅಧೀನದಲ್ಲಿ ಆಳ್ವಿಕೆ ಮಾಡುತ್ತಿದ್ದರೆಂಬುದನ್ನು ಅವರ ಪ್ರಶಸ್ತಿಗಳಲ್ಲಿ ವಿವರಿಸಲಾಗಿದೆ. ಉದಾಹರಣೆಗೆ ತ್ರಿಭುವನ ಮಲ್ಲದೇವ ಪಾದಾರಾಧಕ, ಯುವರಾಜ ದೇವ ಪಾದಾರಾಧಕ ಎಂದು ಕ್ರಿ.ಶ. ೧೧೧೮ರ ಕಡಗಂಚಿಯ ಶಾಸನದಲ್ಲಿ ಉಲ್ಲೇಖಿತವಾಗಿದೆ. ಯುವರಾಜ, ಡಾಂಕರಸ ಮತ್ತು ದತ್ತಿನಾಪುರದ ರೇವಣಯ್ಯರ ಪ್ರಶಸ್ತಿಗಳನ್ನು ಉಲ್ಲೇಖಿಸಲಾಗಿದೆ(ಅಫ್‌ಜಲ್‌ಪುರ ಶಾಸನ-ಕ್ರಿ.ಶ. ೧೧೦೭). ವಿಭುನಾಡಿನ ಅಧಿಪತಿ ಬಾಣ ವಂಶದವ ಎಂಬ ಹೊಗಳಿಕೆ, ಮಹಾಮಂಡಳೇಶ್ವರ ವೀರಗೊಂಕದೇವನ ಹೊಗಳಿಕೆಯಿದೆ. ಸಿಂಹ(ಮೃಗ) ಬೇಟೆ ಮಾಡಿದ 'ನಿಂದಾಪಿರಿಯ' ಎಂಬ ಬಿರುದು ಪಡೆದವನಾಗಿದ್ದನು(ಮೋಘಾ ಕ್ರಿ.ಶ. ೧೧೭೦). ಕ್ರಿ.ಶ. ೧೧೫೪ರ ಶಿರೋಳ್ಳಿ ಶಾಸನವು ಪ್ರಶಸ್ತಿ ಸಹಿತ ದಾನ ಶಾಸನವಾಗಿದೆ.

೬.೧. ರಾಜ ಮನೆತನಗಳು

೬.೧.೧. ಶಾತವಾಹನರು

ಗೊಟ್ಟಂಗೊಟ್ಟಿಯಲ್ಲಿ ದೊರೆತ ಶಾತವಾಹನರ ಕಾಲದ ಇಟ್ಟಿಗೆ ಗೋಡೆಯ ಅವಶೇಷಗಳನ್ನು ಗಮನಿಸಬಹುದು. ಇಲ್ಲಿ ಬಳಸಿರುವ ಇಟ್ಟಿಗೆ ಜಂಬಿಟ್ಟಿಗೆಯದಾಗಿದ್ದು, ಸುಟ್ಟ ಇಟ್ಟಿಗೆಯ ಪ್ರಮಾಣದಲ್ಲೇ ಗಣಿಯಿಂದ ಕತ್ತರಿಸಿ ನಿರ್ಮಾಣಕ್ಕೆ ಬಳಸಲ್ಪಟ್ಟಿವೆ.[೧] ಇಲ್ಲಿ ದೊರೆತ ಆಧಾರಗಳ ಮೇಲೆ ಈ ಭಾಗವು ಶಾತವಾಹನರ ಕಾಲದಲ್ಲಿ ಆಳ್ವಿಕೆಗೆ ಒಳಪಟ್ಟಿತೆನ್ನಬಹುದು.

೬.೧.೨. ಬಾದಾಮಿ ಚಾಲುಕ್ಯರು

ಕೇಶಾವರ್ (ಗಡಿ)ಯ ಜೈನ ಬಸದಿಯಲ್ಲಿನ ಗರ್ಭಗೃಹದಲ್ಲಿನ ಜೈನ ಶಿಲ್ಪ ಮತ್ತು ಅಲ್ಲಿಯ ಸುತ್ತಮುತ್ತಲಿನ ಐತಿಹಾಸಿಕ ಕುರುಹುಗಳು ಕ್ರಿ.ಶ. ೭ನೆಯ ಶತಮಾನಕ್ಕೆ ಸೇರಿ ಈ ಬಸದಿಯ ವಾಸ್ತುಶೈಲಿ ಬಾದಾಮಿ ಚಾಲುಕ್ಯರ ಕಾಲದ್ದಾಗಿದೆ. ಇಲ್ಲಿಯ ಅನೇಕ ಐತಿಹಾಸಿಕ

ಕುರುಹುಗಳು ಬಾದಾಮಿ ಚಾಲುಕ್ಯರ ಶೈಲಿಯಲ್ಲಿವೆ. ಉದಾಹರಣೆಗೆ ಕಂಬದ ವಿಭಾಗಗಳು, ಯಕ್ಷ ಶಿಲ್ಪ.[೨] ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿತ್ತು ಎನ್ನುವುದಕ್ಕೆ ಇವೇ ಸಾಕ್ಷಿಗಳಾಗಿವೆ.

೬.೧.೩. ರಾಷ್ಟ್ರಕೂಟರು

ರಾಷ್ಟ್ರಕೂಟ ವಂಶ ಶ್ರೀ ರಮಣೀ ರಮಣನಾಗಲೇಂ, ಧರೆಗೆಸೆದ, ಶ್ರೀ ರಮಣನೆನಿಪ ಕೃಷ್ಣ ಮಹೀ ರಮಣ ಬೆರಸಮೋಘವರ್ಷಂ ನ್ರಿಪಂ ಎಂದು ಉಲ್ಲೇಖಿತವಾಗಿದೆ. ಸ್ವಸ್ತಿ ಸಮಸ್ತ ಜಗನ್ಮಂಡೊಡಳಾನುಷ್ಠಾಣ ಪರಾಯಣ, ವೀರ ನಾರಾಯಣನನುಕ್ರಿತಾಂಬರೀಶ ನ್ರಿಪನ ಹಿತಬಳ ಜಳಧಿ ಬಡವಾನಳ। ನಿಜಭುಜ ವಜ್ರಪಂಜರಾನ್ತಃಕ್ರಿತ ಸರಣಾಗತಾರಾತಿಲೋಕ। ಅಭಯಾವಳೋಕ ನಹಿತ ಹ್ರುದಯ ನಿಶಾತ ಜೀವಿತರಾಜ್ಯ ಚಿನ್ತಾನುಬಣ್ನರೋಷ। ನವನ್ದ್ಯ ಕೋಪಾನಿಬೋದಯ ಪ್ರಕಾಸಿತ ಯದುಕುಳನರಪಾಳ ಕಮಳಷಣ್ಡ। ರಟ್ಟಮಾರ್ತಂಡ, ಮಹಾವರಾಹನಪ್ಪನುಪಮ 'ಶ್ರಿ ಅಮೋಘವರ್ಷ ದೇವರು ಮಾನ್ಯಖೇಡಪುರದಲ್ಲಿ ಸುಖದಿಂದ ರಾಜ್ಯವಾಳುತ್ತಿದ್ದರು' (ತಡಕಲ್ ಕ್ರಿ.ಶ೧೧-೧೨ನೆಯ ಶತಮಾನ) ಎಂಬ ಶಾಸನಗಳು ರಾಷ್ಟ್ರಕೂಟರ ಆಳ್ವಿಕೆ ಕುರಿತು ವಿವರಿಸುತ್ತವೆ. ಮುಮ್ಮಡಿ ಗೋವಿಂದ ತನ್ನ ಎರಡನೆಯ ರಾಜಧಾನಿಯಾಗಿ ಸೇಡಂ ತಾಲೂಕಿನ ಮಾನ್ಯಖೇಟವನ್ನು ಆಳ್ವಿಕೆಗೊಳಪಡಿಸಿದನು. ನಂತರ ಅಮೋಘವರ್ಷನು ಸು. ಕ್ರಿ.ಶ. ೮೧೪ರಲ್ಲಿ ಮಾನ್ಯಖೇಡವನ್ನು ರಾಜಧಾನಿ ನಗರವನ್ನಾಗಿ ನಿರ್ಮಿಸಿಕೊಂಡು ಆಳ್ವಿಕೆ ಮಾಡಿದನು. ಇಮ್ಮಡಿ ಕೃಷ್ಣ, ಮುಮ್ಮಡಿ ಇಂದ್ರ, ಮುಮ್ಮಡಿ ಕೃಷ್ಣ ಮುಂತಾದವರ ಮನ್ನೆದಡಿ ಸಾಸಿರವನ್ನಾಳಿದ್ದಕ್ಕೆ ಹಲವು ಕುರುಹು ದೊರೆತಿವೆ.[೩]

ಮೂರನೆಯ ಕೃಷ್ಣ: ನವಕೋಟಿ ನಾರಾಯಣ ನವರಂಗದ (ಮಂಟಪ) ಕಂಬದ ಮೇಲಿರುವ ಶಾಸನವು ರಾಷ್ಟ್ರಕೂಟ ಅಕಾಲವರ್ಷನ ಆಳ್ವಿಕೆಗೆ ಸೇರಿದೆ. ಕ್ರಿ.ಶ. ೯೫೪ರ ಈ ಶಾಸನ ಮೂರನೆಯ ಕೃಷ್ಣನನ್ನು ಹೆಸರಿಸಿದೆ (ನಿಡಗುಂದ ಕ್ರಿ.ಶ. ೯೫೪).

ನಿಡಗುಂದದಲ್ಲಿನ ನವಕೋಟಿ ನಾರಾಯಣನ ದೇವಾಲಯದಲ್ಲಿನ ರಾಷ್ಟ್ರಕೂಟರ ದೊರೆ ಅಕಾಲವರ್ಷ ಕ್ರಿ.ಶ. ೯೬೯ರಲ್ಲಿ ಆಳಿದ ಎಂಬ ಅಪೂರ್ಣ ಶಾಸನ ದೊರಕಿದೆ. ಅಲ್ಲದೆ ಸುಲೇಪೇಟೆ, ಕೇಶಾವರ್ (ಗಡಿ) ಮತ್ತು ಮಿರ‍್ಯಾಣದ ದೇವಾಲಯಗಳು ಮತ್ತು ಐತಿಹಾಸಿಕ ಹಲವು ಕುರುಹುಗಳು ಈ ಕಾಲದಲ್ಲಿನವುಗಳಾಗಿವೆ. ಕೇಶಾವರ್ ಸಿದ್ದಪ್ಪನ ಗುಡಿ ಶಾಸನ ಇವುಗಳನ್ನಾಧರಿಸಿ ರಾಷ್ಟ್ರಕೂಟರ ಕಾಲದಲ್ಲಿ ಈ ತಾಲೂಕು ಪ್ರಮುಖ ಆಡಳಿತ ವಿಭಾಗವಾಗಿತ್ತೆಂಬುದು ತಿಳಿದುಬರುತ್ತದೆ.

೬.೧.೪. ಕಲ್ಯಾಣ ಚಾಲುಕ್ಯರು

ಚಾಲುಕ್ಯ ವಂಶಾವಳಿಯಲ್ಲಿ ಸತ್ಯಾಶ್ರಯ, ಜಯಸಿಂಹ, ವಿಷ್ಣುಮೂರ್ತಿ, ನೂರ್ಮಡಿ ತೈಲಪರ ವಿವರಣೆಯಿದೆ. ಕ್ರಿ.ಶ. ೯೭೩ರಲ್ಲಿ ಇಮ್ಮಡಿ ತೈಲಪ ರಾಷ್ಟ್ರಕೂಟರ ಕೊನೆಯ ದೊರೆ ಕರ್ಕನ ಆಳ್ವಿಕೆ ಕೊನೆಗಾಣಿಸಿ ಸ್ವತಂತ್ರ ರಾಜ್ಯ ಸ್ಥಾಪಿಸಿದನು. ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯ ಆರನೆಯ

ವಿಕ್ರಮಾದಿತ್ಯನ ಆಳ್ವಿಕೆ ಕಾಲದಲ್ಲಿ ಔನತ್ಯಕ್ಕೆ ಹೋಗಿದ್ದು, ಇಲ್ಲಿನ ಶಾಸನಗಳು ಮತ್ತು ವಾಸ್ತುಶಿಲ್ಪ, ಕಲೆ, ಐತಿಹಾಸಿಕ ಕುರುಹುಗಳಿಂದ ಇವರ ಆಳ್ವಿಕೆಯ ಕುರಿತು ತಿಳಿಯಬಹುದು. ಆರನೆಯ ವಿಕ್ರಮಾದಿತ್ಯನ ಆಳ್ವಿಕೆ ಕಾಲ ಕ್ರಿ.ಶ. ೧೦೭೬–೧೧೨೬ ಆಗಿದೆ. ಸುಲೇಪೇಟೆಯ ಈಶ್ವರಲಿಂಗ ದೇವಾಲಯದ ಶಾಸನಗಳು ೧ನೆಯ ಸೋಮೇಶ್ವರ ಮತ್ತು ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಬಗ್ಗೆ ಪ್ರಸ್ತಾಪಿಸುತ್ತವೆ. ದೇಗಲ್ಮಡಿಯ ಕ್ರಿ.ಶ. ೧೧೦೦ರ ಶಾಸನವು ಆರನೆಯ ವಿಕ್ರಮಾದಿತ್ಯನ ಬಿರುದು, ಆಳ್ವಿಕೆ ಬಗ್ಗೆ ವಿವರಿಸುತ್ತದೆ. ನಿಡಗುಂದದ ಕಾಳಮ್ಮನ ಗುಡಿ ಶಾಸನ ವಿಷ್ಣುವರ್ಧನ ವೀರ ಪೆರ್ಮಾಡಿಯ ಆಳ್ವಿಕೆಯ ಬಗ್ಗೆ ಸೂಚಿಸುವ ಅಪೂರ್ಣ ಶಾಸನವೊಂದು ದೊರೆತಿದೆ. ಇವುಗಳಲ್ಲದೆ ಈ ಕಾಲದ ದೇವಾಲಯ ವಾಸ್ತುಶಿಲ್ಪ ಶೈಲಿಯ ಔನತ್ಯದಿಂದ ಇವರ ಆಳ್ವಿಕೆ ಹೇಗಿತ್ತು ಎಂಬುದರ ಬಗ್ಗೆ ಮತ್ತು ಆ ಕಾಲದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆ ತಿಳಿಯಲು ಸಹಾಯಕವಾಗಿವೆ. ಶಿರೋಳ್ಳಿ ಶಾಸನ ಮುಮ್ಮಡಿ ತೈಲಪನ ವಂಶಾವಳಿ ಮತ್ತು ಅವನ ಕಾಲವನ್ನು ವಿವರಿಸುತ್ತದೆ. ಇದು ಕಲ್ಯಾಣ ಚಾಲುಕ್ಯರ ವಂಶಾವಳಿ ಬಿರುದು ಮತ್ತು ಸಾಧನೆ ಕುರಿತು ತಿಳಿಸುವ ಪ್ರಶಸ್ತಿ ಶಾಸನ ಮತ್ತು ದಾನ ಶಾಸನವು ಆಗಿದೆ. ನೂರ್ಮಡಿ ತೈಲಪನ ಆಳ್ವಿಕೆ ಕುರಿತು ಶಿರೋಳ್ಳಿಯ ಕ್ರಿ.ಶ. ೧೧೫೪ರ ಶಾಸನವು ವಿವರಿಸುತ್ತದೆ. ಜಯಸಿಂಗ ದೇವರು–(ಮೂರನೆಯ ಜಗದೇಕಮಲ್ಲ) ಜಯಸಿಂಗ ದೇವರು ಆಳುತ್ತಿದ್ದರು (ತಿಳಿಗೋಳ ಶಾಸನ ಕ್ರಿ.ಶ. ೧೦೩೯). ಅಹವಮಲ್ಲನು ನಂದರನ್ನು, ಚೋಳರನ್ನು ನಿರ್ಮೂಲನೆ ಮಾಡಿ ಕಂಚಿಯನ್ನು ಆಕ್ರಮಿಸಿದನು. ಈತ ರಾಯ ಪೆರ್ಮಾಡಿ ದೇವನ ಸಹಾಯದಿಂದ ಧಾರಾಪುರದ ಮಾಂಡಲೀಕನ ಸೊಕ್ಕು ಅಡಗಿಸಿದನು. ವೆಂಗಿ, ಸೌರಾಷ್ಟ್ರ ಗೆದ್ದನು ಮತ್ತು ಭೂ ತಳದಿಂದ ಹಿಮಾಲಯದವರೆಗೆ ತನ್ನ ರಾಜ್ಯ ವಿಸ್ತರಿಸಿದ ಎಂದು ಶಾಸನ ಉಲ್ಲೇಖಿಸಿದೆ. ಈತನ ನಂತರ ಸೋಮೇಶ್ವರ, ಜಗದೇಕಮಲ್ಲ ಮತ್ತು ನೂರ್ಮಡಿ ತೈಲಪನು ಆಳ್ವಿಕೆ ಮಾಡಿದರು (ಶಿರೋಳ್ಳಿ ಕ್ರಿ.ಶ. ೧೧೫೪). ನಿಂಬರ್ಗಾ ಕ್ರಿ.ಶ. ೧೦೪೬ ಶಾಸನ ಈತನ ಆಳ್ವಿಕೆ ಕಾಲದ ಬಗ್ಗೆ ತಿಳಿಸುತ್ತದೆ. ತ್ರಿಭುವನಮಲ್ಲ ದೇವ–ಕೌಂಟಿ ಕ್ರಿ.ಶ. ೧೦೮೨ರ ಶಾಸನದಲ್ಲಿ ಭುವನಾಶ್ರಯ, ಶ್ರೀ ಪೃಥ್ವಿವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಪರಮಭಟ್ಟಾರಕ ಸತ್ಯಾಶ್ರಯ ಕುಳತಿಳಕ, ಚಾಲುಕ್ಯಾಭರಣ, ಶ್ರೀಮತ್ತ್ರಿಭುವನಮಲ್ಲ ದೇವರು ಎಂದಿದೆ(ಸರಡಗಿ ಕ್ರಿ.ಶ. ೧೧೧೦ರ ಶಾಸನ). ವೀರ ಪೆರ್ಮಾಡಿದೇವ–ಶ್ರೀಮತ್ ಚಾಲುಕ್ಯ ಕುಲಚೂಡಾಮಣಿ ಶರಣಾಗತ ವನಿಪಾಲಕ, ರಕ್ಷಾಮಣಿ, ಯಾಚಕಜನ ಚಿಂತಾಮಣಿ ನೃಪಚಕ್ರವರ್ತಿ ತೈಲಪದೇವ, ಮುನಿಸಿ ರಟ್ಟರ ಪಾಲಕರನ್ನ ಹುಡುಕಿ ಕೊಂದು ಸಿಂಹಾಸನ ತನ್ನ ಬಾಹುಬಲದಿಂದೆಳೆದುಕೊಂಡು ಮಹಾವೀರ ಭೂಪಾಲನ ಪುತ್ರ ಸತ್ಯಸತ್ಯಬ್ರತನೆನಿಸಿದ ಸತ್ಯಾಶ್ರಯೋರ್ವ್ವೀಶ್ವರನ ಮಗ ಶ್ರೀವಿಕ್ರಮಾಂಕ ತದನುಜುನತುಳೋತ್ಸಾಹಿ ಸಂದಯ್ಯಣಯ್ಯನ ಮಗ ಜಯಸಿಂಹನ ಮಗ ಜಯಕೆನಲ್ಲನಾಹವಮಲ್ಲನ ಮಗ ಸೋಮೇಶ್ವರ ತದನುಜಾತನ ಭೀತಂ॥ ತೃಕಳಿಂಗಾಧೀಶ ಧಾರಾಧರಲಯ ಪರ್ವ್ವಂಬೋಜ ಬೋಜ ಭೃತ್ತ ಮಸ್ತಿಗ್ರಕರ ರಾಜಾಧಿರಾಜ ದ್ರವಿಳಪತಿ ಪತಂಗ ಸ್ಫುರದೀಪನದ್ರೇಶ ಕುರುಂಗೇಶಾದಿ ಕಾಂಚೀದನುಜಪುರ

ಪುರಧ್ವಂಶ ಕಂಭೋಜಾ****** ಕಾರಾಗಾರನಾಮಾಳವ ವಿಳಯಕರ ವೀರಪೇರ್ಮ್ಮಾಡಿದೇವ। ಎಂದು ಬಂದರವಾಡ ಕ್ರಿ.ಶ. ೧೧೧೮ರ ಶಾಸನದಲ್ಲಿ ಉಲ್ಲೇಖವಿದೆ.

ಜಗದೇಕಮಲ್ಲ–ಶ್ರೀ ಪೃಥ್ವಿವಲ್ಲಭ ಮಹಾರಾಜಾಧಿರಾಜ, ಶ್ರೀ ಪರಮೇಶ್ವರ, ಪರಮಭಟ್ಟಾರಕಂ, ಸತ್ಯಾಶ್ರಯ ಕುಳತಿಳಕ, ಚಾಳುಕ್ಯಾಭರಣ, ಶ್ರೀಮತು ಪ್ರತಾಪ ಚಕ್ರವರ್ತಿ ಜಗದೇಕಮಲ್ಲ ದೇವರು ಕಲ್ಯಾಣಪುರದಲ್ಲಿ ಸುಖದಿಂದ ರಾಜ್ಯವಾಳುತ್ತಿದ್ದರು(ಗೊಬ್ಬೂರು ಕ್ರಿ.ಶ. ೧೧೪೦). ತ್ರಿಭುವನಮಲ್ಲ ವೀರ ಸೋಮೇಶ್ವರ ದೇವ–ಶ್ರೀಮತುಚಾಳುಕ್ಯ ಚಕ್ರವರ್ತಿ ತ್ರಿಭುವನಮಲ್ಲ ವೀರ ಸೋಮೇಶ್ವರ ದೇವರು ಎಂದು ಕ್ರಿ.ಶ.೧೧೮೧ರ ಹೊಡಲ ಶಾಸನದಲ್ಲಿ ಉಲ್ಲೇಖಿತವಾಗಿದೆ. ತ್ರಿಭುವನಮಲ್ಲ ಸೋಮೇಶ್ವರ ದೇವ ಆಳ್ವಿಕೆ ಕಾಲದಲ್ಲಿ ಸೋಮವಾರ ಮಹಾಪ್ರಧಾನ ರಾಯದಂಡನಾಥ ಗಂಡಪೆಂಡಾರ ಚಾಳುಕ್ಯ, ರಾಜ್ಯ ಸಮುದ್ದರಣದಿಂದಿತ್ತು(ಮಡಿಹಾಳ ಕ್ರಿ.ಶ೧೧೮೪). ಆರನೆಯ ವಿಕ್ರಮಾದಿತ್ಯ–ಕಲ್ಯಾಣ ಚಾಲುಕ್ಯ ಅರಸ ೬ನೆಯ ವಿಕ್ರಮಾದಿತ್ಯನ ಬಗ್ಗೆ ಸುಲೇಪೇಟೆಯ ಕ್ರಿ.ಶ. ೧೧–೧೨ನೆಯ ಶತಮಾನದ ಶಾಸನ ತಿಳಿಸುತ್ತದೆ.

ಒಂದನೆಯ ಸೋಮೇಶ್ವರ–ಸುಲೇಪೇಟೆಯ ಕ್ರಿ.ಶ. ೧೧–೧೨ನೆಯ ಶತಮಾನದ ಶಾಸನ ಇತನ ಆಳ್ವಿಕೆ ಬಗ್ಗೆ ತಿಳಿಸುತ್ತದೆ. ತ್ರಿಭುವನಮಲ್ಲ ಸೋಮೇಶ್ವರ–ಶ್ರೀ ಪೃಥ್ವಿವಲ್ಲಭ ಮಹಾರಾಜಾಧಿರಾಜ ರಾಜ ಪರಮೇಶ್ವರಂ ಪರಮಭಟ್ಟಾರಕಂ ಸತ್ಯಾಶ್ರಯ ಕುಲತಿಲಕಂ ಚಾಳುಕ್ಯಾಭರಣಂ ಶ್ರೀಮತ್ರಿಭುವನಮಲ್ಲ ಸೋಮೇಶ್ವರ ರಾಜ್ಯವಾಳಿದ ಉಲ್ಲೇಖವಿದೆ (ಹೊಡಲ ಕ್ರಿ.ಶ. ೧೧೮೧). ಎರಡನೆಯ ಸೋಮೇಶ್ವರನ ಆಳ್ವಿಕೆಯನ್ನು ನಿಂಬರ್ಗ ಶಾಸನವು ವಿವರಿಸುತ್ತದೆ.

ದೇಗಲ್ಮಡಿಯ ಕ್ರಿ.ಶ. ೧೧೦೦ರ ಶಾಸನವು ಆರನೆಯ ವಿಕ್ರಮಾದಿತ್ಯನ ಬಿರುದು, ಆಳ್ವಿಕೆ ಬಗ್ಗೆ ವಿವರಿಸುತ್ತದೆ. ನಿಡಗುಂದದ ಕಾಳಮ್ಮನ ಗುಡಿ ಶಾಸನ ವಿಷ್ಣುವರ್ಧನ ವೀರ ಪೇರ್ಮಾಡಿಯ ಆಳ್ವಿಕೆಯ ಬಗ್ಗೆ ಸೂಚಿಸುವ ಅಪೂರ್ಣ ಶಾಸನವಾಗಿದೆ. ಇವುಗಳಲ್ಲದೆ ಈ ಕಾಲದ ದೇವಾಲಯ ವಾಸ್ತುಶಿಲ್ಪ ಶೈಲಿಯ ಔನತ್ಯದಿಂದ ಇವರ ಆಳ್ವಿಕೆ ಹೇಗಿತ್ತು ಎಂಬುದರ ಬಗ್ಗೆ ಮತ್ತು ಆ ಕಾಲದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆ ತಿಳಿಯಲು ಸಹಾಯಕವಾಗಿವೆ. ಶಿರೋಳ್ಳಿ ಶಾಸನ ಮುಮ್ಮಡಿ ತೈಲಪನ ವಂಶಾವಳಿ ಮತ್ತು ಕಾಲವನ್ನು ವಿವರಿಸುತ್ತದೆ. ಇದು ಕಲ್ಯಾಣ ಚಾಲುಕ್ಯರ ವಂಶಾವಳಿ ಬಿರುದು ಮತ್ತು ಸಾಧನೆ ಕುರಿತು ತಿಳಿಸುವ ಪ್ರಶಸ್ತಿ ಶಾಸನ ಮತ್ತು ದಾನ ಶಾಸನವೂ ಆಗಿದೆ. ಬೀದರ್ ಪ್ರದೇಶ ಅವರ ಆಳ್ವಿಕೆಯ ಭಾಗವಾಗಿತ್ತು. ಅದೇ ರೀತಿ ಚಿಂಚೋಳಿ ತಾಲೂಕು ಸಹ ಇವರ ಆಳ್ವಿಕೆಗೆ ಒಳಪಟ್ಟಿತ್ತು ಎನ್ನುವುದಕ್ಕೆ ನಿಷದಿ ಮತ್ತು ಶಾಸನ ಇತ್ಯಾದಿ ಐತಿಹಾಸಿಕ ಕುರುಹುಗಳು ಸಾಕ್ಷಿಯಾಗಿವೆ.

೬.೧.೫. ಕಳಚೂರಿಗಳು

ಬಿಜ್ಜಲದೇವ–ಕಲ್ಯಾಣ ಚಾಲುಕ್ಯರ ಚಕ್ರವರ್ತಿ ಸೋಮೇಶ್ವರನಿಗೆ ಅಧಿಕಾರದಿಂದ ಕೆಳಗಿಳಿಸಿ ರಾಜ್ಯವನ್ನು ಆಕ್ರಮಿಸಿದರು. ತಮ್ಮ ರಾಜ್ಯ ಸುಭದ್ರಪಡಿಸಿಕೊಳ್ಳಲು ಚೋಳ, ಗೂರ್ಜರನ್ನು ಗೆದ್ದ

ಬಿಜ್ಜಲದೇವಲ ಎಂದು ಉಲ್ಲೇಖಿಸಿದೆ(ಮೋಘಾ ಕ್ರಿ.ಶ. ೧೧೬೦).

ರಾಯಮುರಾರಿ ಸೋವಿದೇವ-ಶ್ರೀಪೃಥ್ವಿವಲ್ಲಭ, ಮಹಾರಾಜಾಧಿರಾಜ, ಕಾಳಂಜರ, ಪುರವರಾಧೀಶ್ವರ, ಸುವರ್ಣ ವೃಷಭ ಧ್ವಜ, ಡಮರುಗ ತೂರ್ಯನಿರ್ಘೋಷಣ, ಕಳಚೂರಿಯ ಕುಲಕಮಲ ಮಾರ್ತ್ತಂಡ, ಕದನ ಪ್ರಚಂಡ, ಮಾನಕನಕಾಚಳ, ಸುಭಟರಾದಿತ್ಯ, ಕಲಿಗಳ, ಕುಶಂ, ಗಜಸಾಮಂತ, ಶರಣಾಗತ ವಜ್ರಪಂಜರ ಎನ್ನುವ ಬಿರುದುಗಳ ಉಲ್ಲೇಖವಿದೆ (ಗೊಬ್ಬೂರು ಕ್ರಿ.ಶ. ೧೧೬೦). ಚಿನಮಳ್ಳಿ ಶಾಸನ ಕ್ರಿ.ಶ. ೧೧೭೩-ಪ್ರತಾಪ ಲಂಕೇಶ್ವರ, ಪರನಾರಿ ಸಹೋದರ, ಗಿರಿ ದುರ್ಗ್ಗಮಲ್ಲ, ಚಲದಂಕರಾಮಂ, ವೈರಿಭಕಂಠೀರವ, ನಿಸ್ಸಂಕಮಲ್ಲಂ, ಸನಿವಾರಸಿದ್ಧಿ, ಭುಜಬಲ ಚಕ್ರವರ್ತಿ ಎಂಬ ಪ್ರಶಸ್ತಿ ವಿವರಿಸುತ್ತದೆ. ಸಂಕಮ ದೇವ (ಹೊಡಲ ಕ್ರಿ.ಶ. ೧೧೮೧) ಆಳಿದ ಉಲ್ಲೇಖವಿದೆ. ಅಹವಮಲ್ಲ ದೇವನ-ಶ್ರೀಮತ್ಕಳಚೂರಿಯ ಚಕ್ರವರ್ತಿ ಆಹವಮಲ್ಲ ದೇವ ಎಂದು ಹೊಡಲ ಕ್ರಿ.ಶ. ೧೧೮೧ರ ಶಾಸನ ಉಲ್ಲೇಖಿಸುತ್ತದೆ.

೬.೨. ಸಾಮಂತ ದೊರೆಗಳು

ಈ ಭಾಗದ ರಾಜರುಗಳ ಆಳ್ವಿಕೆಗಳಲ್ಲಿ ಅವರ ಸಹಾಯಕ್ಕಾಗಿ, ಇಲ್ಲವೆ ಅವರ ಅಧೀನವಾಗಿ ಆಳ್ವಿಕೆ ಮಾಡುತ್ತಿದ್ದ ರಾಜರುಗಳು ಸಾಮಂತರಾಗಿದ್ದರು. ಯುದ್ಧದಲ್ಲಿ ಸೋತ ದೊರೆ ಇಲ್ಲವೆ ರಾಜರ ಆಳ್ವಿಕೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡ ಅವರಿಗೆ ವಾರ್ಷಿಕ ಕಪ್ಪಕೊಡುವವರೂ ಸಹ ಸಾಮಂತರೆನಿಸಿಕೊಳ್ಳುತ್ತಿದ್ದರು. ಕಲ್ಯಾಣ ಚಾಲುಕ್ಯರು ಮತ್ತು ಕಲಚೂರಿಗಳ ಕಾಲದಲ್ಲಿ ಹಲವು ಸಾಮಂತ ದೊರೆಗಳು ಆಳ್ವಿಕೆ ಮಾಡಿದ ನಿದರ್ಶನಗಳಿವೆ.

೬.೨.೧. ಯಾದವರು

ಯಾದವ ನಾರಾಯಣ ಪ್ರತಾಪ ಚಕ್ರವರ್ತಿ ಸಿಂಗಣದೇವ ಆಳ್ವಿಕೆ ಮಾಡಿದನು (ಹೊಡಲ ಕ್ರಿ.ಶ. ೧೨೬೭). ಯಾದವ ನಾರಾಯಣ ಪ್ರತಾಪ ಚಕ್ರವರ್ತಿ ಶ್ರೀ ಕಂನರದೇವ ಆಳ್ವಿಕೆ ಬಗ್ಗೆ ತಿಳಿಸುತ್ತದೆ(ಹಿರೇಝುಳಕಿ ಕ್ರಿ.ಶ. ೧೨೫೪). ಪ್ರತಾಪ ಚಕ್ರವರ್ತಿ ಸಿಂಗಣ ದೇವ(ಹೊಡಲ ಕ್ರಿ.ಶ. ೧೧೮೧)ನು ಆಳಿದ ವಿವರಣೆಯಿವೆ.

೬.೨.೨. ಶಿಲಾಹರರು

ಧನಸಂಗ್ರಹರಸ, ಬೊಪ್ಪದೇವ ಮತ್ತು ಮಾಯಿದೇವರಣಿ ಆಳ್ವಿಕೆಯನ್ನು ಮಾಡಿದ್ದರು.

೬.೨.೩. ಬಾಣರು

ವೀರಗೋಂಕರಸ ಮತ್ತು ಬಿಬ್ಬರಸರು ಈ ಭಾಗದಲ್ಲಿ ಆಳ್ವಿಕೆ ಮಾಡಿದ್ದರು.

ವಿವಿಧ ರಾಜಮನೆತನ ಮತ್ತು ಆಳ್ವಿಕೆಯ ವಿವರಣಾ ಸೂಚಿ

ರಾಜವಂಶ	ಅರಸರು	ಉಲ್ಲೇಖಿತ ಶಾಸನಗಳು
ರಾಷ್ಟ್ರಕೂಟರು	ಮೂರನೆಯ ಕೃಷ್ಣ-೯೫೪	ನಿಡಗುಂದ, ಶಿರವಾಳ
ರಾಷ್ಟ್ರಕೂಟರು	ಅಮೋಘವರ್ಷ ನೃಪತುಂಗ	ತಡಕಲ್

ಕಲ್ಯಾಣ ಚಾಲುಕ್ಯರು	ಒಂದನೆಯ ಸೋಮೇಶ್ವರ	ಸುಲೇಪೇಟೆ
ಕಲ್ಯಾಣ ಚಾಲುಕ್ಯರು	೬ನೆಯ ವಿಕ್ರಮಾದಿತ್ಯ	ಸುಲೇಪೇಟೆ, ಆಳಂದ, ಮರ್ತೂರು, ಮಣ್ಣೂರು
ಕಲ್ಯಾಣ ಚಾಲುಕ್ಯರು	ತ್ರಿಭುವನಮಲ್ಲ ಸೋಮೇಶ್ವರ	ಹೋಡಲ, ಮಡಿಹಾಳ
ಕಲ್ಯಾಣ ಚಾಲುಕ್ಯರು	೨ನೆಯ ಸೋಮೇಶ್ವರ	ನಿಂಬರ್ಗಾ
ಕಲ್ಯಾಣ ಚಾಲುಕ್ಯರು	೨ನೆಯ ಜಗದೇಕಮಲ್ಲ	ಗೊಬ್ಬೂರು
ಕಲ್ಯಾಣ ಚಾಲುಕ್ಯರು	ನೂರ್ಮಡಿ ತೈಲಪ	ಶಿರೋಳ್ಳಿ
ಕಲ್ಯಾಣ ಚಾಲುಕ್ಯರು	೩ನೆಯ ಜಗದೇಕಮಲ್ಲ/ ಜಯಸಿಂಗ ತ್ರಿಭುವನ ಮಲ್ಲದೇವ ವೀರ ಪೇರ್ಮಾಡಿದೇವ	ದೇವರು ತಿಳಗೋಳ ಕೌಂಟಿ, ಸರಡಗಿ ಬಂದರವಾಡ
ಕಳಚೂರಿಗಳು	ಬಿಜ್ಜಲದೇವ	ಮೋಘಾ
ಕಳಚೂರಿಗಳು ಕಳಚೂರಿಗಳು	ರಾಯಮುರಾರಿ ಸೋವಿದೇವ ಸಂಕಮದೇವ	ಗೊಬ್ಬೂರು, ಚಿನಮಳ್ಳಿ, ಹರಸೂರು ಹೊಡಲ
ಕಳಚೂರಿಗಳು	ಅಹವಮಲ್ಲ ದೇವ	ಹೊಡಲ ೧೧೮೧ &೧೨೬೭

ಸಾಮಂತ ಅರಸ ವಂಶ	ಸಾಮಂತ ಅರಸರು	ಉಲ್ಲೇಖಿತ ಶಾಸನಗಳು
ಯಾದವರು	ರಾಮಚಂದ್ರ	ಚಿನಮಳ್ಳಿ
ಯಾದವರು	ಸಿಂಗಣದೇವ	ಹೊಡಲ
ಯಾದವರು	ಕಂನರದೇವ	ಹಿರೇಝುಳಕಿ
ಚೋಳರು	ಚೋಳ ಅರಸ ರಾಜಾದಿತ್ಯ	ತಿಳಿಗೊಳ ೧೦೩೯
ಶಿಲಾಹಾರರು	ಧನಸಂಗ್ರಹರಸ, ಬೊಪ್ಪದೇವ ಮತ್ತು ಮಾಯಿದೇವರಣಿ	ಚಿನಮಳ್ಳಿ
ಬಾಣರು	ವೀರ ಗೋಂಕರಸ, ಬಿಬ್ಬರಸ	ಹುಣಸಿ ಹಡಗಲಿ, ಹೊಡಲ, ಹರಸೂರು

೬.೩. ಆಡಳಿತ ವ್ಯವಸ್ಥೆ

ರಾಜರು ರಾಜ್ಯದ ಶಾಂತಿ ಸುವ್ಯವಸ್ಥೆಗಾಗಿ ಆಡಳಿತದಲ್ಲಿ ರಾಜ್ಯವನ್ನು ವಿಭಾಗಗಳನ್ನಾಗಿ ಮಾಡಿದರು. ಆಡಳಿತದಲ್ಲಿ ಅಧಿಕಾರಿಗಳನ್ನು ನೇಮಿಸಿ ಪದವಿಗೆ ತಕ್ಕ ಅಧಿಕಾರವನ್ನು ನೀಡಿದರು. ಪ್ರಾಂತ್ಯಗಳನ್ನಾಗಿ, ಗ್ರಾಮಗಳನ್ನಾಗಿ ವಿಭಾಗಿಸಿ ಆಡಳಿತಾಧಿಕಾರಿಗಳನ್ನು ನೇಮಿಸಿದರು.

ಆಡಳಿತದ ಘಟಕಗಳಾಗಿ ಮಾಡಿರುವುದು ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಅಂತಹ ಆಡಳಿತ ಘಟಕಗಳೆಂದರೆ, ಅತ್ತಿನೂರೆಂಬತ್ತು, ಮನ್ನೆ(ಚಿನಮಳ್ಳಿ-ಕ್ರಿ.ಶ. ೧೧೭೫)ಯಾಗಿವೆ. ಕೋಪಣಾಪುರ, ತೆಂಕಲವತ್ತಿ ನೂರೆಂಭತ್ತು(ಬಂದರವಾಡ ಕ್ರಿ.ಶ. ೧೧೭೪) ಎಂದು ಉಲ್ಲೇಖಿತವಾಗಿವೆ. ಮಣಿಯೂರು ಮೂವತ್ತಿ, ಮಣಿಯೂರು ಹನ್ನೆರಡು ಕಂಪಣವೆರ್ಗಡೆ ಎಂದು ಕ್ರಿ.ಶ. ೧೧೨೧೧ರ ಮಾಶಾಳ ಶಾಸನದಲ್ಲಿ ಉಲ್ಲೇಖಿತವಾಗಿದೆ. ಮೋರಂಬ ಎಂಬತ್ತರ ಮನ್ನೆ ಎಂಬುದು ಪಡಸಾವಳಿಗೆ

ಕ್ರಿ.ಶ. ೧೧೧೦ರ ಶಾಸನದಲ್ಲಿದೆ. ಮೊರಂಬ ೯೪ ಎಂದು ರುದ್ರವಾಡಿ ಕ್ರಿ.ಶ. ೧೧೦೩ರ ಶಾಸನದಲ್ಲಿದೆ. ಮೊರಂಬ ೯೪ ಮನ್ನೆಯಂ(ರುದ್ರವಾಡಿ ಕ್ರಿ.ಶ. ೧೧೦೩), ಮನ್ನೆದಡಿಯ ಸವಕಟ್ಟೆನುಜ್ಜಳಬೆ ೩೦ರ ಬಿಳಿಯವಾಡ (ರುದ್ರವಾಡಿ ಕ್ರಿ.ಶ. ೧೧೦೩), ಮಣಿಯೂರು[೨], ಕಂಪಣ, ಪೇರ್ಗ್ಗಡೆ (ಮಣ್ಣೂರು ಕ್ರಿ.ಶ. ೧೧೨೦), ಮೊರಂಬ ಮೂವತ್ತು ಮತ್ತು ಮೊರಂಬ ಎಂಬತ್ನಾಲ್ಕು(ರುದ್ರವಾಡಿ ಕ್ರಿ.ಶ. ೧೧೧೮), ಮನ್ನೆದಡಿಸಾಸಿರ (ಹೊಡಲ ಕ್ರಿ.ಶ. ೧೨೬೭), ಅತ್ತಿನೂರು ಎಂಬತ್ತು, ಅತ್ತಿನೂರೆಂಬತ್ತರ ಬಳಿಯ ಬಾಡ ವೀರಜವಾಡಮಂ (ಚಿನಮಳ್ಳಿ ಕ್ರಿ.ಶ. ೧೧೬೭), ಗೊಂಕನೂರಿಪ್ಪತ್ತು (ಹರಸೂರು ಕ್ರಿ.ಶ. ೧೧೭೨) ಮತ್ತು ಗೊಂಕ ನೂರಿಪ್ಪತ್ತರುವತ್ತು, ಅಂಬುಲಿಗೆ ಮೂವತ್ತು, ಗೋಂಕ ದೇಶಾಂತರದೊಳ್, ಮಂನೆದಡಿ ಸಾಸಿರ ಎಂದು ಹೊಡಲ ಕ್ರಿ.ಶ. ೧೧೮೧ರ ಶಾಸನದಲ್ಲಿ ಉಲ್ಲೇಖಗಳಿವೆ.

೬.೩.೧. ಅಫಜಲ್‌ಪುರ ಮತ್ತು ಚಿಂಚೋಳಿ ತಾಲೂಕಿನ ಆಡಳಿತ ವಿವರಣೆ

ಆಡಳಿತ ಅಧಿಕಾರ	ಅಧಿಕಾರಗಳು	ಉಲ್ಲೇಖಿತ ಶಾಸನಗಳು
ರಾಜ	ತ್ರಿಭುವನಮಲ್ಲ– ಜಗದೇಕಮಲ್ಲ– ರಾಯಮುರಾರಿ ಸೋವಿದೇವ– ಮೂರನೆಯ ಕೃಷ್ಣ– ಒಂದನೆಯ ಸೋಮೇಶ್ವರ–	ಗೊಬ್ಬೂರು–೧೨ನೆಯ ಶತಮಾನ ಗೊಬ್ಬೂರು ಕ್ರಿ.ಶ.೧೧೪೦ ಚಿನಮಳ್ಳಿ–೧೧೭೫ ನಿಡಗುಂದ ಕ್ರಿ.ಶ.೯೩೯ ಸುಲೇಪೇಟೆ ಕ್ರಿ.ಶ. ೧೧ನೆಯ ಶತಮಾನ
ಯುವರಾಜ	ಮಲ್ಲಿಕಾರ್ಜುನ– ಜವಳಿಗೆಯ ಯುವರಾಜ ಮಲ್ಲಿಕಾರ್ಜುನ–	ಅಫ್ಜಲ್‌ಪುರ–ಕ್ರಿ.ಶ.೧೧೦೭ ರುದ್ರವಾಡಿ ಕ್ರಿ.ಶ.೧೧೦೩
ಮಹಾಸಾಮಂತ ಮತ್ತು ದಂಡನಾಯಕ	ಲಕ್ಷ್ಮರಸ	ಬಂದರವಾಡ ಕ್ರಿ.ಶ.೧೧೧೮
ಮಹಾಪ್ರಧಾನ	ನಾಚಿಮರಸ– ಕಲ್ಯಾಣ ದಂಡನಾಯಕರು– ಶ್ರೀಕರಣ– ತ್ರಿಪುರಾಂತ ಕೈಯರು– ಕಾಳಿದಾಸಯ್ಯ–	ಅಫ್ಜಲ್‌ಪುರ–ಕ್ರಿ.ಶ.೧೧೦೭ ಚಿನಮಳ್ಳಿ–ಕ್ರಿ.ಶ.೧೧೭೫ ಗೊಬ್ಬೂರು–ಕ್ರಿ.ಶ.೧೧೭೦ ಬಂದರವಾಡ ಕ್ರಿ.ಶ.೧೧೧೮ ಮಾಶಾಳ ಕ್ರಿ.ಶ.೧೧೨೧ ಹೊಡಲ ಕ್ರಿ.ಶ.೧೨೬೭
ಮಹಾಮಂಡಳೇಶ್ವರ	ಡಾಂಕರಸ (ಮನ್ನೆಯ)– ರಾಯದೇವರಸ– ನಾಭಿರಾಜ– ಮಲ್ಲಿದೇವನಂಕಕಾರ ಕಲಿಕಾಮ–	ಅಫ್ಜಲ್‌ಪುರ–ಕ್ರಿ.ಶ.೧೧೦೭ ಗೊಬ್ಬೂರು–೧೨ನೆಯ ಶತಮಾನ ಗೊಬ್ಬೂರು–ಕ್ರಿ.ಶ.೧೧೭೦ ಗೊಬ್ಬೂರು–ಕ್ರಿ.ಶ.೧೧೭೦

	(ಅಳಂದೆಯ ಮಹಾಮಂಡಳೇಶ್ವರ) ಮನ್ನೆಯ ಅಹವಮಲ್ಲರಸ-ಗೊಂಕರಸ(ಮನ್ನೆಯ) ವೀರ ಅಹವಮಲ್ಲ ದೇವ-ಆಹವಮಲ್ಲರಸ-ವೀರಗೋಂಕದೇವ-	ಚಿನಮಳ್ಳಿ-ಕ್ರಿಶ೧೧೭೫ ಬಂದರವಾಡ ಕ್ರಿ.ಶ.೧೧೧೮ ಬಂದರವಾಡ ಕ್ರಿ.ಶ.೧೧೭೪ ಮಾಶಾಳ ಕ್ರಿ.ಶ.೧೧೨೧ ಮೋಘಾ ಕ್ರಿ.ಶ.೧೧೭೦
ಮಹಾಪ್ರಧಾನ ದಂಡನಾಯಕರು-ಮಹಾಪ್ರಧಾನ ದಂಡಾಧಿಪತಿ-	ತ್ರಿಪುರಾಂತ ಕೈಯರು-ಕಾಳಿದಾಸಯ್ಯ ಅತ್ತಿನೂರೆಂಬತ್ತರ-ಕಲ್ಯಾಣ ದಂಡ-ನಾಯಕರು	ಬಂದರವಾಡ ಕ್ರಿ.ಶ.೧೧೧೮ ಮಾಶಾಳ ಕ್ರಿ.ಶ.೧೧೨೧ ಚಿನಮಳ್ಳಿ-ಕ್ರಿಶ೧೧೭೫
ದಂಡನಾಯಕರು	ಗೋವಿಂದ ದೇವರಸರು-ಮನ್ನೆನಾಡಿನ ವೆಸಪಯ್ಯ-	ಬಂದರವಾಡ ಕ್ರಿ.ಶ.೧೧೭೪ ಮೋಘಾ ಕ್ರಿ.ಶ.೧೧೭೦
ಮಹಾಮಂಡಳೇಶ್ವರ ಮತ್ತು ಕೋಪಣ ಊರಿನ ಅಧಿಕಾರಿ	ನಾಭಿರಾಜ	ಗೊಬ್ಬೂರು-ಕ್ರಿ.ಶ.೧೧೭೦
ಹಿರಿಯ ಕನ್ನಡ ಸಂಧಿವಿಗ್ರಹಿ ಮತ್ತು ದಂಡನಾಯಕ	ಕಾಳಿಮಯ್ಯ ನಾಯಕ	ಗೊಬ್ಬೂರು-ಕ್ರಿ.ಶ.೧೧೭೦
ಮಹಾಪ್ರಧಾನ ಮತ್ತು ಬಾಹತ್ತರ ನಿಯೋಗಾಧಿಪತಿ	ಶ್ರೀಕರಣ	ಗೊಬ್ಬೂರು-ಕ್ರಿ.ಶ.೧೧೭೦
ಶ್ರೀರಣ ಪದವಿ ಮತ್ತು ವಿಭುಗ ನಿಧಾನ ಹಿರಿಯ ಸಂಧಿವಿಗ್ರಹಿ ಪದವಿ	ಕಾಳಿದಾಸ	ಗೊಬ್ಬೂರು-ಕ್ರಿ.ಶ.೧೧೭೦
ಪ್ರಭು	ಮಲ್ಲಿಗ (ಮನ್ನೆಯ) -ಅಮ್ಮಣ್ಣ ನಾಯಕ (ಅತ್ತಿನೂರಿನ)-	ಗೊಬ್ಬೂರು-೧೨ನೆಯ ಶತಮಾನ ಚಿನಮಳ್ಳಿ-ಕ್ರಿ.ಶ. ೧೧೭೫
ಹೆಗ್ಗಡೆ		ಗೊಬ್ಬೂರು-೧೨ನೆಯ ಶತಮಾನ ಚಿನಮಳ್ಳಿ-ಕ್ರಿಶ೧೧೭೫ ಬಂದರವಾಡ ಕ್ರಿ.ಶ.೧೧೧೮

೬.೩.೨. ಆಳಂದ ಮತ್ತು ಗುಲ್ಬರ್ಗಾ ತಾಲೂಕಿನ ಆಡಳಿತ ವಿವರಣೆ

ಆಡಳಿತ ಅಧಿಕಾರ	ಅಧಿಕಾರಗಳು	ಉಲ್ಲೇಖಿತ ಶಾಸನಗಳು
ರಾಜ	ತ್ರಿಭುವನ ಮಲ್ಲ ದೇವ- ತ್ರಿಭುವನ ಮಲ್ಲ ಸೋಮೇಶ್ವರ- ಯಾದವ ದೊರೆ-ಕನ್ನರದೇವ- ಯಾದವ ದೊರೆ-ಪ್ರತಾಪ ಚಕ್ರವರ್ತಿ ಸಿಂಗಣದೇವ- ಮೂರನೆಯ ಜಗದೇಕಮಲ್ಲ- ಚೋಳ ಅರಸ ರಾಜಾದಿತ್ಯ	ಕೌಂಟಿ ಕ್ರಿ.ಶ.೧೦೮೭ ಮಡಿಹಾಳ ಕ್ರಿ.ಶ.೧೧೮೪ ಹಿರೇಝಳಕಿ ೧೨ನೆಯ ಶತಮಾನ ಹೊಡಲ ಕ್ರಿ.ಶ೧.೨೬೭ ತಿಳಿಗೊಳ ಕ್ರಿ.ಶ.೧೦೩೯ ತಿಳಿಗೊಳ ಕ್ರಿ.ಶ.೧೦೩೯
ಯುವರಾಜ	ಮಲ್ಲಿಕಾರ್ಜುನ	
ಮಹಾಮಂಡಳೇಶ್ವರ	ಬಿಬ್ಬರಸ- ಮನ್ನೆಯ ಸಿಂಗ ಬಿಬ್ಬನಂಕಕಾರ ಗೋಂಕರಸ- ಹೆರ್ಮ್ಮಾಡಿಯರಸರು- ಮಾಗರಸ-	ಕೌಂಟಿ ಕ್ರಿ.ಶ.೧೦೮೭ ನಿಂಬರ್ಗಿ ಕ್ರಿ.ಶ.೧೦೯೮ ಕಡಗಂಚಿ ಕ್ರಿ.ಶ.೧೧೧೮ ರುದ್ರವಾಡಿ ಕ್ರಿ.ಶ.೧೧೦೩
ಪ್ರಭುಗಳು	ವಿಷ್ಣುಭಟ್ಟರು(ಸರಡಗೆಯ)- ನಾರಾಯಣದೇವ (ಪಟ್ಟಸಾವಳಿಗೆಯ)- ಕೇಶಿಮರಸ(ಕಡಗಂಚಿಯ)-	ಸರಡಗಿ ಕ್ರಿ.ಶ.೧೧೧೦ ಪಡಸಾವಳಿಗೆ ಕ್ರಿ.ಶ೧೧೧೦ ಕಡಗಂಚಿ ಕ್ರಿ.ಶ.೧೧೧೮
ದಂಡನಾಯಕರು	ಹಿರಿಯ ದಂಡನಾಯಕ- ಬಂಮಣ್ಣಯ್ಯ- ನಾರದೇವ ಹೆಗ್ಗಡೆ- ಚಾವಣಯ್ಯ ಮತ್ತು ಕುಮಾರ ಪದ್ಮರಸ- ವಾಮರಸ-	ಹರಸೂರು ಕ್ರಿ.ಶ.೧೦೯೭ ಪಡಸಾವಳಿಗೆ ಕ್ರಿ.ಶ.೧೧೧೦ ಮಡಿಹಾಳ ಕ್ರಿ.ಶ.೧೧೮೪ ಜವಳಿ ಕ್ರಿ.ಶ.೧೨-೧೩ನೆಯ ಶತಮಾನ
ಮಂಡಳೀಕ	ದೇವ ನಾಗರಸ- ಗುಣೋತ್ತರನಪ್ಪಾಹವಮಲ್ಲ-	ನಿಂಬರ್ಗಿ ಕ್ರಿ.ಶ.೧೦೯೮ ನಿಂಬರ್ಗಿ ೧೨ನೆಯ ಶತಮಾನ
ರಾಣಿ	ಚಂದಲದೇವಿ- ಹಿರಿಯ ಅರಸಿ ಚಂದಲದೇವಿ ಮತ್ತು ಜಾಕಲದೇವಿ-	ನಿಂಬರ್ಗಾ ಕ್ರಿ.ಶ.೧೦೫೫ ರುದ್ರವಾಡಿ ಕ್ರಿ.ಶ.೧೧೦೩
ಮಹಾಪ್ರಧಾನ	ರಾಯ ದಂಡನಾಥ ಲಕ್ಷ್ಮಿದೇವ ದಂಡನಾಯಕರು	ಮಡಿಹಾಳ ಕ್ರಿ.ಶ.೧೧೮೪ ಹೊಡಲ ಕ್ರಿ.ಶ.೧೨೬೭

೬.೩.೩. ಇತರೆ ಆಡಳಿತ ಅಧಿಕಾರಿಗಳು

ಮಣಿಯೂರು ಹನ್ನೆರಡು ಕಂಪಣವೆರ್ಗ್ಗಡೆ ಆದಿತ್ಯನಾಯಕ, ಅಲಂದೆ ಸಾಸಿರದ ಪೆರ್ಗಡೆ ಒಡೆತನವಿದ್ದ ಕಾಳಿದಾಸಯ್ಯ ಎಂದು ಮಾಶಾಳದ ಕ್ರಿ.ಶ. ೧೧೨೧ ಶಾಸನ ಉಲ್ಲೇಖಿಸಿದೆ. ಮಣಿಯೂರು[೨] ಕಂಪಣ ಪೆರ್ಗ್ಗಡೆಯ ಅಧಿಕಾರಿ–ಆದಿತ್ಯ ನಾಯಕ, ಮನ್ನೆಯಧೀಕ ಗೋವಣರಸ (ಮಾಶಾಳ ಕ್ರಿ.ಶ.೧೧೨೦), ದಂಡಾಧೀಶ–ವೆಸವಯ್ಯ(ಮೋಘಾ ಕ್ರಿ.ಶ. ೧೧೭೦) ಮತ್ತು ಶಾಸನ ದಂಡನಾಯಕ ವಿಮಲಾದಿತ್ಯ ಎಂದು ಉಲ್ಲೇಖವಾಗಿವೆ (ಶಿರೋಳ್ಳಿ ಕ್ರಿ.ಶ. ೧೧೫೪). ರಾಜ ರಾಯಮುರಾರಿ ಸೋವಿದೇವ, ಮಹಾಮಂಡಳೇಶ್ವರ ಮನ್ನೆಯ ಅಹವಮಲ್ಲ, ಪೆರ್ಗ್ಗಡೆ ಬರ್ಮಯ್ಯ, ಅತ್ತಿನೂರು ಪ್ರಭು ಅಂಮ ಗಾವುಂಡ ರಾಮರಸ. ಮಹಾಪ್ರಧಾನ, ಗಣಾಧಿಪತಿ, ಅತ್ತಿನೂರು ಎಂಬತ್ತರ ಅಧಿಕಾರಿ ಕುಲಗೌವುಂಡ ಸೋವಣನಾಯಕರು, ಭವರೋಡಮಡ್ಡಿಯ ದಂಡನಾಯಕರು (ಚಿನಮಳ್ಳಿ ಕ್ರಿ.ಶ. ೧೧೬೭) ಎಂದಿವೆ. ಮಹಾಮಂಡಳೇಶ್ವರ– ವೀರ ಗೋಂಕರಸ, ಮಹಾಸಾಮಂತ ಮತ್ತು ಮಹಾಮಂಡಲೇಶ್ವರ, ಮಲ್ಲಿದೇವರಸರು, ಮಹಾ ಪ್ರಧಾನಂ ಬಾಹತ್ತರ ನಿಯೋಗಾಧಿಪತಿ ಹಿರಿಯ ದಂಡನಾಯಕಂ ಚಂದುಗಿ ದೇವರಸರು, ಶ್ರೀಮನ್ಮಹಾ ಮಂಡಲೇಶ್ವರಂ ವೀರಗೊಂಕರಸರು ಮತ್ತು ಮಲ್ಲಿದೇವರಸರು. ಶ್ರೀಮನ್ಮಹಾಪ್ರಧಾನಂ ಬಾಹತ್ತರ ನಿಯೋಗಾಧಿಪತಿ ಹಿರಿಯ ಸೋವಣಯ್ಯ ದಂಡನಾಯಕರು, ಶ್ರೀಮನ್ಮಹಾ ಮಂಡಲೇಶ್ವರ– ಬಾಣರಾದಿತ್ಯ, ಬಾಣ...... ವಂಶಕುಲೋದ್ಭವನುಂ ಮಂನೆದಡಿ ಸಾಸಿರದ ವೀರ ದುಂಮರಸರು, ಶ್ರೀಮಂತ್ರಿ ಚೂಡಾಮಣಿ, ಪಂಚ ಮಹಾಪ್ರಧಾನ ಶ್ರೀಮತ್ ರಾಯ ದಂಡನಾಥ ಗಂಡ ಪಿಂಡಾರ, ದಂಡನಾಯಕರು ಬಾವಣಯ್ಯ, ಕುಮಾರ ಪದ್ಮುಗಿದೇವ ದಂಡನಾಯಕರು, ಉಭಯ ಮಂನೆಯರು ಯಜಮಾನ, ಬೊಂಮ ಗಾವುಂಡ, ರೇಮಗಾಮುಂಡ, ಬೀಲಗಾಮುಂಡ, ಮಹಾಪ್ರಧಾನ ಲಕ್ಷ್ಮದೇವ ದಂಡ ನಾಯಕರು, ಮಂನೆದಡಿ ಸಾಸಿರದ ಮಂನೆಯ ಕೇಶವ ದೇವರಸರು (ಹೊಡಲು ಕ್ರಿ.ಶ. ೧೧೮೧) ಎಂದು ಉಲ್ಲೇಖಿಸಿರುವುದು ಕಂಡು ಬರುತ್ತದೆ.ಶೇಷ–ಮಹಾಜನ, ಗೋಂಕನಾಡು ಮನ್ನೆಯ ಗೋಂಕರಸ, ಸೀಮೊಳ ಪ್ರಭು ನಾಚರಸ, ಜಗದೇಕಮಲ್ಲನೃಪರ ಮನೆಯೋಳ್ವರ ಮಂತ್ರಿ ಸಿದ್ದಪಯ್ಯ (ಹರಸೂರು ಕ್ರಿ.ಶ. ೧೦೯೭) ಎಂದು ಉಲ್ಲೇಖಿಸಿವೆ. ಮನ್ನೆಯ ಅಧಿಕಾರಿ ಬಿಂಬರಸ (ನಿಂಬರ್ಗಾ ಕ್ರಿ.ಶ. ೧೦೯೮) ಎಂದಿದೆ. ಮಂಡಲಪತಿ ಆಹವಮಲ್ಲ ದೇವ, ಮನ್ನೆಯ ಸಿಂಗನೀಶ್ವರ, ಮಂಡಳೀಕ ದೇವ ನಾಗರಸ, ಮಂಡಳೀಕ ದೇವನಾಗ (ನಿಂಬರ್ಗಾ ಕ್ರಿ.ಶ.೧೦೫೫) ಎಂದು ಉಲ್ಲೇಖಿತವಾಗಿದೆ. ವಾಮರಸ ದಂಡನಾಯಕನಿದ್ದು ಅವನ ವೃತ್ತಿ ಕರ ಸಂಗ್ರಹಿಸುವುದಾಗಿತ್ತು (ಜವಳಿ ಕ್ರಿ.ಶ. ೧೨–೧೩ನೆಯ ಶತಮಾನ). ಗೋಂಕಣನರಸಿ 'ಕುಮಾರ ಪೆರ್ಗಡೆ' ಕರಣವಧ್ಯಕ್ಷ, ಸಂಧಿವಿಗ್ರಹಿಯಾಗಿದ್ದರು (ರುದ್ರವಾಡಿ ಕ್ರಿ.ಶ. ೧೧೦೩), ಆಡಳಿತಾಧಿಕಾರಿ ಮಲ್ಲ ದಂಡಾಧೀಪ (ರುದ್ರವಾಡಿ ಕ್ರಿ.ಶ. ೧೧೦೩), ಊರೋಡೆಯ ನಿಂಬದೇವಯ್ಯ, ಊರೋಡೆಯ ನಾಗವರ್ಮಯ್ಯ, ನಾಮಗಾವುಂಡ (ತಿಳಿಗೊಳ ಕ್ರಿ.ಶ. ೧೦೩೯), ಸಾಂತಲ ದೇವಿ, ಹೆಗ್ಗಡೆ ಚಂದಿರಾಜಯ್ಯ(ಹಂದರಕಿ ಕ್ರಿ.ಶ. ೧೧೨೨) ಎಂದು ಉಲ್ಲೇಖಿತವಾಗಿವೆ.

ಶ್ರೀಮನ್ಮಮಹಾಪ್ರಧಾನಂ ಸೇನಾಧಿಪತಿ ಬಾಹತ್ತರ ನಿಯೋಗಾಧಿಪತಿ ಪಿರಿಯ ದಂಡ ನಾಯಕರ ವಸಾಧವಂಶ್ಯ ನಾಯಕ, ಮಹಾಮಂಡಳೇಶ್ವರಂ ಕೊಪ್ಪಣ ಪುರವರಾಧೀಶ್ವರಂ ನಾಚರಾಜಾನ್ವಯಂಬೋಜ ದಿವಾಕರಂ ಸತ್ಯರತ್ನಾಕರಂ ಶ್ರೀಮದಲಂದೆಯ ಸೋಮನಾಥ ದೇವಲಬ್ಧ ವರ ಪ್ರಸಾದಂ ಮೃಗಮದಾಮೋದಂ ಮಂನ್ನೆಯ ಸಿಂಹಂ ಮನ್ನೆಯ ಬಂಗಾರಂ ಶ್ರೀಮನ್ಮಮಹಾಮಂಡಲೇಶ್ವರಂ ವೀರರಾಮದೇವರಸರು ಮತ್ತು ವೀರಗೋಂಕರಸರು, ಸ್ಥಾನ ಪ್ರಭು ಚಿಕ್ಕ ಗೌಂಡ ಎಂದಿದೆ(ಹರಸೂರು ಕ್ರಿ.ಶ. ೧೧೭೨).

ಆಡಳಿತದಲ್ಲಿ ರಾಜ, ಮಹಾಪ್ರಧಾನರು ಕೇಂದ್ರಾಡಳಿತ ವ್ಯವಸ್ಥೆ ನೋಡಿಕೊಳ್ಳುತ್ತಿದ್ದರು. ಇವರ ಅಧೀನದಲ್ಲಿ ರಾಣಿಯರು, ಯುವ ರಾಜರು, ಮಹಾಸಾಮಂತರು, ಪ್ರಾಂತ್ಯಗಳಲ್ಲಿ ಆಳ್ವಿಕೆ ಮಾಡುತ್ತಿದ್ದರು. ಪ್ರಾಂತ್ಯಾಡಳಿತದಲ್ಲಿ ದಂಡನಾಯಕರು, ಮಹಾಮಂಡಳೇಶ್ವರರು, ಮಂಡಳೇಶ್ವರರು, ದಂಡನಾಯಕರು, ಊರಿನ ಅಧಿಕಾರಿಗಳು ಆಡಳಿತ ಮಾಡುತ್ತಿದ್ದರು. ಗಾವುಂಡ, ಗೌಡ, ಪ್ರಭು, ಹೆಗ್ಗಡೆಗಳು ಗ್ರಾಮದ ಆಡಳಿತ ನೋಡಿಕೊಳ್ಳುತ್ತಿದ್ದರು. ಇವರಲ್ಲದೆ ಇತರೆ ಅಧಿಕಾರಿಗಳಾದ ಸಂಧಿವಿಗ್ರಹಕರು, ಸ್ಥಾನ ಪ್ರಭುಗಳು, ಚಿಕ್ಕ ಗಾವುಂಡರು, ನೀಯೋಗಾಧಿಪತಿಗಳು, ಕರಣಿಕರು ಮೇಲಿನ ಅಧಿಕಾರಿಗಳಿಗೆ ಸಹಾಯ ಮಾಡುತ್ತಿದ್ದರು.

೬.೩.೪. ಶಾಸನೋಕ್ತ ಗ್ರಾಮಗಳು ಮತ್ತು ಕೋಟೆಗಳ ಉಲ್ಲೇಖ

ಮೇಳಕುಂದೆ, ಕಲಂಬುರಗೆ, ಗೊಬ್ಬೂರು, ಪಂದರಕೆ, ಮೊದಗನೂರು ಕುಪ್ಪ(ಗೊಬ್ಬೂರು- ಕ್ರಿ.ಶ. ೧೧೭೦). ಚಿನಮಳ್ಳಿ(ಚಿನಮಳ್ಳಿ-ಕ್ರಿ.ಶ. ೧೧೭೫). ಗೌಣಪುರ, ಹಸಿರುಗುಂಡಿಗೆ, ಕೆಕ್ಕರಸಾವಳಿಗೆ, ಅಲಂದೆ ಸಾಸಿರ, ಬಂದರವಾಡ(ಬಂದರವಾಡ ಕ್ರಿ.ಶ. ೧೧೧೮). ಕಲಂಬುರಗೆ, ಸರ್ವ್ವಡಿಗೆ(ಸರಡಗಿ ಕ್ರಿ.ಶ. ೧೧೧೦). ಮಾಡಿಫಳ, ವೇಳುಗ್ರಾಮ (ನಿಂಬರ್ಗಾ ಕ್ರಿ.ಶ.೧೨ನೆಯ ಶತಮಾನ). ಸಿರಿಊರು (ಮಡಿಹಾಳ ಕ್ರಿ.ಶ. ೧೩ನೆಯ ಶತಮಾನ). ಹಿರೇಝುಳಕಿಗೆ ಮಾವಿನ ಝುಳಕಿ ಎಂದು ಉಲ್ಲೇಖಿಸಲಾಗಿದೆ (ಹಿರೇಝುಳಕಿ ಕ್ರಿ.ಶ. ೧೨ನೆಯ ಶತಮಾನ). ಹೊಡಲ (ಹೊಡಲ ಕ್ರಿ.ಶ. ೧೨೬೭). ಪಿರಿಯ ತಡಕಲ್ (ತಡಕಲ್ ಕ್ರಿ.ಶ. ೧೧-೧೨ನೆಯ ಶತಮಾನ). ಕಡಗಂಚಿ (ಕಡಗಂಚಿ ಕ್ರಿ.ಶ. ೧೧೧೮). ಮಾಡಿಫಳ (ದೇವಂತಿ ಕ್ರಿ.ಶ. ೧೧-೧೨ನೆಯ ಶತಮಾನ). ರುದ್ರವಾಡಿ, ಜವಳಿಗೆ, ವಲ್ಲಿ, ಖಜ್ಜೂರಿ, ಮನೆಯೂರು (ರುದ್ರವಾಡಿ ಕ್ರಿ.ಶ. ೧೧೦೩). ಸನ್ನತಿ (ತಿಳಿಗೊಳ ಕ್ರಿ.ಶ. ೧೦೪೯). ಕೊರಲೂರು (ಚಿಂಚನಸೂರು-೧೩೦೨). ಮೋಘಾ (ಮೋಘಾ ಕ್ರಿ.ಶ. ೧೦-೧೧ನೆಯ ಶತಮಾನ). ಸುಲ್ಲಿಗ್ರಾಮ (ಸುಲೇಪೇಟೆ ಕ್ರಿ.ಶ. ೧೧ನೆಯ ಶತಮಾನ). ಅಂಕುಲಗೆ, ಸಿಂಧನೂರು, ಚಿಲಮಳ್ಳೆ (ಚಿನಮಳ್ಳಿ ಕ್ರಿ.ಶ. ೧೧೬೭). ಹೊಡಲ (ಹೊಡಲ ಕ್ರಿ.ಶ. ೧೧೮೧) ಎಂದು ಶಾಸನಗಳು ಉಲ್ಲೇಖಿಸುತ್ತವೆ. ಶಾಸನೋಕ್ತವಾಗಿ ಉಲ್ಲೇಖಿತ ಊರುಗಳು ತಮ್ಮ ಹೆಸರು ಹಾಗೆ ಉಳಿಸಿಕೊಂಡು ಹೋಗಿವೆ. ಕೆಲವೊಂದು ಹೆಸರುಗಳು ಬದಲಾಗಿರುವುದು ಶಾಸನಗಳಿಂದ ತಿಳಿದುಕೊಳ್ಳಬಹುದಾಗಿದೆ.

ಕೋಟೆಯ ಉಲ್ಲೇಖ: ರಾಜರು ತಮ್ಮ ರಾಜ್ಯ, ಪ್ರದೇಶಗಳ ರಕ್ಷಣೆಗೆ ಕೋಟೆಗಳನ್ನು ಕಟ್ಟುತ್ತಿದ್ದರು. ಚಿಣಬಗೆರೆಯ ತೆಂಕಲವತ್ತಿನೂರ ಕೋಟೆ (ಬಂದರವಾಡ ಕ್ರಿ.ಶ. ೧೧೭೪). ಅಂಕುಲಗೆಯ ಕೋಟೆ (ಕಡಗಂಚಿ ಕ್ರಿ.ಶ.೧೨ನೆಯ ಶತಮಾನ).

ಸೈನ್ಯಾಡಳಿತ

ಪದಾತಿ ದಳ, ಶರ ಜಾಲ (ನಿಂಬರ್ಗಾ ಕ್ರಿ.ಶ. ೧೦೫೫). ಗಜದಳ, ರಥಸಂಕುಲ, ಪದಾತಿ(ನಿಂಬರ್ಗಾ ಕ್ರಿ.ಶ. ೧೦೪೬). 'ಅಂಥಾ ಹಾರತಿಗೆ ಚಾಲುಕ್ಯರು ಹುಟ್ಟಿ ಗದಮಂ, ರಥಸಂಕುಳಮಂ, ಪದಾತಿದುರ್ದ್ಧರ ಬಲ, ಶರ ಜಳಮಂ, ಭಯಂಕರ ವೀರ ಖಡ್ಗದ ತಪತ್ರಮಂ, ಸ್ಮರರಿಪು ವಿತ್ತನೆಂದಡೆ ಚಾಲುಕ್ಯರ ಪೆರ್ಮ್ಮೆಯನಾರೋ ವರ್ಣಿಪರ್' ಎಂದು ಕ್ರಿ.ಶ.೧೦೫೫ರ ನಿಂಬರ್ಗಾ ಶಾಸನದಲ್ಲಿ ಉಲ್ಲೇಖಿತವಾಗಿದೆ. ಹೋಡಲದ ಕ್ರಿ.ಶ೧೧೭೨ರ ಶಾಸನದಲ್ಲಿ ಚಾತುರ್ಬಲ ಮುಖ್ಯ ಬೃವಣ ಚಮೂಪಂ ಧರ್ಮಮಂ ಕಂದದ ಶ್ರೀ ಚಮಾಪುರಮಂ ಎಂದು ವಿವರಿಸಿದೆ. ಸೈನ್ಯದಲ್ಲಿ ಚತುರ್ಬಲವಿದೆ. ನಾಲ್ಕುಬಲ ಪದಾತಿ, ಅಶ್ವದಳ, ರಥದಳ ಮತ್ತು ಗಜದಳವಿವೆ.

ಯುದ್ಧ ತರಬೇತಿ

ಶಾಸನಗಳಲ್ಲಿ ಸೈನ್ಯಾಡಳಿತದ ಬಗ್ಗೆ ಹೆಚ್ಚಾಗಿ ಉಲ್ಲೇಖ ಕಂಡುಬರುವುದಿಲ್ಲ. ಸೈನಿಕರಿಗೆ ಯುದ್ಧ ತರಬೇತಿ ನೀಡುವ ವಿವರಗಳನ್ನು ಇಲ್ಲಿನ ವೀರಗಲ್ಲುಗಳೇ ನೀಡುತ್ತವೆ. ಸಾಮಾನ್ಯ ವ್ಯಕ್ತಿಯು ಗ್ರಾಮ ರಕ್ಷಣೆಗೆ, ಗೋಸಂಪತ್ತಿನ ರಕ್ಷಣೆಗೆ ಹೋರಾಡಿದ ಕುರುಹುಗಳಿವೆ. ಇವುಗಳ ಆಧಾರದ ಮೇಲೆ ಕುದುರೆ ಸವಾರಿ, ಕತ್ತಿವರಸೆ, ಬಿಲ್ಲು, ಬಾಣ, ಭರ್ಚಿ ಎಸೆತದ ತರಬೇತಿ, ಚಾಕು, ಚೂರಿಗಳ ಪ್ರಹಾರದ ತರಬೇತಿ ನೀಡುತ್ತಿದ್ದರು.

೬.೪. ಶಾಸನಗಳ ಶಾಪಾಶಯಗಳು, ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳಲ್ಲಿ ಕಂಡುಕೊಂಡ ಇತಿಹಾಸ

ಆಡಳಿತ ಅಧಿಕಾರಿಗಳಾದ ಪ್ರಭುಗಳು, ನಾಡರಸರುಗಳ ಉಲ್ಲೇಖಗಳನ್ನು ನಿಂಬರ್ಗಾ ಶಾಸನದಲ್ಲಿ ಕಾಣಬಹುದಾಗಿದೆ. ಕ್ರಿ.ಶ.೧೧೨೩ರ ಮರ್ತೂರು ಶಾಸನದಲ್ಲಿ ಊರೊಡೆಯರು, ಮನ್ನೆಯ ಊರುಗಳನ್ನು ಆಳುವ ಅರಸರು, ನಾಡನ್ನು ಆಳುವವರು ಎಂದು ಉಲ್ಲೇಖಿತವಾಗಿವೆ. ಕ್ರಿ.ಶ.೧೧೨೨ರ ಸೈಯದ್ ಚಿಂಚೋಳಿ ಶಾಸನದಲ್ಲಿ ಈ ಧರ್ಮವನ್ನು ನಾಡನ್ನು ಆಳುವ ಮನ್ನೆಯರು, ಸೌಧರೆಗಳು, ಪ್ರಭುಗಳು, ಗಾವುಂಡರು ತಮ್ಮ ಧರ್ಮ ಪ್ರತಿಪಾಲಿಸಬೇಕೆಂದು ತಿಳಿಸುತ್ತದೆ.

ದೇವಾಲಯಗಳು ಧಾರ್ಮಿಕ ಹಿನ್ನೆಲೆಯಲ್ಲಿ ಕಟ್ಟಲ್ಪಟ್ಟವು. ದೇವರು ವಾಸಿಸುವ ಸ್ಥಾನಗಳು ಎಂಬರ್ಥ ಹೊಂದಿದೆ. ದೇವಾಲಯವು ಆಧ್ಯಾತ್ಮಿಕತೆ, ಪವಿತ್ರತೆಯ ಕೇಂದ್ರವಾಗಿರುವ ದೇವಾಲಯಗಳು, ನಂತರ ಆಧ್ಯಾತ್ಮಿಕತೆಯ ಶಿಕ್ಷಣ ನೀಡುವ ಕೇಂದ್ರಗಳಾದವು. ಆಗ ದೇವರ

ಪೂಜೆಯ ಜೊತೆಗೆ ಶಿಕ್ಷಣದ ಬೆಳವಣಿಗೆಯ ಪ್ರಾಥಮಿಕ ಹಂತದ ಮೂಲ ಕೇಂದ್ರಗಳಾದವು. ಇದರಿಂದ ಜನರು ಆಕರ್ಷಕಣೆಗೊಳಗಾಗಿ ದಾನ ನೀಡಲಾರಂಭಿಸಿದರು.

೬.೫. ದೇವಾಲಯದ ಆಡಳಿತ ಮತ್ತು ವಿವಿಧ ಸೇವಾವರ್ಗ

ದೇವರ ಸ್ಥಾನವನ್ನು ನೋಡಿಕೊಳ್ಳುವ ಅಧಿಪತಿಗಳಿಗೆ ಬಹುಶಃ ಸ್ಥಾನಪತಿ ಎಂದು ಕರೆಯುತ್ತಿದ್ದರು. ಆರಂಭದಲ್ಲಿ ಕೇವಲ ದೇವರ ಪೂಜೆಗೆ ಸೀಮಿತವಾಗಿದ್ದು, ನಂತರದ ದಿನಗಳಲ್ಲಿ ಧಾರ್ಮಿಕ ಹೊಣೆ ಹೊತ್ತಿದವು. ಇದರಿಂದ ರಾಜರು, ರಾಜಮನೆತನದವರು, ಸಾಮಂತರು, ಪ್ರಾಂತ್ಯಾಧಿಕಾರಿಗಳು, ಮತ್ತಿತರ ಅಧಿಕಾರಿಗಳು ಮತ್ತು ಸಾರ್ವಜನಿಕರು ದೇವಾಲಯಗಳಿಗೆ ದಾನವನ್ನು ನೀಡಲು ಆರಂಭಿಸಿದರು. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದವು. ಇದರಿಂದ ದೇವಾಲಯದ ಜವಾಬ್ದಾರಿ ಹೆಚ್ಚಿತು. ಇದರ ಆಡಳಿತ ವ್ಯವಸ್ಥೆ ನೋಡಿಕೊಳ್ಳುವವರು ಅವಶ್ಯಕವಾದರು. ಅದಕ್ಕಾಗಿ ಒಬ್ಬ ಜವಾಬ್ದಾರಿಯುತ ಅಧಿಕಾರಿಯನ್ನು ನೇಮಿಸುವ ಪ್ರಕ್ರಿಯೆ ಆರಂಭವಾಯಿತು.

೬.೫.೧. ಸ್ಥಾನಪತಿಗಳು

ಸ್ಥಾನದ ಅಧಿಪತಿ, ಸ್ಥಾನಪತಿ, ಸ್ಥಾನಾಚಾರ್ಯ ಹೀಗೆ ಹಲವು ಹೆಸರುಗಳಿಂದ ಕರೆದರು. ದೇವಾಲಯದ ಕೆಲಸ, ಕಾರ್ಯ ನಿರ್ವಹಣಾ ವಿಧಾನ, ಪೂಜಾ ಕೈಂಕರ್ಯಗಳು, ಪೂಜೆ ಮಾಡುವ ಮತ್ತು ಅವರಿಗೆ ಸಹಾಯ ಮಾಡುವ ಜನರ ನಿರ್ವಹಣೆ, ಪೂಜಾ ವಿಧಿಯಲ್ಲಿ ಸೇವೆ ಮಾಡುವ ಸಂಗೀತಗಾರರು, ನೃತ್ಯಗಾರರು, ಖಂಡಸ್ಫುಟಿತ, ಜೀರ್ಣೋದ್ಧಾರ ಹೀಗೆ ಹಲವು ವಿಧದ ಜವಾಬ್ದಾರಿಗಳನ್ನು ಇವರು ನಿರ್ವಹಿಸುತ್ತಿದ್ದರು. ಉತ್ತಮ ಕಾರ್ಯ ನಿರ್ವಹಿಸಲು ಪ್ರೇರಕವಾಗಲು ಅವರಿಗೆ ಜನರು, ಅಧಿಕಾರಿಗಳು ದಾನ ನೀಡುತ್ತಿದ್ದರು. "ಕೌಟಿಲ್ಯನ ಅರ್ಥಶಾಸ್ತ್ರದ ಪ್ರಕಾರ ಸ್ಥಾನಿಕ ಎಂಬುವವನು ಆರ್ಥಿಕ ವ್ಯವಸ್ಥೆ ನೋಡಿಕೊಳ್ಳುವ ಅಧಿಕಾರಿಯಾಗಿದ್ದನು." ದೇವಾಲಯದಲ್ಲಿಯೂ ಸ್ಥಾನಿಕ ಎನ್ನುವ ಅಧಿಕಾರಿಯಿದ್ದು ಅವರು ದೇವಾಲಯದ ಸ್ಥಿರ ಆಸ್ತಿಗಳು ಮತ್ತು ಆರ್ಥಿಕ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದ ಅಧಿಕಾರಿಯನ್ನು ಸ್ಥಾನಿಕ ಎಂದು ಪರಿಗಣಿಸಬಹುದು. ಸ್ಥಾನಿಕ ಎಂಬ ಅಧಿಕಾರವು ಜೈನ, ಶ್ರೀವೈಷ್ಣವ, ಕಾಳಾಮುಖ ಹಾಗೂ ಶೈವರಲ್ಲಿ ಗೌರವದ ಸ್ಥಾನವಾಗಿ ಪರಿಗಣಿಸಲಾಗಿದೆ. ದೇವಾಲಯದ ಅರ್ಚಕ ಮತ್ತು ಸ್ಥಾನಿಕ ಇಬ್ಬರೂ ಬೇರೆ ಬೇರೆ ಎಂಬುದು ಶಾಸನಗಳು ಸ್ಪಷ್ಟಪಡಿಸಿವೆ.[೪] ಸ್ಥಾನಪತಿಗಳ ಆಯ್ಕೆಯು ರಾಜರಿಗಾಗಲಿ, ಅಧಿಕಾರಿಗಳಾಗಾಗಲಿ ಇರಲಿಲ್ಲ. ಇದು ವಂಶಪಾರಂಪರ್ಯವಾಗಿ ಅಥವಾ ಶಿಷ್ಯ ಪರಂಪರೆಯಲ್ಲಿ ಮುಂದುವರಿಯುತ್ತಾ ಬಂದ ಅಧಿಕಾರವಾಗಿತ್ತು. ಸ್ಥಳದ ತಪೋಧನನಾದ ಅಥವಾ ಬುದ್ಧಿವಂತ ಹಿರಿಯನಾದವನನ್ನು ಭಕ್ತಜನರು ಮುಖ್ಯಸ್ಥನನ್ನಾಗಿ ಅವಿರೋಧವಾಗಿ ಅಥವಾ ಸ್ವಪ್ರೇರಣೆಯಿಂದ ಗುರುತಿಸಿ ಗೌರವಿಸುತ್ತಿದ್ದಿರಬಹುದು. ಆಯ್ಕೆಯ ಬಗ್ಗೆ ಈವರೆಗೆ ಯಾವ ಶಾಸನಗಳಲ್ಲಿಯೂ ಉಲ್ಲೇಖ ಸಿಕ್ಕಿಲ್ಲ.[೫] ಸ್ಥಾನಪತಿಯಲ್ಲಿ ಎರಡು ವಿಧಗಳು (೧)ಸಸ್ತ್ರೀಕ (೨)ನಿಸ್ತ್ರೀಕ, ಗೃಹಸ್ಥನಾದ ಸ್ಥಾನಪತಿಯು ಸಸ್ತ್ರೀಕ, ನೈಷ್ಠಿಕನಾದ ಸ್ಥಾನಪತಿಯು ನಿಸ್ತ್ರೀಕ. ೧೦-

೧೨ನೆಯ ಶತಮಾನಗಳಲ್ಲಿ ನೈಷ್ಠಿಕ ಸ್ಥಾನಪತಿಗಳ ಸಂಖ್ಯೆಯೇ ಅಧಿಕವಾಗಿತ್ತು. ನೈಷ್ಠಿಕ ಸ್ಥಾನಗಳಲ್ಲಿ ಬಹುಪಾಲು ಶಿವಸ್ಥಾನಗಳೇ ಆಗಿದ್ದು, ಅವರಲ್ಲಿ ತಪೋಧನರೂ ಇದ್ದರು.[೬] "ಡಾ. ಎಂ. ಚಿದಾನಂದ ಮೂರ್ತಿಯವರು-ಶೈವ ಗುರುಗಳು ವಿದ್ಯಾದಾನ ಮಾಡುತ್ತಿದ್ದ ಸ್ಥಾನವೇ ನೈಷ್ಠಿಕ ಸ್ಥಾನವೇ ನೈಷ್ಠಿಕ ಸ್ಥಾನ" ಎಂದಿದ್ದಾರೆ. ಹೊಡಲ ಕ್ರಿ.ಶ. ೧೨೬೭ರ ಶಾಸನ 'ಮನ್ನೆದಡಿ ಸಾಸಿರದ ದೇವಸ್ಥಾನದಾಚಾರ್ಯ್ಯರು ರಾಮೇಶ್ವರ ಗುರುಗಳಿಗೆ ಧಾರಾಪೂರ್ವಕ ಮಾಡಿಕೊಟ್ಟರು.' 'ಯೀ ಸ್ಥಾನಕ್ಕೆ ನಿರೂಪಿಸಿದವರು ನಿಯಾಮಂದಪ್ಪಿ ನಡಿಯಲವರ್ಗೆ ದುಷ್ಟನಿಗ್ರಹ ಶಿಷ್ಟ ಪ್ರತಿಪಾಲನ ಮಾರ್ಪುದೂ' ಮತ್ತು 'ಯೀ ಸ್ಥಾನದಾಚಾರ್ಯರು ಪೂರ್ವಾಶ್ರಯ ಬ್ರಾಂಹಣರಾಗಿ ಮಾಡಿ ಪಡೆದಂ ಶಂಕರದೇವರ ಮಠದಾಚಾರ್ಯ ಧ್ರುವೇಶ್ವರ ದೇವರ ಶಿಷ್ಯ ಸಂತಾನಮಾಗಲವೇರ್ಕುಂ' ಮತ್ತು 'ಯೀ ಸ್ಥಾನದಾಚಾರ್ಯರಕ್ಕು ಪ್ರಭುವಕ್ಕಾರಾದಡೆ ಯೀ ವ್ರಿತ್ತಿಯನೊತ್ತೆಯಿಡಲಂ ಮಾರಲುಂ ದಾನಂ ಗೈಯಲು ಸಲ್ಲದು। ಮಾರಿದವಂ ಮಹಾಂದರು। ವತ್ತಯ ಹಿಡಿದವರು ಮದಾಂಧರು॥' ಎಂದು ಕ್ರಿ.ಶ. ೧೧೩೪ರ ನಿಂಬರ್ಗಾ ಶಾಸನದಲ್ಲಿದೆ. ಈ ಶಾಸನದಲ್ಲಿ ಸ್ಥಾನಾಚಾರ್ಯರು ಹೇಗೆ ನಡೆಯಬೇಕು ಎಂಬುದು ಮತ್ತು ಸ್ಥಾನಾಚಾರ್ಯರರು ಪಡೆದ ಆಸ್ತಿಯ ಜವಬ್ದಾರಿ ಹೇಗೆ ನಿಭಾಯಿಸಬೇಕು ಎಂಬುದು ತಿಳಿಸುತ್ತದೆ. ಅಲ್ಲದೆ ಸ್ಥಾನಾಚಾರ್ಯರ ಆಯ್ಕೆ ಶಿಷ್ಯ ಸಂತಾನದಿಂದಲೇ ಆಯ್ಕೆ ಮಾಡುತ್ತಿದ್ದರೆಂಬುದು ಇದರಲ್ಲಿ ಸ್ಪಷ್ಟಪಡಿಸಿದೆ. 'ಯೀ ಧರ್ಮಕ್ಕಾವನೋರ್ವ ಸ್ಥಾನಪತಿಯೆಂಬುದಲ್ಲದೇಕ ಕಾರ್ಯಮನಾರೋರ್ವರುಯೆಲ್ಲ ಶುಭೆಯಪ್ಪನಂ ನಿಲಿಸುವರು। ಯಿಲ್ಲಿ ಬ್ರಾಹ್ಮಣನಲ್ಲದೆ ಸೂದ್ರಂ ಪೂಜಿಸಲಾಗದು॥ ಯಿಲ್ಲಿ ನಡವಂಗೆ ಗುಣ ಶಾನವಲ್ಲದಿಂತಪ್ಪಂ ಗಾವನೊಡೆಯ ನೇನೆಂನಂನ್ಯಾಕೆ ತಳದ ಪೀಠೆನಲು ಬಾರದು॥' ಕ್ರಿ.ಶ. ೧೯೨ರ ಬೋದನ ಶಾಸನದಲ್ಲಿ ಯಾರು ಪೂಜಿಸಲು ಅರ್ಹರೆಂದು ಇಲ್ಲಿ ವಿವರಿಸಲಾಗಿದೆ. 'ಯೀ ಧರ್ಮಕ್ಕಾವನೋರ್ವ ಸ್ಥಾನಪತಿಯೆಂಬುದಲ್ಲದೇಕ ಕಾರ್ಯಮನಾರೋರ್ವರುಯೆಲ್ಲ ಸಾಗುಮಾಡುವವರನೇ ನಡಿಯಿಸುವರು। ಹೊಲ್ಲಾಗಿ ನಡದರುಂ ಯಜಮಾನಿಕೆ ಕಿತ್ತುಕಳೆದು ಮತ್ತೋರ್ವ ಶುಭೆಯಪ್ಪನಂ ನಿಲಿಸುವರು। ಯಿಲ್ಲಿ ಬ್ರಾಹ್ಮಣನಲ್ಲದೆ ಸೂದ್ರಂ ಪೂಜಿಸಲಾಹಗದು॥' ಎಂದು ಕ್ರಿ.ಶ. ೧೯೨ರ ಬೋದನ ಶಾಸನದಲ್ಲಿದೆ. ಇವರಲ್ಲದೆ ಉಭಯಸ್ಥಾನಪತಿ, ಉಭಯಪತಿಗಳೆಂದೂ ಸಹ ನೇಮಕ ಮಾಡಲಾರಂಭಿಸಿದರು. ಪೂಜಾರಿ, ಪಾತ್ರದವರು, ಪಾದಮೂಲ ಪರಿವಾರದವರು, ಸೂಳೆಯರು, ಸೂಳೆವಳ, ಮಾಲೆಕಾರ, ತಳಾರ ಈ ಎಲ್ಲಾ ಸೇವಾವರ್ಗ ಸ್ಥಾನಪತಿಯ ಅಧೀನದಲ್ಲಿದ್ದರು.

೬.೫.೨. ಪೂಜಾರಿ ಮತ್ತು ಅರ್ಚಕ

ಪೂಜಾರಿಗಳು ನೈಷ್ಠಿಕ ಅಥವಾ ತಪೋಧನರಾಗಿರಬೇಕೆಂದಿರಲಿಲ್ಲ. ಅವರು ಆಗಮೋಕ್ತ ಕ್ರಮದಲ್ಲಿ ಪ್ರತಿನಿತ್ಯ ದೇವರ ವಿಗ್ರಹಕ್ಕೆ ಪೂಜೆ ಸಲ್ಲಿಸುವುದಷ್ಟೇ ಪೂಜಾರಿಯ ಕರ್ತವ್ಯ. ಈ ಸೇವೆಗೆ ಭೂಮಿ ಅಥವಾ ಹಣದ ರೂಪದಲ್ಲಿ ಸಂಭಾವನೆಯನ್ನು ನೀಡಲಾಗುತ್ತಿತ್ತು. ಪೂಜಾರಿ ಕೆಲಸ ವಂಶಪಾರ್ಯಂಪರ್ಯವಾಗಿತ್ತು. ಅರ್ಚಕನು ಸದಾಚಾರ ಸಂಪನ್ನನಾಗಿ, ಸುಶಿಕ್ಷಿತನಾಗಿ, ತಪಸ್ವಿಯಾಗಿ ನಿಗ್ರಹಾನುಗ್ರಹ ಸಮರ್ಥ್ಯಶಾಲಿಯಾಗಿ ಇರಬೇಕೆಂದು ಶೈವಾಗಮ ಹೇಳುತ್ತದೆ.

ಪೂಜಾರಿಗೆ ಪೂಜೆ ಮಾಡುವ ಕಾರ್ಯ ಬಿಟ್ಟರೆ ಬೇರಾವ ಅಧಿಕಾರವಾಗಲಿ, ಆಡಳಿತ ನಡೆಸುವ ಹಕ್ಕಾಗಲಿ, ಅಷ್ಟೇ ಅಲ್ಲ ಅವರಿಗೆ ಬಂದ ದಾನವನ್ನು ಸಹ ಅವರ ಹೆಸರಲ್ಲಿ ಸ್ಥಾನಪತಿಗಳೇ ಸ್ವೀಕರಿಸಿ ನಂತರ ಹಸ್ತಾಂತರಿಸುತ್ತಿದ್ದ ಉಲ್ಲೇಖ ಹಿರೇಮಗಳಗೇರಿಯ ಶಾಸನದಲ್ಲಿದೆ.[೬] ತಡಕಲ್ ೧೨ನೆಯ ಶತಮಾನದಲ್ಲಿ 'ಗೀತ ವಾದ್ಯ ನೃತ್ಯಕ್ಕಂ, ಪೂಜಾರಿಗೆ, ಸ್ಥಾನಾಚಾರ್ಯರಿಗೆ ಸರ್ವ ನಮಸ್ಯವಾಗಿ' ಎಂದು ಉಲ್ಲೇಖಿಸಿದ್ದು ಪೂಜಾರಿ ಮತ್ತು ಸ್ಥಾನಾಚಾರ್ಯರು ಬೇರೆ ಬೇರೆ ಎಂಬುದು ಸ್ಪಷ್ಟಪಡಿಸುತ್ತದೆ. ಬೆಳಂಬಿಗೆ ಕ್ರಿ.ಶ. ೧೧೯೩ರ ಶಾಸನದಲ್ಲಿ "ಖಂಡಸ್ಫಾದಿತ, ಜೀರ್ಣೋದ್ಧಾರಕಂ, ಪೂಜಾರಿಗಂ ಸರ್ವನಮಸ್ಯವಾಗಿ" ದಾನ ಬಿಟ್ಟ ವಿಷಯವಿದೆ. ಅಲ್ಲದೆ ನಂದಾದೀವಿಗೆಗೆ ಮತ್ತರು-೫, ದೇವರ ನೈವೇದ್ಯಕ್ಕೆ ಮತ್ತರು-೩, ಪೂಜಾರಿಗೆ ಮತ್ತರು-೧೦ ಇಂತಿನತುಂ ಸರ್ವಭಾಧಾ ಪರಿಹಾರಮಗಿ' ತ್ರೈಪುರಷ ದೇವಾಲಯಕ್ಕೆ ನೀಡಿದ ದಾನದಲ್ಲಿ ಸ್ಥಾನಾಚಾರ್ಯರ ಬಗ್ಗೆ ವಿವರಿಸದೆ ಪೂಜಾರಿಗಳ ಬಗ್ಗೆ ಅವರಿಗೆ ನೀಡಿದ ದಾನದ ಬಗ್ಗೆ ವಿವರಿಸಿರುವುದು ಗಮನಾರ್ಹವಾಗಿದೆ. ಹೆಚ್ಚಾಗಿ ತ್ರಿಕೂಟ ದೇವಾಲಯಗಳ ಬಗ್ಗೆ ನೋಡಿದಾಗ ಪೂಜಾರಿಗಳಿಗೆ ನೇರವಾಗಿ ಭೂದಾನ ಮಾಡಿರುವುದು ಕಂಡುಬರುವಂತಿದೆ. ಇನ್ನೂ ಏಕಕೂಟ, ದ್ವಿಕೂಟಗಳ ದೇವಾಲಯದ ದಾನಗಳಲ್ಲಿ ಸ್ಥಾನಾಚಾರ್ಯರಿಂದ ದಾನ ವರ್ಗಾವಣೆಯಾಗುವುದು ಶಾಸನಗಳು ತಿಳಿಸುತ್ತವೆ.

೬.೫.೩. ಪಾದಮೂಲದವರು

ಪಾದಮೂಲ ಎಂದರೆ, ಡಿ.ಸಿ.ಸರ್ಕಾರವರು 'ಸೇವಕ' ಎಂದರ್ಥೈಸಿದ್ದಾರೆ. ಈ ಹಿನ್ನೆಲೆಯಲ್ಲಿ ಪಾದಮೂಲ ಪರಿವಾರ ಎಂದರೆ ಸೇವಕ ಜನರು, ಪಾದ ಸೇವೆ ಮಾಡುವವರು. ದೇವರ ಪೂಜೆ ಮಾಡುವ ಪೂಜಾರಿಗೆ ಸಹಾಯ ಮಾಡುವ ಜನರು, ಕಸಗೂಡಿಸುವ, ಸಾರಿಸುವ, ನಿತ್ಯ ನೈಮಿತ್ತಿಕ, ವಿಶೇಷ ಪರ್ವ-ಉತ್ಸವಗಳಿದ್ದಾಗ ಈ ಜನರು ಸಹಾಯ ಮಾಡುತ್ತಿದ್ದರು.[೮] 'ಪರಿಚಾರಕರ ಗ್ರಾಸಕ್ಕಂ' ಎಂದು ಶಾಸನಗಳಲ್ಲಿ ಉಲ್ಲೇಖವಾಗಿವೆ. ಪರಿಚಾರಕರೆಂದರೆ ಪೂಜಾರಿಗೆ ಸಹಾಯ ಮಾಡುವ ಪಾದ ಮೂಲ ಸೇವಾವರ್ಗವೇ ಆಗಿದೆ. ಬಿಸಂಗೈದ ಬಿನ್ನಾಣಿ ಮಲ್ಲೋಜ, ಬಳ್ವರಂ, ಮಪ್ಪಬಲಿಮಂ, ಹಡವಳ ಗೋಪಯ್ಯ(ಬಂದರವಾಡ ೧೧೧೮ರ ಶಾಸನ) ಎಂದು ಉಲ್ಲೇಖಿಸುತ್ತದೆ. ಹಳವಿಗ ಬಿಕ್ಕೋಜ, ಹಾಡುವ, ಪಾತ್ರಕ್ಕೆ ಮತ್ತರು ಒಂದು ಎಂದು ಕ್ರಿ.ಶ. ೧೦೧೧ರ ಸರಡಗಿ ಶಾಸನ ತಿಳಿಸುತ್ತದೆ.

೬.೫.೪. ಪಾತ್ರದವರು ಮತ್ತು ಸೂಳೆಯರು

ಆರಂಭದಲ್ಲಿ ದೇವದಾಸಿಯರನ್ನು 'ದೇವಡತಿ' ಎಂದು ಕರೆಯುತ್ತಿದ್ದರು. ದೇಗುಲದ ಅಡಿಯಲ್ಲಿರುವುದಕ್ಕೆ ಈ ರೀತಿ ಕರೆಯುತ್ತಿರಬಹುದು. ಚಿಂಚೋಳಿಯಲ್ಲಿ ಇಂದಿಗೂ 'ದೇವಡಿ' ಎಂದು ಕರೆಯುವ ಬೃಹತ್ ಮನೆಯಿದೆ. ಇದು ವೆಂಕಟೇಶ್ವರ ದೇವಾಲಯಕ್ಕೆ ಹತ್ತಿಕೊಂಡಿದೆ. ಬಹುಶಹ ಅದು ದೇವಡತಿಯರು ವಾಸಿಸುವ ಸ್ಥಳವಾಗಿರಬಹುದು. ಈಗಾಗಲೇ ದೇವಾಲಯಗಳು ಮತ್ತು ಸಾಮಾಜಿಕ ಸ್ಥಿತಿಗತಿಯಲ್ಲಿ ಬಹಳಷ್ಟು ವಿವರಣೆ ನೀಡಲಾಗಿದೆ.

ದೇಗುಲದ ಸೂಳೆಯರನ್ನು ದೇವಡತಿಯರೆಂದು ಕರೆಯುತ್ತಿದ್ದರು. ಇವರ ಮೇಲ್ವಿಚಾರಣೆಗೆ ಮತ್ತು ನೃತ್ಯ ಶಿಕ್ಷಕನಾಗಿಯೂ ಸೂಳೆವಳ ಎಂಬುವವರನ್ನು ನೇಮಕ ಮಾಡಲಾಗುತಿತ್ತು. ದೇವಾಲಯದ ಮೇಲ್ವಿಚಾರಣೆಗೆ ಬ್ರಹ್ಮಪುರಿಗಳು ಸೇರಿದಂತೆ ಸೂಳೆಗೇರಿಗಳೂ ಸೇರಿದ್ದವು.[೯]

೬.೫.೫. ದೇವಾಲಯಗಳ ಇತರ ಸೇವಾವರ್ಗ

ಹಾಡುವವರು, ಸವಗಾಣಿಯರು, ಲಚ್ಚಣಿಯರು, ಪರೆಕಾರರು, ಕಮ್ಮಾರರು, ಜ್ಯೋತಿಷಿಗಳು, ಕಲುಕುಟಗರು, ವಂಚಿಗ (ವಂಶಿಗ, ವಂಶಿಕರು) ಪಟ್ಟಸಾಲಿಗ, ಮಾಲೆಗಾರ, ಬಾಣಸಿಗ, ತೋಟಗ, ಪಟ್ಟಸಾಲಿಗ, ಮಾಲೆಗಾರ, ಬಾಣಸಿಗ, ತೋಟಗ, ಉಪಾಧ್ಯಾಯ, ಹರೆಕಾರ, ಹಳವರು ಎಂದು ಶಾಸನಗಳಲ್ಲಿ ಉಲ್ಲೇಖಿತವಾಗಿವೆ.[೧೦]

೬.೬.ಮಠಗಳು, ಸತ್ರಗಳು ಮತ್ತು ಶಾಲೆಗಳು

ಮಠಗಳು ವಿದ್ಯಾದಾನ ಕೇಂದ್ರಗಳಾಗಿದ್ದವು. ಇಲ್ಲಿ ತಪೋಧನರು ಬಂದು ಹೋಗುವ ಅತಿಥಿ ಅಭ್ಯಾಗತರು, ವಿದ್ಯಾರ್ಥಿಗಳು, ಉಪಧ್ಯಾಯರುಗಳ ಆಹಾರಕ್ಕಾಗಿ ಸಮರ್ಪಕವಾಗಿ ಮಾಡಲು ಮಠದ ಅನ್ನದಾನ ಮತ್ತು ವಿದ್ಯಾದಾನಗಳಿಗೆ ನೀಡಿದ ದಾನಗಳನ್ನು ಆಯಾ ಮಠಗಳ ಆಚಾರ್ಯರು ಸ್ವೀಕರಿಸುತ್ತಿದ್ದರು.[೧೧] ಸತ್ರಗಳು ಅನ್ನದಾನ ಮಾಡುವ ಸ್ಥಳವಾಗಿತ್ತು. ಅಲ್ಲಿ ಅತಿಥಿಗಳು, ವಿದ್ಯಾರ್ಥಿಗಳು, ಭಕ್ತಾದಿಗಳು ಕುಳಿತು ಅಡುಗೆ ಮತ್ತು ಊಟ ಮಾಡುತ್ತಿದ್ದರು. ಶಾಲೆಗಳು ವಿದ್ಯಾದಾನದ ಸ್ಥಳಗಳಾಗಿದ್ದವು. ಮಠದ ಪರಿಸೂತ್ರ, ಸತ್ರದ ಮನೆಯದರ ಕೇಯಿ (ಮಡಿಹಾಳ ಶಾಸನ ಕ್ರಿ.ಶ. ೧೨ನೆಯ ಶತಮಾನ).

ಕೊನೆ ಟಿಪ್ಪಣಿಗಳು

೧. ಗು.ಜೆ.ಇ. ಮತ್ತು ಪು., ೨೦೦೭, ಪು. ೪೯.

೨. ಪೂರ್ವೋಕ್ತ, ೨೦೦೭, ಪು. ೩೦೭.

೩. ಪೂರ್ವೋಕ್ತ, ೨೦೦೭, ಪು. ೩೪೫.

೪. ಗೋಪಾಲರಾವ್.ಎಚ್.ಎಸ್., ಕ್ರಿ.ಶ. ೧೯೯೩, ಕಲ್ಯಾಣ ಚಾಲುಕ್ಯ ದೇವಾಲಯಗಳು, ಪು. ೯೧-೯೨.

೫. ಪೂರ್ವೋಕ್ತ,. ಕ್ರಿ.ಶ. ೧೯೯೩, ಕಲ್ಯಾಣ ಚಾಲುಕ್ಯ ದೇವಾಲಯಗಳು, ಪು. ೯೨.

೬. ಪೂರ್ವೋಕ್ತ, ಕ್ರಿ.ಶ. ೧೯೯೩, ಕಲ್ಯಾಣ ಚಾಲುಕ್ಯ ದೇವಾಲಯಗಳು, ಪು. ೯೨.

೭. ಪೂರ್ವೋಕ್ತ, ಕ್ರಿ.ಶ. ೧೯೯೩, ಕಲ್ಯಾಣ ಚಾಲುಕ್ಯ ದೇವಾಲಯಗಳು, ಪು. ೯೪.

೮. ಪೂರ್ವೋಕ್ತ, ಕ್ರಿ.ಶ. ೧೯೯೩, ಕಲ್ಯಾಣ ಚಾಲುಕ್ಯ ದೇವಾಲಯಗಳು, ಪು. ೯೫.

೯. ಪೂರ್ವೋಕ್ತ, ಕ್ರಿ.ಶ. ೧೯೯೩, ಕಲ್ಯಾಣ ಚಾಲುಕ್ಯ ದೇವಾಲಯಗಳು, ಪು. ೧೦೦.

೧೦. ಪೂರ್ವೋಕ್ತ, ಕ್ರಿ.ಶ. ೧೯೯೩, ಕಲ್ಯಾಣ ಚಾಲುಕ್ಯ ದೇವಾಲಯಗಳು, ಪು. ೧೦೦.

೧೧. ಪೂರ್ವೋಕ್ತ, ಕ್ರಿ.ಶ. ೧೯೯೩, ಕಲ್ಯಾಣ ಚಾಲುಕ್ಯ ದೇವಾಲಯಗಳು, ಪು. ೧೦೭.

♦♦♦

ಅಧ್ಯಾಯ : ಏಳು

ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ಥಿತಿಗತಿಗಳು

ಅಧ್ಯಾಯ : ಏಳು

ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ಥಿತಿಗತಿಗಳು

ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದಲ್ಲಿ ದೊರಕುವ ಶಾಸನಗಳು, ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳ ವಿವರಗಳು ಪ್ರಾಚೀನ ಸಮಾಜದ ಸ್ವರೂಪವನ್ನು ಕಟ್ಟಿಕೊಡುವ ಆಕರಗಳಾಗಿವೆ. ಅವುಗಳಲ್ಲಿ ಆಯಾ ಕಾಲದ ಸಮಾಜವು ಹೇಗಿದೆ ಎಂಬುದು ಕಾಣಬಹುದು. ಈ ಮೂಲ ಆಕರಗಳ ಮೂಲಕ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ವಿವರಗಳನ್ನು ಇಲ್ಲಿ ನೀಡುವ ಪ್ರಯತ್ನ ಮಾಡಲಾಗಿದೆ. ಸಮಾಜವನ್ನು ವೇದಕಾಲದಲ್ಲಿ ವೃತ್ತಿಗನುಸಾರ ವಿಭಜಿಸಿರಲಿಲ್ಲ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಈ ಮೂರು ವರ್ಗಗಳಿಗೆ ವಿವಾಹದ ವಿಷಯಗಳಲ್ಲಿ ಖಚಿತ ನಿರ್ಬಂಧಗಳಿರಲಿಲ್ಲ.[೧] ಋಗ್ವೇದದ ಕಾಲದಲ್ಲಿ ವೃತ್ತಿಭೇದಗಳುಂಟಾಗಿದ್ದರೂ ಅವುಗಳಲ್ಲಿ ಮೇಲುಕೀಳೆಂಬ ಮನೋಭಾವವಿರಲಿಲ್ಲ. ಆದರೆ ಅಥರ್ವವೇದ ಕಾಲದ ಕೊನೆಯ ವೇಳೆಗೆ ಈ ವೃತ್ತಿಭೇದವು ಆ ವೃತ್ತಿಗಳನ್ನನುಸರಿಸುವವರ ಸಾಮಾಜಿಕ ಸ್ಥಾನಮಾನಗಳಲ್ಲಿಯು ವ್ಯತ್ಯಾಸಗಳುಂಟಾಗಲು ಕಾರಣವಾಯಿತು.[೨] ವರ್ಣ ವ್ಯವಸ್ಥೆಯಲ್ಲಿ ಈಗಿನ ಜಾತಿ ಪದ್ಧತಿಯಂತೆ ಯಾವುದೇ ನಿಷೇಧವಿರಲಿಲ್ಲ. ಬೇರೆ ವರ್ಣದವರು ವಧುವನ್ನು ವರಿಸಿ ವಿವಾಹವಾಗಬಹುದಿತ್ತು. ಇಂತಹ ಉಲ್ಲೇಖಗಳು ಜಾತಕಗಳಲ್ಲಿವೆ. ವೃತ್ತಿಗಳಲ್ಲಿ ಮುಂದೆ ಅನೇಕ ಭೇದ ಉಂಟಾಗಿ ಅದು ಸಾಮಾಜಿಕ ಮೇಲು-ಕೀಳು ಭಾವನೆಗಳಿಗೆಡೆಮಾಡಿ ಚತುರ್ ವರ್ಣಗಳಿಗೆ ದಾರಿ ಮಾಡಿದ್ದಂತಾಯಿತು. ಈ ವ್ಯವಸ್ಥೆಯು ಬ್ರಾಹ್ಮಣಕಗಳ ಕಾಲಕ್ಕೆ ಮತ್ತಷ್ಟು ಬಿಗಿಯಾಯಿತು. ವೃತ್ತಿ ವ್ಯತ್ಯಾಸವು ಹಿಂದುಳಿದ ವ್ಯಕ್ತಿಯ ಹುಟ್ಟು ವರ್ಣವನ್ನು ನಿರ್ಣಯಿಸುವಂತಾಯಿತು.[೩]

೭.೧. ಸಾಮಾಜಿಕ ಸ್ಥಿತಿಗತಿ

ಶಾಸನಗಳ ಶಾಪಾಶಯಗಳಲ್ಲಿ ಚಾಂಡಾಲರ, ಶೂದ್ರರ ಉಲ್ಲೇಖಗಳಿವೆ. ಬ್ರಾಹ್ಮಣರು ಉಚ್ಚ ಸ್ಥಾನದಲ್ಲಿದ್ದರು. ಗೌಡ, ಒಕ್ಕಲಿಗ, ಸೆಟ್ಟಿ, ತಂಬುಲಿಗ, ಜೇಡ, ಗಾಣಿಗ, ಅಗಸ, ಕಂಚಿಗೊರವ, ಕಂಚಗಾರ, ಕಮ್ಮಾರ, ಕುಂಬಾರ, ಬಡಿಗ ಇವರಿಗೆಲ್ಲಾ ಊರಿನಲ್ಲಿ ಪ್ರತ್ಯೇಕ ಕೇರಿಗಳಿದ್ದವು. ಶಾಸನದಲ್ಲಿ ದೇವಾಲಯ ಪೂಜೆ ಬ್ರಾಹ್ಮಣರಿಗಲ್ಲದೆ ಗೊರವುಗಳಿಗೆ ಸಲ್ಲದು ಎಂದು ಉಲ್ಲೇಖಿತವಾಗಿದೆ. ಕ್ರಿ.ಶ. ೧೧೮೫ರ ಮಡಿಹಾಳ ಶಾಸನದಲ್ಲಿ ಬ್ರಾಹ್ಮಣರು ಉನ್ನತ

ಸ್ಥಾನದಲ್ಲಿದ್ದರೆಂದು ಉಲ್ಲೇಖಿಸಿದೆ. ಕ್ರಿ.ಶ. ೧೧೦೩ರ ರುದ್ರವಾಡಿಯ ಶಾಸನದಲ್ಲಿ ಅಗ್ರಹಾರದ ಪ್ರಭು ವಾಸುದೇವ ಭಟ್ಟೋಪಧ್ಯಾಯರು ಎಂದು ಸೂಚಿಸುತ್ತದೆ. ಅಂದರೆ ಅಗ್ರಹಾರವನ್ನು ಬ್ರಾಹ್ಮಣರಲ್ಲದೆ ಬೇರೆಯವರು ಉಸ್ತುವಾರಿ ಮಾಡುತ್ತಿರಲಿಲ್ಲ ಎಂಬುದು ಸ್ಪಷ್ಟಗೊಳ್ಳುತ್ತದೆ.

ಕುರುಬಗೇರಿ ಎಂದು ಅಂದೋಲ ಕ್ರಿ.ಶ. ೧೩೮೮ರ ಶಾಸನದಲ್ಲಿ ಉಲ್ಲೇಖಿಸಿದೆ. ಸೂಳೆಗೇರಿಗಳು ದೇವಾಲಯಗಳಿಗೆ ಹೊಂದಿದ್ದವು. ಅದಕ್ಕೆ ಅಂದಿನ ಸಮಾಜದಲ್ಲಿ ಅಭ್ಯಂತರವಿರಲಿಲ್ಲ ಎಂಬುದಕ್ಕೆ ಅಂಥವರ ನಿವೇಶನಗಳನ್ನು, ದಂಡ ದೋಷ, ಮುಕ್ತಗೊಳಿಸಿ ಸಮಾಜದ ವಿವಿಧ ವೃತ್ತಿಯವರು ಮಾನ್ಯ ಮಾಡಿರುವ ಉಲ್ಲೇಖ ಮಾಡಿಹಾಳದ ಕೋಟಿ ಶಂಕರ ದೇವಸ್ಥಾನದ ಕಂಬದ ಶಾಸನದಲ್ಲಿದೆ (ಮಾಡಿಹಾಳ ಕ್ರಿ.ಶ. ೧೧೮೫).[೪] ಮಡಿಹಾಳ ಶಾಸನದಲ್ಲಿ ಮಡಿವಾಳ, ಬಡಗಿ, ಸಿಪ್ಪಿಗ, ಕಮ್ಮಾರ, ಇನಿತುಮಂ ಎಂದು ಉಲ್ಲೇಖಿಸಿದೆ.[೫] ಮಡಿವಾಳ ಎಂದರೆ ಈಗ ನಾವು ಅಗಸರು ಎಂದು ಕರೆಯುವ ಜನರು. ಇವರ ಕಾಯಕ ಬಟ್ಟೆ ತೊಳೆಯುವುದು. ಸಾಮಾನ್ಯವಾಗಿ ಪುರೋಹಿತ ವರ್ಗ, ರಾಜವರ್ಗ ಮತ್ತು ಆಡಳಿತ ವರ್ಗಗಳ ಸೇವೆಗೆ ಮಡಿವಾಳರು, ಚಾಣ್ಡಲರು, ದೇವದಾಸಿ, ಸೂಳೆಯರಿದ್ದರು. ಬಡಿಗರು ರೈತಾಪಿ ಜನರ ಕೃಷಿ ಸಲಕರಣೆಗಳನ್ನು ತಯಾರಿಸುವದಲ್ಲದೆ, ಮನೆ ಕಟ್ಟುವಲ್ಲಿ ಮತ್ತು ಮನೆಯ ಉಪಕರಣಗಳನ್ನು ತಯಾರು ಮಾಡುತ್ತಿದ್ದರು. ಕುಂಬಾರರು ಮಡಿಕೆ ಮತ್ತು ಗೃಹ ಉಪಯೋಗಿ ವಸ್ತುಗಳನ್ನು (ಪಾತ್ರೆ, ಗ್ಲಾಸು ಇತ್ಯಾದಿ) ತಯಾರಿಸುತ್ತಿದ್ದರು. ಕಮ್ಮಾರರು ಲೋಹದ ಸಾಮಾನುಗಳನ್ನು ಮತ್ತು ಕೃಷಿ ಉಪಯೋಗಿ ವಸ್ತುಗಳನ್ನು ತಯಾರಿಸುತ್ತಿದ್ದರು. ಕ್ರಿ.ಶ.೧೨ನೆಯ ಶತಮಾನದ ಮಡಿಹಾಳ ಶಾಸನದಲ್ಲಿ ಗಾಣಿಗರು ಗಾಣದಿಂದ ಎಣ್ಣೆಯನ್ನು ತೆಗೆಯುವ ಉಲ್ಲೇಖವಿದೆ. ಪಡಸಾವಳಿ ಶಾಸನದಲ್ಲಿ ಅರುವತ್ತೊಕ್ಕಲು ಎಂದು ಉಲ್ಲೇಖಿಸಿದೆ. ಅರುವತ್ತೊಕ್ಕಲು ಎಂಬುದು ಕೃಷಿ ಪ್ರಧಾನವಾಗಿರುವ ಜನಾಂಗದ ವಂಶ? ಜಾತಿ? ಉಲ್ಲೇಖಿಸುವಂತಿದೆ. ನಿಂಬರ್ಗಾ ಶಾಸನದ ಶಾಪಾಶಯದಲ್ಲಿ ಚಾಂಣ್ಡಾಲರ ಉಲ್ಲೇಖವಿದೆ.

ವೀರಬಣಂಜಗರ ಧರ್ಮದ ಉಲ್ಲೇಖ ಚಿನಮಳ್ಳಿ-ಕ್ರಿಶ೧೧೭೫ರ ಶಾಸನದಲ್ಲಿದೆ. ಕುರುಬ ಜನಾಂಗದವರಾದ ಬಕ್ಕಯ್ಯ, ಸೋವಿಮಯ್ಯ, ಮುದ್ದಯ್ಯ ಎಂಬ ಉಲ್ಲೇಖ ಬಿಂಗೋಳಿ ಕ್ರಿ.ಶ. ೧೦೭೮ರ ಶಾಸನದಲ್ಲಿದೆ. ಹಾಡುವವರು, ಪಾತ್ರದವರು, ಹಳವಿಗ ಬಿಕ್ಕೋಜ ಎಂದು ಸರಡಗಿ ಕ್ರಿ.ಶ. ೧೦೧೧ರ ಶಾಸನದಲ್ಲಿ ಉಲ್ಲೇಖವಿದೆ. ಗಣಿಕೆಯರ ಉಲ್ಲೇಖ ನಿಂಬರ್ಗಾ ಕ್ರಿ.ಶ. ೧೦೫೫ರ ಶಾಸನದಲ್ಲಿದೆ. ಗಣಿಕೆ ಎಂಬರ್ಥ ನಾವು ವೇಷ್ಯಾ ಗಣದ ಮುಖ್ಯಸ್ಥ ಎಂದು ಸಹ ಊಹಿಸಬಹುದಾಗಿದೆ. ಕ್ರಿ.ಶ. ೧೧೮೪ ಮಡಿಹಾಳ ಶಾಸನದಲ್ಲಿ ಮಡಿವಾಳ, ಬಡಿಗ, ಸಿಪ್ಪಿಗ, ಕಮ್ಮಾರರು, ಸೂಳಿಗೇರಿಯ ಉಲ್ಲೇಖವಿದೆ. ಹೊಲಗೇರಿಯ ಉಲ್ಲೇಖ ಮಡಿಹಾಳದ ಕ್ರಿ.ಶ. ೧೨ನೆಯ ಶತಮಾನದ ಶಾಸನದಲ್ಲಿದೆ. ಕ್ರಿ.ಶ. ೧೧೭೦ರ ಮೋಘಾ ಶಾಸನದಲ್ಲಿ ತಾಮಾಮಂಡಲದ ವಿಶ್ವಕರ್ಮ ಏಕವಲ್ಲಿ ಎಂದು ಉಲ್ಲೇಖಿಸಲಾಗಿದೆ. ಹೂ ಮಾರುವವರು ಎಂದು ಕ್ರಿ.ಶ. ೧೦೧೧ರ ಸರಡಗಿ ಶಾಸನ ಉಲ್ಲೇಖಿಸುತ್ತದೆ. ಪ್ರಸ್ತುತ ಅವರನ್ನು ಹೂಗಾರರು ಎಂದು

ಕರೆಯುವರು. ಆಳಂದ ಸಾಸಿರದ ಶಾಸನಗಳಲ್ಲಿ ತುಂಬಲಿಗರು ಎಂದು ಉಲ್ಲೇಖಿಸಿವೆ. ಬಹುಶಃ ಇವರು ಎಲೆಯ ಕೃಷಿ ಮತ್ತು ವ್ಯಾಪಾರ ಮಾಡುವವರಿದ್ದರು.

ಆಳುವ ವರ್ಗ, ಅಧಿಕಾರಿ ವರ್ಗ, ವ್ಯಾಪಾರಿ ವರ್ಗ, ರೈತ ವರ್ಗ ಮತ್ತು ಶ್ರಮಿಕ ವರ್ಗವೆಂದೂ ಸಹ ನಾವು ವಿಂಗಡಿಸಬಹುದಾಗಿದೆ. ಆಳುವ ವರ್ಗದಲ್ಲಿ ಅರಸರು, ರಾಣಿಯರು, ಯುವರಾಜರು, ಪುರೋಹಿತರು, ಸಾಮಂತರು, ಮಹಾಮಂಡಳೇಶ್ವರರು, ಮಂಡಳೇಶ್ವರರಿದ್ದರು. ಅಧಿಕಾರಿ ವರ್ಗದಲ್ಲಿ ಮಹಾಜನರು, ಸ್ಥಾನಾಚಾರ್ಯರು, ಗಾವುಂಡರು, ಸಂಧಿ ವಿಗ್ರಹಿಗಳು ಬರುತ್ತಾರೆ. ವ್ಯಾಪಾರಿ ವರ್ಗದಲ್ಲಿ ಸೆಟ್ಟಿ ಗುತ್ತರು, ಮುಮ್ಮರಿ ದಂಡರಿದ್ದರು. ಶ್ರಮಿಕ ವರ್ಗದಲ್ಲಿ ಕೃಷಿಕರು, ಕುಂಬಾರ, ಕಂಬಾರ, ಮಡಿವಾಳ, ಬಡಿಗ, ಸಿಪ್ಪಿಗ ಇತ್ಯಾದಿ ಜನ ಸಮುದಾಯಗಳಿವೆ.

೭.೧.೧. ಕುಟುಂಬ ವ್ಯವಸ್ಥೆ ಮತ್ತು ವಿವಾಹ ಪದ್ಧತಿ

'ಸಾಧುಸಂಯುತ ವಿದ್ವಾಂಸನಾಗಿರ್ದ್ದೇವಕೆಯ್ಗ ಮನೆಗೆ ವೊಡೆಯನಾಗಿರ್ಪ್ಪಂತಲ್ಲದೆ ದುಶ್ಚರಿತ್ರನಾದ ನಿರವೀಯದೆ ಪೊಡಮಡಿಸುಪ್ಪದು' ಎಂದು ರುದ್ರವಾಡಿ ಶಾಸನ ತಿಳಿಸುತ್ತದೆ. ಕುಟುಂಬದ ಒಡೆಯ ಮತ್ತು ಸಮಾಜದ ಒಡೆಯನಾದವನ ಅರ್ಹತೆಗಳ ಬಗ್ಗೆ ವಿವರಿಸುತ್ತದೆ. ಶಾಸನಗಳಲ್ಲಿ ಹೆಚ್ಚಾಗಿ ಕುಟುಂಬ ವ್ಯವಸ್ಥೆಯ ಬಗ್ಗೆ ಹೆಚ್ಚಾಗಿ ಉಲ್ಲೇಖ ಸಿಗದಿದ್ದರೂ ಶಾಸನಶಿಲ್ಪಗಳಲ್ಲಿ, ಮಾಸ್ತಿಗಲ್ಲುಗಳಲ್ಲಿ ಮತ್ತು ಮೂರ್ತಿಶಿಲ್ಪಗಳಲ್ಲಿನ ಶಿಲ್ಪಗಳ ಕೆತ್ತನೆ ಗಮನಿಸಿದಾಗ ವಿವಾಹದ ಮತ್ತು ಪತಿ–ಸತಿಯರ ಸಂಬಂಧ ಹೇಗಿರುತ್ತೆ ಎಂಬುದು ಕಂಡು ಬರುತ್ತದೆ. ವೈವಾಹಿಕತೆಯಲ್ಲಿ ಏಕಪತ್ನಿತ್ವ ಮತ್ತು ಬಹುಪತ್ನಿತ್ವ ಜಾರಿಯಲ್ಲಿತ್ತು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ವಿಕ್ರಮಾದಿತ್ಯನು ಬಹುಪತ್ನಿತ್ವ ಹೊಂದಿದ್ದನೆಂದು ಮತ್ತು ೧೬ ರಾಣಿಯರಿದ್ದದ್ದು ಶಾಸನಗಳು ಉಲ್ಲೇಖಿಸುತ್ತವೆ. ಪಿರಿಯರಸಿ, ಪಟ್ಟ ಮಹಿಷೆ, ಪಟ್ಟದರಸಿ, ಪಟ್ಟ ಎಂದು ಉಲ್ಲೇಖಿಸಿವೆ. ಪಿರಿಯರಸಿ ಪಟ್ಟ ಮಹಾದೇವಿ ಎಂದು ಶಾಸನ ಉಲ್ಲೇಖಿಸಿವೆ.[೬] ಪಟ್ಟ ಮಹಾದೇವಿ, ಚಂದಲದೇವಿಯರ ಉಲ್ಲೇಖ ಆಳಂದ ಶಾಸನಗಳಲ್ಲಿವೆ.[೭] ಪೆರ್ಮ ಜಗದೇಕಮಲ್ಲನ ರಾಣಿ ಅಭಿನವ ಸರಸ್ವತಿ ಎಂದು ಬಿರುದಾಂಕಿತಳಾದ ಮಲಯವತಿ ದೇವಿಯನ್ನು ಬೋದನ ಶಾಸನ ಉಲ್ಲೇಖಿಸುತ್ತದೆ. ಹೀಗಿರುವಾಗ ಪರಸ್ಪರ ರಾಣಿಯರಲ್ಲಿ ಜಗಳಗಳು ಆಗದಂತೆ ದೂರವಿಟ್ಟು ಅವರಿಗೆ ಕೆಲವು ಪ್ರಾಂತ್ಯಗಳನ್ನು ಆಳಲು ಬಿಟ್ಟ ಉದಾಹರಣೆ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ನೋಡಬಹುದು. ತ್ರಿಭುವನಮಲ್ಲನ ಮಡದಿ ಚಂದಲದೇವಿ 'ದುಷ್ಟದರ್ಪೆಷ್ಟ' ಸವತಿ ಶಿರೋವಜ್ರಮುಷ್ಟೆ' ಎಂಬ ಉಲ್ಲೇಖ ಆಳಂದ ಶಾಸನ ಮಾಡುತ್ತದೆ.[೮] ರಾಣಿಯರು ತಮ್ಮ ಸವತಿ ಮತ್ಸರದಿಂದಲೋ ಅಥವಾ ಪರಸ್ಪರ ಪ್ರತಿಸ್ಪರ್ಧೆಯಿಂದಲೋ ತಮ್ಮ ಪ್ರಾಂತ್ಯದ ಆಡಳಿತ ಇನ್ನೊಬ್ಬ ರಾಣಿಯರಿಗಿಂತಲೂ ಚೆನ್ನಾಗಿ ನೋಡಿಕೊಳ್ಳಬೇಕೆಂಬ ಮತ್ತು ರಾಜನಿಗೆ ಹತ್ತಿರವಾಗುವ ಆಶಯದಿಂದ ಚೆನ್ನಾಗಿ ಆಳ್ವಿಕೆ ಮಾಡುವ ಪ್ರಯತ್ನ ಮಾಡುತ್ತಿದ್ದರು. ಇದರಿಂದ ರಾಜನ ಆಳ್ವಿಕೆಯು ಉತ್ತಮವಾಗಿ ನಡೆಯುತ್ತಿತ್ತು.

ಸತಿಪದ್ಧತಿ

ಪ್ರಾಚೀನ ಮಹಾಭಾರತ ಕಾಲದಿಂದಲೂ ಸತಿಪದ್ಧತಿ ಜಾರಿಯಲ್ಲಿರುವುದರ ಉಲ್ಲೇಖಗಳಿವೆ. ಪಾಂಡು ರಾಜನ ಎರಡನೆಯ ಪತ್ನಿ ಮಾದ್ರಿಯು ತನ್ನ ಪತಿಯೊಂದಿಗೆ ಚಿತೆಗೇರಿ ಸತಿಯಾದ ಉಲ್ಲೇಖಗಳು ದೊರೆಯುತ್ತವೆ. ಅನೇಕ ಶಾಸನಗಳು ಮತ್ತು ಮಾಸ್ತಿಗಲ್ಲುಗಳು ಸಹ ಸತಿಪದ್ಧತಿ ಆಚರಣೆಯಲ್ಲಿರುವುದಕ್ಕೆ ಪುಷ್ಟಿ ನೀಡಿವೆ. ಗುಲಬರ್ಗಾ, ಯತ್ತಾಪೂರ, ಸೋಮನಿಂಗದಳ್ಳಿ, ರುಮ್ಮನಗೂಡು, ಹಲ್ಚೇರಾ, ಖಜೂರಿ, ತಡಕಲ್ ಹೀಗೆ ಹಲವು ಮಾಸ್ತಿಗಲ್ಲುಗಳು ಇಲ್ಲಿ ದೊರೆತಿದ್ದು, ನಮಗೆ ಆ ಕಾಲದ ಸತಿಪದ್ಧತಿಯ ವಿವರಣೆಗಳನ್ನು ತಿಳಿಸುತ್ತವೆ. ಸಾಮಾನ್ಯವಾಗಿ ಮೊದಲ ಹೆಂಡತಿ ಅಥವಾ ಪಟ್ಟದ ರಾಣಿ ಪತಿಯೊಂದಿಗೆ ಸತಿ ಹೋಗುತ್ತಿದ್ದಳು. ಉಳಿದವರು ಸತಿ ಪದ್ಧತಿಯಾಚರಿಸುತ್ತಿರಲಿಲ್ಲ. ಅವರು ಮಕ್ಕಳನ್ನು ನೋಡಿಕೊಳ್ಳುತ್ತಿದ್ದರು ಮತ್ತು ಕಠಿಣ ವ್ರತ ಆಚರಿಸುತ್ತ, ಆಗಿನ ನಿಯಮಗಳಿಗನುಸಾರವಾಗಿ ಸಮಾಜದಲ್ಲಿರುತ್ತಿದ್ದರು. ಸತಿಪದ್ಧತಿಯಲ್ಲಿ ಸತಿ ಸಹಗಮನ ಮತ್ತು ಅನುಗಮನ ಪದ್ಧತಿ ಎಂದು ಎರಡು ಪದ್ಧತಿಗಳಿದ್ದವು. ಪತಿಯೊಂದಿಗೆ ಸಾಯುವುದು ಸತಿ ಸಹಗಮನ ಎಂದೆನಿಸಿಕೊಂಡರೆ, ಪತಿಯ ಸಾವು ಬೇರೆಲ್ಲಿಯೋ ಆಗಿದೆ ಎಂಬ ವಿಷಯ ಗೊತ್ತಾದ ಮೇಲೆ ಚಿತೆಗೆ ಹಾರುವುದನ್ನು ಅನುಗಮನ ಎನ್ನುತ್ತಿದ್ದರು. ಹೆಚ್ಚಾಗಿ ಅನುಗಮನ ಆಚರಿಸುತ್ತಿದ್ದವರು ಸೈನಿಕರ ಹೆಂಡತಿಯರಾಗಿದ್ದರು. ಹಾಗಂತ ಒಬ್ಬರೇ ಸತಿಯಾಗುವ ಪದ್ಧತಿಯೊಂದಿಗೆ ಇಬ್ಬರು ಅಥವಾ ಮೂವರು ಹೀಗೆ ಹಲವು ಪತ್ನಿಯರು ಸತಿ ಮಾಡಿಕೊಂಡ ಉದಾಹರಣೆಗಳಿವೆ.

೭.೧.೨. ಸಾಮಾಜಿಕ ಆಚರಣೆಯ ಉಲ್ಲೇಖ

"ಓಂ ಖಡ್ಗ ಧಾರಿಣೇ ದೇವಹಿ ಬಲಿವಿತ್ಯಂ ತಿಸ್ಮರಯ್ಯೇ ವಿಶ್ವಂ ಶ್ರೀ ಶ್ರೀ ಶ್ರೀ-ಬಲಿ ನೀಡಿದ ಉಲ್ಲೇಖ?" (ಕ್ರಿ.ಶ. ೧೪೯೦ ಚಿಂಚನಸೂರು ಶಾಸನ). ಬಲಿ ನೀಡುವ ಪದ್ಧತಿ ಸಾಮಾಜಿಕ ಅಂಧಶ್ರದ್ಧೆಗಳಲ್ಲೊಂದು ಎಂಬುದು ನಮಗೆಲ್ಲಾ ತಿಳಿದ ವಿಷಯ. ಆದರೆ ಇದರ ಆಚರಣೆ ಪ್ರಾಚೀನ ಕಾಲದಿಂದಲೂ ಪ್ರಚಾರದಲ್ಲಿದೆ. ಸತಿಪದ್ಧತಿ, ವೇಶ್ಯವಾಟಿಕೆ, ದೇವಾಲಯದ ಸೂಳೆಯರು, ದೇವದಾಸಿ ಪದ್ಧತಿ, ಜಾತಿಪದ್ಧತಿಗಳನ್ನು ಈಗಾಗಲೇ ಹಲವು ಉಲ್ಲೇಖಗಳ ಮೂಲಕ ವಿವರಿಸಲಾಗಿದೆ. ಇವು ಸಾಮಾಜಿಕ ಅಂಧ ಆಚರಣೆಗಳಾಗಿದ್ದವು. ಹಬ್ಬ-ಹರಿದಿನಗಳಲ್ಲಿ ಎಲ್ಲರೂ ಸೇರಿ ಆಚರಿಸುವುದು, ಕುಟುಂಬ ವ್ಯವಸ್ಥೆ, ಸಮಾಜದೊಂದಿಗೆ ಹೊಂದಿ ಕೊಂಡು ಬದುಕುವ ವ್ಯವಸ್ಥೆ, ಗ್ರಾಮೀಣ ನ್ಯಾಯ ನೀಡುವ ಪಂಚರ ಪದ್ಧತಿ, ಗ್ರಾಮಾಡಳಿತ ವ್ಯವಸ್ಥೆ ಹೀಗೆ ಒಳ್ಳೆಯ ಆಚರಣೆಗಳೂ ಸಹವಿದ್ದವು.

ಹಬ್ಬ-ಹರಿದಿನಗಳು, ಸೂರ್ಯಗ್ರಹಣ, ಚಂದ್ರಗ್ರಹಣ, ಸಂಕ್ರಾಂತಿಯ ದಿನಗಳಲ್ಲಿ ದಾನ ಮಾಡುತ್ತಿದ್ದರು. ಈ ಭಾಗದ ಶಾಸನಗಳಲ್ಲಿ ಚಿಂಚನಸೂರು, ಕಡಗಂಚಿ, ತಡಕಲ್, ಆಳಂದ, ಸುಲೇಪೇಟೆ, ದೇಗಲ್ಮಡಿ, ಬೆಳಗುಂಪಾ(ಕೆ)ಯಲ್ಲಿರುವ ಶಾಸನಗಳು ದಾನ ಶಾಸನಗಳಾಗಿವೆ.

ದೇವಾಲಯದಲ್ಲಿ ಧರ್ಮ ಕಾರ್ಯ ಮಾಡುವುದನ್ನು ಸೂಚಿಸುತ್ತವೆ. 'ಯಿರ ಸಂಗಪ್ಪನ ಮಗ ಮಾಯಂಣ್ಣನು ಶ್ರೀ ಮಹೇಶ್ವರ ದೇವರಿಗೆ ದಂಡವತ್ತವನ್ನು' ಮಾನ್ಯ ಮಾಡಿದ್ದಾಗಿ ಚಿಂಚನಸೂರ ಶಾಸನ ತಿಳಿಸುತ್ತದೆ.' ಹೊಡಲ ಶಾಸನದಲ್ಲಿ 'ದೇವರಿಗೆ ಹರಕೆ ರೂಪದಲ್ಲಿ ೧೦೦ ಕೋಣ, ೧೦೦ ಎತ್ತುಗಳನ್ನು ಬಿಟ್ಟ' ಉಲ್ಲೇಖವಿದೆ. ಶಾಸನ ರಕ್ಷಿಸಿದವರಿಗೆ ಅಲಂಕಾರ ಸಹಿತ ಸಾವಿರ ಕಪಿಲೆಗಳನ್ನು ದಾನ ಮಾಡಿದ ಪುಣ್ಯ ಬರಲಿ, ನಾಶ ಮಾಡಿದವರಿಗೆ ಪಾಪ ಹತ್ತಲಿ ಎಂಬ ಉಲ್ಲೇಖಗಳು ಶಾಸನಗಳ ಶಾಪಾಶಯಗಳಲ್ಲಿ ನೋಡಬಹುದು. ಅಲ್ಲದೆ ಶಾಪಾಶಯಗಳಲ್ಲಿ ಸ್ವರ್ಗ ಮತ್ತು ನರಕಗಳ ಪರಿಕಲ್ಪನೆಯಿವೆ. ಪುನ್ನರಕದ ಉಲ್ಲೇಖವನ್ನು ಸಹ ಶಾಸನಗಳಲ್ಲಿ ಉಲ್ಲೇಖಿಸಿವೆ.

೭.೧.೩. ಶಾಪಾಶಯಗಳಲ್ಲಿ ಸಾಮಾಜಿಕ ಸ್ಥಿತಿಗತಿ

'ಸಾಧುಸಂಯುತ ವಿದ್ವಾಂಸನಾಗಿರ್ದ್ದೇವಕೆಯ್ಗ ಮನೆಗೆ ವೊಡೆಯನಾಗಿರ್ಪ್ಪಂತಲ್ಲದೆ ದುಶ್ಚರಿತ್ರನಾದ ನಿರವೀಯದೆ ಪೊಡಮಡಿಸುಪ್ಪದು' ಎಂದು ರುದ್ರವಾಡಿ ಶಾಸನ ತಿಳಿಸುತ್ತದೆ. ಸಮಾಜದ ಸ್ವತ್ತು ಅರ್ಹರಾದವರ ಕೈಯಲ್ಲಿರಬೇಕು ಎಂದು ಶಾಸನಗಳು ಉಲ್ಲೇಖಿಸಿವೆ. ಸ್ಥಾನಾಚಾರ್ಯರು ದಾನದ ದುರುಪಯೋಗ ಮಾಡಿಕೊಂಡಾಗ ಅವರನ್ನು ಸ್ಥಾನದಿಂದ ತೆಗೆಯುವಂತೆ ಅವರು ಸತ್ತಾಗ ಹಂದಿ, ನಾಯಿ, ಕತ್ತೆಗೆ ಸಮಾನ ಎಂದು ತಿಳಿಸುವ ಭೋದನ ಶಾಸನವು ಜಾತಿ ವ್ಯವಸ್ಥೆಯ ವಿವರಣೆ ನೀಡುತ್ತದೆ. ಕ್ರಿ.ಶ. ೧೧೩೪ರ ನಿಂಬರ್ಗಾ ಶಾಸನದಲ್ಲಿ ನೈಷ್ಠಿಕರು ತಮ್ಮ ಕಾರ್ಯ ಸರಿಯಾಗಿ ಮಾಡದಿದ್ದರೆ, ತಮ್ಮ ಇಪ್ಪತ್ತೊಂದು ತಲೆಯ ಪಿತೃಗಳು ನೇರ ಪುನ್ನರಕಕ್ಕೆ ಹೋಗುವರು ಎಂದು ಉಲ್ಲೇಖಿಸುತ್ತದೆ. ಪೂಜೆಗೆ ಅರ್ಹ ಇಲ್ಲಿ ಬ್ರಾಹ್ಮಣರಲ್ಲದೆ, ಶೂದ್ರರಲ್ಲ ಎಂದು ಉಲ್ಲೇಖ ನೀಡುತ್ತದೆ. ಬಣಂಜಿಗರು ಮತ್ತು ಚಾಂಡಾಲರ ವಿವರಣೆ ನೀಡುತ್ತದೆ. ಮತ್ತೂರು ಶಾಸನದಲ್ಲಿ ಉಗ್ರ ಮುನೀಂದ್ರರನ್ನು, ಪಶುಗಳನ್ನು, ವೇದಾಭ್ಯಾಸ ಮಾಡಿದವರನ್ನು ಕೊಂದ ಪಾಪ ಹತ್ತುತ್ತದೆ ಎಂದು ಉಲ್ಲೇಖಿಸಿದೆ. ಅಂದರೆ ಇಲ್ಲಿ ಪ್ರಾಣಿ ಮತ್ತು ನರ ಬಲಿ ಪಾಪದ ಕೆಲಸವಾಗಿತ್ತೆಂದು ತಿಳಿಸುತ್ತದೆ. ಭೀಮರಥಿ, ಗಂಗೆ, ಯಮುನೆ, ನರ್ಮದಾ, ತುಂಗಭದ್ರಾ, ಗೋದಾವರಿ ನದಿಗಳ ಉಲ್ಲೇಖವನ್ನು ನೀಡುತ್ತದೆ. ಶಾಪಾಶಯಗಳಲ್ಲಿ ಮಹಿಳೆಯರನ್ನು ತೀರಾ ಕೀಳು ಮಟ್ಟದಲ್ಲಿಟ್ಟಂತೆ ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದರೆ ಸಮಾಜ, ಕುಟುಂಬದ ಮರ್ಯಾದೆ ಎಂದರೆ ಮಹಿಳೆ ಎನ್ನುವ ಅರ್ಥ ಇಲ್ಲಿ ಕಂಡು ಬರುತ್ತದೆ.

೭.೧.೪. ದೇವಾಲಯಗಳ ಸಾಮಾಜಿಕ ವ್ಯವಸ್ಥೆ

ದೇವಾಲಯಗಳು ಸಮಾಜದ ವಿವಿಧೋನ್ಮುಖ ಬೆಳವಣಿಗೆಗೆ ಕಾರಣವಾದವು. ಬ್ರಹ್ಮಚಾರಿಗಳಿಗೆ ಅಲ್ಲದೆ ಕುಟುಂಬದಲ್ಲಿ ಹೇಗಿರಬೇಕು ಎಂಬುದು ತಿಳಿಸುತ್ತವೆ. ಪತಿ-ಪತ್ನಿಯರಿಗೂ ಲೈಂಗಿಕ ಶಿಲ್ಪಗಳು ಅಥವಾ ದೃಷ್ಟಿ ಶಿಲ್ಪಗಳ ಮೂಲಕ ಸಂಸಾರ ವೃದ್ಧಿಸುವ ಶಿಕ್ಷಣ ನೀಡುತ್ತಿದ್ದವು. ನನ್ನ ದೃಷ್ಟಿಕೋನದಲ್ಲಿ ಕೆಲವು ಜಾತಿಗಳು ಹುಟ್ಟಿಕೊಂಡಿದ್ದು ಮತ್ತು ಸಮಾಜದಲ್ಲಿರುವ ಆಚರಣೆಗಳು,

ಭಯ-ಭಕ್ತಿ, ವಿವಿಧ ಪದ್ಧತಿಗಳು ಮತ್ತು ಜಾತಿ ವ್ಯವಸ್ಥೆ ಹುಟ್ಟಿದ್ದು ದೇವಾಲಯಗಳ ಆಚರಣೆಯಿಂದ ಮತ್ತು ಧಾರ್ಮಿಕ ನೆಲೆಗಟ್ಟಿನಿಂದ ಎನ್ನಬಹುದು. ಅಂಧಶ್ರದ್ಧೆಗಳಾದ ದೇವದಾಸಿ ಪದ್ಧತಿ, ಸತಿ ಪದ್ಧತಿ, ಬಲಿಪದ್ಧತಿ, ಆತ್ಮಬಲಿದಾನ ಪದ್ಧತಿ ಇವೆಲ್ಲವುಗಳು ಧಾರ್ಮಿಕ ಹಿನ್ನೆಲೆಯಿಂದ ದೇವಾಲಯಗಳಲ್ಲಿ ಆಚರಣೆಗೆ ಬಂದವು.

೭.೧.೫. ವೇಷಭೂಷಣ ಮತ್ತು ಆಭರಣಗಳು

ಜನಜೀವನ, ಆರ್ಥಿಕ ವ್ಯವಸ್ಥೆ, ಅಲಂಕಾರ, ಉಡುಗೆ-ತೊಡುಗೆಗಳು, ಕೇಶಾಲಂಕಾರ ಅಲ್ಲಿನ ಸಾಮಾಜಿಕ, ಧಾರ್ಮಿಕ ಜೀವನವನ್ನು ತಿಳಿಸುತ್ತವೆ. ಇವುಗಳ ಅಧ್ಯಯನದಿಂದ ನಮಗೆ ಸಾರ್ವಜನಿಕರ ಜೀವನಶೈಲಿ ತಿಳಿಯಲು ಸಹಾಯಕವಾಗಿವೆ.

ಸ್ತ್ರೀಯರ ವೇಷಭೂಷಣ

ಸೊಂಟದಿಂದ ತೊಡೆಯ ಭಾಗದವರೆಗೆ (ಮಿನಿಸ್ಕರ್ಟ್) ಮತ್ತು ಮೇಲ್ಭಾಗಕ್ಕೆ ಕುಪ್ಪಸ ಧರಿಸುತ್ತಿದ್ದರು. ಸೀರೆ, ಕುಪ್ಪಸವನ್ನು ಧರಿಸುತ್ತಿದ್ದರು. ಉದ್ದನೆಯ ಜರಿ ರೀತಿಯ ಬಟ್ಟೆಯನ್ನು ಕೊರಳ ಭಾಗದಿಂದ ಮೊಣಕಾಲಿನ ಕೆಳ ಭಾಗದವರೆಗೂ ಧರಿಸುತ್ತಿದ್ದರು. ಕಟಿವಸ್ತ್ರ, ತೋಳ್ಬಂದಿ, ಪೈಜಾಮ (ಕಾಲಿಗೆ ಹಾಕುವ ಆಭರಣ) ಕಾಲ್ಗಡಗ, ಕಾಲ್ಗೆಜ್ಜೆ, ಬಳೆ, ಸೊಂಟಪಟ್ಟಿ, ಡಾಬು, ಕಿವಿಓಲೆ, ಕಂಠಹಾರ, ಕೊರಳಹಾರ, ತುರುಬಕ್ಕೆ ಹಾಕುವ ಹೂವಿನ ಅಲಂಕಾರದ ಆಭರಣ ಮತ್ತು ಕೈ ಬೆರಳುಂಗುರ, ಕಾಲ್ಬೆರಳುಂಗುರ, ಸಿಂಧೂರ, ಭುಜಬಂದಿ, ಬಾಹುವಲ್ಯ, ಸ್ತನಹಾರ, ಕುಚಹಾರ ಧರಿಸುತ್ತಿದ್ದರು.

ಪುರುಷರು ವೇಷಭೂಷಣ

'ವಿ' ಆಕಾರದ ಮತ್ತು ಮಿನಿಸ್ಕರ್ಟ್‌ನಂತಹ ಉಡುಪು ಧರಿಸುತ್ತಿದ್ದರು. ಸೊಂಟದಿಂದ ತೊಡೆಯವರೆಗೆ ಧೋತರದಂತಹ ಬಟ್ಟೆಯನ್ನು ಧರಿಸುತ್ತಿದ್ದರು. ತೋಳ್ಬಂದಿ, ಬಾಹುವಲ್ಯ, ವಕ್ಷಬಂಧ, ಕಟಿವಸ್ತ್ರ, ಸೊಂಟಪಟ್ಟಿ, ಕರ್ಣಕುಂಡಲ, ಹಾರ, ಸರ, ಕಂಠಹಾರ, ಕಾಲ್ಗಡಗ, ಕೈ ಉಂಗುರ ಧರಿಸುತ್ತಿದ್ದರು. ರಾಜವರ್ಗದವರು ಮತ್ತು ಶ್ರೀಮಂತರು ಧೋತರ (ಜರಿ ಮತ್ತು ರೇಷ್ಮೆ) ಪಂಚೆ, ಕಿರೀಟ, ಪೇಟಕೆವನ್ನು ಮತ್ತು ಅಲಂಕಾರಿಕ ಹಣೆಪಟ್ಟಿ ಧರಿಸುತ್ತಿದ್ದರು. ಮಣಿಕಂಠ, ಮುತ್ತಿನಹಾರ ಮತ್ತು ಕೈಯೂರ ಧರಿಸುತ್ತಿದ್ದರು. ವೀರರು ಮುಡಿ ಧರಿಸುತ್ತಿದ್ದರು.

ಆಯುಧಗಳು

ಭಚಿ, ಖಡ್ಗ, ಚಾಕು, ಚೂರಿ, ಗುರಾಣಿ, ಬಿಲ್ಲು, ಬಾಣ, ತೋಮ ಇತ್ಯಾದಿ ಯೋಧರ ಆಯುಧಗಳಾಗಿದ್ದವು.

ಪ್ರಾಣಿ-ಪಕ್ಷಿಗಳು ಉಲ್ಲೇಖ

ಕೋಣ, ಎತ್ತು, ಕುದುರೆ, ಕತ್ತೆ, ಆಕಳು(ಕವಿಲೆ), ಕರು, ಆನೆ, ಸಿಂಹ, ಹುಲಿ, ಹುಂಜ ಇತ್ಯಾದಿಗಳ ಉಲ್ಲೇಖಗಳನ್ನು ಶಾಸನಗಳಲ್ಲಿ ಕಾಣಬಹುದು.

ಆಹಾರ ಮತ್ತು ಪಾನೀಯ

ಹಾಲು, ಹಾಲಿನ ಉತ್ಪಾದನೆಗಳು, ತರಕಾರಿಗಳು, ಹಣ್ಣುಗಳು, ಜೋಳದ ರೊಟ್ಟಿ, ಅನ್ನ, ಗೋಧಿ ಹಿಟ್ಟಿನ ರೊಟ್ಟಿ ಉಪಯೋಗಿಸುತ್ತಿದ್ದರು. ನಿಂಬರಗಾ ಶಾಸನದಲ್ಲಿ ಗೋದುವೆ, ಅನ್ನ, ಆಹಾರ, ಜೀರಿಗೆ, ಕಂಗೊ, ತೆಂಗು, ಅಲ್ಲ, ಅರಶಿಣ, ಬಾಳೆಹಣ್ಣು, ಈಳೆ, ಖಜೂರ, ಪಂಕೇರುಹ, ಪಾದರಿಗಳ ಉಲ್ಲೇಖಗಳಿವೆ. ಅಡಕೆ, ಎಲೆಯ ಉಲ್ಲೇಖ ಮಡಿಹಾಳ ಶಾಸನದಲ್ಲಿದೆ. ಘೃತ ಪಾಯಸ ದಾನ ಮಾಡಿದ ಉಲ್ಲೇಖ ಶಾಸನದಲ್ಲಿದೆ.

೭.೧.೬. ಶಾಸನಗಳಲ್ಲಿ ಸ್ತ್ರೀ ಸಮಾಜ

ಪ್ರಾಚೀನ ಭಾರತದಲ್ಲಿ ಸ್ತ್ರೀಯರು ಬಹಳಷ್ಟು ಸ್ವತಂತ್ರರಾಗಿ ಕಾರ್ಯನಿರ್ವಹಿಸುತ್ತಿದ್ದರು. ಅದಕ್ಕೆ ವೇದಗಳು ಸಾಕ್ಷಿಯಾಗಿವೆ. ಗಾರ್ಗಿ, ಮೈತ್ರಿಯರಂಥಹ ವಿದ್ವಾಂಸರಿದ್ದರು. ಮಹಿಳೆಯರಿಗೆ ವಿವಾಹದ ಆಯ್ಕೆಯಲ್ಲಿ ಸ್ವಾತಂತ್ರ್ಯವಿತ್ತು. ನಂತರದ ದಿನಗಳಲ್ಲಿ ಸ್ತ್ರೀಯು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂದು ಮನುಸ್ಮೃತಿಯಲ್ಲಿ ತಿಳಿಸಿದನು. ಅದು ಮುಂದೆ ಕಠೋರವಾಗಿ ಮಹಿಳೆ ಕತ್ತಲ ಅಡುಗೆ ಮನೆಯಲ್ಲಿರುವಂತೆ ಮಾಡಿತು. ಅದು ಎಷ್ಟರಮಟ್ಟಿಗೆ ಬೇರೂರಿದೆ ಎಂದರೆ, ಅದನ್ನು ಇಂದಿಗೂ ಕಿತ್ತು ಹಾಕುವ ಪ್ರಯತ್ನ ಮಾಡಲಾಗುತ್ತಿದೆ. ಮಹಿಳೆಯರ ಹಕ್ಕು ಬಾಧ್ಯತೆಗೆ ಅನೇಕ ಕಾನೂನಾತ್ಮಕ ಕ್ರಮ ಕೈಗೊಂಡಿವೆ. ಸುಮಾರು ೧೧ನೆಯ ಶತಮಾನದಿಂದೀಚೆಗೆ ಉನ್ನತವರ್ಗದ ಮಹಿಳೆಯರಿಗೆ ಕಠಿಣ ನಿಯಮ ಮತ್ತು ಕ್ರಮಗಳಿಂದ ಮುಕ್ತಗೊಳಿಸುವ ಪ್ರಯತ್ನ ಮಾಡಲಾಗುತ್ತಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ರಾಣಿಯರಿಗೆ ಆಡಳಿತ ಮಾಡಲು ಮತ್ತು ಧಾರ್ಮಿಕ, ಶೈಕ್ಷಣಿಕ ವಿಷಯಗಳಿಗೆ ದಾನ ದತ್ತಿ ನೀಡುವ ಸ್ವಾತಂತ್ರ್ಯ ನೀಡಲಾಗಿತ್ತು. ಶಾಸನದಲ್ಲಿ ಬರ್ಮಲದೇವಿ ನಿಂಬರಗೆ ಆಳುವ ಉಲ್ಲೇಖವಿದೆ. ಮಹಾಮಂಡಲೇಶ್ವರ ಸೋಮರಸನ ಪತ್ನಿ ಎಂಗಲದೇವಿಯ ಬಗ್ಗೆ ದಾನದ ಬೆಳಮಗಿ ಶಾಸನ ಉಲ್ಲೇಖಿಸುತ್ತದೆ. ಆರನೆಯ ವಿಕ್ರಮಾದಿತ್ಯನ ರಾಣಿ ಚಂದಲದೇವಿ ಅಳಂದೆ ಸಾಸಿರವನ್ನು ಆಳುವ ಉಲ್ಲೇಖ ನೀಡುತ್ತದೆ. ಜಗದೇಕಮಲ್ಲನ ರಾಣಿ ಅಭಿನವ ಸರಸ್ವತಿ ಮಲಯವತಿ ದೇವಿಯ ಆಳ್ವಿಕೆಯ ಬಗ್ಗೆ ಕ್ರಿ.ಶ. ೧೧೪೩ರ ಬೋಧನ ಶಾಸನ ಉಲ್ಲೇಖಿಸುತ್ತದೆ.

ಮೋಘಾ ಶಾಸನದಲ್ಲಿ ಸಾವಿತ್ರಿ ಪುತ್ರ ವೆಸಮಯ್ಯ ದಂಡಾಧೀಶ ಎಂದು ಹೇಳಿರುವುದು ಇಲ್ಲಿ ತಾಯಿ ಸ್ಥಾನ ಪ್ರಮುಖವಾಗಿತ್ತೆಂದು ತಿಳಿಸುತ್ತದೆ. ಮೋಘಾ ಶಾಸನವು ಮಹೇಶ್ವರಿ ಮೈಲಳದೇವಿ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ. ಹುಣಸಿ ಹಡಗಲಿ ಶಾಸನವು ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಪಿರಿಯರಸಿ ಚಂದಲದೇವಿ ಅಲಂದೆ-೧೦೦೦ವನ್ನು ಆಳುತ್ತಿದ್ದಳು.[೧೦] ಕೆಳಸ್ತರದಲ್ಲಿರುವ ಸ್ತ್ರೀಯರನ್ನು ಪ್ರಸ್ತುತ ತಳಸಮುದಾಯದವರೆಂದು ಕರೆಯಲಾಗುತ್ತದೆ. ಅವರಲ್ಲಿ ದೇವದಾಸಿಯರು, ಕಂಬದ ಸೂಳೆಯರು ಬರುತ್ತಾರೆ. ಮಡಿಹಾಳ ಶಾಸನದಲ್ಲಿ ಸೂಳೆಗೆರೆಯ ಪ್ರಸ್ತಾಪವಿದೆ. ಅವರಿಗೆ ಒಂದು ಪ್ರತ್ಯೇಕ ಸ್ಥಾನ ಆ ಕಾಲದಲ್ಲಿತ್ತು. ಕ್ರಿ.ಶ. ೧೧೧೯ರ ಹಂದರ್ಕೆ ಶಾಸನದಲ್ಲಿ ಕಂಬದ ಸೂಳೆಯರ ಪ್ರಸ್ತಾಪವನ್ನು ನೋಡಬಹುದಾಗಿದೆ. ದೇವದಾಸಿಯರು ಎಂದರೆ ದೇವರ ಸೇವೆಗೆ ಮೀಸಲಿರುವವರು ಎಂಬರ್ಥವಿದೆ. ಈ ಪದ್ಧತಿ

ಹುಟ್ಟಿಕೊಂಡಿದ್ದೇ ಅಂಗಭೋಗ ಮತ್ತು ರಂಗಭೋಗದ ನೃತ್ಯಗಾರ್ತಿಯರಿಂದ ಎನ್ನಬಹುದು. ಆರಂಭದಲ್ಲಿ ಪೂಜಾದಿ ವೇಳೆಯಲ್ಲಿ ದೇವರ ಸೇವೆಗೆ ಬರುತ್ತಿದ್ದ ನೃತ್ಯಗಾರ್ತಿಯರು ಮುಂದಿನ ದಿನಗಳಲ್ಲಿ ದೇವಸ್ಥಾನದ ಅಧಿಕಾರಿಗಳು, ಪೂಜಾರಿಗಳು ಧರ್ಮದ ಹೆಸರಲ್ಲಿ ತಮ್ಮ ಸೇವೆಗೆ ಬಳಸಿಕೊಂಡರು. ದೇವಾಲಯಗಳಲ್ಲಿ ದಾನದಿಂದ ಬಂದಂಥ ಭೂಮಿ, ಧಾನ್ಯಗಳು ಮತ್ತು ಹಣದಿಂದ ಆರ್ಥಿಕವಾಗಿ ಸಬಲರಾಗಿದ್ದ ಇವರನ್ನು ಎದುರಿಸಲಾಗದೆ ಅವರ ಸೇವೆಗೂ ಮುಂದಾದರು. ಹೀಗೆ ದೇವದಾಸಿಯರು ಧರ್ಮದ ಹೆಸರಲ್ಲಿಯೂ, ಅಂಧಶ್ರದ್ಧೆಯಿಂದಲೂ ಆರ್ಥಿಕವಾಗಿ ಸಬಲರಾಗಿರುವವರಿಂದ ತುಳಿತಕ್ಕೊಳಗಾದರು. ಮುಂದೆ ಅವರ ಬಯಕೆಗಳು ಹೆಚ್ಚಾದಂತೆ ದೇವಾಲಯದ ಕಂಬಕ್ಕೆ ಒಬ್ಬೊಬ್ಬರಂತೆ ಕಂಬದ ಸೂಳೆಯರ ಹೆಸರಲ್ಲಿ ನೇಮಕ ಮಾಡಿಕೊಂಡು ತಮ್ಮ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲಾರಂಭಿಸಿದರು. ಮುಂದಿನ ದಿನಗಳಲ್ಲಿ ದೇವದಾಸಿ ಎಂಬ ಪವಿತ್ರ ಅರ್ಥ ಹೊಂದಿರುವ ಪದ್ಧತಿ ಸೂಳೆಯರ ಅರ್ಥಕ್ಕೆ ತಲುಪಿತು. ಅವರಿಗೆ ಹುಟ್ಟಿದ ಮಕ್ಕಳು ದೇವರ ಮಕ್ಕಳು ಎಂದು ಕರೆಯಲಾರಂಭಿಸಿದರು. ಅವರನ್ನು ಸಹ ಈ ಪದ್ಧತಿಗೆ ತಳ್ಳಿದರು. ಮುಂದೆ ಅವರ ವಂಶಪಾರಂಪರ್ಯವಾಯಿತು?

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕ್ರಿ.ಶ. ೧೦೫೫ತ ನಿಂಬರ್ಗಾ ಶಾಸನದಲ್ಲಿ 'ಸ್ತನಯುಗಯೆನಿಪ ಚಂದಲ ದೇವಿಯರುಂ' ಹೆಣ್ಣಿನ ಆಳ್ವಿಕೆ ಕಾಲ ಬಂದಿತು ಎಂಬ ವ್ಯಂಗ್ಯವಾದ ಧ್ವನಿಯಿಲ್ಲಿ ತೋರಿದಂತೆ ಕಾಣುತ್ತದೆ. ಆರನೆಯ ವಿಕ್ರಮಾದಿತ್ಯನು ತನ್ನ ಬ್ರಹತ್ ಸಾಮ್ರಾಜವನ್ನು ಸಾಮಂತರಿಂದ ಅಧಿಕಾರಿ ವರ್ಗಗಳಿಂದ ರಕ್ಷಿಸಿಕೊಳ್ಳಲು ತನ್ನ ರಾಣಿಯರಿಗೆ ಅಧಿಕಾರಕ್ಕೆ ತಂದು ಆಳ್ವಿಕೆಗೆ ಪ್ರೋತ್ಸಾಹಿಸಿದನು. ದಕ್ಷ ಅಧಿಕಾರಿಗಳ ಕೊರತೆ ಕಂಡುಕೊಂಡ ವಿಕ್ರಮಾದಿತ್ಯ ತನ್ನ ಪತ್ನಿಯರು ತನಗೆ ವಿಧೇಯರಾಗಿರುತ್ತಾರೆ ಎಂದು ಆಡಳಿತಕ್ಕೆ ನೇಮಿಸಿದನು.

೭.೧.೭. ಮಾಸ್ತಿಗಲ್ಲು, ಮೂರ್ತಿಶಿಲ್ಪಗಳು ಮತ್ತು ಶಾಪಾಶಯಗಳಲ್ಲಿ ಮಹಿಳೆಯರ ಸ್ಥಿತಿಗತಿ

ಕಲಬುರಗಿಯ ಮ್ಯೂಸಿಯಂನಲ್ಲಿರುವ ಶಿಲ್ಪಗಳಲ್ಲಿ ಸ್ತ್ರೀ ಶಿಲ್ಪಗಳು ಪ್ರಾಚೀನ ಕಾಲದ ಸ್ತ್ರೀಯರ ಸ್ಥಿತಿಗತಿ ತಿಳಿಸುತ್ತವೆ. ಜನಸಾಮಾನ್ಯ ಸ್ತ್ರೀಶಿಲ್ಪಗಳು, ದಂಪತಿಯರ ಶಿಲ್ಪಗಳು, ಮಗುವನ್ನೆತ್ತಿಕೊಂಡ ತಾಯಿಯ ಶಿಲ್ಪ, ನಾಟ್ಯವಾಡುವ ನೃತ್ಯಗಾರ್ತಿಯರ ಶಿಲ್ಪ, ತೋರಣ ಸುಂದರಿಯರ ಶಿಲ್ಪ, ಲತಾಸುಂದರಿಯರ ಶಿಲ್ಪ, ಸ್ತಂಭದಲ್ಲಿ ನಿಂತಿರುವ ಶಿಲ್ಪ, ಸತಿಹೋದ ಮಹಿಳೆಯರ ಶಿಲ್ಪ, ಹೀಗೆ ವಿವಿಧ ರೂಪಗಳಲ್ಲಿ ಸ್ತ್ರೀಯರ ಸ್ಥಾನಮಾನ ವಿವರಿಸುವ ಪ್ರತಿ ಶಿಲ್ಪಗಳು ಸ್ತ್ರೀಯರ ಜೀವನ, ವೇಷಭೂಷಣ, ಅಲಂಕಾರ, ಆ ಕಾಲದ ಸಾಮಾನ್ಯ ಸ್ತ್ರೀಯರ ಬಗ್ಗೆ ತಿಳಿಯಲು ನಮಗೆ ಸಹಾಯಕವಾಗಿವೆ. ಮಹಿಳೆಯರು ಪ್ರಾಚೀನ ಕಾಲದಲ್ಲಿ ಯಾವ ರೀತಿಯ ಜೀವನ ನಡೆಸುತ್ತಿದ್ದರೆಂಬುದನ್ನು ಇವು ತಿಳಿಸುತ್ತವೆ. ಕೌಟುಂಬಿಕ ಜೀವನ, ಧಾರ್ಮಿಕ ಜೀವನ, ಆರ್ಥಿಕ ಸ್ಥಿತಿಗತಿ, ಸಾಮಾಜಿಕ ಜೀವನ ಬಗ್ಗೆ ಈ ಶಿಲ್ಪಗಳು ಬೆಳಕು ಚೆಲ್ಲುತ್ತವೆ.

ಸಾಮಾನ್ಯವಾಗಿ ಕಲಬುರಗಿ ಜಿಲ್ಲೆಯ ಶಾಸನಗಳನ್ನು ಅಧ್ಯಯನಕ್ಕೊಳಪಡಿಸಿದಾಗ ಧಾರ್ಮಿಕ, ಕೌಟುಂಬಿಕ ಜೀವನದಲ್ಲಿ ಮಹಿಳೆಯರ ಅಸ್ತಿತ್ವ ಕಾಣಬಹುದಾಗಿದೆ. ಸುಮಾರು ೧೧ನೆಯ

ಶತಮಾನದಿಂದ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಅವರ ರಾಣಿಯರು ರಾಜಕೀಯದಲ್ಲಿ ಪ್ರಾಂತ್ಯಾಧಿಕಾರಿಗಳಾಗಿ ಆಡಳಿತ ನಡೆಸಿರುವ ಬಗ್ಗೆ ಮಾಹಿತಿ ದೊರೆಯುತ್ತದೆ. ಕಲ್ಯಾಣ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನ ಕಾಲವನ್ನು ನಾವು ಇಲ್ಲಿ ಉದಾಹರಿಸಬಹುದಾಗಿದೆ. ಹಾಗೆಯೇ ಕರ್ನಾಟಕದ ವೀರಗಲ್ಲುಗಳನ್ನು ಅಧ್ಯಯನ ಮಾಡಿದಾಗ ಅನೇಕ ಮಹಿಳೆಯರು ತುರುಗೋಳ್ ಕಾಳಗದಲ್ಲಿ ಆಕಳುಗಳನ್ನು ರಕ್ಷಿಸಿ ವೀರ ಮರಣ ಹೊಂದಿದ ಉದಾಹರಣೆಗಳುಂಟು. ಅದೇ ರೀತಿ ಆಕಳುಗಳನ್ನು ಕದ್ದ ಶತ್ರುಗಳನ್ನು ಯುದ್ಧಕ್ಕೆ ಆಹ್ವಾನಿಸಿರುವರು. ಇಂತಹ ವೀರ ಧೀರ ಮಹಿಳೆಯರ ಜೀವನಕ್ಕೆ ಅವಕಾಶಗಳ ಕೊರತೆ ಆ ಕಾಲದಲ್ಲಿ ಎದ್ದು ಕಾಣುತ್ತಿತ್ತು. ಒಂದುವೇಳೆ ಅವರಿಗೆ ಎಲ್ಲಾ ಸ್ವಾತಂತ್ರ್ಯಗಳು ದೊರೆತಿದ್ದರೆ ಅವರ ಸ್ಥಾನಮಾನ, ಸ್ಥಿತಿಗತಿ ಉತ್ತಮವಾಗಿರುತ್ತಿತ್ತು. ಇನ್ನು ಅವರ ಧಾರ್ಮಿಕ ಜೀವನವನ್ನು ನೋಡಿದರೆ ಅವರು ತಮ್ಮ ಜೀವನದ ಹೆಚ್ಚಿನ ಭಾಗ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ.

ಪ್ರಾಚೀನ ಕಾಲದ ಸ್ತ್ರೀಯರೂ ಸಹ ಅಲಂಕಾರ ಪ್ರಿಯರಾಗಿದ್ದರೆಂಬುದು ಈ ಶಿಲ್ಪಗಳಿಂದ ತಿಳಿದುಬರುತ್ತದೆ. ಅವರು ಧರಿಸಿರುವ ಆಭರಣಗಳು, ಕಟ್ಟಿಕೊಂಡ ಕೂದಲಿನ ವಿನ್ಯಾಸ, ನಿಂತ ಭಂಗಿ, ವೇಷಭೂಷಣ ಇವೆಲ್ಲವೂ ಅವರು ಸೌಂದರ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದರೆನ್ನುವುದಕ್ಕೆ ಉದಾಹರಣೆಯಾಗಿವೆ.

ಕಲಬುರಗಿಯ ಶಾಸನಗಳಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಆಳಿದ ರಾಣಿಯರು, ಸಾಮಂತರ, ಪ್ರಾಂತ್ಯಾಧಿಕಾರಿಯರ ಪತ್ನಿಯರು ನೀಡಿದ ದಾನಗಳ ಬಗ್ಗೆ ಅಧ್ಯಯನ ಮಾಡಿದಾಗ ಅವರು ಶಿಕ್ಷಣಕ್ಕಾಗಿ ದೇವಾಲಯಗಳಿಗೆ ಮತ್ತು ಧಾರ್ಮಿಕ ಕಾರ್ಯಗಳಿಗೆ ದಾನ ನೀಡಿರುವ ಬಗ್ಗೆ ತಿಳಿದುಬರುತ್ತದೆ. ನಿಂತಿರುವ ಮಹಿಳೆಯ ಶಿಲ್ಪವನ್ನು ಸೇಡಂನಿಂದ ಕಲಬುರಗಿಯ ಮ್ಯೂಸಿಯಂಗೆ ತರಲಾಗಿದೆ. ಇದು ಸುಮಾರು ೧೩ನೆಯ ಶತಮಾನದ್ದಾಗಿದ್ದು ಕಲಚೂರಿಗಳ ಅವಧಿಯಲ್ಲಿ ಕೆತ್ತಲ್ಪಟ್ಟಿದೆ. ಇದು ಪ್ರಸ್ತುತ ತ್ರುಟಿತವಾಗಿದೆ. ಕಿವಿಓಲೆ, ತುರುಬು ಕಟ್ಟಿರುವುದು, ಸೊಂಟಪಟ್ಟಿ, ಕಾಲ್ಗಡಗ, ಕೈಬಳೆ ಧರಿಸಿರುವ ಕೆತ್ತನೆ ಇದೆ.

ನಾಯಕದಲ್ಲಿ ದೊರೆತಿರುವ ಈ ಶಿಲ್ಪ ಕಲ್ಯಾಣ ಚಾಲುಕ್ಯರ ಕಾಲದ್ದಾಗಿದೆ. ಇದು ಪ್ರಸ್ತುತ ಕಲಬುರಗಿಯ ಮ್ಯೂಸಿಯಂನಲ್ಲಿದೆ. ತ್ರುಟಿತವಾಗಿರುವ ಶಿಲ್ಪದಲ್ಲಿ ಜಡೆ, ಜಡೆಯಲ್ಲಿ ಅಲಂಕಾರಿಕ ಆಭರಣ, ಉದ್ದನೆಯ ಶಾಲು, ಕೊರಳಿನಹಾರ, ಸೊಂಟಪಟ್ಟಿ, ಸೊಂಟಕ್ಕೆ ಅಲಂಕಾರಿಕ ಡಾಬು, ಕೈಬಳೆ, ತೋಳ್ಬಂದಿ, ನೆಕ್ಲೇಸ್, ಕಿವಿಓಲೆ ಧರಿಸಿರುವ ಕೆತ್ತನೆಯಿದೆ.

ವೀರಮಾಸ್ತಿಗಲ್ಲು ಶಿಲ್ಪವು ಕಲ್ಯಾಣ ಚಾಲುಕ್ಯರ ಕಾಲದ್ದಾಗಿದೆ. ಇದು ಪತಿ ಯುದ್ಧದಲ್ಲಿ ಹೋರಾಡಿ ವೀರ ಮರಣ ಹೊಂದಿರುವ ಕುರಿತು ತಿಳಿಸುತ್ತದೆ. ವೀರ ಯೋಧನ ಪತ್ನಿಯೂ ತನ್ನ ಪತಿಯೊಂದಿಗೆ ಸಹಗಮನ ಹೊಂದಿರುವ ಬಗ್ಗೆ ಮತ್ತು ಪತಿಯೊಂದಿಗೆ ಪತ್ನಿಯೂ ಸ್ವರ್ಗದಲ್ಲಿ ಕುಳಿತಂತೆ ಈ ಶಿಲ್ಪದಲ್ಲಿ ಚಿತ್ರಿಸಲಾಗಿದೆ. ಪತ್ನಿಯಾದವಳು ಪತಿಗಾಗಿಯೇ ಜೀವಿಸಬೇಕು.

ಪತಿಯಿಂದಲೇ ಅವಳ ಬದುಕು, ಅವನಿಲ್ಲದೇ ಅವಳ ಬದುಕಿಗೆ ಅರ್ಥವಿಲ್ಲ, ಅವನೊಂದಿಗೆ ಬದುಕಿ ಅವನು ಸತ್ತ ಮೇಲೆ ಸತಿಹೋದರೆ ದೇವಲೋಕದಲ್ಲಿಯೂ ಮತ್ತು ಭೂಲೋಕದಲ್ಲಿ ಅವಳು ದೇವತೆಯಾಗಿ ಯೋಗ್ಯ ಸ್ಥಾನಮಾನ ಹೊಂದುವಳು. ಇಲ್ಲದಿದ್ದರೆ ಅವಳಿಗೆ ಉತ್ತಮ ಗೌರವ ದೊರೆಯದು ಎಂಬಂತೆ ಈ ಶಿಲ್ಪ ಮೇಲ್ನೋಟದಲ್ಲಿ ತೋರಿಸುತ್ತದೆ. ಆದರೆ ಇದರಲ್ಲಿ ಪತಿಯ ಮರಣದ ನಂತರ ಕುಟುಂಬದಲ್ಲಿ ವಿಧವೆಯಾದವಳಿಗೆ ಯಾವ ಸ್ಥಾನವೂ ಇರದೆ ಅವಳು ಪತಿಯೊಂದಿಗೆ ಸಾಯುವುದು ಉತ್ತಮ ಎನ್ನುವುದು ತಿಳಿದು ಬರುತ್ತದೆ. ಕುಟುಂಬದಿಂದ, ಸಮಾಜದಿಂದ ಆಕೆ ವಿವಿಧ ಧಾರ್ಮಿಕ ಕಾರ್ಯಗಳಿಂದ ಕಡೆಗಣಿಸಲ್ಪಟ್ಟಿರುತ್ತಾಳೆ. ಸಮಾಜದಲ್ಲಿ ಆಕೆಗೆ ಯಾವುದೇ ರಕ್ಷಣೆ ಇಲ್ಲದೆ ಅವಳ ಪಾವಿತ್ರ್ಯತೆ ಕಾಪಾಡಿಕೊಂಡು ಪತಿವ್ರತೆಯಾಗಿ ಸಾಯುವುದು ಉತ್ತಮ ಎಂಬುದು ಇಲ್ಲಿ ಕಂಡುಬರುತ್ತದೆ. ಈ ಪದ್ಧತಿ ಸ್ತ್ರೀಯರ ಸ್ಥಾನಮಾನ, ನೈಜ ಸ್ಥಿತಿಗತಿಯನ್ನು ತಿಳಿಸುತ್ತದೆ. ಮದುವೆಯಾದ ನಂತರ ಪತಿಯ ರಕ್ಷಣೆಯಲ್ಲಿರುವ ಆಕೆ ಪತಿ ಮರಣದ ನಂತರ ಸಮಾಜದಲ್ಲಿರುವ ಕಾಮುಕರಿಗೆ ಬಲಿಯಾಗಬಾರದೆಂಬುದು, ಸಮಾಜದಲ್ಲಿ ಅವಳ ಜೀವನ ದುಸ್ತರವಾಗಿರುವುದನ್ನು ತಿಳಿಸುತ್ತದೆ.

ಸಮಾಜದಲ್ಲಿನ ಸಮಸ್ಯೆಗಳು, ಅಂಧ ಆಚರಣೆಗಳು, ಮಹಿಳೆಯರನ್ನು ಇನ್ನಷ್ಟು ಬಲಿ ಪಶುಗಳಾಗಿ ಮಾಡಿದವು. ಸಮಾಜದಲ್ಲಿನ ಕಾಮುಕರ ತಪ್ಪಿಗೆ ಮಹಿಳೆಯರಿಗೆ ಶಿಕ್ಷೆಯಾದವು. ಮಹಿಳೆಯರು ಯಾವ ತಪ್ಪು ಮಾಡದೇ ಧರ್ಮದ ಹೆಸರಲ್ಲಿ, ದೇವರ ಹೆಸರಲ್ಲಿ ಪತಿವ್ರತೆಯಾಗಿರುವಂತೆ, ಪತಿಯ ಸತಿಯಾಗುವಂತೆ ಪ್ರೇರೇಪಿಸಿದವು. ಆಕೆಯ ಅಸ್ತಿತ್ವವನ್ನು ಕೇವಲ ಕುಟುಂಬಕ್ಕಾಗಿ, ಧಾರ್ಮಿಕ ಕಾರ್ಯಕ್ಕಾಗಿಯೇ ಸೀಮಿತಗೊಳಿಸಲಾಗಿತ್ತು. ಅಲ್ಲಿ ಆಕೆಯ ಭಾವನೆಗಳಿಗಾಗಲಿ, ಆಸೆಗಳಿಗಾಗಲಿ ಯಾವುದೇ ಬೆಲೆಯಿರಲಿಲ್ಲ.

೧೨ನೆಯ ಶತಮಾನದ ಚಾಲುಕ್ಯ ಕಾಲದ ಶಿಲ್ಪ ನಾಯಕಿಯ ಶಿಲ್ಪವಾಗಿದ್ದು ಇದರಲ್ಲಿ ಮೂರು ಸುತ್ತಿನ ತುರುಬು, ಅಲಂಕಾರಿಕ ಆಭರಣ, ತೋಳಬಂದಿ, ಕೈಬಳೆ, ಸೊಂಟದ ಆಭರಣ, ಕಿವಿಓಲೆ, ಕೊರಳಹಾರ ಧರಿಸಿರುವ ಚಿತ್ರಣವಿದೆ. ೧೨ನೆಯ ಶತಮಾನದಲ್ಲಿ ಕೆತ್ತಲ್ಪಟ್ಟ ಈ ಶಿಲ್ಪ ಪುರುಷ ಮತ್ತು ಸ್ತ್ರೀಯು ರತಿಲೀಲೆಯಲ್ಲಿ ತೊಡಗಿರುವಂತೆ ಕೆತ್ತಲಾಗಿದೆ. ಶಿಲ್ಪದಲ್ಲಿ ಕೂದಲುಗಳನ್ನು ವಿವಿಧ ವಿನ್ಯಾಸದಲ್ಲಿ ಕಟ್ಟಿ ಅದಕ್ಕೆ ಆಭರಣಗಳಿಂದ ಅಲಂಕಾರವಿದೆ. ವಿವಿಧ ರೀತಿಯ ಆಭರಣಗಳನ್ನು ಧರಿಸಿರುವಂತೆ ಕೆತ್ತಲಾಗಿದೆ. ಪತಿ–ಪತ್ನಿಯರ ಸಂಬಂಧಗಳ ಬಗ್ಗೆ ವಿವರಿಸುತ್ತದೆ. ಸುಮಾರು ೨ನೆಯ ಶತಮಾನದ ಶಾತವಾಹನರ ಕಾಲದ ಬಿಳಿಶಿಲೆಯಲ್ಲಿ ಕೆತ್ತಲ್ಪಟ್ಟ ಶಿಲ್ಪದಲ್ಲಿ ತಾಯಿಯ ತೊಡೆಯ ಮೇಲೆ ಮಲಗಿರುವ ಮಗುವಿದೆ. ಒಂದು ಪೀಠದ ಮೇಲೆ ಕುಳಿತ ತಾಯಿ ಮತ್ತು ಅವಳ ಪೀಠದ ಕೆಳಗೆ ಕುಳಿತಿರುವ ಮಹಿಳೆಯರ ಶಿಲ್ಪಗಳ ಕೆತ್ತನೆ ಅದು ತಾಯಿ–ಮಗುವಿನ ಕಾರ್ಯಕ್ರಮದ ಬಗ್ಗೆ ತಿಳಿಸುವಂತೆ ತೋರುತ್ತದೆ?

ಕಲಬುರಗಿಯ ಮ್ಯೂಸಿಯಂನಲ್ಲಿರುವ ಶಾಸನ ಶಿಲ್ಪವು ಶಾತವಾಹನರ ಕಾಲದ್ದಾಗಿದೆ. ರಾಜದಂಪತಿಗಳು ಕುಳಿತಿರುವ ಮತ್ತು ಅವರಿಗೆ ಸೇವಕಿಯರು ಚಾಮರ ಬೀಸುತ್ತಿರುವಂತೆ ಕೆತ್ತಲಾಗಿದೆ. ಇದರಲ್ಲಿ ರಾಜನ ಪತ್ನಿಯ ಮತ್ತು ಸೇವಕಿಯರ ವಿವರಣೆ ನೀಡಲಾಗಿದೆ. ಮೇಲ್‌ಸ್ತರದಲ್ಲಿ ರಾಜ ಮತ್ತು ರಾಣಿಯ ಮುಖಗಳ ಕೆತ್ತನೆಯಿದೆ. ರಾಣಿಯ ಅಲಂಕಾರಿಕ ಆಭರಣಗಳು, ಸೇವಕಿಯರ ಅಲಂಕಾರಿಕ ಆಭರಣಗಿಂತ ವಿಭಿನ್ನವಾಗಿವೆ. ರಾಣಿಯ ಭುಜಕ್ಕೆ ಎತ್ತರದ ಆಭರಣವೊಂದು ಧರಿಸಿದ್ದು, ಅದರಲ್ಲಿ ಬಟ್ಟೆ ಸೇರಿಸಿ ಉದ್ದನೆಯ ಬಟ್ಟೆ ಬಿಡುವಂತೆ ತೋರುತ್ತದೆ? ತೋಳ್ಬಂದಿ, ಕೈಬಳೆಗಳು ಎದೆಬಂದಿ, ಕೊರಳಹಾರ, ಸೊಂಟಪಟ್ಟಿ, ಕಾಲ್ಗಡಗ, ತಲೆಗೆ ಹಾಕಿರುವ ಮುತ್ತಿನ? ಆಭರಣ, ಕಾಲ್ಗೆಜ್ಜೆ, ಸೊಂಟದಿಂದ ತೊಡೆಯವರೆಗೂ ಧರಿಸಿರುವ ತೆಳುವಾದ ಬಟ್ಟೆ ಇದು ೨ನೆಯ ಶತಮಾನದ ರಾಣಿಯರು ಧರಿಸುವ ವೇಷಭೂಷಣಗಳನ್ನು ಚಿತ್ರಿಸುತ್ತದೆ. ಸೇವಕಿಯರಲ್ಲಿ ಚಾಮರಧಾರಿಣಿಯು ಸೊಂಟದಿಂದ ತೆಳುವಾದ ಬಟ್ಟೆ, ಆಭರಣಗಳಲ್ಲಿ ಕೊರಳಹಾರ, ಕೈಬಳೆ ಧರಿಸಿದೆ. ರಾಜನ ಹಿಂದೆ ನಿಂತಿರುವ ಚಾಮರಧಾರಿಣಿ ಮತ್ತು ಹಣ್ಣಿನ ತಟ್ಟೆ ಹಿಡಿದಿರುವ ಸೇವಕಿಯರ ಶಿಲ್ಪದಲ್ಲಿ ಹಣೆಪಟ್ಟಿ, ಕೈಬಳೆ, ಎದೆಬಂದಿ, ಸೊಂಟಪಟ್ಟಿ, ಡಾಬು, ಭುಜದ ಎತ್ತರಕ್ಕಿರುವ ಆಭರಣದಲ್ಲಿ ಬಟ್ಟೆ ಅದರೊಳಗೆ ಸೇರಿಸಿದ್ದು ಎದೆಬಂದಿ ಧರಿಸಿದ ಚಿತ್ರಣವಿದೆ.

ಬಂದರವಾಡದಲ್ಲಿ ದೊರೆತಿರುವ ಹಲವು ಶಿಲ್ಪಗಳು ಸ್ತ್ರೀಯರ ಬದುಕು ಯಾವ ರೀತಿಯಾಗಿತ್ತು ಎಂದು ಚಿತ್ರಿಸುತ್ತವೆ. ರುಮ್ಮನಗೂಡಿನ ಶಂಕರನಾರಾಯಣ ದೇವಾಲಯದ ಭಿತ್ತಿ ಭಾಗದಲ್ಲಿರುವ ಶಿಲ್ಪಗಳು, ಮಾಸ್ತಿಗಲ್ಲು, ಸೇಡಂನ ಪಂಚಲಿಂಗೇಶ್ವರ ದೇವಾಲಯದ ಶಿಲ್ಪಗಳು, ಚಿತಾಪೂರ ಆಳಂದ, ಅಫ್ಜಲ್‌ಪುರದ ಹಲವು ದೇವಾಲಯಗಳ ಶಿಲ್ಪಗಳು ಮಹಿಳೆಯರ ಸ್ಥಿತಿಗತಿಯ ಬಗ್ಗೆ ತಿಳಿಸುತ್ತವೆ. ಇವು ಹೆಚ್ಚಾಗಿ ಸಾಂಸ್ಕೃತಿಕ ಜೀವನದ ಬಗ್ಗೆ ತಿಳಿಸುತ್ತದೆ. ಮಹಿಳೆಯರು ನೃತ್ಯ, ಸಂಗೀತದಲ್ಲಿ ಆಸಕ್ತಿ ತೋರಿಸುವ ಚಿತ್ರಣಗಳನ್ನು ಶಿಲ್ಪಗಳು ವಿವರಿಸುತ್ತವೆ. ಚಿಂಚೋಳಿ ತಾಲೂಕಿನ ರುಮ್ಮನಗೂಡಿನ ಶಂಕರನಾರಾಯಣ ದೇವಾಲಯದ ಭಿತ್ತಿಭಾಗದ ಶುಕ ಸುಂದರಿಯರ ಶಿಲ್ಪಗಳು ಆ ಕಾಲದ ವೇಷಭೂಷಣಗಳ ಬಗ್ಗೆ ವಿವರಿಸುತ್ತವೆ.

ಚಿನಮಳ್ಳಿ ಶಾಸನದಲ್ಲಿ ಕ್ರಿ.ಶ. ೧೨೬೦ ಲಿಂಗ, ರಾಜಚಿಹ್ನೆ, ಘಂಟೆ, ಧೂಪಾರತಿ ಬೆಳಗುವ ಕನ್ಯೆ, ಪಕ್ಕದಲ್ಲಿ ತಾಳ-ಮದ್ದಳೆ ಬಾರಿಸುವವರು, ಒಬ್ಬಳು ನಾಟ್ಯ ಸೇವೆಯಲ್ಲಿರುವ ಶಿಲ್ಪಗಳನ್ನು ಕೆತ್ತಲಾಗಿದೆ. ಕ್ರಿ.ಶ. ೧೬೦೦ರ ಕಲಬುರ್ಗಿ ಶಾಸನದ ಕೆಳಭಾಗದಲ್ಲಿ ಕತ್ತೆ ಹಾಗೂ ನಿಂತ ಸ್ತ್ರೀ ಗೊಂಬೆ.[೧೧] ಶಾಪಾಶಯಗಳುಳ್ಳ ಶಿಲ್ಪಗಳ ಉದ್ದೇಶವೂ ದಾನದ ಧರ್ಮ ಉಳಿಯಲಿ ಎಂಬುದಾಗಿತ್ತು. ಅನೇಕ ಶಾಸನಗಳಲ್ಲಿ ಮಹಿಳೆಯರನ್ನು ಅವಾಚ್ಯ ಶಬ್ದಗಳಿಂದ ಬೈದಿರುವುದು, ಶಾಸನಗಳ ರಕ್ಷಣೆಗೋಸ್ಕರ ಮಹಿಳೆಯರನ್ನು ಈ ರೀತಿ ಉಪಯೋಗಿಸಿಕೊಂಡಿರುವುದು ಕಂಡುಬರುತ್ತದೆ. ಇದರಿಂದ ಆ ಕಾಲದಲ್ಲಿ ಮಹಿಳೆಯರು ಕುಟುಂಬದ ಮಾನ, ಗೌರವವಾಗಿದ್ದರೆಂದು, ತಿಳಿದುಬರುತ್ತದೆ.

ಅಲ್ಲದೆ ಹಲವು ವೇಳೆ ಶತ್ರುಗಳು ಯುದ್ಧಕ್ಕೆ ಕೆರಳಿಸಲು ತಮ್ಮ ಶತ್ರುಗಳ ಊರಿನ ಮಹಿಳೆಯರ ಮಾನಹಾನಿ ಮಾಡುವ ವಿವರಗಳು ನಮಗೆ ಶಾಸನ ಮತ್ತು ಶಿಲ್ಪಗಳಲ್ಲಿ ದೊರೆತಿವೆ. ಇವುಗಳ ಅಧ್ಯಯನದಿಂದ ಮಹಿಳೆಯರು ಊರಿನ, ಸಮಾಜದ ಗೌರವ ಘನತೆಯಾಗಿದ್ದರು ಎನ್ನುವುದು ಸ್ಪಷ್ಟವಾಗುತ್ತದೆ.

೭.೧.೮. ವೇಶ್ಯಾ ಪದ್ಧತಿ

ಪ್ರಾಚೀನ ಭಾರತದಲ್ಲಿ ವೇಶ್ಯಾ ಪದ್ಧತಿ ಆಚರಣೆಯಲ್ಲಿತ್ತು. ಅದಕ್ಕೆ ಅದರದೇಯಾದ ಸ್ಥಾನಮಾನಗಳಿದ್ದವು. ಆಮ್ರಪಾಲಿಯೆನ್ನುವ ವೇಶ್ಯೆಯು ಆರಂಭದಲ್ಲಿ ರಾಜನ ಮಗಳಾಗಿದ್ದು, ನಂತರದ ದಿನಗಳಲ್ಲಿ ಅವಳನ್ನು ರಾಜಕೀಯ ಕುಂತಂತ್ರಗಳಿಂದ ವೇಶ್ಯೆಯನ್ನಾಗಿ ಮಾಡಲಾಯಿತು ಎಂಬುದನ್ನು ರೇಡಿಯೋದ ನಾಟಕದಲ್ಲಿ ಆಲಿಸಿದ್ದೆನು. ಆಕೆಯು ಹಲವು ಷರತ್ತುಗಳನ್ನು ಪುರುಷರಿಗೆ ವಿಧಿಸಿ ಅಷ್ಟು ಹಣ ನೀಡಿದವರಿಗೆ ಮಾತ್ರ ತಾನೂ ಸಿಗುವುದಾಗಿ ತಿಳಿಸಿರುತ್ತಾಳೆ. ಋಗ್ವೇದದ ಕಾಲದಲ್ಲಿ ವೇಶ್ಯೆಯರಿಗೆ ಗಣಿಕೆಯರೆಂದು ಉಲ್ಲೇಖಿಸಿದೆ? ಪುರಾಣಗಳಲ್ಲಿ, ಮಹಾಕಾವ್ಯಗಳಲ್ಲಿ, ಐತಿಹಾಸಿಕ ಕಥನಗಳಲ್ಲಿ, ಸ್ಮೃತಿಗಳಲ್ಲಿಯೂ ಇದರ ಉಲ್ಲೇಖಗಳಿವೆ. ಕರ್ನಾಟಕದಲ್ಲಿ ಕ್ರಿ.ಶ. ೬-೯ನೆಯ ಶತಮಾನದಲ್ಲಿ ಸೂಳೆಯರಿಗೆ ದೊಡ್ಡಿ, ಪೋಟಿ, ಬೊಡ್ಡಿ ಎಂದು ಕರೆಯುತ್ತಿದ್ದರು ಮತ್ತು ಇವರು ಆರ್ಥಿಕವಾಗಿ ಸಬಲರಾಗಿದ್ದರು.[೧೨] ಪ್ರಾಚೀನ ಮತ್ತು ಮಧ್ಯಕಾಲದಲ್ಲಿ ಅರಸರು ವೇಶ್ಯೆಯರನ್ನು ಹೊಂದುವುದು ಪ್ರತಿಷ್ಠೆಯ ವಿಷಯವಾಗಿತ್ತು. ಇವರು 'ವೇಶಾಭಜಂಗ, ವಾರವನಿತಾರಾಮ' ಎಂಬ ಬಿರುದುಗಳಿಂದ ಅರಸರನ್ನು ಕರೆಯುವುದು ಶಾಸನಗಳು ಉಲ್ಲೇಖಿಸಿವೆ.[೧೩] ಈ ಭಾಗದ ಶಾಸನಗಳಲ್ಲಿ ಸೂಳೆಯರು ಮಾಡುವುದು ಒಂದು ವೃತ್ತಿ, ಅದು ಒಂದು ಜನಾಂಗವಾಗಿ ಅವರಿಗಾಗಿಯೇ ಕೇರಿಗಳಿದ್ದುದನ್ನು ಉಲ್ಲೇಖಿಸಿವೆ. ಮಡಿಹಾಳ ಶಾಸನದಲ್ಲಿ 'ಸೂಳೆಗೇರಿ ಭೂಮಿಯು ಆ ದೇವರ ಪುರದಲು ದಂಡದೋಷವಾಗಿ ಮಾಡಿಕೊಟ್ಟರು' ಎಂದಿದೆ. ಶಾಸನಗಳಲ್ಲಿ ಗಣಿಕೆಯರು, ಕಂಬದ ಸೂಳೆಯರು, ದೇವದಾಸಿಯರು, ಸೂಳೆಯರು ಎಂದು ಉಲ್ಲೇಖಿಸಿವೆ. ವೇಶ್ಯೆಯರು ಸಾರ್ವಜನಿಕರ ಭೋಗಕ್ಕೆ ಸೀಮಿತವಾಗಿರಬಹುದು. ಸೂಳೆಯರು ನಿರ್ದಿಷ್ಟ ಅಧಿಕಾರಿಗಳ ಸೇವೆಗೆ ಇರುತ್ತಿದ್ದರು. ದೇವದಾಸಿಯರು ದೇವರ ಸೇವೆಯ ಜೊತೆಗೆ ಧಾರ್ಮಿಕ ಪುರೋಹಿತ, ಪೂಜಾರಿಗಳ ಸೇವೆ ಕೈಗೊಳ್ಳುತ್ತಿದ್ದರು. ಕಂಬದ ಸೂಳೆಯರು ನೃತ್ಯದಿಂದ ದೇವರ ಸೇವೆ ಮಾಡುತ್ತಿದ್ದು, ಧಾರ್ಮಿಕ ಅಧಿಕಾರಿಗಳ ಮತ್ತು ಪುರೋಹಿತರ ಸೇವೆಯನ್ನೂ ಮಾಡುತ್ತಿದ್ದರು. ಗಣಿಕೆಯರು ರಾಜಕೀಯ ಕಾರ್ಯಗಳಿಗೆ, ರಾಜ್ಯ ರಕ್ಷಣಾ ಕಾರ್ಯ ಮತ್ತು ಇತರ ರಾಜ್ಯ ಮತ್ತು ರಾಜರ, ಆಡಳಿತ ವಿಷಯ, ಗೌಪ್ಯಗಳನ್ನು ತಿಳಿಯಲು ಈ ವೃತ್ತಿ ಕೈಗೊಂಡು ದೇಶಸೇವೆ ಮಾಡುತ್ತಿದ್ದರು. ಇತರ ದೇಶದ ರಹಸ್ಯ ತಿಳಿಯಲು ನೇಮಕ ಮಾಡುತ್ತಿದ್ದರು. ರಹಸ್ಯ ಗೂಢಾಚಾರಿಗಳಾಗಿದ್ದರು. ಇವರು ಉನ್ನತ ಸ್ಥಾನದಲ್ಲಿದ್ದರು. ಶತ್ರುಗಳ ನಾಶಕ್ಕೆ ವಿಷಕನ್ಯೆಯರನ್ನು ಬಿಡುತ್ತಿರುವ ಉದಾಹರಣೆಗಳನ್ನು ನೋಡಬಹುದು. ಶಾಸನಗಳಲ್ಲಿ ವಿವಿಧ ಹೆಸರುಗಳಿಂದ ಕರೆಯುವ ಕಾರಣ ಅವರ ಉದ್ದೇಶ ಮತ್ತು ವೃತ್ತಿ ಧರ್ಮ ಬೇರೆಯಾಗಿದ್ದಿರಬಹುದು.

ದೇವಾಲಯಗಳಲ್ಲಿ ದೇವದಾಸಿಯರು ಮತ್ತು ಕಂಬದ ಸೂಳೆಯರಿದ್ದರು. ಅದಕ್ಕಾಗಿ ಅವರ ಓಣಿಗಳು ದೇವಾಲಯಕ್ಕೆ ಹತ್ತಿರವಾಗಿಯೇ ಇರುತ್ತಿತ್ತು. ಮಡಿಹಾಳ ಶಾಸನದ ಉಲ್ಲೇಖದಿಂದ ಮತ್ತು ಹಲವು ಶಾಸನಗಳು ಸಹ ಇದಕ್ಕೆ ಪುಷ್ಠಿ ನೀಡುತ್ತವೆ. ವೇಶ್ಯಾವೃತ್ತಿಯ ಮೇಲೆ ತೆರಿಗೆಗಳಿದ್ದವು. 'ಸೂಳೆದೆರೆ, 'ಸೂಳೆಯರಲ್ಲಿನ ಕನ್ನಡಿವಣ' ಎಂದಿದ್ದವು.[೧೪] 'ದೇವಿಗೇರಿಯ ಜರಿದೇರಿಯಂ ಕಟ್ಟಲು ಹೊಕ್ಕ ಮಣ್ಣಂ ಕಳೆಯಲು' ಎಂದು ಮಡಿಹಾಳ ಶಾಸನ ಉಲ್ಲೇಖಿಸಿದೆ. ದೇಪಿಗೇರಿ ಎಂದರೆ ದೇವದಾಸಿಯರ ಕೇರಿಯಾಗಿರಬಹುದು. ಜರಿದೇರಿ ಎಂದರೆ ಜಾರಣಿಯರು? ಎಂಬುದಾಗಿರಬಹುದು.

೭.೧.೯. ಲೋಕೋಪಯೋಗಿ ಕಾರ್ಯಗಳು

ಕುಡಿಯುವ ನೀರಿನ ವ್ಯವಸ್ಥೆ, ಅನ್ನ ಛತ್ರಗಳು, ತಂಪಾದ ನೀರು ಕುಡಿಯಲು ಗಡಿಗೆಗಳ ವ್ಯವಸ್ಥೆ ಮಾಡುತ್ತಿದ್ದರು. ಅರವಟ್ಟಿಗೆ, ಮಠಗಳಲ್ಲಿ ವಿದ್ಯಾಥಿಗಳಿಗೆ ಅನ್ನ ದಾನ ಮಾಡಲಾಗುತಿತ್ತು.

"ಪಡೆವೊಡೆರಕ್ಕಸನಂತಿರೆ
ಪಡೆವುದು ಪುರುಷಾರ್ಥಮಂ
ಮಹಾಪುರುಷನವಂ
ಕುಡುದ ಚತುರ್ವಿಧ ದಾನಂ
ಕುಡುಗುಂ ಸ್ವಾರ್ಗಾಪವರ್ಗ
ಸುಖಸಂಪದಮಂ (ಹುಣಸಿ ಹಡಗಲಿ ಕ್ರಿ.ಶ. ೧೧೯೯)"[೧೫]

ಅನ್ನಸತ್ರ-ಅರವಟ್ಟಿಗೆ ಮಠದಲ್ಲಿಪ್ಪವರ ಗ್ರಾಸಕ್ಕಂ ಮತ್ತರು (ಅಂದೇಲಿ ಕ್ರಿ.ಶ.೧೦೫೦), ಶೀತಳ ಗಡುಗೆಯ ಅರವಟ್ಟಿಗೆ(ನಿಂಬರಗಿ ಕ್ರಿ.ಶ. ೧೧೩೪), ನಂದನಾಳಿಗಳು ಮಾವಿನ ಅರವೆ (ಅಲಂದೆ ಕ್ರಿ.ಶ. ೧೦೮೭), ಪಡುವಣಿ ಬಲದೇವನಾರವೆಯಲು ನಾಲ್ಕು ಮಾವಿನ ಮರಬಿಟ್ಟುದು (ಅಲಂದೆ ಕ್ರಿ.ಶ. ೧೦೮೭) ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಇವುಗಳಿಂದ ತಿಳಿದು ಬರುವುದೇನೆಂದರೆ ವಿದ್ಯಾರ್ಥಿಗಳಿಗೆ ಅನ್ನ-ಛತ್ರ ಮತ್ತು ನೀರಿನ ವ್ಯವಸ್ಥೆ ಮಾಡಲಾಗಿತ್ತು. ತಂಪಾದ ಕುಡಿಯುವ ನೀರಿನ ವ್ಯವಸ್ಥೆಗೆ ಗಡಿಗೆಗಳಲ್ಲಿ ನೀರು ತುಂಬಿಡುತ್ತಿದ್ದರು. ಈ ಪ್ರದೇಶದಲ್ಲಿ ಬಿಸಿಲು ಹೆಚ್ಚಾಗಿತ್ತು ಎಂಬುದು ಇದರಿಂದ ತಿಳಿದು ಬರುತ್ತದೆ. ಅಲ್ಲದೆ ನೀರನ್ನು ಅರವಟ್ಟಿಗೆಗಳಲ್ಲಿ ತುಂಬಿಡುತ್ತಿದ್ದರು.

೭.೨ ಆರ್ಥಿಕ ಸ್ಥಿತಿಗತಿ

ಪ್ರಾಚೀನ ಕಾಲದ ಭಾರತದಲ್ಲಿ ವಸ್ತು ವಿನಿಮಯ ಪದ್ಧತಿಯಿತ್ತು. ಹಣದ ಲೇವಾದೇವಿ ಸಂಸ್ಥೆಗಳಿರಲಿಲ್ಲ. ನಂತರ ಗೋವುಗಳನ್ನು ಸಂಪತ್ತಿನ ರೂಪದಲ್ಲಿ ಉಪಯೋಗಿಸುತ್ತಿದ್ದರು. ಯಾರ ಬಳಿ ಅಧಿಕವಾಗಿ ಗೋವುಗಳಿದ್ದರೆ, ಅವರು ಶ್ರೀಮಂತರು ಎಂದು ಪರಿಗಣಿಗಣಿಸುತ್ತಿದ್ದರು. ಗೋವುಗಳಿಗಾಗಿ, ತುರುಗೋಳ್ ಕದನಗಳಾಗಿರುವುದು ಪ್ರಮುಖವಾಗಿ ಇವು ಆರ್ಥಿಕ ಸಂಪತ್ತು

ಎಂಬುದಕ್ಕೆ ಸಾಕ್ಷಿಗಳಾಗಿವೆ. ಶಿರೋಳ್ಳಿಯಲ್ಲಿ ದೊರೆತ ಕ್ರಿ.ಶ.೧೧೫೪ರ ನಾಗಲಿಂಗೇಶ್ವರ ಗುಡಿ (ಶಂಕರನಾರಾಯಣ) ಗುಡಿಯ ಶಾಸನದಲ್ಲಿ ದಂಡನಾಯಕ ವಿಮಲಾದಿತ್ಯ ಮತ್ತು ಅವನ ಸೋದರ ಸಿರಿವೊಳಲಲ್ಲಿ ಒಂದು ಕೆರೆ ನಿರ್ಮಿಸಿ ದಾನವಾಗಿ ಬಿಟ್ಟ ವಿಷಯ ತಿಳಿಸುತ್ತದೆ. ಇದರಿಂದ ಆ ಕಾಲದಲ್ಲಿ ಕೃಷಿ ಕ್ಷೇತ್ರದಲ್ಲಿ ಮತ್ತು ಸಾರ್ವಜನಿಕರ ಕಲ್ಯಾಣಕ್ಕೆ ಮಹತ್ವ ನೀಡಿದ್ದರೆಂಬುದು ಕಂಡುಬರುತ್ತದೆ.

೭.೨.೧. ಪ್ರಮುಖ ಉದ್ಯೋಗಗಳು

ಕೃಷಿಯು ಪ್ರಾಚೀನ ಕಾಲದ ಪ್ರಮುಖ ಉದ್ಯೋಗವಾಗಿತ್ತು. ನಂತರ ವ್ಯಾಪಾರವಾಗಿತ್ತು. ಶಾಸನಗಳಲ್ಲಿ ಭೂದಾನ ಬಿಟ್ಟದ್ದು ಇಲ್ಲಿ ಆರ್ಥಿಕವಾಗಿ ಕೃಷಿಯನ್ನು ಅವಲಂಬಿಸಿದ್ದರು ಎಂದು ಪರೋಕ್ಷವಾಗಿ ತಿಳಿದುಬರುತ್ತದೆ. ಉದಾಹರಣೆಗೆ ಮೋಘಾ, ಶಿರೋಳ್ಳಿ ಶಾಸನಗಳು, ಕುಪನೂರು ನೇಗಿಲು ಹಿಡಿದ ಮೂರ್ತಿಶಿಲ್ಪ, ತೆನೆ ಹಿಡಿದಿರುವ, ಮಾವಿನ ಗೋನೆ ಹಿಡಿದಿರುವ ಮದನಿಕೆಯರ ಶಿಲ್ಪಗಳು. ನಂತರ ಕುಂಬಾರ, ಬಡಗಿ, ಕಮ್ಮಾರ, ಅಕ್ಕಸಾಲೆ, ಒಕ್ಕಲಿಗ, ತಂಬುಲಿಗ ಜೇಡ ಹಟಗಾರ, ಗಾಣಿಗ, ಅಗಸ, ನಾವಿಂದ, ಕಂಚಗಾರ, ಬೋಗಾರ, ಕಲ್ಲೂಟಿಗ ಶಾಸನಗಳಲ್ಲಿ ಉಲ್ಲೇಖಗಳಿವೆ.[೧೬]

೭.೨.೨. ಕೃಷಿ ಮತ್ತು ಬೆಳೆಗಳು

ಕರಿಯ ನೆಲ ಎಂದು ಗೊಬ್ಬೂರು ಶಾಸನದಲ್ಲಿ (ಕ್ರಿ.ಶ. ೧೦೮೫) ಉಲ್ಲೇಖಿಸಲಾಗಿದೆ. ಒಣಬೇಸಾಯ, ಖುಷ್ಕಿ ಬೆಳೆಯ ಭೂಮಿಗಳನ್ನು ಹೊಲ ಮತ್ತು ಕೆಯ್ ಎಂಬ ಪದಗಳು ಸಮನಾರ್ಥದಲ್ಲಿ ಇವೆ ಎಂದು ಶಾಸನಗಳು ಸೂಚಿಸುತ್ತದೆ. ನೀರಾವರಿ ಭೂಮಿಗಳನ್ನು ಶಾಸನಗಳಲ್ಲಿ ತೋಂಟ, ತೋಟಗಳೆಂದು ಉಲ್ಲೇಖಿಸಿವೆ. ನೇಗಿಲು, ಕುಂಟೆ, ಬಂಡೆ ಎತ್ತು ಹೋರುವ ಬಂಡೆ ಮತ್ತು ಕತ್ತೆ ಹೋರುವ ಬಂಡೆಗಳ ಉಲ್ಲೇಖಗಳು ದೇವಾಲಯದ ದಾನ ಶಾಸನಗಳಲ್ಲಿವೆ.

ನಿಂಬರಗಿ ಶಾಸನ ಅಲಂದ ಸಾಸಿರನಾಡಿನ ವಿವಿಧ ಬೆಳೆಗಳ ಬಗ್ಗೆ ಉಲ್ಲೇಖಿಸಿದೆ. ಜೋಳ, ಗೋದುಮೆಯಂತಹ ಅನ್ನಾಹಾರ, ಜೀರಿಗೆ, ಪಂಕೇರುಹ, ಪಾದರಿ, ಕರ್ಬು, ಎಲೆವಳ್ಳಿ, ಕೌಂಗು, ತೆಂಗು, ಅಲ್ಲ, ಅರಿಶಿಣ, ಬಾಳೆ, ಈಳೆ, ಖರ್ಜೂರ ಮತ್ತು ಮಲ್ಲಿಗೆ ವಾಣಿಜ್ಯ ಬೆಳೆಗಳೂ ಬೆಳೆಯಲಾಗುತಿತ್ತು (ನಿಂಬರಗಿ ಕ್ರಿ.ಶ. ೧೧೩೪).[೧೭]

ಮೆಣಸು, ಅಡಕೆ, ಭತ್ತ, ಎಲೆ, ಅಲ್ಲ, ಅರಸಿನ (ಚಿನಮಳ್ಳಿ–ಕ್ರಿ.ಶ. ೧೧೭೫). ಉಪ್ಪು, ಭತ್ತ, ಹೊಂಗೆ, ಅಡಕೆ, ಎಲೆ, ಎಣ್ಣೆ, ಮೆಣಸು, ಜೀರಿಗೆ, ಹೂ, ಹಡಲಿಗೆ ಎರಡು ನಾರು, ಧಾರೆ ಎಣ್ಣೆ (ಸರಡಗಿ ಕ್ರಿ.ಶ. ೧೧೧೦). ಅಡಕೆ, ಎಲೆ, ಮಡಕೆ, ಎಳ್ಳು, ಮಾವು(ಮಡಿಹಾಳ ಕ್ರಿ.ಶ. ೧೩ನೆಯ ಶತಮಾನ). ಭತ್ತ(ಎನಗುಂಟೆ ಕ್ರಿ.ಶ. ೧೧೨೨). ಅಲ್ಲ, ಮಾವಿನ ಹಣ್ಣು, ಮಾವಿನ ಕಾಯಿ, ಹುಣಸೆ ಹಣ್ಣು, ನೆಲ್ಲಿಕಾಯಿ, ಬಾಳೆ ಹಣ್ಣು, ನಿಂಬೆಕಾಯಿ (ಕಲಬುರ್ಗಿ ಶಾಸನ ಕ್ರಿ.ಶ. ೧೬೦೦) ಎಂದು ಉಲ್ಲೇಖಿತವಾಗಿದೆ. ಭತ್ತ, ಎಲೆ, ಅಡಕೆ, ಅಲ್ಲ, ಅರಸಿನ

(ಚಿನಮಳ್ಳಿ ಶಾಸನ). ಲೊಲಗೆಯೆಣ್ಣೆ, ಹೊಂಗೆ, ಅಡಕೆ, ಎಲೆ, ಭತ್ತ(ಹರಸೂರು ಕ್ರಿ.ಶ. ೧೧೭೨). ವಿಕ್ರಯದ ಹೊಂಗೆ, ಎಣ್ಣೆ, ಭತ್ತ, ವೀಸ್ರ ಹೊಂಗೆ, ಅಡಕೆ, ಎಲೆ(ಹೊಡಲು ಕ್ರಿ.ಶ. ೧೧೮೧). ಕಬ್ಬು, ಬಾಳೆಯಿಳೆ, ಖರ್ಜೂರ, ಸಂಪಿಗೆ, ಲವಂಗ, ತೆಂಗು, ಪೊಸ ಮಲ್ಲಿಗೆ(ಕ್ರಿ.ಶ. ೧೧೩೪ರ ನಿಂಬರ್ಗ) ಶಾಸನಗಳಲ್ಲಿ ಉಲ್ಲೇಖಿತಗೊಂಡಿವೆ. ಹರಸೂರು ಕ್ರಿ.ಶ. ೧೧೭೨ರ ಶಾಸನದಲ್ಲಿ 'ಶ್ರೀಮಂಡನಂ ಮತ್ತಮಾ ಭೋಗೇಶ್ವರ ದೇವರ್ಗ್ಗೆ ದೇಸಿಗಳಂ ನಕರಂಗಳಂ ಕೊಟ್ಟಯಾಗಾಣದಲರ್ಧ ಲೊಲಗೆಯಂಣ್ಣೆ, ಹೊಂಗೆ ಮಾರಿದಡಕೆಯಲ್ಲೈ ದಡಕೆ ಹೇರಿಂಗಿಪ್ಪತ್ತುಯಲೆ ಭತ್ತದಲಿ ಕೊಟ್ಟವರೊಲ್ಲೊಂಮ್ಮನ ಕೊಂಡವರೊಲ್ಲೊಂಮ್ಮನ' ಎಂದು ಉಲ್ಲೇಖವಿರುವುದು ಕಂಡು ಬಂದಿದೆ.

೭.೨.೩. ಬೆಲೆ ನಿರ್ಧಾರ

ಅಲ್ಲಕೆ ೩ ದಮ್ಮ, ನಿಂಬೆಯ ಕಾಹಿಗೆ ೩ ದಮ್ಮ, ಬಾಳೆಯ ಹಣ್ಣಿಗೆ ೩ ದಮ್ಮ, ಮಾವಿನ ಹಣ್ಣಿಗೆ ೩ ದಮ್ಮ, ನೆಲ್ಲಿಯ ಕಾಇಗೆ ೧ ದಮ್ಮ, ಮಾವಿನ ಕಾಇಗೆ ೧ ದಮ್ಮ, ಹುಣಿಸೆಯ ಹಣ್ಣಿಗೆ ೧ ದಮ್ಮ, ಹಾಣಿ ಬಳಕೆ ಮಾರುವರು ಎಂದು ವಿವರಿಸಲಾಗಿದೆ. ವ್ಯಾಪಾರಿಗಳು ಎಷ್ಟು ಹಣಕ್ಕೆ ಯಾವ ಯಾವ ತರಕಾರಿ ಮತ್ತು ಹಣ್ಣು ಮಾರಬೇಕೆಂದು ನಿರ್ಧರಿಸಿದ ಶಾಸನವಿದೆ (ಕಲಬುರ್ಗಿ ಶಾಸನ ಕ್ರಿ.ಶ.೧೬೦೦).

೭.೨.೪. ನೀರಾವರಿ ವ್ಯವಸ್ಥೆ

ಬಾವಿ, ತಡಾಗ ನಿರ್ಮಿಸಿದ ಉಲ್ಲೇಖ(ಮಡಿಹಾಳ ಕ್ರಿ.ಶ.೧೨ನೆಯ ಶತಮಾನ). ತೋಟಗಳು, ಗದ್ದೆಗಳು, ನಿರ್ನೆಲಗದ್ದೆಗಳ(೧೧೯೯ರ ಹಂದರಕಿ ಶಾಸನ) ಉಲ್ಲೇಖ ಶಾಸನಗಳಲ್ಲಿ ಬಂದಿವೆ. ಕಬ್ಬು, ವೀಳ್ಯದೆಲೆ, ಭತ್ತ ದಾನ ಮಾಡುತ್ತಿದ್ದ ಉಲ್ಲೇಖವೂ ಇವೆ. ಅಂದರೆ ಇಲ್ಲಿ ನೀರಾವರಿ ವ್ಯವಸ್ಥೆಯಿರುವುದು ಶಾಸನಗಳಿಂದ ಖಚಿತವಾಗುತ್ತದೆ. ಇದರಿಂದ ಪ್ರಾಚೀನ ಕಾಲದಿಂದಲೂ ಭಾರತ ಕೃಷಿ ಪ್ರಧಾನವಾಗಿದೆ ಎಂಬುದು ತಿಳಿದು ಬರುತ್ತದೆ. ನೀರಾವರಿ ಕ್ಷೇತ್ರದ ಆಶ್ರಿತ ಭೂಮಿಯನ್ನು ಗದ್ದೆ ಮತ್ತು ತೋಟವಾಗಿ ಹಂಚಲಾಗಿತ್ತು. ಗದ್ದೆಯಲ್ಲಿ ಕೆಯ್ಗರ್ದ್ದೆ, ಕೋಡಿಯ, ಕೆಳಗಣ ಕೆಯ್, ನೀರಾವರಿಗೆ ಸಂವಾದಿಯಾಗಿ ಹಿಂದಿನ ಶಾಸನಗಳಲ್ಲಿ ನೀರಾರಂಬ ಪದ ಪ್ರಯೋಗಿಸಲಾಗಿದೆ. ಮಾವಿನ ಮರ ಬಿಟ್ಟು ಅರವೆ (ಅಲಂದೆ ಕ್ರಿ.ಶ. ೧೦೮೨) ತೊಟಗಳಲ್ಲಿ ಅರವೆಗಳು ಸಹ ಸಮಾವೇಶಗೊಂಡಿವೆ.

೭.೨.೫. ನಾಣ್ಯಗಳ ಉಲ್ಲೇಖ

ಹರಪ್ಪ ಮತ್ತು ಮೆಹೆಂಜೊದಾರೋ ಕಾಲದಲ್ಲಿ ತಾಮ್ರದ ತುಣುಕುಗಳು ದೊರೆತಿದ್ದವು. ಇವುಗಳನ್ನು ಹಲವು ವಿದ್ವಾಂಸರು ನಾಣ್ಯಗಳೆಂದು ಊಹಿಸಿದ್ದಾರೆ. ಅಂದರೆ ಕ್ರಿ.ಪೂ.೧೭೦೦ರ ಹಿಂದೆ ನಾಣ್ಯಗಳು ಬಳಕೆಯಲ್ಲಿದ್ದವು ಎನ್ನಬಹುದು.

ವೀಸ, ಬೆಸಗೆ (ಗೊಬ್ಬೂರು ಕ್ರಿ.ಶ. ೧೧೪೯), ದ್ರಮ್ಮ (ಕಲಬುರ್ಗಿ ಕ್ರಿ.ಶ. ೧೪೦೦), ಬೆಳ್ಳಿಯ ಹಾಗ (ಗೊಬ್ಬೂರು ಕ್ರಿ.ಶ. ೧೧೪೫)[೮೯] ಎಂಬ ನಾಣ್ಯಗಳ ಉಲ್ಲೇಖಗಳಿವೆ. ಸು.ಕ್ರಿ.ಶ.

೧೦ನೆಯ ಶತಮಾನದಲ್ಲಿ ಗದ್ಯಾಣ ಎಂದು ನಾಣ್ಯಗಳನ್ನು ಶಾಸನಗಳು ಉಲ್ಲೇಖಿಸಿವೆ. ಕ್ರಿ.ಶ. ೧೧ನೆಯ ಶತಮಾನದಲ್ಲಿ ದ್ರಮ್ಮ, ಕೆಯಿ, ಗದ್ಯಾಣ, ಪೊನ್ನ ಗದ್ಯಾಣ ಎಂದು ಕರೆಯುತ್ತಿದ್ದರು. ೧೨ನೆಯ ಶತಮಾನದಲ್ಲಿ ಹಣ, ಮುದ್ರಾಪಣಂ, ದಮ್ಮಾ ಎಂದು ಕರೆಯುತ್ತಿದ್ದರು. ಕ್ರಿ.ಶ. ೧೬-೧೭ನೆಯ ಶತಮಾನದಲ್ಲಿ ದಮ್ಮ ಎಂದು ಕರೆಯುತ್ತಿದ್ದರು. ಹೀಗೆ ವಿವಿಧ ಶತಮಾನಗಳಲ್ಲಿ ನಾಣ್ಯಗಳನ್ನು ವಿವಿಧ ರೀತಿಯಲ್ಲಿ ಹೆಸರಿಸಲಾಗಿರುವುದಕ್ಕೆ ಹಲವು ಉದಾಹರಣೆಗಳಿವೆ. ಹಣ ಐದು ಎಂದಿದೆ (ಆತನೂರು ಶಾಸನ-೧೨ನೆಯ ಶತಮಾನ). ಹಣ (ಅಫ್ಜಲ್‌ಪುರ ಶಾಸನ-ಕ್ರಿ.ಶ. ೧೧೦೭). ದ್ರಮ್ಮ ಮತ್ತು ಕೆಯಿ (ಬಿಂಗೋಳಿ ಕ್ರಿ.ಶ. ೧೦೭೮). ದಮ್ಮಾ (ಹಿರೇಝುಳಕಿ ಕ್ರಿ.ಶ. ೧೨ನೆಯ ಶತಮಾನ). ಗದ್ಯಾಣ, ಪೊನ್ನ ಗದ್ಯಾಣ (ರುದ್ರವಾಡಿ ಕ್ರಿ.ಶ. ೧೧೦೩). ದಮ್ಮ (ಕಲಬುರ್ಗಿ ಶಾಸನ ಕ್ರಿ.ಶ. ೧೬೦೦). ಹಣದ ಉಲ್ಲೇಖ (ಹಂದರಕಿ ಕ್ರಿ.ಶ. ೧೧೨೨). ಮುದ್ರಾಪಣಂ (ಮುದ್ರೆ, ಹಣ) (ಹೊಡಲು ಕ್ರಿ.ಶ. ೧೧೮೧). ಜನರು ಉಪಯೋಗಿಸುವ ನಾಣ್ಯಗಳನ್ನು ಮುದ್ರೆಯ ಹಣ, ದಮ್ಮ ಎಂದು ಕರೆಯುತ್ತಿದ್ದು, ಸು. ೧೫ನೆಯ ಶತಮಾನದಲ್ಲಿ ಹಣ, ರೊಕ್ಕ, ದುಡ್ಡು ಎಂದು ಕರೆಯಲಾರಂಭಿಸಿದರು. ಗದ್ಯಾಣ ಅಥವಾ ಪೋನ್ ಎಂಬ ನಾಣ್ಯಗಳು ಬಳಕೆಯಾಗುತ್ತಿದ್ದವು.[೧೯] ಹರಸೂರು ಕ್ರಿ.ಶ. ೧೧೭೨ರ ಶಾಸನದಲ್ಲಿ ಮೇಣಾ ಪೂಜೆಗಂ ಹಾಂಗೆ ಬೆಳ್ಳಿಯ ಹಾಗ ನೀಡಿದ ಉಲ್ಲೇಖವಿದೆ.

ಅಳತೆಗೋಲು ಎಂಬ ಪದ 'ಅಳತೆಯ ಕೋಲು' ಎನ್ನುವ ಪದದಿಂದ ಹುಟ್ಟಿತು. ಆರಂಭದಲ್ಲಿ ಕೋಲಿನಿಂದ ಅಳತೆ ಮಾಡುತ್ತಿದ್ದರು. ಅದರಿಂದ ಕೋಲು ಮತ್ತರು ಎಂಬುದು ಹುಟ್ಟಿಕೊಂಡಿತು. ಸು. ೯-೧೦ನೆಯ ಶತಮಾನದಲ್ಲಿ ಮತ್ತರು, ಕೋಲು ಮತ್ತರು ಎಂದು ಅಳತೆ ಮಾಪನಕ್ಕೆ ಕರೆಯುತ್ತಿದ್ದರು. ನಂತರ ವಿವಿಧ ರೀತಿಯ ಅಳತೆ ಮಾಪನಗಳು ಬಂದವು. ಕೋಲುಮತ್ತ, ಮತ್ತರು, ಮಣ, ಮಾನ, ನಾರಂ, ಸೊಲ್ಲಿಗೆ? (ಸರಡಗಿ ಕ್ರಿ.ಶ. ೧೧೧೦). ಕೇಯಿ ಮತ್ತರು, ಮದರ ಮತ್ತರು(ಹಿರೇಝುಳಕಿ ಕ್ರಿ.ಶ. ೧೨ನೆಯ ಶತಮಾನ). ಮಾನ (ಎನಗುಂಟೆ ಕ್ರಿ.ಶ. ೧೧೨೨). ಬೆಂಕೊಳ್ವನ ಕೋಲು(ರುದ್ರವಾಡಿ ಕ್ರಿ.ಶ. ೧೧೧೮). ಹೇರಿಂಗೆ ಎಂಬ ಅಳತೆಯ ಉಲ್ಲೇಖ (ಚಿನಮಳ್ಳಿ). ಒಮ್ಮನ(ಹರಸೂರು ಕ್ರಿ.ಶ. ೧೧೭೨). ಕಾಲಡಿಯ ಮತ್ತರು, ಕಾಲಮತ್ತರು(ಹೊಡಲು ಕ್ರಿ.ಶ೧೧೮೧). ಹೊಕ್ಕುಳ ಲೆಕ್ಕದಲ್ಲಿ ಜೋಳ, ಧಾಂನ್ಯದಲಿಬ್ಬಳ ಭತ್ತ(ಕ್ರಿ.ಶ. ೧೧೩೪ರ ನಿಂಬರ್ಗ) ಶಾಸನಗಳಲ್ಲಿ ಉಲ್ಲೇಖಿತಗೊಂಡಿವೆ. ೩೦೦ ಮತ್ತರು ಮೋಘ ಶಾಸನದಲ್ಲಿ, ಚಿಮ್ಮನಚೋಡ ಶಾಸನದಲ್ಲಿ ೫೩ ಮತ್ತರು ಭೂಮಿ ಉಲ್ಲೇಖಿಸಿದೆ.[೨೦] ಬೆಂಕೊಳ್ವನ ಕೋಲು (ರುದ್ರವಾಡಿ).[೨೧] ಉಪ್ಪಿನ ಹೈಡಿಗೆಗೆ ಅರವಸ ಭತ್ತ, ಬಾಡಕಾಯಿ ಮಾರಿದರೆ ಹೈಡಿಗೆಯಲು ಅರವಸ ಭತ್ತ (ಗೊಬ್ಬೂರು ಕ್ರಿ.ಶ. ೧೧೪೫).[೨೨] ಮಾಣಿಕೇಶ್ವರದ ಕೋಲು(ಕ್ರಿ.ಶ. ೧೧೦೩ರ ಆಳಂದ ಶಾಸನ) ಎಂಬುವುದಾಗಿ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಶಿರೋಳ್ಳಿಯ ಶಾಸನದ ೧೪ನೇ ಸಾಲಿನಲ್ಲಿ ೩೦೦ ಮತ್ತರು ದಾನ ಮಾಡಿದ ವಿವರವಿದೆ. ನಿಡಗುಂದದ ೮ನೇ ಸಾಲಿನಲ್ಲಿ ೪೦ ಮತ್ತರು ದಾನ ಮಾಡಿದ ವಿಷಯ ತಿಳಿಸುತ್ತದೆ. ಮೋಘಾದ ಶಾಸನವು ಮತ್ತರುಗಳಲ್ಲಿ ಭೂಮಿ ದಾನ ಮಾಡಿದ ಮಾಹಿತಿ ತಿಳಿಸುತ್ತದೆ. ಈ ಶಾಸನಗಳಿಂದ ಭೂಮಿಯನ್ನು 'ಮತ್ತರು' ಎಂಬ ಅಳತೆಗೋಲಿನಿಂದ ಅಳೆಯುತ್ತಿದ್ದರೆಂದು ತಿಳಿದುಬರುತ್ತದೆ.

೭.೩. ತೆರಿಗೆ ವ್ಯವಸ್ಥೆ

ರಾಜತ್ವ ಹುಟ್ಟಿದಾಗಿನಿಂದ ರಾಜರಿಗೆ ಕಾಣಿಕೆಯನ್ನು ಪ್ರಜೆಗಳು ನೀಡುತ್ತಿದ್ದರು. ಏಕೆಂದರೆ ಆ ಪ್ರದೇಶದ ರಕ್ಷಣೆ, ಶಾಂತಿ ಸುವ್ಯವಸ್ಥೆಯನ್ನು ರಾಜರು ಕಾಪಾಡಿಕೊಂಡು ಬರುತ್ತಿದ್ದರು. ಮುಂದೆ ಆ ಕಾಣಿಕೆ ನೀಡುವುದು ಕಡ್ಡಾಯವಾಗಿ ಸುಂಕ ಅಥವಾ ತೆರಿಗೆ ಎಂಬುದಾಗಿ ಬೆಳೆಯಿತು. ತಿಪ್ಪೆಸುಂಕ (ಮಡಿಹಾಳ ಕ್ರಿ.ಶ. ೧೨ನೆಯ ಶತಮಾನ). ಹುರಿಕಾಯ, ಆವಟ ಮಂತರಿಕೆ, ಗುಣಾಯಿಲೆ(ಮಡಿಹಾಳ ಕ್ರಿ.ಶ. ೧೨ನೆಯ ಶತಮಾನ). ತಿಪ್ಪೆಸುಂಕ ಮಡಿಹಾಳದ ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಕ್ರಯ ಐನೂರು ಗದ್ಯಾಣ ಪೊನ್ನ ಎಂದು ಉಲ್ಲೇಖಿತವಾಗಿದೆ (ರುದ್ರವಾಡಿ ಕ್ರಿ.ಶ. ೧೧೦೩). ಪ್ರಾಣಿ ಖಂಡದ ಸಿಪ್ಪೆಯ ಸುಂಕ(ಹೊಡಲು ಕ್ರಿ.ಶ. ೧೧೮೧). ವಡ್ಡರಾವುಳದ ಸುಂಕವೆರ್ಗಡೆ ತ್ರಿಪುರಾಂತ ಕೈಯುರು, ಸುಂಕಗಾರ ಹಡವಳದ ಗೋಪಣಯ್ಯ(ಬಂದರವಾಡ ಕ್ರಿ.ಶ. ೧೧೧೮) ಎನ್ನುವ ಸುಂಕ ವಸೂಲಿ ಮಾಡುವವರ ಹೆಸರುಗಳನ್ನು ಉಲ್ಲೇಖಿಸಿವೆ. ಕೃಷಿಕರು ತೆರುತ್ತಿದ್ದ ಸುಂಕಗಳೆಂದರೆ, ಒಕ್ಕಲುದೆರೆ, ಬೆಳೆದೆರೆ, ಬಣಂಬೆದೆರೆ, ಎತ್ತಿನೊಕ್ಕ (ಗೊಬ್ಬೂರು ಕ್ರಿ.ಶ. ೧೦೮೫), ಮೂಲಿಗದೆರೆ (ಗೊಬ್ಬೂರು ಕ್ರಿ.ಶ. ೧೦೮೫) ಗಂಧಿಗರ ತೆರಿಗೆ, ಗಂಧವಣ (ಹೊಡಲು ಕ್ರಿ.ಶ. ೧೧೮೧), ಲಕ್ಕವಟಿ (ಹೊಡಲು ಕ್ರಿ.ಶ. ೧೧೮೧)[೨೩] ಎಂಬ ತೆರಿಗೆಗಳನ್ನು ಕಟ್ಟುತ್ತಿದ್ದರು. ಗಾತುಕ, ಕಿರುಕುಳಾಯ, ಕೂಳಪೊರಸು ಇತ್ಯಾದಿ ಕರಗಳಿದ್ದವು. ಈ ಕರಗಳನ್ನು ಮಹಾಜನರು ಹಾಕುತ್ತಿದ್ದರು (ಮುದ್ನೂರು ಶಾಸನ). ತಳಾರಗೂಲಿ ತಳವಾರನ ಜೀವಿತಕ್ಕಾಗಿ ಕೊಡಬೇಕಾದ ಸುಂಕ, ತಿರುಕುಳಾಯಿ-ಚಿಕ್ಕ ತೆರಿಗೆ. ಹೆಜ್ಜುಂಕ ಮತ್ತು ವಡ್ಡರಾವುಳ ಸುಂಕದಿಂದ ದೇವರಿಗೆ ದತ್ತಿ ಬಿಟ್ಟಿದುದನ್ನು ಮುದ್ನೂರಿನ ಇನ್ನೊಂದು ಶಾಸನ ತಿಳಿಸುತ್ತದೆ.[೨೪] ಗಾಣದಾಯ ಸಾಮ್ಯವಂ ಬಿಟ್ಟರು(ನಿಂಬರ್ಗ ಕ್ರಿ.ಶ. ೧೧೩೪).

೭.೪. ವ್ಯಾಪಾರ ಮತ್ತು ವಾಣಿಜ್ಯ ಸಂಘಗಳು

ಶಾಸನಗಳಲ್ಲಿ ಸೆಟ್ಟಿ, ನಕರ ಮುಮ್ಮುರಿದಂಡರ ಉಲ್ಲೇಖಗಳಿವೆ. ಸೆಟ್ಟಿ ತಳದ ಬಣಂಜಿಗ, ಮೂಲಿಗರು ಹೆಚ್ಚಾಗಿ ಗ್ರಾಮಿಗಳಲ್ಲಿನ ವರ್ತಕರಾಗಿದ್ದರು. ಪಟ್ಟಣಗಳಲ್ಲಿನ ವ್ಯಾಪಾರವು ದೊಡ್ಡ ವರ್ತಕ ಸಂಘಗಳಾದ 'ವಡ್ಡ ವ್ಯವಹಾರಿ' ವೀರಬಣಂಜುಗಳ ಕೈಯಲ್ಲಿದ್ದಿತು. ಇವರಿಗೆ ಅಯ್ಯಾವಳೆ ಐನೂರ್ವರು ಬಿರುದು ನೀಡಲಾಗಿತ್ತು. ಪ್ರಶಸ್ತಿಯಿಂದ ಹೆಸರುವಾಸಿಯಾಗಿದ್ದರು. ಪಟ್ಟಣದ ವ್ಯಾಪಾರದ ಮುಖ್ಯ ಸ್ಥಾನ ಪಟ್ಟಣದ ಸ್ವಾಮಿ ಅಥವಾ ಪಟ್ಟಣದ ಹೆಗ್ಗಡೆಗಿತ್ತು. ಸೆಟ್ಟಿಗಳ ಸಂಘವನ್ನು ಸೆಟ್ಟಿಗುತ್ತ ಎಂದು ಕರೆಯಲಾಗಿದೆ. ಇವರಲ್ಲದೆ ನಾನಾದೇಸಿ, ಉಭಯ ನಾನಾದೇಸಿ, ಹದಿನೆಂಟು ನಾಡಪಡೆಗಳೆಂಬವೂ ಸಹ ವರ್ತಕರನ್ನು ನಿರ್ದೆಶಿಸುತ್ತವೆ. ವೀರ ಬಣಂಜಗರಾದ ಮದಯಿನೂರು ಸ್ವಾಮಿಗಳು, ಮೂವತ್ತಾರು ಬೀಡು ಮುಮ್ಮರಿ ದಂಡಗಳು, ಅಲಂದೆ ಸಾಸಿರದ ಸೆಟ್ಟಿಗುತ್ತ (ಚಿನಮಳ್ಳಿ-ಕ್ರಿ.ಶ. ೧೧೭೫). ಐನೂರ್ವರು, ನಕರರು(ಸರಡಗಿ ಕ್ರಿ.ಶ. ೧೧೧೦). ದೇಸಿಗಳು, ನಕರರು(ಹರಸೂರು ಕ್ರಿ.ಶ. ೧೧೭೨). ಮೂವತ್ತಾರು ಬೀಡು, ಮುಮ್ಮರಿದಂಡಗಳು (ಚಿನಮಳ್ಳಿ). ಅಯ್ಯಾವಳಿಯ, ಐನೂರ್ವ ಸ್ವಾಮಿಗಳು, ಮೂವತ್ತಾರು ಬೀಡು ಮುಮ್ಮುರಿದಂಡಮುಭಯ

ನಾನಾ ದೇಸೀಯ ನಾಲ್ಸಾಸಿರರು (ಹೊಡಲು ಕ್ರಿ.ಶ. ೧೧೮೧). ಸೆಟ್ಟಿಗಳಿಗೆ ಅವರದೆ ಆದ ಕುಲದೈವಗಳಿದ್ದು ಅದರಲ್ಲಿ ರಾಮೇಶ್ವರ, ಬಾಚೇಶ್ವರ, ಕೇತೇಶ್ವರ ಮತ್ತು ನಕರೇಶ್ವರರಿದ್ದರು. ಸೆಟ್ಟಿಗುತ್ತರು ಅವರದೇ ಧ್ವಜ ಹೊಂದಿದ್ದರು. 'ಸುವರ್ಣ ಗುಡ್ಡಧ್ವಜ' ಭಲ್ಲುಂಕಿ ದಂಡಹಸ್ತರು ಎಂಬ ಸಂಕೇತ ಸೂಚಿಗಳಾಗಿವೆ. ಗ್ರಾಮಗಳಲ್ಲಿ ಗ್ರಾಮೀಣ ವರ್ತಕ ಸಂಘಗಳಿದ್ದವು. ಜಾಡ ಗೊತ್ತಳಿಗಳ ಸಂಘ (ನೇಕಾರರು) (ಗೊಬ್ಬೂರು ಶಾಸನ). ಸುಲೇಪೇಟೆ ಪ್ರಾಚೀನ ರೇಷ್ಮೆ ವ್ಯಾಪಾರ ಕೇಂದ್ರವಾಗಿತ್ತು ಎಂದು ತಿಳಿಸಲಾಗಿದೆ. ಇದರಿಂದ ವ್ಯಾಪಾರವು ಮಾಡುವ ಬಗ್ಗೆ ಹಲವು ಶಾಸನಗಳು ವಿವರ ನೀಡುತ್ತವೆ.

ವರ್ತಕರಲ್ಲಿ ಮುಮ್ಮರಿನಂದ, ಸೆಟ್ಟಿಗುತ್ತರು, ನಖರರು, ಉಭಯ ನಾನಾ ದೇಸಿಗಳು, ಅಯ್ಯಾವಳಿಯ ಐನೂರರ್ವರು, ವೀರಬಣಂಜು ಸಂಘ ಇತ್ಯಾದಿ. ಸು. ೮ನೇ ಶತಮಾನದಿಂದ ೧೪ನೇ ಶತಮಾನದಲ್ಲಿದ್ದರು. ಜೈನರು ವೈಶ್ಯರಾಗಿರುವ ಸಂಭವವಿದೆ (ಸೆಟ್ಟಿಗಳು). ವ್ಯಾಪಾರಿ ಸಂಘಗಳ ಮುಖ್ಯಸ್ಥನನ್ನು 'ಪಟ್ಟಣ ಸ್ವಾಮಿ' ಎನ್ನುತ್ತಿದ್ದರು. ಉದಾ: ಮಳಖೇಡ ಶಾಸನದಲ್ಲಿ ಈಶ್ವರ ಸೆಟ್ಟಿಗೆ ಮಲೆಯಾದ್ರಿ ಪುರವರಾಧೀಶ್ವರ ಎಂಬ ಬಿರುದಿದೆ (ಮಲೆಯಾದ್ರಿಪುರ ಇಂದಿನ ಮಳಖೇಡ)[೨೫] ಗಡಿಕೇಶಾವರ್‌ದ ಜೀರಬಾವಿ ಬಳಿಯಲ್ಲಿರುವ ಶಾಸನ ಬಮ್ಮಸೆಟ್ಟಿ ಎನ್ನುವ ವರ್ತಕನ ಮರಣ ದಾಖಲಿಸುತ್ತದೆ. ಇದೇ ಗ್ರಾಮದ ಕುಂಬಾರ ದೇಗುಲದ ಶಾಸನ ಮತಿಸೆಟ್ಟಿ ಎನ್ನುವ ವರ್ತಕನನ್ನು ಸೂಚಿಸುತ್ತದೆ. ಶಿರೋಳ್ಳಿಯ ಒಂದು ಶಾಸನ ಈಶ್ವರಸೆಟ್ಟಿ ತಮ್ಮ ನಾರಾಯಣ ಸೆಟ್ಟಿ ಹೆಸರನ್ನು ಸೂಚಿಸುತ್ತದೆ. ಇವುಗಳಿಂದ ಇಲ್ಲಿ ಪ್ರಮುಖ ವ್ಯಾಪಾರಿಗಳು ಮತ್ತು ಈ ಭಾಗ ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದವೆಂದು ತಿಳಿದುಬರುತ್ತದೆ.

೭.೪.೧. ವ್ಯಾಪಾರಿ ಸಂಘಗಳು

ಸೆಟ್ಟಿ ಗುತ್ತ ಸಂಘ, ಗ್ರಾಮಗಳಲ್ಲಿ ಗ್ರಾಮೀಣ ವರ್ತಕ ಸಂಘಗಳಿದ್ದವು.[೨೬] ಜಾಡ ಗೊತ್ತಳಿಗಳ ಸಂಘ (ನೇಕಾರರು) (ಗೊಬ್ಬೂರು)[೨೭] ಎಂದು ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ನಕರಗಳು, ಸ್ವಾಮಿಗಳು, ಮುಮ್ಮರಿದಂಡಗಳು, ನಾನಾದೇಸಿಗಳು (ಗೊಬ್ಬೂರು–೧೨ನೆಯ ಶತಮಾನ). ವೈಶ್ಯಕುಲದ ಸೆಟ್ಟಿಗಳ ಹೆಸರು–ಕೇತಿ ಸೆಟ್ಟಿ, ಸಾಗರ ಸೆಟ್ಟಿ, ಮಾಚಿಸೆಟ್ಟಿ, ಬಾಳಿಸೆಟ್ಟಿ, ಭಾಸ್ಕರಸೆಟ್ಟಿ, ಕಾಳಿಸೆಟ್ಟಿ, ಬಂಮಣಸೆಟ್ಟಿಗಳ ಉಲ್ಲೇಖವಿದೆ (ಹರಸೂರು ಕ್ರಿ.ಶ. ೧೦೯೭). ಮೊರಂಬ ಎಂಬತ್ತರ ಮನ್ನೆ ವ್ಯಾಪಾರಿಗಳು ರಾವಸೆಟ್ಟಿ, ಕಲಿಸೆಟ್ಟಿ, ಅಯಿತ್ರಮಾಯ ಸೆಟ್ಟಿ ಎಂದು ಉಲ್ಲೇಖವಿದೆ(ಪಡಸಾವಳಿಗೆ ಕ್ರಿ.ಶ. ೧೧೧೦). ಬದಾವೆಯ ಮನಿಕಸೆಟ್ಟಿ, ಮಲ್ಲಿಸೆಟ್ಟಿ (ಜವಳಿ ಕ್ರಿ.ಶ. ೧೨–೧೩ನೆಯ ಶತಮಾನ). ಈಶ್ವರ ಶೆಟ್ಟಿ, ನಾರಾಯಣ ಶೆಟ್ಟಿ (ಶಿರೋಳ್ಳಿ). ಬಮ್ಮಸೆಟ್ಟಿ (ಗಡಿ ಕೇಶಾವರ್ ಕ್ರಿ.ಶ. ೧೧ನೆಯ ಶತಮಾನ). ಮತಿ ಸೆಟ್ಟಿ (ಗಡಿ ಕೇಶಾವರ್ ಕ್ರಿ.ಶ. ೧೪ನೆಯ ಶತಮಾನ). ಕವಿಲಿಗೆಯ ಸೆಟ್ಟಿ, ನೃಪ ಚಿಲ್ಲಿಸೆಟ್ಟಿ, ಜಕ್ಕಿಸೆಟ್ಟಿ (ಚಿಲಮಳ್ಳಿ) ಶಾಸನಗಳಲ್ಲಿ ಸೆಟ್ಟಿಗಳ ಹೆಸರಿನ ಉಲ್ಲೇಖಗಳಿವೆ.

೭.೪.೨. ವ್ಯಾಪಾರಿಗಳ ಧಾರ್ಮಿಕ ಜೀವನ

ಸೆಟ್ಟಿಗಳಿಗೆ ಅವರದೇ ಆದ ಕುಲದೈವಗಳಿದ್ದು ಅದರಲ್ಲಿ ರಾಮೇಶ್ವರ, ಬಾಚೇಶ್ವರ, ಕೇತೇಶ್ವರ ಮತ್ತು ನಕರೇಶ್ವರರಿದ್ದರು. ಸೆಟ್ಟಗುತ್ತರು ಅವರದೇ ಧ್ವಜ ಹೊಂದಿದ್ದರು. 'ಸುವರ್ಣ ಗುಡ್ಡಧ್ವಜ' ಭಲ್ಲುಂಕಿ ದಂಡಹಸ್ತರು ಎಂಬ ಸಂಕೇತ ಸೂಚಿಗಳಾಗಿವೆ.

೭.೫. ಶಾಪಾಶಯಗಳಲ್ಲಿ ಆರ್ಥಿಕ ವ್ಯವಸ್ಥೆ

ಈ ದಾನವನ್ನು ಪ್ರತಿಪಾಲಿಸಿದವರಿಗೆ ಕೋಟಿ ಕವಿಲೆಗಳು ಅಲಂಕಾರ ಸಹಿತ ಬ್ರಾಹ್ಮಣರಿಗೆ ದಾನ ಮಾಡಿದ ಪುಣ್ಯ ಬರುತ್ತದೆ ಎಂದು ಶಾಪಾಶಯಗಳು ತಿಳಿಸುತ್ತವೆ. ಅಂದರೆ ದಾನ ಹೆಚ್ಚಾಗಿ ಬ್ರಾಹ್ಮಣರ ಪಾಲಾಗಿತ್ತು. ಹೆಚ್ಚು ಹೆಚ್ಚು ಧರ್ಮದ ನೆಲೆಯಲ್ಲಿರುವ, ದೇವಾಲಯದ ಆಳ್ವಿಕೆ ಮಾಡುವವರೇ ಶ್ರೀಮಂತರಾದರು. ಈ ರೀತಿ ದಾನಗಳ ಪ್ರಕ್ರಿಯೆಯಿಂದ ಬಂಡವಾಳಶಾಹಿತ್ವ ಇಲ್ಲಿ ಬೆಳೆದು ಬಂದು ಶ್ರಮಜೀವಿಗಳು ಅವರ ದಾಸರಾಗಿ, ಜೀತ ಪದ್ಧತಿ ಬೆಳವಣಿಗೆ ಬಂದ ಪ್ರಕ್ರಿಯೆಯೂ ಇಲ್ಲಿ ಕಂಡು ಬರುತ್ತದೆ.

೭.೬. ದೇವಾಲಯಗಳ ಆರ್ಥಿಕ ಕೊಡುಗೆ

ಸೇವಾ ಮನೋಭಾವದಿಂದ ಜನರು ಆರಂಭದಲ್ಲಿ ದೇವಾಲಯಗಳಲ್ಲಿ ಸೇವೆ ಮಾಡುತ್ತಿದ್ದರು. ಸೇವಾ ಮನೋಭಾವದಿಂದ ಸಮಾಜದ ನೈತಿಕ ಮಟ್ಟ ಹೆಚ್ಚಿತು. ಮುಂದೆ ಸೇವೆಗೆ ತಮ್ಮ ಪ್ರತಿಫಲ ಅಪೇಕ್ಷಿಸಲಾರಂಭಿಸಿದರು. ಮೊದಲಿಗೆ ಪ್ರತಿಫಲವಾಗಿ ಜನರಿಗೆ ಭೂದಾನ ಮಾಡುತ್ತಿದ್ದರು. ನಂತರ ಧಾನ್ಯಗಳು, ಹಣ ನೀಡಲಾರಂಭಿಸಿದರು. ಹೀಗೆ ವೇತನ ನೀಡುವ ಪದ್ಧತಿ ಹುಟ್ಟಿತು ಎನಿಸುತ್ತದೆ. ಧನ, ಧಾನ್ಯ, ಭೂಮಿ, ಸಂಪತ್ತು ದೇವಾಲಯದಲ್ಲಿ ಕ್ರೋಢೀಕೃತವಾಯಿತು. ದೇವಾಲಯದ ಅಧಿಕಾರಿಗಳು ಜನರಿಗೆ ಸಾಲ ಕೊಟ್ಟು-ತೆಗೆದುಕೊಳ್ಳುವ ಲೇವಾದೇವಿ ಸಂಸ್ಥೆಗಳನ್ನು ಆರಂಭಿಸಿದರು. ಹೀಗೆ ಆರ್ಥಿಕ ವ್ಯವಹಾರಗಳ ಕೇಂದ್ರವಾಗಿ ಏರ್ಪಟ್ಟವು. ಅನ್ನ ದಾಸೋಹ ನಡೆಸುವುದು, ಭೂದಾನ ಪಡೆಯುವುದರಿಂದ ಕೃಷಿ ವ್ಯವಸ್ಥೆಯ ಮೇಲೂ ತನ್ನ ಪ್ರಭಾವ ಬೀರಿತು.

೭.೬.೧. ದೇವಾಲಯಕ್ಕೆ ಹೊಂದಿಕೊಂಡ ದಾನಗಳು ಮತ್ತು ತೆರಿಗೆಗಳು

ದೇವಾಲಯಕ್ಕೆ ಹೊಂದಿಕೊಂಡಿರುವಂತೆ ಹೆಚ್ಚು ದಾನಗಳು ಮತ್ತು ಅದರ ವಿಧಗಳನ್ನು ನಾನಿಲ್ಲಿ ವಿವರಿಸುವ ಪ್ರಯತ್ನ ಮಾಡಿದ್ದೇನೆ. ಹೆಚ್ಚಿನ ಅಧ್ಯಯನಗಳಲ್ಲಿ ದಾನಗಳ ವಿವರಣೆ ಮತ್ತು ವಿಧಗಳಲ್ಲಿ ಧಾರ್ಮಿಕ ಮತ್ತು ದತ್ತಿ ಶಾಸನಗಳಿಂದಷ್ಟೇ ವಿವರಿಸಿರುವುದನ್ನು ಕಾಣಬಹುದು. ಆದರೆ ಅದರಲ್ಲಿ ದೇವಾಲಯಕ್ಕೆ ವಿಭಿನ್ನ ರೀತಿಯ ದಾನಗಳನ್ನು ಮಾಡುವುದು ಶಾಸನಗಳ ದಾನದಲ್ಲಿ ವಿವರಿಸಿರುವ ಉಲ್ಲೇಖಗಳಿಂದ ತಿಳಿದು ಬರುತ್ತವೆ. ಅವುಗಳ ಸೂಕ್ಷ್ಮ ಅಧ್ಯಯನದ ಮೂಲಕ ಅದರ ಆಡಳಿತ ವ್ಯವಸ್ಥೆಯಲ್ಲಿ ಇವುಗಳನ್ನು ನಾವು ಅಭ್ಯಸಿಸುವುದು ಅಗತ್ಯವೆನಿಸಿ ಇದನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ.

೭.೬.೨. ದೇವಾಲಯದ ದಾನಗಳು ಮತ್ತು ದಾನದ ವಿಧಗಳು ಆರ್ಥಿಕ ವ್ಯವಸ್ಥೆಯಲ್ಲಿ ಅವುಗಳ ಪಾತ್ರ

ಸರ್ವನಮಸ್ಯವಾಗಿ ಬಿಟ್ಟ ದಾನಗಳು ತೆರಿಗೆ ರಹಿತ ದಾನಗಳಾಗಿದ್ದವು. ದಾನದ ಭೂಮಿಯ ಮೇಲಿನ ಕಿರುಕುಳ ಮತ್ತು ಯಾವ ಬಾಧೆ ತರುವ ಸಣ್ಣ ಸುಂಕಗಳೂ ಇರದಂತೆ ಪರಿಹಾರ ಮಾಡಿ ಕೊಟ್ಟ ದಾನವು ಸರ್ವನಮಸ್ಯ ಸರ್ವಬಾಧಾ ಪರಿಹಾರವಾಗುತ್ತಿತ್ತು. ಚಕ್ರವರ್ತಿಯಲ್ಲಿ ಕಾರುಣ್ಯ ಪಡೆದು ಇಲ್ಲವೆ ಆಳುವ ಚಕ್ರವರ್ತಿ ಅಥವಾ ಮಾಂಡಲೀಕರಿಂದ ಅನುಮತಿ ಪಡೆದು ನೀಡಿದ ದತ್ತಿಯನ್ನು ಪರಮೇಶ್ವರ ದತ್ತಿ ಎಂದು ಕರೆಯುತ್ತಿದ್ದರು. ಪರಮೇಶ್ವರ ದತ್ತಿ–ಸರ್ವಬಾಧಾ ಪರಿಹಾರ ಎನ್ನುವುದು ನೀಡಿದ ದತ್ತಿಗೆ ಯಾವುದೇ ರೀತಿಯ ಬಾಧೆ ತರುವ ತೆರಿಗೆಗಳನ್ನು ರದ್ದು ಮಾಡುವುದಾಗಿದೆ. ಸರ್ವನಮಸ್ಯ ತ್ರಿಭೋಗಾಂಭ್ಯಂತರ ಎನ್ನುವ ದಾನ ಮೂರು ತಲೆಮಾರುಗಳು ಅನುಭವಿಸುವ ದಾನವಾಗಿದೆ. ಸರ್ವ ನಮಸ್ಯ ತ್ರಿಭೋಗಾಭ್ಯಂತರ, ಸರ್ವ ನಮಸ್ಯ ತ್ರಿಭೋಗಾಭ್ಯಂತರ ಸರ್ವಭಾಧಾ ಪರಿಹಾರ, ಪರಮೇಶ್ವರ ದತ್ತಿ ತ್ರಿಭೋಗಾಭ್ಯಂತರ ಮತ್ತು ತ್ರಿಭೋಗಾಭ್ಯಂತರ ಎಂದಿವೆ. ಏಕಭೋಗ, ತ್ರಿಭೋಗಗಳ ವಿವೇಚನೆಯ ಸಂದರ್ಭದಲ್ಲಿ ಅಷ್ಟಭೋಗ ತೇಜಸ್ವಾಮ್ಯವನ್ನು ಗಮನಿಸಬೇಕಾಗುತ್ತದೆ. ನಿಧಿ, ನಿಕ್ಷೇಪ, ಅಕ್ಷೀಣ, ಆಗಾಮಿ, ಸಂಚಿತ, ಜಲ, ತರು, ಪಾಷಾಣಗಳೇ ಅಷ್ಟಭೋಗ ತೇಜಸ್ವಾಮ್ಯಗಳು. ಹಾಗೆಯೇ ದೇವಾಲಯಗಳ ಭೂಮಿಯ ವಿಕ್ರಯ, ದಾನ, ವಿನಿಮಯ, ಜಲ, ತರು, ಪಾಷಾಣ, ನಿಧಿ, ನಿಕ್ಷೇಪಗಳನ್ನು ಅನುಭವಿಸುವ ಹಕ್ಕೆ ಅಷ್ಟಭೋಗ ತೇಜಸ್ವಾಮ್ಯ ಎಂದೂ ತಿಳಿಯಬಹುದಾಗಿದೆ. ಉಭಯ ಸಾಮ್ಯ ಮತ್ತು ಉಭಯ ಸಾಮ್ಯಾಭ್ಯಂತರ ಸಿದ್ಧಿ ಭೂಮಿಯನ್ನು ಸ್ವಂತವಾಗಿ ಕೃಷಿ ಮಾಡುವ ಅಥವಾ ಬೇರೆಯವರ ಮೂಲಕ ಕೃಷಿ ಮಾಡಿಸುವ ಅಧಿಕಾರವೆಂದಾಗಲೀ, ದಾನವಾಗಿ ಪಡೆದ ಭೂಮಿಯಿಂದ ಧನರೂಪದಲ್ಲಾಗಲೀ, ಧಾನ್ಯರೂಪದಲ್ಲಾಗಲಿ ಫಲ ಪಡೆಯುವ ಅಧಿಕಾರವೆಂದಾಗಲೀ ತಿಳಿಯಬಹುದು. ಕ್ರಯದಾನವು ದೇವಾಲಯಕ್ಕೆ ದಾನ ನೀಡಲು ಭೂಮಿಯಿಲ್ಲದಿದ್ದರೆ, ಭೂಮಿಕೊಂಡು ಅಥವಾ ದೇವಾಲಯದಿಂದಲೇ ಭೂಮಿ ನಿಮಿತ್ಯವಾಗಿ ಕೊಂಡು(ಖರೀದಿಸಿ) ದಾನ ಮಾಡುವುದಾಗಿತ್ತು. ಹೀಗೆ ಕಾಲ ಕಾಲಕ್ಕೆ ಗುತ್ತಿಗೆ, ಕಟ್ಟು ಗುತ್ತಿಗೆ ಮತ್ತು ತ್ರಿಭೋಗಾಂಭ್ಯಂತರ ಸಿದ್ಧಿಯಿಂದ ಪುನರ್ದತ್ತಿಯಾಗಿ ಪಡೆದ ದಾನ ಎಂಬ ಹಲವು ವಿಧಗಳಲ್ಲಿ ದಾನದ ಸ್ವರೂಪ ಬದಲಾಗುತ್ತಿತ್ತು.[೨೮]

ಕ್ರಸಂ.	ಶಾಸನ ಮತ್ತು ಕಾಲ	ದೇವಾಲಯಗಳ ದಾನದ	ದಾನದ ವಿಧ ವಿವರಣೆ
೧.	ತಡಕಲ್ ೧೨ನೆಯ ಶತಮಾನ, ಕೌಂಟಿ ಕ್ರಿ.ಶ. ೧೦೮೭.	ಸರ್ವ ನಮಸ್ಯ	ಸರ್ವನಮಸ್ಯವಾಗಿ ಬಿಟ್ಟ ಒಂದು ಹೇರುವ ಒಕ್ಕಲುಂ, 'ಕವಟಿಗೆಯ ಆಜ್ಞೇಶ್ವರ ದೇವರಿಗೆ ನೈಷ್ಠಿಕಸ್ಥಾನವಾಗಿ ಸರ್ವ ನಮಸ್ಯದಿಂದ ದಾನ ಬಿಟ್ಟರು'

೨.	ಮಣ್ಣೂರು ೧೧೨೧, ಮಡಿಹಾಳ ೧೨ನೆಯ ಶತಮಾನ	ಸರ್ವಬಾಧಾ ಪರಿಹಾರ	
೩.	ಮಡಿಹಾಳ ೧೨ನೆಯ ಶತಮಾನ, ನಿಂಬರ್ಗಾ ೧೧೩೪	ಪರಮೇಶ್ವರದತ್ತಿ, ಪರಮೇಶ್ವರದತ್ತಿ ಸರ್ವನಮಸ್ಯವಾಗಿ	'ಶ್ರೀಮದ್ಭೂಲೋಕಮಲ್ಲ ದೇವರುಂ ಪಟ್ಟ ಮಹಾದೇವಿಯರುಂ ಪರಮೇಶ್ವರ ದತ್ತಿಯಾಗಿ ಸರ್ಬನಮಶ್ಯ ಮಾಡಿಹಾಳ ಮೇಲಾಳ್ಕೆಯಂ ದೇವರ್ಗೆ ಧಾರಾಪೂರ್ವಕಂ ಮಾಡಿ ಬಿಟ್ಟರು'.
೪.	ಆಳಂದ ಕ್ರಿ.ಶ. ೧೦೮೨	ಪರಮೇಶ್ವರದತ್ತಿ ಬಾಧಾ ಪರಿಹಾರ	
೫.	ಮಡಿಹಾಳ, ೧೨ನೆಯ ಶತಮಾನ	ಕ್ರಯದಾನ	'ಕೆಯಲು ಹೊಂಗ್ಗೊಟ್ಟು ಹೂದೋಂಟವಂ ಕೊಂಡು ಸಂಖರ ದೇವರಿಗೆ ಚಿಕ್ಕಯ್ಯನ ಕಲ್ಲಯ ದೇವರಿಗೆ ಕೊಟ್ಟ'
೬	ಹೋಡಲ ಕ್ರಿ.ಶ. ೧೧೮೧	ತ್ರಿಭೋಗಾಭ್ಯಂತರ	ಹೊಡಲ ಶ್ರೀಪ್ರಸಂನ ರಾಮನಾಥ ದೇವರ್ಗ್ಗೆ ಅಂಗಭೋಗ ರಂಗಭೋಗ ಖಂಡಸ್ಪಾದಿತ ಜೀರ್ಣೋ ದ್ಧಾರಕ್ಕಂ ತಪೋಧನರಾಹಾರ ದಾನಕ್ಕಂ ತ್ರಿಭೋಗಾಭ್ಯಂತರ ಸಹಿತಂ ಧಾರಾಪೂರ್ವಕಂ ಮಾಡಿಕೊಟ್ಟರು.
೭	ರುದ್ರವಾಡಿ ೧೧೦೩	ತ್ರಿಭೋಗಾಂಭ್ಯಂತರ ಸಿದ್ಧಿಯಿಂದ ಸರ್ವನಮಸ್ಯ, ಬಾಧಾ ಪರಿಹಾರ	ಶ್ರೀಚೆನ್ನಕಪೇಶವದೇವರಲ್ಲಿ ಚತುರ್ವಿಂಶತಿ ಮೂರ್ತಿದೇವರಂಗಭೋಗಕ್ಕೆ 'ಜಯಂತಿಪುರದ ಮನ್ನೆಯ ಕೆರೆಯೊಳಗೆ ಮಹಾಕೃತು ಕಲ್ಪವೃಕ್ಷ ಮಹಾದಾನ ಕಾಲದಲ್ಲಿ ಬೆಂಕೊಳ್ವನ ಕೋಲ೮೦೦ ಮತ್ತು ಮತ್ತಭೂಮಿಯಂ ತ್ರಿಭೋಗಾಭ್ಯಂತರ

			ಸಿದ್ಧಿಯಿಂದ ಸರ್ವನಮಸ್ಯ ವಾಗಿ ಧಾರಾಪೂರ್ವಕವಾಗಿ ಮಾಡಿದಂ ಸಂಬಂಧಿಯಂ ಶ್ರೀಬಲ್ಲವರಸರ ಸಮುಖಾ ದೇಶದಿಂ'
೮.	ಹೊಡಲ ಕ್ರಿ.ಶ.೧೧೮೧	ತ್ರಿಭೋಗಾಂಭ್ಯಂತರ ಶಿದ್ಧಿ	'ತ್ರಿಭೋಗಾಂಭ್ಯಂತರ ಸಿದ್ಧಿಯಿಂದ ಸರ್ವ ನಮಸ್ಯವಾಗಿ ಬಿಟ್ಟ'
೯.	ಚಿಂಚನಸೂರು ಕ್ರಿ.ಶ.೧೩೬೦	ದಂಡವತ್ತ	'ದಂಡವತ್ತವನು ಮಾಡಿದ ಮ್ಯಾನ್ಯಂ'

ಮಣ್ಣೂರು(೧೧೨೧)ರ ಶಾಸನ ರಕ್ಷಾನಿಮಿತ್ಯವಾಗಿ ಸರ್ವಬಾಧಾ ಪರಿಹಾರದ ದಾನ ದೇವಾಲಯಕ್ಕೆ ನೀಡಿದ ವಿವರಣೆಯಿದೆ. ಸರ್ವನಮಸ್ಯವಾಗಿ ಬಿಟ್ಟ ದಾನದ ಬಗ್ಗೆ ಬಸವಪಟ್ಟಣದ ೧೦೮೮ರ ಶಾಸನ ತಿಳಿಸುತ್ತದೆ. 'ಪೊಂಗೊಟ್ಟು ಕೊಂಡ ವೆಳಸಂಗ ವಿಯ ದಾರಿಯಿಂ ತೆಂಕಲು ಕಾಲ ಮತ್ತರು ೩೦ರೊಳಗೆ ಹಿಟ್ಟರ್ದ್ದವಂ ಕಳೆದುಳಿದ ಮೂಡಣ ಮತ್ತರು ೧೫ ಮತ್ತರು ದೇವಿಗೆರೆಯ ಜರಿದೇರಿಯಿಂ ಕಟ್ಟಲು ಹೊಕ್ಕ ಮಣ್ಣಂ ಕಳೆಯಲು ಕೊಟ್ಟರು' ಎಂದು ನಿಂಬರ್ಗಾ ಕ್ರಿ.ಶ. ೧೨ನೆಯ ಶತಮಾನದ ಶಾಸನದ ಬಗ್ಗೆ ವಿವರಿಸುತ್ತದೆ. ತ್ರಿಭೋಗಾಭ್ಯಂತರ ದಾನದ ಉಲ್ಲೇಖ ನಿಂಬರ್ಗಾದ ಕ್ರಿ.ಶ. ೧೧೩೪ರ ಶಾಸನದಲ್ಲಿ ಉಲ್ಲೇಖವಾಗಿದೆ. 'ತ್ರಿಭೋಗಾಭ್ಯಂತರ ಸಿದ್ಧಿ ಸರ್ವನಮಸ್ಯವಾಗುಭಯ ಸಾಮ್ಯಕ್ಕಂ ಕಾಣಿಕೆ ವಿಶುದ್ಧಿಯೊಳಗಾಗಿ ಸರ್ವ್ವಾಯ ಶುದ್ಧಿ ಖಂಡದಾನವಾಗಿ ಧರ್ಮವತ್ತಳೆಯಂ ನೂರ ಇರ್ಪ್ಪತ್ತು ಗದ್ಯಾಣ ಪೊನ್ನತೆತ್ತು ಸುಖಮಿಪ್ಪಂತಾಗಿ ಧಾರಾ ಪೂರ್ವಕದಿಂ ಹಸ್ತೋದರ ಮಾಡಿದ' ಎಂದು ರುದ್ರವಾಡಿಯ ಕ್ರಿ.ಶ. ೧೧೦೩ರ ಶಾಸನ ತಿಳಿಸುತ್ತದೆ. ಇದೇ ಶಾಸನದಲ್ಲಿ 'ಮೊರಂಬ ೯೪ರ ಬಳಿಯ ಅಗ್ರಹಾರ ರುದ್ರವಾಡಿಯ ಶ್ರೀ ಕೇಶವ ದೇವರ್ಗ್ಗೆ ಪ್ರಭು ವಶಿಷ್ಟ ಗೋತ್ರ ವಾಸುದೇವ ಭಟ್ಟೋಪಧ್ಯಾಯ ಪ್ರಮುಖವಾಗಿ ಮಹಾಜನಯ್ವತ್ತರ್ಕ್ಕಂ ತ್ರಿಭೋಗಾಭ್ಯಂತರ ಸಿದ್ಧಿ' ಎಂದು ತಿಳಿಸುತ್ತದೆ. ದೇವರಿಗೆ, ಉಪಾಧ್ಯಾಯರಿಗೆ ಮತ್ತು ಮಹಾಜನರಿಗೆ ನೀಡಿದ ಉಲ್ಲೇಖ ಇಲ್ಲಿ ದೊರೆಯುತ್ತದೆ. ಹಲವು ವಿದ್ವಾಂಸರು ತ್ರಿಭೋಗಾಂಭ್ಯಂತರ ಯಾರಿಗೆ ನೀಡಲಾಗುತಿತ್ತು ಎಂದು ಕೇವಲ ಊಹೆ ಮಾಡಿದ್ದರು. ಆದರೆ ಇದಕ್ಕೆ ಹಲವು ಶಾಸನಗಳು ಸಾಕ್ಷಿಗಳೆಂಬಂತೆ ದೆವರಿಗೆ, ದೇವಾಲಯದ ಖಂಡಸ್ಪುಟಿತ, ಜೀರ್ಣೋದ್ಧಾರಕ್ಕೆ ಮತ್ತು ಸ್ಥಾನಾಚಾರ್ಯರಿಗೆ ತ್ರಿಭೋಗ್ಯಾಭ್ಯಂತರ ದಾನ ನೀಡಿರುವುದು ಸ್ಪಷ್ಟಗೋಳಿಸಿವೆ. ಸರ್ವಾಯ ಶುದ್ಧಿ, ಸರ್ವನಮಸ್ಯ, ಸರ್ವಭಾಧಾ ಪರಿಹಾರವಾಗಿ, ಐನೂರು ಗದ್ಯಾಣ ಪೊನ್ನಕ್ರಯ ದಾನವಾಗಿ ಕೊಂಡು ಕಾಲ್ಗರ್ಚಿ ಧಾರಾಪೂರ್ವಕ ಮಾಡಿಕೊಟ್ಟ' ಎಂದು ರುದ್ರವಾಡಿ ಕ್ರಿ.ಶ. ೧೧೦೩ರ ಶಾಸನ ತಿಳಿಸುತ್ತದೆ. ಒಂದು ದೇವಾಲಯಕ್ಕೆ ಹಲವು ವಿಧದ ದಾನವನ್ನು ಒಂದೇ ದಾನದ ಹಣದಲ್ಲಿ ನೀಡಿರುವ ಉದಾಹರಣೆಯಿದಾಗಿದೆ. ಇದೇ ಶಾಸನದಲ್ಲಿ

'ಶ್ರೀ ಚೆನ್ನಕೇಶವ ದೇವರಲ್ಲಿ ಚತುರ್ವಿಂಶತಿ ಮೂರ್ತಿ ದೇವರಂಗಭೋಗ ನೈವಿದ್ಯಕ್ಕೆ, ದೇವಾಲಯದ ಖಂಡ ಸ್ಫುಟಿತ ಜೀರ್ಣೋದ್ಧಾರಕ್ಕಂ ದೇವರ ಬ್ರಹ್ಮಪುರಿಯ ಬ್ರಾಹ್ಮಣರಯ್ವರಿಂಬಗೆವಾಗಿ ಸೋಮವಾರ ಜಯಂತಿಪುರದ ಮನ್ನೆಯ ಕೆರೆಯೊಳಗೆ **ಮಹಾಕೃತ ಕಲ್ಪವೃಕ್ಷ ಮಹಾದಾನ ಕಾಲದಲ್ಲಿ** ಬೆಂಕೊಳ್ವನ ಕೋಲ ೮೦೦ ಮತ್ತರ್ಭೂಮಿಯಂ ತ್ರಿಭೋಗಾಭ್ಯಂತರ ಸಿದ್ಧಿಯಿಂದ ಸರ್ವನಮಸ್ಯವಾಗಿ ಬಿಟ್ಟ' ಎಂದಿದೆ. ಇಲ್ಲಿ ತ್ರಿಭೋಗಾಭ್ಯಂತರ ಸಿದ್ಧಿ ದಾನ ಶಾಸನಗಳು ಕೇವಲ ಮೂವರಿಗೆ ಅನ್ವಯಿಸದೇ ಹಲವು ಜನರಿಗೆ ಈ ದಾನ ಹಂಚುವ ಪ್ರಕ್ರಿಯೆ ಇಲ್ಲಿತ್ತು ಎಂಬುದಕ್ಕೆ ಈ ಶಾಸನ ಸಾಕ್ಷಿಯಾಗಿದೆ. ಎನಗುಂಟೆಯ ಶಾಸನ(ಕ್ರಿ.ಶ. ೧೧೨೨) ಶಾಸನದಲ್ಲಿ 'ಅರಸು ದೇವರ ಶ್ರೀಖಣ್ಡಯವ ನೈವೇದ್ಯವಂ' ಎಂದು ಉಲ್ಲೇಖಿಸಿದೆ. ಈ ಶಾಸನದಲ್ಲಿ ಎರಡು ದೇವಾಲಯಗಳ ಉಲ್ಲೇಖವಿದ್ದು, ಅವು ಒಂದು ಅರಸು ದೇವರು ಎಂದು ಅರಮನೆಯ ದೇವಾಲಯವಾಗಿರಬಹುದು. ಇನ್ನೊಂದು ಸಾರ್ವಜನಿಕ ದೇವಾಲಯಕ್ಕೆ ನೀಡಿದ ದಾನದ ಬಗ್ಗೆ ಇದರಲ್ಲಿ ವಿವರಿಸಲಾಗಿದೆ. ಇವುಗಳಲ್ಲದೆ 'ಕಮ್ಮ ಪ್ರವೇಶದ ವೇಳೆಗೆ ಭೂದಾನ' ಕ್ರಿ.ಶ.೧೧೭೦ರಲ್ಲಿ ಮೋಘಾ ಶಾಸನದಲ್ಲಿ ವಿವರಿಸಲಾಗಿದೆ. ದೇವಾಲಯದ ವೈವಿಧ್ಯಮಯವಾದ ವಿವಿಧ ದಾನಗಳ ಬಗ್ಗೆ ಶಾಸನಗಳು ನಮಗೆ ತಿಳಿಸುವಲ್ಲಿ ಸಹಾಯಕವಾಗಿವೆ. ನಿಂಬರ್ಗಾದ ಕ್ರಿ.ಶ.೧೧೩೪ರ ಶಾಸನದಲ್ಲಿ 'ಮೂಡಣ ಕೇರಿಯ ಪ್ರಜೆಗಳು ತಾವು ತೆರುವ ಶಿದ್ಧಾಯದ ಪೊಂಗೆಋ ಹೊಂಜಿರ, ಹೊಂಗೊಕ್ಕುಳದ ಲೆಕ್ಕದಿಂ ಜೋಳಮುಮಂ ಧಾಂನ್ಯದಲಿಬ್ಬಳ ಭತ್ತಮುಮಂ ಬಿಟ್ಟರು. ಇಲ್ಲಿ ಪ್ರಜೆಗಳು ತೆರುವ ಕರವು ದೇವಾಲಯಕ್ಕೆ ಬಿಟ್ಟ ವಿವರಣೆಯಿದೆ. ಇದೇ ಶಾಸನದಲ್ಲಿ "ಅಷ್ಟಭೋಗ ತೇಜ ಸಾಂಮ್ಯ ಜಲಪಾಷಾಣ ವೃಕ್ಷ ಫಲಸಹಿತ ನಿರ್ಮಾಣ(ಪೂಟ)ವಳಗಾಗಿ ಧಾರಾಪೂರ್ವಕದಿಂ ಕೊಟ್ಟರು" ಎಂದಿದೆ.

೭.೬.೩. ಶಿದ್ದಾಯ/ಸುಂಕ

ತೆರಿಗೆಗಳನ್ನು ಸೇಸೆ, ಸಿದ್ಧಾಯ, ಸುಂಕ ಎಂದು ಸಹ ಕರೆಯುತ್ತಿದ್ದರು. ಹರಸೂರು ಶಾಸನದಲ್ಲಿ ಶಿದ್ಧಾಯ ಎಂದು, ಹೋಡಲು, ರುದ್ರವಾಡಿಯ ಶಾಸನಗಳಲ್ಲಿ ಸಿದ್ಧಿ, ಶಿದ್ದಿ ಎಂದು ಉಲ್ಲೇಖಿಸಿದೆ. ದೇವಾಲಯಕ್ಕೆ ಹೊಂದಿಕೊಂಡ ಹಲವು ತೆರಿಗೆಗಳಿವೆ. ಮನೆವಣ, ಕನ್ನಡಿವಣ, ಶ್ರೀಖಣ್ಡ ಸುಂಕದ ಹೇರು, ಭೂಮಿ ದಾನದ ಮತ್ತರುಗಳ ಮೇಲಿನ ತೆರಿಗೆ, ಉಪ್ಪಿನ ಹೇರು, ಸಕ್ಕರೆಯ ಹೇರು, ಎಲೆಯ ಹೇರು, ದವಸದ ಹೇರು, ಹತ್ತಿ ಮಳವೆ, ತಿಪ್ಪೆಸುಂಕ, ಮಾನ ಒಂದು, ಹೇರಿಂಗ ಮಾನ ಒಂದು ಗಾಣಾಯಿಲೆ, ಇತ್ಯಾದಿ ತೆರಿಗೆಗಳು ಪಡೆಯಲಾಗುತಿತ್ತು.[೫೯] ವೊಕ್ಕಲು ಆವಟ ಮಂತರಿಕೆ, ತಿಪ್ಪೆಸುಂಕ, ನಂದಾದೀವಿಗೆ, ಗಾಣವಾಯಿಲೆಮಂ ಮತ್ತರಿಂಗೆ, ಹುರಿಕಾದ ಆವಟ ಮಂತರಿಕೆ, ಮನೆಯದರ, ಹಾಡಗೋಣಂ ೩೨(ಮಡಿಹಾಳ್ ಶಾಸನ ಕ್ರಿ.ಶ. ೧೨ನೆಯ ಶತಮಾನ), ಪುಲ್ಲಿವಿಗೆಯ ಸಿದ್ಧಾಯ ಒಳಗೆ ಹಣ ಐದು(ಆತನೂರು ಕ್ರಿ.ಶ. ೧೨ನೆಯ ಶತಮಾನ), ಪೆರ್ಜುಂಕ, ವಡ್ಡರಾವುಳದ ಸುಂಕ, ಇಪ್ಪತ್ತೈದೆತ್ತಿನವಿಲು ಕೊಡೆಯ ಸುಂಕ(ಬಂದರವಾಡ ಕ್ರಿ.ಶ. ೧೧೧೮), ಹೇರಿಂಗೆ, ಹೇರಿಂಗೆ ಮಾನಡಿ, ಹೇರಿಂಗೆ ಗೊಪ್ಪವಂ(ಚಿನಮಳ್ಳಿ ಕ್ರಿ.ಶ. ೧೧೭೫), ೬೧ಮತ್ತರು, ಏಯ್ಯಮಂ, ಹೊನಮಂ-೬೧, ಒಂದು

ಕೇರಿಯಂ(ಮರ್ತೂರು ಕ್ರಿ.ಶ. ೧೨ನೆಯ ಶತಮಾನ) ಎಂಬುವ ಉಲ್ಲೇಖಗಳು ಶಾಸನಗಳಲ್ಲಿ ನೋಡಬಹುದಾಗಿದೆ. ಹೋಡಲದ ಕ್ರಿ.ಶ. ೧೧೮೧ರ ಗಂಧವಣ, ಮುದ್ರಾವಣ, ಸಿಪ್ಪೆಸುಂಕದ ವಿವರಣೆಯಿದೆ. ಇದರ ಉಲ್ಲೇಖ ಹೀಗಿದೆ, "ಲಕ್ಕವಟ್ಟವಾಗಿ ಬಿಟ್ಟ ಕೋಣ೧೦೦, ಯತ್ತು೧೦೦ ಆ ಸ್ಥಳದಲ್ಲಿ ಹೋಂಗೆ ಕೊಟ್ಟೊಡೆ ಅದರಲ್ಲಿ ದೇವಮಾನ್ತ....ಅಂಗಡಿಯಲ್ಲಿ ಸಟ್ಟುಗ ಭತ್ತವಂದು ೧ಗಾಣದಲ್ಲಿ ಎಣ್ಣೆಸೌಟು, ಗಂಧವಣದ ವಿಕ್ರಯದ ಹೊಂಗೆ ಕೊಟ್ಟು ಕೊಂಡಲ್ಲಿ ವೀಸ್ರ ಹೊಂಗೆ, ಅಡಕೆ ಯಿಪ್ಪತ್ತೈದಯ ೧ ಎಲೆಹೊಂಗೆ೧೦೦ ಪ್ರಾಣಿ ಖಂಡದ ಸಿಪ್ಪೆಯ ಸುಂಕದ ಧರ್ಮನಿರ್ಣಯದ ಮುದ್ರಾಪಣಂ ದೇವರ್ಗ್ಗೆ" ಅಲಂದೆಯ ಮುದ್ರಾವಣದ ಸುಂಕದಲ್ಲಿ ನೀಡಿದ ದಾನ ಅಳಂದದ ಕ್ರಿ.ಶ. ೧೦೮೨ರ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಮುದ್ರಾವಣ ಎಂಬುದು ಟಂಕಶಾಲೆಯಾಗಿರ ಬಹುದು. ಅದರ ಮೇಲೆಯೂ ಸುಂಕ ನಿರ್ಧರಿಸಿರಬಹುದು.

ಮೇಲಿನ ವಿವರಣೆಯನ್ನು ನೋಡಿದಾಗ ದೇವಾಲಯಕ್ಕೆ ಬಂದ ದಾನ, ದಾನದ ವಿಧಗಳು ಮತ್ತು ತೆರಿಗೆಗಳು ಆರ್ಥಿಕ ಸ್ಥಿತಿಗತಿ ಹೇಗೆ ಅಭಿವೃದ್ಧಿ ಮಾಡಲು ಸಹಾಯಕವಾಗಿವೆ ಎಂಬುದನ್ನು ತಿಳಿಯಬಹುದಾಗಿದೆ.

೭.೭. ಧಾರ್ಮಿಕ ಸ್ಥಿತಿಗತಿ

'ಧರ್ಮೋ ರಕ್ಷತಿ ರಕ್ಷಿತಃ' ಎಂಬ ಅಂಶ ನಮಗೆಲ್ಲಾ ತಿಳಿದಿರುವ ವಿಚಾರವಾಗಿದೆ. ಪ್ರಾಚೀನ ಭಾರತೀಯರು ಧರ್ಮಕ್ಕೆ ಹೆಚ್ಚಿನ ಪ್ರಾಧ್ಯಾನ್ಯತೆ ಕೊಟ್ಟಿದ್ದರು. ಧರ್ಮ ಎನ್ನುವ ಪದ 'ಧೃ' ಎನ್ನುವ ಧಾತುವಿನಿಂದ ಹುಟ್ಟಿತು. 'ಧೃ' ಎಂದರೆ ಧರಿಸು, ಧಾರಣೆ ಮಾಡು ಎಂದರ್ಥ. ಇದು ಮಾನವ ಜೀವನಕ್ಕೆ ನೈತಿಕ ನೆಲೆಗಟ್ಟನ್ನು ನೀಡುತ್ತದೆ. ಧರ್ಮವು ಮಾನವ ಸಮಾಜ ಜೀವಿ ಎಂದು ತೋರಿಸುವ ಒಂದು ಒಳ್ಳೆಯ ಉದಾಹರಣೆ ಎಂತಲೂ ಹೇಳಬಹುದು. ಮೊದಲಿಗೆ ಅಲೆಮಾರಿಯಾಗಿದ್ದ ಮಾನವನು ತನ್ನ ಅಸ್ತಿತ್ವ ಒಗ್ಗಟ್ಟಾಗಿ ಬಾಳುವ ನೆಲೆಯನ್ನು ಹುಡುಕಿ, ಕುಟುಂಬದೊಂದಿಗೆ ಮತ್ತು ಸಮಾಜದಲ್ಲಿರಲಾರಂಭಿಸಿದನು. ತನ್ನ ಪರಿಚಯ ಅಥವಾ ತನ್ನ ಸಮಾಜದ ಪರಿಚಯವನ್ನು ಧಾರ್ಮಿಕ ಆಚರಣೆಗಳ ಮೂಲಕ ತೋರಿಸಲಾರಂಭಿಸಿದನು. ಈ ಮೂಲಕ ದೇವರ ಪೂಜೆಗಳು, ಆಚರಣೆಗಳು ಮತ್ತು ಧರ್ಮ ವ್ಯವಸ್ಥೆ ಜನಾಂಗದಿಂದ ಜನಾಂಗಕ್ಕೆ ಭಿನ್ನವಾಗಿ ಬೆಳೆಯಿತು. ಹೀಗೆ ಧಾರ್ಮಿಕ ವ್ಯವಸ್ಥೆ ಬೆಳೆಯಿತು. ಪ್ರಸ್ತುತ ನಾನು ಧಾರ್ಮಿಕ ಸ್ಥಿತಿಗತಿಯನ್ನು ಶಾಸನಗಳು, ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳ ಅಧ್ಯಯನದಲ್ಲಿ ಕಂಡು ಕೊಂಡಂತೆ ವಿವರಿಸುವ ಪ್ರಯತ್ನ ಮಾಡಿದ್ದೇನೆ.

೭.೭.೧. ವೈದಿಕ ಧರ್ಮ

ಚಾಲುಕ್ಯರು ವೈದಿಕ ಧರ್ಮದವರಾಗಿದ್ದರು(ಅಂದೇಲಿ ಕ್ರಿ.ಶ. ೧೧೫೦), ಗ್ರಾಮ ದೇವೋಪಾಸನೆ ಬಟ್ಟೆಯ ಭೈರವ(ಹಂದಿರ್ಕೆ ಕ್ರಿ.ಶ.೧೧೧೯), ಶ್ರೀಗಿರಿ ಮಲ್ಲಿಕಾರ್ಜುನ (ಚಿನಮಳ್ಳಿ)[೫೦] ಎಂಬುದಾಗಿ ಶಾಸನಗಳು ಉಲ್ಲೇಖಿಸಿವೆ.

೭.೭.೨. ಬೌದ್ಧ ಧರ್ಮ

ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಶಾಸನಗಳು, ದೇವಾಲಯಗಳು ಮತ್ತು ಮೂರ್ತಿ ಶಿಲ್ಪಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಬೌದ್ಧ ಧರ್ಮದ ಕುರುಹುಗಳು ನಮಗೆ ಸಿಗುತ್ತವೆ. ವಿವಿಧ ಸ್ಥಳಗಳ ಹಲವು ಮೂರ್ತಿ ಶಿಲ್ಪಗಳು ಪ್ರಾಚೀನ ಕಾಲದಲ್ಲಿ ಬೌದ್ಧ ಮತ್ತು ಜೈನ ಧರ್ಮ ಇಲ್ಲಿ ಪ್ರಚಲಿತದಲ್ಲಿತ್ತು ಎಂದು ತಿಳಿದು ಬರುತ್ತದೆ. ಮೌರ್ಯರ ಕಾಲದಲ್ಲಿ ಪ್ರಚಲಿತದಲ್ಲಿರುವ ಬೌದ್ಧ ಧರ್ಮವು ನಂತರದ ದಿನಗಳಲ್ಲಿ ಹೆಚ್ಚು ಪ್ರಚಾರಗೊಳ್ಳದೇ ಅವಸಾನ ಹೊಂದಿತು. ಶಾತವಾಹನರ ಕಾಲದಲ್ಲಿ ವೈದಿಕ ಧರ್ಮ ಬೆಳವಣಿಗೆ ಕಂಡಿತು.

೭.೭.೩. ಜೈನ ಧರ್ಮ

ಕೈವಲ್ಯ(ಕೇವಲ) ಜ್ಞಾನ ತಮ್ಮ ಜೀವನದಲ್ಲಿ ಪಡೆಯುವ ಗುರಿಯಿಂದ ಹುಟ್ಟಿದ ಧರ್ಮವಿದಾಗಿದೆ. ದಕ್ಷಿಣ ಭಾರತದಲ್ಲಿ ಕರ್ನಾಟಕದಲ್ಲಿ ಜೈನಧರ್ಮ ಅತ್ಯಂತ ಪ್ರಬಲವಾದ ಧರ್ಮವಾಗಿತ್ತು. ಜೈನ ಧರ್ಮವು ಪರಮಾತ್ಮನ ಅಸ್ತಿತ್ವವನ್ನು ಒಪ್ಪದಿದ್ದರೂ, ಪರಿಪೂರ್ಣವಾದ ದಿವ್ಯಾತ್ಮದ ಭಾವನೆಯನ್ನೊಳಗೊಂಡಿದೆ. ಕರ್ಮದಿಂದ ಬಂಧಿತನಾದವನನ್ನು ತಡೆಯುವುದರಿಂದ ಕರ್ಮದ ಸಂಸ್ಕಾರ ಅಳಿದು ಹೋಗುವುದು. ಈ ಮೂಲಕ ಮಾನವ ಮೋಕ್ಷವನ್ನು ಪಡೆಯುವನು ಎಂಬ ಸಿದ್ಧಾಂತವಿದೆ. ಆಸ್ರವ, ಬಂಧ, ಸಂವರ, ನಿರ್ಜರ, ಮೋಕ್ಷ, ಜೀವ ಮತ್ತು ಅಜೀವಗಳ ಸಪ್ತ ತತ್ವಗಳನ್ನು ಜೈನ ಧರ್ಮ ಒಳಗೊಂಡಿದೆ.[೧೧] ಜೈನ ಧರ್ಮದ ದಿಗಂಬರ ಪಂಥದಲ್ಲಿ ಸಂಘ, ಗಣ, ಗುಚ್ಚ, ಅನ್ವಯ, ಬಳಿ ಎಂಬ ಭೇದಗಳಿದ್ದವು. ಅವುಗಳ ಹುಟ್ಟು ಮತ್ತು ವೈವಿಧ್ಯತೆಯ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ.[೨] ದಿಗಂಬರ ಪರಂಪರೆಯಲ್ಲಿ ಅತ್ಯಂತ ಪ್ರಾಚೀನ ಮತ್ತು ಪ್ರಥಮ ಸಂಘವೆಂದರೆ ಮೂಲ ಸಂಘವಾಗಿದೆ. ತಡಕಲ್ ಶಾಸನದಲ್ಲಿ ಮೂಲಸಂಘದ ಉಲ್ಲೇಖವಿದೆ.

ಈ ಭಾಗದ ಹಲವು ಶಾಸನಗಳು ಜೈನ ಧರ್ಮದ ಬಗ್ಗೆ ಉಲ್ಲೇಖಿಸಿವೆ. ತಡಕಲ್ ಕ್ರಿ.ಶ. ೧೬೦೧, ಕ್ರಿ.ಶ. ೧೬೨೭ರ ಶಾಸನದಲ್ಲಿ "ಶ್ರೀ ಮೂಲಸಂಘದೇಸಿಮಯ್ಯ...... ಬಾನು ಚಂದ್ರದೇವ" ಎಂದು ಉಲ್ಲೇಖಿಸಿದೆ. ಕ್ರಿ.ಶ. ೧೬-೧೭ನೆಯ ಶತಮಾನದ ಶಾಸನದಲ್ಲಿ ಪಾರ್ಶ್ವನಾಥನ ಪ್ರಭಾವಳಿಗಳಿವೆ. ಸು.೧೧ನೇ ಶತಮಾನದ ಶಾಸನ ಮಸಣಯ್ಯನು ಈ ಪಾರ್ಶ್ವನಾಥನ ಚೈತ್ಯಾಲಯವನ್ನು ನಿರ್ಮಿಸಿದನೆಂದು ತಿಳಿಸುತ್ತದೆ(ಕೇಶಾವರ್ ಗಡಿ ಕ್ರಿ.ಶ. ೧೧-೧೨ನೆಯ ಶತಮಾನ). ವಿಕ್ರಮಾದಿತ್ಯನ ರಾಣಿ ಜಾಕಲದೇವಿ ಬರೆಸಿದ ೧೦೯೪ರ ಶಾಸನವು ಜೈನ ಧರ್ಮದ ವೈಭವವನ್ನು ತಿಳಿಸುತ್ತದೆ.[೩] ತಡಕಲ್ ಶಾಸನದಲ್ಲಿ ಜೈನ ಮಂದಿರದ ತೀರ್ಥಂಕರರ ಪೀಠವನ್ನು ಬಾದಾಮಿಯ ಮಲ್ಲಿಶೆಟ್ಟಿ ಮಾಡಿಸಿದನೆಂದು ತಿಳಿಸುತ್ತದೆ.[೪] ಮೂಲ ಸಂಘದೇಸೀಗಣ ಪುಸ್ತಕ ಗುಚ್ಚದ ಜೈನಾಚಾರ್ಯರುಗಳ ಗುರು-ಶಿಷ್ಯ ಸೂತ್ರಾನ್ವಯದ ಹೆಸರುಗಳನ್ನು ಕ್ರಿ.ಶ. ೧೦೯೯ ಹುಣಸಿಹಡಗಲಿ ಶಾಸನದಲ್ಲಿ ಉಲ್ಲೇಖವಾಗಿದೆ. ಕಾಳಾಮುಖದ ಅಘೋರ ಶಕ್ತಿ

ಪಂಡಿತ (ಪಂದಿರ್ಕೆ), ರಾಮೇಶ್ವರ ಗುರು (ಹೊಡಲು ಕ್ರಿ.ಶ. ೧೨೮೧), ಕೇದಾರದೇವ ಆಚಾರ್ಯ ಹಾಗೂ ಕೇತಿದೇವಯ್ಯ (ಚಿನಮಳ್ಳಿ ಕ್ರಿ.ಶ. ೧೧೭೪) ಎಂಬ ಉಲ್ಲೇಖವಿದೆ. ಆಳಂದದಲ್ಲಿ ಪಾರ್ಶ್ವನಾಥನ ಬಸದಿಯಲ್ಲಿ ಚೌಪ್ಪೀಸ್ ತೀರ್ಥಂಕರರ ಶಿಲ್ಪಗಳಿವೆ. ಕಡಗಂಚಿ, ಕೇಶಾವರ್(ಗಡಿ), ನೀಡಗುಂದ, ದೇಗಲ್ಮಡಿ, ಸುಲೇಪೇಟೆ, ಚಿಂಚೋಳಿ, ಮಿರ್ಯಾಣ, ಮಡಿಹಾಳ, ಹೊನ್ನ ಕಿರಣಗಿ, ತಿಳಗೊಳ, ಹಾಗರಗುಂಡಗಿ, ಕಲಬೆನ್ನೂರು ಹೀಗೆ ಹಲವು ಸ್ಥಳಗಳಲ್ಲಿ ಜೈನ ಮೂರ್ತಿಶಿಲ್ಪಗಳು ದೊರೆತಿವೆ. ಅಲ್ಲದೆ ಜೈನ ದೇವಾಲಯಗಳು ಶೈವ ದೇವಾಲಯಗಳಾಗಿ ಮಾರ್ಪಟ್ಟಿವೆ. ಚಿಂಚೋಳಿ, ಸುಲೇಪೇಟೆ, ನಿಂಬರ್ಗಾ, ಕೇಶಾವರ್(ಗಡಿ), ದೇಗಲ್ಮಡಿ, ಮಿರ್ಯಾಣ, ಆಳಂದ, ತಡಕಲ್‌ಗಳಲ್ಲಿ ಜೈನ ಬಸದಿಗಳಿವೆ. ಇವೆಲ್ಲವೂ ಜೈನ ಧರ್ಮ ಈ ಭಾಗದಲ್ಲಿ ಹೆಚ್ಚಿನ ಮಟ್ಟದಲ್ಲಿ ಬೆಳವಣಿಗೆ ಹೊಂದಿದ್ದವು ಎನ್ನುವುದಕ್ಕೆ ಸಾಕ್ಷಿಗಳಾಗಿವೆ.

೭.೭.೪. ವೈಷ್ಣವ ಧರ್ಮ

ವಿಷ್ಣುವು ವೇದಗಳಲ್ಲಿ ಮೊದಲಿಗೆ ಪ್ರಧಾನ ದೇವತೆಯಾಗಿರಲಿಲ್ಲ. ಋಗ್ವೇದದಲ್ಲಿ ವಿಷ್ಣು ತನ್ನ ಮೂರು ಹೆಜ್ಜೆಗಳಿಂದ ಇಡೀ ಪ್ರಪಂಚವನ್ನೇ ಅಳೆದನು ಎಂದು ಉಲ್ಲೇಖಿಸುತ್ತದೆ. ನಂತರ ಬ್ರಾಹ್ಮಣಕಗಳಲ್ಲಿ ವಿಷ್ಣುವಿನ ಸ್ಥಾನ ಹೆಚ್ಚಿತು. ಆರಂಭದಲ್ಲಿ ಅಗ್ನಿ ವರಿಷ್ಠ ದೇವತೆಯಾಗಿದ್ದನು. ಆದರೆ ಬ್ರಾಹ್ಮಣಕಗಳಲ್ಲಿ ವಿಷ್ಣು ವರಿಷ್ಠ ಸ್ಥಾನಕ್ಕೇರಿದ ಮತ್ತು ಅಗ್ನಿ ಕೊನೆಯ ಸ್ಥಾನಕ್ಕಿಳಿದನು. ಅಸುರರನ್ನು ಸೋಲಿಸಲು ಮಹತ್ವದ ಪಾತ್ರ ವಿಷ್ಣು ವಹಿಸಿದ್ದನು ಮತ್ತು ದೇವತೆಗಳಿಗೆ ಅಸುರರಿಂದ ರಕ್ಷಣೆ ನೀಡುತ್ತಿದ್ದ ಎಂದು ತಿಳಿಸುತ್ತವೆ.[೩೫] ಭಕ್ತಿ ಭಾವಕ್ಕೆ ಹೆಚ್ಚಿನ ಮಹತ್ವ ನೀಡಿರುವ ವೈಷ್ಣವ ಧರ್ಮವು ಭಾಗವತ ಧರ್ಮ ಎಂದು ಭಾರತದಲ್ಲಿ ಪ್ರಚಲಿತದಲ್ಲಿತ್ತು. ನಾನಾಘಾಟ ಶಾಸನದಿಂದ ದಕ್ಷಿಣ ಭಾರತದಲ್ಲಿ ಸುಮಾರು ಕ್ರಿಸ್ತಶಕ ಪೂರ್ವದಲ್ಲಿ ಪ್ರವೇಶ ಪಡೆದಿತ್ತು ಎಂದು ತಿಳಿದು ಬರುತ್ತದೆ. ಹಲ್ಮಿಡಿ ಶಾಸನದಲ್ಲಿ ವಿಷ್ಣುವಿನ ಪ್ರಾರ್ಥನೆಯಿದೆ. ಹರಸೂರು ಕ್ರಿ.ಶ. ೧೧೩೭ರ ಶಾಸನ, ರುದ್ರವಾಡಿ ಕ್ರಿ.ಶ. ೧೧೧೭ರ ಶಾಸನ, ರುದ್ರವಾಡಿ ಕ್ರಿ.ಶ. ೧೧೦೩ರ ಶಾಸನಗಳಲ್ಲಿ ಪ್ರಾರ್ಥನೆ ವಿಷ್ಣು ಸ್ತುತಿಯೊಂದಿಗೆ ಆರಂಭವಾಗುತ್ತದೆ.

ಶಾಸನಗಳಲ್ಲಿ ವೈಷ್ಣವ ಧರ್ಮ

ಹರಸೂರು ಕ್ರಿ.ಶ. ೧೧೩೭ರ ಶಾಸನ, ರುದ್ರವಾಡಿ ಕ್ರಿ.ಶ. ೧೧೧೭ರ ಶಾಸನ, ರುದ್ರವಾಡಿ ಕ್ರಿ.ಶ. ೧೧೦೩ರ ಶಾಸನಗಳಲ್ಲಿ ಪ್ರಾರ್ಥನೆ ವಿಷ್ಣು ಸ್ತುತಿಯೊಂದಿಗೆ ಆರಂಭವಾಗುತ್ತದೆ. ಬೆಳಂಬಗಿ ಶಾಸನವು ವಿಷ್ಣು ಸ್ತುತಿಯೊಂದಿಗೆ ಆರಂಭವಾಗುತ್ತದೆ. ಭಾರತದಲ್ಲಿ ವೈಷ್ಣವ ಧರ್ಮ ಭಾಗವತ ಧರ್ಮವೆಂದು ಆರಂಭದಲ್ಲಿ ಪ್ರಚಲಿತದಲ್ಲಿತ್ತು. ಶಾಸನಗಳಲ್ಲಿ ಭಾಗವತ ಮತ್ತು ವೈಷ್ಣವ ಧರ್ಮ ಎಂಬ ಉಲ್ಲೇಖಗಳಿವೆ. ಕನ್ನಡ ಭಾಷೆಯ ಪ್ರಾಚೀನ ಶಾಸನವಾದ ಹಲ್ಮಿಡಿ ಶಾಸನವು ವಿಷ್ಣುವಿನ ಪ್ರಾರ್ಥನೆಯೊಂದಿಗೆ ಆರಂಭವಾಗುತ್ತದೆ.[೩೬] ಇದು ಕರ್ನಾಟಕದಲ್ಲಿಯೂ ಅದಕ್ಕೆ ಪ್ರಾಚೀನತೆಯಿತ್ತು ಎಂಬುದು ಶಾಸನಗಳ ಮೂಲಕ ತಿಳಿಯಲು ಸಾಧ್ಯವಾಗಿದೆ. ಶಾಸನಗಳಲ್ಲಿ ಭಾಗವತ ಮತ್ತು ವೈಷ್ಣವ ಎಂಬ ಉಲ್ಲೇಖಗಳು ದೊರೆಯುತ್ತವೆ.

"ಜಯತ್ಯಾವಿಷ್ಕೃತಂ ವಿಷ್ಣೋರ್ವಾರಾಹಂ ಕ್ಷೋಭಿತಾರ್ಣವಂ। ದಕ್ಷಿಣೋನ್ನತದಷ್ಟಾಗ್ರ ವಿಶ್ರಾಂತ ಭುವನಂವಪ್ಪು" ಎಂದು ಶಾಸನಗಳಲ್ಲಿ ಉಲ್ಲೇಖಿತಗೊಂಡಿವೆ. ಬ್ರಾಹ್ಮಣರೆಲ್ಲರೂ ವೈಷ್ಣವ ಧರ್ಮ ಪ್ರತಿಪಾಲಕರಾಗಿದ್ದರು. ಹೀಗಾಗಿ ಇಲ್ಲಿ ದೊರೆತ ಹಲವು ಅಗ್ರಹಾರಗಳು ವೈಷ್ಣವ ಧರ್ಮದ ಉನ್ನತಿಯ ಪ್ರತೀಕವಾಗಿವೆ. ಅಗ್ರಹಾರ ರುದ್ರವಾಡಿ ಅಲಂದೆ ಸಾಸಿರಕ್ಕೆ ಸೇರಿದ್ದು ಇಲ್ಲಿ ಐವತ್ತು ಮಹಾಜನರಿದ್ದರು. ವಿಕ್ರಮಾದಿತ್ಯನ ರಾಣಿ ಚಂದಲದೇವಿಯ ಬೇಡಿಕೆಯಂತೆ ದಂಡನಾಯಕ ಮಲ್ಲಿ ದಂಡನಾಥರು ರುದ್ರವಾಡಿಯಲ್ಲಿ ತ್ರಿಕೂಟ ಲಕ್ಷ್ಮೀಶನ ದೇವಾಲಯ ಮತ್ತು ಚತುರ್ವಿಂಶತಿಯ ವಿಷ್ಣುವಿನ ಮೂರ್ತಿಗಳ ಸೇವೆಗೆ ದಾನ ಬಿಟ್ಟ ವಿಷಯವನ್ನು ಕ್ರಿ.ಶ. ೧೧೦೩ರ ಶಾಸನ ತಿಳಿಸುತ್ತದೆ. ಕ್ರಿ.ಶ. ೧೧೧೯ರ ರುದ್ರವಾಡಿಯ ಶಾಸನದಲ್ಲಿ ಸೋಮಯಾಜಿ ಪಂಡಿತರ ವಿನಂತಿಯ ಮೇರೆಗೆ ರುದ್ರವಾಡಿಯ ಚೆನ್ನಕೇಶವ ದೇವರು ಮತ್ತು ಚತುರ್ವಿಂಶತಿ ಮೂರ್ತಿಗಳ ಪೂಜಾ ವಿಧಿಗೆಂದು ಬ್ರಹ್ಮಪುರಿಯ ೫೦ ಮಹಾಜನರ ಕೈಯಲ್ಲಿ ಒಟ್ಟು ೯೦೦ ಮತ್ತರು ಭೂಮಿ ಜವಳಿಗೆ ಮತ್ತು ಬಿಬ್ಬಲೇಶ್ವರ ಗ್ರಾಮಗಳನ್ನು ದಾನ ಕೊಟ್ಟ ವಿಷಯವನ್ನು ಉಲ್ಲೇಖಿಸುತ್ತದೆ.[೩೭]

೭.೭.೫. ಶೈವ ಧರ್ಮ

ಪ್ರಾರ್ಥನೆ ಮತ್ತು ಶಾಸನ ಲಲಾಟ ಬಿಂಬಗಳಲ್ಲಿರುವ ಕೆತ್ತನೆಗಳ ಮೂಲಕ ಅವು ತಮ್ಮ ಧಾರ್ಮಿಕ ವಿವರಗಳನ್ನು ತಿಳಿಸುತ್ತವೆ. ಮೋಘಾ ಕ್ರಿ.ಶ. ೧೧೭೦ರ ಶಾಸನದ ಲಲಾಟ ಬಿಂಬದ ಕೆತ್ತನೆಯು ಲಿಂಗ, ನಂದಿ, ಮತ್ತು ಚಂದ್ರರನ್ನೊಳಗೊಂಡಿದೆ. ಪ್ರಾರ್ಥನೆ ಶೈವ ಧರ್ಮಕ್ಕೆ ಸಂಬಂಧಿಸಿರುವ ಕಾರಣ ಇದು ಶೈವ ಶಾಸನವಾಗಿದೆ.

ಫಿರೋಜಾಬಾದ್ ಕ್ರಿ.ಶ. ೧೨ನೆಯ ಶತಮಾನ, ಮರ್ತೂರು ಕ್ರಿ.ಶ.೧೧೨೩ ಶಾಸನ ಶಿವನ ಪ್ರಾರ್ಥನೆಯೊಂದಿಗೆ ಆರಂಭವಾಗುತ್ತದೆ. ಸತ್ಯ ಶಿವಚಾರ ಚಾರಿತ್ರ್ಯ ಹೊಂದಿರುವ ವೀರ(ಶೈವ?) ಧರ್ಮ ಪ್ರತಿಪಾಲಕರಾದ ಮುದನೂರಿನ ಸ್ವಾಮಿಗಳು ಎಂದಿದೆ(ಚಿನಮಳ್ಳಿ ಶಾಸನ).

ಕ್ರಿ.ಶ. ೧೦೪೬ ಮತ್ತು ೧೦೫೫ರ ಶಾಸನಗಳು ಮಹಾ ಮಂಡಳೇಶ್ವರ ದೇವ ನಾಗರಸರು ತಾನೇ ನಿರ್ಮಿಸಿದ ಮಾಡಿಫಳದಲ್ಲಿ ಸ್ವಯಂಭೂ ಕೋಟಿ ಶಂಕರ ದೇವಾಲಯಕ್ಕೆ ನಿಂಬರಗಿ ಗ್ರಾಮವನ್ನು ದಾನ ಬಿಟ್ಟ ವಿಷಯ ತಿಳಿಸುತ್ತದೆ. ಕ್ರಿ.ಶ. ೧೧೯೮ರ ನಿಂಬರ್ಗಾ ಶಾಸನ ಅಹವಮಲ್ಲನ ಬೇಡಿಕೆಯಂತೆ ಕೋಟಿಶಂಕರ ಗುಡಿಯ ಮಠದ ಸರ್ವೇಶ್ವರ ಆಚಾರ್ಯರಿಗೆ ೨೦೦ ಮತ್ತರು ಭೂಮಿಯನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಅಮೋಘವರ್ಷ ನೃಪತುಂಗನ ತಡಕಲ್ ಶಾಸನವು ಬೀಳೇಶ್ವರ ದೇವರಿಗೆ, ಪೂಜಾರಿಗೆ ಮತ್ತು ಗುಡಿಯ ನೃತ್ಯ ಸೇವೆಗೆಂದು ದಾನ ಕೊಟ್ಟ ವಿಷಯವನ್ನು ಉಲ್ಲೇಖಿಸುತ್ತದೆ.[೫೮]

ಕಾಳಾಮುಖ ಶೈವ ಧರ್ಮ

ಪಾಶುಪತ ಶಾಖೆಯ ಸ್ಥಾಪಕನು ಲಕುಲೀಶನು ಶಿವ ಪುರಾಣ, ವಾಯು ಪುರಾಣ, ಲಿಂಗ ಪುರಾಣಗಳಲ್ಲಿ ಸೂತ್ರ ಸಂಹಿತೆಗಳಲ್ಲಿ ಉಕ್ತನಾದವನು; ರುದ್ರನ ಒಂದು ಅವತಾರವಾಗಿ

ಗುಜರಾತಿನ ಕಾಯೋರ್ರೋಹಣದಲ್ಲಿ ಹುಟ್ಟಿದವನೆಂದು ತಿಳಿದು ಬರುತ್ತದೆ. ಮಹಾಭಾರತದ ಶಾಂತಿ ಪರ್ವದಲ್ಲಿ ಪಾಶುಪತ ಸಿದ್ಧಾಂತವನ್ನು ಪ್ರತಿಪಾದಿಸಿದವನು ಶ್ರೀಕಂಠನೆಂದು ಹೇಳಲಾಗಿದೆ. ಕ್ರಿ.ಶ. ೧೦೦ದ ಅಭಿನವ ಗುಪ್ತನ ತಂತ್ರಾಲೋಕವು ಶ್ರೀಕಂಠನ ಜೊತೆಯಲ್ಲಿಯೇ ಲಕುಲೀಶನನ್ನು ಹೆಸರಿಸಿ ಇವರಿಬ್ಬರೂ ಶಿವಶಾಸದ ಪ್ರತಿಪಾದನೆಗೆ ಅಧಿಕಾರಿಗಳೆಂದು ಅಭಿಪ್ರಾಯಪಟ್ಟಿದೆ. ಕ್ರಿ.ಶ.೬ನೆಯ ಶತಮಾನದಷ್ಟು ಹಿಂದೆ ಪ್ರಾಚೀನದಲ್ಲಿ ಕರ್ನಾಟಕದಲ್ಲಿತ್ತೆಂಬುದಕ್ಕೆ ನಿದರ್ಶನಗಳಾಗಿವೆ.[೩೯] ಕಾಳಾಮುಖ ಪಾಶುಪತರು ರಾಜಕೀಯ ಪೋಷಣೆ ಮತ್ತು ಉನ್ನತ ಸ್ಥಾನ ಪಡೆದಿದ್ದರು. ಇವರು ಸಾರ್ವಜನಿಕರಿಗೆ ಶೈಕ್ಷಣಿಕ ಮತ್ತು ಸಾಮಾಜಿಕ, ನೈತಿಕ ಕಟ್ಟಳೆಗಳನ್ನು ತಿಳಿಸುವ ಮೂಲಕ ಜನರ ನಿಕಟವರ್ತಿಗಳಾದರು. ಶೈವ ದೇವಾಲಯಗಳ ಪೂಜೆ, ದೇವರ ಅಂಗಭೋಗ, ರಂಗಭೋಗ, ಖಂಡಸ್ಪುಟಿತ, ಜೀರ್ಣೋದ್ಧಾರ, ತಪೋಧನ ವಿದ್ಯಾರ್ಥಿಗಳ ಆಹಾರ, ಔಷಧ ಮೊದಲಾದವುಗಳಿಗೆ ದಾನ ಬಿಡುವ ಅನೇಕ ಶಾಸನಗಳ ವಿವರಣೆ ಈ ಭಾಗದಲ್ಲಿನ ಶಾಸನಗಳಲ್ಲಿವೆ.

ಕ್ರಿ.ಶ. ೧೦೮೨ರ ಶಾಸನವು ಯುವರಾಜ ಮಲ್ಲಿಕಾರ್ಜುನನು ಅಲಂದೆ ಸಾಸಿರದ ಆಡಳಿತ ನಡೆಸುತ್ತಿದ್ದನು. ಆರನೆಯ ವಿಕ್ರಮಾದಿತ್ಯನ ರಾಣಿ ಚಂದಲದೇವಿಯ ವಿನಂತಿಯ ಮೇರೆಗೆ ನಾಚಣ ದಂಡನಾಥನು ಅಲಂದಾಪುರದಲ್ಲಿ ನಿರ್ಮಿಸಿದ ಸ್ವಯಂಭೂ ಸೋಮೇಶ್ವರ ದೇವರ್ಗೆ ೧೦೦೦ ಹೇರು ಎತ್ತಿನ ಪೆರ್ಜುಂಕ, ಬಿಲ್ಕೊಡೆ ವಡ್ಡರಾವುಳ್ಳ ಮುಂತಾದ ಸುಂಕಗಳನ್ನು ಬಿಡಲಾಯತು. ದೇವರ ಸ್ಥಾನಾಚಾರ್ಯರಾದ ಸರೇಶ್ವರ ಪಂಡಿತರಿಗೆ ಧಾರೆ ಎರೆದು ಕೊಟ್ಟಾಗ ಯುವರಾಜನು ಸೇರಿದಂತೆ ಇತರರು ವಿವಿಧ ಸುಂಕಗಳನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ದೇವರ ನಂದಾದೀಪಕ್ಕೆ ಅಲಂದೆಯ ಮುದ್ರಾವಣದಲ್ಲಿ ತಿಂಗಳು ತಿಂಗಳಿಗೆ ೧೦ ಪಣಗಳನ್ನು ದಾನ ಬಿಟ್ಟ ವಿಷಯ ತಿಳಿಸುತ್ತದೆ.[೪೦] ಗುಲಬರ್ಗಾ ಜಿಲ್ಲೆಯ ಅಂದೇಲಿ ಶಾಸನವು ಪಾಶುಪತ ಕಾಳಾಮುಖರ ವಿವರಣೆ ನೀಡುತ್ತದೆ. ಕ್ರಿ.ಶ. ೧೧೩೪ರ ನಿಂಬರ್ಗಾ ಶಾಸನ, ಭೋಧನದ ಕ್ರಿ.ಶ. ೧೧೪೨ರ ಶಾಸನ ಮತ್ತು ಕ್ರಿ.ಶ. ೧೮೯೩ರ ಬೆಳಂಬಗಿ ಶಾಸನಗಳು ಕಾಳಾಮುಖರ ವಿವರಣೆ ನೀಡುತ್ತವೆ.

ಶೈವ ಸಂಪ್ರದಾಯದ ಪಾಶುಪತ ಕಾಳಾಮುಖ ಪಂಥಕ್ಕೆ ಸೇರಿದ ದೇವಸ್ಥಾನ, ಮಠಗಳ ಆಚಾರ್ಯರೇ ಸ್ಥಾನಾಚಾರ್ಯರು ಅಥವಾ ಸ್ಥಾನಪತಿಗಳಾಗಿದ್ದರು. ಹತ್ತನೆಯ ಶತಮಾನದ ಕೊನೆಯಲ್ಲಿ ಜೈನರ ಪ್ರಭಾವವು ಕಡಿಮೆಯಾಗಿ ಶೈವರ ಪ್ರಭಾವ ಹೆಚ್ಚಿತು. ರಾಜರು, ರಾಣಿಯರು, ಯುವರಾಜರು, ಸಾಮಂತರು, ಮಂಡಳೇಶ್ವರರು, ದಂಡನಾಥರಲ್ಲದೇ, ಜನಸಾಮಾನ್ಯರು ಇವರಿಗೆ ದಾನ ನೀಡಿರುವ ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ. ನೈಷ್ಠಿಕ ಸ್ಥಾನಾಚಾರ್ಯರು ಮಾತ್ರ ದೇವಾಲಯ ಪೂಜೆಗೆ ಅರ್ಹರು ಎಂದು ವಿಧಿವತ್ತಾಗಿ ಶಾಸನಗಳು ತಿಳಿಸುತ್ತವೆ. ಅಂದರೆ ಕಠೋರ ಬ್ರಹ್ಮಚರ್ಯ ಆಚರಿಸುವವರು ಮಾತ್ರ ದೇವಾಲಯ ಪೂಜೆಗೆ ಅರ್ಹರೆಂದು ತಿಳಿಸುತ್ತವೆ.

ಮನ್ನೆದಡಿ ಸಾಸಿರದ ದೇವಸ್ಥಾನದಾಚಾರ್ಯರು ರಾಮೇಶ್ವರ ಗುರುಗಳಿಗೆ ಧಾರಾಪೂರ್ವಕವಾಗಿ ದಾನ ಮಾಡಿದ ವಿಷಯ ತಿಳಿಸುತ್ತದೆ(ಹೊಡಲ ಕ್ರಿ.ಶ. ೧೨೬೭).

ವೀರಶೈವ ಧರ್ಮ

ಹಿರೇಝುಳಕಿಯ ಶಾಸನವು ಭೋಗೇಶ್ವರ ದೇವರಿಗೆ ಬಿಟ್ಟ ದತ್ತಿಯ ವಿಷಯ ಹೇಳುತ್ತದೆ. ದುತ್ತರಗಾಂವದ ವೀರೇಶ್ವರ ಶರಣರು ಮಹಾಪವಾಡ ಪುರುಷರಾಗಿದ್ದರು. ಇವರು ವೀರಶೈವ ಧರ್ಮವನ್ನು ಪ್ರತಿಪಾದಿಸಿದರು. ದಿನನಿತ್ಯ ತಪ್ಪದೇ ಇಷ್ಟ ಲಿಂಗಾರ್ಚನೆ-ಅರ್ಪಣೆ-ಅನುಭಾವ ಮಾಡುತ್ತಿದ್ದರು.[೪೧] ಏಕಾಂತ ರಾಮಯ್ಯ ಆಳಂದದ ಪೋತೆದಾರ ಮನೆತನದವನೆಂದು ಅಬ್ಬಲೂರು ಶಾಸನ ತಿಳಿಸುತ್ತದೆ.[೪೨] ಇವನು ಜನಿಸಿದ ಎಂದು ಹೇಳುವ ಸ್ಥಳದಲ್ಲಿ ಏಕಾಂತ ರಾಮಯ್ಯನ ದೇವಾಲಯವಿದೆ. ೧೨ನೆಯ ಶತಮಾನದಲ್ಲಿದ್ದ ಶಿವಶರಣ ಅಂಗಜೇಶ್ವರ ಮಸಣಯ್ಯ ದಂಪತಿಗಳು ಮುನ್ನಳ್ಳಿಯಲ್ಲಿದ್ದು ಕಲ್ಯಾಣ ಕ್ರಾಂತಿಯಲ್ಲಿ ತೊಡಗಿದ್ದರು. ಬಳ್ಳೇಶ ಮಲ್ಲಯ್ಯನು ಮೊದಲು ಜೈನನಾಗಿದ್ದು ನಂತರ ವೀರಶೈವ ಧರ್ಮವನ್ನು ಸ್ವೀಕರಿಸಿದನು. ತನ್ನ ಆರಾಧ್ಯ ದೇವರು ಬಳ್ಳೇಶ್ವರನಾದುದರಿಂದ ತನ್ನ ವಚನಗಳಿಗೆ 'ಬಳ್ಳೇಶ್ವರ' ಎಂಬ ಅಂಕಿತ ನಾಮವಿಟ್ಟು ವಚನ ರಚಿಸುತ್ತಿದ್ದನು. ತಡಕಲ್ ಶಾಸನವು ಬಳ್ಳೇಶ್ವರ ದೇವರಿಗೆ ಬಿಟ್ಟ ದತ್ತಿಯ ಕುರಿತು ವಿವರಿಸುತ್ತದೆ.[೪೩]

೭.೮. ಶಾಕ್ತ ಧರ್ಮ

ಶಾಕ್ತ ಧರ್ಮ ಹೆಚ್ಚು ಪ್ರಚಾರದಲ್ಲಿರದಿದ್ದರೂ ಕೆಲವು ಶಾಸನಗಳಲ್ಲಿ ಭಾಗಲದೇವಿಯ ಉಲ್ಲೇಖ ಕಾಣಬಹುದಾಗಿದೆ. ಕಾಳಿಕಾ ದೇವಿಯ ದೇವಾಲಯಗಳು, ಗ್ರಾಮ ದೇವತೆಗಳು, ಅಧಿದೇವತೆಗಳು, ಮಹಿಷಾಸುರಮರ್ದಿನಿ, ಭೈರವಿ, ನಾಟ್ಯಭೈರವಿಯರ ಶಿಲ್ಪಗಳು ಅಲ್ಲಲ್ಲಿ ಶಾಕ್ತ ಧರ್ಮ ಆಚರಣೆಯಲ್ಲಿರುವುದಕ್ಕೆ ಕುರುಹುಗಳಾಗಿವೆ.

ಸುಮಾರು ೧೦ನೆಯ ಶತಮಾನದಲ್ಲಿ ಜೈನ ಮತ್ತು ವೈಷ್ಣವ ಧರ್ಮಗಳ ಪ್ರಭಾವ ಹೆಚ್ಚಾಗಿತ್ತು. ಕ್ರಿ.ಶ. ೧೧-೧೩ನೆಯ ಶತಮಾನದಲ್ಲಿ ಶೈವ ಧರ್ಮದ ಪ್ರಾಬಲ್ಯತೆ ಹೆಚ್ಚಾಗಿತ್ತು. ಶಿವದೇವಾಲಯ ಅಳಿದುದಕ್ಕೆ ತನ್ನ ಅಧಿಕಾರಿಯನ್ನು ಕೊಂದು ಗಂಗರಾಸಿಜೀ ತಾನೂ ಪ್ರಾಣ ಬಿಟ್ಟ ಬಗ್ಗೆ ಕ್ರಿ.ಶ.೧೧೨೧ ಮಾಶಾಳ ಶಾಸನ ವಿವರಿಸುತ್ತದೆ. ಸುಮಾರು ೧೧ನೆಯ ಶತಮಾನದ ಕೊನೆಯಲ್ಲಿ ೧೨ನೆಯ ಶತಮಾನದ ಆರಂಭದಲ್ಲಿ ಮಠಗಳು ಹುಟ್ಟಿಕೊಂಡಿದ್ದವು. ಮಠದ ಉಲ್ಲೇಖ (ಮಡಿಹಾಳ ಕ್ರಿ.ಶ. ೧೩ನೆಯ ಶತಮಾನ). ಕ್ರಿ.ಶ. ೧೧೫೪ರ ಶಿರೋಳ್ಳಿ ಶಾಸನವು ಪ್ರಶಸ್ತಿ ಸಹಿತ ದಾನ ಶಾಸನವಾಗಿದೆ. ಶಾಸನ ದಂಡನಾಯಕ ವಿಮಲಾದಿತ್ಯ ಮತ್ತು ಅವನ ಸೋದರ ಚಂದ್ರಾದಿತ್ಯ ಸಿರಿವೋಳಲಲ್ಲಿ ಮೂರು ದೇವಾಲಯಗಳನ್ನು ಮತ್ತು ಒಂದು ಕೆರೆಯನ್ನು ನಿರ್ಮಿಸಿ ದಾನ ಬಿಟ್ಟ ವಿಷಯ ತಿಳಿಸುತ್ತದೆ. ನಿಂಬರಗಿ ಶಾಸನಗಳಲ್ಲಿ ಸೂರ್ಯನಾರಾಯಣನ ಪ್ರತಿಷ್ಠೆ ಮಾಡಿದ ವಿಷಯವಿರುವುದರಿಂದ ಸೂರ್ಯಾರಾಧನೆಯೂ ಸಹ ಶಾಕ್ತಪಂಥದಲ್ಲಿ ಬಹುಕಾಲ ರೂಢಿಯಲ್ಲಿದ್ದಿರಬೇಕು.[೪೪]

೭.೯. ದೇವಾಲಯಗಳ ಧಾರ್ಮಿಕ ಕೊಡುಗೆ

ದೇವಾಲಯಗಳಲ್ಲಿ ಧಾರ್ಮಿಕ ಪ್ರಭಾವ ಹೇಗಿತ್ತು ಎಂದರೆ, ಮಾಶಾಳ ಶಾಸನವು ತಿಳಿಸುವಂತೆ ಗಂಗರಾಸಿಜೀಯವರು ಶಿವ ದೇವಾಲಯ ನಾಶವಾಗಿದ್ದಕ್ಕೆ ಅಧಿಕಾರಿಯನ್ನು ಕೊಂದರು. ಅಲ್ಲಿನ ಅಧಿಕಾರಿ ವರ್ಗದವರಿಗೆ, ಜನ ಸಮುದಾಯಕ್ಕೆ ಕ್ಷಮೆಯನ್ನು ಕೇಳಿ ಆತ್ಮ ಬಲಿದಾನ ಮಾಡಿಕೊಂಡರು. ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ ಧಾರ್ಮಿಕ ಪ್ರಭಾವದ ಜೊತೆಗೆ ಅದರ ಒತ್ತಡವೆಷ್ಟಿತ್ತು ಎನ್ನುವುದು ನಮ್ಮ ಗಮನಕ್ಕೆ ಬರುತ್ತದೆ. ಶೈವ, ವೈಷ್ಣವ, ಜೈನ, ಶಾಕ್ತ್ಯ ಇವೆಲ್ಲವುಗಳ ಬೆಳವಣಿಗೆಯಾದವು. ತಮ್ಮ ಪ್ರಭಾವ ಬೀರಲು ಎಷ್ಟರಮಟ್ಟಿಗೆ ಪ್ರಯತ್ನಿಸಲು ಪ್ರಾರಂಭಿಸಿದವೆಂದರೆ, ಧಾರ್ಮಿಕ ಕಲಹಗಳಿಗೂ ನಾಂದಿಯಾಯಿತು. ಈ ಕಲಹಗಳನ್ನು ತೀರ್ಮಾನಿಸುವಲ್ಲಿ ಆಡಳಿತ ವರ್ಗದವರು, ರಾಜರು ಭಯಪಡುತ್ತಿದ್ದರು. ಒಂದನೆಯ ಬುಕ್ಕರಾಯನ ಶಾಸನ, ಶೃಂಗೇರಿ, ಕಲ್ಯಾ ಶಾಸನಗಳನ್ನು ಇಲ್ಲಿ ನಾವು ಉದಾಹರಿಸಬಹುದು.

೭.೯.೧. ದೇವಸ್ಥಾನ–ದೇವಾಲಯ ಆಡಳಿತ

"ಸ್ಥಾನಪತಿ ಗೋರವನಕ್ಕೀ
ಸ್ಥಾನದ ಸಮಯಂಗಳಕ್ಕೆ ರತಿಲಂಪಟನೀ
ಸ್ಥಾನದೋಳಿರಲಾಗವನಂ
ಸ್ಥಾನಮುಮನರಸುಗಳು ಮಿಳ್ದೆ ಕಳೆಯತ್ತೀಳ್ಳುಂ"

ಅಂದೇಲಿ ಕಿ.ಶ. ೧೩೩೮ ಶಾಸನಂತ್ಯ ಉದ್ದರಣೆ ಇಂತುಹುದೆ ನಿಯಮ ದೇವಸ್ಥಾನದಲ್ಲಿದ್ದ ಎಂಬುದಕ್ಕೆ ಆಧಾರವಾಗಿವೆ.

ಆಯಾ ಧರ್ಮದ ದೇಗುಲಗಳಲ್ಲಿ ಪೂಜಾ ಸಿಬಂದ್ದಿಯಲ್ಲದೆ ದೇವರ ಸೇವೆಗಾಗಿ ಎಂತಹ ತ್ಯಾಗಕ್ಕೂ ಸಿದ್ಧರಾಗಿರುತ್ತಿದ್ದ ಲೆಂಕ, ಗರುಡ, ದೇವರುಣುಗ, ತೋತ್ತು, ಗೊತ್ತಳಿ, ಅಲ್ಲದೆ ಗಡ್ಡ ಹೆಸರಿನ ಶಿಷ್ಯರಿದ್ದುದಾಗಿ ಇಲ್ಲಿನ ಶಾಸನಗಳಿಂದ ಗೊತ್ತಾಗುತ್ತದೆ.[೪೫] ರಾಷ್ಟ್ರಕೂಟ ಆಳ್ವಿಕೆಯ ಅಂದೇಲಿ ಶಾಸನದಲ್ಲಿ(ಅಂದೇಲಿ ೯೫೯–೯೬೬)ಪೇರ್ಗಡೆ ಗುಣ್ಡಮಯ್ಯನ ಹೆಸರಿನಲ್ಲಿ ಅವನ ಮಗ ಹಾಗೂ ನಾಲ್ವರು ಅಧಿಕಾರಿಗಳು ಗುಣ್ಡೇಶ್ವರ ಲಿಂಗ ಪ್ರತಿಷ್ಠಾಪಿಸಿದ ಸಂಗತಿಯಿದೆ. ಶ್ರೀಪರ್ವತದ ಮಲ್ಲಿಕಾರ್ಜುನ ದೇಗುಲ ಮಾಡಿಸಿದ ವಿಷಯ ಕ್ರಿ.ಶ. ೧೪೯೨ ಚಿನಮಳ್ಳಿ ಶಾಸನದಲ್ಲಿದೆ. ಶಿವಾಲಯವಳಿಯಲು ಗಂಗರಾಸಿಜೀಯರು ಸತ್ತ ಸಂಬಂಧದೋಳ್ ದೇವಾಲಯ ನಾಶವಾದಾಗ ಆತ್ಮ ಬಲಿದಾನ ಪ್ರಕರಣವಿದೆ. ಅಲ್ಲಿನ ಅಧಿಕಾರಿಗಳು ಕ್ಷಮೆಯಂಗೋಟ್ಟು ಆ ಧಾರ್ಮಿಕ ವೀರನ ಸ್ಮಾರಕವಾಗಿ ದತ್ತಿಯನ್ನು ನೆಲೆಗೊಳಿಸಿದ್ದಾಗಿ ಮಣೂರ ಶಾಸನ ತಿಳಿಸುತ್ತದೆ(ಕ್ರಿ.ಶ. ೧೧೨೦).[೪೬] ವೈದಿಕ ಧರ್ಮಶಾಸ್ತ್ರಾಭ್ಯಾಸದ ಪ್ರಮುಖ ವಿದ್ಯಾಪೀಠ ಮಣೂರಿನಲ್ಲಿದೆ.[೪೭] ಹಂದರಕಿ(ಕ್ರಿ.ಶ. ೧೧೧೮) ಶಾಸನದಲ್ಲಿ ನೈಷ್ಠಿಕ ವರದಾಚಾರ್ಯರಾದ ಕಾಳಾಮುಖ ತಪೋಧನರಾದ

ಅಘೋರ ಶಕ್ತಿ ಪಂಡಿತ ಎಂದು ಉಲ್ಲೇಖಿಸಿದೆ. ಕ್ರಿ.ಶ. ೧೨೮೮-೧೨೯೯ರಲ್ಲಿ ಲಿಖಿತವಾದ ಭೀಮರಥೀ ತೀರದ ಅಭಿನವ ಕೈಲಾಸವೆಂದು ವರ್ಣಿತವಾದ ಚಿನಮಳ್ಳಿ ಶಾಸನದ ಅಭಿನವ ಮಲ್ಲಿಕಾರ್ಜುನ ದೇವರ ಸ್ಥಾನಿಕಾಚಾರ್ಯರಾದ ಶಿವದೇವಯ್ಯ ಹಾಗೂ ರಾಯ ರಾಜಗುರು ವೀರ ಕೇದಾರದೇವ ಮೊದಲಾದವರು ಶೈವಧರ್ಮದ ಕಟ್ಟೂಗ್ರ ಮೂರ್ತಿಗಳಾಗಿ ಪ್ರಭಾವ ಬೀರಿದ್ದವು[೮೮] ಎಂದಿದೆ.

೭.೯.೨. ದೇವಸ್ಥಾನಗಳಲ್ಲಿನ ಉತ್ಸವ ಆಚರಣೆಗಳು

ದೇವರಿಗೆ ಪಟ್ಟೆ(ರೇಶ್ಮೆದುಕೂಲ) ಹೊನ್ನ ಹರಿವಾಣ ಹಾಗೂ ಕಪಿಲೆಯನ್ನು ದಾನ ಮಾಡಿರುವುದು ಚಿನಮಳ್ಳಿ ಕ್ರಿ.ಶ. ೧೨೯೨ ಶಾಸನ ಉಲ್ಲೇಖಿಸುತ್ತದೆ. ದೇವರಿಗೆ ಹರಕೆ ರೂಪದಲ್ಲಿ ೧೦೦ ಕೋಣ ಹಾಗೂ ಎತ್ತುಗಳನ್ನು ಬಿಟ್ಟುಕೊಟ್ಟ ಸಂಗತಿ ಹೊಡಲು ಶಾಸನದಲ್ಲಿದೆ (ಕ್ರಿ.ಶ. ೧೧೮೧).

ತೀರ್ಥಕ್ಷೇತ್ರಗಳು

ದಕ್ಷಿಣ ವಾರಣಾಸಿ ಮುದುನೂರಿನ ರಾಮೇಶ್ವರ-ಲಕ್ಷ್ಮಣೇಶ್ವರ ತೀರ್ಥಗಳು ತ್ರಿಭುವನ ಮಲ್ಲದೇವರು ಗೋದಾವರಿ ತೀರದ ಕೋಟಿ ತೀರ್ಥದಲ್ಲಿ ತುಲಾ ಪುರಿಷ ದಾನಂಗಳನ್ನು ಮಾಡಿದ ಉಲ್ಲೇಖ ಕ್ರಿ.ಶ. ೧೦೯೯ರ ಹುಣಸೀ ಹಡಗಲಿ ಶಾಸನದಲ್ಲಿದೆ. ಚಂದ್ರಾದೇವಿಯ ತಡಿ (ಕುಳಗೇರಿ ಕ್ರಿ.ಶ. ೧೧೦೫) ಶಾಸನದಲ್ಲಿ ಉಲ್ಲೇಖಿಸಿದೆ. ಪಶ್ಚಿಮಾಭಿಮುಖವಾಗಿ ಹರಿವ ತೊರೆಯ ಕೂಡಲು (ಹರಸೂರು ಕ್ರಿ.ಶ. ೧೧೭೨) ಎಂದಿದೆ. 'ಯರಡು ಹಳ್ಳದ ಕೂಡಲು ಮೊದಲು ಕಟ್ಟೆಯಲು ಗರ್ದೆಯ ಕಾಲಡಿಯ ಮತ್ತರು'(ಹೊಡಲು ಕ್ರಿ.ಶ. ೧೧೮೧)[೮೯] ಎಂದು ಉಲ್ಲೇಖವಿದೆ. ಎರಡು ಅಥವಾ ಮೂರು ನದಿಗಳು ಸೇರುವ ಸ್ಥಳಗಳಿಗೆ ಪವಿತ್ರವೆಂದು ಅಲ್ಲಿ ಅದು ತೀರ್ಥ ಸ್ಥಳವಾಗಿ ದೇವಾಲಯ ಕಟ್ಟಲಾಗುತ್ತಿತ್ತು. ಅಭಿನವ ಶ್ರೀಶೈಲ ಎಂದು ಚಿನಮಳ್ಳಿಗೆ ಕರೆಯಲಾಗುತ್ತಿತ್ತು. ಗಂಗಾ ನದಿಯಲ್ಲಿ ಸ್ನಾನ ಮಾಡಿದ ಪುಣ್ಯ ಸಿಗಲಿ ಎಂದು ಶಾಪಾಶಯಗಳಲ್ಲಿ ತಿಳಿಸಲಾಗಿದೆ. ಕ್ರಿ.ಶ. ೧೧೮೧ರ ಹೊಡಲು ಶಾಸನದಲ್ಲಿ ಶ್ರೀ ರಾಮ-ಸೀತೆಯರ, ಲಂಕೆ ಮತ್ತು ದಶಾನನ ಉಲ್ಲೇಖವಿದೆ.

ಧಾರ್ಮಿಕ ಸಹಿಷ್ಣುತೆ

ಕರ್ನಾಟಕದ ದಕ್ಷಿಣ ಹಾಗೂ ದಕ್ಷಿಣ ಪೂರ್ವಭಾಗಗಳಲ್ಲಿ ಪ್ರಗಲ್ಪಸ್ಥಿತಿಯಲ್ಲಿದ್ದ ವೈಷ್ಣವ ಧರ್ಮ ಉತ್ತರ ಭಾಗದ ಶೈವಧರ್ಮದೊಂದಿಗೆ ಹೊಂದಾಣಿಕೆ ಮತ್ತು ಅನುಸಂಧಾನ ನಡೆಸಿತ್ತು.[೯೦] ಶಿರೋಳ್ಳಿ ಶಾಸನದ ಲಲಾಟದ ಮಧ್ಯದಲ್ಲಿ ನಾರಾಯಣ ಮತ್ತು ಶಿವಲಿಂಗಗಳ ಕೆತ್ತನೆಯಿದೆ. ಪ್ರಾರ್ಥನೆಯೂ ಆರಂಭಿಕ ಸಾಲುಗಳು ವಿಷ್ಣುವಿನ ಸ್ತುತಿ ಮತ್ತು ನಂತರ ಶಿವನ ಸ್ತುತಿಯನ್ನು ವಿವರಿಸುತ್ತದೆ(ಶಿರೋಳ್ಳಿ ಕ್ರಿ.ಶ. ೧೧೫೪).

೭.೧೧. ಮೂರ್ತಿಶಿಲ್ಪಗಳು, ಶಾಪಾಶಯಗಳಲ್ಲಿ ಕಂಡುಕೊಂಡ ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿ

ಕ್ರಿ.ಶ. ೧೧೧೯ರ ಮಾಶಾಳ ಶಾಸನದಲ್ಲಿ ಲಿಂಗ ಪೂಜಿಸುವವರನ್ನು ಕೊಂದ ಪಾಪ ಬರುವುದು ಎಂದು ತಿಳಿಸುತ್ತದೆ. ಕ್ರಿ.ಶ. ೧೨೬೦ರ ಚಿನಮಳ್ಳಿಯ ಶಾಸನ ಶತ ಸಹಸ್ರ ಲಿಂಗಮಂ ಪೂಜಿಸಿದ ಪುಣ್ಯಮಕ್ಕು ಎಂದು ತಿಳಿಸುತ್ತದೆ. ಶಾಸನದ ಶಾಪಾಶಯದಲ್ಲಿ ಶೈವ ಧರ್ಮದ ಪ್ರಾಬಲ್ಯ ನೋಡಬಹುದಾಗಿದೆ.

ದೇವಾಲಯಗಳ ಬಾಗಿಲು, ತೋರಣ, ಭಿತ್ತಿ, ಅಧಿಷ್ಠಾನ ಮತ್ತು ದೇವಕೋಷ್ಠದಲ್ಲಿರುವ ಹಲವು ಶಿಲ್ಪಗಳು ಮತ್ತು ಮೂರ್ತಿಶಿಲ್ಪಗಳು ನಮಗೆ ಇತಿಹಾಸ ತಿಳಿಸುತ್ತವೆ. ಆ ಕಾಲದ ಜನ ಜೀವನ, ವೇಷಭೂಷಣ ಉಪಯೋಗಿಸುವ ವಸ್ತುಗಳು, ಪ್ರಾಣಿ, ಪಕ್ಷಿಗಳ ಬಗ್ಗೆ ತಿಳಿಸುತ್ತವೆ. ದಂತಕಥೆಗಳು, ಕಾಲ್ಪನಿಕ ಪ್ರಾಣಿ–ಪಕ್ಷಿಗಳು, ಪೌರಾಣಿಕ, ಪಂಚತಂತ್ರ, ರಾಮಾಯಣ, ಮಹಾಭಾರತದ ಕಥೆಗಳನ್ನು ವಿವರಿಸುತ್ತವೆ. ಕಥಾ ಹಂದರ ಕಟ್ಟುವಲ್ಲಿ ಶಿಲ್ಪಗಳು ಪ್ರೇರಕವಾದವು. ವೆಯ್ಯಾವಳಿಗಳು, ಗಂಡಭೇರುಂಡ, ನಾಲ್ಕು ತಲೆಯ ಸಿಂಹ, ಅರ್ಧ ಪ್ರಾಣಿ ಮತ್ತು ಅರ್ಧ ಮನುಷ್ಯನ ಕೆತ್ತನೆಗಳು, ಹತ್ತು ಕೈಯಿರುವ ದೇವರುಗಳ ಶಿಲ್ಪಗಳು ಹೀಗೆ ಹಲವು ಕಾಲ್ಪನಿಕತೆಯಿಂದ ತಮ್ಮ ಭಾವನೆಗಳೊಂದಿಗೆ ತಮ್ಮ ಧರ್ಮ ದೇವರು ಹೆಚ್ಚು ಬಲಶಾಲಿ ಎಂದು ತೋರಿಸುತ್ತಿದ್ದರು.

ಸೈನ್ಯ ಪದ್ಧತಿಯಲ್ಲಿ ಕಾಲ್ದಳ, ಅಶ್ವದಳ, ರಥದಳ, ಗಜದಳವಿರುವ ಬಗ್ಗೆ ಅವರ ಆಯುಧಗಳ ಬಗ್ಗೆ ನಿಖರವಾಗಿ ತಿಳಿಸುತ್ತವೆ. ಅವರು ಧರಿಸಿಕೊಂಡ ಆಭರಣ, ವಸ್ತ್ರ–ಕೇಶ ವಿನ್ಯಾಸ ತಿಳಿಸುತ್ತವೆ. 'ವಿ' ಆಕಾರದ ವಸ್ತ್ರ, ವೀರ ಮುಡಿ ಕಟ್ಟುತ್ತಿರುವುದು ಸಾಮಾನ್ಯವಾಗಿ ಈ ಭಾಗದಲ್ಲಿ ಕಾಣುತ್ತೇವೆ. ಖಡ್ಗ, ಗುರಾಣಿ, ಬಿಲ್ಲು–ಬಾಣ, ಭರ್ಚಿ, ಚಾಕು, ಚೂರಿಗಳನ್ನು ಬಳಸುತ್ತಿದ್ದರು.

ನೃತ್ಯ ಮಾಡುವ ಭಂಗಿಗಳು, ನೃತ್ಯಗಾರರ ಅಲಂಕಾರಿಕ ಆಭರಣ, ವಸ್ತ್ರವಿನ್ಯಾಸ, ಕೇಶಾಲಂಕಾರದ ಕೆತ್ತನೆಗಳಿಂದ ನೃತ್ಯದ ಬೆಳವಣಿಗೆ, ನೃತ್ಯಗಾರರ ಅಲಂಕಾರದ ವಿಧಾನಗಳನ್ನು ತಿಳಿಯಬಹುದಾಗಿದೆ. ಕೊರಳಾಭರಣ–ಹಾರ, ಕುತ್ತಿಗೆ ಹಾರ (ನೆಕ್ಲೇಸ್), ಸ್ತನಬಂಧ, ವಕ್ಷ ಬಂಧ, ತೋಳ್ಬಂದಿ, ಕಿವಿ ಓಲೆಯಲ್ಲಿ (ಮಕರ, ಕುಮುದ) ಹಲವು ರೀತಿಯ ವಿನ್ಯಾಸಗಳಿದ್ದವು. ಕೈ–ಉಂಗುರ, ಕಾಲುಂಗುರ, ಕಾಲ್ಗಡಗ, ಪೈಜಾಮ, ಕಾಲ್ಗೆಜ್ಜೆ ಧರಿಸುತ್ತಿದ್ದರು. ಸ್ತ್ರೀಯರು ಕೇಶಾಲಂಕಾರದಲ್ಲಿ ತುರುಬು, ಜಡೆ, ವೃತ್ತಾಕಾರದ ತುರುಬು, ಪ್ರಭಾವಳಿಯಂತೆ ತುರುಬುನೊಂದಿಗೆ ಜಡೆ ಹೀಗೆ ವಿವಿಧ ವಿನ್ಯಾಸದ ಜಡೆ ಹಾಕುತ್ತಿದ್ದರು.

ಶಿಲ್ಪಗಳ ಕೆತ್ತನೆಗಳು ಜನರ ಧಾರ್ಮಿಕ ಮನೋಭಾವ, ಉನ್ನತ ವರ್ಗದವರ ಮತ್ತು ಸಾಮಾನ್ಯ ಜನರ, ತಳಮಟ್ಟದವರ ಜೀವನವೈಖರಿ ತಿಳಿಸುತ್ತವೆ. ಸಂಗೀತದ ಸಾಧನಗಳಾದ ಕೊಳಲು, ಷಹನಾಯಿ, ಡೋಲು, ತಬಲ, ಶಂಖ, ತಮಟೆ, ಡಮರು, ಪಾಳ್ಯಗಳ ವಿವರಣೆ ಸಿಗುತ್ತದೆ.

೭.೧೧. ಸಾಂಸ್ಕೃತಿಕ ವ್ಯವಸ್ಥೆ

ಗೀತ, ವಾದ್ಯ ಮತ್ತು ನೃತ್ಯದ ಉಲ್ಲೇಖ (ಹೊಡಲ ಕ್ರಿ.ಶ. ೧೨೬೭ ಮತ್ತು ಕ್ರಿ.ಶ. ೧೧ನೆಯ ಶತಮಾನದ ತಡಕಲ್ ಶಾಸನ). ಕ್ರಿ.ಶ. ೧೦೧೧ರ ಸರಡಗಿ ಶಾಸನ ಹಳವಿಗ ಜಿಕ್ಕೋಜನಿಗೆ, ಹಾಡುವ, ಪಾತ್ರ ಮಾಡುವರಿಗೆ ದಾನ ಬಿಟ್ಟ ವಿಷಯ ತಿಳಿಸುತ್ತದೆ. ಶಾಸನಗಳಲ್ಲಿ ಸಂಸ್ಕೃತಿಯ ಉಲ್ಲೇಖ, ದೇವಾಲಯಗಳಿಗೆ ಸಂಬಂಧಿಸಿದ ದಾನ-ದತ್ತಿ ಶಾಸನಗಳಿಂದ ಕಂಡು ಬರುತ್ತದೆ. ದೇವರ ಪೂಜೆಯ ಸಮಯದಲ್ಲಿ ದೇವರಿಗೆ ಸಂತೈಸಲು ಸಂಗೀತ, ವಾದ್ಯಗಳನ್ನು ಬಾರಿಸುತ್ತಿದ್ದರು. ನೃತ್ಯದ ಮೂಲಕ ದೇವರಿಗೆ ತಮ್ಮ ಭಕ್ತಿ ತೋರಿಸುತ್ತಿದ್ದರು.

ದೇವಾಲಯಗಳ ಸಾಂಸ್ಕೃತಿಕ ಕೊಡುಗೆ

ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನೋಡಿದಾಗ ದೇವಾಲಯಗಳು ಸಂಗೀತಗಾರರಿಗೆ, ನೃತ್ಯಗಾರರಿಗೆ ಪ್ರೇರಕವಾದವು. ಕೊಳಲು-ಷಹನಾಯಿ ಊದುವವರು, ಜಾಗಟೆ, ತಬಲ ಬಾರಿಸುವ, ಪಾತರದವರ ಹುಟ್ಟಿಗೆ ಮೂಲ ದೇವಾಲಯಗಳಾದವು. ಇದಕ್ಕಿಂತ ಮುಂಚೆ ಸಂಗೀತ, ನೃತ್ಯ ಎಲ್ಲಿ ಮಾಡುತ್ತಿದ್ದರು? ಎಂಬ ಪ್ರಶ್ನೆ ಹಾಕಿಕೊಂಡರೆ ರಾಜರು ತಮ್ಮ ವಿಲಾಸಕ್ಕಾಗಿ ತಮ್ಮ ಆಸ್ಥಾನದಲ್ಲಿ ಮಾಡಿಸುತ್ತಿದ್ದರು. ಆದರೆ ಅಷ್ಟು ಪ್ರಚಾರವಾಗಿರಲಿಲ್ಲ. ಅದು ರಾಜರಿಗೆ ಮಾತ್ರ ಸೀಮಿತವಾಗಿತ್ತು. ದೇವಾಲಯಗಳ ಪೂಜಾ ಸಂದರ್ಭದಲ್ಲಿ ಭಕ್ತಿ ಈ ಮೂಲಕ ತೋರಿಸುವ ಪದ್ಧತಿ ಬಂದಿತು. ಹೀಗೆ ಕಲೆ ಸಾರ್ವಜನಿಕರಿಗೆ ಪ್ರೇರಕವಾಗಿದ್ದು, ಸಾಂಸ್ಕೃತಿಕ ಬೆಳವಣಿಗೆಗೆ ಕಾರಣವಾಯಿತು. ಪ್ರಾಥಮಿಕ ಹಂತದ ವಿದ್ಯಾದಾನ, ಆಧ್ಯಾತ್ಮಿಕತೆಯ ಶಿಕ್ಷಣ ದೇವಾಲಯಗಳಲ್ಲಿ ನೀಡುತ್ತಿದ್ದರು.

ಹಬ್ಬಗಳು

ಪರ್ವ ಎಂಬುವ ಸಂಸ್ಕೃತ ಶಬ್ದವು ಅಪಬ್ರಂಶವಾಗಿ ಪಬ್ಬ, ಹಬ್ಬವಾಗಿ ಕನ್ನಡದಲ್ಲಿ ರೂಪವಾಯಿತು. ಆಳಂದ ಶಾಸನದಲ್ಲಿ 'ದುಂದುಭಿ ಸಂವತ್ಸರದ ಪುಷ್ಯ ಶುದ್ಧ ೫ ಆದಿವಾರದ ಉತ್ತರಾಯಣ ಸಂಕ್ರಾತಿ ಪರ್ವ' ಎಂದು ಉಲ್ಲೇಖಿಸಿದೆ.

೭.೧೨. ಶೈಕ್ಷಣಿಕ ವ್ಯವಸ್ಥೆ

ದೇವಸ್ಥಾನದ ಆಚಾರ್ಯ ಮತ್ತು ಗುರುಗಳು

ಮನ್ನೆದಡಿ ಸಾಸಿರದ ಆಚಾರ್ಯ ಮತ್ತು ಗುರುಗಳು ರಾಮೇಶ್ವರರು (ಹೊಡಲ ಕ್ರಿ.ಶ. ೧೨೬೭). ವಾಸುದೇವ ಭಟ್ಟೋಪೋಧ್ಯಾಯರು(ರುದ್ರವಾಡಿ ಕ್ರಿ.ಶ. ೧೧೦೩). ಮುನೀಂದ್ರ-ಸುರೇಶ್ವರ, ಮಾಡಿಫಳದ ಆಚಾರ್ಯ-ಧ್ರುವೇಶ (ನಿಂಬರ್ಗಾ ಕ್ರಿ.ಶ. ೧೨ನೆಯ ಶತಮಾನ). ಸ್ಥಾನಪತಿ ಪಂಡಿತರು ಮತ್ತು ಶೇಷ ಪಂಡಿತರು (ಮೋಘಾ ಕ್ರಿ.ಶ. ೧೧೭೦) ಎಂದು ಆಗಿನ ಕಾಲದ ಗುರುಗಳ ಮತ್ತು ಆಚಾರ್ಯರ ಹೆಸರುಗಳನ್ನು ಉಲ್ಲೇಖಿಸಿವೆ. ಮೋಘಾನಂದಿ (ಗಡಿಕೇಶಾವರ ಶಾಸನ), ಶರೀರಪ್ಪ ಮಾರ್ತಂಡೋಜ್ಜಳ (ಶಿರೋಳ ಶಾಸನ), ಗುರುಗಳು ಮಿಮಾಂಸೆ ಶಾಸ್ತ್ರ, ಹದಿನೆಂಟು ಪುರಾಣ ಯಜನ, ಯಾಜನ, ದಾನ, ಪ್ರತಿಗ್ರಹ, ಷಟ್ಕರ್ಮದಲ್ಲಿ

ನಿರತರಾಗಿದ್ದರು. ಅಗ್ನಿ, ಸೋಮ, ವಾಜಪೇಯ ಯಜ್ಞಾವ ಭೃತಾವಗಾಹನ, ಪವಿತ್ರೀಕೃತ ಶರೀರಪ್ಪ ಎಂದು ಶಿರೋಳ್ಳಿ ಶಾಸನ ತಿಳಿಸುತ್ತದೆ.

ಶಿರೋಳ್ಳಿ ಶಾಸದ ಉಪಾಧ್ಯಾಯರಿಗೆ ಮತ್ತು ಅಲ್ಲಿಯ ಪಟ್ಟಹ ವಿದ್ಯಾರ್ಥಿ ಮಣಿಯರ ಗ್ರಾಸಕ್ಕೆಂದು ಭೂದಾನ ನೀಡಿದ ವಿವರವಿದೆ. ಕೇಶಾವರ(ಗಡಿ)-ಕುಂಬಾರ ದೇಗುಲದ ಶಾಸನ ಮತಿಸೆಟ್ಟಿಯ ಗುರು ಮಾಘನಂದಿ ಎಂದು ಸೂಚಿಸುತ್ತದೆ.

ಶಿಕ್ಷಣ ಕೇಂದ್ರಗಳು

ಶಿರೋಳ್ಳಿ, ಸುಲೇಪೇಟೆ, ತೋನಿಪಲ್ಲಿ, ಮೋಘಾ, ಹರಸೂರು, ರುಮ್ಮನ ಗೂಡು, ದೇಗಲ್ಮಡಿ, ಮಿರ್ಯಾಣ, ಗಡಿಕೇಶಾವರಗಳಾಗಿದ್ದವು. ಶಿಕ್ಷಣವನ್ನು ದೇವಾಲಯಗಳಲ್ಲಿ, ಅಗ್ರಹಾರಗಳಲ್ಲಿ, ಘಟಿಕಸ್ಥಾನಗಳಲ್ಲಿ ಮತ್ತು ಮಠಗಳಲ್ಲಿ ನೀಡಲಾಗುತ್ತಿತ್ತು. ದೇವಾಲಯಗಳಲ್ಲಿ ಸಮಾನ್ಯ ಶಿಕ್ಷಣ ಮತ್ತು ಅಕ್ಷರ ಜ್ಞಾನ ನೀಡುತ್ತಿದ್ದರು.

ಅಗ್ರಹಾರಗಳು

ಶಿರೋಳ್ಳಿ, ಸುಲೇಪೇಟೆ, ಮೋಘಾ, ತೋನಿಪಲ್ಲಿ, ಹರಸೂರುಗಳಾಗಿದ್ದವು. ಮಹಾಜನರು ಅಗ್ರಹಾರಗಳಲ್ಲಿ ವಾಸಿಸುತ್ತಿದ್ದು ಊರಲ್ಲಿ ಕರಗಳನ್ನು ನಿಗದಿಪಡಿಸುತ್ತಿದ್ದರು. ಕುಂಬಾರರಿಗೆ ಹಲವು ಕರಗಳನ್ನು ನಿಗದಿಸಿದ್ದರು (ಮುದ್ನೂರು ಶಾಸನ).[೫೧]

ಶಿವಪುರಿಗಳು

ಶೈವರ ದೇವಸ್ಥಾನಗಳ ಪರಿಸರದಲ್ಲಿ ಶಿವಾರ್ಚಕರು ಶೈವಾಗಮ, ಕೋವಿದರ ಮತ್ತು ಶಿವಭಕ್ತ ಪ್ರಜೆಗಳ ವಾಸಸ್ಥಾನವಾಗಿತ್ತು.[೫೨]

ಬ್ರಹ್ಮಪುರಿಗಳು

ಬ್ರಾಹ್ಮಣರು ವಾಸಿಸುವ ಓಣಿಗಳಾಗಿದ್ದವು. ಬ್ರಹ್ಮಪ್ರರಿಯ ಬ್ರಾಹ್ಮಣವರ್ಗ್ಗೆ (ಮಂದ ಕ್ರಿ.ಶ. ೧೧೦೮), ನಿಂಬರಗಿ (ಕ್ರಿ.ಶ. ೧೧೩೪), ಬ್ರಹ್ಮಪುರಿಯಲ್ಲಿ ಅಗ್ಗಿಷ್ಟಿಗೆಯನ್ನು ನಿಯಮಿತವಾಗಿ ಕಾಯ್ದುಕೊಂಡಿರಲು ಬಿಟ್ಟ ವೃತ್ತಿಗಳು ಉಲ್ಲೇಖ ಹಿರೇಮುದುನೂರು ಶಾಸನದಲ್ಲಿದೆ. ಬ್ರಾಹ್ಮಣರು ಉಂಬವಂತಾಗಿ ಮಾನ್ಯಮಾಡಿದ ಉಂಬಳಿ ಗ್ರಾಮವನ್ನು ಬ್ರಹ್ಮಪುರಿಯೆಂದಿರುವುದು ರುದ್ರವಾಡಿ ಶಾಸನದಲ್ಲಿ ಕಂಡುಬರುತ್ತದೆ.[೫೩]

ಅಗ್ರಹಾರ

ಬ್ರಾಹ್ಮಣ ವಿದ್ವಾಂಸರು ನೆಲೆಸುವ ಪ್ರದೇಶವನ್ನು ಅಗ್ರಹಾರಗಳು ಬ್ರಾಹ್ಮಣರು ನೆಲೆಸುವ ಸ್ಥಳಗಳಾಗಿದ್ದರು, ವಿದ್ಯಾರ್ಥಿಗಳು ನೆಲೆಸುತ್ತಿದ್ದರು. ಬೀಚವಳ್ಳಿಯನ್ನು ಬ್ರಹ್ಮಪುರಿಯನ್ನಾಗಿ ಮಾಡಿದ ಉಲ್ಲೇಖವಿದೆ(ಅಫ್ಜಲ್‌ಪುರ ಶಾಸನ-ಕ್ರಿ.ಶ. ೧೧೦೭). ಬಂದರವಾಡ ಅಗ್ರಹಾರ (ಬಂದರವಾಡ ಕ್ರಿ.ಶ.೧೧೧೮). ರುದ್ರವಾಡಿ ಅಗ್ರಹಾರ (ರುದ್ರವಾಡಿ ಕ್ರಿ.ಶ. ೧೧೦೩). ಜಯಂತಿಪುರದ ಮನ್ನೆಯಕೆರೆ

ಅಗ್ರಹಾರ ಮತ್ತು ಬ್ರಹ್ಮಪುರ ಎಂದು ಉಲ್ಲೇಖಿತವಾಗಿದೆ(ರುದ್ರವಾಡಿ ಕ್ರಿ.ಶ. ೧೧೦೩). ಸುಲ್ಯ ಗ್ರಾಮ ಅಗ್ರಹಾರ(ಸುಲೇಪೇಟೆ ಕ್ರಿ.ಶ. ೧೦-೧೧ನೆಯ ಶತಮಾನ). ಎನಗುಂಟೆ ಅಗ್ರಹಾರ (ಎನಗುಂಟೆ ಕ್ರಿ.ಶ. ೧೧೨೨). ಹಿರಿದಾದ ಅಗ್ರಹಾರ ಮತ್ತು ಮದನಂದಿಯ ಅಗ್ರಹಾರ ಮೈಗೆಹ(ಮೋಘಾ) ಎಂದಿದೆ (ಮೋಘಾ ಕ್ರಿ.ಶ. ೧೧೭೦). ಬಾಡಂ ರುದ್ರವಾಡಿ ಬ್ರಹ್ಮಪುರಿ ಎಂದಿದೆ (ರುದ್ರವಾಡಿ ಕ್ರಿ.ಶ. ೧೧೫೪).

ಮಠಗಳು

ನಿರ್ಗತಿಕರಿಗೆ, ಅನಾಥರಿಗೆ, ಬಡವರಿಗೆ, ಸನ್ಯಾಸಿಗಳಿಗೆ, ಭಿಕ್ಷುಕರಿಗೆ ಮತ್ತು ಪ್ರವಾಸಿಗರಿಗೆ, ಆಹಾರ ದಾನ ಮಾಡುವ ಸ್ಥಳವಾಗಿತ್ತು.[೫೪] ಮುಂದೆ ವಿದ್ಯಾಕೇಂದ್ರಗಳಾಗಿ ಸತ್ರಗಳಾಗಿ, ವೈದ್ಯಶಾಲೆಗಳಾಗಿ ಸಕಲರ ಹಿತರಕ್ಷಿಸುವ ಕಾಮಧೇನುಗಳಂತಿದ್ದವು. ಶಾಸನಗಳಲ್ಲಿ ಮಠ ಎಂದರೆ ಶಾಲೆಗಳೆಂಬ ಅರ್ಥದಲ್ಲಿದೆ. ಉದಾ-ಕಾಳಗಿ. ನಿಂಬರ್ಗಾದ ಕ್ರಿ.ಶ. ೧೧೯೮ರ ಶಾಸನದಲ್ಲಿ ಅಹವಮಲ್ಲನ ಬಿನ್ನಪದಿಂದ ಮಾಡಿಫಳದ ಸ್ವಯಂಭೂ ಕೋಟಿಶಂಕರ ದೇವಾಲಯದ ಮಠದ ಸರ್ವೇಶ್ವರ ಆಚಾರ್ಯರಿಗೆ ೨೦೦ ಮತ್ತರು ಭೂಮಿದಾನ ಕೊಟ್ಟ ವಿಷಯ ತಿಳಿಸುತ್ತದೆ. 'ನೈಷ್ಠಿಕ ಮಠ'ದ ಉಲ್ಲೇಖವಿದೆ. ಕಾಳಾಮುಖ ನೈಷ್ಠಿಕ ಮಠದಾಚಾರ್ಯರು ಮಿನಿತುಮಂ ತಪೋದನಲಾಗವೇಳ್ಕಂ ಮಠದಾಚಾರ್ಯರು ಮಿನಿತುಮಂ ನಡೆಯಿಸುವರು (ಕಿ.ಶ. ೧೦೮೨) ಅಲಂದೆಯಲ್ಲಿ 'ಪಂಚಮಠ'ಗಳಿದ್ದ ಉಲ್ಲೇಖಗಳಿವೆ. ಶಾಸನಗಳಲ್ಲಿ ಮಠ ಎಂದರೆ ಶಾಲೆಗಳೆಂಬ ಅರ್ಥದಲ್ಲಿದೆ. ಉದಾ:-ಕಾಳಗಿ. ನಿಷ್ಠೆಯಿಂದ ಮಠವನ್ನು ನಡೆಸಿಕೊಂಡು ಹೋಗುವ ಮಠದ ಆಚಾರ್ಯರು ಸಕಲ ಶಾಸ್ತ್ರಗಳಲ್ಲಿ ಪಾರಂಗತರಾಗಿರುತ್ತಿದ್ದರು.

ಘಟಿಕಾಸ್ಥಾನಗಳು

ಉನ್ನತ ಶಿಕ್ಷಣ ಕೇಂದ್ರವಾಗಿತ್ತು. 'ಗಳಿಗೆಯ ಬಟ್ಟಲುಗಳನ್ನು' ಸಮಯ ತಿಳಿಯಲು ಇಡುತ್ತಿದ್ದುದರಿಂದ ಘಟಕಾಸ್ಥಾನಗಳೆಂದು ಕರೆಯುತ್ತಿದ್ದರು. ನಾಗಾವಿ ಪ್ರಮುಖ ಘಟಿಕಸ್ಥಾನವಾಗಿತ್ತು.[೫೫] ರಟ್ಕಲ್, ಮಿರ್‍ಯಾಣ, ಕೇಶಾವರ್(ಗಡಿ), ರುಮ್ಮನಗೂಡು, ಶಿರೋಳ್ಳಿ, ಮೋಘಾ ಇವುಗಳಲ್ಲಿ ಕೆಲವು ಘಟಿಕಸ್ಥಾನಗಳಾಗಿದ್ದವು. ಇಲ್ಲಿ ಉನ್ನತ ಶಿಕ್ಷಣ ನೀಡಲಾಗುತ್ತಿತ್ತು.[೫೬]

ಸ್ತ್ರೀ ವಿದ್ಯಾಭ್ಯಾಸ

ಕಲ್ಯಾಣ ಚಾಲುಕ್ಯರ ಜಗದೇಕಮಲ್ಲ ದೇವರ ವಿಶಾಳ ವೃಕ್ಷ ಸ್ಥಳ ನಿವಾಸಿ ಸುಗ್ಗಲದೇವಿ ರೂಪ ವಿದ್ಯಾಧರಿಯಾಗಿರುವುದರೊಂದಿಗೆ ಕಲಿಕಾಲ ಸರಸ್ವತಿ ಎಂದು ಶಾಸನ ವಿಶ್ಲೇಷಿಸಿದೆ. ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಪಟ್ಟ ಮಹಾದೇವಿ ಮೈಳಲ ಮಹಾದೇವಿ ಕಲಿಕಾ ಸರಸ್ವತಿ, ಸಾಹಸ ವಿದ್ಯಾಧರಿ, ಸಕಳ ಕಲಾವತಿ ಎನಿಸಿದ್ದಳು ಎಂದು ಶಾಸನಗಳು ಉಲ್ಲೇಖಿಸಿವೆ.[೫೭]

ಶಾಸನ ಕವಿಗಳು, ಭಾಷೆ, ಶೈಲಿ, ವಿಚಾರ

ಕವಿಗಳು–ಕ್ರಯದಾನವಾಗಿಕೊಂಡ ಕಾಲ್ಗರ್ಚಿ, ಕರ್ನಾಟಕ, ಸಂಸ್ಕೃತ, ಆಂಧ್ರ ಕವಿಯೆಂದು ಮತ್ತು ಕವಿರತ್ನ ಭೂಷಣನೆಂದು ವಿಷ್ಣುಭಟ್ಟರಿಗೆ ಕರೆಯಲಾಗಿದೆ (ರುದ್ರವಾಡಿ ಕ್ರಿ.ಶ. ೧೧೦೩). ಭುವನಗಿರಿಯ ಕವಿರತ್ನ ಭೂಷಣ ವಿಷ್ಣುಭಟ್ಟರ ಕಾವ್ಯ ಜಯಂತಿಪುರದ ಮನ್ನೆಯಕೆರೆ ಅಗ್ರಹಾರ ಮತ್ತು ಬ್ರಹ್ಮಪುರ ಎಂದು ಉಲ್ಲೇಖಿತವಾಗಿದೆ(ರುದ್ರವಾಡಿ ಕ್ರಿ.ಶ. ೧೧೦೩). ಚಿಂಚನಸೂರ ಕ್ರಿ.ಶ. ೧೩೦೨ರ ಶಾಸನ ಶಿಕ್ಷಣ, ವೇದಭ್ಯಾಸ ಮತ್ತು ಮಹಾಕಾವ್ಯಗಳ ಬಗ್ಗೆ ವಿವರಿಸುತ್ತದೆ. ಉಪಾಧ್ಯಾಯರಿಗೆ ಉತ್ತಮ ಸ್ಥಿತಿಯಲ್ಲಿದೆ. ಅಗ್ರಹಾರದಲ್ಲಿನ ವಿದ್ಯಾರ್ಥಿಗಳಿಗಾಗಿ ಭೂದಾನ ಬಿಟ್ಟ ವಿಷಯ ಉಲ್ಲೇಖಿಸುತ್ತದೆ (ಶಿರೋಳ್ಳಿ ಕ್ರಿ.ಶ. ೧೨ನೆಯ ಶತಮಾನ). ವಿದ್ಯಾದಾನಕ್ಕೆ ಮತ್ತರು ೩೦ ಬಿಟ್ಟ ಉಲ್ಲೇಖ(ಸರಡಗಿ ಕ್ರಿ.ಶ. ೧೦೧೧). ವಿದ್ಯಾ ದಾನಕ್ಕೆ ಮತ್ತರು ೩೦ ಬಿಟ್ಟ ವಿಷಯ ಕ್ರಿ.ಶ. ೧೦೧೧ರ ಸರಡಗಿ ಶಾಸನ ತಿಳಿಸುತ್ತದೆ. ಕಲ್ಯಾಣ ಚಾಲುಕ್ಯರ ಕಾಲಾವಧಿಯಿಂದ ಶೈಕ್ಷಣಿಕ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ದಾನಗಳಾಗಿರುವುದು ಕಂಡು ಬರುತ್ತದೆ. ಇದಕ್ಕಿಂತ ಮುಂಚಿನ ಶಾಸನಗಳು ದೇವಾಲಯಗಳಿಗೆ ನೀಡಿದ ದಾನ ಮತ್ತು ಧಾರ್ಮಿಕ ಕಾರ್ಯಗಳಿಗೆ, ರಾಜರ ಸೇವೆಗೆ ಹೆಚ್ಚಾಗಿ ದಾನ, ಉಂಬಳಿ ನೀಡುತ್ತಿದ್ದರು.

ಕ್ರಿ.ಶ. ೧೧೪೩ರ ಭೋಧನ ಶಾಸನದಲ್ಲಿ ವಾಶ್ರೀಧವ ಅವಧಾನ ನಿಧಾನ ಮಾಧವ ಕವಿ ಎಂದು ಉಲ್ಲೇಖವಿದೆ. ಕ್ರಿ.ಶ. ೧೧೪೬ ಹಂದರ್ಕಿ ಶಾಸನದಲ್ಲಿ ಬಾಚಲದೇವಿ ಅತ್ಯಾನಂದದಿ ಇತ್ತು ಶಾಸನಮಂ ಬರೆಯಸಿದಳ್ ಎಂಬ ಉಲ್ಲೇಖವಿದೆ. ಕುಣಲಂಗೇರಿಯ ಹಂಪ ಕವಿಯ ಮಹಾದೇಮಣ್ಣನ ಒಕ್ಕಣಿಕೆಯ ಧರ್ಮಕ್ಕೆ ಧಾರಾಪೂರ್ವಕ ಮಾಡಿ(ಕುಳಿಗೇರಿ ಕ್ರಿ.ಶ. ೧೧೦೫) ಎಂದು ಉಲ್ಲೇಖಿಸಿದೆ. ಕ್ರಿ.ಶ. ೧೩೮೦ ಅಂದೇಲಿ ಶಾಸನದಲ್ಲಿ, "ಈ ಶಾಸನಂ ಬರೆದಾತ ಬಿರಿಮಾಳ ರುದ್ರವಾಡಿಗೆಯ ಪ್ರಭುಗಿಂಪಾದ ಸುತಂ ಗುರುಚರಣಾಂಬೋಜ ಬೃಂಗಂ ಮಹಾಗಣಂಗಳ ಕುಮಾರ ರಾಮದೇವ ಇಳತಕ್ಕುದಾತ ಶ್ರೀ ಆನೆದೆಲೆಯ ಕಂಮಾರಿಕೆ ರಾಜನ ಮಗ ಭೋಜಯ್ಯನು" ಎಂದಿದೆ. ಬೋಧನದ ಮಾಧವ ರಚಿಸಿದ ಶಾಸನ ಚಂಪೂ ಕಾವ್ಯಗಳಂತಿದ್ದು ಅವರ ಶೈಲಿ ಪ್ರೌಢ್ಯವಾಗಿದೆ.[೫೮] 'ಶ್ರೀಮತ್ಕೈಳಾಸದಿನಖಿಳಾಮರ ಮಣಿ ಮುಕುಟ ಖಚಿತ ಚರಣಾಂಭೋಜಂ ಸೋಮೇಶ್ವರ ನವತರಿಸಿದ ನೀ ಮಹೀತರ ತಿಳಕಮನಿಪ್ಪಲನ್ದಾರ್ಪುರ್ದೊಳ್'(ಅಲಂದೆ ಶಾಸನ ಕ್ರಿ.ಶ.೧೦೮೨)ಅಲನ್ದಾಪುರ ವರ್ಣನೆಯಿದೆ.

ಕವಿಯ ಉಲ್ಲೇಖ

ಕ್ರಯ ದಾನವಾಗಿಕೊಂಡ ಕಾಲ್ಗರ್ಚಿ, ಕರ್ನಾಟಕ, ಸಂಸ್ಕೃತ, ಆಂಧ್ರ ಕವಿಯೆಂದು ಮತ್ತು ಕವಿರತ್ನ ಭೂಷಣನೆಂದು ವಿಷ್ಣುಭಟ್ಟರಿಗೆ ಕರೆಯಲಾಗಿದೆ(ರುದ್ರವಾಡಿ ಕ್ರಿ.ಶ. ೧೧೦೩). ಭುವನಗಿರಿಯ ಕವಿರತ್ನ ಭೂಷಣ ವಿಷ್ಣುಭಟ್ಟರ ಕಾವ್ಯ ಜಯಂತಿಪುರದ ಮನ್ನೆಯಕೆರೆ ಅಗ್ರಹಾರ ಮತ್ತು ಬ್ರಹ್ಮಪುರ ಎಂದು ಉಲ್ಲೇಖಿತವಾಗಿದೆ(ರುದ್ರವಾಡಿ ಕ್ರಿ.ಶ.೧೧೦೩). ಚಿಂಚನಸೂರ ಕ್ರಿ.ಶ. ೧೩೦೨ರ ಶಾಸನ ಶಿಕ್ಷಣ, ವೇದಭ್ಯಾಸ ಮತ್ತು ಮಹಾಕಾವ್ಯಗಳ ಬಗ್ಗೆ ವಿವರಿಸುತ್ತದೆ. ಉಪಾಧ್ಯಾಯರಿಗೆ

ಉತ್ತಮ ಸ್ಥಿತಿಯಲ್ಲಿದೆ. ಅಗ್ರಹಾರದಲ್ಲಿನ ವಿದ್ಯಾರ್ಥಿಗಳಿಗಾಗಿ ಭೂದಾನ ಬಿಟ್ಟ ವಿಷಯ ಉಲ್ಲೇಖಿಸುತ್ತದೆ (ಶಿರೋಳ್ಳಿ ಕ್ರಿ.ಶ.೧೨ನೆಯ ಶತಮಾನ).

ವಿದ್ವಾಂಸರು	ಧರ್ಮ	ಶಾಸನ	ಕಾಲ
ಜಗದ್ಗುರು ಕೇಶವ 'ದ್ವೇದಿ'	ವೈದಿಕ	ನಿಂಬರಗಿ	ಕ್ರಿ.ಶ. ೧೧೩೪
ಧುವೇಶ್ವರ ಪಣ್ಡಿತ	ವೈದಿಕ	ನಿಂಬರಗಿ	ಕ್ರಿ.ಶ. ೧೧೩೪
'ವಾಗ್ವಧೂ ಪ್ರೀಯ' ಶ್ರೀಮದಾಚಾರ್ಯ	ಶೈವ	ಹಂದರಕಿ	ಕ್ರಿ.ಶ. ೧೧೧೮
ಅಘೋರಶಕ್ತಿ ಪಂಡಿತ ಗಂಗರಾಸೀಜೀಯರು	ಶೈವ	ಮಣ್ಣೂರು	ಕ್ರಿ.ಶ. ೧೦೭೮
'ರಾಯರಾಜಗುರು' ವೀರ ಕೇದಾರದೇವ	ಶೈವ	ಚಿನಮಳ್ಳಿ	ಕ್ರಿ.ಶ. ೧೨೯೨
ರುದ್ರೇಶ್ವರ ಶಿವದೇವ ಯಾರೇಶ್ವರ ಪಂಡಿತದೇವ	ಶೈವ	ಹೊಡಲ	ಕ್ರಿ.ಶ. ೧೨೦೦
'ವಾದಿದೇವ'	ವೈದಿಕ	ಅಲಂದೆ	ಕ್ರಿ.ಶ. ೧೦೮೨

(ಕ.ಜಿ.ಶಿ.ಶಾ.೧೯೭೮. ಪು.ಸಂ-೪೫-೪೬).

ಶೈಕ್ಷಣಿಕ ವ್ಯವಸ್ಥೆಗೆ ನೀಡಿದ ದಾನದ ಉಲ್ಲೇಖ

'ಅರಲು ಮುನ್ನೂರ' ಹಂದರಕಿ (ಪಂದಿರ್ಕೆ) ಶಾಸನದಲ್ಲಿ (ಕ್ರಿ.ಶ. ೧೧೧೮) ಲೋಕರಸ ಮಂತ್ರಿ ಲೋಕೇಶ್ವರ ದೇವಾಲಯಕ್ಕೆ ಬಿಟ್ಟದತ್ತಿಯಲ್ಲಿ 'ಕಂನದಡವಕ್ಕರವೋದುವ ವಿದ್ಯಾರ್ಥಿ ಮಾಣಿಗಳಿಗೆ ವೋದಿಸುವ ಉಪಾಧ್ಯಾಯರ್ಗಂ' ಎಂದು ತಿಳಿಸಿದೆ.[೫೯] ಈ ಶಾಸನದಲ್ಲಿ 'ನೈಷ್ಠಿಕ ಮಠ'ದ ಉಲ್ಲೇಖವಿದೆ. ಕಾಳಾಮುಖ ನೈಷ್ಠಿಕ ಮಠದಾಚಾರ್ಯರು ಮಿನಿತುಮಂ ತಪೋದನಲಾಗವೇಳ್ಕಂ ಮಠದಾಚಾರ್ಯರು ಮಿನಿತುಮಂ ನಡೆಯಿಸುವರು(ಕ್ರಿ.ಶ. ೧೦೮೨) ಅಲಂದೆಯಲ್ಲಿ 'ಪಂಚಮಠ'ಗಳಿದ್ದ ಉಲ್ಲೇಖವಿದೆ.[೬೦] ಶಿರೋಳ್ಳಿ ಅಗ್ರಹಾರದಲ್ಲಿ ವಿದ್ಯಾರ್ಥಿಗಳಿಗಾಗಿ ಭೂದಾನ ಬಿಟ್ಟರು(ಶಿರೋಳ್ಳಿ ಕ್ರಿ.ಶ. ೧೨ನೆಯ ಶತಮಾನ). ತೋನಿಪಲ್ಲಿ ಅಗ್ರಹಾರ ಮಾಡಿ ಬ್ರಾಹ್ಮಣರಿಗೆ ದಾನಕೊಟ್ಟ ಉಲ್ಲೇಖವಿದೆ(ಪಸ್ತಾಪುರ ಕ್ರಿ.ಶ. ೧೧-೧೨ನೆಯ ಶತಮಾನ). ವಿದ್ಯಾದಾನಕ್ಕೆ ಮತ್ತರು ೩೦ ಬಿಟ್ಟ ಉಲ್ಲೇಖ(ಸರಡಗಿ ಕ್ರಿ.ಶ. ೧೦೧೧). ವಿದ್ಯಾ ದಾನಕ್ಕೆ ಮತ್ತರು ೩೦ ಬಿಟ್ಟ ವಿಷಯ ಕ್ರಿ.ಶ. ೧೦೧೧ರ ಸರಡಗಿ ಶಾಸನ ತಿಳಿಸುತ್ತದೆ. ಕಲ್ಯಾಣ ಚಾಲುಕ್ಯರ ಕಾಲಾವಧಿಯಿಂದ ಶೈಕ್ಷಣಿಕ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ದಾನಗಳಾಗಿರುವುದು ಕಂಡು ಬರುತ್ತದೆ. ಇದಕ್ಕಿಂತ ಮುಂಚಿನ ಶಾಸನಗಳು ದೇವಾಲಯಗಳಿಗೆ ನೀಡಿದ ದಾನ ಮತ್ತು ಧಾರ್ಮಿಕ ಕಾರ್ಯಗಳಿಗೆ, ರಾಜರ ಸೇವೆಗೆ ಹೆಚ್ಚಾಗಿ ದಾನ, ಉಂಬಳಿ ನೀಡುತ್ತಿದ್ದರು.

ಶಾಸನಗಳಲ್ಲಿ ವಾರದ ಉಲ್ಲೇಖ

ದೇಗಲ್ಮಡಿ ಶಾಸನದ ೧೨ನೆಯ ಸಾಲಿನಲ್ಲಿ ಆದಿತ್ಯವಾರ ಎಂದು ಉಲ್ಲೇಖಿತವಾಗಿದೆ. ನವಕೋಟ ನಾರಾಯಣ ಗುಡಿಯ ಶಾಸನದ ನಾಲ್ಕನೆಯ ಸಾಲಿನಲ್ಲಿ ಸೋಮವಾರ ಎಂದು ಉಲ್ಲೇಖಿಸಿದೆ. ನೀಡಗುಂದಿ ಕಾಳಮ್ಮನ ದೇವಾಲಯದಲ್ಲಿ ನಾಲ್ಕನೆಯ ಸಾಲಿನಲ್ಲಿ ಬೃಹಸ್ಪತಿ ವಾರ ಎಂದು ಉಲ್ಲೇಖಿಸಿದೆ. ಶಿರೋಳ್ಳಿ ೫೭ನೆಯ ಸಾಲು ಮತ್ತು ಮೋಘಾದ ೮೮ನೆಯ ಸಾಲು ಸೋಮವಾರ ಎಂಬುದನ್ನು ಉಲ್ಲೇಖಿಸಿದೆ. ಅಲ್ಲದೆ ವಿಕ್ರಮಶಕೆ ಉತ್ತರಾಯಣ ಸಂಕ್ರಮಣ ಬಹುಳದಮಾವಸ್ಯೆ, ಸೂರ್ಯಗ್ರಹಣದ ಬಗ್ಗೆ ಚಾಳುಕ್ಯ ವಿಕ್ರಮ ವರ್ಷವೆಂದು ಪರಾಭವ ಸಂವತ್ಸರ, ಆಷಾಢ ವಿಕ್ರಮ ಸಂವತ್ಸರ ನೃಪಕಾಳಾತೀತ ಸಂವತ್ಸರ, ವಿಕಾರಿ ಸಂವತ್ಸರ ಇತ್ಯಾದಿ ಶಾಸನಗಳಲ್ಲಿ ಉಲ್ಲೇಖವಾಗಿವೆ.

ಶಾಸನೋಕ್ತ ವಾರಗಳ ಸೂಚಿ

ವಾರಗಳು	ಶಾಸನ	ಪು.ಸಂ.	ಸಾಲುಗಳು	ಪ್ರಕಟಣೆ
ಆದಿವಾರ	ದೇಗಲ್ಮಡಿ ತಡಕಲ್-೧೧-೧೨ನೆಯ ಶತಮಾನ	- -೪೫	೧೨ನೆಯ ಸಾಲು ೧೧ನೆಯ ಸಾಲು	ಕ.ಜಿ.ಶಾ. ಹನುಮಾಕ್ಷಿ ಗೋಗಿ. ೧೯೯೬
ಸೋಮವಾರ	ಶ್ರೀನಿವಾಸ ಸರಡಗಿ ಕ್ರಿ.ಶ.೧೦೧೧	-೯೯	೦೮ನೆಯ ಸಾಲು	ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
ಮಂಗಳವಾರ	ಮಣೂರು ಕ್ರಿ.ಶ.೧೧೨೦	-೧೧೮-೧೧೯	-	ಹೈ.ಕ.ಭಾ.ಕ.ಶಿ.ಶಾ- ವ್ಹಿ.ಕೆ.ಶಿವಾನಂದ ೧೯೯೨.
ಬುಧುವಾರ	ಚಿಂಚನಸೂರು ಕ್ರಿ.ಶ.೧೩೦೨	-೧೭	೦೧ನೆಯ ಸಾಲು	ಗು.ಜಿ.ಇ ಮತ್ತು ಪು-ಸಂ. ಡಾ. ಆರ್. ಗೋಪಾಲ್
ಬೃಹಸ್ಪತಿವಾರ	ನಿಂಬರಗಿ ಕ್ರಿ.ಶ.೧೦೯೮	-೫೪	೦೭ನೆಯ ಸಾಲು	ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
ಸುಕ್ರವಾರ	ಪಡಸಾವಳಗಿ ಕಿ.ಶ.೧೧೧೦	-೬೦	೦೮ನೆಯ ಸಾಲು	ಕ.ಜಿ.ಶಾ. ಹನುಮಾಕ್ಷಿ ಗೋಗಿ ೧೯೯೬
ಬೃಹವಾರ?-	ಹರಸೂರು ಕ್ರಿ.ಶ.೧೦೯೭,	-೧೦೯	-೪೨ನೆಯ ಸಾಲು	ಕ.ಜಿ.ಶಾ. ಹನುಮಾಕ್ಷಿ ಗೋಗಿ, ೧೯೯೬
	ರುದ್ರವಾಡಿ ಕ್ರಿ.ಶ.೧೧೦೩	-೭೧	-೨೧ನೆಯ ಸಾಲು	
ವಡ್ಡವಾರ-	ಮತ್ತೂರು ಕ್ರಿ.ಶ.೧೧೨೪	-೧೨೭	-೨೬ನೆಯ ಸಾಲು	ಹೈ.ಕ.ಭಾ.ಕ.ಶಿ.ಶಾ- ವ್ಹಿ.ಕೆ.ಶಿವಾನಂದ -೧೯೯೨

ಕೊನೆ ಟಿಪ್ಪಣಿಗಳು

೧. ನಾಗಯ್ಯ.ಜೆ.ಎಂ., ನಾಗರಖಂಡ-೭೦, ಒಂದು ಅಧ್ಯಯನ, ಪು. ೧೫೪.

೨. ಪೂರ್ವೋಕ್ತ, ಪು. ೧೫೪

೩. ಚೆನ್ನಬಸವಯ್ಯ ಹಿರೇಮಠ, ಕುರುಗೋಡು ಸಿಂಧರು, ಪು. ೧೮೧.

೪. ಶಿವಾನಂದ.ವಿ., ಹೈ.ಕ.ಭಾ.ಶಿ.ಶಾ.೧೯೯೨, ಪು. ೪೦-೪೧.

೫. ಹನುಮಾಕ್ಷಿ ಗೋಗಿ-ಕಲಬುರ್ಗಿ ಜಿಲ್ಲೆಯ ಶಾಸನಗಳು ಪು. ೬೨.

೬. ಚೆನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕ ಸ್ತ್ರೀ ಸಮಾಜ, ಪು. ೨೪.

೭. ಹನುಮಾಕ್ಷಿ ಗೋಗಿ, ಕಲಬುರ್ಗಿ ಜಿಲ್ಲೆಯ ಶಾಸನಗಳು, ಪು. ೨೯.

೮. ಪೂರ್ವೋಕ್ತ, ಪು. ೩೭.

೯. ಶಿವಾನಂದ.ವಿ., ಹೈದ್ರಾಬಾದ್ ಕರ್ನಾಟಕದ ಶಿಲಾಶಾಸನಗಳು, ಪು. ೨೫೮.

೧೦. ಶಿವಾನಂದ.ವಿ., ಹೈ.ಕ.ಭಾ.ಶಿ.ಶಾ., ೧೯೯೨, ಪು. ೩೯-೪೦.

೧೧. ಪೂರ್ವೋಕ್ತ, ಪು. ೨೬೨.

೧೨. ಕೊಪ್ಪಾ.ಎಸ್.ಕೆ., ತರ್ದವಾಡಿ ನಾಡು ಒಂದು ಅಧ್ಯಯನ, ಪು. ೧೬೬.

೧೩. ಚೆನ್ನಬಸವಯ್ಯ ಹಿರೇಮಠ, ಕುರುಗೋಡು ಸಿಂಧರು, ಪು. ೧೯೧

೧೪. ಪೂರ್ವೋಕ್ತ, ಪು. ೧೯೧.

೧೫. ಶಿವಾನಂದ.ವಿ., ಹೈ.ಕ.ಭಾ.ಶಿ.ಶಾ., ೧೯೯೨, ಪು. ೨೩-೨೮.

೧೬. ಶಿವಾನಂದ.ವಿ., ಹೈ.ಕ.ಭಾ.ಶಿ.ಶಾ, ೧೯೯೨, ಪು. ೩೪-೩೫.

೧೭. ಪೂರ್ವೋಕ್ತ, ಪು. ೩೮.

೧೮. ಪೂರ್ವೋಕ್ತ, ಪು. ೩೫.

೧೯. ಕ.ಜಿ.ಶಾ., ೧೯೯೬, ಪು.೨೭

೨೦. ಹನುಮಾಕ್ಷಿ ಗೋಗಿ, ಕ.ಜಿ.ಶಾ., ೧೯೯೮, ಪು. ೨೮

೨೧. ಪಾಟೀಲ್.ಎಂ.ಬಿ.(ಸಂ), ಕ.ಸ.ಗೆ.ಕ.ಜಿ, ೧೯೯೭, ಪು. ೬೯೪

೨೨. ಶಿವಾನಂದ.ವಿ., ಹೈ.ಕ.ಭಾ.ಶಿ.ಶಾ, ೧೯೯೨, ಪು. ೩೮.

೨೩. ಪೂರ್ವೋಕ್ತ, ಪು. ೩೮.

೨೪. ಕ.ಜಿ.ಶಾ., ೧೯೯೬, ಪು. ೨೭.

೨೫. ಕ.ಜಿ.ಶಾ., ೧೯೯೬, ಪು. ೨೭

೨೬. ಪೂರ್ವೋಕ್ತ, ಪು. ೩೬-೩೭

೨೭. ಪೂರ್ವೋಕ್ತ, ಪು. ೩೬.

೨೮. ಗೋಪಾಲರಾವ್.ಎಚ್.ಎಸ್., ಕ್ರಿಶ. ೧೯೯೩, ಕಲ್ಯಾಣ ಚಾಲುಕ್ಯ ದೇವಾಲಯಗಳು, ಪು. ೧೧೬-೧೧೮,

೨೯. ಗೋಪಾಲರಾವ್.ಎಚ್.ಎಸ್., ಕ್ರಿಶ. ೧೯೯೩, ಕಲ್ಯಾಣ ಚಾಲುಕ್ಯ ದೇವಾಲಯಗಳು, ಪು. ೧೧೦.

೩೦. ಶಿವಾನಂದವಿ. ಹೈ.ಕ.ಭಾ.ಶಿ.ಶಾ., ೧೯೯೨, ಪು.ಸಂ. ಅಂದೇಲಿ ಕ್ರಿಶ. ೧೦೫೦, ಹುಣಸಿಹಡಗಲಿ ಕ್ರಿಶ. ೧೦೯೮.

೩೧. ಚಿದಾನಂದಮೂರ್ತಿ.ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೭೪.

೩೨. ಚೆನ್ನಬಸವಯ್ಯ ಹೀರೆಮಠ, ಕುರುಗೋಡು ಸಿಂಧರು, ಪು. ೨೪೬.

೩೩. ಹನುಮಾಕ್ಷಿ ಗೋಗಿ, ೧೯೯೬, ಕಲಬುರ್ಗಿ ಜಿಲ್ಲೆಯ ಶಾಸನಗಳು, ಪು. ೨೧.

೩೪. ಪಾಟೀಲ್.ಎಂ.ಬಿ., ಗುಲಬರ್ಗಾ ಜಿಲ್ಲೆಯ ಗ್ಯಾಸೆಟಿಯರ್, ಪು. ೭೨೪.

೩೫. ಚಿದಾನಂದಮೂರ್ತಿ.ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೧೭೯.

೩೬. ಪೂರ್ವೋಕ್ತ ಪು.ಸಂ.೧೮೨

೩೭. ಹನುಮಾಕ್ಷಿ ಗೋಗಿ, ೧೯೯೬, ಕಲಬುರ್ಗಿ ಜಿಲ್ಲೆಯ ಶಾಸನಗಳು ಪು. ೭೫.

೩೮. ಪೂರ್ವೋಕ್ತ, ಪು. ೭೮.

೩೯. ಚೆನ್ನಬಸವಯ್ಯ ಹೀರೆಮಠ, ಕುರುಗೋಡು, ಸಿಂಧರು, ಪು. ೨೪೮.

೪೦. ಪಾಟೀಲ್.ಎಂ.ಬಿ. ಗುಲಬರ್ಗಾ ಗೆಜೆಟಿಯರ್, ಪು. ೬೮೨.

೪೧. ಹೀರೆಮಠ.ಎಸ್.ಎಂ.ಸಾವಿರದ ಆಳಂದ-ಸಾಂಸ್ಕೃತಿಕ ಸಮೀಕ್ಷೆ, ಪು. ೧೫.

೪೨. ಪಾಟೀಲ್.ಎಂ.ಬಿ. ಗುಲಬರ್ಗಾ ಗೆಜೆಟಿಯರ್, ಪು. ೬೮೨.

೪೩. ಹೀರೆಮಠ.ಎಸ್.ಎಂ., ಸಾವಿರದ ಆಳಂದ-ಸಾಂಸ್ಕೃತಿಕ ಸಮೀಕ್ಷೆ, ಪು. ೪.

೪೪. ಹನುಮಾಕ್ಷಿ ಗೋಗಿ, ಕ.ಜಿ.ಶಾ., ೧೯೯೬, ಪು. ೨೪

೪೫. ಶಿವಾನಂದ.ವಿ., ಹೈ.ಕ.ಭಾ.ಶಿ.ಶಾ., ೧೯೯೨, ಪು. ೩೦-೩೨.

೪೬. ಶಿವಾನಂದ.ವಿ. ಕ.ಜಿ.ಶಿ.ಶಾ., ೧೯೭೮, ಪು. ೩೩

೪೭. ಪೂರ್ವೋಕ್ತ, ಪು. ೩೫-೩೬

೪೮. ಶಿವಾನಂದ.ವಿ., ಹೈ.ಕ.ಭಾ.ಶಿ.ಶಾ., ೧೯೯೨, ಪು. ೩೩-೩೪.

೪೯. ಶಿವಾನಂದ.ವಿ., ಕ.ಜಿ.ಶಿ.ಶಾ., ೧೯೭೮, ಪು. ೩೮.

೫೦. ಚೆನ್ನಬಸವಯ್ಯ ಹಿರೇಮಠ, ಕುರುಗೋಡು ಸಿಂಧರು, ಪು. ೨೪೯.

೫೧. ಪೂರ್ವೋಕ್ತ, ೧೯೯೨ ಪು. ೨೦.

೫೨. ಪೂರ್ವೋಕ್ತ, ಪು. ೨೦.

೫೩. ಗೋಪಾಲ್.ಆರ್., ಗು.ಜಿ.ಇ ಮತ್ತು ಪು-೨೦೦೭, ಪು. ೧೦೪ ಮತ್ತು ೧೦೫.

೫೪. ಹನುಮಾಕ್ಷಿ ಗೋಗಿ, ಕ.ಜಿ.ಶಾ., ೧೯೯೬, ಪು. ೨೩

೫೫. ಗೋಪಾಲ್.ಆರ್., ಗು.ಜಿ.ಇ ಮತ್ತು ಪು-೨೦೦೭, ಪು. ೩೦೧.

೫೬. ಶಿವಾನಂದ., ವಿ.ಕ.ಜಿ.ಶಿ.ಶಾ., ೧೯೭೮, ಪು. ೪೩.

೫೭. ಕೊಪ್ಪಾ.ಎಸ್.ಕೆ., ತರ್ದವಾಡಿ ನಾಡು ಒಂದು ಅಧ್ಯಯನ, ಪು. ೧೮೪.

೫೮. ಶಿವಾನಂದ., ವಿ.ಹೈ.ಕ.ಭಾ.ಶಿ.ಶಾ., ೧೯೯೨, ಪು. ೨೩-೨೮.

೫೯. ಶಿವಾನಂದ, ವಿ.ಕ.ಜಿ.ಶಿ.ಶಾ., ೧೯೭೮, ಪು. ೪೪.

೬೦. ಹನುಮಾಕ್ಷಿ ಗೋಗಿ, ಕ.ಜಿ.ಶಾ., ೧೯೯೬, ಪು. ೨೯.

◆◆◆

ಅಧ್ಯಾಯ : ಎಂಟು

ಸಮಾರೋಪ

ಅಧ್ಯಾಯ : ಎಂಟು

ಸಮಾರೋಪ

"ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಶಾಸನಗಳು ಮತ್ತು ದೇವಾಲಯಗಳು" ಎಂಬ ಶೀರ್ಷಿಕೆಯಡಿಯಲ್ಲಿ ಕ್ಷೇತ್ರಕಾರ್ಯ ಆರಂಭಿಸಿದಾಗ ಹಲವು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಹಲವು ಪ್ರದೇಶಗಳಲ್ಲಿ ವಿವಿಧ ರೀತಿಯ ಶಿಲ್ಪಗಳು ಮತ್ತು ದೇವಾಲಯಗಳನ್ನು ಹೊಸದಾಗಿ ನೋಡಲು ಕಂಡಿತು. ಗುಲ್ಬರ್ಗಾ ಜಿಲ್ಲೆಯ ಅಧ್ಯಯನಗಳು ಜೈನರ ಬಗ್ಗೆ, ಕಲ್ಯಾಣ ಚಾಲುಕ್ಯರ ಬಗ್ಗೆ, ಆಳಂದ ಶಾಸನಗಳ ಸಾಂಸ್ಕೃತಿಕ ಅಧ್ಯಯನಗಳ ಬಗ್ಗೆ ಮೂಡಿಬಂದಿವೆ. ಆಗ ನನಗೆ ಕಂಡು ಬಂದ ಅಂಶಗಳೆಂದರೆ ಈ ಭಾಗದಲ್ಲಿ ಅಧ್ಯಯನ ಮಾಡಿರುವುದು, ಚಿತಾಪೂರ, ಸೇಡಂ ಮತ್ತು ಗುಲಬರ್ಗಾದ ಕೆಲ ಭಾಗಗಳು ಮಾತ್ರ, ಈವರೆಗೆ ಕ್ಷೇತ್ರಕಾರ್ಯದ ಮೂಲಕ ಸಿಕ್ಕಂತಹ ಕುರುಹುಗಳನ್ನು ಇಡೀಯಾಗಿ ಕಲೆ ಹಾಕುವ ಕಾರ್ಯ (ಕೆಲಸ ಮಾಡದೆ ಇರುವ ತಾಲೂಕುಗಳ), ಇನ್ನೊಂದು ಕಲೆ ಹಾಕಿರುವ ದಾಖಲೆಗಳನ್ನು ಉಪಯೋಗಿಸಿ ಈ ಭಾಗದ ಇತಿಹಾಸ ಬರೆಯುವ ಕಾರ್ಯ ಮಾಡಬೇಕೆಂಬ ಆಶಯ ಬಂದಿತು. ಅದಕ್ಕೆ ನನಗೆ ಸ್ಫೂರ್ತಿದಾಯಕವಾಗುವ ಹಲವು ಶಾಸನಗಳು, ಸ್ಮಾರಕಗಳು ದೊರಕಿವೆ. ಈ ಮೂಲಕ ಒಂದು ಚಿಕ್ಕ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇನೆ. ಈ ಭಾಗದ ನಾಲ್ಕು ತಾಲೂಕುಗಳಾದ ಅಳಂದ, ಅಫ್ಜಲ್‌ಪುರ, ಕಲಬುರ್ಗಿ ಮತ್ತು ಚಿಂಚೋಳಿಯನ್ನು ಕ್ಷೇತ್ರಕಾರ್ಯಕ್ಕೆ ಸೀಮಿತಗೊಳಿಸಿದ್ದೇನೆ. ಇತಿಹಾಸ ಕಟ್ಟುವಲ್ಲಿ ಸು. ಕ್ರಿ.ಶ. ೮ನೆಯ ಶತಮಾನದಿಂದ ಕ್ರಿ.ಶ. ೧೩ನೆಯ ಶತಮಾನದವರೆಗೆ ನನ್ನ ಅಧ್ಯಯನ ವ್ಯಾಪ್ತಿಗೆ ಒಳಪಡಿಸಿದ್ದೇನೆ.

ಅಲ್ಲದೆ ಹಲವು ವಿದ್ವಾಂಸರ ಬಳಿ ನಾನು ತೆಗೆದುಕೊಂಡ ಮಹಾ ಪ್ರಬಂಧದ ಶೀರ್ಷಿಕೆ ಮತ್ತು ವಿಷಯ ಕುರಿತು ಚರ್ಚಿಸಿದಾಗ, ನನಗೆ ಅವರಿಂದ ಹಲವು ಸಲಹೆಗಳು ಬಂದವು. ಕ್ಷೇತ್ರಕಾರ್ಯದಿಂದ ಮತ್ತು ಶಾಸನಗಳ ವಿಷಯ ವಿಶ್ಲೇಷಣೆ ಯಥಾವತ್ತಾಗಿ ಹೇಳಿ. ಇದರಿಂದ ನಿಮ್ಮ ವಿಚಾರ ಸೇರಿಸಿದರೆ ಅದರ ವಾಸ್ತವಿಕತೆ ತಿಳಿಯಲು ಸಾಧ್ಯವಾಗುವುದಿಲ್ಲ. ಅಧ್ಯಯನಕ್ಕೆ ವಿವಿಧ್ಯೋನ್ಮುಖವಾಗಿ ಬಳಸಿಕೊಳ್ಳಲು ನಿಖರ ದಾಖಲೆ ಯಥಾವತ್ತಾಗಿ ಹೇಳಬೇಕು ಎಂದರು. ಇದರ ಮೂಲಕ್ಕೆ ದಕ್ಕೆ ಬರದ ಹಾಗೆ ವಿಶ್ಲೇಷಿಸಿ ಎಂದು ಹೇಳಿದ್ದರು. ಎರಡನೆಯದಾಗಿ,

ಯಥಾವತ್ತಾಗಿ ತಿಳಿಸಿದರೆ, ಏನು ಪ್ರಯೋಜನ? ಅದರಲ್ಲಿ ನೀವೇನು ಕಂಡುಕೊಂಡಿದ್ದಿರಿ ಎಂಬುವ ವಿಚಾರ ಇನ್ನೊಂದಾಗಿದೆ. ಇವೆಲ್ಲವುಗಳ ಅಧ್ಯಯನದಿಂದ ನಿಮ್ಮ ದೃಷ್ಟಿಕೋನ ಏನು ಎಂಬುದು ತಿಳಿಸಿ ಎಂದು ಮತ್ತೊಂದು ವಿಚಾರ ಬಂದಿತು. ಶಾಸನಗಳನ್ನು ಸರಳಿಕರಿಸಿ ಬರೆಯಬೇಕು ಎಂಬುದು ಇನ್ನೊಂದು ದೃಷ್ಟಿಕೋನದಲ್ಲಿ ವಿಚಾರಿಸಲಾಗಿದೆ. ಈ ಎಲ್ಲಾ ಅಂಶಗಳು ಒಟ್ಟಾರೆ ಒಂದು ಮಹಾಪ್ರಬಂಧದಲ್ಲಿ ಸೇರಿಸಲು ಸಾಧ್ಯವೇ ಎಂಬ ಸವಾಲು ಎದುರಾಯಿತು? ಇದನ್ನೆ ಚಾಲೆಂಜ್ ಆಗಿ ಸ್ವೀಕರಿಸಿ ಅವುಗಳನ್ನೆಲ್ಲಾ ಈ ಪ್ರಬಂಧದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿದ್ದೇನೆ. ಶಾಸನ, ದೇವಾಲಯ ಮತ್ತು ಐದನೆಯ ಅಧ್ಯಾಯದಲ್ಲಿ ನನ್ನ ದೃಷ್ಟಿಕೋನ ಮತ್ತು ಮೂಲ ದಾಖಲೆಗಳಿಂದ ಕಂಡುಕೊಂಡು ಮಹತ್ವದ ಅಂಶಗಳನ್ನು ಸೇರಿಸಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ಒಂದರಲ್ಲಿ, ಶಾಸನಗಳ ಹುಟ್ಟು ಮತ್ತು ಬೆಳವಣಿಗೆಯನ್ನು ವಿಶ್ಲೇಷಿಸಲಾಗಿದೆ. ಭಾರತದಲ್ಲಿ, ಕರ್ನಾಟಕದಲ್ಲಿ ಮತ್ತು ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದಲ್ಲಿ ಯಾವ ರೀತಿಯಾಗಿ ಬೆಳವಣಿಗೆ ಮತ್ತು ಅಧ್ಯಯನಗಳಾದವು ಎಂಬುದನ್ನು ವಿವರಿಸಲಾಗಿದೆ. ಗುಲಬರ್ಗಾದ ಪ್ರಾಚೀನತೆಯನ್ನು ಅದರ ಹೆಸರು ಬಂದ ವಿವರಣೆ ನೀಡಲಾಗಿದೆ. ಗುಲ್ಬರ್ಗಾ ಜಿಲ್ಲೆಯ ಸಾಂಸ್ಕೃತಿಕ ಮಹತ್ವ ವಿವರಿಸಲಾಗಿದೆ. ಪ್ರಸ್ತುತ ಅಧ್ಯಯನದ ಉದ್ದೇಶವೆಂದರೆ, ಅಲ್ಲಲ್ಲಿ ಚದುರಿ ಹೋಗಿರುವ ಆಕರಗಳನ್ನು ಒಟ್ಟುಗೂಡಿಸುವುದು, ಹಲವು ಅಪ್ರಕಟಿತ ಶಾಸನಗಳನ್ನು ಬೆಳಕಿಗೆ ತರುವುದು. ಇಲ್ಲಿ ಕ್ಷೇತ್ರಕಾರ್ಯದ ಮತ್ತು ಸಾಹಿತ್ಯ ದಾಖಲೆಗಳನ್ನು ಅಧ್ಯಯನದಲ್ಲಿ ತೊಡಗಿಸಿಕೊಳ್ಳಲಾಗಿದೆ. ಶಾಸನಪಠ್ಯ ಮತ್ತು ಸ್ಮಾರಕಗಳ ಅಧ್ಯಯನದಿಂದ ಈ ಭಾಗದ ಇತಿಹಾಸ ಕಟ್ಟುವ ಸಣ್ಣ ಪ್ರಯತ್ನ ಮಾಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಭೌಗೋಳಿಕತೆ, ಐತಿಹಾಸಿಕ ಹಿನ್ನೆಲೆಯನ್ನು ಅಭ್ಯಸಿಸಲಾಗಿದೆ. ತಾಲೂಕುವಾರು ಪ್ರದೇಶಗಳ ಐತಿಹಾಸಿಕತೆ ವಿವರಿಸಲಾಗಿದೆ. ಶಾಸನಗಳ ಹಿನ್ನೆಲೆಯಲ್ಲಿ ಅವುಗಳ ಮಹತ್ವ, ಪ್ರಾದೇಶಿಕ ಆಡಳಿತದ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡಲಾಗಿದೆ. ಶೈಕ್ಷಣಿಕ, ಧಾರ್ಮಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಬೆಳವಣಿಗೆಯನ್ನು ವಿವರಿಸಲಾಗಿದೆ. ಆರ್ಥಿಕ ವ್ಯವಸ್ಥೆ, ಸಾಮಾಜಿಕ ಸ್ಥರ ವಿನ್ಯಾಸಗಳ ಬಗ್ಗೆ ವಿವರಿಸಲಾಗಿದೆ. ರಾಜಕೀಯ ಇತಿಹಾಸದಲ್ಲಿ ಇಲ್ಲಿ ಆಳ್ವಿಕೆ ಮಾಡಿದ ಅರಸುಮನೆತನಗಳ ಹಿನ್ನೆಲೆ, ರಾಜರುಗಳ ಇತಿಹಾಸವನ್ನು ವಿವರಿಸಲಾಗಿದೆ. ಸಾಮಂತ ರಾಜರುಗಳಾದ ಶಿಲಾಹಾರರು, ಹೈಹಯರು, ಬಾಣರು ಆಳಿದ ವಿವರಣೆ ನೀಡಲಾಗಿದೆ. ಆಡಳಿತ ವ್ಯವಸ್ಥೆಯಲ್ಲಿ ಪ್ರಾಚೀನ ಆಡಳಿತ ಘಟಕಗಳ ಬಗ್ಗೆ ವಿವರಿಸಲಾಗಿದೆ. ಆಡಳಿತದಲ್ಲಿ ರಾಣಿಯರ ಪ್ರಭಾವವನ್ನು ತಿಳಿಸಲಾಗಿದೆ. ಕೇಂದ್ರಾಡಳಿತ, ಪ್ರಾಂತ್ಯಾಡಳಿತ ಮತ್ತು ಆಡಳಿತದಲ್ಲಿ ಮಹಾಜನರ ಪ್ರಭಾವವನ್ನು ವಿವರಿಸಲಾಗಿದೆ.

ದೇವಸ್ಥಾನ ಮತ್ತು ದೇವಾಲಯದ ಆಡಳಿತದ ಬಗ್ಗೆ ವಿವರಿಸಲಾಗಿದೆ. ದೇವಸ್ಥಾನದ ಆಚಾರ್ಯರು ಮತ್ತು ವಿದ್ವಾಂಸರ ಸೂಚಿ ನೀಡಲಾಗಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀ-

ಪುರುಷರ ಉಡುಗೆ, ತೊಡುಗೆ, ಆಭರಣಗಳ ಬಗ್ಗೆ ವಿವರಿಸಲಾಗಿದೆ. ಆಯುಧಗಳು, ಆಹಾರ ಪಾನೀಯಗಳ ಉಪಯೋಗ ತಿಳಿಸಲಾಗಿದೆ. ಶೈಕ್ಷಣಿಕ ಕೇಂದ್ರಗಳ ಬಗ್ಗೆ ವಿವರಸಲಾಗಿದೆ. ಕೃಷಿ, ವ್ಯಾಪಾರಿಗಳು, ನಾಣ್ಯಗಳು, ಬೆಳೆಗಳು ಮತ್ತು ಅಳತೆ ಮಾಪನಗಳ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಶಾಸನಗಳ ಪದ್ಯಗಳನ್ನು ವಿವರಿಸಲಾಗಿದೆ. ಲೇಖನಗಳಲ್ಲಿ ಬಂದಂತಹ ಶಾಸನಗಳ ಪದ್ಯಗಳನ್ನು ವಿವರಿಸಲಾಗಿದೆ. ಬೇರೆ ಬೇರೆಯ ಶಾಸನಗಳಲ್ಲದೇ, ಒಂದೇ ಶಾಸನದ ಪದ್ಯವನ್ನು ವಿವಿಧ ಕೃತಿಗಳಲ್ಲಿ ಬಂದಿರುವುದನ್ನು ಅಭ್ಯಸಿಸಿ ತಿಳಿಸಲಾಗಿದೆ. ಶಾಸನ ಪದ್ಯಗಳ ಕೆಲವು ವಿಶೇಷತೆಗಳನ್ನು ವಿವರಿಸಲಾಗಿದೆ. ಇಲ್ಲಿ ಪ್ರಾದೇಶಿಕವಾರು ಶಾಸನಗಳನ್ನು ವಿವರಿಸಲಾಗಿದೆ. ಶಾಸನ ವೈವಿಧ್ಯತೆಯಲ್ಲಿ ಹೆಚ್ಚಾಗಿ ದಾನಶಾಸನಗಳಿವೆ. ಗುಲಬರ್ಗಾದ ಶಾಸನ ಮಾತ್ರ ಧಾನ್ಯ, ಬೆಳೆಗಳ ಬೆಲೆ ನಿರ್ಧಾರದ ಬಗ್ಗೆ ವಿವರಿಸುತ್ತದೆ. ಉಳಿದವು ಶೈಕ್ಷಣಿಕ ಉದ್ದೇಶಕ್ಕಾಗಿ, ಧಾರ್ಮಿಕ ಉದ್ದೇಶಕ್ಕಾಗಿ, ಸಾರ್ವಜನಿಕ ಉದ್ದೇಶಕ್ಕಾಗಿ ದಾನ ಮತ್ತು ದತ್ತಿ ನೀಡಿರುವ ಶಾಸನಗಳಿವೆ.

ಅಧ್ಯಾಯ ನಾಲ್ಕರಲ್ಲಿ ದೇವಾಲಯಗಳ ಬಗ್ಗೆ ವಿಶ್ಲೇಷಿಸಲಾಗಿದೆ. ದೇವಾಲಯಗಳ ಅರ್ಥ, ದೇವಾಲಯಗಳ ಪ್ರಕಾರಗಳನ್ನು ವಿವರಿಸಲಾಗಿದೆ. ಭಿತ್ತಿ ಭಾಗ, ಅಧಿಷ್ಠಾನದ ಭಾಗ, ಕಪೋತ, ಭುವನೇಶ್ವರಿಗಳ ಅರ್ಥಗಳನ್ನು ವಿಶ್ಲೇಷಿಸಲಾಗಿದೆ. ದೇವಾಲಯಗಳಲ್ಲಿ ಪ್ರಸ್ತುತ ಐದು ಭಾಗಗಳಲ್ಲಿ ವಿಂಗಡಿಸಿ ವಿವರಿಸಲಾಗಿದೆ. ಶೈವ ದೇವಾಲಯಗಳು, ವೈಷ್ಣವ ದೇವಾಲಯಗಳು, ಜೈನ ದೇವಾಲಯಗಳು, ಶಾಕ್ತ್ಯ ದೇವಾಲಯಗಳು ಮತ್ತು ಇತರೆ ದೇವಾಲಯಗಳು ಎಂದಿವೆ. ಶೈವ ದೇವಾಲಯಗಳಲ್ಲಿ ಶಿವಲಿಂಗಗಳು, ಶಿವ–ಪಾರ್ವತಿಯರು, ನಂದಿ, ಗಣೇಶರ ವಿವರಣೆ ನೀಡಲಾಗಿದೆ. ವೈಷ್ಣವ ದೇವಾಲಯಗಳಲ್ಲಿ ವಿಷ್ಣುವಿನ ವಿವಿಧ ದೇವಾಲಯಗಳನ್ನು ಅಭ್ಯಸಿಸಲಾಗಿದೆ.

ಅಧ್ಯಾಯ ಐದರಲ್ಲಿ ಮೂರ್ತಿ ಶಿಲ್ಪಗಳನ್ನು ಅಭ್ಯಸಿಸಲಾಗಿದೆ. ಶೈವ, ವೈಷ್ಣವ, ಜೈನ, ಶಾಕ್ತ ಮತ್ತು ಇತರೆ ಮೂರ್ತಿ ಶಿಲ್ಪಗಳೆಂದು ಮೂರ್ತಿ ಶಿಲ್ಪಗಳ ವೈವಿಧ್ಯತೆಯಲ್ಲಿ ವಿಂಗಡಿಸಲಾಗಿದೆ. ಶೈವ ಮೂರ್ತಿಶಿಲ್ಪಗಳಲ್ಲಿ ನಂದಿ, ಶಿವ, ಶಿವಲಿಂಗ, ಪಾರ್ವತಿ, ಗಣೇಶನ ಶಿಲ್ಪಗಳನ್ನು ಅಭ್ಯಸಿಸಲಾಗಿದೆ. ವೈಷ್ಣವ ಮೂರ್ತಿ ಶಿಲ್ಪಗಳಲ್ಲಿ ವಿಷ್ಣುವಿನ ಅವತಾರಗಳ ಶಿಲ್ಪ, ಅನಂತಶಯನನ ಶಿಲ್ಪ, ಗರುಡ ಶಿಲ್ಪ, ಹನುಮಾನ್ ಶಿಲ್ಪ, ವೈಷ್ಣವ ದ್ವಾರ ಪಾಲಕರ ಶಿಲ್ಪ ಇವುಗಳ ಕುರಿತು ವಿವರಿಸಲಾಗಿದೆ. ಜೈನ ಶಿಲ್ಪಗಳಲ್ಲಿ ಜೈನ ಮೂತಿಗಳ ಬಗ್ಗೆ ಕುರಿತು ವಿವರಿಸಲಾಗಿದೆ. ಇಪ್ಪತ್ನಾಲ್ಕು ತೀರ್ಥಂಕರರಲ್ಲಿ ಪಾರ್ಶ್ವನಾಥ, ಮಹಾವೀರ, ಶಾಂತಿನಾಥ, ವೃಷಭನಾಥರ ಬಗ್ಗೆ ಸಿಕ್ಕಂತಹ ಶಿಲ್ಪ ಮೂರ್ತಿಗಳನ್ನು ವಿವರಿಸಲಾಗಿದೆ.

ಅಧ್ಯಾಯ ಆರರಲ್ಲಿ ರಾಜಕೀಯ ಮತ್ತು ಆಡಳಿತಾತ್ಮಕ ವಿವರಣೆಗಳಿವೆ. ರಾಜರು, ರಾಣಿಯರು, ಯುವರಾಜರು, ಸಾಮಂತರು, ಪ್ರಾಂತ್ಯಾಧಿಕಾರಿಗಳು ಮತ್ತು ಇತರೆ ಅಧಿಕಾರಿಗಳ ಬಗ್ಗೆ ಶಾಸನ, ದೇವಾಲಯಗಳನ್ನನುಲಕ್ಷಿಸಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ಏಳರಲ್ಲಿ ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಸಾಮಾಜಿಕ, ಧಾರ್ಮಿಕ, ಮತ್ತು ಸಾಂಸ್ಕೃತಿಕವಾಗಿ ಇತಿಹಾಸ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ದೇವಾಲಯಗಳ ಮತ್ತು ಮೂರ್ತಿ ಶಿಲ್ಪಗಳ ಮೂಲಕ ಸಾಮಾಜಿಕ, ಆರ್ಥಿಕ ಸ್ಥಿತಿಗತಿಯನ್ನು ಮತ್ತು ಧಾರ್ಮಿಕ ವ್ಯವಸ್ಥೆ ಕಟ್ಟಬಹುದು ಎಂಬ ಅಂಶಗಳನ್ನು ಕಂಡುಕೊಂಡು ವಿವರಿಸಲಾಗಿದೆ. ಇಲ್ಲಿನ ಕೃಷಿ, ವ್ಯಾಪಾರ, ನೀರಾವರಿ, ತೆರಿಗೆ ಮತ್ತು ನಾಣ್ಯ ಪದ್ಧತಿಯ ವಿವರಣೆ ನೀಡಲಾಗಿದೆ.

ಅಧ್ಯಾಯ ಎಂಟು ಸಮಾರೋಪವಾಗಿದ್ದು, ಇದರಲ್ಲಿ ಇಡೀ ಅಧ್ಯಾಯಗಳ ಸಾರವನ್ನು ಹೇಳಲಾಗಿದೆ. ಈ ಅಧ್ಯಯನಗಳಿಂದ ಕಂಡುಕೊಂಡಂತಹ ಫಲಿತಗಳನ್ನು ನೀಡಲಾಗಿದೆ. ಶಾಸನಗಳಿಂದ ಕಂಡುಕೊಂಡ ಫಲಿತಗಳು, ದೇವಾಲಯಗಳಿಂದ ಕಂಡುಕೊಂಡ ಫಲಿತಗಳು ಮತ್ತು ಮೂರ್ತಿ ಶಿಲ್ಪಗಳಿಂದ ಕಂಡುಕೊಂಡ ಫಲಿತಗಳನ್ನು ಪ್ರತ್ಯೇಕವಾಗಿ ವಿವರಿಸಲಾಗಿದೆ. ಅಧ್ಯಾಯದ ಕೊನೆಯಲ್ಲಿ ಮುಂದಿನ ಅಧ್ಯಾಯಗಳ ಸಾಧ್ಯತೆಗಳೇನು? ಎಂಬ ಅಂಶಗಳನ್ನು ವಿವರಿಸಲಾಗಿದೆ.

ಅನುಬಂಧದಲ್ಲಿ ಸಂಕ್ಷೇಪಗಳ ಸೂಚಿ, ಗುಲಬರ್ಗಾ ಜಿಲ್ಲೆಯ ನಕಾಶೆ ಮತ್ತು ಪ್ರಾಚೀನ ಆಡಳಿತ ವಿಭಾಗಗಳುಳ್ಳ ನಕಾಶೆ, ದೇವಾಲಯಗಳ ಸೂಚಿ, ದೇವಾಲಯಗಳ ರೇಖಾಚಿತ್ರಗಳು ಮತ್ತು ತಲನಕ್ಷೆಗಳ ಮಾದರಿಗಳು, ಕ್ಷೇತ್ರಕಾರ್ಯದಲ್ಲಿ ಸಂಶೋಧಿಸಿದ ಅಪ್ರಕಟಿತ ಶಾಸನಗಳ ಸೂಚಿ, ಅಪ್ರಕಟಿತ ಶಾಸನಗಳ ಪಾಠ, ವಿವಿಧ ಸಾಮ್ರಾಜ್ಯಗಳ ಕಾಲದ ಶಾಸನಗಳ ಸೂಚಿ, ಆಕರ ಗ್ರಂಥಗಳು ಮತ್ತು ಛಾಯಾಚಿತ್ರಗಳನ್ನು ನೀಡಲಾಗಿದೆ.

ಅಧ್ಯಯನದ ಫಲಿತಗಳು

ಅ. ಶಾಸನಗಳಲ್ಲಿ ಕಂಡುಕೊಂಡ ಸತ್ಯತೆಗಳು

- ಹೊಸದಾಗಿ ೨೦ ಶಾಸನಗಳನ್ನು ಶೋಧಿಸಲಾಗಿದೆ.
- ಮೂರು ಶಾಸನಗಳ ಪಾಠಗಳನ್ನು ನೀಡಲಾಗಿದೆ.
- ಶಾಸನಗಳನ್ನು ಅಭ್ಯಸಿಸಿ ಪಾಠಗಳನ್ನು ವಿವರಿಸುವ ಪ್ರಯತ್ನ ಮತ್ತು ಈ ಭಾಗದ ಶಾಸನ, ಸ್ಮಾರಕಗಲ್ಲು ಮತ್ತು ಮೂರ್ತಿಶಿಲ್ಪಗಳ ಇಡಿಯಾಗಿ ಕಟ್ಟಿಕೊಡುವ ಮೊದಲ ಪ್ರಯತ್ನ ಮಾಡಲಾಗಿದೆ.
- ಸೀಮೆಯನ್ನು ಗುರ್ತಿಸುವ ಒಂದು ಪದ್ಧತಿಗೆ ಸೀಮಾ ಪದ್ಧತಿ ಎಂದು ಕರೆಯುವರು ಎಂದು ನಿಂಬರ್ಗಾ ಶಾಸನದಿಂದ ಗುರ್ತಿಸಲಾಗಿದೆ.
- ಸೀಮೆಯ ಗಡಿ ತೋರಿಸುವುದನ್ನು ನಾವು ಗಡಿಗಲ್ಲು ಅಥವಾ ಬಾಂದ್‌ಗಲ್ಲು ಎಂದು ಕರೆಯುತ್ತೇವೆ. ಶಾಸನಗಳಲ್ಲಿ 'ಕವಿಲೆಯ ಕಲ್ಲು' ಎಂದು ಹರಸೂರು ಶಾಸನದಿಂದ ಗುರ್ತಿಸಲಾಗಿದೆ.

- ಗುಲಬರ್ಗಾ ಜಿಲ್ಲೆಯ ಉತ್ತರ ಭಾಗದ ಶಾಸನ, ದೇವಾಲಯ ಮೂರ್ತಿಶಿಲ್ಪಗಳನ್ನು ಮತ್ತು ವೀರಗಲ್ಲು, ಮಾಸ್ತಿಗಲ್ಲುಗಳ ಅಧ್ಯಯನದ ಮೂಲಕ ಈ ಭಾಗದ ಇತಿಹಾಸವನ್ನು ಕಟ್ಟುವ ಪ್ರಥಮ ಪ್ರಯತ್ನ ಮಾಡಲಾಗಿದೆ.
- ಜನರಲ್ಲಿ ಭೌಗೋಳಿಕ ಪ್ರೇಮವಿತ್ತು ಎನ್ನುವುದಕ್ಕೆ ಅವರ ಪ್ರದೇಶಗಳನ್ನು ಹೊಗಳಿರುವುದೇ ಸಾಕ್ಷಿಯಾಗಿದೆ. ಪ್ರಾದೇಶಿಕ ಪ್ರೇಮ ಹೆಚ್ಚಾಗಿತ್ತು ಎಂಬುದು ಗುರ್ತಿಸಲಾಗಿದೆ. ನಿಂಬರ್ಗಾ ಶಾಸನವನ್ನು ಅದಕ್ಕೆ ಉದಾಹರಿಸಬಹುದು.
- ಬಾಣವಂಶದ ಮಹಾಮಂಡಳೇಶ್ವರ ವೀರ ಗೋಂಕ ದೇವ ಸಿಂಹ(ಮೃಗ) ಬೇಟೆ ಮಾಡಿದ ಕಾರಣ 'ನಿಂದ ಪಿರಿಯ' ಎಂಬ ಬಿರುದು ಪಡೆದ ಬಗ್ಗೆ ಗುರ್ತಿಸಲಾಗಿದೆ.
- ಅಮೋಘವರ್ಷನ ಬಿರುದು ಮತ್ತು ಕೀರ್ತಿ ಹಿಮಾಲಯದಿಂದ ಗಂಗಾನದಿಯವರೆಗೆ ಹರಡಿತ್ತು ಎಂದು ಬಿಜ್ಜಲದೇವನ ಶಾಸನ(ಮೋಘಾ)ದಿಂದ ಗುರ್ತಿಸಲಾಗಿದೆ.
- ಚಾಲುಕ್ಯರನ್ನು ಸೋಲಿಸಿ ಕಲಚೂರ್ಯರು ಸಾಮ್ರಾಜ್ಯ ಸ್ಥಾಪಿಸಿದ ಬಗ್ಗೆ ಮೋಘಾ ಶಾಸನದಲ್ಲಿ ಗುರ್ತಿಸಲಾಗಿದೆ.
- ಶ್ರೀ ರಾಮ–ಸೀತೆ ಮತ್ತು ದಶಾನನ ಉಲ್ಲೇಖವನ್ನು ಹೊಡಲದ ದತ್ತಿ ಶಾಸನದಲ್ಲಿ ಗುರ್ತಿಸಲಾಗಿದೆ. ಶಾಸನಗಳಲ್ಲಿ ರಾಮಾಯಣದ ನಾಯಕರ ಮತ್ತು ಖಳನಾಯಕರ ಹೆಸರು ಗುರ್ತಿಸಿರುವುದು ಈ ಭಾಗದಲ್ಲಿ ಪ್ರಥಮ ಎನ್ನಬಹುದಾಗಿದೆ.
- ಮಹಾಮಂಡಳೇಶ್ವರ ವೀರರಾಮದೇವರಸರಿಗೆ ಮನ್ನೆಯ ಸಿಂಹಂ, ಮನ್ನೆಯ ಬಂಗಾರಂ ಎಂದು ಕರೆಯುತ್ತಿದ್ದರು.
- ಶಾಸನೋಕ್ತ ಬೆಳೆಗಳು, ನಾಣ್ಯಗಳು, ಗ್ರಾಮಗಳ ನಾಮಗಳನ್ನು ಈ ಭಾಗದಲ್ಲಿ ಮೊದಲ ಬಾರಿಗೆ ಒಂದೆಡೆ ಕಲೆಹಾಕುವ ಪ್ರಯತ್ನ ಮಾಡಲಾಗಿದೆ.
- ಪಾಶುಪತ ಶೈವ ಸ್ಥಾನಾಚಾರ್ಯ ಶಿವ ದೇವಾಲಯದಲ್ಲಿದ್ದರು ಎಂಬುದು ಚಿನಮಳ್ಳಿಯ ಶಾಸನದಿಂದ ತಿಳಿದುಬರುತ್ತದೆ. ನೈಷ್ಠಿಕ ಮಠದಾಚಾರ್ಯರಿರುವುದು ಈ ಪ್ರದೇಶಗಳಲ್ಲಿ ಕಾಳಾಮುಖ ಕೇಂದ್ರಗಳು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಹೆಚ್ಚಾಗಿ ಬೆಳೆದು ಬಂದಿರುವುದನ್ನು ಗುರ್ತಿಸಲಾಗಿದೆ. ಉದಾ–ತೋನಿಪಲ್ಲಿ, ಸುಲೇಪೇಟೆ, ಪಸ್ತಪೂರ ಆಳಂದ.
- ವ್ಯಾಪಾರಿ ಸೆಟ್ಟಿಯೊಬ್ಬ ಸತ್ತ ದಾಖಲೆ ನೀಡುವ (ಮರಣ ಶಾಸನ) ಜೀರಾ ಬಾವಿಯ ಕೇಶಾವರ್ (ಗಡಿ)ಯಲ್ಲಿ ದೊರಕಿರುವುದು ಶಾಸನಗಳ ವಿಶೇಷತೆಯನ್ನು ತೋರಿಸುತ್ತದೆ. ಏಕೆ ಆತನ ಮರಣದ ದಾಖಲೆ ಶಾಸನದಲ್ಲಿ ಕೆತ್ತಿಸಿರಬಹುದು ಎಂಬುದು ಕುತೂಹಲಕಾರಿಯಾಗಿದೆ. ಈವರೆಗಿನ ಶಾಸನಗಳ ಅಧ್ಯಯನದಲ್ಲಿ ಇದು ಮೊಟ್ಟಮೊದಲ ಶಾಸನವೆಂದು ಹೇಳಬಹುದು.

- ಧಾರ್ಮಿಕ ಸೂಕ್ಷ್ಮತೆ ಮತ್ತು ಸಾಮಾಜದ ದೃಷ್ಟಿಕೋನ, ಧಾರ್ಮಿಕ ಪ್ರಭಾವವಿರುವುದನ್ನು ಗುರ್ತಿಸಲಾಗಿದೆ. ಎಷ್ಟರಮಟ್ಟಿಗೆಯಿತ್ತು ಎಂದರೆ ದೇವಾಲಯ ನಾಶವಾಗಿದ್ದಕ್ಕೆ ಗಂಗರಾಸಿಜೀಯವರು ತಮ್ಮ ಪ್ರಾಣ ಬಿಟ್ಟರು. ಅಂದರೆ ಅವಮಾನ, ಅಪಮಾನ ಸಹಿಸುವುದಕ್ಕಿಂತಲೂ ಪ್ರಾಣ ಬಿಡುವುದು ಒಳ್ಳೆಯದು ಎಂಬ ಅಂಶ ತಿಳಿದು ಬರುತ್ತದೆ. ತನ್ನ ಆಡಳಿತದಲ್ಲಿ ನ್ಯಾಯಯುತತೆ ತೋರಿಸದೇ ಇರುವುದಕ್ಕೆ ಶಿಕ್ಷೆಯನ್ನು ತನಗೆ ತಾನೇ ನೀಡಿಕೊಂಡರು.
- ಶತಹರಿವಾಣದಲ್ಲಿ ಘೃತಪಾಯಸಂಗಳಿಂಸದಕ್ಷಿಣೆ–ಚಿನಮಳ್ಳಿ ಶಾಸನದಲ್ಲಿ ಪಾಯಸದ ಉಲ್ಲೇಖವಿರುವುದು ಗುರ್ತಿಸಲಾಗಿದೆ. ಆ ಕಾಲದಲ್ಲಿ ದಕ್ಷಿಣೆಯ ರೂಪದಲ್ಲಿ ಪಾಯಸ ಪಡೆದಿರುವುದು ವಿಶೇಷವೆನಿಸುತ್ತದೆ. ಇದೇ ಶಾಸನದಲ್ಲಿ ಚಿನ್ನದ ಹರಿವಾಣ ನೀಡಿದ ಉಲ್ಲೇಖವಿದೆ.
- ಚಿತಾಪೂರ ತಾಲೂಕಿನಲ್ಲಿ ಕಂಡುಬಂದ ಬೌದ್ಧ ಧರ್ಮದ ಬೆಳವಣಿಗೆ ಹೆಚ್ಚಾಗಿ ಇಲ್ಲಿ ಬೆಳವಣಿಗೆ ಕಂಡು ಬರದಿರುವುದು ಗುರುತಿಸಲಾಗಿದೆ.
- ಶಾಪಾಶಯಗಳ ಆಧಾರದ ಮೇಲೂ ಇತಿಹಾಸ ಬರೆಯಬಹುದು ಎಂಬುದು ಗುರ್ತಿಸಲಾಗಿದೆ.
- ಗಡಿರೇಖೆಯನ್ನು ತಿಳಿಸುವ ಅಪ್ರಕಟಿತ ಗಡಿಗಲ್ಲು ಶಾಸನಗಳು ಬೇಡಕ್‌ಪಲ್ಲಿ ಮತ್ತು ಖಣದಾಳದಲ್ಲಿ ಹೊಸದಾಗಿ ಗುರ್ತಿಸಲಾಗಿದೆ.
- ಕರ್ನಾಟಕದ ವೀರಗಲ್ಲುಗಳನ್ನು ಅಭ್ಯಸಿಸಿ ನೋಡಿದಾಗ ಈ ಭಾಗದ ವೀರಗಲ್ಲುಗಳು ನಿರಾಡಂಬರವಾಗಿರುವುದು ಕಂಡು ಬರುತ್ತದೆ. ಈ ಮೂಲಕ ಇಲ್ಲಿನ ಆರ್ಥಿಕ ಸ್ಥಿತಿಗತಿ ಪ್ರಾಚೀನ ಕಾಲದಿಂದಲೂ ಹಿಂದುಳಿದಿದೆ ಎಂಬುದು ಗುರ್ತಿಸಲಾಗಿದೆ.
- ಮಹಾದೇವ ಮತ್ತು ಕೇಶವ ದೇವರಿಗೆ ಮರ್ತೂರಿನಲ್ಲಿ ಧೂಪ, ಜಾಗಟೆ, ಭಜನೆ, ಶಂಖಪಾಳೆ ಮಾಡುವುದನ್ನು ಗುರ್ತಿಸಲಾಗಿದೆ. ಜಾಗಟೆ ಶಂಖಪಾಳೆ ಮೊದಲಿಗೆ ಜೈನರಲ್ಲಿ ಮಾಡುತ್ತಿದ್ದರು. ಇದು ಶೈವ ಮತ್ತು ವೈಷ್ಣವ ಧರ್ಮದಲ್ಲಿ ದೇವರ ಪೂಜೆಯಲ್ಲಿಯೂ ಬಳಸತೊಡಗಿದರು.
- ಒಂದೇ ರೀತಿಯ ಶಾಸನದ ಉಲ್ಲೇಖ ನಿಂಬರ್ಗಾದಲ್ಲಿ ಕ್ರಿ.ಶ. ೧೦೪೬ ಮತ್ತು ಕ್ರಿ.ಶ. ೧೦೫೫ರ ಶಾಸನಗಳಲ್ಲಿವೆ. ಕ್ರಿ.ಶ. ೧೦೪೬ರ ಶಾಸನ ೩೫ ಸಾಲುಗಳಿಂದ ಕೂಡಿದ್ದರೆ, ಕ್ರಿ.ಶ. ೧೦೫೫ರ ಶಾಸನ ೩೦ ಸಾಲುಗಳಿಂದ ಕೂಡಿವೆ. ಹೆಚ್ಚಿನ ಐದು ಸಾಲುಗಳಲ್ಲಿ ನೈಷ್ಠಿಕಾಚಾರ್ಯರ ಅನ್ವಯ, ಮರದಾಚಾರ್ಯರ್ ಎಂದು ಅಸ್ಪಷ್ಟವಾಗಿ ಉಲ್ಲೇಖಿಸಿದೆ. ಒಂದೇ ರೀತಿಯ ಶಾಸನ ಎರಡು ಬಾರಿ ಏಕೆ ಹೊರಡಿಸಲಾಯಿತು? ಅದೇ ಗ್ರಾಮದಲ್ಲೇಕೆ ಇಡಲಾಯಿತು? ಎಂಬ ಪ್ರಶ್ನೆ ಶಾಸನಗಳ ಪಠ್ಯ ವಿವರಿಸುವಾಗ ಉದ್ಭವಿಸುತ್ತದೆ. ಇಂತಹ ಪ್ರಶ್ನೆ ಹಾಕಿಕೊಂಡಾಗ ಅಧಿಕಾರಿಗಳ ಆದೇಶವಾಗಿತ್ತೇ? ಇದ್ದರೆ ಶಾಸನದಲ್ಲಿ ಅಂತಹ

ಅಧಿಕಾರಿಯ ವಿನಂತಿಯ ಮೇರೆಗೆ ಈ ಶಾಸನ ಕೊರೆಯಿಸಲಾಗಿದೆ ಎಂದು ಉಲ್ಲೇಖಿಸಲಾಗುತ್ತಿತ್ತು. ಆದರೆ ಇಂತಹ ಯಾವ ಅಂಶವು ಕಂಡುಬಂದಿಲ್ಲ. ಇದರ ಬಗ್ಗೆ ಹೆಚ್ಚಿನ ಅಧ್ಯಯನವಾಗಬೇಕಿದೆ.

- ಕ್ರಿ.ಶ. ೧೨ನೆಯ ಶತಮಾನದ ಮಡಿಹಾಳ ಶಾಸನ–ಡಾ.ಜಿ.ಎಸ್.ಶಿವರುದ್ರಪ್ಪನವರ ಸಂಪಾದಿತ ಕೃತಿ ಸಾಧನೆಯಲ್ಲಿ 'ದೇವರ ಕೇರಿಯ ಒಕ್ಕಲ ಆವಟ ಮಂತರಿಕೆ ತಿಪ್ಪೆಸುಂಕ ನಂದಾದೀವಿಗೆಗೆ' ಎಂದು ಉಲ್ಲೇಖಿಸಿದೆ. ಕೋಟಿಶಂಕರ ದೇವರಿಗೆ ಬಾವಿಜಲದ ತಡಾಗವನ್ನು ಶಿವಧರ್ಮದ ಉನ್ನತಿಯಾಯಿತು ಎಂದು ಸರ್ವೇಶ್ವರಾಚಾರ್ಯರು ಕಟ್ಟಿಸಿದರು. ಇನ್ನೊಂದು ಮಡಿಹಾಳ ಶಾಸನದಲ್ಲಿ ಹೊಲಕೇರಿಯ ಶಂಕರ ದೇವರಿಗೆ ದಾನಬಿಟ್ಟದ್ದು ತಿಳಿದು ಬರುವುದು. ಹನುಮಾಕ್ಷಿ ಗೋಗಿಯವರು ಪ್ರಕಟಿಸಿದ ಕಲಬುರ್ಗಿ ಜಿಲ್ಲೆಯ ಶಾಸನಗಳು ಕೃತಿಯಲ್ಲಿ ಎಲ್ಲಾ ವಿವರಣೆ ಒಂದೇ ತೆರನಾಗಿದ್ದು ಕೊನೆಯ ಸಾಲುಗಳಲ್ಲಿ 'ಗಾಣವಾಯಿಲೆಯಂ ಮತ್ತರಿಂಗೆ' ಎಂದು ಮತ್ತ ಉಳಿದದ್ದು ತ್ರುಟಿತ ಎಂದಿದೆ. ಆದರೆ ದೇವರ ಕೇರಿ ಎಂದರೆ ಯಾರು ಇರುವ ಸ್ಥಳ ಎಂಬ ಪ್ರಶ್ನೆ ಹಾಕಿಕೊಂಡಾಗ ದೇವದಾಸಿಯರ ಕೇರಿ? ಹೊಲಕೇರಿ? ಎಂಬ ಚರ್ಚಾತ್ಮಕ ಉತ್ತರ ದೊರೆಯುತ್ತದೆ.

- ಶಾಸನಗಳಲ್ಲಿ ಯಾದವರಿಗೆ 'ಯಾದವ ನಾರಾಯಣ ಪ್ರತಾಪ ಚಕ್ರವರ್ತಿ' ಎಂದು ಹೆಸರಿನಿಂದ ಉಲ್ಲೇಖಿಸಿರುವುದು ಕಂಡು ಬರುವುದು. ಹಿರೇಝುಳಕಿ ಶಾಸದಲ್ಲಿ 'ಶ್ರೀ ಕನ್ನರದೇವ ವಿಜರಜ್ಯ' ಮತ್ತು ಸಿಂಗಣ ದೇವರ ಹೆಸರನ್ನು ಹೊಡಲ ಶಾಸನದಲ್ಲಿ ಉಲ್ಲೇಖಿಸಿವೆ.

- ಹಿರೇಝುಳಕಿಗೆ ಪ್ರಾಚೀನ ಹೆಸರು ಮಾವಿನ ಜಳಕಿ ಎಂದಿತ್ತು. ವಿಸ ಪ್ರಹಾರಿ ಭೋಗೇಶ್ವರ ದೇವರು ಎಂಬ ಉಲ್ಲೇಖ ಶಾಸನದಲ್ಲಿದೆ. ವಿಷಪ್ರಹಾರ ತಡೆಯುವ ದೇವಾಲಯ ಎಂಬ ನಂಬಿಕೆ ಇಲ್ಲಿನ ಜನರಲ್ಲಿತ್ತು.

- ತಡಕಲ್ ಶಾಸನ ಕ್ರಿ.ಶ. ೧೧–೧೨ನೆಯ ಶತಮಾನದ್ದಾಗಿದೆ ಎಂದು ಶ್ರೀಮತಿ ಹನುಮಾಕ್ಷಿ ಗೋಗಿಯವರು ಉಲ್ಲೇಖಿಸಿದ್ದಾರೆ. ಕಲಬುರ್ಗಿ ಜಿಲ್ಲೆಯ ಶಾಸನಗಳು ಪುಟ ಸಂಖ್ಯೆ–೪೫೮ ೧ರಿಂದ ೫ನೆಯ ಸಾಲುಗಳಲ್ಲಿ 'ರಾಷ್ಟ್ರಕೂಟ ವಂಶ ಶ್ರೀರಮಣೀ ರಮಣ ನಾಗಲೇಂಧರೆಗೆಸೆದ, ಶ್ರೀರಮಣನೆನಪ ಕೃಷ್ಣ ಮಹೀರಮಣ ಬೆರಸಮೋಘವರ್ಷಂ ನೃಪಂ' ಎಂದು ಉಲ್ಲೇಖಿತವಾಗಿದೆ. ಅಮೋಘವರ್ಷ ನೃಪತುಂಗನು ಕ್ರಿ.ಶ. ೮೧೪ರಿಂದ ೮೭೮ರವರೆಗೆ ಆಳ್ವಿಕೆ ಮಾಡಿದ್ದನು. ಇಲ್ಲಿ ೧೧–೧೨ನೆಯ ಶತಮಾನವೆಂದು ಲಿಪಿ, ಭಾಷೆಯಿಂದ ಅಥವಾ ಕಲ್ಲಿನ ಬಳಕೆಯಿಂದ ಗುರ್ತಿಸಿರುವುದಾಗಿಯಾಗಲೀ ತಿಳಿಸಿಲ್ಲ. ಇದರಿಂದ ಶಾಸನವೇ ಆ ಕಾಲದ್ದಾಗಿದೆ ಎಂಬ ನಿರ್ಣಯ ಸ್ಪಷ್ಟಗೊಳ್ಳುತ್ತದೆ. ಆದರೆ ಶಾಸನ ಪಾಠ ಅಮೋಘವರ್ಷ ನೃಪತುಂಗನ ಬಗ್ಗೆ ವಿವರಿಸುತ್ತದೆ. ಇದು ಸಹ ಒಂದು ವಿಮರ್ಶಾತ್ಮಕವಾದ ವಿಷಯ

ಎಂಬುದು ಶಾಸನಗಳ ಅಧ್ಯಯನದಿಂದ ಗುರ್ತಿಸಲಾಗಿದೆ. ಇದು ರಾಷ್ಟ್ರಕೂಟರ ಶಾಸನವಾಗಿದೆ ಇಲ್ಲವೆ ಅದೇ ಶಾಸನವನ್ನು ಬೇರೆ ರಾಜರ ಕಾಲದಲ್ಲಿ ಮರು ಕೊರೆಯಿಸಲಾಗಿದೆಯೇ? ಎಂಬ ಪ್ರಶ್ನೆ ಮೂಡುತ್ತವೆ. ಒಂದುವೇಳೆ ಈ ಶಾಸನ ಕ್ರಿ.ಶ.೧೧-೧೨ನೆಯ ಶತಮಾನದ್ದಾಗಿದ್ದರೆ ಈ ಊಹೆ ಮತ್ತು ಪ್ರಶ್ನೆಗಳನ್ನು ಗುರ್ತಿಸಬಹುದಾಗಿದೆ. ಅವುಗಳೆಂದರೆ, ಇದು ಕೂಟ ಶಾಸನ ಎಂದು ತಿಳಿದರೆ, ಈ ಕೂಟ ಶಾಸನದಿಂದ ಯಾರಿಗೆ ಲಾಭವಾಗುತ್ತಿತ್ತು? ಏಕೆಂದರೆ ೧೧-೧೨ನೆಯ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರು ಆಳ್ವಿಕೆ ಮಾಡುತ್ತಿದ್ದರು. ನೃಪತುಂಗನ ಶಾಸನ ಹೊರಡಿಸುವ ಮೂಲಕ ಅವರಿಗೇನು ಲಾಭ? ಹೆಚ್ಚಾಗಿ ಕೂಟ ಶಾಸನಗಳು ತಾಮ್ರ ಪಟಗಳ ಶಾಸನಗಳಾಗಿವೆ. ಏಕೆಂದರೆ ಅಲ್ಲಿ ಆಸ್ತಿ ವಿಷಯ, ಸಂಪತ್ತಿನ ವಿಷಯ ಬರುವುದರಿಂದ ಕೂಟ ಶಾಸನಗಳು ಹೆಚ್ಚಾಗಿ ತಾಮ್ರ ಶಾಸನಗಳಲ್ಲಿ ಕಂಡು ಬರುತ್ತವೆ. ಆದರೆ ಇದು ಯಾವ ಆಸ್ತಿ ಮತ್ತು ಸಂಪತ್ತಿನ ಘೋಷಣಾ ಶಾಸನವಲ್ಲ. ಹಾಗಾದರೆ ಈ ಶಾಸನದಿಂದ ರಾಜಕೀಯ, ಆರ್ಥಿಕ, ಆಡಳಿತಾತ್ಮಕ ಲಾಭವಿತ್ತೇ? ಎಂಬುದನ್ನು ಚರ್ಚೆಗೊಳಪಡಿಸಬೇಕಾಗಿದೆ. ನಂತರದ ಸಾಲುಗಳು 'ಸ್ವಸ್ತಿ ಸಮಸ್ತ ಜಗನ್ಮಂಡೊಡಳಾನುಷ್ಠಾಣ ಪರಾಯಣ ವೀರ ನಾರಾಯಣನನುಕ್ರಿತಾಂಬರೀಶ ನೃಪನ ಹಿತಬಳ ಜಳಧಿ ಬಡವಾನಳ। ನಿಜಭುಜ ವಜ್ರಪಂಜರಾನ್ತಃಕ್ರಿತ ಸರಣಾಗತಾರಾತಿಲೋಕ। ಅಭಯಾವಲೋಕ ನಹಿತ ಹೃದಯ ನಿಶಾತ ಜೀವಿತರಾಜ್ಯ ಚಿನ್ತಾನುಬಣ್ನರೋಷ। ನವನ್ದ್ಯ ಕೋಪಾನಿಬೋದಯ ಪ್ರಕಾಸಿತ ಯದುಕುಳನರಪಾಳ ಕಮಳಷೆಣ್ಡ। ರಟ್ಟಮಾರ್ತಂಡ, ಮಹಾವರಾಹನಪ್ಪನುಪಮ 'ಶ್ರಿ ಅಮೋಘವರ್ಷ ದೇವರು ಮಾನ್ಯಖೇಡಪುರದಲ್ಲಿ ಸುಖದಿಂದ ರಾಜ್ಯವಾಳುತ್ತಿದ್ದರು' ಎಂದಿದೆ. ನಂತರ ಹಿರಿಯ ತಡಕಲ್ಲು ಬಳ್ಳೇಶ್ವರ ದೇವರಿಗೆ ದೇವರಂಗ ಭೋಗಕ್ಕೆ ಖಂಡಸ್ಪಟಿತ ಜೀರ್ಣೋದ್ಧಾರಕ್ಕೆ, ಗೀತವಾದ್ಯನ್ರತ್ಯಕ್ಕೆ, ಪೂಜಾರಿಗೆ, ಸ್ಥಾನಾಚರ್ಯರಿಗೆ ಸರ್ವನಮಸ್ಯವಾಗಿ ದಾನ ಬಿಟ್ಟ ವಿಷಯ ತಿಳಿಸುತ್ತದೆ. ರಾಜನ ಬಿರುದುಗಳು, ಮತ್ತು ದೇವಾಲಯದ ಹೆಸರು, ಏಕೆ ದಾನ ನೀಡಲಾಗಿದೆ ಎಂಬ ವಿಷಯ ಮಾತ್ರ ವಿವರಿಸಲಾಗಿದ್ದು ಯಾರು ನೀಡಿದರು? ಮತ್ತು ಯಾರ ಬಿನ್ನಪದಿಂದ ದಾನ ಮಾಡಲಾಯಿತು ಎಂಬ ವಿಷಯದ ಭಾಗ ತ್ರುಟಿತ ಎನ್ನಲಾಗಿದೆ.

- ಚಿಚನಸೂರು ಶಾಸನವನ್ನು ವಿ.ಶಿವಾನಂದರು, ಕ್ರಿ.ಶ. ೧೩೯೦ ಎಂದು, **ಶಕವರ್ಷ** ೧೩೧೨ ಉಗ್ರ ಸಂವತ್ಸರ, **ಸಂಗಪ್ಪನ** ಮಗ ಮಾಯಣ್ಣ ಶ್ರೀ **ಮಾಹೇಶ್ವರ** ದೇವರಿಗೆ **ದಂಡವೆತ್ತವನು ಮಾಡಿದ ಮಾಂನ್ಯಂ ಸ್ವದತ್ತಂ ಪರದತ್ತಂ,** ಓಂ ಖಡ್ಗ ಧಾರಿಣೇ ದೇವಹಿ ಬಲಿವಿತ್ಯಂ ತಿಸ್ಮರಯ್ಯೇ ವಿಶ್ವಂ ಶ್ರೀಶ್ರೀಶ್ರೀ ಎಂದು ಉಲ್ಲೇಖಿತವಾಗಿದೆ. ಆದರೆ ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವದ ಕೃತಿಯಲ್ಲಿ ಶ್ರೀಮತಿ ಹನುಮಾಕ್ಷಿ ಗೋಗಿಯವರು ಕ್ರಿ.ಶ. ೧೩೦೨ರ ಶಾಸನವೆಂದು, ಶಕವರ್ಷ ೧೩೦೨ರ **ಉದ್ರಿಸಂವತ್ಸರ** ಕಾರ್ತಿಕ ಬಹುಳ **ಏಕಾದಸಿ** ಬುಧುವಾರದಲು ಶ್ರೀಮತ್ಕೊರಲೂ ರಚಿಂನಗಯಿಕ **ಗಂಗಪನಮಗಮಾಯಂಣನು**

ಬ್ರಹೇಶ್ವರ ದೇವರಿಗೆ ದಂಡವತ್ತವನು ಮಾಡಿದ ಮಾ ಐದುನೂರು ಮಾತಾದತ್ತಂ ಪಿತಾದತ್ತಂ ರಾಜಾಖಡ್ಗ ಧಾರಿಣೋದೇವತಿ ಬಲಿ ಮಿತ್ಯಾಂತಿ ಸ್ಮರಂಕಿಂನೇನಶೇಷಯಃ ಮಂಗಳ ಮಹಾಶ್ರೀಶ್ರೀಶ್ರೀ ಎಂದು ಉಲ್ಲೇಖಿತವಾಗಿದೆ. ಅದೇ ದೇವಾಲಯದ ಕಂಬದ ಉಳಿದ ಮೂರು ಕಂಬದ ಶಾಸನಗಳನ್ನು ಉಲ್ಲೇಖಿಸಿದ್ದಾರೆ. ಆದರೆ ವಿ.ಶಿವಾನಂದರ ಪತ್ಯದಲ್ಲಿ ಇವುಗಳ ವಿವರಣೆಯಿಲ್ಲ. ಒಂದೇ ಶಾಸನ ಬಹಳಷ್ಟು ವ್ಯತ್ಯಾಸ ಹೊಂದಿರುವುದು ಸ್ಪಷ್ಟವಾಗಿದೆ. ಅದಕ್ಕಾಗಿ ನಾನು ಶಾಸನಗಳನ್ನು ಅವರು ಹೇಳಿರುವ ಪಾಠವನ್ನೇ ಯಥಾವತ್ತಾಗಿ ತಿಳಿಸುವುದರ ಮೂಲಕ ಅಲ್ಲಿಯ ವಿಶ್ಲೇಷಣೆಯಲ್ಲಿ ಬರುವ ವ್ಯತ್ಯಾಸ ಗುರ್ತಿಸುವ ಪ್ರಯತ್ನ ಮಾಡಿರುತ್ತೇನೆ ಮತ್ತು ಮುಂದಿನ ಅಧ್ಯಯನ ಮಾಡುವವರಿಗೆ ಸರಳೀಕರಿಸುವ ಪ್ರಯತ್ನವಿದಾಗಿದೆ.

- ಮಡಿಹಾಳದ ೧೩ನೆಯ ಶತಮಾನದ ಶಾಸನ ಮಠದ ಪರಿಸೂತ್ರಕ್ಕೆ ಬಿಟ್ಟ ದಾನದ ವಿವರ ನೀಡುವುದು. ಶಿಕ್ಷಣಕ್ಕೆ ಕಲಚೂರಿಗಳು ಪ್ರಾಧಾನ್ಯತೆ ನೀಡಿರುವುದು ಕಂಡು ಬರುತ್ತದೆ.
- ಕದಂಬರು, ಗಂಗರು ಬಾದಾಮಿ ಚಾಲುಕ್ಯರು ಕರ್ನಾಟಕದ ಬಾದಾಮಿ, ಐಹೊಳೆಯಿಂದ ತಲಕಾಡಿನವರೆಗೆ ಆಳ್ವಿಕೆ ಮಾಡಿರುವ ವಿಶ್ಲೇಷಣೆ ಕಂಡು ಬರುತ್ತದೆ. ಆದರೆ ಆ ಸಂದರ್ಭದಲ್ಲಿ ಕರ್ನಾಟಕದ ಉತ್ತರ ಭಾಗದ ಬೀದರ, ಗುಲಬರ್ಗಾ ಜಿಲ್ಲೆಯನ್ನು ಯಾರು ಆಳ್ವಿಕೆ ಮಾಡುತ್ತಿದ್ದರು? ಎಂಬ ಪ್ರಶ್ನೆ ಮುಂದಿನ ಅಧ್ಯಯನದ ಸಾಧ್ಯತೆಯೂ ಆಗಿದೆ ಮತ್ತು ಫಲಿತವೂ ಆಗಿದೆ.
- ಸು.ಕ್ರಿ.ಶ. ೩ನೆಯ ಶತಮಾನದಿಂದ ೭ನೆಯ ಶತಮಾನದ ಆರಂಭ ಕಾಲವನ್ನು ಪ್ರಥಮ ಬಾರಿಗೆ ಈ ಭಾಗವನ್ನು ರಾಜಕೀಯವಾಗಿ ಅಂಧಯುಗ ಎಂದು ಗುರ್ತಿಸುವ ಪ್ರಯತ್ನ ಮಾಡಿದ್ದೇನೆ. ಏಕೆಂದರೆ ಇಲ್ಲಿ ಯಾವುದೇ ರಾಜಕೀಯ ಚಟುವಟಿಕೆಗಳಾಗಿರುವ ಉಲ್ಲೇಖ ಈವರೆಗೂ ಗುರ್ತಿಸಿಲ್ಲ. ಚಿತ್ತಾಪುರದ ಭಾಗದಲ್ಲಿ ಮಾತ್ರ ಮೌರ್ಯರ ಮತ್ತು ಶಾತವಾಹನರ ಕಾಲದ ಅನೇಕ ಕುರುಹುಗಳು ದೊರಕಿವೆ. ಆದರೆ ಈ ಭಾಗದಲ್ಲಿ ಏಕೆ ದೊರೆತಿಲ್ಲ ಎಂಬ ಪ್ರಶ್ನೆ ನನ್ನಲ್ಲಿ ಮೂಡಿತು. ಅದಕ್ಕೆ ಕೆಲವು ಊಹೆಗಳನ್ನು ಹಾಕಿಕೊಂಡಿದ್ದೇನೆ. ಅವುಗಳೆಂದರೆ (೧) ಚಿತಾಪೂರದವರೆಗೆ ಆಳಿದ ಮೌರ್ಯರು ಮತ್ತು ಶಾತವಾಹನರು ಈ ಭಾಗವೇಕೆ ಆಳಲಿಲ್ಲ? ಆಳಿದರೂ ಇನ್ನೂ ಕುರುಹುಗಳೇಕೆ ದೊರಕಿಲ್ಲ?(೨) ಸ್ವತಂತ್ರವಾದ ಜನಪದ ಗುಂಪು ಇಲ್ಲಿದ್ದಿರಬಹುದು.-ಹರಸೂರಿನ ಕ್ರಿ.ಶ. ೧೧೯೭ರ ಶಾಸನದಲ್ಲಿ ವರಜಂಬೂ ದ್ವೀಪದ ಭರತವರ್ಷದ ಕುಂತಳ ಪ್ರದೇಶದ ಜನಪದದ ಅಳಂದೆ ಸಾಸಿರ ಎಂದು ಉಲ್ಲೇಖಿತವಿದೆ. (೩) ಅರಣ್ಯದಲ್ಲಿ ಬುಡಕಟ್ಟು ಜನಾಂಗ ವಾಸಿಸುತ್ತಿದ್ದಿರಬಹುದು. ಇದಕ್ಕೆ ಪುಷ್ಠಿ ನೀಡುವಂತೆ ಇಲ್ಲಿ ಚಂಚರು ಅಥವಾ ಚಂಚಲ ಗಡ್ಡೆಯರು ಎಂಬ ಬುಡಕಟ್ಟು ಜನಾಂಗವಿದ್ದು, ಅವರ ಹೆಸರಲ್ಲಿ ಈ ಭಾಗದಲ್ಲಿ ಹೆಚ್ಚು ಚಿಂಚೋಳಿ ಎಂಬ ನಾಮೋಲ್ಲೇಖಗಳು ದೊರಕುತ್ತವೆ. ಉದಾಹರಣೆಗೆ ಲಾಡ್ ಚಿಂಚೋಳಿ, ಚಿಂಚೋಳಿ, ಸೈಯದ್ ಚಿಂಚೋಳಿ,

ಬೇನು ಚಿಂಚೋಳಿ ಎಂದಿವೆ. ಈ ಸ್ಥಳನಾಮಗಳು ಚಂಚಲ–ಹಳ್ಳಿ, ಚಂಚರ ಹಳ್ಳಿ, ಚಿಂಚರ–ವಳ್ಳಿ, ಚಿಂಚೋಳಿಯಾಗಿರಬಹುದು. (೪) ಪ್ರಾಚೀನ ಕಾಲದಲ್ಲಿ ಇದು ಇನ್ನೂ ಜನವಸತಿ ಪ್ರದೇಶವಾಗಿರದೆ, ಕಾಡು ಪ್ರದೇಶವಾಗಿತ್ತು. ಏಕೆಂದರೆ ರಾಮಾಯಣದ ಕಾಲದಲ್ಲಿ ರಾಮನು ಖಾಂಡವ ವನದಿಂದ ದಕ್ಷಿಣದ ಅರಣ್ಯದ ಮೂಲಕ ಸೀತೆಯನ್ನರಸುತ್ತಾ ಶ್ರೀಲಂಕಾಕ್ಕೆ ಹೋದನು ಎನ್ನುವ ಹಲವು ಐತಿಹ್ಯಗಳಿವೆ. ಅಲ್ಲದೆ ಈ ಭಾಗದಲ್ಲಿ ದಟ್ಟವಾದ ಬೆಟ್ಟಗಳಿದ್ದವು. ಕ್ರಿಶ. ೧೧೭೦ರ ಮೋಘಾ ಶಾಸನದಲ್ಲಿ 'ಖಾಂಡವ ಮಂಡಳಾಧೀಶ ಬಾಣವಂಶದಲ್ಲಿ ಹುಟ್ಟಿದ ವೀರ ವೆಡಂಗ ಬಿಬ್ಬನಂಕಕಾರ' ಎಂದಿದೆ.

- ಚೋಳರ ಅರಸ ರಾಜಾದಿತ್ಯನ ಉಲ್ಲೇಖ ತಿಳಗೋಳ ಶಾಸನದಲ್ಲಿದೆ.

- ಕರ್ನಾಟಕ, ಸಂಸ್ಕೃತ ಮತ್ತು ಆಂಧ್ರ ಕವಿ ಎಂದು ಕೂರ್ಮ್ಮೆಯಿಂ ವಿಷ್ಣುಭಟ್ಟರಾಗಿದ್ದರು ಎಂದು ಗುರ್ತಿಸಲಾಗಿದೆ. ಕವಿರತ್ನ ಭೂಷಣಂದಲ್ಕರ್ಣಾಟಕ ಸಂಸ್ಕೃತಾಂದ್ರ ಕವಿ ಎಂದು ರುದ್ರವಾಡಿ ಶಾಸನದಲ್ಲಿದೆ. 'ಭುವನಗಿರಿಯ ಕವಿರತ್ನ ಭೂಷಣ ವಿಷ್ಣು ಭಟರ ಕಾವ್ಯ ಎಂದಿದೆ.

- ಶಿರೋಳ್ಳಿ ಶಾಸನ ಕಲ್ಯಾಣ ಚಾಲುಕ್ಯರ ವಂಶಾವಳಿ ಮತ್ತು ಅವರ ಸಾಧನೆಗಳ ಬಗ್ಗೆ ವಿವರಿಸುವ ಚಾರಿತ್ರಿಕ ಶಾಸನವೆಂದು ಗುರ್ತಿಸಲಾಗಿದೆ.

- ಶಾಸನಗಳ ಉಲ್ಲೇಖದಲ್ಲಿ ಬಾಡ ಎನ್ನುವುದು ಏನನ್ನು ಸೂಚಿಸುತ್ತದೆ ಎಂಬ ಪ್ರಶ್ನೆ ಬಂದಾಗ, ಬಾಡ ಬಿರಜವಾಡ, ಬಾಡಂ ರುದ್ರವಾಡಿ ಎಂದು ಶಾಸನಗಳಲ್ಲಿ ಊರ ಹೆಸರುಗಳಿಗಿಂತ ಮುಂಚೆ ಬಾಡ ಎನ್ನುವ ಪದ ಬಂದಿರುವುದು ನಾಡು ಎನ್ನುವ ಅರ್ಥದಲ್ಲಿರಬಹುದು, ಇನ್ನೊಂದು ಗೊಬ್ಬೂರದ ೧೨ನೆಯ ಶತಮಾನದ ಶಾಸನದಲ್ಲಿ ಬಾಡ ಸಂತೆ ಎಂದು ವಿವರಿಸಲಾಗಿದೆ. ಇದು ನಾಡ ಸಂತೆ ಅಥವಾ ಬಾಡ ಅಂದರೆ ಮಾಂಸದ ಸಂತೆ ಎಂಬ ಎರಡು ಅರ್ಥ ನೀಡುತ್ತದೆ. ಒಟ್ಟಿನಲ್ಲಿ ಬಾಡ ಎನ್ನುವ ಪದವನ್ನು ಶಾಸನಗಳ ಉಲ್ಲೇಖದಂತೆ ನಾಡು ಎಂದು ಅರ್ಥೈಸುವ ಪ್ರಯತ್ನ ಮಾಡಿದ್ದೇನೆ.

- ಶಾಸನಗಳಲ್ಲಿ ಕುಚಾಗ್ರಹಾರ ಮತ್ತು ಸರ್ವನಮಸ್ಯದಗ್ರಹಾರ ಎಂದು ಉಲ್ಲೇಖಿತವಾಗಿರುವುದು ಒಂದು ವಿಶೇಷವಾಗಿದೆ. ಅಗ್ರಹಾರ ಎಂದು ಸಾಮಾನ್ಯವಾಗಿ ಅಧ್ಯಯನ ಮಾಡಿರುವುದು ಕಂಡು ಬರುತ್ತದೆ. ಆದರೆ ಶಾಸನಗಳಲ್ಲಿ ವಿಶೇಷವಾಗಿ ಈ ಉಲ್ಲೇಖಗಳು ಅಗ್ರಹಾರಗಳಲ್ಲಿಯೂ ವಿವಿಧ ರೀತಿಯವುಗಳಾಗಿದ್ದವು ಎಂಬುದಕ್ಕೆ ಇವು ಉದಾಹರಣೆಯಾಗಿರುವುದು ಗಮನಾರ್ಹ. ಅಂದರೆ ಅಗ್ರಹಾರಗಳಿಗೂ ತೆರಿಗೆಗಳಿದ್ದು ಅವುಗಳಲ್ಲಿ ಸರ್ವನಮಸ್ಯದಗ್ರಹಾರ ಎಂದರೆ ತೆರಿಗೆ ರಹಿತ ಅಗ್ರಹಾರಗಳಿರುವುದು ಇಲ್ಲಿ ವಿವರಿಸುವ ಪ್ರಥಮ ಪ್ರಯತ್ನ ಮಾಡಲಾಗಿದೆ. ಹಂದರಿಕೆ ಕ್ರಿ.ಶ. ೧೧೯೯ರ ಶಾಸನದಲ್ಲಿ 'ಧರಾಂಗನಾ **ಕುಚಾಗ್ರಹಾರಮೆನಿಸಿರ್ದ** ಪಂದಿರ್ಕೆಯ

ಲೋಕೇಶ್ವರ ದೇವರ್ಗ್ಗೆ' ಎಂದು ಉಲ್ಲೇಖಿಸಲಾಗಿದೆ. ದೇವರ ಬ್ರಹ್ಮಪುರಿ ಎಂದು ಕ್ರಿ.ಶ. ೧೧೧೮ರ ರುದ್ರವಾಡಿಯ ಶಾಸನದಲ್ಲಿ ಉಲ್ಲೇಖವಾಗಿದೆ. ಬ್ರಹ್ಮಪುರಿಗಳು ಬ್ರಾಹ್ಮಣರು ವಾಸಿಸುವ ಸ್ಥಳಗಳು ಎಂದಾದ ಮೇಲೆ ದೇವರ ಬ್ರಹ್ಮಪುರಿಯಲ್ಲಿ ಎಂಥವರು ವಾಸಿಸುತ್ತಿದ್ದರು ಎಂಬ ಪ್ರಶ್ನೆ ಮೂಡುತ್ತದೆ. ದೇವರ ಕಾರ್ಯಗಳಿಗಾಗಿ ಮೀಸಲಿರುವ ಬ್ರಾಹ್ಮಣ ವರ್ಗದವರೇ ಅಥವಾ ಬ್ರಾಹ್ಮಣರಲ್ಲಿಯೇ ವಿಶೇಷ ಸ್ಥಾನ ಪಡೆದಿರುವವರು ವಾಸ ಮಾಡುವ ಸ್ಥಳವೇ ಎಂಬುದು ಸ್ಪಷ್ಟವಾಗಬೇಕಾಗಿದೆ.

- ಸಂಕ್ರಾಂತಿಯ ಉಲ್ಲೇಖ ಶಾಸನದಲ್ಲಿ ಉತ್ತರಾಯಣ ಸಂಕ್ರಾಂತಿ(ಕ್ರಿ.ಶ. ೧೧೦೦ರ ದೇಗಲ್ಮಡಿ ಶಾಸನ), ದಕ್ಷಿಣಾಯಣ ಸಂಕ್ರಾಂತಿ(ಕ್ರಿ.ಶ. ೧೧೬೭ಚಿನಮಳ್ಳಿ ಶಾಸನ) ಪುಷ್ಯ ಶುದ್ಧದಲ್ಲಿಯೇ ಉತ್ತರಾಯಣ ಸಂಕ್ರಾಂತಿ ಮಾಡುತ್ತಿದ್ದರು. ಸೂರ್ಯ ತನ್ನ ಗತಿಯನ್ನು ಎರಡು ಬಾರಿ ಬದಲಾಯಿಸುವುದನ್ನು ಉತ್ತರಾಯಣ ಮತ್ತು ದಕ್ಷಿಣಾಯಣ ಸಂಕ್ರಾಂತಿ ಎಂದು ಕರೆಯಲಾಗಿತ್ತು. ದಕ್ಷಿಣದಿಂದ ಉತ್ತರದ ಕಡೆ ಸೂರ್ಯನ ಪಥ ಚಲಿಸುವಿಕೆಯನ್ನು ಉತ್ತರಾಯಣ ಸಂಕ್ರಾಂತಿ ಎಂದು ಕರೆಯುವರು. (ಡಿಸೆಂಬರ್ ೨೧ರಿಂದ ಜೂನ್ ೨೦ರವರೆಗೆ) ಇಲ್ಲಿ ಹಗಲು ಜಾಸ್ತಿಯಿರುತ್ತದೆ. ಜನವರಿ ೧೪ರಂದು ಮಕರ ಸಂಕ್ರಾಂತಿ ಎಂಬ ಹಬ್ಬವನ್ನು ಆಚರಿಸಲಾಗುತ್ತಿದೆ.(ಜನವರಿ ೧೪ರಿಂದ-ಕರ್ಕ ಸಂಕ್ರಾಂತಿ ಜುಲೈ ೧೬ರವರೆಗೆ), ಉತ್ತರದಿಂದ ದಕ್ಷಿಣಕ್ಕೆ ಸೂರ್ಯನು ತನ್ನ ಪಥ ಬದಲಾಯಿಸಿ ಚಲಿಸುವುದನ್ನು ದಕ್ಷಿಣಾಯಣ ಸಂಕ್ರಾಂತಿ ಎಂದು ಕರೆಯುತ್ತಾರೆ. (ಜೂನ್ ೨೦-೨೧ರಿಂದ ಡಿಸೆಂಬರ್ ೨೦-೨೧ರವರೆಗೆ) ಇಲ್ಲಿ ರಾತ್ರಿ ಜಾಸ್ತಿಯಾಗಿರುತ್ತದೆ. ಸೂರ್ಯನ ಗತಿ ಬದಲಾಯಿಸುವ ಘಳಿಗೆಯನ್ನು ಪರಿಶುದ್ಧವೆಂದು ತಿಳಿದು ದಾನ, ಧರ್ಮ ಮಾಡುತ್ತಿದ್ದರು. ಆದರೆ ಎರಡು ಸಂಕ್ರಾಂತಿಯಲ್ಲದೇ ಮಾರ್ಗಶಿರದ ಶುದ್ಧಭಟ್ಟೆ ಯಾದಿತ್ಯವಾರದಂದು **ವ್ಯಕ್ಷಿತ ಸಂಕ್ರಮಣ** ವೆತೀಪಾತಮಾಗೆ ಎಂದು ಉಲ್ಲೇಖಿತವಾಗಿದೆ(ಕ್ರಿ.ಶ. ೧೧೨೬ರ ಕೆಲ್ಲೂರು ಶಾಸನ). ಇದನ್ನು ಏಕೆ ವ್ಯಕ್ಷಿತ ಸಂಕ್ರಮಣ ಎಂದು ಕರೆಯಲಾಗಿದೆ ಎಂಬುದು ವೀಶೇಷವೂ ಹೌದು ಮತ್ತು ಪ್ರಶ್ನೆಯೂ ಹೌದು. ಆ ದಿನ ಸೂರ್ಯನ ಗತಿಯಲ್ಲಿ ಯಾವ ರೀತಿಯ ಬದಲಾವಣೆಯಾಗುತ್ತದೆ ಎಂಬ ಪ್ರಶ್ನೆ ನಮಗೆದುರಾಗುತ್ತದೆ.

ಬ. ದೇವಾಲಯ ಮತ್ತು ಮೂರ್ತಿ ಶಿಲ್ಪಗಳಿಂದ ಕಂಡುಕೊಂಡ ಫಲಿತಗಳು

- ಧಾರ್ಮಿಕ ಉನ್ನತಿ ಮತ್ತು ಅವನತಿಯನ್ನು ಗುರ್ತಿಸಲಾಗಿದೆ. ಜೈನ ಧರ್ಮವು ಸು.ಕ್ರಿ.ಶ. ೮ನೆಯ ಶತಮಾನದಿಂದ ೧೦ನೆಯ ಶತಮಾನದವರೆಗೆಯಿತ್ತು. ನಂತರ ವೈಷ್ಣವ ಧರ್ಮವು ಸು. ೧೦ನೆಯ ಶತಮಾನದ ಆರಂಭದಲ್ಲಿ ಉನ್ನತಿ ಕಂಡಿತು. ಸು.ಕ್ರಿ.ಶ. ೧೧ನೆಯ ಶತಮಾನದಲ್ಲಿ ಶೈವ ಧರ್ಮದ ಏಳಿಗೆ ಮತ್ತು ಜೈನ ಮತ್ತು ವೈಷ್ಣವ ಧರ್ಮದ ಅವನತಿ ಹಂತ ಎಂದು ಗುರ್ತಿಸಲಾಗಿದೆ. ಅಂದರೆ ರಾಷ್ಟ್ರಕೂಟರ ಕಾಲದಲ್ಲಿ ಜೈನ ಮತ್ತು ವೈಷ್ಣವ ಧರ್ಮದ ಏಳಿಗೆಯಾದರೆ, ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಶೈವ, ಪಾಶುಪತ ಮತ್ತು ಕಾಳಾಮುಖರು ಏಳಿಗೆಯಾಗಿರುವುದು ದೃಢವಾಗುತ್ತದೆ.

* ಅಧ್ಯಯನದಲ್ಲಿ ಕಂಡುಕೊಂಡ ಪ್ರಕಾರ ಮದನಿಕೆಯರ ಶಿಲ್ಪ ಹೆಚ್ಚಾಗಿ ಕೃಷಿ ಮಹಿಳೆ, ಗೃಹಿಣಿಯರ ಸೌಂದರ್ಯ ಎತ್ತಿ ತೋರಿಸುವಂತೆ ಕೆತ್ತಲಾಗಿದೆ. ವೈಚಾರಿಕ ಹಿನ್ನೆಲೆಯಲ್ಲಿ ನೋಡಿದಾಗ ಆರ್ಥಿಕ ವರ್ಗದವರ ಅಲಂಕಾರಿಕ ಸೌಂದರ್ಯಕ್ಕಿಂತ ನಿರಾಡಂಬರ ಕೃಷಿ ಮಹಿಳೆಯರು, ಸಾಮಾನ್ಯ ಮಹಿಳೆಯರು ಉತ್ತಮ ಎನ್ನುವುದು ಪ್ರತಿಬಿಂಬಿಸುವಂತೆ ತೋರಿಸಿರುವುದನ್ನು ಪ್ರಥಮ ಬಾರಿಗೆ ಗುರ್ತಿಸಲಾಗಿದೆ. ಮಗುವನ್ನೆತ್ತಿಕೊಂಡು, ತೆನೆಯನ್ನು ತಲೆಯ ಮೇಲೆ ಹೊತ್ತುಕೊಂಡ ಶಿಲ್ಪ ಮತ್ತು ಮಾವಿನ ಗೊನೆ ಹಿಡಿದಿರುವ ಶಿಲ್ಪ ಇದಕ್ಕೆ ಪುಷ್ಠಿ ನೀಡುತ್ತವೆ.
* ಪ್ರಾಚೀನ ಕಾಲದಲ್ಲಿ ಮಹಿಳೆಯರು ಕೃಷಿಯಲ್ಲಿ ತೊಡಗಿದ್ದರು ಎಂಬುದನ್ನು ಮದನಿಕೆಯರ ಮತ್ತು ಮೂರ್ತಿ ಶಿಲ್ಪಗಳಿಂದ ನಿಖರವಾಗಿ ಗುರ್ತಿಸಲಾಗಿದೆ.
* ನಿರಾಂಧಾರ ದೇವಾಲಯಗಳು ಹೆಚ್ಚಾಗಿರುವುದು ಗುರ್ತಿಸಲಾಗಿದೆ.
* ಈ ಅಧ್ಯಯನದಲ್ಲಿ ಚತುಷ್ಕೂಟ ದೇವಾಲಯಗಳು ಬರದೆಯಿರುವುದು ಗುರುತಿಸಲಾಗಿದೆ.
* ನಾಗರಶೈಲಿಯ ಒಂದೇ ದೇವಾಲಯ ಮೋಘಾದಲ್ಲಿರುವುದು ಗುರ್ತಿಸಲಾಗಿದೆ.
* ಸು.೮-೯ನೆಯ ಶತಮಾನದಲ್ಲಿ ಕದಂಬ ನಾಗರಶೈಲಿಯ ಗಿಡ್ಡ ದೇವಾಲಯಗಳು ಚಿಂಚೋಳಿ ತಾಲೂಕಿನ ಭಾಗದಲ್ಲಿ ಗುರ್ತಿಸಲಾಗಿದೆ.
* ದೇವಾಲಯಗಳ ವಿವಿಧ ಸೇವಾವರ್ಗಗಳು ಮುಂದೆ ಸಮುದಾಯಗಳ ಹುಟ್ಟಿಗೆ ಮತ್ತು ಅವುಗಳು ಮುಂದೆ ಜಾತಿಗಳಾಗಿ ಗಟ್ಟಿಗೊಂಡಿರುವುದು ಪ್ರಥಮ ಬಾರಿಗೆ ಗುರ್ತಿಸುವ ಪ್ರಯತ್ನ ಮಾಡಲಾಗಿದೆ. ಹೇಗೆಂದರೆ ಹಳವರು, ಹೂ ಕಟ್ಟುವವರು-ಹೂಗಾರರ, ಭಜನೆ ಮಾಡುವವರು-ಹರಿಕಾರರು, ಶಂಖ ಊದುವವರು-ಶಂಖಪಾಳೆಯರು, ಹಾಡುವವರು ಮತ್ತು ನೃತ್ಯ ಮಾಡುವವರು-ಪಾತರದವರು ಎಂಬುವುದನ್ನು ಗುರ್ತಿಸಲಾಗಿದೆ. ರಾಜರ ಕಾಲದಲ್ಲಿ ನೃತ್ಯ ಮಾಡುವವರು, ಸಂಗೀತಗಾರರಿದ್ದರು. ಅದಕ್ಕಿಂತ ಮುಂಚೆ ಬುಡಕಟ್ಟು ಸಮುದಾಯದಲ್ಲಿ ನಟವರು ಎಂದು ಕರೆಸಿಕೊಳ್ಳುವ ಜನಾಂಗ ನಟಿಸಿ ಬದುಕುತ್ತಿದ್ದರು. ರಾಜರ ಆಸ್ಥಾನದ ನೃತ್ಯಗಾರ್ತಿಯರು ಅಥವಾ ರಾಜ ನರ್ತಕಿಯರು ಸಂಗೀತ ವಿದ್ವಾಂಸರು ಎಂದು ಕರೆಯುತ್ತಿದ್ದರು. ದೇವಾಲಯಗಳಲ್ಲಿ ಈ ವೃತ್ತಿ ಪ್ರವೃತ್ತಿಗಳಾಗಿ ಬೆಳೆದು ಸಮುದಾಯದ ಹುಟ್ಟಿಗೆ ಕಾರಣವಾಯಿತು. ವಂಶ ಪಾರಂಪರ್ಯವಾಗಿ ಬೆಳೆದು ಜಾತಿಗಳಾದವು. ಉದಾಹರಣೆಗೆ 'ಧೂಪ, ಜಾಗಟೆಯುಮಂ ಬಾಜಿಸುವ ಹರಿಕಾರರ್ಗ್ಗೆ ಮತ್ತರೆರಡುಯಿಪ್ಪೊತ್ತಿನ ಸಂಜೆಯೊಳ್ ದೇವರ್ಗ್ಗೆ ಸಂಖದಿಂ ಭೋಗಮಾರ್ಪ್ಪ ಸಂಖಪಾಳಂಗೆ ಕಮ್ಮವರುನೂರು' ಎಂದು ಮತ್ತು 'ಪೊಂಗೆಸೊಲಗೆವತ್ತ ತಂಬುಲಿಗರ್ಮ್ಮಾರಿದ ಯೆಲೆಯ' ಮತ್ತೂರು ೧೧೨೪ರ ಶಾಸನದಲ್ಲಿ ತಿಳಿಸಿರುವುದು ಸೇವಾವರ್ಗಗಳನ್ನು ಹೇಗೆ ಒಂದು ವೃತ್ತಿಯಾಗಿ ಮುಂದೆ ಅವುಗಳ

ಜಾತಿಯ ಸಂಕೋಲೆಯಲ್ಲಿ ಕಟ್ಟಿ ಬಿದ್ದವೆಂದು ಮತ್ತು ಬೆಳವಣಿಗೆ ಹೊಂದಿದವೆಂಬುದು ಸ್ಪಷ್ಟವಾಗುತ್ತದೆ.

- ಶಾಸನ ರಹಿತವಾಗಿ ಸ್ಮಾರಕಗಲ್ಲುಗಳು, ವೀರಗಲ್ಲು ಮತ್ತು ಮಾಸ್ತಿಗಲ್ಲು ಶಿಲ್ಪಗಳನ್ನು ಹೆಚ್ಚಾಗಿ ಓದು, ಬರಹ ಕಲಿಯದವರು ಮತ್ತು ಕಲಿಕೆಯ ಪ್ರಮಾಣ ಕಡಿಮೆ ಇರುವುದರಿಂದ ಎಂದು ಊಹಿಸಲಾಗಿದೆ. ಅದಕ್ಕಾಗಿ ಸಾರ್ವಜನಿಕರಿಗೆ ಅರ್ಥವಾಗುವಂತೆ ಶಿಲ್ಪಗಳಲ್ಲಿ ಕೆತ್ತನೆ ಮಾಡಿರುವ ಸಾಧ್ಯತೆಗಳಿವೆ. ಇಲ್ಲವೆ ಆ ಕಾಲದಲ್ಲಿ ಅದು ಸಾಮಾನ್ಯವಾಗಿದ್ದು ಹೆಚ್ಚಿನ ವಿಶೇಷತೆಯಿಲ್ಲ ಎನ್ನುವ ಕಾರಣದಿಂದ ಲಿಖಿತ ಶಾಸನ ಹೊರಡಿಸದೇ ಇರಬಹುದು.

- ಬೇಲೂರಿನ ಭೋಗಲಿಂಗೇಶ್ವರ ಗುಡಿಯ ನಾಟ್ಯ ಗಣೇಶನ ಎರಡು ದಂತಗಳಿವೆ ಮತ್ತು ಮೀಸೆಯ ಕೆತ್ತನೆಯಿದೆ. ನಿರಾಡಂಬರವಾಗಿದೆ. ಈ ರೀತಿಯ ಶಿಲ್ಪವನ್ನು ಪ್ರಥಮ ಬಾರಿಗೆ ಗುರ್ತಿಸಲಾಗಿದೆ.

- ಎತ್ತಾಪುರದ ಬಿಳಿ ಶಿಲೆಯಲ್ಲಿರುವ ನಗ್ನ ಮಹಿಳೆ ಕೈ ಮುಗಿದಿರುವ ಶಿಲ್ಪವಿದ್ದು ಇದನ್ನು ಕಲ್ಲಿನಿಂದ ಹೊಡೆದು ಪೂಜಿಸುವ ವಿಧಾನವಿದೆ. ಈ ರೀತಿಯ ಪೂಜಾ ಶೈಲಿ ಒಂದು ಸಾಮಾಜಿಕ ಸಂದೇಶ ನೀಡುವಂತಿದೆ. ಮಹಿಳೆಯರು ತಾಳ್ಮೆಯಿಂದಿಯಿರಬೇಕು. ಎಂತಹ ಸನ್ನಿವೇಶ ಬಂದರೂ ಸಮಾಜದಲ್ಲಿ ತಲೆ ಬಾಗಿ ಕೈ ಮುಗಿದು ನಡೆಯಬೇಕು ಎಂಬಂತೆ ತೋರುವ ಆಚರಣೆಯಿದೆ. ತಲೆಯಲ್ಲಿ ಕೂದಲಿಲ್ಲ, ಯಾವುದೇ ಆಭರಣಗಳು ಧರಿಸದಿರುವ ಮಹಿಳೆ ಶಿಲ್ಪ ಮಾಸ್ತಿ ಶಿಲ್ಪವಲ್ಲ, ಲಜ್ಜಾಗೌರಿಯೇ? ಲಜ್ಜಾಗೌರಿ ಶಿಲ್ಪದ ಕುಳಿತ ಭಂಗಿಗಳಿಗೂ ಈ ಶಿಲ್ಪದ ಕುಳಿತ ಭಂಗಿಗೂ ವ್ಯತ್ಯಾಸವಿದೆ. ಹಾಗಾದರೆ ಈ ಶಿಲ್ಪ ಒಂದು ವಿಧವೆಯ ಶಿಲ್ಪವೇ? ತಲೆಗೂದಲಿಲ್ಲ, ಆಭರಣಗಳು ಮತ್ತು ಮುತ್ತೈದೆಯರಿಗಿರಬೇಕಾದ ಯಾವುದೇ ಅಲಂಕರಣೆಯಿಲ್ಲದ ಶಿಲ್ಪವಿದಾಗಿದೆ. ಸು. ೭ನೆಯ ಶತಮಾನದ ಶಿಲ್ಪವಿದಾಗಿದೆ. ಇವಳು ಯಾವುದಾದರೂ ಅಹಿತ ಕೆಲಸ ಮಾಡಿದ್ದು ಆಕೆಗೆ ಕಲ್ಲಿನಿಂದ ಹೊಡೆದು ಶಿಕ್ಷಿಸಿರಬಹುದು. ನಂತರ ಸಮಾಜಕ್ಕೆ ಇದು ಒಂದು ರೀತಿಯ ಮಾದರಿಯಾಗಲೆಂದು ಅವಳ ಸ್ಮಾರಕವಿಟ್ಟು ಈ ರೀತಿ ಕಲ್ಲಿನಿಂದ ಹೊಡೆಯುವ ಪದ್ಧತಿ ಆಚರಿಸಿರಬಹುದು ಎಂಬ ಅಂಶಗಳನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

- ಸ್ಥಾನಾಚಾರ್ಯರಲ್ಲಿ ಇದುವರೆಗೂ ಸಾಮಾನ್ಯವಾಗಿ ಸಸ್ತ್ರೀಕ, ನಿಸ್ತ್ರೀಕ(ನೈಷ್ಠಿಕ) ಎಂಬೆರಡು ವಿಧಗಳನ್ನು ಗೋಪಾಲರಾವ್.ಎಚ್.ಎಸ್. ಕ್ರಿ.ಶ. ೧೯೯೩ ಕಲ್ಯಾಣ ಚಾಲುಕ್ಯ ದೇವಾಲಯಗಳು, ಪು.ಸಂ. ೯೨ಯಲ್ಲಿ ಪರಿಚಯಿಸಿದ್ದಾರೆ. ಆದರೆ ಪ್ರಥಮ ಬಾರಿಗೆ ಇಲ್ಲಿ ಮೂರನೆಯ ವಿಧವನ್ನು ಶಾಸನೋಕ್ತವಾಗಿ ವಿವರಿಸಿದ್ದೇನೆ. ಹುಣಸಿ ಹಡಗಲಿಯ ಕ್ರಿ.ಶ. ೧೧೯೯ರ ಶಾಸನದಲ್ಲಿ **'ನೈಷ್ಠಿಕ'** ತಪೋಧನರು ಎಂದು ಜೈನ ಧರ್ಮದಾಚಾರ್ಯರನ್ನು ಉಲ್ಲೇಖಿಸಿದೆ. ಈ ಶಾಸನದಲ್ಲಿ 'ಗುರು ಕುಲಂ ಶ್ರೀಮೂಲ ಸಂಘದ ದೇಸಿಗ ಗಣದ ಪುಸ್ತಕ ಗುಚ್ಛದ ಪಿರಿಯ ಸಮುದಾಯಂ ಶ್ರೀ ಬಾಲಚಂದ್ರ ಸಿದ್ಧಾಂತ ದೇವರ ಶಿಷ್ಯ ಪ್ರಶಿಷ್ಯ ಸಂತತಿಯ

ಸೈಷ್ಟಿಕ ತಪೋಧನರಿದ್ದೀ ದರ್ಮಮಂ ಯತ್ನದಿಂ ಪ್ರತಿಪಾಲಿಸುವಂತಾಗಿ ರಕ್ಕಸಯ ನಾಯಕಕೋಟ್ಟರ್' ಎಂದು ಉಲ್ಲೇಖವಿದೆ.

- ದಂಡವತ್ತವನ್ನು ಮಾಡಿದ ಮ್ಯಾನ್ಯಂ ಎಂದು ಚಿಂಚನಸೂರಿನ ಕ್ರಿ.ಶ. ೧೫೩೦ರ ಶಾಸನದಲ್ಲಿ ದೇವಾಲಯದ ದಾನದ ಶಾಸನದಲ್ಲಿದೆ. ಇದು ಒಂದು ರೀತಿಯ ವಿಶೇಷತೆಯನ್ನು ಹೊಂದಿರುವುದು ಗಮನಾರ್ಹವಾಗಿದೆ. ದಂಡವಿಲ್ಲದ್ದೇ ಆಗಿರಬಹುದು.

- ದೇವಾಲಯಗಳ ವಾಸ್ತುವನ್ನು ಅಧ್ಯಯನ ಮಾಡಿದಾಗ ಅದರ ಮೂಲಸ್ಥಾನದ ಬಗ್ಗೆ ವಿವರಣೆ ನೀಡುವುದು ಬಹಳ ವಿರಳ. ಅದರಲ್ಲಿ ಊಹೆಗಳು ಹೆಚ್ಚಾಗಿವೆ. 'ಅಂತು ಶ್ರೀ ಮಲ್ಲಿಕಾರ್ಜುನ ದೇವರುಮಂ ಶ್ರೀ ಕೇಶವ ದೇವರುಮನಾ ಮೂಲಸ್ಥಾನ ದಿಕ್ಕೆಲದೊಳಂ ಪ್ರತಿಷ್ಠೆಯ ಮಾಡಿದನದೆಂತೆನೆ. ಮೂಲಸ್ಥಾನಂ ಧರ್ಮದ ಮೂಲಸ್ಥಾನವೆನಿಸಿತು. ಪೂರ್ವಾಭಿಮುಖಂ ಶ್ರೀಲಲನೇಶ್ವ(ರ) ಗೃಹಂ ಮಹಿಮಾಲಂಬಂ ದಕ್ಷಿಣಾಭಿಮುಖ ಮೆನಲೆಸಗುಂ. ಭಾವಿಪಡೆ ಮಲ್ಲಿಕಾರ್ಜುನ ದೇವಾಲಯಮೆಸಗುಮುತ್ತರಾಭಿಮುಖಂ ಶೋಭಾವಹ ಸದಮಾಶ್ರಿತ ಕೂಟ ವಿಳಾವಿಖ್ಯಾತಂ ತ್ರಿಕೂಟನಗದವೊಲೆಸಗುಂ'.

ಕ. ಅಧ್ಯಯನದ ಸಾಧ್ಯತೆಗಳು

- ಮೌರ್ಯರ, ಶಾತವಾಹನರ ಕಾಲದ ಮಧ್ಯ ಕ್ರಿ.ಪೂ. ೨ನೆಯ ಶತಮಾನದಿಂದ ಕ್ರಿ.ಶ. ೧ನೆಯ ಶತಮಾನದವರೆಗೆ ಗುಲಬರ್ಗಾ ಭಾಗದಲ್ಲಿ ಯಾವ ದೊರೆಗಳು ಆಳಿದರು ಎಂಬುದು ಅಭ್ಯಸಿಸಬಹುದಾಗಿದೆ.

- ಸು.ಕ್ರಿ.ಶ. ೩ನೆಯ ಶತಮಾನದಿಂದ ಸು.ಕ್ರಿ.ಶ. ೭ನೆಯ ಶತಮಾನದವರೆಗೆ ಇಲ್ಲಿ ಆಳ್ವಿಕೆಯ ಇತಿಹಾಸ ತಿಳಿಸುವ ಪ್ರಯತ್ನವಾಗಬೇಕಿದೆ.

- ದೇವಾಲಯಗಳ ಧಾರ್ಮಿಕತೆ ಹೆಸರಲ್ಲಿ ದೇವದಾಸಿ ಪದ್ಧತಿಯ ಬೆಳವಣಿಗೆ ಮತ್ತು ಸೂಳೆಗಾರಿಕೆಯ ಬೆಳವಣಿಗೆ ಕುರಿತು ಅಭ್ಯಸಿಸುವ ಸಾಧ್ಯತೆಯಿದೆ.

- ದೇವಾಲಯ ಮತ್ತು ಮೂರ್ತಿಶಿಲ್ಪಗಳು ಆಧುನಿಕ ಯುಗದ ಮೇಲೆ ಯಾವ ರೀತಿ ಪ್ರಭಾವ ಬೀರಿವೆ. ಮೂರ್ತಿಶಿಲ್ಪಗಳ ಆಭರಣ, ಕೂದಲಿನ ವಿನ್ಯಾಸ, ಉಡುಗೆ–ತೊಡುಗೆಗಳು ಪ್ರಸ್ತುತ ಫ್ಯಾಶನ್ ಯುಗದ ಮೇಲೆಯೂ ಪ್ರಭಾವ ಬೀರಿರುವ ಅಂಶಗಳನ್ನು ನಾವು ಕಾಣಬಹುದಾಗಿದೆ. ಈ ರೀತಿಯ ನಾವು ಅಧ್ಯಯನ ಕೈಗೊಳ್ಳಬಹುದಾಗಿದೆ.

- ವೀರಗಲ್ಲುಗಳು, ಮಾಸ್ತಿಗಲ್ಲುಗಳು ಏಕೆ ಶಾಸನ ರಹಿತವಾಗಿ ಇಲ್ಲಿ ಹೆಚ್ಚಾಗಿ ಕೆತ್ತಲ್ಪಟ್ಟವು? ಎಂಬುದು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಬಹುದಾಗಿದೆ.

◆◆◆


ಅನುಬಂಧಗಳು

೧. ಸಂಕ್ಷೇಪಗಳ ಸೂಚಿ


ಎ.ಆ.ಹಿ.ಐ.	– ಎಲಿಮೆಂಟ್ಸ್ ಆಫ್ ಹಿಂದೂ ಐಕೊನೋಗ್ರಾಫಿ
ಸ.ಹಿ.ಪ್ರಾ.ಶಾಲೆ	– ಸರಕಾರಿ ಹಿರಿಯ ಪ್ರಾಥಮಿಕ ಶಾಲೆ
ಕ.ವಿ.	– ಕರ್ನಾಟಕದ ವೀರಗಲ್ಲುಗಳು
********	– ಶಾಸನಗಳ ಅಕ್ಷರಗಳು ಅಳಿಸಿ ಹೊಗಿವೆ ಎಂದರ್ಥ
ಕ.ಸ.ಗೆ.ಕ.ಜಿ	– ಕರ್ನಾಟಕ ಸರ್ಕಾರ ರಾಜ್ಯ ಗೆಜೆಟಿಯರ್ ಕಲಬುರ್ಗಿ ಜಿಲ್ಲೆ
ಕ.ಜಿ.ಶಾ	– ಕಲಬುರ್ಗಿ ಜಿಲ್ಲೆಯ ಶಾಸನಗಳು
ಹೈ.ಕ.ಭಾ.ಶಿ.ಶಾ	– ಹೈದ್ರಾಬಾದ್ ಕರ್ನಾಟಕ ಭಾಗದ ಶಿಲಾ ಶಾಸನಗಳು
ಗು.ಜಿ.ಇ ಮತ್ತು ಪು.	– ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ
ಕ.ದೇ.ಕೋ.ಕ.ಜಿ	– ಕರ್ನಾಟಕ ದೇವಾಲಯಗಳ ಕೋಶ ಕಲಬುರ್ಗಿ ಜಿಲ್ಲೆ
ಕ.ಸಂ.ಸ	– ಕರ್ನಾಟಕ ಸಂಸ್ಕೃತಿ ಸಮೀಕ್ಷೆ
ದೇ.ವಾ.ಚ	– ದೇವಾಲಯಗಳ ವಾಸ್ತು ಚಂದ್ರಿಕೆ
ಕ.ಜಿ.ಶಿ.ಶಾ	– ಕಲಬುರ್ಗಿ ಜಿಲ್ಲೆಯ ಶಿಲಾ ಶಾಸನಗಳು
ಕ.ಜಿ.ಐ ಮತ್ತು ಸಾಂ.ಪ.	– ಕಲಬುರ್ಗಿ ಜಿಲ್ಲೆಯ ಐತಿಹಾಸಿಕತೆ ಮತ್ತು ಸಾಂಸ್ಕೃತಿಕ ಪರಂಪರೆ

◆◆◆

೨. ಗುಲಬರ್ಗಾ ಜಿಲ್ಲೆಯ ನಕಾಶೆ ಮತ್ತು ಪ್ರಾಚೀನ ಆಡಳಿತ ವಿಭಾಗಗಳುಳ್ಳ ನಕಾಶೆ



ಗುಲಬರ್ಗಾ ಜಿಲ್ಲಾ ನಕ್ಷೆ



ಗುಲಬರ್ಗಾ ಜಿಲ್ಲಾ ನಕ್ಷೆ



ಗುಲಬರ್ಗಾ ಜಿಲ್ಲಾ ಪ್ರದೇಶದ ಪ್ರಾಚೀನ ಆಡಳಿತ ಘಟಕಗಳು

೩. ದೇವಾಲಯಗಳ ಸೂಚಿ

ದ್ವಿಕೂಟ ದೇವಾಲಯಗಳು ಸೂಚಿ

ಕ್ರಸಂ.	ಗ್ರಾಮದ ಹೆಸರು	ದೇವಾಲಯ ಶಾಸನಗಳು	ಕಾಲ	ಪ್ರವೇಶದ್ವಾರದ ದಿಕ್ಕು	ಧರ್ಮ
೧.	ಹಾವನೂರು	ಈಶ್ವರಲಿಂಗ	ಸು.೧೨ನೆಯ ಶತಮಾನ	ಪೂರ್ವಾಭಿಮುಖ	ಶೈವ
೨.	ಮಾಶಾಳ	ಮಹಾದೇವ ಗುಡಿ	ಸು.೧೩ನೆಯ ಶತಮಾನ	ಪೂರ್ವಾಭಿಮುಖ	ಅದೇ
೩.	ಬೆಳಗುಂಪಾ(ಕೆ)	ಕೋತ್ತಲರಾಯನ ಗುಡಿ	ಸು.೮ನೆಯ ಶತಮಾನ	ದಕ್ಷಿಣಾಭಿಮುಖ	ಅದೇ
೪.	ಚೇಂಗಟಾ	ಸೋಮೇಶ್ವರ ಗುಡಿ	ಸು.೧೦ನೆಯ ಶತಮಾನ	–	ಅದೇ
೫.	ಕುಪನೂರು	ಈಶ್ವರ ಗುಡಿ	ಸು.೧೧ನೆಯ ಶತಮಾನ	–	ಅದೇ
೬.	ನಿಡಗುಂದ	ಕಾಳಮ್ಮನ ಗುಡಿ	ಸು.೧೦ನೆಯ ಶತಮಾನ	–	ಶಾಕ್ತ್ಯ ದೇವಾಲಯ
೭.	ನಿಡಗುಂದ	ನವಕೋಟಿ ನಾರಾಯಣ	ಸು.೮ನೆಯ ಶತಮಾನ		ವೈಷ್ಣವ ದೇವಾಲಯ

ತ್ರಿಕೂಟ ದೇವಾಲಯಗಳ ಸೂಚಿ

ಕ್ರಸಂ	ಗ್ರಾಮದ ಹೆಸರು	ದೇವಾಲಯ	ಕಾಲ	ದೇವಾಲಯದ ದಿಕ್ಕು	ಧರ್ಮ
೧.	ಆತನೂರು	ಶಂಕರಲಿಂಗ ಗುಡಿ	ಸು.೧೩ನೆಯ ಶತಮಾನ	ಪೂರ್ವಾಭಿಮುಖ	ಶೈವ
೨.	ಮಾಶಾಳ	ಈಶ್ವರ ಗುಡಿ	೧ನೆಯ ಶತಮಾನ	ಪೂರ್ವಾಭಿಮುಖ	ಅದೇ
೩.	ಶಿರಸಗಿ	ಮಲ್ಲಿಕಾರ್ಜುನ	ಸು.೧೧ನೆಯ ಶತಮಾನ	ಪೂರ್ವಾಭಿಮುಖ	ಅದೇ
೪.	ಗೊಬ್ಬೂರು	ಕಲ್ಲಾಲಿಂಗ ಗುಡಿ	ಸು.೧೧ನೆಯ ಶತಮಾನ	ದಕ್ಷಿಣಾಭಿಮುಖ	ಅದೇ
೫.	ಗೊಬ್ಬೂರು(ಬಿ)	ಶಿವಲಿಂಗ ಗುಡಿ	ಸು.೧೧ನೆಯ ಶತಮಾನ	ಪೂರ್ವಾಭಿಮುಖ	ಅದೇ

೬.	ಚಿನಮಗೇರಿ	ಈಶ್ವರ ಗುಡಿ	ಸು.೧೧ನೆಯ ಶತಮಾನ	ಪೂರ್ವಾಭಿಮುಖ	ಅದೇ
೭.	ಅದೇ	ತ್ರೈಪುರುಷ/ ಈಶ್ವರ ಗುಡಿ	ಅದೇ	ಅದೇ	ಅದೇ
೮.	ಮಾಶಾಳ	ಮಹಾದೇವ	ಸು.೧೨ನೆಯ ಶತಮಾನ	ಉತ್ತರಾಭಿಮುಖ	ಶೈವ
೯.	ಚಿಂಚೋಳಿ(ಬಿ)	ಮಲ್ಲಿಕಾರ್ಜುನ	ಸು.೧೧ನೆಯ ಶತಮಾನ	ದಕ್ಷಿಣಾಭಿಮುಖ	ಅದೇ
೧೦.	ದೇಗಲ್ಮಡಿ	ಸಂಗಮೇಶ್ವರ	ಸು.೧೧ನೆಯ ಶತಮಾನ	ಪೂರ್ವಾಭಿಮುಖ	ಅದೇ
೧೧.	ರುದ್ರವಾಡಿ	ಮಲ್ಲಿಕಾರ್ಜುನ	ಅದೇ	ಅದೇ	ಅದೇ
೧೨.	ಹೊಡಲ	ರಾಮಲಿಂಗೇಶ್ವರ	ಅದೇ	ಅದೇ	ಅದೇ
೧೩.	ಪಡಸಾವಳಗಿ	ಕಲ್ಲೇಶ್ವರ ದೇವಾಲಯ	ಸು.೧೦ನೆಯ ಶತಮಾನ	ದಕ್ಷಿಣಾಭಿಮುಖ	ಅದೇ
೧೪.	ಬೆಳಗುಂಪಾ(ಕೆ)	ಶಂಕರಲಿಂಗ ಗುಡಿ	ಸು.೧೦ನೆಯ	ಪೂರ್ವಾಭಿಮುಖ ಶತಮಾನ	ಅದೇ
೧೫	ಬೋಳೆವಾಡ	ಭೋಗಲಿಂಗೇಶ್ವರ ಗುಡಿ	ಸು.೧೧ನೆಯ ಶತಮಾನ	ಅದೇ	ಅದೇ
೧೬.	ಹಂಗರಗಾ	ವೀರಭದ್ರೇಶ್ವರ ಗುಡಿ	ಸು.೧೦ನೆಯ ಶತಮಾನ	ಉತ್ತರಾಭಿಮುಖ	ಅದೇ
೧೭.	ಕವಲಗಾ(ಕೆ)	ಕಲ್ಲಾಲಿಂಗೇಶ್ವರ ಗುಡಿ	ಸು.೧೦ನೆಯ ಶತಮಾನ	ಪೂರ್ವಾಭಿಮುಖ	ಅದೇ
೧೮.	ಕಲಬೆನ್ನೂರು	ಈಶ್ವರ ಗುಡಿ	ಸು.೧೦ನೆಯ ಶತಮಾನ	ದಕ್ಷಿಣಾಭಿಮುಖ	ಅದೇ

ಪ್ರಸ್ತುತವಿರುವ ಶಾಸನೋಕ್ತ ದೇವಾಲಯಗಳ ಸೂಚಿ


ಕ್ರ.ಸಂ.	ಗ್ರಾಮ	ದೇವಾಲಯ	ಕಾಲ
೧.	ಮಾಶಾಳ	ತಿಪ್ಪೇಶ್ವರ	ಸು. ೧೦ನೆಯ ಶತಮಾನ
೨.	ಖಜೂರಿ	ಮಹೇಶ್ವರ	ಸು. ೧೧ನೆಯ ಶತಮಾನ
೩.	ಮಾಶಾಳ	ಈಶ್ವರ	ಸು. ೧೧ನೆಯ ಶತಮಾನ
೪.	ಚಿನಮಗೇರಿ	ತ್ರೈಪುರುಷ	ಸು. ೧೦ನೆಯ ಶತಮಾನ
೫.	ಹೊಡಲ	ಮಲ್ಲಿಕಾರ್ಜುನ	ಸು. ೧೧ನೆಯ ಶತಮಾನ
೬	ಪಡಸಾವಳಗಿ	ಕಲ್ಲೇಶ್ವರ	ಅದೇ
೭	ಮೋಘಾ	ರಾಮಲಿಂಗೇಶ್ವರ	ಅದೇ

ಶಾಸನೋಕ್ತ ದೇವಾಲಯಗಳ ಸೂಚಿ


ಕ್ರಸಂ.	ಶಾಸನೋಕ್ತ ದೇವಾಲಯಗಳು	ಶಾಸನದ ಉಲ್ಲೇಖ	ಕಾಲ
೧.	ತ್ರಿಕೂಟರೇವಣೇಶ್ವರ	ಅಫಜಲ್‌ಪುರ	ಕ್ರಿ.ಶ. ೧೧೦೭
೨.	ಮಲ್ಲಿಕಾರ್ಜುನ	ಕಡಗಂಚಿ	ಕ್ರಿ.ಶ. ೧೧೧೮
೩.	ಶಂಕರದೇವರ ಗುಡಿ	ದೇವಂತಿ	ಕ್ರಿ.ಶ. ೧೧-೧೨ನೆಯ ಶತಮಾನ
೪.	ಚೆನ್ನಕೇಶವ ದೇವಾಲಯ	ರುದ್ರವಾಡಿ	ಕ್ರಿ.ಶ. ೧೧೦೩
೫.	ತ್ರೈಪುರುಷ	ತಿಳಿಗೊಳ	ಕ್ರಿ.ಶ. ೧೦೩೯
೬.	ಪಾಳು ಸಿದ್ದಪ್ಪನ ಗುಡಿ	ಕೇಶ್ವಾರ(ಗಡಿ)	ಕ್ರಿ.ಶ. ೧೪ನೆಯ ಶತಮಾನ
೭.	ಚೌಡೇಶ್ವರಿ	ಮಿರ್ಯಾಣ	ಕ್ರಿ.ಶ. ೧೨ನೆಯ ಶತಮಾನ
೮.	ತ್ರಿಕೂಟ ಹರಿಹರ ದೇವಾಲಯ	ಹರಸೂರು	ಕ್ರಿ.ಶ. ೧೦೯೭

◆◆◆


೪. ದೇವಾಲಯಗಳ ರೇಖಾಚಿತ್ರಗಳು ಮತ್ತು ತಲನಕ್ಷೆಗಳ ಮಾದರಿಗಳು



ಬಹುತಲ ದೇವಾಲಯದ ಭಾಗಗಳು



ಔತ್ತರೇಯ ದ್ರಾವಿಡ ಶೈಲಿಯ ಶಿಖರದ ನಕ್ಷೆ


ರೇಖಾ ದೇಉಲ್
ಆಯುಧ
ಕಲಶ
ಖಪೂರಿ
ಆಮಲಕ
ಬೇಕಿ
ಬಿಸಮ
ಭೂಮಿ
ಆಮಲಕ
ಭೂಮಿ
ಬರಂಡ
ಉಪರ್
ಜಂಘಾ
ಬಂಧನ
ತಲ್ ಜಂಘಾ
ಪಾಭಾಗ
ಪಿಷ್ಟ
ಫಿಡಾದೇಉಲ್
ಆಯುಧ
ಕಲಶ
ಖಪೂರಿ
ಆಮಲಕ
ಆಮಲಬೇಕಿ
ಘಂಟಾ
ಬೇಕಿ
ಪಿಧಾಸ
ಪಿಧಾಸ
ಬರಂಡಾ
ಉಪರ್ ಜಂಘಾ
ಬರಂಡಾ
ತಲ್ ಜಂಘಾ
ಪಾಭಾಗ
ಪಿಷ್ಟ
ಕೋನಕಪಗ
ಅನುರಾಹಪಗ
ರಾಹಪಗ
ಅನುರಾಹಪಗ
ಕೋನಕಪಗ
ಜಗಮೋಹನ
ಗರ್ಭಗೃಹ


ರೇಖಾದೇಉಲ್ ಫಿಡಾದೇಉಲ್




ಪಾಳುಬಿದ್ದ ದೇಗುಲಗಳ ರೇಖಾಚಿತ್ರ



ಸಿದ್ಧಪ್ಪನಗುಡಿಯ ಮುಖಮಂಟಪದ ರೇಖಾಚಿತ್ರ



ಅರ್ಧಮಂಟಪ ಮತ್ತು ನವರಂಗ ಮಾದರಿಯ ರೇಖಾಚಿತ್ರ



ಬಾಗಿಲವಾಡ ಮತ್ತು ಮೂರ್ತಿಶಿಲ್ಪಗಳ ಮಾದರಿಯ ರೇಖಾಚಿತ್ರ

೫. ಕ್ಷೇತ್ರಕಾರ್ಯದಲ್ಲಿ ಸಂಶೋಧಿಸಿದ ಅಪ್ರಕಟಿತ ಶಾಸನಗಳ ಸೂಚಿ

ಕ್ರಸಂ	ಅಪ್ರಕಟಿತ ಶಾಸನಗಳು	ಒಟ್ಟು ಶಾಸನಗಳು	ಕ್ರಸಂ	ದೊರೆತ ಶಾಸನಗಳು	ಒಟ್ಟು ಶಾಸನಗಳು
೧.	ಕವಲಗಾ(ಬಿ)	ಎರಡು	೦೯	ಅವರಾದ(ಕೆ)	ಒಂದು
೨.	ಶರಣ ಶಿರಸಗಿ	ಒಂದು	೧೦	ಹೇರೂರು(ಬಿ)	ಎರಡು
೩.	ಹುಣಸಿ ಹಡಗಲಿ	ಒಂದು	೧೧	ಕುಪನೂರು	ನಾಲ್ಕು
೪	ಹೊನ್ನ ಕಿರಣಗಿ	ಎರಡು	೧೨	ಬೆಡಕ ಪಳ್ಳಿ	ಒಂದು
೫.	ಖಣದಾಳ	ಒಂದು	೧೩	ಬೆಳಗುಂಪಾ(ಕೆ)	ಒಂದು
೬	ಇಟಗಾ(ಬಿ)	ಒಂದು	೧೪	ಬಂಗರಗಾ	ಒಂದು
೭	ಕಡಗಂಚಿ	ಎರಡು	೧೫	ಮಡಿಹಾಳ	ಒಂದು
೮.	ಮಾದನ ಹಿಪ್ಪರಗಾ	ನಾಲ್ಕು	೧೬	ಯತ್ನಾಪುರ	ಒಂದು
೯.	ಶ್ರೀನಿವಾಸ ಸರಡಗಿ	ಒಂದು	೧೮	ದೇಗಲ್ಮಡಿ	ಒಂದು
೧೦.	ರುದ್ನೂರು	ಒಂದು	೨೦	ಜಿವಣಗಿ	ಒಂದು
೧೧	ಝುಳಕಿ(ಬಿ)	ಒಂದು	೨೨	ಬಂಗರಗಾ	ಒಂದು

೬. ಅಪ್ರಕಟಿತ ಶಾಸನಗಳ ಪಾಠ

ಗ್ರಾಮ: ಹುಣಸಿ ಹಡಗಲಿ	ಶಿಲ್ಪ: ಅಪ್ರಕಟಿತ ಶಾಸನ
ಶಿಲೆ: ಕಪ್ಪುಕಲ್ಲು.	ಕಾಲ: ?
ಸ್ಥಿತಿ: ತೃಟಿತ	ದೊರೆತ ಸ್ಥಳ: ಧರಣೇಂದ್ರ ಪದ್ಮಾವತಿದೇವಿ ಜೈನ ಬಸದಿ

ಅಪ್ರಕಟಿತ ಒಂದು ಶಾಸನ ಬಾಗಿಲಿನ ಕೆಳಭಾಗದಲ್ಲಿದೆ. ॥ಇಬಸ್ತಿ ಬಂಜ್ಯಪಂಯ್ದು? (ಧೂಪಂಂಯ್ದು?)॥ ॥ಪೋದಲ್ಲಿ ಇವನೆ ಯೊನ್ನ,॥, ಇಜಾನನಂ ಬಂದಃವೆಂದು॥ ॥ಮಾಡಿನೊಮುಮನಿಸುನಾಣು॥? ಎಂದಿದೆ.

ಗ್ರಾಮ: ಹೊನ್ನಕಿರಣಗಿ	**ಶಿಲ್ಪ:** ಅಪ್ರಕಟಿತ ಶಾಸನ
ಶಿಲೆ: ಕಪ್ಪುಕಲ್ಲು.	**ಕಾಲ:** ?
ಸ್ಥಿತಿ: ತೃಟಿತ	**ದೊರೆತ ಸ್ಥಳ:** ಸನ್ಯಾಸಿ ಗುಡಿ

"ಸನ್ಯಾಸಿಗುಡಿಯಲ್ಲಿ–
ಶ್ರೀಓಂ, ತಾಗಾ೧೨೬
ಹಾವುಕಡಿತನಿವಾರಣೆಗಾಗಿ
ನೇಮಸಮಾಡಿದದಿವಸಮಂಗಳವಾರ
ಯಲಿಹಾವುಕಡಿದರುಕರೆಪ್ಪಮುತ್ತೆಂ
ಆಣೆಯೆಂದುಎರಡುತು(ಳಸಿ) ತೆಗೆ"

ಉಳಿದ ಭಾಗವು ಭೂಮಿಯಲ್ಲಿ ಹೂತುಹೋಗಿದೆ.

ಗ್ರಾಮ: ಬೆಳಗುಂಪಾ(ಕೆ)	ಶಿಲ್ಪ: ಅಪ್ರಕಟಿತ ಶಾಸನ,
ಶಿಲೆ: ಬಿಳಿಕಲ್ಲು.	ಕಾಲ: ಸು.೧೨ನೆಯ ಶತಮಾನ
ಸ್ಥಿತಿ: ಉತ್ತಮ	ದೊರೆತ ಸ್ಥಳ: ತ್ರಿಕೂಟ ಈಶ್ವರ ಗುಡಿ

ರಾಜಾಧಿರಾಜ ಪರಮೇಶ್ವರಂ ಪರಮ ಭಟ್ಟಾರಿಕಂ ಸತ್ಯಾಶ್ರಯ ಕುಲತಿಲಕ ಚಾಲುಕ್ಯ ಶ್ರೀ ಶ್ರೀ ರಾಜಜಗದೇಕಮಲ್ಲ ವಿಜಯ ನಗರೋತ್ತರ ಕಲ್ಯಾಣ ನಾಡಿನಲ್ಲಿ ವಿನೋದದಿ ಸುಖದಿಂದ ರಾಜ್ಯವಾಳುತ್ತಿರೆ, ಚಾಲುಕ್ಯ ಪ್ರಶಸ್ತಿ–ಕದನ ಪ್ರಚಂಡ ಬಲ ಭರತ ಪರನಾರಿ ಸಹೋದರ ಎಂದಿದೆ. ದಾನಶಾಸನ ೧೨ ಮತ್ತರು, ಕೆಯ ಮತ್ತರು ಎಂದು ಉಲ್ಲೇಖವಿದೆ. ಇಲ್ಲಿ ಸಂಪೂರ್ಣವಾದ ಶಾಸನದ ಉಲ್ಲೇಖ ನೀಡಿರುವುದಿಲ್ಲ.

೭. ವಿವಿಧ ಸಾಮ್ರಾಜ್ಯಗಳ ಕಾಲದ ಶಾಸನಗಳ ಸೂಚಿ

ರಾಷ್ಟ್ರಕೂಟರ ಕಾಲದ ಶಾಸನಗಳು

ಕ್ರ.ಸಂ.	ಗ್ರಾಮಗಳ ಹೆಸರು	ಶಾಸನ ವಿಧ	ಶಾಸನಗಳ ಪ್ರಮುಖ ಅಂಶ	ಕಾಲ	ರಾಜರ ಹೆಸರು	ಉಲ್ಲೇಖ
೧.	ತಡಕಲ್	ಪ್ರಶಸ್ತಿ ಮತ್ತು ದಾನ	ಅಮೋಘವರ್ಷ ನೃಪತುಂಗನ ಪ್ರಶಸ್ತಿ, ಗೀತ, ವಾದ್ಯ ಮತ್ತು ನೃತ್ಯದ ಉಲ್ಲೇಖ	೧೧-೧೨ನೆಯ ಶತಮಾನ	ಅಮೋಘವರ್ಷ ನೃಪತುಂಗ	ಸಾಧನೆ-೨, ಸಂಚಿಕೆ-೧ ಕ್ರಿ.ಶ.೧೯೭೩
೨.	ನೀಡಗುಂದ	ಪ್ರಶಸ್ತಿ	ಅಕಾಲವರ್ಷನ ಬಿರುದಾವಳಿಗಳನ್ನು ಉಲ್ಲೇಖಿಸುತ್ತದೆ.	೯೩೯	ಮೂರನೆಯ ಕೃಷ್ಣ	ಕ.ಜಿ.ಐ. ಮತ್ತು ಸಾಂ.ಪ. ೨೦೧೧
೩.	ಕೇಶಾವರ್(ಗಡಿ)	ದತ್ತಿ	ಬ್ರಹ್ಮಚಾರಿಗಳಿಗೆ ದತ್ತಿ ಕೊಟ್ಟ ವಿಷಯ ತಿಳಿಸುತ್ತದೆ.	ಸು.೮ನೆಯ ಶತಮಾನ	?	ಕ.ಸ.ಗೆ.ಕ.ಜಿ-೧೯೭

ಕಲ್ಯಾಣ ಚಾಲುಕ್ಯರ ಕಾಲದ ಶಾಸನಗಳು

ಕ್ರ.ಸಂ.	ಶಾಸನ ದೊರೆತ ಸ್ಥಳ	ಶಾಸನದ ವಿಧ ವೈವಿಧ್ಯತೆ	ಶಾಸನದ ಪ್ರಮುಖ ಸಾರ	ಆಳ್ವಿಕೆಯ ಕಾಲ	ರಾಜ/ರಾಜ್ಯ ಮನೆತನ	ಆಕರ
೧.	ಹುಣಸಿ ಹಡಗಲಿ	ದಾನ	ಅರಸ, ರಾಣಿಯರ ಪ್ರಶಸ್ತಿ ಶಾಸನವಾಗಿದೆ. ಚಂದೇಲ ದೇವಿ ರಾಣಿಗೆ ನೃತ್ಯ ವಿದ್ಯಾಧರೆ ಎಂಬ ಉಲ್ಲೇಖವಿದೆ.	೧೦೯೯	ಆರನೆಯ ವಿಕ್ರಮಾದಿತ್ಯ	ಹೈ.ಕ.ಧಾ.ಶಿ.ಶಾ ೧೯೯೨
೨.	ಹಂದರ್ಕಿ	ಜೀರ್ಣೋದ್ಧಾರಕ್ಕೆ, ಶಿಕ್ಷಣ ನೀಡಿದ ದಾನ	ಕುಚಾಗ್ರಹಾರ ಎನಿಸಿದ ಹಂದಿರ್ಕೆ ಮತ್ತು ಕಂಬದ ಸೂಳೆಯರ ಉಲ್ಲೇಖ	೧೧೧೯	ಅದೇ	ಅದೇ

೩.	ಮತ್ತೂರು	ದಾನ	ಧೂಪ, ಜಾಗಟೆ, ಬಾಜಿಸುವ ಹರಿಕಾರರಿಗೆ, ಸಂಜೆಗೆ ಶಂಖದಿಂದ ಭೋಗಮಾರ್ಪ, ಸಂಖ ಪಾಳರಿಗೆ ದಾನ ನೀಡಿದ ಉಲ್ಲೇಖ	೧೧೨೪	ಚಾಲುಕ್ಯ ಪಿಕ್ರಮಾದಿತ್ಯ	ಅದೇ
೪.	ನಿಂಬರಗೆ	ದಾನ	ನಿಂಬರ್ಗಾ ಸ್ಥಳದ ವರ್ಣನೆ, ಬೆಳೆಗಳ ಮತ್ತು ನಾಣ್ಯಗಳ ಉಲ್ಲೇಖ	೧೧೩೪	ಭೂಲೋಕಮಲ್ಲ	ಅದೇ
೫.	ಕೆಲ್ಲೂರು	ದಾನ	ಆಡಳಿತ ವರ್ಗದ ಉಲ್ಲೇಖ. ಬಾವಿಯನ್ನು ಕಟ್ಟುವದಕ್ಕಾಗಿ ನೀಡಿದ ದಾನದ ಉಲ್ಲೇಖ	೧೧೨೬–೧೧೩೮	ಭೂಲೋಕಮಲ್ಲ, ಮೂರನೆಯ ಸೋಮೇಶ್ವರ	ಅದೇ
೬	ಬೋದನ	ದಾನ	ಸರಸ್ವತಿಪುರ ಮಾಡಿಸಿದ ಉಲ್ಲೇಖ. ಮಾಡಿಸಿದ ಅಧಿಕಾರಿ ಮತ್ತು ಆಡಳಿತ ವರ್ಗದ ಉಲ್ಲೇಖ.	೧೨೯೨	ರಾಜ ಜಗದೇಕಮಲ್ಲ	ಅದೇ
೭.	ಹರಸೂರು	ದಾನ	ಗೊಂಕನಾಡು, ಅಗ್ರಹಾರ ಹರಸೂರು, ವ್ಯಾಪಾರಿ ಸೆಟ್ಟಿಗಳ ಉಲ್ಲೇಖ	೧೧೮೩	ಜಗದೇಕಮಲ್ಲ	ಅದೇ
೮.	ಕೆಲ್ಲೂರು	ದಾನ	ಆಡಳಿತ ವರ್ಗ, ವರ್ಣ ಪದ್ಧತಿ–ಬ್ರಹ್ಮ ವಂಶಜರುಮಪ್ಪ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಸೂದ್ರ ಎಂಬ ಉಲ್ಲೇಖಗಳಿವೆ.	೧೧೮೨	ಸೋಮೇಶ್ವರ	ಅದೇ
೯.	ಹಂದರ್ಕೆ	ದಾನ	ಲೋಕೇಶ್ವರ ದೇವರಿಗೆ ಚಂದಿರಾಜಯ್ಯ ನಿವೇಶನ ದಾನ ಬಿಟ್ಟ ಉಲ್ಲೇಖ	೧೧೨೨	ಚಾಲುಕ್ಯ ವಿಕ್ರಮಾದಿತ್ಯ	ಅದೇ
೧೦.	ಅಳಂದ	ದಾನ	ನೃತ್ಯ ವಿದ್ಯಾಧರಿ ಚಂದಲ ದೇವಿ, ಯುವರಾಜ ಮಲ್ಲಿಕಾರ್ಜುನ ಎಂಬ ಉಲ್ಲೇಖ. ನಂದಾದೀವಿಗೆಗೆ ಮುದ್ರಾವಣದ ಸುಂಕದೊಳಗೆ ತಿಂಗಳಿಗೆ ಹತ್ತು ಹತ್ತು ದ್ರವ್ಯಮಂಬಿಟ್ಟ ಉಲ್ಲೇಖ	೧೦೮೨	ಚಾಲುಕ್ಯ ತ್ರಿಭುವನಮಲ್ಲ ವಿಕ್ರಮಾದಿತ್ಯ	ಅದೇ
೧೧.	ಬಸವ ಪಟ್ಟಣ	ಪ್ರಶಸ್ತಿ ಮತ್ತು ದಾನ	ತ್ರಿಭುವನಮಲ್ಲನ ಪ್ರಶಸ್ತಿ, ಭೂದಾನ, ಕೆಯ, ಮತ್ತರು, ಮೊಳವಂ, ಕೋಲ್ಮ, ಮನಿಯ ನಿವೇಶನ ದಗಲ. ನಿಳ ಎಂಬ ಅಳತೆ ಮಾಪಗಳ ಉಲ್ಲೇಖ	೧೦೮೮	ತ್ರಿಭುವನಮಲ್ಲ	ಅದೇ

೧೨.	ತಿಳಗೊಳ	ದೇವಾಲಯಕ್ಕೆ ನೀಡಿದ ದಾನ	ಶ್ರೀಮತ್ತಿಳ ಕೊಡೆಯ ನಿಂಬದೇವರು ತ್ರೈಪುರುಷ ದೇವಾಲಯಕ್ಕೆ ದಾನ ನೀಡಿದ ಉಲ್ಲೇಖ	೧೦೬೯	ಮೂರನೆಯ ಜಗದೇಕಮಲ್ಲ ದೇವ	ಗು.ಜಿ.ಇ. ಮತ್ತು ಪು. ೨೦೦೭
೧೩.	ರುದ್ರವಾಡಿ	ದಾನ	ಶಾಸನೋಕ್ತ ದೇವಾಲಯ ಚೆನ್ನಕೇಶವ ದೇವಾಲಯದ ಚತುರ್ವಿಂಶತಿಗಳ ಉಲ್ಲೇಖ.	೧೧೦೩	ವಿಕ್ರಮಾದಿತ್ಯ	ಕ.ಜಿ.ಶಾ
೧೪.	ರುದ್ರವಾಡಿ	ದಾನ	ತ್ರಿಕೂಟ ದೇವಾಲಯ ಲಕ್ಷ್ಮೀಶರ ವಾಸಮಂ ಉಲ್ಲೇಖ, ನಾಣ್ಯಗಳ, ಅಧಿಕಾರಿ ವರ್ಗಗಳ ಉಲ್ಲೇಖ ರಾಣಿ ಚಂದಲದೇವಿ, ಜಾಕಲದೇವಯ ಉಲ್ಲೇಖ	೧೧೦೩	ಚಂದಲದೇವಿ	ಅದೇ
೧೫.	ಕಡಗಂಚಿ	ದಾನ	ಮಲ್ಲಿಕಾರ್ಜುನ ದೇವಾಲಯ ಮತ್ತು ಅಧಿಕಾರಿ ವರ್ಗಗಳ ಉಲ್ಲೇಖ	೧೧೧೮	ತ್ರಿಭುವನ ಮಲ್ಲದೇವ	ಅದೇ
೧೬.	ನಿಂಬರ್ಗ	ಪ್ರಶಸ್ತಿ ಮತ್ತು ದಾನ	ಪದಾತಿದಳ, ಶರಜಾಲ, ಚೋಳಕುಳಕುಧರ ಕುಳೀಶಂ, ಲಾಳಮಹಿಪಾಲರ ದರ್ಪ ಮುರಿದ, ನೋಪಾಳವಿಳ ಯಾಂತಕ ಅಹವ ಮಲ್ಲನ ಹೊರಾಡಿದ ವಿವರ, ಅಂತಾ ಚಾಲುಕ್ಯರ ಬಳಿತ ರಾಷ್ಟ್ರಕೂಟರ್ಪ್ವ ಬಳಿಸಿ ಭೂವಳ–ಯಮಂಕೈಕೊಂಡಿ, ಬೆಂಗೊಟ್ಟೊಡಲ್ಕದನ ಪ್ರಭಳನುದ್ದತ ಮದಗಜ, ಮೃಗರಾಜ ಜನತಾ ಸಂಸ್ತುತ–ನಾದ ತೈಲನ ಮಗ ಸತ್ಯಾಶ್ರಯ ಎಂದು ಉಲ್ಲೇಖ.	೧೦೪೬–೧೦೫೫	ಸತ್ಯಾಶ್ರಯ? ಅಹವಮಲ್ಲ	ಕ.ಜಿ.ಶಾ–೧೯೯೬
೧೭.	ನಿಂಬರ್ಗ	ದಾನ	ನರ್ಮದಾ ನದಿ. ಹುಲ್ಲೆಯ ಬೆಟ್ಟ, ಆಲದ ಮರ.	೧೦೯೮	ಪೆರ್ಮಾಡಿದೇವ	ಸಾಧನೆ–೨. ಸಂಚಿಕೆ–೧ ಕ್ರಿ.ಶ.೧೯೭೩

			ಬೇವಿನ ಮರದ ಉಲ್ಲೇಖ. ಸೀಮಾ ಪದ್ಧತಿ, ಆಡಳಿತ ವರ್ಗದ ಉಲ್ಲೇಖ			
೧೮.	ಬಂಗೋಳಿ	ದಾನ	ಜಯಂತಿಪುರ ಆಳ್ವಿಕೆ, ಕುರುಬ ಜನಾಂಗದವರಾದ ಒಕ್ಕಯ್ಯ, ಸೋವಿಮಯ್ಯ, ಮುದ್ದಯ್ಯರ ಉಲ್ಲೇಖ. ದ್ರಮ್ಮ ನಾಣ್ಯದ ಉಲ್ಲೇಖ	೧೦೭೮	ತ್ರಿಭುವನಮಲ್ಲ ದೇವರು	ಕ.ಜಿ.ಶಾ
೧೯.	ಮಣ್ಣೂರು	ಆತ್ಮಬಲಿದಾನ	ಶಿವ ದೇವಾಲಯ ನಾಶವಾಗಿರುವದಕ್ಕೆ ಕಾರಣ ಎಲ್ಲರಲ್ಲೂ ಕ್ಷಮೆಕೋರಿ ಗಂಗರಾಸೀಜೀಯರು ಆತ್ಮಬಲಿದಾನ ಮಾಡಿಕೊಂಡ ಉಲ್ಲೇಖ. ಮಣಿಯೂರಿಯ ಮೂವತ್ತಿರ್ವರು, ಮಹಾಜನಗಳು ಆತನ ಮಗ ಸಿಂಗರಾಸಿಗೆ ಕ್ಷಮೆ ಕೊಟ್ಟು ಭೂದಾನ ಮಾಡಿದರು.	೧೧೨೧	ಚಾಲುಕ್ಯ ವಿಕ್ರಮಾದಿತ್ಯ?	ಅದೇ
೨೦.	ನಿಡಗುಂದ	ಪ್ರಶಸ್ತಿ ಮತ್ತು ದಾನ	ವಿಷ್ಣುವರ್ಧನನ ಬಿರುದಾವಳಿ ಮತ್ತು ಕೇಶವ ದೇವರಿಗೆ ಭೂದಾನ ಮಾಡಿರುವ ಉಲ್ಲೇಖ.	೧೧ನೆಯ ಶತಮಾನ	ವಿಷ್ಣುವರ್ಧನ ವೀರಪೇರ್ಮಾಡಿ	ಕ.ಜಿ.ಶಾ–೧೯೯೬
೨೧.	ಅಪ್ಜಲ್‌ಪುರ	ಪ್ರಶಸ್ತಿ ಸಹಿತ, ದಾನ ನೀಡಿದ	ತ್ರೈಕೂಟ ದೇವಾಲಯಕ್ಕೆ ದಾನ ಮತ್ತು ಆಡಳಿತ ವರ್ಗದವರ ಉಲ್ಲೇಖವಿದೆ.	೧೧೦೭	ತ್ರಿಭುವನಮಲ್ಲ	ಅದೇ
೨೨.	ಶಿರೋಳ್ಳಿ	ದಾನ	ಹರಿಹರ ದೇವಾಲಯಕ್ಕೆ ದಾನ ನೀಡಿದ ಉಲ್ಲೇಖ. ದಂಡನಾಯಕರಾದ ವಿಮಲಾದಿತ್ಯ ಮತ್ತು ಚಂದ್ರಾದಿತ್ಯ ಕೇಶವನ ಪ್ರತಿಷ್ಠಾಪನೆ ಮತ್ತು ಹರಿಹರ ಭವನ ತ್ರಯಮಲ, ಒಂದು ಕೆರೆ ಕಟ್ಟಿಸಿದ ಉಲ್ಲೇಖವಿದೆ.	೧೧೫೪	ನೂರ್ಮಡಿ ತೈಲಪ	–

ಕಲಚೂರಿಗಳ ಕಾಲದ ಶಾಸನಗಳು

೧.	ಅತನೂರು	ಸೊಡರಣ್ಣಗೆ ಬಿಟ್ಟ ದಾನ	ಆವಂಚಿಕೆಯ ನಾಮರಸನ ತಮ್ಮ ಬಾಚರಸ ತಮ್ಮನ್ನ ಪುಲ್ಲಿವಿಗೆಯ ಸಿದ್ದಾಯ ಸೊಡರೆಣ್ಣೆಗೆ ಹಣ ಐದು ಬಿಟ್ಟ ಉಲ್ಲೇಖವಿದೆ.	೧೨ನೆಯ ಶತಮಾನ	ಕಲಚೂರಿಗಳು?	ಕ.ಜಿ.ಶಾ.-೧೯೯೬
೨.	ಗೊಬ್ಬೂರು	ಪ್ರಶಸ್ತಿ ಮತ್ತು ದಾನ	ರಾಯಮುರಾರಿ ಸೋವಿದೇವ ಬಿಲ್ಲಮನ ಪ್ರಶಸ್ತಿ. ತ್ರಿಕೂಟ ಕಲಿದೇವರಿಗೆ ದಾನ ಬಿಟ್ಟ ವಿವರಣೆ ಇದೆ.	೧೧೭೦	ರಾಯಮುರಾರಿ ಸೋವಿದೇವ	ಅದೇ
೩.	ಚಿನಮಳ್ಳಿ	ಪ್ರಶಸ್ತಿ ಮತ್ತು ದಾನ	ರಾಯಮುರಾರಿಯ ಪ್ರಶಸ್ತಿಯ ಉಲ್ಲೇಖ. ಆಡಳಿತ ಪ್ರದೇಶ ಮತ್ತು ಅಧಿಕಾರಿ ವರ್ಗದ ವಿವರಣೆ ಇದೆ.	೧೧೭೫	ರಾಯಮುರಾರಿ ಸೋವಿದೇವ	ಅದೇ
೪.	ಬಂದರವಾಡ	ದಾನ	ಸೋಮನಾಥ ದೇವರ ರಂಗಭೋಗ, ಪೂಜೆ, ನೈವಿದ್ಯಕ್ಕೆ ೬೦ ಮತ್ತರು ಬಿಟ್ಟರು.	೧೧೭೪	ರಾಯಮುರಾರಿ ಸೋವಿದೇವ	ಅದೇ
೫.	ಮೋಘಾ	ದಾನ	ವಿಕ್ರಮಾದಿತ್ಯನ ಬಿರುದುಗಳು ಮತ್ತು ಕೀರ್ತಿ ಹಿಮಾಚಲದಿಂದ ಗಂಗಾಜಲದವರೆಗೂ ಹಬ್ಬಿತ್ತು ಎಂದು ಉಲ್ಲೇಖಿಸಿದೆ. ಬಿಜ್ಜಲದೇವನು ಹೇಗೆ ಅಧಿಕಾರ ಪಡೆದ ಎಂಬುದರ ಬಗ್ಗೆ ಮತ್ತು ಭೂದಾನದ ಉಲ್ಲೇಖವಿದೆ.	೧೧೭೦	ಬಿಜ್ಜಲದೇವ	ಅದೇ

೮. ಆಕರ ಗ್ರಂಥಗಳು

* ಅಪರ್ಣ.ಕೂ.ಸ., ೧೯೯೯, **ದೇವಾಲಯ ವಾಸ್ತುಶಿಲ್ಪ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಅಣ್ಣಾರಾಯ ಮಿರ್ಜಿ, ೧೯೫೨, **ಜೈನ ಧರ್ಮ**, ಸೊಲ್ಲಾಪುರ.
* ಅಣ್ಣಿಗೇರಿ ಎಂ.ಎಂ., ೨೦೧೬, **ಮೇವುಂಡಿ ಮಲ್ಲಾರಿ**, ಶಾಸನ ಸಂಚಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* ಅನಂತರಂಗಚಾರ್ ಎನ್., ೧೯೫೪, **ಭಾರತೀಯ ಶಿಲ್ಪಶಾಸ್ತ್ರದ ಸಂಕ್ಷಿಪ್ತ ಪರಿಚಯ**, ಶ್ರೀನಾಗನೂರು ರುದ್ರಾಕ್ಷಿ ಮಠ, ಬೆಳಗಾಂವ್.
* ಆಲೂರು ವೆಂಕಟರಾವ್, ೧೯೭೮, **ಕರ್ನಾಟಕದ ಗತವೈಭವ**, ಧಾರವಾಡ.
* ಕಲಬುರ್ಗಿ ಎಂ.ಎಂ., ೧೯೮೦, **ಸಮಾಧಿ, ಬಲಿದಾನ, ವೀರಮರಣ ಸ್ಮಾರಕಗಳು**, ಮಾರ್ಗ ಸಂಪುಟ–೦೧, ಸಪ್ನಬುಕ್ ಹೌಸ್, ಬೆಂಗಳೂರು,
* ಕಾಮತ್ ಸೂರ್ಯನಾಥ, ೨೦೧೨. **ಕರ್ನಾಟಕದ ಸಂಕ್ಷಿಪ್ತ ಇತಿಹಾಸ**(ಮರುಮುದ್ರಣ), ಎಂ.ಸಿ.ಸಿ. ಪಬ್ಲಿಕೇಷನ್ಸ್, ಬೆಂಗಳೂರು.
* ಕೃಷ್ಣ ಎಂ.ಎಚ್., ೧೯೮೯, **ಕನ್ನಡ ನಾಡಿನ ಚರಿತ್ರೆ–೩**, ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ, ಬೆಂಗಳೂರು.
* ಕೋಪ್ಪಾ.ಎಸ್.ಕೆ., ೧೯೯೦, **ತರ್ದವಾಡಿ ನಾಡು ಒಂದು ಅಧ್ಯಯನ**, ಪ್ರತಿಭಾ ಪ್ರಕಾಶನ, ಇಂಡಿ.
* ಖಡಬಡಿ.ಬಿ.ಕೆ. ೧೯೯೬, **ವಡ್ಡಾರಾಧನೆ: ಸಂಶೋಧನಾತ್ಮಕ ಅಧ್ಯಯನ**, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ.
* ಖಂಡೋಬಾ.ಪಿ.ಕೆ., ೨೦೧೧, **ಹೈದ್ರಾಬಾದ್ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ**, ಜಾನಪದ ಸಂಪುಟ, ಗುಲ್ಬರ್ಗಾ.
* ಗೋಪಾಲರಾವ್.ಎಚ್.ಎಸ್., ೧೯೯೩, **ಕಲ್ಯಾಣ ಚಾಲುಕ್ಯರ ದೇವಾಲಯಗಳು–ಒಂದು ಸಾಂಸ್ಕೃತಿಕ ಅಧ್ಯಯನ (ಶಾಸನಗಳ ಹಿನ್ನೆಲೆಯಲ್ಲಿ)**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

* ಗೋಪಾಲ.ಬಾ.ರಾ., ೧೯೯೫, **ಕನ್ನಡ ಶಾಸನಗಳು, ಕನ್ನಡ,** ಸಾಹಿತ್ಯ ಪರಿಷತ್ತು, ಬೆಂಗಳೂರು.
* ಗೋಪಾಲ್.ಆರ್.ಬಿ., ೧೯೬೮, **ಕರ್ನಾಟಕ ಇತಿಹಾಸ,** ಮೈಸೂರು.
* ಗೋಪಾಲ್.ಆರ್.ಬಿ., ೧೯೭೧, **ಕರ್ನಾಟಕದಲ್ಲಿ ನವಶಿಲಾಯುಗ,** ಧಾರವಾಡ.
* ಗೋಪಾಲ್.ಆರ್.ಬಿ., **ಕರ್ನಾಟಕದ ಕಲೆಗಳು ಸಂಪುಟ–೪,** ಬೆಂಗಳೂರು.
* ಗೋಕಾಕ್.ವಿ.ಕೃ., ೧೯೭೮, **ಕಲೆಯ ನೆಲೆ,** ಮೈಸೂರು.
* ಗಂಗನಾಯಕ್.ಕೆ.ಎನ್. ಮತ್ತು ಭಾರತೀ.ಬಿ.ಆರ್., ೨೦೧೧, **ರಾಷ್ಟ್ರಕೂಟರ ಶಾಸನಗಳು, ಸಂಪುಟ–೨,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
* ಗೋಪಾಲ ಬಾ.ರ., ೧೯೮೩, **ಬನವಾಸಿ ಕದಂಬರು,** ಪ್ರಾಚಿ ಪ್ರಿಂಟರ್ಸ್, ಪ್ರೈವೇಟ್ ಲಿ., ಬೆಂಗಳೂರು.
* ಗೋಪಾಲರಾವ್ ಎಸ್.ಎಸ್., ೧೯೯೩, **ಕಲ್ಯಾಣ ಚಾಲುಕ್ಯರ ದೇವಾಲಯಗಳ ಒಂದು ಸಾಂಸ್ಕೃತಿಕ ಅಧ್ಯಯನ**.
* ಚಿದಾನಂದಮೂರ್ತಿ ಎಂ., ೧೯೮೪, **ಸಂಶೋಧನೆ,** ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
* ಚಿದಾನಂದಮೂರ್ತಿ ಎಂ., ೧೯೯೬, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು.**
* ಚಿದಾನಂದಮೂರ್ತಿ ಎಂ., ೧೯೭೫, **ವೀರಗಲ್ಲು ಮತ್ತು ಮಾಸ್ತಿ ಕಲ್ಲುಗಳು,** ಬೆಂಗಳೂರು.
* ಚೆನ್ನಕ್ಕ ಎಲಿಗಾರ, ೧೯೮೭, **ಪ್ರಾಚೀನ ಕರ್ನಾಟಕದ ರಾಣಿಯರು,** ಧಾರವಾಡ.
* ಚೆನ್ನಕ್ಕ ಎಲಿಗಾರ, ೧೯೯೦, **ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
* ಚೆನ್ನಣ್ಣ ವಾಲಿಕಾರ್, ೧೯೯೮, **ಹೈದ್ರಾಬಾದ್ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ**.
* ಚೆನ್ನಬಸವಯ್ಯ ಹಿರೇಮಠ, ೧೯೯೫,**ಕುರುಗೋಡು ಸಿಂಧರು ಒಂದು ಅಧ್ಯಯನ,** ಸಂಗಣ್ಣನವರು ಅಂಗಡಿ ಸಂಸ್ಕೃತಿ ಪ್ರತಿಷ್ಠಾನ, ಕೊಪ್ಪಳ.
* ಜಗದೀಶಚಂದ್ರ ಜೈನ್, ಅನುವಾದ: ಸನದಿ ಬಿ.ಎ., ೧೯೭೭, **ಭಗವಾನ್ ಮಹಾವೀರ,** ನ್ಯಾಷನಲ್ ಬುಕ್‌ಟ್ರಸ್ಟ್ ಆಫ್ ಇಂಡಿಯಾ, ಹೊಸದೆಹಲಿ.
* ಜಯದೇವ ಹುಕಾ., ೧೯೭೫, **ಶಾಸನ ಮತ್ತು ಗದ್ಯ,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

* ಜಯಚಂದ್ರ ಎಂ.ಎ., ೧೯೯೪, **ಪ್ರಾಚೀನ ಕನ್ನಡ ಜೈನ ಸಾಹಿತ್ಯದಲ್ಲಿ ಜಾನಪದ ಕಥೆಗಳು: ಒಂದು ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* ತಳುಕಿನ ವೆಂಕಣ್ಣಯ್ಯ, ೨೦೧೦, **ಕರ್ನಾಟಕದ ಸೇವುಣರ ಇತಿಹಾಸ**, ಸ್ಮಾರಕ ಗ್ರಂಥಮಾಲೆ, ಮೈಸೂರು.
* ತಿಪ್ಪೇರುದ್ರಸ್ವಾಮಿ ಹೆಚ್., ೧೯೮೫, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು-೪.
* ತಿಮ್ಮಪ್ಪಯ್ಯ ಮುಳಿಯ, ೧೯೪೮, **ಕವಿರಾಜಮಾರ್ಗ ವಿವೇಕ-೧**, ಮುಳಿಯ ತಿಮ್ಮಪ್ಪಯ್ಯ ಕರಂಗಲಪಾಡಿ, ಮಂಗಳೂರು.
* ತುಕೋಳ್.ಟಿ.ಕೆ., ೧೯೭೫, **ಸನ್ನತಿಯ ಸೂಕ್ತಿಗಳು**, ಕರ್ನಾಟಕ ರಾಜ್ಯ ಪ್ರಕಟಣಾ ಸಮಿತಿ, ಬೆಂಗಳೂರು-೧.
* ದಿಕ್ಷೀತ್.ಜಿ.ಎಸ್., ೧೯೭೦, **ಪ್ರಾಚೀನ ಕರ್ನಾಟಕದ ಶಿಕ್ಷಣ ಕ್ರಮ**, ಧಾರವಾಡ.
* ದೇಸಾಯಿ, ಪಿ.ಬಿ., ೧೯೫೬, **ಶಾಸನ ಪರಿಚಯ**, ಕರ್ನಾಟಕ ಇತಿಹಾಸ ಸಂಶೋಧಕ ಮಂಡಳ, ಧಾರವಾಡ.
* ದೇವರಕೊಂಡಾರೆಡ್ಡಿ, ೨೦೦೭-೨೦೦೮, **ಕರ್ನಾಟಕ ಶಾಸನಗಳಲ್ಲಿ ಶಾಪಾಶಯಗಳು**, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.
* ಧರ್ಮರಾವ್ ತಾಪಿ, ೧೯೮೦, **ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ**, ಬೆಂಗಳೂರು
* ಧನವಂತ ಹಾಜವಗೋಳ, ೨೦೦೪, **ಮುಳುಗುಂದ ನಾಡು-ಒಂದು ಅಧ್ಯಯನ**, ಮಹಾದೇವ ಪ್ರಕಾಶನ, ಧಾರವಾಡ.
* ನರಸಿಂಹಮೂರ್ತಿ ಎ.ವಿ., ೧೯೭೨, **ಕರ್ನಾಟಕದ ಶಾಸನದ ಸಂಪತ್ತು ನರಸಿಂಹಮೂರ್ತಿ ಕನ್ನಡ ಲಿಪಿಯ ಉಗಮ ಮತ್ತು ವಿಕಾಸ**, ೧೯೫೩, ಮೈಸೂರು.
* ನರಸಿಂಹಾಚಾರ್.ಆರ್., ೧೯೭೨, **ಕರ್ನಾಟಕ ಕವಿ ಚರಿತೆ-೧**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮,
* ನಾಗಯ್ಯ ಜೆ.ಎಂ., ೧೯೯೧, **ಬಳ್ಳಾರಿ ಜಿಲ್ಲೆಯ ಶಾಸನಗಳು**, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
* ನಾಗರಾಜಯ್ಯ ಹಂಪ., ೧೯೭೬, ಯಕ್ಷ-ಯಕ್ಷಿಯರು, ಚಂದ್ರಸಾಗರ ವರ್ಣಿ ಗ್ರಂಥಮಾಲೆ, ಬೆಂಗಳೂರು-೧೦.
* ನಾಯಕ ಸದಾನಂದ, ೧೯೬೮, **ಕನ್ನಡ ಸಾಹಿತ್ಯದಲ್ಲಿ ಜೈನ ಪುರಾಣಗಳು**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

* ನಂದಿಮಠ ಎಸ್.ಸಿ., ೧೯೮೪, **ಕನ್ನಡ ನಾಡಿನ ಚರಿತ್ರೆ–೨**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೮.
* ನಾಗರಾಜ್.ಎಸ್., ೧೯೭೩, **ಸಾಧನೆ, ಸಂಪುಟ–೨, ಸಂಚಿಕೆ–೧**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
* ನಾಗರಾಜಯ್ಯ ಹಂ.ಪ. ಪಂಡಿತರತ್ನ.ಎ., ಶಾಂತಿರಾಜಶಾಸ್ತ್ರಿ, ೧೯೯೮, **ಶಾಸನಗಳಲ್ಲಿ ಜೈನ ತೀರ್ಥಗಳು**, ಬೆಂಗಳೂರು.
* ಪರಮಶಿವಮೂರ್ತಿ ಡಿ.ವಿ., ೧೯೯೯, **ಕನ್ನಡ ಶಾಸನಶಿಲ್ಪ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಪ್ರಭಾಕರ್ ಎಂ.ಎನ್., ೨೦೧೧, **ದೇವಾಲಯ ವಾಸ್ತು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಭೋಜರಾಜ ಬ. ಪಾಟೀಲ, ೧೯೯೫, **ನಾಗರಖಂಡ–೭೦ ಒಂದು ಅಧ್ಯಯನ**, ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಠ, ಆನಂದಪುರ.
* ಮಂಜುನಾಥ ಎಂ.ಜಿ., ೨೦೦೯, **ನಿಸಿಧಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಸಿಂಚು ಮಲ್ಟಿಗ್ರಾಫ್, ಮೈಸೂರು.
* ಮಿರ್ಜಿ ಅಣ್ಣಾರಾಯ, ೧೯೯೭, **ಜೈನ ಧರ್ಮ** (೩ನೆಯ ಮುದ್ರಣ), ಶಾಂತಿಸೇವಾ ಸದನ, ಸೇಡಬಾಳ, ೨೦೦೭.
* ಯಮುನಾಚಾರ್ಯ ಎಂ., ೧೯೭೫, **ಮತಧರ್ಮ ತತ್ವ ಶಾಸ್ತ್ರ**, ಬೆಂಗಳೂರು, ವಿಶ್ವವಿದ್ಯಾಲಯ, ಬೆಂಗಳೂರು.
* ರಾಮಚಂದ್ರರಾವ್.ಎಸ್.ಕೆ., ೧೯೭೫, **ಮೂರ್ತಿಶಿಲ್ಪ ನೆಲೆ–ಹಿನ್ನೆಲೆ**, ಪ್ರಸಾರಾಂಗ, ಬೆಂಗಳೂರು, ವಿಶ್ವವಿದ್ಯಾಲಯ ಬೆಂಗಳೂರು.
* ರಾಮಪ್ರಸಾದ್ ಎನ್.ಎನ್., ೧೯೮೮, **ಪ್ರಾಚೀನ ಕರ್ನಾಟಕದಲ್ಲಿ ರಾಜ್ಯಾಡಳಿತ**, ಐ.ಬಿ.ಎಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು.
* ರಾಮೇಶ್ವರ ಎ.ಕೆ., ೧೯೮೬, **ಚಿಂಚೋಳಿ ತಾಲೂಕಿನ ದರ್ಶನ**, ಚಿಂಚೋಳಿ.
* ವಿಜಯರಾವ್, ೧೯೯೫, **ಶಿಲ್ಪಕಲೆ**, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು.
* ವೆಂಕಟಾಚಲ ಶಾಸ್ತ್ರಿ.ಟಿ.ವಿ., ೧೯೭೩, **ನಮ್ಮ ಕರ್ನಾಟಕ**, ಬೆಂಗಳೂರು.
* ಶೀಲಾಕಾಂತ ಪತ್ತಾರ, ೨೦೦೦, **ಬಾದಾಮಿ ಸಾಂಸ್ಕೃತಿಕ ಅಧ್ಯಯನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ಶಿವರುದ್ರಪ್ಪ ಜಿ.ಎಸ್., ೧೯೭೫, **ಕನ್ನಡ ಸಾಹಿತ್ಯ ಸಮೀಕ್ಷೆ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
* ಶ್ರೀನಿವಾಸ ಎಂ.ವಿ., ೧೯೯೦, **ರಾಷ್ಟ್ರಕೂಟರು**, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು.
* ಶುಭಚಂದ್ರ, ೧೯೭೬, **ಜೈನ ಸಾಹಿತ್ಯ ಮತ್ತು ಸಂಸ್ಕೃತಿ**, ಗೀತಾಬುಕ್ ಹೌಸ್, ಮೈಸೂರು.
* ಶೇಷಶಾಸ್ತ್ರಿ ಆರ್., ೧೯೮೨, **ಶಾಸನ ಪರಿಚಯ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
* ಶೇಠೆ.ಬಿ.ಎಸ್., ೧೯೯೧, **ಕರ್ನಾಟಕದಲ್ಲಿ ಸತಿಪದ್ಧತಿ**, ವೀರಶೈವ ಅಧ್ಯಯನ ಅಕಾಡೆಮಿ ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ.
* ಶಿವತಾರಕ ಕೆ.ಬಿ., ೨೦೦೧, **ಕರ್ನಾಟಕದ ಪುರಾತತ್ವ ನೆಲೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಶಿವರಾಮ ಕಾರಂತ ಕೆ., ೧೯೭೧, **ಕರ್ನಾಟಕದಲ್ಲಿ ಚಿತ್ರಕಲೆ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* ಶೆಟ್ಟರ್.ಷ., ೨೦೧೨, **ಬಾದಾಮಿ ಚಾಳುಕ್ಯರ ಶಾಸನ ಸಾಹಿತ್ಯ**, ಅಭಿನವ, ಬೆಂಗಳೂರು
* ಶ್ರೀಕಂಠಯ್ಯ ಬಿ.ಎಂ., ೧೯೫೩, **ಭಾರತೀಯ ಕಾವ್ಯ ಮೀಮಾಂಸೆ**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
* ಶೇಷಶಾಸ್ತ್ರಿ ಆರ್., ೨೦೦೪, **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* ಶ್ರೀಧರ್ ಮೂರ್ತಿ.ಎಂ., ೧೯೭೪, **ಕಲೆಗಳು-೬೪**, ಮೈಸೂರು.
* ಶ್ರೀಕಂಠಯ್ಯ ಬಿ.ಎಂ. ೧೯೪೧-೧೯೫೦, **ಕನ್ನಡ ನಾಡಿನ ಚರಿತ್ರೆ, ಸಂಪುಟ-೧**, ಬೆಂಗಳೂರು.
* ಶಂಕರರಾವ ಚ.ನ., ೨೦೦೩, **ಸಮಾಜಶಾಸ್ತ್ರ**, ಜೈಭಾರತ ಪ್ರಕಾಶನ, ಮಂಗಳೂರು.
* ಸುಭಾಷ ಆರ್. ಗುತ್ತೇದಾರ, ೧೯೯೭, **ಆಳಂದ ತಾಲೂಕಿನ ಸಂಪೂರ್ಣ ದರ್ಶನ**, ಭಾರತ ಸ್ವಾತಂತ್ರ ಸ್ವರ್ಣ ಮಹೋತ್ಸವದ ಸಮಿತಿ, ಆಳಂದ.
* ಸಿ.ಯು.ಮಂಜುನಾಥ್, ೨೦೧೨, **ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ**.
* ಸದಾನಂದ ಕೆ.ಎಸ್., ೧೯೯೦, **ವಾಸ್ತುಶಿಲ್ಪ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* ಸರಸ್ವತಿ ವಿಜಯ ಕುಮಾರ್, ೧೯೯೪, **ಕನ್ನಡ ಆದಿ ತೀರ್ಥಂಕರರ ಚರಿತ್ರೆಗಳು**, ಸವಿ ಪ್ರಕಾಶನ, ಮೈಸೂರು.

* ಸಾಲೆತೊರೆ ಬಿ.ಎ. ಮತ್ತು ದೇಸಾಯಿ ಪಿ.ಬಿ., ೧೯೮೮, **ಕನ್ನಡ ನಾಡಿನ ಚರಿತ್ರೆ–೧,** ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
* ಸಿಂಧಗಿ ರಾಜಶೇಖರ್, ೧೯೮೮, **ಕರ್ನಾಟಕ ವಾಸ್ತು ಶಿಲ್ಪ ಮತ್ತು ಚಿತ್ರಕಲೆ,** ಸುಜಾತ ಪಬ್ಲಿಕೇಷನ್, ಧಾರವಾಡ.
* ಸುಬ್ಬರಾಯ ತ.ರಾ., ೧೯೯೩, **ನೃಪತುಂಗ(ಕಾದಂಬರಿ),** ಗೀತಾ ಬುಕ್ ಹೌಸ್, ಮೈಸೂರು.
* ಸುಂದರ.ಅ., ೧೯೮೮, **ಪ್ರಾಚ್ಯವಸ್ತು ಸಂಶೋಧನೆ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
* ಹನುಮಂತ ರೆಡ್ಡಿ ವೈ., ೧೯೯೧, **ಕುರುಗೋಡು ಕ್ಷೇತ್ರದರ್ಶನ,** ಜ್ಞಾನವಾಹಿನಿ ಪ್ರಕಾಶನ, ಕುರುಗೋಡು.
* ಹಿರೇಮಠ.ಎಸ್.ಎಂ., ೧೯೯೮, **ಶಾಸನಾಧ್ಯಯನ,** ವಿದ್ಯಾನಿಧಿ ಪ್ರಕಾಶನ, ಗದಗ.
* ಹೀರಾಲಾಲ್ ಜೈನ್, ಅನುವಾದ: ಮಿರ್ಜಿ ಅಣ್ಣಾರಾಯ, ೧೯೭೨, **ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ,** ಜೈನ ಸಂಸ್ಕೃತಿ ಸಂರಕ್ಷಕ ಸಂಘ, ಸೊಲ್ಲಾಪೂರ.
* ಹನುಮಾಕ್ಷಿ ಗೋಗಿ, ೧೯೯೬, **ಕಲ್ಬುರ್ಗಿ ಜಿಲ್ಲೆಯ ಶಾಸನಗಳು,** ಶಿವಚಂದ್ರ ಪ್ರಕಾಶನ, ಹುಬ್ಬಳ್ಳಿ,

ಸಂಪಾದಿತ ಕೃತಿಗಳು

* ಅಶೋಕ, ಡಾ. ಬಿ.ಆರ್. ಹಿರೇಮಠ (ಸಂ), ೨೦೧೨, **ಶಾಸನ ಅಧ್ಯಯನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಅಣ್ಣಿಗೇರಿ ಎ.ಎಂ. ಶೇಷಶಾಸ್ತ್ರಿ (ಸಂ), ೨೦೦೮, **ಶಾಸನ ಸಂಗ್ರಹ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* ಕುಲಕರ್ಣಿ ಬಿ.ಎಸ್(ಸಂ), ೧೯೭೫, **ನಿರ್ವಾಣ, ಮಹಾವೀರ ಸ್ಮರಣ ಸಂಚಿಕೆ,** ಮಹಾವೀರ ಮಂಡಳ, ಗದಗ.
* ಕೃಷ್ಣರಾವ್ ಎಂ.ವಿ. ಮತ್ತು ಕೇಶವಭಟ್ಟ ಎಂ.(ಸಂ), ೧೯೭೦, **ಕರ್ನಾಟಕ ಇತಿಹಾಸ ದರ್ಶನ,** ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಚಾಮರಾಜಪೇಟೆ, ಬೆಂಗಳೂರು.
* ಖಂಡೋಬಾ ಪಿ.ಕೆ(ಸಂ), ೧೯೯೬, **ಜೈನ ಸಂಸ್ಕೃತಿ ಮತ್ತು ಸಿದ್ಧಾಂತಗಳು,** ಸವದತ್ತಿ ಮಠ, ಸಂಗಮೇಶ.
* ಗುಂಡಪ್ಪ ಎಲ್.(ಸಂ), ೧೯೭೮, **ಆದಿಪುರಾಣ ಸಂಗ್ರಹ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

* ದಿಬ್ಬದ ಶಾಂತಿನಾಥ(ಸಂ), ೧೯೯೧, **ಧವಲವಾಣಿ(ಸ್ಮರಣ ಸಂಚಿಕೆ)**, ಶ್ವೇತಾಂಬರ ಜೈನ ಸಮಾಜ, ಹೊಸಪೇಟೆ.
* ನಾಗರಾಜಯ್ಯ ಹಂಪ(ಸಂ), ೧೯೮೨, **ಪೊನ್ನ ಕವಿ ವಿರಚಿತ ಶಾಂತಿ ಪುರಾಣಂ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* ಪಾಟೀಲ್‌ಎಂ.ಬಿ. (ಸಂ), ೧೯೯೭, **ಕರ್ನಾಟಕ ಸರ್ಕಾರದ ರಾಜ್ಯ ಗೆಜೆಟಿಯರ್(ಕಲಬುರ್ಗಿ ಜಿಲ್ಲೆ)**.
* ಗೋಪಾಲ ಆರ್. (ಸಂ), ೨೦೦೭, **ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**
* ದೇವರಕೊಂಡಾರೆಡ್ಡಿ ಮತ್ತು ಜಯಪ್ರಕಾಶ, ಮಾವಿನಕುಳಿ (ಸಂ) ೧೯೯೯. **ತುಳುನಾಡಿನ ಜೈನ ಶಾಸನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,
* ಭಟ್‌ಸೂರಿ ಕೆ.ಜಿ.(ಸಂ), ೨೦೦೯, **ಕನ್ನಡ ಶಾಸನ ಸಂಶೋಧನೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಮಹದೇವ.ಸಿ.(ಸಂ), (೨೦೧೬), **ಕರ್ನಾಟಕ ದೇವಾಲಯ ಕೋಶ: ಕಲಬುರಗಿ ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಮೋಹನ್‌ಕೃಷ್ಣ ರೈ ಕೆ.(ಸಂ), **ಚರಿತ್ರೆ ಅಧ್ಯಯನ, ಸಂ.೭, ಸಂಚಿಕೆ-೨, ಜನವರಿ, ಜೂನ್-೨೦೧೨,** ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಶಿವರುದ್ರಪ್ಪ ಜಿ.ಎಸ್.(ಸಂ), ೧೯೭೫, **ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ-೨**, ಪ್ರಕಟಣೆ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
* ಶಿವಣ್ಣ ಕೆ.ಎಸ್.(ಸಂ), ೧೯೯೭, **ಕರ್ನಾಟಕ ಚರಿತ್ರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಶ್ರೀಶೈಲ ನಾಗರಾಳ (ಸಂ), ೨೦೦೩, **ಸಿರಿಗಂಧ (ಸ್ಮರಣ ಸಂಚಿಕೆ)**, ಚಿಂಚೋಳಿ.
* ಜ್ಞಾನಾನಂದ ಜಿ.(ಸಂ), ೨೦೦೨, **ಶಿಲ್ಪಾ ದರ್ಶನ, ಸಂಪುಟ-೨**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಭಟ್‌ಸೂರಿ.ಕೆ.ಜಿ.(ಸಂ), ೨೦೧೨, **ಶಾಸನ ಅಧ್ಯಯನ, ಸಂಪುಟ-೯, ಸಂಚಿಕೆ-೧-೨ ಜನವರಿ-ಜೂನ್, ಜುಲೈ-ಡಿಸೆಂಬರ್**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಲೇಖನಗಳು

* ಕಲಬುರ್ಗಿ ಎಂ.ಎಂ., ೧೯೮೮, **ಮಾರ್ಗ(ಸಂಪುಟ-೨)**, ಸಂಶೋಧನ ಪ್ರಬಂಧಗಳ ಸಂಕಲನ, ನರೇಶ ಮತ್ತು ಕಂಪನಿ.
* ಎಸ್. ನಾಗರಾಜ್, ೧೯೭೩, **ಸಾಧನೆ, ಸಂಪುಟ-೨, ಸಂಚಿಕೆ-೧**.

* ಶೇರಿಕಾರ್ ಡಿ., (೨೦೦೭, ೨೦೦೮, ೨೦೦೯, ೨೦೧೦ ಮತ್ತು ೨೦೧೧), **ಪ್ರಜಾವಾಣಿ ಪತ್ರಿಕೆಯಲ್ಲಿನ ಚಿಂಚೋಳಿಯ ಲೇಖನಗಳು.**
* ರಾಮೇಗೌಡ.ಎಸ್(ಸಂ), **ಕರ್ನಾಟಕ ಭಾರತಿ–ದುರ್ಗ**ಸಂಹನ, ಗುಲಬರ್ಗಾ.

ಸಂಶೋಧನಾ ಪ್ರಬಂಧಗಳು

* ಶಾಮಲಾ, ೨೦೧೨, **ಚಿಂಚೋಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು,** ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ರವಿಕುಮಾರ.ಕೆ.ನವಲಗುಂದ, ೨೦೧೮, **ಹಾವೇರಿ ಜಿಲ್ಲೆಯ ಜೈನ ಶಾಸನಗಳು ಮತ್ತು ಐತಿಹ್ಯಗಳು: ಒಂದು ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಎಸ್.ಬಿ.ಪಾರ್ಥಹಳ್ಳಿ, ೨೦೦೨, **ಹೂಲಿ ಪ್ರದೇಶ: ಒಂದು ಸಾಂಸ್ಕೃತಿಕ ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಾಸನ ಸಂಪುಟಗಳು

* ರೈಸ್ ಬಿ.ಎಲ್.(ಸಂ), **ಎಪಿಗ್ರಫಿಯಾ ಕರ್ನಾಟಿಕಾ, ಸಂಪುಟ**–೧–೧೨, ಪುರಾತತ್ವ ಇಲಾಖೆ, ಮೈಸೂರು.
* **ಎಪಿಗ್ರಫಿಯಾ ಕರ್ನಾಟಕ(ಹೊಸ ಸಂಪುಟ)–೧–೭ನೆಯ ಸಂಪುಟಗಳು,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
* **ಎಪಿಗ್ರಫಿಯಾ ಇಂಡಿಕಾ, ೧–೫ ಸಂಪುಟಗಳು,** ದಿ ಡೈರೆಕ್ಟರ್ ಜನರಲ್ ಆರ್ಕಿಯಾಲೋಜಿಕಲ್ ಸರ್ವೇ, ಸರ್ವೇ ಆಫ್ ಇಂಡಿಯಾ ಜನಪಥ್, ನವದೆಹಲಿ.
* **ಕಲ್ಯಾಣ ಚಾಲುಕ್ಯರ ಶಾಸನಗಳು ೧ ಮತ್ತು ೨ನೆಯ ಸಂಪುಟಗಳು,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
* **ರಾಷ್ಟ್ರಕೂಟರ ಶಾಸನಗಳು, ೧ ಮತ್ತು ೨ನೆಯ ಸಂಪುಟಗಳು,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
* **ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ೦೭, ೦೮, ೦೯, ೧೦, ೧೧, ೧೨, ೧೪, ೧೫, ೧೬, ೧೭, ೧೯, ೨೦ನೆಯ ಸಂಪುಟಗಳು,** ದಿ. ಡೈರೆಕ್ಟರ್ ಜನರಲ್ ಆರ್ಕಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ, ನ್ಯೂದೆಹಲಿ.
* **ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* **ಕರ್ನಾಟಕ ಇನ್ಸ್ಕ್ರಿಪ್ಷನ್ಸ್, ೧, ೪, ೫, ೬ ಸಂಪುಟಗಳು,** ಕನ್ನಡ ಅಧ್ಯಯನ ಸಂಸ್ಥೆ ವಿಶ್ವವಿದ್ಯಾಲಯ, ಧಾರವಾಡ.
* **ಸೌತ್ ಇಂಡಿಯನ್ ಟೆಂಪಲ್ ಇನ್ಸ್ಕ್ರಿಪ್ಷನ್ಸ್,** ಮದ್ರಾಸ್ ವಿಶ್ವವಿದ್ಯಾನಿಲಯ, ಮದ್ರಾಸ್.

ವಿಶ್ವಕೋಶಗಳು

* **ಕನ್ನಡ ವಿಷಯ ವಿಶ್ವಕೋಶ ಜಾನಪದ**, ೨೦೦೬, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
* **ಕನ್ನಡ ವಿಷಯ ವಿಶ್ವಕೋಶ**, ೨೦೦೬, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
* ನಾಯಕ ಹಾ.ಮಾ(ಸಂ)., ೧೯೭೨, **ಕನ್ನಡ ವಿಶ್ವಕೋಶ-೧**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
* **ಕನ್ನಡ ವಿಶ್ವಕೋಶ-೨**, ೧೯೭೭, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ನಿಘಂಟುಗಳು

* **ಕನ್ನಡ ರತ್ನಕೋಶ** (ಪರಿಷ್ಕೃತ), ೨೦೧೩, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* **ಸಂಕ್ಷಿಪ್ತ ಕನ್ನಡ ನಿಘಂಟು** (ಪರಿಷ್ಕೃತ), ೨೦೦೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* ಡಾ. ಎ. ಸುಬ್ಬಣ್ಣ ರೈ, ಡಾ. ಮಾಧವ ಪೆರಾಜೆ(ಸಂ), **ಸಂಕ್ಷಿಪ್ತ ಆಧುನಿಕ ಕನ್ನಡ ನಿಘಂಟು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ೨೦೧೩.

ಸಂಶೋಧನಾ ಪತ್ರಿಕೆಗಳು

* **ಶಾಸನ ಅಧ್ಯಯನ**, ಶಾಸನಶಾಸ್ತ್ರ ವಿಭಾಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* **ಶೋಧ, ಸಂಪುಟ-೨, ಸಂಚಿಕೆ-೧**, ೨೦೧೩, ಹಾಮಾನಾ ಸಂಶೋಧನಾ ಕೇಂದ್ರ, ಶ್ರೀ ಧ.ಮಂ. ಕಾಲೇಜು, ಉಜಿರೆ,

ಆಂಗ್ಲ ಭಾಷೆಯ ಆಕರ ಗ್ರಂಥಗಳು

* Agarwal P.K., 1994, **Studies in Indian Iconography.**
* Fletcher B., 2001, **Encyclopaedia of World Art and Architecture (Vol-II).**
* George Michell, 1995, **Architecture and Art of Southern India.**
* Gopal B.R., 1981, **The Chalukyas of Kalyana & The Kalachuries, Dharwad.**
* Gopinatha Rao T.A., 1985, **Elements of Hindu Iconography, Vol-I & II.**
* Gopinatha Rao T.A., 1993, **Elements of Hindu Iconography.** (IInd Edition)
* Hardy Adom, 1995, **Indian Temples Architecture.**
* Havell E.B., 1980, **Indian Sculpture & Painting** (IInd Edition).

* Krishna Murthy K., 1987, **Early Indian Secular Architecture.**
* Nilakanta Sastri K.A., 2007, **History of South India.**
* Ramachandra Rao S.K., 1981, **Iconography & Images in Indian Temples.**
* Ramachandra Rao S.K., 1992, **Encyclopeadia of Indian Iconography (Vol-II).**
* Srinivasan, 1982, **South Indian Images (An introduction to the study of Hindu Iconog raphy).**
* Census of India, 2001, 2006, **Karnataka (Administrative Status), District Gulbarga.**
* Maruti Nandan, Tiwari, **KALAA Journal of Indian Art.**
* Kamal Giri, **History Congress.**
* Dollegouder.S.G., 2014, **CHALUKYA Journal of social sciences.**
* **Annual Report on South Indian Epigraphy**
* **Epigraphia Indica**
* **Epigraphia Carnatica**
* **Karnataka Inscriptions**

♦ ♦ ♦

೯. ಛಾಯಾಚಿತ್ರಗಳು

ಅಪ್ರಕಟಿತ ಶಾಸನಗಳ ಛಾಯಾಚಿತ್ರಗಳು



ಅವರಾದ(ಕೆ)



ಬೆಳಗುಂಪಾ(ಕೆ)



ಹೇರೂರು(ಬಿ)



ಹೇರೂರು(ಬಿ)



ಜೀವಣಗಿ



ಕವಲಗಾ(ಬಿ)



ಕವಲಗಾ(ಬಿ)



ಶರಣಶಿರಸಿಗಿ




ಬಂಗರಗಾ

ಅಪ್ರಕಟಿತ ಶಾಸನಗಳ ಛಾಯಾಚಿತ್ರಗಳು



ಹೊನ್ನಕಿರಣಗಿ




ಕಡಗಂಚಿ



ಮಡಿಹಾಳ



ಮಾದನ ಹಿಪ್ಪರಗಾ



ಮಾದನ ಹಿಪ್ಪರಗಾ



ಮಾದನ ಹಿಪ್ಪರಗಾ



ಮಾದನ ಹಿಪ್ಪರಗಾ




ಮಾದನ ಹಿಪ್ಪರಗಾ



ಮಾದನ ಹಿಪ್ಪರಗಾ

ಶಾಸನಗಳು



(ಬಂದರವಾಡ)



(ಗೊಬ್ಬೂರು)



(ಪಡಸಾವಳಗಿ)




(ತಡಕಲ್)

ವೀರಗಲ್ಲುಗಳು



ಪರ್ತಾಬಾದ



ಹೊನ್ನಕಿರಣಗಿ



ಪಡಸಾವಳಗಿ(ವೀರ ಮಾಸ್ತಿಗಲ್ಲು)



ಝಳಕಿ(ಬಿ)

ದೇವಾಲಯಗಳು



ಬಂದರವಾಡದ ಈಶ್ವರ ದೇವಾಲಯ



ಮಡಿಹಾಳದ ಈಶ್ವರ ಗುಡಿ




ಮಾಶಾಳ ಈಶ್ವರ ದೇವಾಲಯ



ಪರ್ತಾಬಾದ ಈಶ್ವರ ಗುಡಿ

ಪಾಳು ದೇಗುಲಗಳು



ಬಂದರವಾಡ ಬಸವದೇಗುಲ



ಬಂದರವಾಡ ದೇಗುಲ



ಚೌಡಾಪೂರ ಈಶ್ವರ ದೇಗುಲ

ಬಾಗಿಲವಾಡಗಳು



(ಬಂದರವಾಡ)



(ಗೊಬ್ಬೂರು)




(ಹೊನ್ನ ಕಿರಣಗಿ)




(ರುದ್ರವಾಡಿ)

ಶಿವಲಿಂಗಗಳು


ಹೊನ್ನ ಕಿರಣಗಿ


ಖಜೂರಿ


ಚಿನಮಗೇರಿ


ಬಂದರವಾಡ


ಹಾಗರಗುಂಡಗಿ


ರುದ್ರವಾಡಿ


ಬೆಳಗುಂಪಾ(ಕೆ)


ಬಸವಪಟ್ಟಣ


ಚಿಂಚನ್ಸೂರು


ವಿಷ್ಣುಶಿಲ್ಪಗಳು



ಕವಲಗಾ(ಬಿ)



ಕೊಲ್ಲೂರು



ಬಿದನೂರು




ಹೇರೂರು(ಬಿ)



ಹೊನ್ನಕಿರಣಗಿ



ಪಡಸಾವಳಗಿ



ರದ್ರವಾಡಿ



ಖಜೂರಿ



ಮಾದನಹಿಪ್ಪರಗಿ

ಜೈನ ಮೂರ್ತಿಶಿಲ್ಪಗಳು



ಹೊನ್ನ ಕಿರಣಗಿ



ಕಡಗಂಚಿ




ಕಲಬೆನ್ನೂರು



ತಿಳಿಗೋಳ

ನಿಷಿಧಿಗಲ್ಲುಗಳು



ಗರೂರು(ಬಿ)



ಹೊನ್ನಕಿರಣಗಿ



ತಡಕಲ್



ಹುಣಸಿ ಹಡಗಲಿ

ಜೈನ ಅಧಿದೇವತೆಗಳ ಶಿಲ್ಪಗಳು






ಯಳವಂತಿ(ಕೆ)

ಫಲಿತಗಳಲ್ಲಿ ವಿವರಿಸಲಾದ ಶಿಲ್ಪಗಳು



ಬಂದರವಾಡ



ಬಂದರವಾಡ



ಬೇಲೂರು

ವಿಶೇಷ ಶಿಲ್ಪಗಳು




ಹೊನ್ನಕಿರಣಗಿ



ಜಿಡಗಾ



ಖಜೂರಿ





ಶಾಸನಶಾಸ್ತ್ರ ವಿಭಾಗ